# ಸ್ವಾಮಿ ವಿವೇಕಾನಂದ

## ಮುನ್ನುಡಿ

ನಮ್ಮ ಹೊಸ ಪ್ರಪಂಚದ ಪ್ರಶ್ನೆಗಳಿಗೆ ಉತ್ತರಕೊಟ್ಟು ಬಾಳುವಷ್ಟು ಜೀವಾಳವು ಪುರಾತನವಾದ ಹಿಂದೂಮತದಲ್ಲಿರುವುದೇ?

ಪಾಶ್ಚಾತ್ಯರ ವಿದ್ಯೆ ಚಮತ್ಕಾರಗಳೆದುರಿಗೆ ತಲೆಯೆತ್ತಿ ನಿಲ್ಲುವಷ್ಟರ ಬೆನ್ನು ಮೂಳೆಯು ಆ ಆರ್ಷ ಸಂಸ್ಕೃತಿಗಿರುವುದೆ?

ತರಂಗ ತರಂಗವಾಗಿ ಬರುತ್ತಿರುವ ವೈಜ್ಞಾನಿಕ ಶಕ್ತಿಗಳ ಪ್ರವಾಹದಿಂದ ಮುಳುಗದೆ, ಕದಲದೆ ಉಳಿಯಲು ಬೇಕಾದ ಸತ್ವೋನ್ನತಿಯು ವೇದ ವೇದಾಂತಗಳಲ್ಲಿರುವುದೆ?

ನಲವತ್ತು ವರ್ಷಗಳ ಹಿಂದೆ ಪ್ರಪಂಚವು ಈ ಪ್ರಶ್ನೆಯನ್ನು ಕೇಳುತ್ತಿತ್ತು, ಹಿಂದೂ ಲೋಕವೂ ಕೇಳುತ್ತಿತ್ತು. ಆಗ ಆ ಪ್ರಶ್ನೆಯನ್ನು ಧೈರ್ಯದಿಂದ ದಿಟ್ಟಿಸಿ ನೋಡಿ ಅದಕ್ಕೆ ಹೌದು, ಉಂಟು ಎಂದು ಘಂಟಾಘೋಷವಾಗಿ ಪ್ರಪಂಚವೆಲ್ಲವೂ ಕೇಳುವಂತೆ ಪ್ರತ್ಯುತ್ತರ ಕೊಡಲು ಶ್ರೀ ವಿವೇಕಾನಂದ ಸ್ವಾಮಿಗಳವರು ಎದ್ದು ನಿಲ್ಲದೆ ಹೋಗಿದ್ದರೆ, ಹಿಂದೂ ಸಮಾಜವು ಇಂದು ಈಗಿನಷ್ಟಾದರೂ ನೂತನ ಚೇತನವನ್ನು ತೋರುವುದಕ್ಕೆ ಪ್ರತಿಯಾಗಿ ಮತ್ತಷ್ಟು ಕೆಳಗುಂದಿರುತ್ತಿತ್ತೆಂಬುದಕ್ಕೆ ಸಂಶಯವಿಲ್ಲ. ಲೋಕದಲ್ಲಿ ಯಾರ ಬಲವೂ - ಒಂದು ಪ್ರಾಣಿಯದೇ ಆಗಲಿ, ಒಂದು ಸಮಾಜದ್ದೇ ಆಗಲಿ - ಒಂದು ಕ್ಷಣವಿದ್ದಂತೆ ಮರುಕ್ಷಣವಿರಲಾರದು. ಬಲವು ಹೆಚ್ಚುತ್ತಿರಬೇಕು, ಇಲ್ಲವೆ ತಗ್ಗುತ್ತಿರಬೇಕು. ವಿವೇಕಾನಂದರ ಕಾಲಕ್ಕೆ ಹಿಂದೆ ಒಂದು ಮಹಾಶಂಕೆ - ಒಂದು ಮರಣಭೀತಿ - ಹಿಂದೂ ಸಮಾಜದ ಎದೆಗೆ ತಟ್ಟಿತ್ತು. ಅವರು ಆ ಭಯಕ್ಕೆ ಕಾರಣವಿಲ್ಲವೆಂದು ಭರವಸೆ ತೋರಿ, ಸಮಾಜದ ಆತ್ಮಶ್ರದ್ಧೆಯನ್ನು ಮರಳಿ ಬದುಕಿಸಿ, ಅದರ ಬಲೋತ್ಕರ್ಷಕ್ಕೆ ದಾರಿಮಾಡಿ, ಅದರ ಆಯುರೇಖೆಯನ್ನು ವಿಸ್ತಾರಪಡಿಸಿದರು.

ಹೀಗೆ ಸ್ವಮತ ಸಮಾಜಕ್ಕೆ ಆಯುರ್ದಾನಮಾಡುವ ಮಹಾಕಾರ್ಯದ ಉಪಾಂಗವಾಗಿ ಇತರ ಮತಗಳಿಗೂ ಅವರಿಂದ ಒಂದು ಉಪಕಾರ ನಡೆಯಿತು: ತಮ್ಮ ವೈದಿಕ ಪರಪಂಥಿಯು ಸತ್ತವನೆಂದು ಇತರ ಮತಗಳು ತಿಳಿಯಲಾಗದು. ಆ ಇತರ ಮತಗಳು ವಿಚಾರಮಾಡಬೇಕಾದ ಪ್ರಶ್ನೆಗಳೂ ಕಲಿಯಬೇಕಾದ ತತ್ತ್ವಗಳೂ ಇನ್ನೂ ಎಷ್ಟೋ ಇವೆ. ಈ ಭಾಗದಲ್ಲಿ ಅವುಗಳಿಗೆ ಹಿಂದೂ ಮತದಿಂದ ಸಹಾಯ ದೊರೆತೀತು - ಹೀಗೆಂದು ವಿವೇಕಾನಂದರು ಅನ್ಯಮತಗಳಿಗೂ ಎಚ್ಚರಿಕೆ ಕೊಟ್ಟು, ಅವುಗಳ ಆತ್ಮಪರಿಶೋಧನೆಗೆ ದಾರಿತೋರಿದರು.

ವೇದವೇದಾಂತದ ಕೊಂಡಾಟದಿಂದಲೆ ತೃಪ್ತರಾದ ಮತಾಭಿಮಾನಿ ಅವರಲ್ಲ. ವೈದಿಕ ತತ್ತ್ವಗಳು ಮೇರುಪರ್ವತದಂತಿದ್ದರೇನು ; ವೇದಮಾರ್ಗಿಗಳೆಂದು ಹೇಳಿಕೊಳ್ಳುವವರ ಜೀವನವು ಪಾಚಿ ಬೆಳೆದ ಹಳ್ಳದ ನೀರಿನಂತಿರುವವರೆಗೂ ಅವರಿಗೆ ಉಳಿಗಾಲವಿಲ್ಲವೆಂಬುದನ್ನು ವಿವೇಕಾನಂದರು ಮರೆಯಲಿಲ್ಲ. ಮರೆಮಾಚಲಿಲ್ಲ.

ಹಿಂದೂ ಸಮಾಜದ ಮೈಮೇಲೆ ಸಾವಿರಾರು ವರ್ಷಗಳ ವ್ಯಾಘಾತ ಚೇಷ್ಟಿತಗಳಿಂದ ಎಷ್ಟೋ ಗಂತಿಗಳೂ ಗೂನುಗಳೂ ಕಾಣಿಸಿಕೊಂಡಿವೆ; ಎಷ್ಟೋ ಧೂಳೂ ಕೊಳೆಯೂ ಕವಿದುಕೊಂಡಿದೆ. ಈ ವಿಚಾರಗಳನ್ನೆಲ್ಲ ಅದು ಪುರಾತನ ಸಂಪತ್ತೆಂದು ಭ್ರಮಿಸಿ, ಆದರಿಸಿ ಅಪ್ಪಿಕೊಂಡಿದೆ. ಇದೇ ಅವಸ್ಥೆಯಲ್ಲಿಯೇ ಅದು ಇನ್ನೂ ಕುಳಿತಿರುವುದಾದರೆ ಅದರ ಆರೋಗ್ಯವು ಮತ್ತೂ ಕೆಟ್ಟು ಅನುಕ್ರಮದಲ್ಲಿ ಅದು ತಾನಾಗಿ ನಶಿಸಬೇಕಾಗುವುದು. ಹಿಂದೂ ಸಮಾಜವು ತನ್ನ ತಮೋನಿದ್ರೆಯಿಂದ ಏಳಬೇಕು: ಕಣ್ದೆರೆದು ಸುತ್ತುಮುತ್ತಲಿನ ಪ್ರಪಂಚವನ್ನು ನೋಡಬೇಕು; ಕೈಕಾಲುಗಳನ್ನು ಕೊಡಹಿ ಓಡಾಡಬೇಕು; ಜಡತೆಯೇ ಶಾಂತಿಯೆಂಬುದನ್ನೂ ಜೀರ್ಣತೆಯೇ ಪೂಜ್ಯತೆಯೆಂಬುದನ್ನೂ ಬಿಡಬೇಕು; ಕೊಳಕು ಹುಣ್ಣುಗಳನ್ನು ತೊಳೆಯಬೇಕು; ಮಣಕು ಬೊಂತೆಗಳನ್ನು ಬಿಸಾಡಬೇಕು; ಕಿಟಕಿ ಬಾಗಿಲುಗಳನ್ನು ತೆರೆದು ಹೊರಗಿನ ಹೊಸ ಗಾಳಿ ಬೆಳಕುಗಳನ್ನು ತನ್ನ ಮನೆಯೊಳಕ್ಕೆ ಬರಮಾಡಿಕೊಳ್ಳಬೇಕು. ಇದು ಸಾರ್ಥಕವಾಗುವ ಬದುಕಿಗೆ ದಾರಿ. ಹೀಗೆಂದು ಸಾರಿ ಸಮಾಜ ಸುಧಾರಣೆಗಳ ಆವಶ್ಯಕತೆಯನ್ನು ತೋರಿಸಿಕೊಡಲು ವಿವೇಕಾನಂದರವರು ಸ್ವಲ್ಪವೂ ಹಿಂಜರಿದವರಲ್ಲ. ಸ್ವಧರ್ಮದ ಶ್ರೇಷ್ಠತೆಯನ್ನು ಪ್ರಕಾಶಪಡಿಸಲು ಉತ್ಸಾಹಿಗಳಾಗಿದ್ದಂತೆ ಸ್ವಸಮಾಜದ ದೋಷದೌರ್ಬಲ್ಯಗಳನ್ನು ತೋರಿಸಿ ಕೊಡುವುದಕ್ಕೂ ಅವರು ಮುಂದಾಳಾಗಿದ್ದರು.

ಈ ಮುಮ್ಮೊಗದ ಕೆಲಸಕ್ಕೆ ಬೇಕಾಗಿದ್ದ ಯೋಗ್ಯತೆ ಸಂಸ್ಕೃತ ಪಾಂಡಿತ್ಯ ಮಾತ್ರವಲ್ಲ, ಇಂಗ್ಲಿಷ್ ವಾಗ್ಮಿತೆ ಮಾತ್ರವಲ್ಲ, ಧರ್ಮಾಭಿಮಾನ ಮಾತ್ರವಲ್ಲ. ಈ ಶಕ್ತಿಗಳೆಲ್ಲವೂ ಬೇಕಿದ್ದುವು; ಅವುಗಳ ಜೊತೆಗೆ ಇನ್ನೂ ಕೆಲವು ಅಧಿಕಾರಗಳು ಅವಶ್ಯ ವಿದ್ದುವು. ಅವುಗಳಲ್ಲೆಲ್ಲಾ ದೊಡ್ಡದು ಧರ್ಮಮೂಲದ ನಿಶ್ಚಯಜ್ಞಾನ ಮತ್ತು ಅಂಥಾ ನಿಶ್ಚಯಜ್ಞಾನದೊಡನೆ ಬರುವ ಗಂಡೆದೆಯ ಧೈರ್ಯ. ಸ್ವಾಮಿ ವಿವೇಕಾನಂದರು ಸ್ವಾಭಾವಿಕವಾಗಿ ಅದ್ಭುತ ಪ್ರತಿಭಾಸಂಪನ್ನರು. ಅವರ ಬುದ್ಧಿ ವಿದ್ಯುದ್ವೇಗದಿಂದ ಸಂಚಾರ ಮಾಡತಕ್ಕದ್ದು; ಅದು ಒಮ್ಮೆ ಲೀಲೆಯಿಂದ ಸಮುದ್ರ ತಳಕ್ಕೆ ಧುಮುಕುವುದು; ಇನ್ನೊಮ್ಮೆ ಪಕ್ಷಿಯಂತೆ ಗಿರಿಶಿಖರಕ್ಕೆ ಹಾರುವುದು; ಮತ್ತೊಮ್ಮೆ ಹುಲ್ಲುಗಾವಲಿನ ಮೇಲೆ ಮಂದಮಾರುತದಂತೆ ಸುಳಿದಾಡುವುದು. ಒಂದು ತೀಕ್ಷ್ಣತೆ, ಒಂದು ಲಘುತೆ, ಒಂದು ಆವೇಶ, ಒಂದು ವಿಲಾಸ - ಇವು ಆ ಬುದ್ಧಿಯ ಗುಣಗಳು. ಅವರು ಸಂಸ್ಕೃತದಲ್ಲಿ ವ್ಯಾಕರಣ ತರ್ಕಶಾಸ್ತ್ರಗಳನ್ನು ಸಾಂಗವಾಗಿ ಅಭ್ಯಾಸ ಮಾಡಿದ್ದರು. ಹಾಗೆಯೇ ಇಂಗ್ಲೀಷಿನಲ್ಲಿ ಕಾವ್ಯ ಇತಿಹಾಸಗಳನ್ನೂ ವಿಜ್ಞಾನಶಾಸ್ತ್ರ ತತ್ತ್ವಮೀಮಾಂಸೆಗಳನ್ನೂ ವಿಸ್ತಾರವಾಗಿ ಪರಾಮರ್ಶಿಸಿ ಸ್ವಾಧೀನಪಡಿಸಿಕೊಂಡಿದ್ದರು. ಈ ಉಭಯ ವಿದ್ಯಾಪ್ರಾವೀಣ್ಯಕ್ಕೆ ಅನುರೂಪವಾದ ವಾಗ್ಧೋರಣೆ, ತದನುಗುಣವಾದ ಉತ್ತಾಲಧ್ವನಿ, ಉನ್ನತವಾದ ವರ್ಚಸ್ವಿಯಾದ ಗಂಭೀರಾಕಾರ, ಸಕಲ ಜನಮನೋಗ್ರಾಹಿಯಾದ ಹಾಸ್ಯ ವಿನೋದ ರಸಿಕತೆ, ಹೃದಯವಿದ್ರಾವಕವಾದ ಗಾನಮಾಧುರ್ಯ - ಇವೆಲ್ಲವೂ ಅವರಲ್ಲಿ ಸಮ್ಮಿಳಿತವಾಗಿದ್ದುವು. ಈ ನಾನಾಗುಣಶಕ್ತಿಗಳಿಗೆ ಕಿರೀಟಪ್ರಾಯವಾಗಿದ್ದುದು ಶ್ರೀರಾಮಕೃಷ್ಣ ಪರಮಹಂಸ ಗುರುಗಳ ಅನುಗ್ರಹ.

ಪರಮಹಂಸರವರು ಬ್ರಹ್ಮ ಸಾಕ್ಷಾತ್ಕಾರವನ್ನು ಪಡೆದಿದ್ದ ಮಹಾಮಹಿಮರು, ಜೀವನ್ಮುಕ್ತರು, ದಿವ್ಯದೃಷ್ಟಿಸಂಪನ್ನರು. ಇವರ ಪ್ರಸಾದದಿಂದ ಜೀವಸ್ವರೂಪ, ಭಗವತ್ಸ್ವರೂಪ, ಧರ್ಮಮೂಲಸ್ವರೂಪ - ಈ ರಹಸ್ಯಗಳು ವಿವೇಕಾನಂದರವರಿಗೆ ಕರತಲಾಮಲಕವಾಗಿದ್ದುವು. ವೇದಾಂತವು ಅವರಿಗೆ ಹೊರಗಿನಿಂದ ತೊಡುವ ಅಂಗರೇಖೆಯಾಗಲಿಲ್ಲ; ಒಳಗೇ ಸಂತತವಾಗಿ ಚಲಿಸುವ ಶ್ವಾಸವಾಯುವಾಯಿತು. ಜೀವನ ನಾನಾ ಅವಸ್ಥೆಗಳು, ಜೀವ ಜಗತ್ತುಗಳ ಸಂಬಂಧಗಳು, ಜೀವಕ್ಕೆ ಆಗಬೇಕಾದ ನಾನಾ ಸಂಸ್ಕಾರಗಳು - ಈ ಸೂಕ್ಷ್ಮಗಳು ಸಕಲ

ಮತಧರ್ಮಗಳಿಗೂ ಮೂಲಭೂತವಾದ ವಿಚಾರಗಳು. ಇವುಗಳನ್ನು ಕುರಿತ ನಿಸ್ಸಂಶಯ ಜ್ಞಾನವು ವಿವೇಕಾನಂದರಿಗೆ ಗುರುಗಳು ಕರುಣಿಸಿದ್ದ ಆತ್ಮ ಸಾಕ್ಷಾತ್ಕಾರಬಲದಿಂದ ಫಲಿಸಿತ್ತು. ವಿವೇಕಾನಂದರ ಲೋಕಬೋಧನೆಯು ಗ್ರಂಥಭಂಡಾರದಿಂದ ಹೊರಟುದಲ್ಲ, ಶ್ರವಣ ಪರಿಚಯದಿಂದ ಬಂದುದು; ಅದು ಅವರ ಆಂತರಿಕಾನುಭವದಿಂದ - ಅವರ ಅಂತರಾತ್ಮ ವಿಕಸನದಿಂದ - ಗಿಡದಿಂದ ಹೂವು ಹುಟ್ಟುವಂತೆ ತಾನಾಗಿ ಹುಟ್ಟಿಬಂದುದು. ಆದುದರಿಂದಲೇ ಅದರಲ್ಲಿ ಒಂದು ಜೀವಧ್ವನಿ, ಒಂದು ಜೀವೋತ್ತೇಜಕ ಪ್ರಭೆ, ಒಂದು ಜೀವನೋಪಯುಕ್ತ ಶಕ್ತಿ - ಇವು ತುಂಬಿವೆ.

ವಿವೇಕಾನಂದರು ಸಂನ್ಯಾಸಿಯಾದರೂ ಜೀವವನ್ನು ತುಚ್ಛವೆಂದೆಣಿಸಿದವರಲ್ಲ. ಈ ಜಗತ್ತು ಭಗವಂತನದು; ಇದರ ಜೀವನವು ಭಗವಂತನದು; ಆದಕಾರಣ ಬದುಕಿನ ವಿಷಯದಲ್ಲಿ ನಮಗೆ ಆದರ ಗೌರವಗಳಿರಬೇಕು; ಬದುಕು ಕೆಡುಕೆನ್ನದಿರಿ; ಪೌರುಷದಿಂದ ಬದುಕಿರಿ, ತೇಜಸ್ಸಿನಿಂದ ಬದುಕಿರಿ, ನಗುಮುಖದಿಂದ ಬದುಕಿರಿ - ಹೀಗೆಂಬ ಜೀವನೋತ್ಸಾಹವು ವಿವೇಕಾನಂದರ ಭೇರಿಯಿಂದ ಧ್ವನಿತವಾಗುತ್ತಿದೆ.

ಇಂಥ ಮಹಾನುಭಾವರ ಜೀವಿತದ ಚಿತ್ರವನ್ನು ನಮ್ಮ ಶ್ರೀಮಾನ್ ಪುಟ್ಟಪ್ಪನವರು ಈ ಪುಸ್ತಕದಲ್ಲಿ ಚಿತ್ರಿಸಿರುವುದು. ಅವರದು ಕವಿಸಹಜವಾದ ವಾಣಿ. ಅವರ ಭಾವಪ್ರಪಂಚದಲ್ಲಿಯ ಭಕ್ತಿಗೋಪುರಗಳೂ, ಅಲ್ಲಿಯ ಉತ್ಸಾಹ ಪ್ರವಾಹದ ತರಂಗಮಾಲೆಗಳೂ, ಅಲ್ಲಿಯ ಸೂರ್ಯೋದಯದ ಸ್ವರ್ಣಾರುಣ ರಾಗಚ್ಛಾಯೆಗಳೂ ಈ ವಾಣಿಯಲ್ಲಿ ಮೂರ್ತೀಭವಿಸಿವೆ. ಅವರ ಇತರ ಕೃತಿಗಳಿಂದ ಕನ್ನಡಿಗರು ಸಂತುಷ್ಟರಾಗಿರುವಂತೆ ಇದರಿಂದಲೂ ಸಂತೋಷಿಸುವರೆಂದು ಹೇಳಬೇಕಾಗಿಲ್ಲ. ಅವರ ಲೇಖಣಿಯು ಎಂದಿಗೂ ಉಡುಗದಿರಲಿ; ಅದರ ಮಸಿಯು ಎಂದಿಗೂ ಮಾಸದಿರಲಿ.

**ಡಿ.ವಿ. ಗುಂಡಪ್ಪ**

೧೯೩೨

# ೧. ಯಾರಿವನು?

ಕ್ರಿಸ್ತಾಬ್ದ ೧೮೯೩ನೆಯ ಸಂವತ್ಸರದ ಜನವರಿ ತಿಂಗಳು

[1]. ಮಾಗಿಯ ಕಾಲದ ಒಂದು ದಿನ. ಇನ್ನೂ ಉಷಃಕಾಲ. ಮೂಡಣ ದೆಸೆವೆಣ್ಣು ದರೋನ್ಮೀಲಿತ ನಯನೆಯಾಗಿದ್ದಾಳೆ. ಕತ್ತಲೆಯ ಮೊತ್ತವು ಮೆಲ್ಲಮೆಲ್ಲನೆ ಹಿಂಜರಿಯತೊಡಗಿದೆ. ಎಚ್ಚೆತ್ತ ಹಕ್ಕಿಗಳ ಸವಿಗೊರಲಿನ ಇಂಚರವು ಪ್ರಶಾಂತ ವಾಯುಮಂಡಲದಲ್ಲಿ ತರಂಗಗಳನ್ನು ಎಬ್ಬಿಸುತ್ತಿದೆ. ಮಾಗಿಯ ಮುಗಿಲಿನಿಂದ ಬಿಳಿಯ ಮಂಜಿನ ಸೋನೆ ಎಡೆಬಿಡದೆ ಸುರಿಯುತ್ತಿದೆ.
ಇಂತಹ ಸಮಯದಲ್ಲಿ ಕನ್ಯಾಕುಮಾರಿಯ ಪವಿತ್ರ ದೇವಾಲಯದಲ್ಲಿದ್ದ ನಿರುದ್ವಿಗ್ನಜೀವಿಗಳಾದ ಪೂಜಾರಿಗಳು ದೇವಸ್ಥಾನದ ಬಾಗಿಲುಗಳನ್ನು ತೆರೆದು ಆ ದಿನದ ಕಾರ್ಯಗಳಲ್ಲಿ ಎಂದಿನಂತೆ ತೊಡಗಿದ್ದರು. ನಾನಾ ಕಾರ್ಯಭಾರಗಳಲ್ಲಿ ತೊಡಗಿದ್ದ ಅವರು ಇದ್ದಕ್ಕಿದ್ದ ಹಾಗೆ ಚಕಿತರಾಗಿ ಕೈಲಿದ್ದ ಕೆಲಸಗಳನ್ನು ಹಾಗೆಯೆ ನಿಲ್ಲಿಸಿಬಿಟ್ಟು ದೇಗುಲದ ಹೆಬ್ಬಾಗಿಲ ಕಡೆಗೆ ನೋಡತೊಡಗಿದರು.

ಸಂನ್ಯಾಸಿಯೊಬ್ಬನು ಶಾಂತಗತಿಯಿಂದ ದೇವಾಲಯ ಪ್ರವೇಶ ಮಾಡುತ್ತಿದ್ದುದು ಅವರ ಕಣ್ಣಿಗೆ ಬಿತ್ತು. ಒಳಗೆ ಬಂದ ಆ ಭವ್ಯಮೂರ್ತಿ ಎಡಬಲಗಳನ್ನು ನಿರೀಕ್ಷಿಸದೆ ನೆಟ್ಟಗೆ ಗರ್ಭಗುಡಿಯ ಮುಂದೆ ಹೋಗಿ ದೇವರಿಗೆ ದಂಡ ಪ್ರಣಾಮ ಮಾಡಿ ಎದ್ದು ನಿಂತನು. ದೇವರ ಮುಂದೆ ಹೊತ್ತಿಸಿದ ದೀಪಗಳ ಬೆಳಕಿನಲ್ಲಿ ಆ ಮಹಾಪುರುಷನ ದಿವ್ಯತೇಜಸ್ಸನ್ನು ಅವಲೋಕಿಸಿದ ಪೂಜಾರಿಗಳು ವಿಸ್ಮಯ ಮೂಕರಾದರು. ಅವರ ಜೀವಮಾನದಲ್ಲಿ ಅಂತಹ ವ್ಯಕ್ತಿಯನ್ನು ಅವರು ಕಂಡಿರಲಿಲ್ಲ. ಪುಣ್ಯಕ್ಷೇತ್ರವಾದ ಕನ್ಯಾಕುಮಾರಿಗೆ ಅನೇಕ ಸಂನ್ಯಾಸಿಗಳೂ ಸಂಸಾರಿಗಳೂ ಎಲ್ಲ ಬಂದಿದ್ದರು. ಆದರೆ ಆ ದಿನ ಅರ್ಚಕರು ನೋಡಿದ ವ್ಯಕ್ತಿ ಅಪಾರ್ಥಿವ ತೇಜೋವಂತನಾಗಿದ್ದನು.

ಸುಮಾರು ಮೂವತ್ತು ಸಂವತ್ಸರಗಳ ವರ್ಷವಸಂತಗಳಿಂದ ತಾಡಿತವಾಗಿ, ಐದೂಮುಕ್ಕಾಲು ಅಡಿಗಳಷ್ಟು ಎತ್ತರವಾಗಿ ದೀರ್ಘದೇಹಿಯಾಗಿದ್ದ ಆತನ ಚಪ್ಪಟೆಚೌಕದ ಭುಜಪ್ರದೇಶವೂ ವಿಸ್ತಾರವಾಗಿದ್ದ ಎದೆಯೂ ನಾನಾ ವ್ಯಾಯಾಮ ಕ್ರೀಡೆಗಳಲ್ಲಿ ಪಳಗಿ ಸುಪುಷ್ಟವಾಗಿ ಬಲಿಷ್ಠವಾಗಿದ್ದ ತೋಳುಗಳೂ ಆತನಿಗೆ ಜಟ್ಟಿಯ ಮೈಕಟ್ಟು ಕೊಟ್ಟು, ನೋಡಿದವರೆದೆಯಲ್ಲಿ ಗೌರವ ಮಿಶ್ರವಾದ ಭೀತಿ ಮೂಡುವಂತೆ ಮಾಡುತ್ತಿದ್ದುವು. ಸ್ವಲ್ಪಮಟ್ಟಿಗೆ ಭಾರವಾಗಿ ಸ್ಥೂಲವಾಗಿದ್ದರೂ ಆ ವಜ್ರಶರೀರದಲ್ಲಿ ಆಲಸ್ಯಕ್ಕಾಗಲಿ ತಾಮಸಕ್ಕಾಗಲಿ ಎಡೆಯಿದ್ದಂತೆ ಕಾಣುತ್ತಿರಲಿಲ್ಲ. ಎಣ್ಣೆಗೆಂಪಾಗಿ ಅಗಲವಾಗಿದ್ದ ಆತನ ಮುಖದಲ್ಲಿ ಧೀರಲಲಾಟವೂ ದಿಟ್ಟ ಹುಬ್ಬುಗಳೂ ದಾರ್ಢ್ಯಸೂಚಕವಾದ ಮೊರಡುಗಲ್ಲವೂ ಕರ್‍ರಗೆ, ತೀಕ್ಷ್ಣವಾಗಿ ನಿರಂತರಾನ್ವೇಷಕವಾಗಿ, ಕಮಲದಳಗಳನ್ನು ನೆನಪಿಗೆ ತರುವ ಅದ್ಭುತ ತೇಜೋನ್ವಿತ ವಿಶಾಲನೇತ್ರದ್ವಯವೂ ಪೂಜ್ಯಭಾವವನ್ನು ಉದ್ದೀಪನಗೊಳಿಸುತ್ತಿದ್ದುವು. ಆ ದೃಷ್ಟಿಯಲ್ಲಿ ದಾರ್ಢ್ಯದೊಡನೆ ಕರುಣೆಯೂ ಮೋಹದೊಡನೆ ಭೀಷಣತೆಯೂ ವ್ಯಂಗ್ಯದೊಡನೆ ಹಾಸ್ಯವೂ ವಿಶಾಲಭಾವದೊಡನೆ ಗಂಭೀರಜ್ಞಾನವೂ ಸಮ್ಮಿಳಿತವಾಗಿದ್ದುವು. ಅದು ಸರ್ವವ್ಯಾಪಿಯೂ ಸರ್ವತೋಮುಖವೂ ಆಗಿ ಅಂತರಂಗದ ಐಶ್ವರ್ಯದ ಸಮುಜ್ವಲ ಕಾಂತಿಗೆ ಸಾಕ್ಷಿಯಾಗಿತ್ತು; ದ್ವಂದ್ವಗಳಿಗೊಂದು ಸಮನ್ವಯ ರಂಗವಾಗಿತ್ತು. ಕಾಷಾಯವಸ್ತ್ರಧಾರಿಯೂ ದಂಡಧಾರಿಯೂ

ಬ್ರಹ್ಮವನ ವಿಹಾರಿಯೂ ಆಗಿದ್ದ ಆತನ ಆತ್ಮಶ್ರೀ ಓಜಸ್ವಿಯಾದ ಸುಂದರ ಗಂಭೀರ ವದನದಿಂದ ಹೊರಸೂಸುತ್ತಿತ್ತು. ಕಾವಿಯ ರುಮಾಲನ್ನು ಸುತ್ತಿದ್ದ ಆತನು ಅರ್ಚಕರ ಚಕಿತದೃಷ್ಟಿಗೆ ಛದ್ಮವೇಷದ ರಾಜ ಪುರುಷನಂತೆ ತೋರಿದನು.

ಧ್ಯಾನಾರೂಢನಾಗಿ ಮಾತೆಯ ಮುಂದೆ ನಿಂತಿದ್ದ ಆ ಮಾನವಕೇಸರಿ ಸ್ವಲ್ಪ ಹೊತ್ತಿನಲ್ಲಿ ಮೈತಿಳಿದು, ನಿಟ್ಟುಸಿರುಬಿಟ್ಟು, ದೇವಾಲಯದ ಸಮಸ್ತ ಭಾಗಗಳನ್ನೂ ತೀಕ್ಷ್ಣಾನ್ವೇಷಕ ದೃಷ್ಟಿಯಿಂದ ಈಕ್ಷಿಸಿ ಹೊರಹೊರಟನು. ಆತನ ಪ್ರಶಾಂತ ಗಂಭೀರ ಹೃದಯದಲ್ಲಿ ಯಾವುದೋ ಒಂದು ಮಹೋದ್ವೇಗದ ಲಹರಿ ತಾಂಡವವಾಡುತ್ತಿದ್ದಂತೆ ತೋರುತ್ತಿತ್ತು. ಪೂಜಾರಿಗಳು ಬಾಗಿಲವರೆಗೂ ಓಡಿ ಬಂದು ಆತನು ಹೋಗುತ್ತಿದ್ದ ದಾರಿಯನ್ನೇ ನಿಟ್ಟಿಸುತ್ತಾ ಮನಸ್ಸಿನಲ್ಲಿಯೆ ನಮಿಸಿದರು. ಆತನು ಸಮುದ್ರಾಭಿಮುಖವಾಗಿ ಹೋಗುತ್ತಿದ್ದನು. ಅರ್ಚಕರು ನೋಡುತ್ತಿದ್ದ ಹಾಗೆಯೇ ಹಿಮಾವರಣದಲ್ಲಿ ಕಣ್ಮರೆಯಾದನು. ಅರ್ಚಕರು ಒಬ್ಬರ ಮುಖವನ್ನು ಒಬ್ಬರು ನೋಡುತ್ತ "ಯಾರಿವನು?" ಎಂದರು.

ಗುಡಿಯಿಂದ ಹೊರಟ ಆ ಸಂನ್ಯಾಸಿ ಸಮುದ್ರತೀರಕ್ಕೆ ಬಂದನು. ಕನ್ಯಾಕುಮಾರಿಯ ಸಮುದ್ರ ತೀರ! ಭಾರತಮಾತೆಯ ಪವಿತ್ರ ಪಾದಗಳ ತುತ್ತತುದಿ! ವೇದಭೂಮಿಯ ಕೊನೆ! ಸಂನ್ಯಾಸಿ ಭಾವಪರವಶನಾಗಿ ನಿಂತು ಸುತ್ತಲೂ ದೃಷ್ಟಿ ಪ್ರಸಾರ ಮಾಡಿದನು: ಮುಂದುಗಡೆ ವಿಸ್ತಾರವಾದ, ಅನಂತವಾದ, ಮೇರೆಯರಿಯದ ಮಹಾಸಮುದ್ರ! ಅಲ್ಲೋಲಕಲ್ಲೋಲವಾದ ಮಹಾತರಂಗಗಳ ರುದ್ರರಮಣೀಯ ವಿನ್ಯಾಸದಿಂದ ಶೋಭಿಸುತ್ತಿರುವ ಅಪಾರ ವಾರಿಧಿ! ಹಿಂದುಗಡೆ ವೇದಮಾತೆಯ ನೆಲೆಬೀಡಾದ ಬಿತ್ತರದ ಭರತಖಂಡ! ಭಿನ್ನಭಿನ್ನ ಜಾತಿಗಳ, ಭಿನ್ನಭಿನ್ನ ಭಾಷೆಗಳ, ಭಿನ್ನಭಿನ್ನ ರುಚಿಗಳ, ಆದರೂ ಏಕಾಭಿನ್ನ ಸಂಸ್ಕೃತಿಯ ಜನಸಮುದಾಯವನ್ನು ಹೊತ್ತಿರುವ ಪುರಾಣ ಪ್ರಸಿದ್ಧವಾದ ಪುರಾತನ ಭಾರತವರ್ಷ!

ಆಗತಾನೆ ಪೂರ್ವದಿಗಂತದಲ್ಲಿ ಅರುಣೋದಯವಾಗುತ್ತಿತ್ತು. ನಲಿನಲಿಯುತ್ತಿದ್ದ ಕಡಲೊಡೆದು ತೆರೆಗಳು ಮುಂಬೆಳಕಿನಲ್ಲಿ ಮಿಂಚುತ್ತಿದ್ದುವು. ಶೈಶಿರ ಪ್ರಭಾತದ ಶೀತಲ ಸಮೀರಣನು ಸುಯ್ಯೆಂದು ತೀಡುತ್ತಿದ್ದನು. ಅನೇಕಾನೇಕ ಸಮುದ್ರಪಕ್ಷಿಗಳು ಹಿಂಜರಿಯುತ್ತಿದ್ದ ಮಂಜಿನಲ್ಲಿ ಹಾರಾಡತೊಡಗಿದ್ದುವು. ತೀರದ ಕಲ್ಪವೃಕ್ಷಗಳಲ್ಲಿ ಚಿರಮರ್ಮರ ನಾದಮಾಡುತ್ತಿದ್ದ ತೆಂಗಿನಗರಿಗಳಲ್ಲಿ ವಿವಿಧ ನೆಲವಕ್ಕಿಗಳು ಇಂಚರಗೈಯ್ಯಲು ಪ್ರಾರಂಭಿಸಿದ್ದುವು. ಆ ಮಧುರ ಸುಂದರ ಶಾಂತ ಸನ್ನಿವೇಶದಲ್ಲಿ ಸಂನ್ಯಾಸಿ ಆವೇಶವಶನಾದನು. ಆ ತಪಸ್ವಿಯ ಕಾಂತಿ ಮಿಗಿಲಾಗುತ್ತಿದ್ದ ಪ್ರಭಾತ ಪ್ರಕಾಶದೊಡನೆ ಸ್ನೇಹ ಬೆಳೆಸುತ್ತಿತ್ತು.

ಸಂನ್ಯಾಸಿ ನಿಂತು ನೋಡಿದನು. ಅನತಿ ದೂರದಲ್ಲಿ ಕಡಲಿನಿಂದ ಗಜಾಕಾರವಾಗಿ ಮೇಲೆದ್ದು ಒಂದು ಹೆಬ್ಬಂಡೆ ಹಿಂಜರಿದ ಮಂಜಿನಿಂದ ಮೂಡಿದಂತೆ ತೋರಿತು. ಯೋಗಿವರ್ಯನು ಮನಸ್ಸಿನಲ್ಲಿ ಏನು ನೆನೆದನೋ? ಮಕರ ನಕ್ರ ತಿಮಿಂಗಿಲಮಯವಾಗಿದ್ದ ಆ ಭಯಂಕರವಾದ ಅಂಬುಧಿಯಲ್ಲಿ ಧುಮುಕಿದನು. ತರಂಗಗಳ ನಡುವೆ ದಿಟ್ಟತನದಿಂದ ಈಜತೊಡಗಿದನು. ಆಗತಾನೆ ಸಮುದ್ರತೀರಕ್ಕೆ ಬಂದ ಒಬ್ಬಿಬ್ಬರು ಕಾಷಾಯಧಾರಿಯ ಧೂರ್ತತನವನ್ನು ನೋಡಿ ನಡುಗಿದರು. ಅವರು ನೋಡುತ್ತಿದ್ದ ಹಾಗೆಯೇ ಕೆಚ್ಚೆದೆಯ ಸಂನ್ಯಾಸಿ ನಿರ್ದಿಷ್ಟ ಶಿಲಾರೋಹಣ ಮಾಡಿ, ಮಹಾ ಬಂಡೆಯ ತಗ್ಗು ಉಬ್ಬುಗಳಲ್ಲಿ ಅದೃಶ್ಯವಾದನು. ತೀರದಲ್ಲಿನ ಜನರು ಒಬ್ಬರ ಮುಖವನ್ನು ಒಬ್ಬರು ನೋಡಿ "ಯಾರಿವರನು?" ಎಂದು ವಿಸ್ಮಿತರಾದರು.

ಆರ್ಯಭೂಮಿಯ ತುತ್ತತುದಿಯ ಅರೆಬಂಡೆಯನ್ನು ಏರಿದ ಸಂನ್ಯಾಸಿ ಮರಳಿ ನಿಂತು ನೋಡಿದನು. ಮಹಾಪರ್ವತವೊಂದರ ತುತ್ತತುದಿಯ ಹಿರಿಯ ಬಂಡೆಯ ಮೇಲೆ ನಿಂತ ವನಕೇಸರಿ ಸುತ್ತಲಿರುವ ನಿಮ್ನ ಪ್ರದೇಶಗಳನ್ನು ಎವೆಯಿಕ್ಕದೆ ದಿಟ್ಟಿಸುವಂತೆ ಆ ಸಂನ್ಯಾಸಿ ಮರಳಿ ನಿಂತು ನೋಡಿದನು. ಕೋಟ್ಯನುಕೋಟಿ ಭಾವನೆಗಳ ನಿರಂತರ ನೃತ್ಯದಲ್ಲಿ ಆತನು ಭಾವಾವೇಶವಶನಾದನು!

ಬಲಗಡೆ ಸಮುದ್ರ, ಎಡಗಡೆ ಸಮುದ್ರ, ಹಿಂದುಗಡೆ ಸಮುದ್ರ, ಮುಂದುಗಡೆ ವಿಸ್ತಾರವಾದ ತನ್ನ ಜನ್ಮಭೂಮಿ. ಮೇಲುಗಡೆ ಅನಂತವಾದ ನೀಲಾಕಾಶ. ಆ ಮಹಾವಸ್ತುಗಳ ನಡುವೆ ತಾನು! ಸಂನ್ಯಾಸಿ ಕಡಲ ನಡುಬಂಡೆಯ ಮೇಲೆ ನಿಂತು ಸುತ್ತಲೂ ನೋಡಿದನು. ಸಮುದ್ರಾಕಾಶಗಳ ಆಲಿಂಗನಸ್ಥಾನವಾದ ಬಹುದೂರ ಪೂರ್ವದಿಗಂತದಿಂದ ಕಿಶೋರ ಕಮಲಮಿತ್ರನು ತಳತಳಿಸಿ ಮೂಡಿದನು. ಬಾಲಸೂರ್ಯನ ಕೋಮಲ ಕಿರಣಗಳ ಅರುಣಜ್ಯೋತಿ ಕಡಲಿನ ತೆರೆತೆರೆಗಳಲ್ಲಿ ಹಬ್ಬಿ ಪ್ರತಿಬಿಂಬಿಸಿ ಮಿಂಚಿದುದು, ತೆರೆಗಳ ಶಿಖರಭಾಗದ ಬೆಳ್ನೊರೆಯೊಬ್ಬುಳಿ ಕೋಟ್ಯನುಕೋಟಿ ಮುತ್ತುಗಳ ಮುದ್ದೆಯಂತೆ ಶೋಭಿಸಿತು. ನೀಲಸ್ಫಟಿಕ ವರ್ಣದ ಪೆರ್ದೆರೆಗಳು ನಾಲ್ದೆಸೆಗಳಿಂದಲೂ ಬಂದು ಸಂನ್ಯಾಸಿ ನಿಂತಿದ್ದ ಬಂಡೆಗೆ ಮುದ್ದಿನಿಂದ ಮುತ್ತು ಕೊಟ್ಟುವು. ಅನತಿದೂರದ ತೀರದಲ್ಲಿ ನಿಬಿಡ ಕಲ್ಪದ್ರುಮ ವನ ಶ್ರೇಣಿಗಳ ಹರಿತ ಸೌಂದರ್ಯವು ಪ್ರಾತಃಸೂರ್ಯನ ದರಲೋಹಿತ ರಾಗದಲ್ಲಿ ನವ ಚೇತನವನ್ನು ಪಡೆದು ರಂಜಿಸಿತು. ರಾಜಯೋಗಿಯ ಕಣ್ಣುಗಳು ಮಿಂಚಿದುವು. ವದನವು ಆತ್ಮೈಶ್ವರ್ಯದ ತೇಜಸ್ಸಿನಿಂದ ಪ್ರಫುಲ್ಲಿತವಾಯಿತು. ಪೂತನೂತನ ಭಾವದಿಂದ ಎದೆಯರಳಿತು. ವಿಕಂಪಿತ ದೇಹನಾಗಿ ಒಯ್ಯನೆ ಕುಳಿತು ಪದ್ಮಾಸನಾರೂಢನಾಗಿ ಧ್ಯಾನಮಗ್ನನಾಗಿಬಿಟ್ಟನು.

ಸುತ್ತಲೂ ಕಡಲಿನ ತೆರೆಗಳು ಮೊರೆದುವು. ಆದರೆ ಆತನ ಹೃದಯದಲ್ಲಿ ಭಾವ ತರಂಗಗಳು ಇನ್ನೂ ಅತಿಶಯವಾಗಿ ಮೊರೆಯತೊಡಗಿದುವು. ಭಾರತ ವರ್ಷದ ತುತ್ತತುದಿಯ ಬಂಡೆಯ ಮೇಲೆ ಕುಳಿತ ಆ ದೇಶಭಕ್ತ ವೀರಸಂನ್ಯಾಸಿ ಮಾತೃಭೂಮಿಯ ಭೂತಭವಿಷ್ಯದ್ವರ್ತಮಾನಗಳನ್ನು ಕುರಿತು ಚಿಂತಿಸತೊಡಗಿದನು. ಒಂದು ಗಂಟೆಯಾಯಿತು; ಎರಡು ಗಂಟೆಯಾಯಿತು; ಹೊತ್ತೇರಿತು; ಬಿಸಿಲೇರಿತು. ಆದರೂ ಆತನು ಚಲಿಸಲಿಲ್ಲ. ಒಮ್ಮೆ ಚಿಂತೆಗಳ ಭರದಲ್ಲಿ ನಡುನಡುವೆ ನಿಟ್ಟುಸಿರು ಬಿಡುವನು. ಒಮ್ಮೆ ಧ್ಯಾನಾಸಕ್ತನಾದ ಮತ್ತೊಬ್ಬ ಮಹಾಬುದ್ಧನೋ ಎಂಬಂತೆ ಆತನ ವದನದಲ್ಲಿ ಜ್ಯೋತಿ ತಾಂಡವವಾಡುವುದು. ಒಮ್ಮೆ ಮಹಾವೀರ ನೋಪಾದಿಯದಲ್ಲಿ ಮಲೆಯುವನು; ಒಮ್ಮೆ ಹಸುಳೆಯಂತೆ ದೀನನಾಗುವನು. ಒಮ್ಮೆ ಕಂಬನಿ ತುಂಬಿದ ಕಣ್ಣುಗಳನ್ನು ವಿಶಾಲವಾಗಿ ತೆರೆದು ಅನಂತವಾದ ಜಲನಿಧಿಯನ್ನು ಅನಿಮಿಷ ನಯನವಾಗಿ ನಿಟ್ಟಿಸುವನು. ಒಮ್ಮೆ ಕನ್ಯಾಕುಮಾರಿ ರಾಮೇಶ್ವರಗಳಿಂದ ಕೈಲಾಸ ಬದರಿಕಾಶ್ರಮಗಳ ಪರ್ಯಂತ ಹಬ್ಬಿರುವ ಪುಣ್ಯ ಭೂಮಿಯಾದ ಮಹಾಭಾರತವರ್ಷವನ್ನು ತೀಕ್ಷ್ಣದೃಷ್ಟಿಯಿಂದ ಅವಲೋಕಿಸುವನು. ನಡುನಡುವೆ "ಹೇ ಜನನಿ, ಹೇ ಭಾರತಮಾತೆ, ಹೇ ನನ್ನ ಜನನಿ, ಹೇ ನನ್ನ ಭಾರತ ಮಾತೆ" ಎಂದು ಉದ್ಘೋಷಿಸಿ ಕಂಬನಿಗರೆವನು. ಒಮ್ಮೆ ಹರ್ಷ, ಒಮ್ಮೆ ದುಃಖ; ಒಮ್ಮೆ ಸರಳತೆ, ಒಮ್ಮೆ ಗಾಂಭೀರ್ಯ; ಒಮ್ಮೆ ಮುನಿಸು, ಒಮ್ಮೆ ಶಾಂತಿ; ಹೀಗೆ ನಾನಾ ಭಾವಗಳಿಂದ ಆ ತೇಜಸ್ವಿಯಾದ ಸಂನ್ಯಾಸಿ ಕಡಲಿನೆದೆಯ ಬಡಬ ನಂತಾದನು.

ಸಂನ್ಯಾಸಿ ಮರಳಿ ನಿಮೀಲಿತ ನಯನನಾದನು. ಭರತಖಂಡದ ಪೂರ್ವೋತ್ತರ ವರ್ತಮಾನಗಳೆಲ್ಲವೂ ಆತನ ಮನದಲ್ಲಿ ಚಲನಚಿತ್ರಗಳಂತೆ ಮಿಂಚತೊಡಗಿದುವು. ಸನಾತನಳಾದ ಭಾರತಾಂಬೆಯ ಯುಗಯುಗಾಂತರಗಳ

ಕಾಲಮಹಾ ಗರ್ಭವು ಗೋಚರವಾಗತೊಡಗಿತು. ಆಕೆಯಲ್ಲಿ ಹುಟ್ಟಿ ಬೆಳೆದ ಮಹಾ ತತ್ತ್ವಗಳು, ಮಹಾ ವ್ಯಕ್ತಿಗಳು, ಮಹಾ ರಾಜ್ಯಗಳು, ಮಹಾ ಚಕ್ರವರ್ತಿಗಳು, ಮಹಾ ಕವಿ ವರ್ಯರು, ಮಹಾ ಯೋಗಿಗಳು ಎಲ್ಲವೂ ಎಲ್ಲರೂ ಒಬ್ಬೊಬ್ಬರಾಗಿ ಒಂದೊಂದಾಗಿ ಸಂನ್ಯಾಸಿಯ ಬಗೆಗಣ್ಣಿಗೆ ಹೊಳೆಯತೊಡಗಿದುವು. ಎಲ್ಲವೂ ಆ ಜನಾಂಗ ನಿರ್ಮಾಪಕನು ಕಂಡ ದಿವ್ಯ ದರ್ಶನಗಳಾಗಿದ್ದುವು. ಮನು, ವ್ಯಾಸ, ಶಂಕರಾಚಾರ್ಯ, ಬುದ್ಧ, ರಾಮ, ಚೈತನ್ಯ; ಕರ್ಣಾಟಕ, ವಂಗ, ಕೇರಳ, ರಾಜಪುತ್ರ ಸ್ಥಾನ, ಮಹಾರಾಷ್ಟ್ರ; ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ; ಹಿಂದೂ, ಮುಸಲ್ಮಾನ, ಪಾರಸಿಕ, ಕ್ರೈಸ್ತ; ಧರ್ಮ, ಅರ್ಥ, ಕಾಮ, ಮೋಕ್ಷ ಇವೆಲ್ಲವುಗಳ ಎಡೆಬಿಡದ ಮೆರವಣಿಗೆ ಚಾಗಿಯ ಬಗೆಯಲ್ಲಿ ಸಾಗಿಹೋಯಿತು. ಶಿಲ್ಪಿವರ್ಯನೊಬ್ಬನು ಮೊರಡಾದ ಒಂದು ಕಾಡುಬಂಡೆಯಲ್ಲಿ ತನ್ನ ಇಷ್ಟವಿಗ್ರಹವನ್ನು ಸಂದರ್ಶಿಸುವಂತೆ ಅಧೋಗತಿಗಿಳಿದ ಭರತಖಂಡದಲ್ಲಿ ಸಂನ್ಯಾಸಿ ಸಂಪದ್ಯುಕ್ತವಾದ ಸುಸಂಸ್ಕೃತ ಭಾವೀ ಭರತಖಂಡವನ್ನು ಸಂಕಲ್ಪಿಸಿದನು. ಭಾವಾವೇಶದಿಂದ ಆತನ ತನು ಕಂಪಿಸಿತು. ಸನಾತನ ಧರ್ಮದ ಪುನರುಜ್ಜೀವನವೂ ಆರ್ಯ ಸಂಸ್ಕೃತಿಯ ಪುನರುತ್ಥಾನವೂ ತನ್ನ ಜೀವನದ ಧ್ಯೇಯಗಳಾಗಬೇಕೆಂದು ನಿರ್ಧರಿಸಿದನು. ಧರ್ಮವು ಭಾರತೀಯರ ರಕ್ತನಾಳಗಳಲ್ಲಿ ಪ್ರವಹಿಸುವುದನ್ನು ಕಂಡು ತನ್ನಲ್ಲಿ ತಾನೆ "ಭಾರತವರ್ಷವು ಪುನರುಜ್ಜೀವಿತವಾಗುವುದು. ಸನಾತನ ಆರ್ಯ ಸಂಸ್ಕೃತಿ ನೂತನ ಸಂಸ್ಕಾರಗಳನ್ನು ಪಡೆದು ಮರಳಿ ತಲೆಯೆತ್ತುವುದು! ಹೇ ಜನನಿ, ನಿನಗೆ ಜಯವಾಗಲಿ!" ಎಂದುಕೊಂಡನು.

ಇದ್ದಕ್ಕಿದ್ದ ಹಾಗೆ ಆ ತೇಜಸ್ವಿ ಎದ್ದುನಿಂತನು, ಉನ್ನತಪರ್ವತದ ಮೇಲೆ ಉನ್ನತತರ ಶಿಖರವು ಎದ್ದುನಿಲ್ಲುವಂತೆ! ಆತನ ಹೃದಯವನ್ನು ತುಂಬಿ ತುಳುಕುತ್ತಿದ್ದ ಭಾವಗಳು ಹೊರಸೂಸತೊಡಗಿದುವು. ದಿಗ್ದಿಗಂತಗಳನ್ನು ನೋಡಿದನು. ನೀಲಾಕಾಶವನ್ನು ನೋಡಿದನು. ಸುಮಧುರ ಗಂಭೀರವಾಣಿಯಿಂದ ಸಮಸ್ತ ವಿಶ್ವವನ್ನೆ ಸಂಬೋಧಿಸಿದನು:

"ಹೇ ಜನನಿ, ಆರ್ಯಮಾತೆ, ಪುಣ್ಯಭೂಮೀ, ನಿನ್ನ ಸುಂದರ ವದನವನ್ನು ಕುರೂಪಗೈದ ಮಕ್ಕಳ ಪಾಪವನ್ನು ಮನ್ನಿಸು. ನಿನ್ನವರು ತಪ್ಪಿದರು. ಅಖಂಡಳಾದ ನಿನ್ನಲ್ಲಿ ಭೇದಗಳನ್ನು ಕಲ್ಪಿಸಿ ಕೆಟ್ಟರು. ಧರ್ಮವನ್ನು ಮರೆತುಬಿಟ್ಟರು. ಗೊಡ್ಡು ಪದ್ಧತಿಗಳನ್ನೆ ಧರ್ಮವೆಂದು ಭ್ರಮಿಸಿ, ಅದರಂತೆ ಆಚರಿಸಿ, ನಿನ್ನನ್ನು ಪರಕೀಯರಿಗೆ ಮಾರಿದರು. ದಾಸಿಯನ್ನಾಗಿ ಮಾಡಿದರು. ಅನಾಥೆಯನ್ನಾಗಿ ಮಾಡಿದರು. ಅಮ್ಮಾ, ತ್ರಿಲೋಕಸುಂದರಿ, ನಿನ್ನನ್ನು ಕುರೂಪಿಯನ್ನಾಗಿ ಮಾಡಿದರು. ಮಕ್ಕಳ ಪಾಪವನ್ನು ಮನ್ನಿಸು! ಮನ್ನಿಸು! ಬಗೆಗೆಟ್ಟ ಅವರಿಗೆ ಸನ್ಮತಿಯನ್ನು ನೀಡು! ಎಲ್ಲಿ ನಿನ್ನ ಐಶ್ವರ್ಯ? ಎಲ್ಲಿ ನಿನ್ನ ವಿದ್ವತ್ತು? ಎಲ್ಲಿ ನಿನ್ನ ಆತ್ಮಧರ್ಮ? ಪುರೋಹಿತರ ದೌರಾತ್ಮ್ಯದಿಂದ, ಜಾತಿಭೇದದ ಕ್ರೌರ್ಯದಿಂದ, ಮೇಲೆದ್ದವರ ಅಹಂಕಾರದಿಂದ, ಕೆಳಗೆ ಬಿದ್ದವರ ಹೇಡಿತನದಿಂದ, ಪಂಡಿತರ ಸ್ವಾರ್ಥ ಬುದ್ಧಿಯಿಂದ, ಪಾಮರರ ಮೂರ್ಖತನದಿಂದ, ನಿನ್ನ ಸುಂದರ ಸುರಮಂದಿರವು ರುದ್ರ ಶ್ಮಶಾನವಾಯಿತೆ! ಎಲೈ ಕಂಬನಿಗಳೆ, ಮೂಕಾಶ್ರುಬಿಂದುಗಳೆ, ಮಾತೆಯ ಪಾದಗಳನ್ನು ತೊಳೆಯುವಿರಾ? ಮಕ್ಕಳ ಪಾಪಗಳನ್ನು ತೊಳೆಯುವಿರಾ? ಶ್ಮಶಾನಸದೃಶವಾದ ಭರತಖಂಡವನ್ನು ಮತ್ತೊಮ್ಮೆ ಸುರಮಂದಿರವನ್ನಾಗಿ ಮಾಡುವಿರಾ?

"ಇರಲಿ, ನಾವೇನು ಮಾಡಿದ್ದೇವೆ? ಸಂನ್ಯಾಸಿಗಳು ನಾವೇನು ಮಾಡಿದ್ದೇವೆ? ಭಾರತಮಾತೆಯ ತೊಡೆಯ ಮೇಲೆ ಚಕ್ಕಂದದಿಂದ ನಲಿದಾಡುವ ಸಂನ್ಯಾಸಿಗಳು, ನಾವೇನು ಮಾಡಿದ್ದೇವೆ? ಕಾಷಾಯ ವಸ್ತ್ರಧಾರಿಗಳಾಗಿ ಮೂರ್ಖಜನರ

ತಾಮ ಸಾತಿಥ್ಯದಿಂದ ಉದರಪೋಷಣೆ ಮಾಡಿಕೊಳ್ಳುತ್ತಾ ಅಲೆಯುತ್ತಿರುವ ಲಕ್ಷಾಂತರ ಸಂನ್ಯಾಸಿಗಳು, ನಾವೇನು ಮಾಡಿದ್ದೇವೆ? ತತ್ತ್ವಬೋಧನೆ! ತತ್ತ್ವಬೋಧನೆ! ಚಿಃ ಚಿಃ ಬೈರಾಗಿಗಳೆ, ನಿಮ್ಮ ತತ್ತ್ವಬೋಧನೆಗೆ ಬೆಂಕಿ ಇಡಲಿ! ಹೊಟ್ಟೆಗಿಲ್ಲದೆ ಕಂಗೆಟ್ಟಿರುವ ದೇಶದಲ್ಲಿ ನಿಮ್ಮ ತತ್ತ್ವಬೋಧನೆ! ಅಯ್ಯೋ ಕಪಟವೃತ್ತಿಯೆ! ನಾವೇನು ಮಾಡುತ್ತಿದ್ದೇವೆ! ಅನ್ನವಿಲ್ಲದ, ವಸ್ತ್ರವಿಲ್ಲದ ಕುರಿಗಳಿಗೆ ವೇದಾಂತ ಬೋಧನೆ ಮಾಡುತ್ತಿದ್ದೇವೆ! ಆಹಾ! ವೇದಮಾತೆ, ನಿನ್ನ ಸಂನ್ಯಾಸಿಗಳ ಲೀಲೆಯನ್ನು ನೋಡು! ನೋಡಿ ನಲಿ! ನಲಿ! ಕಾಲಡಿಯ ಭೂಮಿಯನ್ನೂ ಹಿಡಿಯಲಾರದ ಅಶಕ್ತರಿಗೆ ಅನಂತಾಕಾಶವನ್ನು ತೋರಿಸಿದ್ದೇವೆ! ಸಹೋದರರೆ, ಸಂನ್ಯಾಸಿಗಳೆ, ನಮಗಿಂದು ಬರಿಯ ತತ್ತ್ವದಿಂದ ಮುಕ್ತಿ ದೊರಕದು. ಅನ್ನ ಬೇಕು, ವಸ್ತ್ರ ಬೇಕು, ಜನ ಬೇಕು, ಧನ ಬೇಕು!

"ನಾನೊಬ್ಬ ಬಡ ಸಾಧು. ನಾನೇನು ಮಾಡಬಲ್ಲೆ? ನನಗೆ ಧನವೆಲ್ಲಿಂದ ದೊರಕುವುದು?"

ಸಂನ್ಯಾಸಿ ನಿಷ್ಪಂದ ನೀರವವಾಗಿ ನಿಂತು ಸಾಗರವನ್ನು ದುರದುರನೆ ನೋಡಿದನು. ಪಶ್ಚಿಮ ದಿಕ್ಕಿನ ಕಡೆಗೆ ತಿರುಗಿ ಬಹುಕಾಲ ನಿಟ್ಟಿಸಿದನು. ನೈರಾಶ್ಯದ ಚಿಹ್ನೆಗಳು ಕ್ರಮಕ್ರಮವಾಗಿ ಮುಖದಿಂದ ಅಳಿಸಿಹೋದುವು. ಫಕ್ಕನೆ ಯಾರನ್ನೊ ಕಂಡವನಂತೆ ಬೆಚ್ಚಿಬಿದ್ದು ಕೈಮುಗಿದುಕೊಂಡು ಹೇಳತೊಡಗಿದನು:

"ಹೇ ಗುರುದೇವ, ಹೇ ಗುರುದೇವ, ನಿನ್ನ ಕೃಪೆಯೊಂದಿರಲಿ! ನನಗೆಲ್ಲ ಸಾಧ್ಯವಾಗುವುದ. ಸಮಸ್ತ ಭರತಖಂಡವನ್ನು ಸಂಚರಿಸಿ ಅದರ ಹೃದಯವನ್ನು ಅರಿತಿದ್ದೇನೆ. ನೂತನ ಚೇತನಶಕ್ತಿ ಅದರ ಅಂತರಾಳದಲ್ಲಿ ಅಡಗಿದೆ. ಅದನ್ನು ಎಚ್ಚರಿಸಲು ಪ್ರಯತ್ನಪಡುತ್ತೇನೆ. ಸೊಂಟ ಕಟ್ಟಿ ನಿಲ್ಲುತ್ತೇನೆ. ಅರಸರ ಅರಮನೆಗಳಲ್ಲಿ ಸೆಜ್ಜೆಗಳ ಮೇಲೆ ಪವಡಿಸಿದ್ದೇನೆ; ತಿರುಕರ ಗುಡಿಸಲುಗಳಲ್ಲಿ ನೆಲದ ಮೇಲೆ ಮಲಗಿದ್ದೇನೆ. ಭಾರತಮಾತೆಯನ್ನು ಆಪಾದಮಸ್ತಕವಾಗಿ ಅರಿತಿದ್ದೇನೆ. ಈ ಮಹಾ ಸಮುದ್ರವನ್ನು ದಾಟುವೆನು. ಪಶ್ಚಿಮದೇಶಗಳಿಗೆ ಹೋಗುವೆನು. ಐಶ್ವರ್ಯದಲ್ಲಿ ಓಲಾಡುತ್ತಿರುವ ಪಶ್ಚಿಮ ದೇಶಗಳಿಗೆ ಹೋಗುವೆನು. ನನ್ನ ಮೇಧಾಶಕ್ತಿಯಿಂದ ಧನಾರ್ಜನೆ ಮಾಡುವೆನು. ಮಾತೆಯ ಉದ್ಧಾರಕ್ಕೆ ಯತ್ನ ಮಾಡುವೆನು. ಹೇ ಜನನಿ, ಸಂನ್ಯಾಸಧರ್ಮಕ್ಕೆ ವಿರುದ್ಧವಾಗಿ ಧನ ಸಂಪಾದನೆ ಮಾಡುವೆನು. ದರಿದ್ರ ನಾರಾಯಣರ ಸೇವೆ ಮಾಡುವೆನು. ಹೇ ಗುರುದೇವ, ಹೇ ಗುರುದೇವ, ನಿನ್ನ ಕೃಪೆಯನ್ನು ನೀಡು, ನನಗೆ ನೆರವಾಗು! ನೆರವಾಗು!"

ಇಂತೆಂದು ದೇಶಭಕ್ತ ವೈರಾಗಿ ಮೌನವಾಗಿ ಗಗನದೆಡೆಗೆ ಶೂನ್ಯದೃಷ್ಟಿಯನ್ನಟ್ಟಿದ್ದನು. ಮಾಗಿಯ ನೇಸರು ಮೇಲೇರಿ ಸೌಮ್ಯಾತಪವು ವೈರಾಗಿಯನ್ನು ಮೀಯಿಸಿತ್ತು. ಆತನ ಕಾವಿಯ ತಲೆಯುಡೆಯನ್ನು ಕಡಲೆಲರು ಒಯ್ಯನೆ ಓಸರಿಸಿ ಕೆಳಗೆಸೆಯಿತು. ಕಡಲ್ವಕ್ಕಿಗಳು ಸುತ್ತಲೂ ಹಾರಾಡಿದುವು. ಶರಧಿಯ ತರಂಗಗಳು ಸಂನ್ಯಾಸಿಯನ್ನು ಸಂತವಿಡುವಂತೆ ನಾಲ್ಕು ದಿಕ್ಕುಗಳಿಂದಲೂ ಮುತ್ತಿಬಂದು ಬಂಡೆಗೆ ಬಡಿಯುತ್ತಿದ್ದುವು. ಉದ್ವೇಗವು ಕಡಮೆಯಾಗಿ ರಾಜಯೋಗಿ ದೃಢ ಚಿತ್ತಾನ್ವಿತನಾದನು. ಮುಖದಲ್ಲಿ ದಿಟ್ಟತನದ ರೇಖೆಗಳು ತೋರಿದುವು. ಮರಳಿ ಆತನ ವಾಣಿ ದೂರದ ಗುಡುಗಿನಂತೆ ಗಂಭೀರವಾಗಿ ಮೊಳಗಿತು :

“ನನ್ನ ಸಂನ್ಯಾಸ! ನನ್ನ ಆತ್ಮ ಕಲ್ಯಾಣ! ನನ್ನ ಮುಕ್ತಿ! ಚಿಃ ಚಿಃ ಸ್ವಾರ್ಥತೆಯೆ, ದೂರ ಸರಿ! ಭರತಖಂಡದ ಉದ್ಧಾರಕ್ಕಾಗಿ ಕೋಟಿ ಜನ್ಮಗಳನ್ನೆತ್ತಿ ಬರುವೆನು! ದರಿದ್ರನಾರಾಯಣರ ಸೇವೆಗಾಗಿ ನನ್ನ ಸ್ವಂತ ಆತ್ಮಮುಕ್ತಿಯನ್ನು ಈಡಾಡುವೆನು! ಜಗತ್ತಿನಲ್ಲಿ ಕ್ರಿಮಿಯೊಂದು ಕಷ್ಟದಲ್ಲಿರುವವರೆಗೆ ನಾನು ಸುಖವನ್ನು ಬಯಸೆನು. ಕೀಟವೊಂದು ಬಂಧನದಲ್ಲಿರುವವರೆಗೆ ನನಗೆ ಮುಕ್ತಿಬೇಡ! ಮಾತೃದೇವೋ ಭವ! ಪಿತೃದೇವೋ ಭವ! ಅತಿಥಿದೇವೋ ಭವ! ಅಲ್ಲ, ಅಲ್ಲ, ದರಿದ್ರದೇವೋ ಭವ! ಮೂರ್ಖದೇವೋ ಭವ! ಪಾಪಿದೇವೋ ಭವ! ಮೂರ್ಖರೆನ್ನ ದೇವರು! ದರಿದ್ರರೆನ್ನ ದೇವರು! ಪಾಪಿಗಳೆನ್ನ ದೇವರು! ನಾನವರ ಸೇವೆಗಾಗಿ ನನ್ನಾತ್ಮವನ್ನು ಧಾರೆ ಯೆರೆಯುವೆನು! ಗುರುದೇವ! ಗುರುದೇವ!”

ಸಂನ್ಯಾಸಿ ಸೆರೆಮನೆಯಿಂದ ಹೊರಗೆ ಬಂದವನಂತೆ ಒಂದೆರಡು ನಿಟ್ಟುಸಿರೆಳೆದು, ಹಿಂದಕ್ಕೂ, ಮುಂದಕ್ಕೂ ಅಡ್ಡಾಡತೊಡಗಿದನು. ನಯನಗಳು ನವ ಜ್ಯೋತಿಯನ್ನು ಚೆಲ್ಲಿದುವು. ಪುನಃ ವ್ಯೋಮವನ್ನೂ ಸಮುದ್ರವನ್ನೂ ಭಾರತ ವರ್ಷವನ್ನೂ ದೃಷ್ಟಿಸಿ, ಪಶ್ಚಿಮದ ಕಡೆಗೆ ತಿರುಗಿ ನಿಂತನು. ತುಸು ಹೊತ್ತು ದುರದುರನೆ ನಿಟ್ಟಿಸಿ ಹೇಳತೊಡಗಿದನು :

“ನನಗಿಂದು ತಿಳಿಯಿತು ನನ್ನ ಜನ್ಮೋದ್ದೇಶ! ಪಶ್ಚಿಮ ದೇಶಗಳಿಗೆ ಹೋಗುವೆನು. ಅಲ್ಲಿ ಭೋಗವಾದಿಗಳ ಹೃದಯದಲ್ಲಿ ಸನಾತನ ವೇದಧರ್ಮದ ಉಪನಿಷತ್ ಪ್ರಖರಜ್ಯೋತಿಯನ್ನು ಬೀರುವೆನು. ಅವರು ಭಾರತಾಂಬೆಗೆ ತಲೆಬಾಗಿ ಆಕೆಗೆ ನೆರವಾಗುವಂತೆ ಮಾಡುವೆನು. ಆಕೆಯ ದುರ್ಗತಿಯನ್ನು ಪರಿಹರಿಸಲೆಳಸುವೆನು. ಭಾವಸಮಾಧಿ ಅಲ್ಲಿರಲಿ! ನಿರ್ವಿಕಲ್ಪಸಮಾಧಿ ಸದ್ಯಕ್ಕೆ ಒತ್ತಟ್ಟಿಗಿರಲಿ! ನನ್ನಾತ್ಮ ಮುಕ್ತಿ ಸದ್ಯಕ್ಕೆ ಮುಕ್ತಾಯವಾಗಿರಲಿ! ನಿಜವಾದ ಧರ್ಮವನ್ನು ಜಗತ್ತಿಗೆ ಬೋಧಿಸುವೆನು. ಜಗತ್ತನ್ನು ಎಚ್ಚರಿಸುವೆನು. ಭರತಖಂಡವನ್ನು ಮೇಲೆತ್ತುವೆನು. ಹೇ ಜನನಿ, ಪುಣ್ಯಭೂಮಿ, ಆರ್ಯಮಾತೆ, ವೇದಪೂಜಿತೆ, ನನ್ನನ್ನು ಆಶೀರ್ವದಿಸು! ಹೇ ಗುರುದೇವ, ಕೃಪಾಕರ, ನನಗೆ ಶಕ್ತಿಯನ್ನು ನೀಡು!”

ಹೀಗೆಂದ ಸಂನ್ಯಾಸಿ ಕಲ್ಲಿನ ಮೇಲೆ ಕಲ್ಲಾಗಿ ನಿಂತುಬಿಟ್ಟನು. ಆತನ ಸುಂದರ ಗಂಭೀರ ಮೂರ್ತಿಯನ್ನು ಕಂಡು ಸಮುದ್ರರಾಜನು ನಮಸ್ಕರಿಸಿದನು, ಬಾನ್ದೇವಿ ಕೈಮುಗಿದಳು, ಭಾರತಾಂಬೆ ಕಂಬನಿತುಂಬಿ ಕಂಪಿತ ಹಸ್ತದಿಂದ ಹರಸಿದಳು. ಶ್ರೀಗುರುದೇವನು ಮಂದಸ್ಮಿತನಾಗಿ ತನ್ನ ಶಕ್ತಿವರ್ಧಕ ಕೃಪಾಕಟಾಕ್ಷವನ್ನು ಬೀರಿದನು.

ಸಂನ್ಯಾಸಿ ಅಲುಗಾಡದೆ ನಿಂತನು. ಆತನ ಆತ್ಮವು ವಿಶಾಲ ವಿಶ್ವದಲ್ಲಿ ಸಂಚರಿಸುತ್ತಿತ್ತು. ಸಮುದ್ರಪಕ್ಷಿಗಳು ಒಂದು ಮುಖವನ್ನು ಒಂದು ನೋಡಿ ವಿಸ್ಮಯದಿಂದ “ಯಾರಿವನು?” ಎಂದು ಹಾಡಿದುವು!

ಯಾರಿವನು?

* * *

---

[1] ಅದೇ ಸಂವತ್ಸರದ ಏಪ್ರಿಲ್ ತಿಂಗಳಿನಲ್ಲಿ ಮುಂದೆ ಮಹಾತ್ಮರಾಗಲಿರುವ ಗಾಂಧಿಯವರು ಮೊತ್ತಮೊದಲು ದಕ್ಷಿಣ ಆಫ್ರಿಕಕ್ಕೆ ಹೋದುದು ಮತ್ತು ಶ್ರೀ ಅರವಿಂದರು ಇಂಗ್ಲೆಂಡಿನಲ್ಲಿ ಕೃತವಿದ್ಯರಾಗಿ ಭಾರತಕ್ಕೆ ಆಗಮಿಸಿದುದು.

# ೧. ಜನನ ಮತ್ತು ಬಾಲ್ಯ

ವಿಶಾಲ ಮರುಭೂಮಿಯ ಕರ್ಮಹೀನ ಮೃತ್ಯುಶಾಂತಿ, ಅಪಾರ ಸಮುದ್ರದ ನಿರಂತರೋತ್ಸಾಹಪೂರ್ಣ ಕರ್ಮಮಯಕ್ರಾಂತಿ, ಅನಂತಾಕಾಶದ ವಿಪುಲ ನೀಲ ಧ್ಯಾನಗಾಂಭೀರ್ಯ, ಮೇಘಚುಂಬಿತ ಮಹಾಪರ್ವತಶ್ರೇಣಿಯ ತಪೋಮಯ ಶಿಲಾಸ್ಥೈರ್ಯ, ದಿಗಂತವ್ಯಾಪಿಯಾದ ಮಹಾರಣ್ಯರಾಜಿಯ ಸುಂದರ ಸ್ವಚ್ಛಂದ ಭೋಗೋನ್ಮಾದ ಇವುಗಳೆಲ್ಲ ಹಾಸುಹೊಕ್ಕಾದಂತಿದ್ದ ಸ್ವಾಮಿ ವಿವೇಕಾನಂದರ ಬೃಹನ್ಮಹಾವ್ಯಕ್ತಿತ್ವದ ವಿರಚನೆಯಲ್ಲಿ ಅನೇಕ ಶಕ್ತಿಗಳೂ ವ್ಯಕ್ತಿಗಳೂ ಅನುಭವಗಳೂ ಸನ್ನಿವೇಶಗಳೂ ಸೂತ್ರಗಳಾಗಿ ಭಾಗವಹಿಸಿವೆ. ಆ ಸೂತ್ರಗಳಲ್ಲಿ ಪರಂಪರೆಯಾಗಿ ಹರಿದು ಬರುವ ವಂಶಗುಣವೂ ಒಂದಾಗಿದೆ. ಸ್ವಾಮಿ ವಿವೇಕಾನಂದರ ವ್ಯಕ್ತಿತ್ವದ ಹೃದಯದ ಎರಡು ಪಕ್ಕಗಳಲ್ಲಿ ಎರಡು ಶ್ವಾಸಕೋಶಗಳಿವೆ: ಒಂದು ಮಹತ್ಯಾಗಿ, ಮತ್ತೊಂದು ರಸಯೋಗಿ. ಮೊದಲನೆಯದಕ್ಕೆ ಪಿತಾಮಹನೂ ಎರಡನೆಯದಕ್ಕೆ ಪಿತನೂ ಮೂಲವಾಗಿದ್ದಾರೆ.

ವಿವೇಕಾನಂದರ ತಂದೆ ವಿಶ್ವನಾಥದತ್ತನು ಇನ್ನೂ ಹಸುಳೆಯಾಗಿದ್ದಾಗಲೆ ಆತನ ಪಿತನಾದ ದುರ್ಗಾಚರಣದತ್ತನು ಶ್ರೀಮಂತನಾಗಿದ್ದರೂ ಸಂಸಾರದಲ್ಲಿ ಸಂತೃಪ್ತನಾಗದೆ ಸತ್ಯದ ಉತ್ತುಂಗ ಶೃಂಗದ ಅಮೃತಸರೋವರದ ಅನ್ವೇಷಣೆಗಾಗಿ ಗೃಹ ತ್ಯಾಗಮಾಡಿ ಸಂನ್ಯಾಸಿಯಾಗಿ ಕಣ್ಮರೆಯಾಗಿದ್ದನು. ಸಾಧು ಸಂನ್ಯಾಸಿಗಳಲ್ಲಿ ತನಗೆ ಗೌರವವಿದ್ದರೂ ತನ್ನ ಪತಿ ಗೃಹತ್ಯಾಗ ಮಾಡಿದುದರಿಂದ ಶೋಕಾಕುಲೆಯಾದ ವಿಶ್ವನಾಥನ ತಾಯಿ ಮಗನನ್ನು ಕಣ್ಣೀರಿನಲ್ಲಿ ಮೀಯಿಸಿ ಸಲಹಿದಳು. ಚಿಕ್ಕಂದಿನಿಂದಲೂ ಮಾತೆಯ ಮನೋವ್ಯಥೆಯನ್ನು ನೋಡಿ ಮರುಗಿ ಅದಕ್ಕೆ ಕಾರಣವಾಗಿದ್ದ ತಂದೆಯ ಗೃಹತ್ಯಾಗಕ್ಕೆ ಆಧಾರವಾಗಿದ್ದ ಮನೋಭಾವದ ವಿಚಾರದಲ್ಲಿ ದ್ವೇಷದಿಂದಲೂ ಜುಗುಪ್ಸೆಯಿಂದಲೂ ಹಾಸ್ಯಬುದ್ಧಿಯಿಂದಲೂ ಬೆಳೆದ ವಿಶ್ವನಾಥದತ್ತನು ಆಗತಾನೆ ವಂಗದೇಶದಲ್ಲಿ ಪ್ರಚಾರವಾಗುತ್ತಿದ್ದ ಅನಾತ್ಮ ವಿಜ್ಞಾನ ತತ್ತ್ವ ಪ್ರಧಾನವಾಗಿದ್ದ ಹತ್ತೊಂಬತ್ತನೆಯ ಶತಮಾನದ ಆಂಗ್ಲೇಯ ವಿದ್ಯಾಭ್ಯಾಸದ ಪ್ರಭಾವದಿಂದ ಸ್ವಲ್ಪ ಚಾರ್ವಾಕ ಲಕ್ಷಣಗಳುಳ್ಳ ಸಂದೇಹವಾದಿಯಾದನು.

ಆತನಿಗೆ ಆತ್ಮ, ಪರಲೋಕ, ಸಂಯಮ, ತಪಸ್ಸು, ಸಂನ್ಯಾಸ ಮುಂತಾದವುಗಳ ವಿಚಾರದಲ್ಲಿ ಸಂಪೂರ್ಣವಾದ ಅಪನಂಬುಗೆ ಇರದಿದ್ದರೂ ಹೆಚ್ಚು ವಿಶ್ವಾಸವಿರಲಿಲ್ಲ. ಲೋಕದಲ್ಲಿ ಮಿಕ್ಕುಮೀರುವಷ್ಟು ಕಷ್ಟಸಂಕಟಗಳಿವೆ; ಸ್ವಲ್ಪಮಟ್ಟಿಗೆ ಸುಖವೂ ಇದೆ. ಕಷ್ಟಪಡಲಿ ಸುಖಪಡಲಿ ಕೆಲವು ವರ್ಷಗಳಲ್ಲಿ ಮೃತ್ಯು ಎಲ್ಲವನ್ನೂ ಅಳಿಸಿ ಬಿಡುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಸುಖಪಡುವುದೆ ಜಾಣ್ಮೆ. ಸಂಯಮ, ಸಂನ್ಯಾಸ, ಬ್ರಹ್ಮಚರ್ಯ, ತ್ಯಾಗ, ಸಾಧನ ಇತ್ಯಾದಿ ಸಂಕೋಲೆಗಳಿಂದ ಜೀವನವನ್ನೇಕೆ ಬಿಗಿದು ನೋಯಿಸಬೇಕು? ಅದರಲ್ಲಿಯೂ ಸಂದೇಹಾಸ್ಪದವಾದ ಸ್ವರ್ಗ ಸುಖಕ್ಕಾಗಿ ವಾಸ್ತವವೂ ಸುಲಭವೂ ಸ್ಪಷ್ಟವೂ ಸ್ವಾಭಾವಿಕವೂ ಆದ ಇಹಲೋಕದ ಸುಖಗಳನ್ನು ತ್ಯಜಿಸುವುದು ಬರಿಯ ಪೆಚ್ಚು! ಸಮಾಜದ ಕಟ್ಟಿಗೂ ಸರಕಾರದ ಕಟ್ಟಳೆಗೂ ಸಿಟ್ಟುಬಾರದಂತೆ ಅಲ್ಪಸ್ವಲ್ಪ ವ್ಯಯಮಾತ್ರದಿಂದ ಸಾಧ್ಯವಾಗುವುದಾದರೆ ಆ ಸುಖಗಳನ್ನೇಕೆ ಅನುಭವಿಸಬಾರದು? - ಈ ರೀತಿಯ ಮನೋಧರ್ಮದಿಂದ ಕೃತವಿದ್ಯನೂ ನಿರಂಕುಶಮತಿಯೂ

ತೇಜಸ್ವಿಯೂ ಆಗಿ ವಕೀಲಿಯ ವೃತ್ತಿಯನ್ನು ಕೈಕೊಂಡ ವಿಶ್ವನಾಥದತ್ತನು ಆತ್ಮ ವಿಚಾರದಂತೆ ಅನಾತ್ಮವಿಚಾರದಲ್ಲಿಯೂ ಕೃಪಣನಾಗದೆ ರಾಜರಸಿಕನಂತೆ ಉದಾರವಾಗಿ ಚೆನ್ನಾಗಿ ಬಾಳತೊಡಗಿದನು.

ಆತನು ಕಲ್ಕತ್ತಾ ನಗರದ ನಿವಾಸಿಗಳಿಗೆ ಸುಪರಿಚಿತ ವ್ಯಕ್ತಿಯಾಗಿದ್ದನು. ಸ್ವತಂತ್ರಿಯೂ ಬಂಧುವತ್ಸಲನೂ ಆಶ್ರಿತಪಾಲಕನೂ ಆಗಿದ್ದ ವಿಶ್ವನಾಥನ ವಿಶಾಲ ಭವನವು ಧನ ಜನ ಪೂರ್ಣವಾಗಿತ್ತು. ಯಾವ ಸುಖಕ್ಕೂ ಅಲ್ಲಿ ಅಭಾವವಿರಲಿಲ್ಲ. ಬಡಬಗ್ಗರು ಆತನ ಭವನಕ್ಕೆ ಹೋಗಿ ಎಂದಿಗೂ ಹಸಿದ ಹೊಟ್ಟೆಯಿಂದ ಅಥವಾ ಬರಿಯ ಕೈಯಿಂದ ಹಿಂತಿರುಗುತ್ತಿರಲಿಲ್ಲ. ಸಾಧು ಸಂನ್ಯಾಸಿಗಳಿಗೂ ಆತನ ಆಸ್ಥಾನವೆಂದರೆ ರಾಜಾಶ್ರಯವಾಗಿತ್ತು. ಅವರ ಜೀವನ ರೀತಿಯಲ್ಲಿ ತನಗೆ ಆದರ ವಿರದಿದ್ದರೂ ಸಾಧುಗಳನ್ನು ಕಂಡರೆ ಆತನಿಗೆ ಬಹಳ ಗೌರವ. ಹೆಚ್ಚೇನು? ಕಾಯಸ್ಥವೆಂಬ ಕ್ಷತ್ರಿಯಕುಲಕ್ಕೆ ಸೇರಿದ್ದ ವಕೀಲ ವಿಶ್ವನಾಥದತ್ತನು ಕಲ್ಕತ್ತಾ ನಗರದಲ್ಲಿ ಸರ್ವಮಾನ್ಯ ಶ್ರೀಮಂತನಾಗಿದ್ದನು.

ರಾಜ್ಞೀಭಾವದಲ್ಲಿ ತನ್ನ ಪತಿ ವಿಶ್ವನಾಥದತ್ತನಿಗೆ ಹೊಯಿಕೈಯಾಗಿದ್ದ ಭುವನೇಶ್ವರೀದೇವಿ, ವಿವೇಕಾನಂದರ ತಾಯಿ, ಹೆಂಗಸರಿಗೊಪ್ಪುವ ಸ್ವಭಾವಕ್ಕೆ ತಕ್ಕಂತೆ ಅತಿ ಭಕ್ತಿಪರಾಯಣೆಯಾಗಿದ್ದಳು. ಒಂದಿನಿತು ಚಾರ್ವಾಕನಾಗಿದ್ದ ತನ್ನ ಪತಿಯ ಭಕ್ತಿಹೀನತೆಗೆ ತಾನೇ ಹೊಣೆಯಾಗಿ ದಂಪತಿಗಳಿಬ್ಬರ ಭಕ್ತಿಯನ್ನೂ ತಾನೊಬ್ಬಳೇ ಕೈಕೊಂಡು ಪ್ರಾಯಶ್ಚಿತ್ತ ಮಾಡುತ್ತಿದ್ದಳೆಂಬಂತೆ ಈಶ್ವರಾರಾಧನೆ ಮಾಡುತ್ತಿದ್ದಳು. ವಿಶ್ವನಾಥನ ಪ್ರಣಯದ ಬಹುಮುಖತೆ ಮತ್ತು ಅನೇಕಾಗ್ರತೆಗಳೂ ಭುವನೇಶ್ವರಿಯ ಅಗಾಧ ಧಾರ್ಮಿಕತೆಗೆ ಕಾರಣಗಳಾಗಿದ್ದರೂ ಇರಬಹುದು.

ಹೆಣ್ಣು ಮಕ್ಕಳಾಗಿದ್ದರೂ ಭುವನೇಶ್ವರೀದೇವಿ ಗಂಡುಮಗುವಿಗಾಗಿ ಹಾತೊರೆಯುತ್ತಿದ್ದಳು. ಆ ಅಭೀಷ್ಟಸಿದ್ಧಿಗಾಗಿ ತನ್ನ ಮನೆಯಲ್ಲೆ ಪರಮೇಶ್ವರನಿಗೆ ಪೂಜೆ ನೈವೇದ್ಯಗಳನ್ನು ನಿವೇದಿಸುತ್ತಿದ್ದುದಲ್ಲದೆ ಕಾಶಿಯಲ್ಲಿದ್ದ ತನ್ನ ಬಂಧುವೊಬ್ಬಳಿಗೆ ವೀರೇಶ್ವರ ದೇವರಿಗೆಂದು ಮುಡಿಪು ಕಾಣಿಕೆಗಳನ್ನು ಆಗಾಗ ಕಳುಹಿಸುತ್ತಿದ್ದಳು.

ಇಂತಿರಲು ಒಂದಿರುಳು ಆಕೆಗೊಂದು ಕನಸು ಬಿತ್ತು. ಕನಸಿನಲ್ಲಿ ತುಷಾರ ಧವಳ ರಜತಭೂಧರ ಕಾಂತಿಯುತನಾದ ಕೈಲಾಸೇಶ್ವರನು ಆಕೆಯ ಕಂಗಳಿಗೆ ಗೋಚರವಾದನು! ಆಕೆ ಅಶ್ರುಜಲಪೂರ್ಣೆಯಾಗಿ ಭಾವಾವೇಶವಶಳಾಗಿ ಪೂರ್ಣೋನ್ಮೀಲಿತ ನಯನೆಯಾಗಿ ಆ ಮಹಾದಿವ್ಯಮೂರ್ತಿಯನ್ನು ನೋಡ ತೊಡಗಿದಳು. ನೋಡುತ್ತಿದ್ದ ಹಾಗೆಯೇ ಮೆಲ್ಲಮೆಲ್ಲನೆ ದೃಶ್ಯ ಬದಲಾಯಿಸಿತು. ಭಕ್ತಳ ಹೃದಯವನ್ನು ಅಪೂರ್ವ ಆನಂದದಲ್ಲಿ ತೇಲಿಸುತ್ತ ಆ ಶಂಕರಮೂರ್ತಿ ಒಂದು ಶಿಶುವಿನ ರೂಪವನ್ನು ಧಾರಣೆ ಮಾಡಿ ಭುವನೇಶ್ವರೀ ಜನನಿಯ ತೊಡೆಯ ಮೇಲೆ ಬಂದು ನಲಿಯತೊಡಗಿತು! ದಿವ್ಯಾನಂದ ಕಂಟಕಿತ ದೇಹಳಾದ ಭುವನೇಶ್ವರಿ ದೇವಿ ಬೆಚ್ಚಿಬಿದ್ದಳು. ನಿದ್ರಾಭಂಗವಾಯಿತು. ಮೇಲೆದ್ದು "ಹೇ ಶಿವ, ಹೇ ಶಂಕರ, ಹೇ ಕರುಣಾಮಯ" ಎಂದು ಹೇಳುತ್ತ ಭಕ್ತಿಭಾವದಿಂದ ಪುನಃ ಪುನಃ ಅಡ್ಡ ಬಿದ್ದಳು. ಬೆಳಗಾಗಲು ರಾತ್ರಿ ನಡೆದ ಸಂಗತಿಯನ್ನು ತನ್ನ ಪತಿಯಾದ ವಿಶ್ವನಾಥದತ್ತನಿಗೆ ತಿಳಿಸಿದಳು. ಆತನೂ ಆಕೆಯ ಸರಳಸ್ವಭಾವದ ಹರ್ಷಕ್ಕಾಗಿ ಹರ್ಷಿತನಾದನು.

ಕ್ರಿಸ್ತಶಕ ೧೮೬೩ನೆಯ

[1]ಸಂವತ್ಸರದ ಜನವರಿ ತಿಂಗಳು ೧೨ನೆಯ ತೇದಿ, ಮಾಗಿಯ ಚಳಿಕುಳಿರ ಹಿಟ್ಟುಮಂಜು ದಟ್ಟೈಸಿ ಬೀಳುತ್ತಿದ್ದ ಪುಷ್ಯ ಸಂಕ್ರಾಂತಿಯ ಪುಣ್ಯಪ್ರಭಾತದಲ್ಲಿ ಕಲ್ಕತ್ತಾ ಮಹಾನಗರದ ನರನಾರಿಯರು ಗುಂಪುಗುಂಪಾಗಿ ಚಳಿಯಲ್ಲಿ ನಡುಗುತ್ತ ಮಕರಸಪ್ತಮಿಯ ಸ್ನಾನಕ್ಕಾಗಿ ಭಾಗೀರಥಿಗೆ ಹೋಗುತ್ತಿದ್ದರು. ಸಾವಿರಾರು ಗುಡಿಗಳ ಸಾವಿರಾರು ಗಂಟೆಗಳು ಹಬ್ಬದ ಹೆಮ್ಮೆಯನ್ನು ಸೂಚಿಸುತ್ತಿದ್ದುವು. ಆ ಮಂಗಳ ಸಮಯದಲ್ಲಿ, ಸೂರ್ಯೋದಯಕ್ಕೆ ಆರು ನಿಮಿಷಗಳ ಪೂರ್ವದಲ್ಲಿ, ಎಂದರೆ ಆರುಗಂಟೆ ಮೂವತ್ತಮೂರು ನಿಮಿಷ ಮೂವತ್ತಮೂರು ಸೆಕೆಂಡುಗಳಿಗೆ ಸರಿಯಾಗಿ ಕೃಷ್ಣಪಕ್ಷದ ಸಪ್ತಮಿಯ ಪುಣ್ಯ ಮುಹೂರ್ತದಲ್ಲಿ ಭುವನೇಶ್ವರೀದೇವಿ ವಿಶ್ವವಿಜಯಿಯಾಗಲಿರುವ ಮಗನೊಬ್ಬನನ್ನು ಹೆತ್ತಳು. ವಿಶ್ವನಾಥದತ್ತನ ದಿವ್ಯಮಂದಿರವು ಹರ್ಷ ಕೋಲಾಹಲದಿಂದ ಪ್ರತಿಧ್ವನಿತವಾಯಿತು. ಮನೆಮನೆಯಲ್ಲಿಯೂ ಪುಣ್ಯ ಸಂಕ್ರಾಂತಿ ಹಬ್ಬದ ಆನಂದೋತ್ಸವ ನವಜಾತ ಶಿಶುವಿಗೆ ಸಾದರ ಸ್ವಾಗತವೀಯುವಂತೆ ಲಕ್ಷಲಕ್ಷ ಬಾಲಕರು ಕಲಕಲರವಗೈಯುತ್ತಿದ್ದರು. ಇಂತಹ ಶುಭ ದಿವಸದಲ್ಲಿ ಮಂಗಳ ಮುಹೂರ್ತದಲ್ಲಿ ಮುಂದೆ ಯುಗಪ್ರವರ್ತಕನಾಗಲಿರುವ ಶ್ರೀ ಸ್ವಾಮಿ ವಿವೇಕಾನಂದ ಮಹಾಪುರುಷನು ಜನ್ಮವೆತ್ತಿದನು.

ಶಿಶುವಿಗೆ ನಾಮಕರಣದ ಕಾಲವು ಬಳಿಸಾರಿತು. ಕೆಲವರು ಅಜ್ಜನಾದ ದುರ್ಗಾಚರಣಗತ್ತನ ಜ್ಞಾಪಕಾರ್ಥವಾಗಿ ಮಗುವಿಗೆ ದುರ್ಗಾದಾಸನೆಂದು ಹೆಸರಿಡಲು ಯತ್ನಿಸಿದರು. ಆದರೆ ಭುವನೇಶ್ವರೀದೇವಿ ತಾನು ಕಾಶಿಯ ವೀರೇಶ್ವರನಿಗೆ ಅರ್ಪಿಸಿದ ಪೂಜೆಗಳನ್ನೂ ತಾನು ಕಂಡ ಸ್ವಪ್ನವನ್ನೂ ನೆನೆದು ಮಗನನ್ನು ವೀರೇಶ್ವರ ಎಂದು ಕರೆದಳು. ಅನ್ನಪ್ರಾಶನ ಸಮಯದಲ್ಲಿ ಬಾಲಕನ ಪ್ರಚಲಿತ ನಾಮವು ನರೇಂದ್ರನಾಥ ಎಂದಾಯಿತು.

ಬಾಲಕ ನರೇಂದ್ರನಾಥನು ಬಹಳ ತುಂಟನಾಗಿದ್ದನು. ಸ್ವಾತಂತ್ರ್ಯದಲ್ಲಿ ಅವನಿಗೆ ಬಹಳ ಪ್ರೀತಿ. ಶಾಸನವಾಕ್ಯ ಪ್ರಯೋಗಕ್ಕೆ ಭಯಪ್ರದರ್ಶನಕ್ಕೆ ಅವನು ಮಣಿಯುತ್ತಿರಲಿಲ್ಲಿ. "ಶಿವ ಶಿವ" ಎಂದು ಹೇಳಿ ತಲೆಯಮೇಲೆ ನೀರನ್ನು ಚಿಮುಕಿಸಿದರೆ ಮಾತ್ರ ಅವನು ಮಂತ್ರಮುಗ್ಧನಾದವನಂತೆ ತಟಸ್ಥನಾಗಿಬಿಡುತ್ತಿದ್ದನು. ಮಗನಿಗೆ ಸ್ನಾನಮಾಡಿಸುತ್ತಿದ್ದಾಗಲಂತೂ ತಾಯಿ ಬಹುಪೀಡಿತಳಾಗುತ್ತಿದ್ದಳು. ಅವನ ತುಂಟತನವನ್ನು ತಡೆಯಲಾರದೆ ಭುವನೇಶ್ವರೀದೇವಿ "ಮಗನನ್ನು ಕೊಡು ಎಂದು ನಾನು ಬೇಡಿದರೆ ಶಿವನು ಮಂಗನನ್ನು ಕೊಟ್ಟಿದ್ದಾನೆ. ತಾನೇ ಮಗನಾಗಿ ಬರುವ ಬದಲು ತನ್ನ ಗಣದಲ್ಲಿದ್ದ ಯಾವುದೋ ಒಂದು ತಂಟಲಮಾರಿ ಭೂತವನ್ನು ಕಳುಹಿಸಿಬಿಟ್ಟಿದ್ದಾನೆ" ಎನ್ನುವಳು. ಮಗನು ಯಾವುದಕ್ಕೂ ಹೆದರದೆ ಇದ್ದರೂ ಒಂದು ವಿಷಯದಲ್ಲಿ ಮಾತ್ರ ಅವನಿಗೆ ತುಂಬ ಭೀತಿಯಿರುವುದನ್ನು ಆಕೆ ಕಂಡುಹಿಡಿದಿದ್ದಳು. ನರೇಂದ್ರನು ಬಹಳ ತಂಟೆ ಮಾಡಿದರೆ "ನೋಡು, ಬಿಲೇ, (ತಾಯಿ ಮಗನನ್ನು ಕರೆಯುತ್ತಿದ ಮುದ್ದಿನ ಹೆಸರು) ನೀನು ಹೀಗೆಲ್ಲಾ ತಂಟೆ ಮಾಡಿದರೆ ಶಿವನು ನಿನ್ನನ್ನು ಕೈಲಾಸಪರ್ವತಕ್ಕೆ ಸೇರಿಸುವುದೇ ಇಲ್ಲ" ಎಂದು ಹೇಳುತ್ತಿದ್ದಳು. ಅದನ್ನು ಕೇಳಿ ಬಾಲಕನು ಸಭಯ ದೃಷ್ಟಿಯಿಂದ ಮಾತೆಯ ಮುಖವನ್ನೇ ನೋಡುತ್ತ ಸುಮ್ಮನಾಗಿಬಿಡುತ್ತಿದ್ದನು.

ಅಕ್ಕಂದಿರಿಬ್ಬರನ್ನು ಪೀಡಿಸುವುದೆಂದರೆ ನರೇಂದ್ರನಿಗೆ ಬೆಲ್ಲ ತಿಂದಂತೆ. ಹಿಂದಿನಿಂದ ಬಂದು ಅವರಿಬ್ಬರಿಗೂ ಒಂದೊಂದು ಗುದ್ದು ಕೊಟ್ಟು ಓಡಿಬಿಡುವನು. ಆಗ ಆ ಬಾಲಿಕೆಯರು ಅವನನ್ನು ಅಟ್ಟಿಕೊಂಡು ಹೋದರೆ ಅವನು ಓಡಿಹೋಗಿ ಕೊಳಕಾದ ಚರಂಡಿಯಲ್ಲಿ ನಿಂತು ಕೈಯಲ್ಲಿ ಕೆಸರನ್ನು ಹಿಡಿದುಕೊಂಡು "ಬನ್ನಿ ಈಗ, ನೋಡೋಣ" ಎಂದು

ಹಲ್ಲುಕಿರಿದು ಪರಿಹಾಸ್ಯ ಮಾಡುವನು. ಪಾಪ, ಅರಿಯದ ಹುಡುಗಿಯರು ಅವನ ಹತ್ತಿರ ಹೋದರೆ ಮೈಲಿಗೆಯಾಗುವುದೆಂದು ಅವನನ್ನು ಬಾಯಿಂದಲೆ ಬೈಯುತ್ತ ಹಿಂತಿರುಗಿಬಿಡುತ್ತಿದ್ದರು.

ತಾಯಿ ಮಗನನ್ನು ತೊಡೆಯಮೇಲೆ ಕೂರಿಸಿಕೊಂಡು "ನರೇನ್, ನೀನು ದೊಡ್ಡವನಾದ ಮೇಲೆ ಏನಾಗಬೇಕೆಂದು ಮನಸ್ಸು ಮಾಡಿಕೊಂಡಿದ್ದೀಯೆ?" ಎಂದು ಕೇಳಿದರೆ ಬಾಲಕನು ತಲೆಯೆತ್ತಿ ತಾಯಿಯ ಮೊಗವನ್ನು ನೋಡುತ್ತ "ಅಮ್ಮಾ, ಜೋಡು ಕುದುಗೆ ಗಾಡಿ ಹೊಡೆಯುವ 'ಕೋಚ್‌ಮ್ಯಾನ್' ಆಗಬೇಕೆಂದು ಮಾಡಿಕೊಂಡಿದ್ದೇನೆ" ಎಂದು ಅಮ್ಮನನ್ನು ನಗಿಸುತ್ತಿದ್ದನು. 'ಕೋಚ್‌ಮ್ಯಾನ್' ಕೆಲಸವೆಂದರೆ ಸಾಮಾನ್ಯವೇ? ಎತ್ತರವಾದ ಸ್ಥಳದಲ್ಲಿ ಕುಳಿತು ಬಣ್ಣ ಬಣ್ಣದ ಬಟ್ಟೆ ಹಾಕಿಕೊಂಡು ತೇಜಸ್ವಿಯಾದ ಅಶ್ವದ್ವಯಗಳ ವಾಗೆಯನ್ನು ಎಡದ ಕೈಲಾಂತು, ಚಬುಕವನ್ನು ಬಲದ ಕೈಯಲ್ಲಿ ಹಿಡಿದು, ಕಾಲಿನಿಂದ ಅಲಾರಂ ಗಂಟೆಯನ್ನು ಒತ್ತಿ ಎಂತೆಂತಹ ದೊಡ್ಡಮನುಷ್ಯರನ್ನೂ ದಾರಿಬಿಟ್ಟುಕೊಡುವಂತೆ ಮಾಡುತ್ತ ಕಲ್ಕತ್ತಾ ಮಹಾನಗರದ ಮಹಾಬೀದಿಗಳಲ್ಲಿ ಪರಿಧಾವಿಸುವುದೆಂದರೆ ಅದೇನು ಪ್ರಾಕೃತವೆ? ಶ್ರೀಕೃಷ್ಣನು ಕೂಡ ಅರ್ಜುನನ 'ಕೋಚ್‌ಮ್ಯಾನ್' ಆಗಿರಲಿಲ್ಲವೆ?

ನರೇಂದ್ರನಾಥನು ಅನೇಕ ಸಾರಿ ಅಮ್ಮನ ಅಂಕದ ಮೇಲೆ ಮುದ್ದಿನ ಮುದ್ದೆಯಂತೆ ಮುದ್ದಾಗಿ ಕುಳಿತುಕೊಂಡು ಅನನ್ಯ ಮನಸ್ಕನಾಗಿ ಆಕೆ ಮುದ್ದಿನಿಂದ ಹೇಳುತ್ತಿದ್ದ ರಾಮಾಯಣ ಭಾರತದ ಕತೆಗಳನ್ನು ಆಲಿಸುತ್ತಿದ್ದನು. ರಾಮಾಯಣವನ್ನು ಕೇಳುತ್ತ ಕೇಳುತ್ತ ಸರಳ ಶಿಶುಹೃದಯವು ಭಕ್ತಿಯಿಂದ ಪೂರ್ಣವಾಗುತ್ತಿತ್ತು. ಕತೆಯನ್ನು ಕೇಳಿದ ಆತನು ಒಂದು ದಿನ ಸೀತಾರಾಮರ ಒಂದು ವಿಗ್ರಹವನ್ನು ಕೊಂಡುಕೊಂಡು ಬಂದು ಆರಾಧಿಸತೊಡಗಿದನು.

ತಾಯಿ ಮತ್ತೊಂದು ದಿನ ಸೀತಾರಾಮರ ವಿವಾಹ ವಿಚಾರವನ್ನು ಹೇಳಿ ಅವರಿಗೆ ಬಂದೊದಗಿದ ಕಷ್ಟಪರಂಪರೆಗಳನ್ನು ವಿವರಿಸಿದಳು. ನರೇಂದ್ರನ ಸುಕುಮಾರ ಚಿತ್ತದ ಮೇಲೆ ಆ ಗಂಭೀರಭಾವವು ಅಂಕಿತವಾಗಿ ಹೋಯಿತು. ನಾನಾ ಚಿಂತೆಗಳಿಂದ ಆಕುಲನಾದ ಬಾಲಕನು ಅಶ್ರುಪೂರ್ಣಲೋಚನನಾಗಿ ತಾಯಿಯ ಬಳಿಗೆ ಬಂದು ಅಳತೊಡಗಿದನು. ತಾಯಿ ಅಳುವ ಕಾರಣವನ್ನು ಕೇಳಿದಳು. ನರೇಂದ್ರನು ಕ್ರಂದನ ಕಂಪಿತ ಕಂಠದಿಂದ "ಅಮ್ಮಾ, ನಾನು ಸೀತಾರಾಮರನ್ನು ಹೇಗೆ ಪೂಜಿಸಲಿ? ಸೀತೆ ರಾಮನ ಹೆಂಡತಿಯಲ್ಲವೆ?" ಎಂದನು. ಸ್ನೇಹವಿಕಲೆಯಾದ ಜನನಿ ತನ್ನ ಪ್ರಿಯತಮ ಪುತ್ರನನ್ನು ಎತ್ತಿಕೊಂಡು ಮುತ್ತು ಕೊಡುತ್ತ "ಮಗು, ಸೀತಾರಾಮರ ಪೂಜೆ ಮಾಡುವುದು ಬೇಡ. ನಾಳೆಯಿಂದ ಶಿವಪೂಜೆ ಮಾಡಬಹುದು" ಎಂದು ಸಂತೈಸಿದಳು.

ಆ ದಿನ ಸಾಯಂಕಾಲ ಮುಚ್ಚಂಜೆಯ ಅಂಧಕಾರ ಬರಬರುತ್ತ ನಿಬಿಡವಾಯಿತು. ತಲೆಯ ಮೇಲೆ ಆಕಾಶ - ಅಸಂಖ್ಯ ಉಜ್ವಲ ಜ್ಯೋತಿಷ್ಕಮಂಡಲೀ ಪರಿಶೋಭಿತ ಶ್ಯಾಮಲ ಆಕಾಶ! ಮನೆಯ ಬೋಳು ಮಹಡಿತಯ ಮೇಲೆ ನರೇಂದ್ರನು ಸೀತಾರಾಮರ ವಿಗ್ರಹದ ಎದುರು ಕುಳಿತಿದ್ದಾನೆ. ಆದರ್ಶ ದಾಂಪತ್ಯ ಪ್ರೇಮದ ಸರ್ವಶ್ರೇಷ್ಠ ಆದರ್ಶಜೀವಿಗಳನ್ನು ಕೈಯಲ್ಲಿ ಹಿಡಿದುಕೊಂಡು ಸಂಶಯ ಸಂಕುಲ ಚಿತ್ತನಾಗಿ ಭಾವೀ ಸಂನ್ಯಾಸಿಯಾದ ವಿವೇಕಾನಂದನು ಕುಳಿತಿದ್ದಾನೆ! ಒಂದು ಕಡೆ ಗಾಢವಾದ ಸೀತಾರಾಮರ ಮೇಲಿನ ಭಕ್ತಿ; ಮತ್ತೊಂದು ಕಡೆ ತೀವ್ರ ವಿವಾಹವಿತೃಷ್ಣೆ. ಮಗುವಿನ ಮುದ್ದು ಎದೆ ಕದಡಿ ಹೋಯಿತು. ಆದರೇನು? ವಿವಾಹಿತ ಜೀವನ ಉನ್ನತವಾದರೇನು? ಪವಿತ್ರವಾದರೇನು? ಅದು ಆತನ

ಆದರ್ಶವಲ್ಲ. ವಿಗ್ರಹವನ್ನು ಮೇಲೆತ್ತಿ ಮಹಡಿಯಿಂದ ಬೀದಿಗೆ ಎಸೆದನು. ಅದು ನುಚ್ಚುನೂರಾಯಿತು. ಬಾಲಕನು ವಿಜಯಿಯಾದ ವೀರನಂತೆ ಗರ್ವಿತಪದ ವಿನ್ಯಾಸದಿಂದ ಮಹಡಿಯನ್ನು ಬಿಟ್ಟನು.

ವಿನೋದಕರವಾಗಿ ಲಘುವಾಗಿ ತೋರುವ ಈ ಬಾಲಲೀಲೆಯ ಘಟನೆಯಲ್ಲಿ ಭವಿಷ್ಯತ್ತಿನ ಛಾಯೆ ಸುಳಿದಾಡುತ್ತಿದೆ. ಮುಂದೆ ನರೇಂದ್ರನ ಜೀವನದಲ್ಲಿ ಬಂದೊದಗಲಿರುವ ಸಂಸಾರ ಮತ್ತು ಸಂನ್ಯಾಸಾದರ್ಶಗಳ ಪರಸ್ಪರ ಗದಾಯುದ್ಧಕ್ಕೆ ಈ ಸಂಗತಿ ಒಂದು ಪ್ರತಿಮೆಯಂತಿದೆ. ಬುದ್ಧಿ ನಿರ್ಣಯಿಸುವ ಮೊದಲೆ ಹೃದಯ ಹಾದಿ ಸೂಚಿಸುತ್ತದೆ ಎಂಬ ಜಾಣ್ಣುಡಿಗೆ ಇದೊಂದು ಸಾಕ್ಷಿಯಾಗಿದೆ.

ವಿಶ್ವನಾಥದತ್ತನ ಮನೆಗೆ ನಾನಾ ಜಾತಿಯ ಜನಗಳು ಬರುತ್ತಿದ್ದರು. ಫಕೀರರೂ ಸಾಧುಗಳೂ ಅಲ್ಲಿಗೆ ಬಂದಾಗ ನರೇಂದ್ರನು ಅವರು ಮಾಡುತ್ತಿದ್ದ ಧ್ಯಾನ ಜಪತಪಗಳನ್ನು ಕುತೂಹಲದಿಂದ ನೋಡುತ್ತಿದ್ದನು. ತಾನೂ ಅವರಂತೆಯೆ ಭಸ್ಮ ಜಟಾಧಾರಿಯಾಗಿ ಶಿವಧ್ಯಾನ ಮಾಡಬೇಕೆಂದು ರಹಸ್ಯವಾಗಿ ಯೋಚಿಸುತ್ತಿದ್ದನು. ಅದರಂತೆಯೆ ಅವನು ಎಷ್ಟೋ ಆವರ್ತಿ ಧ್ಯಾನಲೀಲೆಯಲ್ಲಿ ತೊಡಗುತ್ತಿದ್ದನು. ಒಂದು ದಿನ ಆತನು ತನ್ನ ಶಿವವಿಗ್ರಹದ ಮುಂದೆ ಶಿವಯೋಗಿಯ ವೇಷವನ್ನು ತಳೆದು ತಪಸ್ವಿಗಳಂತೆ ಕಾಲಮೇಲೆ ಕಾಲು ಹಾಕಿಕೊಂಡು ಕುಳಿತಿದ್ದನು. ಉಟ್ಟಿದ್ದ ಪಂಚೆಯನ್ನು ಹರಿದು ಕೌಪೀನವನ್ನಾಗಿ ಮಾಡಿಕೊಂಡಿದ್ದನು. ಮೈಗೆಲ್ಲಾ ಒಲೆಯ ಬೂದಿಯನ್ನು ದಟ್ಟವಾಗಿ ಮೆತ್ತಿಕೊಂಡಿದ್ದನು. ಅಷ್ಟರಲ್ಲಿ ಭುವನೇಶ್ವರೀದೇವಿ ಅಲ್ಲಿಗೆ ಬಂದು ಮಗನ ವೇಷವನ್ನು ಕಂಡು "ಇದೇನು ನರೇನ್? ಏನಾಗಬೇಕೆಂದು ಹೀಗೆ ಮಾಡಿಕೊಂಡಿದ್ದೀಯೆ?" ಎಂದಳು. ಮಗನು ಸ್ವಲ್ಪವೂ ಅಪ್ರತಿಭನಾಗದೆ "ನೋಡಮ್ಮ, ನಾನು ಶಿವ! ನಾನು ಶಿವ!" ಎಂದು ಸಂತಸದಿಂದ ಹೇಳಿದನು. ಅದನ್ನು ಆಲಿಸಿದ ತಾಯಿಯ ಎದೆ ಯಾವುದೊ ಒಂದು ಅನಿರ್ದಿಷ್ಟ ಆಶಂಕೆಯಿಂದ ಕಂಪಿತವಾಯಿತು. ಅಜ್ಜನಂತೆ ಮೊಮ್ಮಗನೂ ಎಲ್ಲಿಯಾದರೂ ಸಂನ್ಯಾಸಿಯಾಗಿಬಿಡುವನೊ ಎಂದು ಆಕೆ ಬೆದರಿದಳು. ಸರ್ವದಾ ಭಾವ ಗೋಪನಾಭ್ಯಸ್ಥೆಯೂ ದೃಢಚಿತ್ತೆಯೂ ಆದ ಭುವನೇಶ್ವರಿ ಶಿವಸ್ಮರಣೆ ಮಾಡಿ ತಾತ್ಕಾಲಿಕವಾದ ಸ್ನೇಹದ ದೌರ್ಬಲ್ಯವನ್ನು ಹೃದಯದಿಂದ ದೂರ ಮಾಡಿದಳು. "ಭಗವಂತನ ಇಚ್ಛೆಯಿದ್ದಾಂತಾಗಲಿ! ಅದನ್ನು ತಡೆಯಲು ನಾನು ಯಾರು?" ಎಂದುಕೊಂಡು ಸುಮ್ಮನಾದಳು.

ಸುಮಾರು ಒಂದು ಗಂಟೆ ಕಳೆದ ಮೇಲೆ ಶಿವಯೋಗಿಯ ವೇಷಧಾರಣೆ ಮಾಡಿದ್ದ ನರೇಂದ್ರನು ಮತ್ತೆ ತಾಯಿಯ ಬಳಿಗೆ ಓಡಿಬಂದು "ಇದೇನಮ್ಮಾ? ಒಂದು ಗಂಟೆ ಶಿವಧ್ಯಾನ ಮಾಡಿದರೂ ನನ್ನ ತಲೆಯ ಮೇಲೆ ಶಿವಜಟೆ ಬೆಳೆದೇ ಇಲ್ಲ!" ಎಂದನು. ಹಿರಿಯರು ಹುಡುಗನಿಗೆ ವಿನೋದಕ್ಕಾಗಿ ಶಿವಧ್ಯಾನ ಮಾಡಿದರೆ ಶಿವಜಟೆ ಬೆಳೆಯುತ್ತದೆ ಎಂದು ಹೇಳಿದ್ದರು. ತಾಯಿಯ ಹೃದಯ ಆಶಂಕೆಯಿಂದ ವಿಕಂಪಿಸಿತು. "ಶಿವಜಟೆ ಬಳೆಯುವುದಕ್ಕೆ ಬಹಳ ಕಾಲ ಹಿಡಿಯುತ್ತದೆ" ಎಂದು ಆ ಕತೆ ಈ ಕತೆ ಹೇಳಿ ಸಮಾಧಾನಪಡಿಸಿದಳು. ಬಾಲಕನು ಚಿಂತಾಮಗ್ನನಾದನು. ತಾಯಿ ಆಗಾಗ "ನೀನು ತಂಟೆ ಮಾಡಿದ್ದುದರಿಂದಲೇ ಶಿವನು ನಿನ್ನನ್ನು ಕೈಲಾಸದಿಂದ ಅಟ್ಟಿಬಿಟ್ಟಿದ್ದಾನೆ!" ಎಂದು ತನ್ನನ್ನು ಗದರಿಸುತ್ತಿದ್ದುದು ನೆನಪಿಗೆ ಬಂದು, "ಅಮ್ಮ, ನಾನು ಹಿಂದೆ ಸಂನ್ಯಾಸಿಯಾಗಿದ್ದೆ ಎಂದು ತೋರುತ್ತದೆ. ನಾನು ಸರಿಯಾಗಿ ನಡೆದುಕೊಂಡರೆ ಶಿವನು ನನ್ನನ್ನು ಮತ್ತೆ ಕೈಲಾಸಕ್ಕೆ ಕರೆಯಿಸಿಕೊಳ್ಳುತ್ತಾನೇನು?" ಎಂದು ಪ್ರಶ್ನೆ ಮಾಡಿದನು. ತಾಯಿ ಸ್ವಲ್ಪ ಭೀತಳಾಗಿ "ಹೌದಪ್ಪ!" ಎಂದು ಬೇರೆ ವಿಚಾರವಾಗಿ ಮಾತೆತ್ತಿದಳು.

ಮತ್ತೊಂದು ದಿನ ಬಾಲಕರೆಲ್ಲರೂ ಆಟದ ಮನೆಯಲ್ಲಿ ಆಡುತ್ತಿದ್ದಾಗ ನರೇಂದ್ರನು ಧ್ಯಾನಮಗ್ನನಾಗಿ ಕುಳಿತನು. ಇತರ ಬಾಲಕರೆಲ್ಲರೂ ಆಟಕ್ಕಾಗಿ ಅವನಂತೆಯೆ ಮಾಡಿದರು. ಸ್ವಲ್ಪ ಹೊತ್ತಾಯಿತು. ಬಾಲಕನೊಬ್ಬನು ಕಣ್ಣು ಬಿಟ್ಟು ನೋಡಲು ನರೇಂದ್ರನ ಮುಂದೆ ದೊಡ್ಡದಾದ ಸರ್ಪವೊಂದು ಹೆಡೆಯೆತ್ತಿ ನಿಂತಿತ್ತು. ಹುಡುಗನು "ಹಾವು! ಹಾವು!" ಎಂದು ಕೂಗಿಕೊಂಡನು. ಹುಡುಗರೆಲ್ಲರೂ ಚೀತ್ಕಾರ ಮಾಡುತ್ತಾ ಮೇಲೆದ್ದು ಹಿಂದಕ್ಕೆ ಚಿಮ್ಮಿದರು. ನರೇಂದ್ರನು ಮಾತ್ರ ಬಾಹ್ಯಜ್ಞಾನ ಶೂನ್ಯನಾಗಿ ಕುಳಿತೇ ಇದ್ದನು. ಕೋಲಾಹಲವಾಯಿತು. ಸುದ್ದಿ ಮನೆಯವರಿಗೆ ಮುಟ್ಟಿತು. ತಂದೆ - ತಾಯಿ ಮೊದಲಾದವರೆಲ್ಲರೂ ಅಲ್ಲಿಗೆ ಓಡಿಬಂದರು. ಅಷ್ಟು ಹೊತ್ತಿಗೆ ಚಂದ್ರೋದಯವಾಯಿತು. ನರೇಂದ್ರನಾಥನ ಕೈಶೋರ ಲಾವಣ್ಯ ಸ್ನಿಗ್ಧ ತರುಣ ಸುಂದರ ಮುಖಮಂಡಲದಲ್ಲಿ ಚಂದ್ರರಶ್ಮಿ ಪ್ರತಿಫಲಿತವಾಗಿ ಅದನ್ನು ಸ್ವರ್ಗೀಯ ವಿಭಾ ವಿಕೀರ್ಣವನ್ನಾಗಿ ಮಾಡಿತ್ತು. ದೇಹ ಸ್ಪಂದಹೀನ. ಕುಮಾರಯೋಗಿ ಪದ್ಮಾಸನದಲ್ಲಿ ಧ್ಯಾನಮಗ್ನನಾಗಿದ್ದನು. ಸಮ್ಮುಖದಲ್ಲಿ ವಿಷಧರ ಸರ್ಪವು ಭೀಷಣವಾದ ತನ್ನ ಫಣಿಯನ್ನು ವಿಸ್ತರಿಸಿಕೊಂಡು ಮಂತ್ರಮುಗ್ಧವಾದಂತೆ ನಿಶ್ಚಲವಾಗಿ ನಿಂತಿತ್ತು. ಅದನ್ನು ನೋಡಿ, ಬಂದವರೆಲ್ಲರೂ ಕಿಂಕರ್ತವ್ಯವಿಮೂಢರಾಗಿ ನಿಂತುಬಿಟ್ಟರು. ಸ್ವಲ್ಪ ಹೊತ್ತಿನಲ್ಲಿಯೆ ಸರ್ಪ ಅಂತರ್ಹಿತವಾಯಿತು. ಹುಡುಕಿದರೆ ಅದು ಸಿಕ್ಕಲಿಲ್ಲ. ಮೈತಿಳಿದ ಬಾಲಕನು ಸರ್ಪದ ವಿಷಯವನ್ನು ಕೇಳಿ ವಿಸ್ಮಿತನಾಗಿ "ನನಗೆ ಸರ್ಪದ ಕತೆ ಏನೂ ಗೊತ್ತಿಲ್ಲ. ನಾನೊಂದು ಅಪೂರ್ವ ಆನಂದವನ್ನು ಉಪಭೋಗಿಸುತ್ತಿದ್ದೆ" ಎಂದನು. ಅನೇಕ ಮಹಾಪುರುಷರ ಜೀವನಚರಿತ್ರೆಗಳನ್ನು ನೋಡಿದರೆ ಇಂತಹ ಅದ್ಭುತಗಳು ಜರುಗುವುದು ನಮಗೆ ಅಷ್ಟೇನೂ ಆಶ್ಚರ್ಯವಾಗಿ ತೋರುವುದಿಲ್ಲ. ಅಷ್ಟೇಕೆ? ನರೇಂದ್ರನಾಥನು ನಿದ್ದೆ ಮಾಡುವಾಗ ಪ್ರತಿದಿನವೂ ಮಂಡಲಾಕಾರವಾದ ದಿವ್ಯ ಜ್ಯೋತಿಯೊಂದು ದೂರದಿಂದ ಬಂದು ಆತನ ಭ್ರೂಮಧ್ಯೆ ತಲ್ಲೀನವಾಗುತ್ತಿತ್ತಂತೆ! ಇನ್ನೊಂದು ಸಾರಿ ಜ್ಯೋತಿಃಪುರುಷನೊಬ್ಬನು ಕಾಣಿಸಿಕೊಂಡು ಆತನ ದೇಹದಲ್ಲಿ ಐಕ್ಯವಾದನಂತೆ! ಅಪಾರ್ಥಿವ ಪುರುಷರ ವಿಷಯದಲ್ಲಿ ಅಪಾರ್ಥಿವ ಅದ್ಭುತಗಳು ಜರುಗುವುದರಲ್ಲಿ ವಿಶೇಷವೇನಿದೆ?

ಆಜನ್ಮಬ್ರಹ್ಮಚಾರಿಯೂ ಮಹಾವೀರನು ಚಿರಂಜೀವಿಯೂ ಕಾಮರೂಪಿಯೂ ವಜ್ರಶರೀರಿಯೂ ಶ್ರೀರಾಮಚಂದ್ರನ ಪರಮಭಕ್ತನೂ ಆದ ಹನುಮಂತದೇವನಲ್ಲಿ ನರೇಂದ್ರನಿಗೆ ಅತಿಶಯವಾದ ಭಕ್ತಿ. ಬ್ರಹ್ಮಚರ್ಯವೊಂದರಿಂದಲೆ ಆತನು ಅಮರನಾದನೆಂದೂ ದುಸ್ಸಾಧ್ಯವಾದ ಕಾರ್ಯಗಳನ್ನು ಸಾಧಿಸಿದನೆಂದೂ ಬಾಲಕನು ತಿಳಿದಿದ್ದನು. ಒಂದು ದಿನ ಮಹಾವೀರನ ಚರಿತ್ರೆಯನ್ನು ಹರಿಕಥೆ ಹೇಳುತ್ತಿದ್ದ ದಾಸರ ಬಳಿಗೆ ಹೋಗಿ ನರೇಂದ್ರನು "ಮಹಾಶಯ, ನಾನು ಮಹಾವೀರನನ್ನು ನೋಡಬೇಕು! ಅವನು ಇರವುದೆಲ್ಲಿ?" ಎಂದು ಪ್ರಶ್ನೆ ಮಾಡಿದನು. ತರಳನ ಗಂಭೀರ ಹೃದಯದ ಗಭೀರತರ ಭಾವಗಳನ್ನು ಅರಿಯಲಾರದ ಆ ದಾಸರು ಮುಗುಳ್ನಗೆಯಿಂದ "ಹುಂ, ಬಾಳೆಯ ತೋಟದಲ್ಲಿ ಹುಡುಕಿದರೆ ಸಿಕ್ಕಬಹುದು!" ಎಂದು ಬಿಟ್ಟರು. ಅವನು ಆ ದಿನ ಬಾಳೆಯ ತೋಟದಲ್ಲಿ ರಾತ್ರಿ ಕತ್ತಲಾಗುವವರೆಗೂ ಕಾದು ಹನುಮಂತನನ್ನು ಕಾಣದೆ ಬಂದುಬಿಟ್ಟನು.

ನರೇಂದ್ರನಿಗೆ ಆರು ವರ್ಷವಾಗಲು ಅವನನ್ನು ಶಾಲೆಗೆ ಕಳುಹಿಸಿದರು. ಸ್ವತಂತ್ರಜೀವಿಗಳಾದ ಬಾಲಕರಿಗೆ ಪಾಠಶಾಲೆ ಎಂದರೆ ಅದೊಂದು ಜೈಲು! ನರೇಂದ್ರನಿಗೂ ಅದೇ ಅನುಭವವುಂಟಾಯಿತು. ಆದರೆ ಅಲ್ಲಿಯೂ ಅವನ ವ್ಯಕ್ತಿತ್ವ ಪ್ರಕಾಶಕ್ಕೆ ಬರದೆ ಬಿಡಲಿಲ್ಲ. ಸಮವಯಸ್ಕರಾದ ಸಹಪಾಠಿಗಳ ಸಂಗ ಅವನಿಗೆ ಹರ್ಷದಾಯಕವಾಗಿತ್ತು. ಶೀಘ್ರದಲ್ಲಿಯೆ

ಅವನ ನೇತೃತ್ವದಲ್ಲಿ ಒಂದು ಚಿಕ್ಕ ತುಂಟರ ಗುಂಪು ತಯಾರಾಯಿತು. ಕ್ರೀಡಾಮತ್ತ ಬಾಲಕನಿಕರದ ಹಾಸ್ಯ ಪರಿಹಾಸ್ಯ ಕೌತುಕ ಕೋಲಾಹಲಗಳಿಗೆ ದತ್ತಭವನ ನೆಲೆಬೀಡಾಯಿತು.

ನರೇಂದ್ರನು ಎಲ್ಲೆಲ್ಲಿಯೂ ನಾಯಕವ್ಯಕ್ತಿ. ಆಟದಲ್ಲಿ ಹೇಗೆ ಅವನು ಎಲ್ಲರಿಗೂ ಮುಂದಾಳಾಗಿ ಇರುತ್ತಿದ್ದನೊ ಹಾಗೆಯೆ ಪಾಠದಲ್ಲಿಯೂ ಇರುತ್ತಿದ್ದನು. ಆತನ ಸ್ಮರಣ ಬುದ್ಧಿಶಕ್ತಿಗಳು ಅದ್ಭುತವಾಗಿದ್ದುವು. ಚಿಕ್ಕ ವಯಸ್ಸಿನಲ್ಲಿಯೆ ತಾಯಿಯ ಬಾಯಿಂದ ಕೇಳಿದ ರಾಮಾಯಣ ಭಾರತಗಳ ಭಾಗಗಳನ್ನು ಅವನು ಕಂಠಪಾಠ ಮಾಡಿಬಿಟ್ಟಿದ್ದನು. ಕುಸ್ತಿ ಆಡುವುದೆಂದರೆ ಅವನಿಗೆ ಬಹಳ ಆಸಕ್ತಿ. ಗರಡಿಯ ಮನೆಗಳಲ್ಲಿ ಯಾರೂ ನರೇಂದ್ರನನ್ನು ಮರೆಯುವ ಹಾಗಿರಲಿಲ್ಲ. ಗೋಲಿಯಾಟ, ಹಾರಾಟ, ಓಡುವುದು, ಮುಷ್ಟಿಯುದ್ಧ, ಮಲ್ಲಕಾಳಗ ಇವುಗಳಲ್ಲೆಲ್ಲ ಅವನು ನಿಪುಣನಾಗಿದ್ದನು. ಆತನ ಹೃದಯದಲ್ಲಿ ಕರುಣೆ ಅಪಾರವಾಗಿತ್ತು. ಸಣ್ಣ ಹುಡುಗರಿಗೆ ಅಪಾಯ ಕಾಲದಲ್ಲಿ ಆತನು ತನ್ನ ಕ್ಷೇಮವನ್ನು ಸ್ವಲ್ಪವೂ ಗಣನೆಮಾಡದೆ ಸಹಾಯ ಮಾಡುತ್ತಿದ್ದನು. ಬಡಬಗ್ಗರಿಗೆ ಮನೆಯಲ್ಲಿ ಏನು ಕೈಗೆ ಸಿಕ್ಕಿದರೆ ಅದನ್ನು ಕೊಟ್ಟುಬಿಡುತ್ತಿದ್ದನು. ಮನೆಯವರು ಬೈದರೆ ತನ್ನ ವಸ್ತ್ರಗಳನ್ನೆ ಹಿಂದುಮುಂದು ನೋಡದೆ ದಾನಮಾಡುತ್ತಿದ್ದನು. ಮುಂದೆ ಶ್ರೀ ಸ್ವಾಮಿ ವಿವೇಕಾನಂದರಲ್ಲಿ ತೋರಿಬಂದ ಗುಣಗಳೆಲ್ಲವೂ, ಗಾಂಭೀರ್ಯ, ಸರಳತೆ, ಸತ್ಯ, ಧೈರ್ಯ, ಅಸ್ವಾರ್ಥತೆ, ಪ್ರೇಮ, ಕರುಣೆ, ದಯೆ, ಸೇವಾಶಕ್ತಿ ಮೊದಲಾದ ಮಹಾಗುಣಗಳೆಲ್ಲವೂ ನರೇಂದ್ರನಾಥನಲ್ಲಿ ಬೀಜರೂಪದಲ್ಲಿ ಹುದುಗಿಕೊಂಡು ಮೆಲ್ಲಮೆಲ್ಲನೆ ಮೊಳೆಯುತ್ತಿದ್ದುವು.

ಪಾಠಶಾಲೆಯಲ್ಲಿ ನರೇಂದ್ರನಿಗೆ ಬಹಳ ವಿಪತ್ತುಗಳು ಬಂದೊದಗಿದುವು. ಅವನ ಸ್ವಾತಂತ್ರ್ಯ ಸಂಕುಚಿತವಾಗುತ್ತ ಹೋಯಿತು. ಬಹಳ ಹೊತ್ತು ಒಂದೇ ಕಡೆ ಕುಳಿತರಿಯನವನು. ಒಂದು ಸಾರಿ ನಿಂತುಕೊಳ್ಳುವುದು; ಒಂದು ಸಾರಿ ಕುಳಿತು ಕೊಳ್ಳುವುದು; ಒಮ್ಮೆ ಹೊರಗೆ ಹೋಗುವುದು; ಒಮ್ಮೆ ಇನ್ನೇನೂ ತೋರದಿದ್ದರೆ ಕೈಲಿದ್ದ ಪುಸ್ತಕವನ್ನು ಹರಿದು ಹಾಕುವುದು; ಹೀಗೆಲ್ಲ ಮಾಡುತ್ತ ಅವನು ಪಂಜರಬದ್ಧವಾದ ಕಾನನ ಕೇಸರಿಯಂತೆ ಆಡುತ್ತಿದ್ದನು. ಉಪಾಧ್ಯಾಯರಿಗೂ ಕೂಡ ಕಷ್ಟಕ್ಕಿಟ್ಟುಕೊಂಡಿತು. ಪ್ರತಿಭಾಶಾಲಿಯಾದ ನರೇಂದ್ರನಾಥನು ತಂಟಲು ಮಾರಿಯಾಗಿದ್ದರೂ ಆತನಲ್ಲಿ ನ್ಯಾಯವಿಚಾರತೆ, ಔದಾರ್ಯ, ಕ್ಷಮೆ, ಶಕ್ತಿ ಇತ್ಯಾದಿ ಗುಣಗಳು ಅಪಾರವಾಗಿದ್ದುವು. ಒಂದು ದಿನ ಅವನು ಕುದುರೆಗಾಡಿಯ ಅಡಿಯಲ್ಲಿ ಸಿಕ್ಕಿ ಸಾಯುವುದರಲ್ಲಿದ್ದ ತನ್ನ ಒಬ್ಬ ಸಂಗಾತಿಯನ್ನು ಧೈರ್ಯದಿಂದ ಹೊರಗೆಳೆದು ಸಲಹಿದನು. ಮತ್ತೊಂದು ದಿನ ಜ್ವರದಿಂದ ಪೀಡಿತನಾಗಿ ಬೀದಿಯಲ್ಲಿ ಕುಳಿತುಬಿಟ್ಟ ಬಾಲಕನೊಬ್ಬನನ್ನು ಸುರಕ್ಷಿತವಾಗಿ ಅವನ ಮನೆಗೆ ಸಾಗಿಸಿದನು. ಧೂರ್ತತನವಂತೂ ಕೆಚ್ಚೆದೆಯ ನರೇಂದ್ರನ ಜನ್ಮಸಿದ್ಧವಾದ ಹಕ್ಕಾಗಿತ್ತು. “ಹಾಗಲ್ಲದಿದ್ದರೆ ನಾನು ಕಾಸಿಲ್ಲದೆ ಕಡಲನ್ನು ದಾಟುತ್ತಿದ್ದೆನೆ? ಭಿಕಾರಿಯಾಗಿಯೆ ಭೂಪ್ರದಕ್ಷಿಣೆ ಮಾಡುತ್ತಿದ್ದೆನೆ?” ಎಂದು ಶ್ರೀಸ್ವಾಮಿ ವಿವೇಕಾನಂದರು ಆಮೇಲೆ ತಮ್ಮ ಶಿಷ್ಯರೊಡನೆ ಹೇಳುತ್ತಿದ್ದರು.

ಆಗಲೆ ಅನೇಕರು ಬಾಲಕನ ಮಹಿಮಾಮಯ ಭವಿಷ್ಯತ್ತನ್ನು ಕಂಡಿದ್ದರು. ಕ್ರಿಸ್ತಾಬ್ದ ೧೮೭೯ರಲ್ಲಿ ನರೇಂದ್ರನ ಅಜ್ಜನಾದ ಕಾಳೀಪ್ರಸಾದದತ್ತನು ಆಸನ್ನ ನಿರ್ವಾಣನಾಗಿ ಹಾಸಿಗೆಯ ಮೇಲೆ ಮಲಗಿದ್ದನು. ತಾನು ಸಾಯುವ ಕಾಲದಲ್ಲಿ ತನ್ನ ಬಂಧುವರ್ಗದವರೆಲ್ಲರನ್ನೂ ನೋಡಬೇಕೆಂಬ ಆಸೆ ಆತನಿಗೆ ಇದ್ದುದರಿಂದ, ಮನೆಯವರೆಲ್ಲರೂ ಅವನ ಮೃತ್ಯುಶಯ್ಯೆಯ ಸುತ್ತಲೂ ಸೇರಿದ್ದರು. ನರೇಂದ್ರನು ಎಷ್ಟೋ ಸಾರಿ ಆತನಿಂದ ಮಹಾಭಾರತವನ್ನು ಕೇಳಿ ಆನಂದಿಸಿದ್ದನು.

ಕಡೆಗಾಲದಲ್ಲಿ ಅಜ್ಜನನ್ನು ಬೀಳ್ಕೊಳ್ಳಲು ಅವನೂ ತನ್ನ ಅಕ್ಕಂದಿರೊಡನೆ ಹಾಸಿಗೆಯ ಬಳಿ ಬಂದು ನಿಂತನು. ಕಾಳೀಪ್ರಸಾದನ ಜೀವನಶಕ್ತಿ ಕ್ರಮಶಃ ಕ್ಷೀಣವಾಗುತ್ತ ಬಂದಿತು. ಸಾಯುವ ಮುನ್ನ ಆತನು ನರೇಂದ್ರನ ಕಡೆಗೆ ಸಸ್ನೇಹದೃಷ್ಟಿ ಪ್ರಸಾರ ಮಾಡಿ "ವತ್ಸ, ಒಂದು ಮಹಿಮಾಮಯ ಭವಿಷ್ಯತ್ತು ನಿನಗಾಗಿ ಕಾದುಕೊಂಡಿದೆ. ನೀನು ದೊಡ್ಡ ಮನುಷ್ಯನಾಗುವೆ!" ಎಂದು ಹೇಳಿ ಪ್ರಾಣಬಿಟ್ಟನು. ಆ ಮುದುಕನು ಸಾಯುವ ಕಾಲದಲ್ಲಿ ಆಡಿದ ಆ ಭವಿಷ್ಯದ್ವಾಣಿ ನಿರರ್ಥವಾಗಲಿಲ್ಲ.

ಬುದ್ಧಿ ಎಷ್ಟರಮಟ್ಟಿಗೆ ತೀಕ್ಷ್ಣವಾಗಿತ್ತೊ ಅದಕ್ಕೆ ಇಮ್ಮಡಿಯಾದ ಹೃದಯ ವೈಶಾಲ್ಯ ನರೇಂದ್ರನದಾಗಿತ್ತು. ಆತನು ಎಷ್ಟರಮಟ್ಟಿಗೆ ತೀವ್ರ ಸಂನ್ಯಾಸಿಯಾಗಿದ್ದನೊ ಅದಕ್ಕೆ ಇಮ್ಮಡಿಯಾಗಿ ರಸಋಷಿಯಾಗಿದ್ದನು. ಯೋಗ ಸಾಧನೆ ಷಡ್ದರ್ಶನಗಳಲ್ಲಿ ಆತನಿಗೆ ಎಷ್ಟು ಆಸಕ್ತಿಯಿದ್ದಿತೊ ಅಷ್ಟೇ ಆಸಕ್ತಿ ಸಂಗೀತ, ಸೌಂದರ್ಯ, ಕಲೆ, ಸಾಹಿತ್ಯ ಮೊದಲಾದುವುಗಳಲ್ಲಿ ಇತ್ತು. ಭದ್ರರೂಪಿ ಯಾದ ಆತನಿಗೆ ಚಿಕ್ಕಂದಿನಿಂದಲೂ ಗಾನಕಲೆಯಲ್ಲಿ ಅಭಿರುಚಿಯಿತ್ತು. ಅದನ್ನು ನೋಡಿ ವಿಶ್ವನಾಥದತ್ತನು ಮಗನಿಗೆ ಗಾನವಿದ್ಯೆಯನ್ನು ಶಾಸ್ತ್ರೀಯವಾಗಿ ಬೋಧಿಸಲು ಒಬ್ಬ ಗಾಯಕನನ್ನು ಗೊತ್ತುಮಾಡಿದ್ದನು. ವಿಶ್ವವಿಖ್ಯಾತರಾದ ಮೇಲೆಯೂ ಕೂಡ ಶ್ರೀ ಸ್ವಾಮಿ ವಿವೇಕಾನಂದರು ತಮ್ಮ ಶ್ರೀಕಂಠದ ಮಂಜುಳ ವಾಣಿಯಿಂದ ಎಷ್ಟೋ ಜನ ಭಕ್ತರನ್ನು ಭಾವಾವಿಷ್ಟರನ್ನಾಗಿ ಮಾಡುತ್ತಿದ್ದರು. ಶಾಲೆಯಲ್ಲಿ ಸಂಸ್ಕೃತ, ಇಂಗ್ಲೀಷು, ಇತಿಹಾಸ ಈ ಮೂರರಲ್ಲಿ ನರೇಂದ್ರನಿಗೆ ಅತ್ಯಂತ ಅನುರಕ್ತಿ. ಗಣಿತವೆಂದರೆ ಮಾತ್ರ ತೀವ್ರವಾದ ವಿರಕ್ತಿ, ಅದನ್ನು "ಕೋಮಟಿಗಳ ಕವಡು ಬಿಜ್ಜೆ" ಎಂದು ಕರೆಯುತ್ತಿದ್ದರಂತೆ.

ಹದಿನಾಲ್ಕನೆಯ ವರ್ಷದಲ್ಲಿ ನರೇಂದ್ರನಿಗೆ ಉದರವಾಯು ರೋಗವೆಂಬ ಹೊಟ್ಟೆಯ ಜಾಡ್ಯ ಹಿಡಿಯಿತು. ಬಹಳ ದಿನಗಳವರೆಗೆ ಕಾಯಿಲೆ ಗುಣವಾಗಲೇ ಇಲ್ಲ. ದೃಢಕಾಯನಾಗಿದ್ದ ಬಾಲಕನು ಅಸ್ಥಿ ತುಂಬಿದ ಚರ್ಮದ ಮೂಟೆಯಂತಾಗಿ ಬಿಟ್ಟನು. ಅದೇ ಸಮಯದಲ್ಲಿ ವಿಶ್ವನಾಥದತ್ತನು ಯಾವುದೊ ಒಂದು ಕಾರ್ಯಭಾರದಿಂದ ಮಧ್ಯಪ್ರಾಂತಗಳಲ್ಲಿರುವ ರಾಯಪುರಕ್ಕೆ ಹೋದನು. ವಾಯು ಪರಿವರ್ತನೆಯಿಂದ ಮಗನು ರೋಗವಿಮುಕ್ತನಾಗಬಹುದೆಂದು ಯೋಚಿಸಿ ಸಂಸಾರವೆಲ್ಲವನ್ನೂ ಅಲ್ಲಿಗೆ ಕರೆಯಿಸಿಕೊಂಡನು. ತಂದೆ ಬಗೆದಂತೆಯೆ ನರೇಂದ್ರನು ಕ್ರಮಕ್ರಮೇಣ ಆರೋಗ್ಯಶಾಲಿಯಾಗುತ್ತ ಬಂದನು.

ರಾಯಪುರದಲ್ಲಿ ಪಾಠಶಾಲೆ ಇಲ್ಲದಿದ್ದರೂ ವಿಶ್ವನಾಥದತ್ತನು ತಾನೇ ಸ್ವಂತವಾಗಿ ಮಗನಿಗೆ ನಾನಾ ಗ್ರಂಥಗಳನ್ನು ಪಾಠ ಹೇಳಲು ತೊಡಗಿದನು. ಮಗನ ಪ್ರತಿಭೆ ಆತನಿಗೆ ತಿಳಿಯದೆ ಹೋಗಿರಲಿಲ್ಲ. ಆದ್ದರಿಂದ ಪಠ್ಯಪುಸ್ತಕಗಳನ್ನು ಮಾತ್ರವೆ ಅಲ್ಲದೆ ಇತಿಹಾಸ, ದರ್ಶನ ಮತ್ತು ಸಾಹಿತ್ಯ ಸಂಬಂಧವಾದ ನಾನಾವಿಧ ಪುಸ್ತಕಗಳನ್ನು ಪುತ್ರನಿಗೆ ಓದಿಸಲಾರಂಭಿಸಿದನು.

ರಾಯಪುರದಲ್ಲಿ ಕೃತವಿದ್ಯರಾದ ವ್ಯಕ್ತಿಗಳೆಲ್ಲರೂ ವಿಶ್ವನಾಥದತ್ತನ ಭವನಕ್ಕೆ ಪ್ರತಿದಿನವೂ ವಿಚಾರಕ್ಕಾಗಿ ಬರುತ್ತಿದ್ದರು. ತಮ್ಮ ಚರ್ಚೆಯಲ್ಲಿ ಭಾಗಿಯಾಗುವಂತೆ ವಿಶ್ವನಾಥನು ಮಗನಿಗೂ ಹೇಳುತ್ತಿದ್ದನು. ನರೇಂದ್ರನು ಉತ್ಸಾಹದಿಂದ ಅವರ ವಾಗ್ವಾದಗಳಲ್ಲಿ ಸೇರುತ್ತಿದ್ದನು. ಒಂದು ಸಾರಿ ಖ್ಯಾತನಾಮನಾದ ವಂಗ ಲೇಖಕನೊಬ್ಬನು ರಾಯಪುರಕ್ಕೆ ಬಂದನು.

ಆತನು ವಿಶ್ವನಾಥದತ್ತನ ಮನೆಯಲ್ಲಿಯೆ ಇಳಿದುಕೊಂಡಿದ್ದನು. ಒಂದು ದಿನ ಆತನು ಸಾಹಿತ್ಯ ಸಂಬಂಧವಾದ ತನ್ನ ಅಭಿಪ್ರಾಯಗಳನ್ನು ಸಂಭಾಷಣೆಯ ಮೂಲಕ ತಿಳಿಯಪಡಿಸುವೆನೆಂದು ಹೇಳಿದನು. ದತ್ತ ಭವನವೆ ಸಂಭಾಷಣೆಯ ಸ್ಥಾನವಾಯಿತು. ನರೇಂದ್ರನೂ ತಂದೆಯಿಂದ ಆಹೂತನಾಗಿ ಅಲ್ಲಿಗೆ ಬಂದನು. ಆ ಪ್ರಸಿದ್ಧ ಲೇಖಕನು ನರೇಂದ್ರನ ಪ್ರಶ್ನೆಗಳನ್ನು ಕೇಳಿ ವಿಸ್ಮಿತನಾದನು. ಬಾಲಕನು ಪ್ರಸಿದ್ಧ ವಂಗಸಾಹಿತ್ಯದ ಬಹು ಭಾಗವನ್ನು ಆಗಲೆ ಓದಿಬಿಟ್ಟಿರುವನು ಎಂಬ ವಿಚಾರ ಆತನಿಗೆ ಹೊಳೆಯಿತು. ಆಗ ಆತನು ನರೇಂದ್ರನನ್ನು ಕುರಿತು "ವತ್ಸ, ನಿನ್ನಿಂದ ನಮ್ಮ ವಂಗಸಾಹಿತ್ಯ ಮಾನನೀಯವಾಗುವುದು!" ಎಂದನು.

ರಾಯಪುರದಲ್ಲಿರುವಾಗಲೆ ನರೇಂದ್ರನು ಬಾಣಸಿಗತನದ ಕುಶಲಕಲೆಯಲ್ಲಿ ಅತಿ ನಿಪುಣನಾದನು. ಕಾಲೇಜಿನಲ್ಲಿ ಓದುವಾಗಲೂ ಆತನು ಅನೇಕ ಸಾರಿ ತನ್ನ ಸ್ನೇಹಿತ ಬಂಧುವರ್ಗದವರಿಗೆ ತನ್ನ ಪಾಕಕೌಶಲವನ್ನು ತೋರಿಸುತ್ತಿದ್ದನು. ಮುಂದೆ ನರೇಂದ್ರನು ಲೋಕಮಾನ್ಯ ಸ್ವಾಮಿ ವಿವೇಕಾನಂದರಾದಾಗಲೂ ಬಾಣಸಿಗ ತನವನ್ನು ಮಾತ್ರ ಬಿಟ್ಟರಿಲಿಲ್ಲ. ತಾವೇ ಎಷ್ಟೋ ಸಾರಿ ಅಡಿಗೆ ಮಾಡಿ ಶಿಷ್ಯವರ್ಗಕ್ಕೆ ಹೊಟ್ಟೆಯಾರ ಉಣಬಡಿಸಿ ಸಂತೋಷಪಡಿಸಿ ತಾವೂ ಸಂತೋಷ ಪಡುತ್ತಿದ್ದರು.

ಎರಡು ವರ್ಷಗಳಲ್ಲಿ ನರೇಂದ್ರನ ಮಾನಸಿಕ ಮತ್ತು ಶಾರೀರಕ ಶಕ್ತಿಗಳು ವಿಚಿತ್ರ ಪರಿವರ್ತನೆ ಹೊಂದಿ ಅಭಿವೃದ್ಧಿಯಾದುವು. ಆತನು ಮರಳಿ ಕಲ್ಕತ್ತಾಕ್ಕೆ ಬಂದನು. ಬಹುದಿನಗಳಾದಮೇಲೆ ಆತನ ಮಂಗಳಮೂರ್ತಿಯನ್ನು ಸಂದರ್ಶಿಸಿದ ಸ್ನೇಹಿತರೂ ಬಂಧುವರ್ಗದವರೂ ಅತ್ಯಾನಂದಿತರಾದರು. ಪುನಃ ಆತನು ಮೆಟ್ರೊಪೋಲಿಟನ್ ಇನ್‌ಸ್ಟಿಟ್ಯೂಷನ್ನಿಗೆ ಸೇರಲು ಹೋದನು. ಆದರೆ ಎರಡು ವರ್ಷಗಳು ಗೈರುಹಾಜರಾಗಿದ್ದ ಅವನನ್ನು ಮೆಟ್ರಿಕ್ಯುಲೇಷನ್ ತರಗತಿಗೆ ಸೇರಿಸಲು ಮೊದಮೊದಲು ಸ್ವಲ್ಪ ಕಠಿಣವಾಯಿತು. ಆದರೆ ಅವನ ಗುಣಗಳಿಗೆ ಮುಗ್ಧರಾದ ಉಪಾಧ್ಯಾಯರುಗಳ ಸಹಾಯದಿಂದ ನರೇಂದ್ರನು ಕಡೆಗೆ ಮೆಟ್ರಿಕ್ಯುಲೇಷನ್ ತರಗತಿಗೆ ಸೇರಿದನು. ಆ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ನರೇಂದ್ರನು ಪ್ರಥಮ ತಮ ಶ್ರೇಣಿಯಲ್ಲಿ ಉತ್ತೀರ್ಣನಾದನು. ಮೆಟ್ರೊಪೋಲಿಟನ್ ಇನ್‌ಸ್ಟಿಟ್ಯೂಷನ್ನಿನಲ್ಲಿ ಆ ಶ್ರೇಣಿಯಲ್ಲಿ ಉತ್ತೀರ್ಣನಾದವನು ಅವನೊಬ್ಬನೇ. ಬಾಲಕನು ಶಾಲೆಯ ಗೌರವವನ್ನು ಕಾಪಾಡಿದನೆಂದು ಸರ್ವ ಶಿಕ್ಷಕರೂ ಆತನನ್ನು ಬಹುವಾಗಿ ಕೊಂಡಾಡಿದರು.

ಅದೇ ವರ್ಷ ಮತ್ತೊಂದು ಸಂಗತಿ ನಡೆಯಿತು. ಶಾಲೆಯ ಶಿಕ್ಷಕರೊಬ್ಬರು ವರ್ಗ ಮಾಡಲ್ಪಟ್ಟರು. ಹುಡುಗರೆಲ್ಲರೂ ಸೇರಿ ಅವರಿಗೆ ವಿನಯಾಭಿನಂದನೆಗಳನ್ನು ಅರ್ಪಿಸಬೇಕೆಂದು ನಿರ್ಣಯಿಸಿದರು. ಆ ವಿನಯಾಭಿನಂದನೆಯ ಮಹಾ ಸಭೆಗೆ ದೇಶವಿಖ್ಯಾತ ವಾಗ್ಮಿಪ್ರವರ ಸುರೇಂದ್ರನಾಥ ವಂದ್ಯೋಪಾಧ್ಯಾಯರು ಅಧ್ಯಕ್ಷರಾಗಿ ಆಹ್ವಾನಿಸಲ್ಪಟ್ಟರು. ಅವರ ಸಮ್ಮುಖದಲ್ಲಿ ವೇದಿಕೆಯ ಮೇಲೆ ನಿಂತು ಮಾತಾಡಲು ಎಲ್ಲ ಬಾಲಕರೂ ಅಳುಕಿದರು. ಕಡೆಗೆ ಎಲ್ಲರೂ ಸೇರಿ ನರೇಂದ್ರನಾಥನನ್ನೇ ಭಾಷಣಕಾರನನ್ನಾಗಿ ಗೊತ್ತುಮಾಡಿದರು. ನರೇಂದ್ರನು ಸ್ವೀಯ ಸುಮಧುರ ಕಂಠದಿಂದ ಸುಲಲಿತವಾದ ಆಂಗ್ಲೇಯ ಭಾಷೆಯಲ್ಲಿ ಅರ್ಧಗಂಟೆಯ ಹೊತ್ತು ಪೂರ್ವೋಕ್ತ ಶಿಕ್ಷಕ ಮಹಾಶಯರ ಗುಣಾವಳಿಯನ್ನು ಪ್ರಶಂಸೆ ಮಾಡಿದನು. ಸುರೇಂದ್ರನಾಥರು ಕಿಶೋರವಾಗ್ಮಿಯನ್ನು ಬಹುವಾಗಿ ಹೊಗಳಿದರು. ಹದಿನಾರು ಹದಿನೇಳು

ವಯಸ್ಸಿನ ಬಾಲಕನೊರ್ವನು ದೇಶವಿನುತ ವಾಗ್ಮೀ ಪ್ರವರ ಶ್ರೀ ಸುರೇಂದ್ರನಾಥರ ಮುಂದೆ ನಿಂತು ಭಾಷಣ ಮಾಡುವುದೆಂದರೆ, ಎಷ್ಟು ದೃಢತೆಯಿರಬೇಕು! ಎಷ್ಟು ಆತ್ಮ ನಿರ್ಭರತೆಯಿರಬೇಕು! ಎಷ್ಟು ಎದೆಗಚ್ಚಿರಬೇಕು!

ನರೇಂದ್ರನು ಜನಿಸಿದನು, ಬೆಳೆದನು, ವಿದ್ಯಾರ್ಜನೆ ಮಾಡಿದನು, ವಿದ್ವನ್ಮಣಿಯಾದನು, ಶ್ರೀ ಸ್ವಾಮಿ ವಿವೇಕಾನಂದರಾದನು, ಲೋಕಕಲ್ಯಾಣತ್ತಾದನು, ನವಯುಗಪ್ರವರ್ತಕನಾದನು, ಧರ್ಮಗುರುವಾದನು, ಸರ್ವಧರ್ಮಸಮನ್ವಯಾಚಾರ್ಯನಾದನು, ವಿಶ್ವವಿಖ್ಯಾತನಾದನು, ಸರ್ವಜನವಂದಿತನಾದನು, ಭಾರತ ವರ್ಷದ ಚಿರನೂತನ ಚೇತನ ಪುನರುತ್ಥಾನ ಕಾರಣನಾದನು, ಆಚಂದ್ರಾರ್ಕ ಚಿರಸ್ಥಾಯಿಯಾದನು! ಇದರ ರಹಸ್ಯವೇನು?

ಮಹಾಪುರುಷರ ಜ್ಯೋತಿರ್ಮಯ ಜೀವನದ ಅಸ್ತಿಭಾರದ ರಹಸ್ಯವನ್ನು ಅರಿಯಬೇಕಾದರೆ ನಮ್ಮ ದೃಷ್ಟಿ ಅವರ ಶೈಶವ ಕೈಶೋರ ಕೌಮಾರ್ಯಗಳ ಕಡೆಗೆ ತಿರುಗಬೇಕು. ಅವರ ಬಾಳನ್ನು ತಿದ್ದಿದ ಬಾಲ್ಯಕಾಲದ ಮುದ್ದಾದ ಸನ್ನಿವೇಶಗಳನ್ನು ಪರಿಶೀಲಿಸಬೇಕು. ಅವರ ಮಾತಾಪಿತೃಗಳ ಬಂಧುಮಿತ್ರರ ಸುಸ್ನೇಹಮಯವಾದ ಆವರಣ ಸನ್ನಿವೇಶ ಪ್ರವೇಶಮಾಡಿ ನೋಡಬೇಕು: “ಮಕ್ಕಳ ಸ್ಕೂಲ್ ಮನೇಲಲ್ವೆ?”

ಎಳೆವರೆಯದ ಅನುಭವಗಳ ಚಿರಮುದ್ರೆಯ ಪರಿಣಾಮವು ಜೀವಜ್ಯೋತಿಗಳ ಉತ್ತರೋತ್ತರ ಜೀವಮಾನದಲ್ಲಿ ನಮಗೆ ಚೆನ್ನಾಗಿ ಗೋಚರವಾಗುವುದು. ಸಿದ್ಧಾರ್ಥನು ಕಂಡ ಮೂರು ಹೃದಯ ವಿದ್ರಾವಕವಾದ ದೃಶ್ಯಗಳ ಪರಿಣಾಮ ಪ್ರಭಾವಗಳು ಕರುಣಾಮಯನಾದ ಶ್ರೀ ಗೌತಮಬುದ್ಧನ ಜೀವನಚರಿತ್ರೆಯಲ್ಲಿ ಚೆನ್ನಾಗಿ ಒಡೆದು ಮೂಡಿರುತ್ತವೆ. ಬಾಲ್ಯದ ಶಕ್ತಿಯುತವಾದ ವೀರ ಸನ್ನಿವೇಶಗಳೂ ಪ್ರಭಾವಗಳೂ ಯೋಧಾಗ್ರಣಿ ನೆಪೋಲಿಯನ್ನನನ್ನು ಸಿಡಿಲಾಳನ್ನಾಗಿ ಮಾಡಿರುತ್ತವೆ. ಕವಿವರ್ಮ ವರ್ಡ್ಸ್‌ವರ್ತ್ ಎಂಬ ಆಂಗ್ಲೇಯ ಕಾವ್ಯರ್ಷಿಯ ಲಲಿತ ಗೀತೆಗಳಲ್ಲಿ ಆತನ ಬಾಲ್ಯವು ಸರ್ವದಾ ಮಂದಹಾಸವನ್ನು ಬೀರುತ್ತಿರುತ್ತದೆ. ಭರತಖಂಡದ ಚಕ್ರಾಧಿಪತ್ಯ ಸಂಸ್ಥಾಪಕರಲ್ಲಿ ಅದ್ವಿತೀಯರಾಗಿರುವ ಸುಭಟವರೇಣ್ಯ ಶ್ರೀ ಶಿವಪ್ರಭುವಿನ ಹೃದಯದಲ್ಲಿ ವೀರಮಾತೆ ಜೀಜಾಬಾಯಿಯ ಕೋಮಲ ಕಠೋರ ಪ್ರಭಾವಗಳು ತಾಂಡವವಾಡುತ್ತಿವೆ. ಅಂತೆಯೇ ಸುಮ ಕೋಮಲ ವಜ್ರಕಠೋರ ಹೃದಯದ ಶ್ರೀ ಸ್ವಾಮಿ ವಿವೇಕಾನಂದರಲ್ಲಿ ವಿಶ್ವನಾಥದತ್ತ - ಭುವನೇಶ್ವರೀ ದೇವಿಯರ ಗುಣಗಣಗಳನ್ನು ಸಂದರ್ಶಿಸುತ್ತೇವೆ. “ನನ್ನ ಸಫಲ ಜೀವನಕ್ಕಾಗಿ ಶ್ರೀಭುವನೇಶ್ವರೀ ಮಾತೆಗೆ ಚಿರಋಣಿಯಾಗಿದ್ದೇನೆ” ಎಂದು ಸ್ವಾಮಿಜಿ ಆಗಾಗ ಹೇಳುತ್ತಿದ್ದರು.

ಶ್ರೀ ವಿವೇಕಾನಂದರ ತಂದೆಯಾದ ವಿಶ್ವನಾಥದತ್ತನು ರಾಜವ್ಯಕ್ತಿ. ರೂಪದಲ್ಲಿಯೂ ಆತ್ಮದಲ್ಲಿಯೂ ಆತನು ಪುರುಷಸಿಂಹನಾಗಿದ್ದನು. ಆತನ ವಿಶಾಲ ಹೃದಯದಲ್ಲಿ ಕ್ಷುದ್ರತೆಗೆ ಎಡೆಯಿರಲಿಲ್ಲ. ಆತನ ಮಹಾ ಔದಾರ್ಯದಲ್ಲಿ ಕೃಪಣತೆಗೆ ತಾವಿರಲಿಲ್ಲ. “ಎಂದಿಗೂ ದರ್ಪಕ್ಕೆ ಮಣಿಯಬೇಡ; ಎಂದಿಗೂ ವಿಸ್ಮಯವನ್ನು ತೋರಬೇಡ” ಎಂದು ಆತನು ನರೇಂದ್ರನಿಗೆ ಉಪದೇಶ ಮಾಡುತ್ತಿದ್ದನು. “ಒಂದೇ ಭಾವವು ಅನೇಕ ಭಾಷೆಗಳಲ್ಲಿ ಮೈದೋರುವಂತೆ ಒಂದೇ ಸತ್ಯವು ಅನೇಕ ಮತಗಳಲ್ಲಿ ಮೈದೋರಿದೆ. ಎಲ್ಲ ಮತಗಳೂ ಒಂದೇ ಸತ್ಯದ ದೃಷ್ಟಿ ಭೇದಗತವಾದ ದಿವ್ಯದರ್ಶನಗಳು.” “ಯಾವನು ತನ್ನ ಪೂರ್ವಿಕರ ಸನಾತನ ಇತಿಹಾಸದಲ್ಲಿ ನಂಬುಗೆಡುವನೋ ಆತನಿಗೆ ಎಲ್ಲಿಯೂ ಗೌರವ ದೊರಕದು. ಪರಕೀಯರು ನೆಲವನ್ನು ಗೆದ್ದರೆ ಗೆದ್ದಂತಾಗುವುದಿಲ್ಲ. ಆದರೆ ಆ ಜನರ ಸಂಸ್ಕೃತಿಯನ್ನು ಗೆದ್ದರೆಂದರೆ, ಅವರ ಮಾನಸಿಕ

ಐಶ್ವರ್ಯವನ್ನು ಸುಲಿದುಕೊಂಡರೆಂದರೆ, ಸರ್ವನಾಶವಾಗುವುದೇ ನಿಶ್ಚಯ!" ಎಂದು ಮೊದಲಾಗಿ ಮಗನಿಗೆ ಬುದ್ಧಿ ಹೇಳುತ್ತಿದ್ದನು.

ವಿಶ್ವನಾಥದತ್ತನ ಮನೆಯಲ್ಲಿ ಅನೇಕ ನಿರುದ್ಯೋಗಿಗಳಾದ ಬಂಧುಗಳು ಕಾಲಹರಣ ಮಾಡುತ್ತಿದ್ದರು. ಗೃಹಪತಿ ಅವರಲ್ಲಿ ಕೆಲವರಿಗೆ ಸಿಗರೇಟು, ನಶ್ಯ ಮೊದಲಾದವುಗಳನ್ನು ಉಪಯೋಗಿಸುವ ಅಭ್ಯಾಸವಿರುವುದನ್ನು ಅರಿತು ಒಬ್ಬೊಬ್ಬರಿಗೂ ಸ್ವಲ್ಪ ಸ್ವಲ್ಪ ಹಣ ಸಹಾಯ ಮಾಡುತ್ತಿದ್ದನು. ಅದನ್ನು ನೋಡಿ ನರೇಂದ್ರನು ಕುಪಿತನಾಗಿ ಒಂದು ದಿನ ತಂದೆಯ ಬಳಿಗೆ ಬಂದು "ಬಾಬಾ, ನೀನು ನಿರುದ್ಯೋಗಿಗಳಿಗೆ ಸೋಮಾರಿತನವನ್ನು ಕಲಿಸುವುದಲ್ಲದೆ ನಶ್ಯ ಬೀಡಿಗಳಿಗೆ ದುಡ್ಡುಕೊಟ್ಟು ಅವರನ್ನು ಕೆಡಿಸುತ್ತಿದ್ದೀಯೆ" ಎಂದನು. ಮಗನ ಮಾತನ್ನು ಕೇಳಿ ಮುಗುಳ್ನಗೆ ನಗುತ್ತಾ ಉದಾರ ಹೃದಯಿಯಾದ ಪಿತನು "ಬಾಬಾ, ನೀನು ಹೇಳುವುದೇನೊ ಒಂದು ದೃಷ್ಟಿಯಿಂದ ಸರಿಯೇ. ಆದರೆ ಸ್ವಲ್ಪ ಸಾವಧಾನವಾಗಿ ವಿಚಾರಿಸಿ ನೋಡು. ಇವರು ಯಾವ ಬಗೆಯಿಂದಲೂ ಹಣ ಸಂಪಾದನೆ ಮಾಡಲಾರದೆ, ಬಾಳಿನ ಕೋಟಲೆಗಳಿಗೆ ತುತ್ತಾಗಿ, ಜೀವನದಲ್ಲಿ ಬೇಸರ ಹುಟ್ಟಿ, ಕಂಗೆಟ್ಟು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಬದಲಾಗಿ ನನ್ನ ಆಶ್ರಯವನ್ನು ಹಾರೈಸಿ ಬಂದಿರುತ್ತಾರೆ. ಮಗುವೇ, ನೊಂದ ಎದೆಯವರಿವರು; ಬೆಂದ ಬಾಳಿವರದು; ನೆಚ್ಚುಗೆಟ್ಟವರಿವರು; ಲೋಕಬಿಟ್ಟವರಿವರು. ಮೂರು ಕಾಸಿನ ಸಿಗರೇಟಿನಿಂದ ಜೀವನದ ತಾಪವನ್ನು ಕ್ಷಣಕಾಲವಾದರೂ ಇವರು ಮರೆಯಬಹುದಾದರೆ, ದುಷ್ಟವೆನಿಸಿದರೂ ಕ್ಷಣಿಕವಾದರೂ ಅದರಿಂದ ಯಾವುದೊ ಒಂದು ಆನಂದವನ್ನು ಇವರು ಹೊಂದಬಹುದಾದರೆ, ಅದನ್ನೇಕೆ ನಾವು ತಡೆಯಬೇಕು? ನಮ್ಮ ನೀತಿಧರ್ಮಗಳಿಂದ ಅವರನ್ನೇಕೆ ಪೀಡಿಸಬೇಕು?" ಎಂದು ಸಸ್ನೇಹವಾಣಿಯಿಂದ ನುಡಿದನು. ತಂದೆಯ ವಾಣಿಯ ಸಾದರತೆಯನ್ನೂ ಗಂಭೀರತೆಯನ್ನೂ ಆತನ ಔದಾರ್ಯದ ಅಗಾಧತೆಯನ್ನೂ ನೋಡಿ ನರೇಂದ್ರನು ಮೂಕನಾದನು. ಚಿರಸ್ಮರಣೀಯವಾದ ಈ ಸಂಗತಿಯನ್ನು ವಿವೇಕಾನಂದರು ತಮ್ಮ ಜೀವಮಾನದಲ್ಲಿ ಒಂದು ಸಲವಾದರೂ ಮರೆತಿರಲಿಲ್ಲ.

ನರೇಂದ್ರನು ತಂದೆಯ ಬಳಿಗೆ ಬಂದು "ಬಾಬಾ, ನೀನು ಮಿತಿಯಿಲ್ಲದೆ ಧನವ್ಯಯ ಮಾಡುತ್ತಿದ್ದೀಯೆ. ನನಗೆ ಏನು ಇಟ್ಟಿರುವೆ? ಏನು ಕೊಟ್ಟಿರುವೆ?" ಎಂದನು. ತಂದೆ ಮಗನನ್ನು ನೋಡುತ್ತ ಹೆಮ್ಮೆಯಿಂದ "ಹೋಗು, ಕನ್ನಡಿಯ ಮುಂದೆ ನಿಂತು ನೋಡು!" ಎಂದನು. ಪುತ್ರನು ಪಿತನ ಅಭಿಪ್ರಾಯವನ್ನು ಅರಿತು ಸುಮ್ಮನಾದನು. ಶ್ರೀ ವಿವೇಕಾನಂದರ ಸುಂದರ ಗಂಭೀರವೂ ಭದ್ರಾಕಾರವೂ ತೇಜಸ್ವಿಯೂ ಸಿಂಹಪ್ರಾಯವೂ ಆದ ಮಹಾವ್ಯಕ್ತಿತ್ವವು ಶ್ರೀಯುತ ವಿಶ್ವನಾಥದತ್ತ ದತ್ತವಾದುದೆಂದು ನಾವು ನೆನಪಿನಲ್ಲಿಡಬೇಕು. ಧನ್ಯ ಶ್ರೀಮಂತ ವಿಶ್ವನಾಥದತ್ತ!

ಧನ್ಯೆ ಶ್ರೀಮತಿ ಭುವನೇಶ್ವರೀದೇವಿ! ತಾಯಿಯ ಮುದ್ದು ತುಟಿಗಳಿಂದ ಹೊರಸೂಸುವ ಮುದ್ದಿನ ಮೆಲ್ನುಡಿಗಳು ಸುಮಧುರ ಮಂಜುಳವಾದುವು. ಮೂಡುದೆಸೆಯ ಮುಂಬೆಳಗಿನಲ್ಲಿ ಬೀಸಿ ಬರುವ ಸುಸಿಲುಸಿರಿನಿಂದ ತಲೆದೂಗುವ ಮಲ್ಲಿಗೆಯ ಹಸುರುಹೊದರಿನಲ್ಲಿ ನನೆಕೊನೆಯೇರಿರುವ ಕುಡಿಗೊನರುಗಳಿಂದ ಒಯ್ಯೊಯ್ಯನೆ ಕಳಗುದುರಿ ಚಳಿಗಾಲದ ಕುಳಿರಹನಿಗಳಿಂದ ನಳನಳಿಸುವ ಹೊಸ ಹಸುರಿನ ಹಸಲೆಯನ್ನು ಚುಂಬಿಸುವ ಅಚ್ಚಲರುಗಳಂತೆ ತಾಯಿಯ ಮುದ್ದಿನ ಮಾತುಗಳು ಎಳೆ ಮಕ್ಕಳ ಮೆಲ್ಲೆದೆಗಳ ಮೇಲೆ ಬೀಳುತ್ತವೆ. ಅವುಗಳಿಗೆ ವೇದವಾಕ್ಯಗಳ ಪ್ರಭುತ್ವವಿಲ್ಲ; ಶಾಸ್ತ್ರಸೂತ್ರಗಳ ಕಾಠಿಣ್ಯ ಸೂಕ್ಷ್ಮತೆಗಳಿಲ್ಲ; ಕಾವ್ಯಗಳ ಮೋಹಪ್ರಲೋಭನಗಳಿಲ್ಲ. ಆದರೂ ಅವುಗಳ ಕಾರ್ಯ ವೇದ ಶಾಸ್ತ್ರ ಕಾವ್ಯಗಳ

ಕಾರ್ಯವನ್ನು ಮೀರುತ್ತದೆ. ತಾಯಿಯ ಮಾತುಗಳಲ್ಲಿ ಮಗುವಿನ ಹೃದಯದ ಅಂತರಾಳದಲ್ಲಿ ಅಡಗಿ ಹೊರಡಲು ಸಮಯವನ್ನೆ ಹೊಂಚುತ್ತಿರುವ ಗೂಢಶಕ್ತಿಗಳನ್ನು ಹೊರಗೆಳೆಯುವ ಸಾಮರ್ಥ್ಯವಿದೆ. ಆ ದೃಷ್ಟಿಯಿಂದ ನೋಡಿದರೆ ಜನಾಂಗ ನಿರ್ಮಾಪಕರು ತಾಯಂದಿರೇ. ಜನಾಂಗ ವಿನಾಶಕರೂ ಅವರೇ, ದೇಶವು ಭೀರುಗಳಿಂದ ತುಂಬಿದ್ದರೆ ಅದಕ್ಕೆ ಅವರೇ ಕಾರಣ ಅಥವಾ ದೇಶವು ವೀರರಿಂದ ತುಂಬಿದ್ದರೂ ಆ ಕೀರ್ತಿಗೆ ಮಾತೆಯರೇ ಅರ್ಹರು. ದೇಶದ ಮೇಲ್ಮೆ ಕೀಳ್ಮೆಗಳೆಲ್ಲ ತಾಯಂದಿರ ಕೈಲಿವೆ.

"ತಾಯಿಯನ್ನು ಪೂಜಿಸದ ಪಾಪಿಯೊಬ್ಬನೂ ಕೀರ್ತಿವಂತನಾಗಿಲ್ಲ!" ಎಂದು ವಿವೇಕಾನಂದರು ಹೇಳುತ್ತಿದ್ದರು. ಭರತಖಂಡದಲ್ಲಿ ಪೂಜ್ಯತಮಳಾದ ಮಾತೆಗೆ ಅಗ್ರಸ್ಥಾನ ದೊರೆತಿರುವುದು. ಸತಿಯತನಕ್ಕಿಂತಲೂ ತಾಯ್ತನವೆ ಶ್ರೇಷ್ಠತರವಾದುದೆಂದು ಪರಿಗಣಿಸಲ್ಪಟ್ಟಿದೆ. ಸತಿಯಲ್ಲಿ ಸ್ವಲ್ಪವಾದರೂ ಭೋಗವಾಸನೆ ಇರುವುದು; ತಾಯಿಯಾದರೋ ತ್ಯಾಗಮೂರ್ತಿ. ಮಾತೆಯೇ ಗೃಹದೇವತೆ; ಆಕೆಯ ವಾಣಿಯೇ ದೇವವಾಣಿ; ಆಕೆಯ ಇಚ್ಛೆಯೇ ದೇವೇಚ್ಛೆ! ಹಿಂದುಗಳ ಸತಿಯತನದ ಕಲ್ಪನೆ ಶ್ರೇಷ್ಠತರವಾದುದೇ ಸರಿ. ಆದರೆ ಅವರ ತಾಯ್ತನದ ಕಲ್ಪನೆ ಶ್ರೇಷ್ಠತಮವಾದುದು! ಆದ್ದರಿಂದಲೆ ಅವರು ಜಗದಾದಿ ಚೈತನ್ಯ ತತ್ತ್ವವನ್ನು ಜಗನ್ಮಾತೆಯೆಂದು ಆರಾಧಿಸುವರು. ತಾಯಿ ಮಕ್ಕಳ ಸಂಬಂಧವು ಅತ್ಯಂತ ನಿಕಟವಾದ ಮಾನವೀಯ ಸಂಬಂಧವೂ ಅತ್ಯಂತ ನಿಕಟತಮವಾದ ದೈವಿಕ ಚಿರಸಂಬಂಧವೂ ಆಗಿರುತ್ತದೆ. ಅಹೇತುಕ ಪ್ರೇಮವನ್ನು ನೋಡಬೇಕಾದರೆ ಮಾತೆಯನ್ನು ನೋಡಿ. ಅಸ್ವಾರ್ಥತೆಯನ್ನು ನೋಡಬೇಕಾದರೆ ಜನನಿಯನ್ನು ನೋಡಿ. ತಾಯಿ ಭೂಮಿಯ ದೇವರು!

ಶ್ರೀಮತಿ ಭುವನೇಶ್ವರೀದೇವಿ ತನ್ನ ಮಗನ ಮಹಿಮೆಯನ್ನು ಆತನು ಹುಟ್ಟುವುದಕ್ಕೆ ಮುನ್ನವೇ ಅರಿತಿದ್ದಳು. ಆಕೆಗೆ ತೋರಿದ ಅತಿಮಾನುಷ ಅನುಭವಗಳೇ ಅದಕ್ಕೆ ಸಾಕ್ಷಿ. ಮಗುವಿಗೆ ಮಹಾಭಾರತ ರಾಮಾಯಣಗಳಲ್ಲಿ ಬರುವ ವೀರ ಪುಂಗವರ ಕಥೆಗಳನ್ನು ಹೇಳಿ ನರೇಂದ್ರನನ್ನು ಹುರಿದುಂಬಿಸುತ್ತಿದ್ದಳು. ಆತನನ್ನು ಅನಾವಶ್ಯಕವಾಗಿ ಬೆದರಿಸುತ್ತಿರಲಿಲ್ಲ. ಆತನ ಶ್ರದ್ಧೆಯನ್ನು ಹಾಳು ಮಾಡುವ ಯಾವ ಕಾರ್ಯವನ್ನೂ ಮಾಡುತ್ತಿರಲಿಲ್ಲ. ಒಂದು ದಿನ ನರೇಂದ್ರನು ಹನುಮಂತನು ಬಾಳೆಯ ತೋಟದಲ್ಲಿ ಹುಡುಕಿದರೆ ಸಿಕ್ಕಬಹುದು ಎಂದು ಹೇಳಿದ ದಾಸರ ಲಘು ವಾಕ್ಯಗಳನ್ನು ನಂಬಿ, ಹಾಗೆಯೆ ಮಾಡಿ, ರಾತ್ರಿ ಮನೆಗೆ ಬಂದು ಎಲ್ಲವನ್ನೂ ತಾಯಿಗೆ ತಿಳಿಸಲು, ಮಗನ ಶ್ರದ್ಧೆಯನ್ನು ಕಂಡು ಮೆಚ್ಚಿ ಭುವನೇಶ್ವರೀ ದೇವಿ ಅದನ್ನು ಖಂಡಿಸಲು ಇಚ್ಛಿಸದೆ "ಮಗೂ ಹನುಮಂತನು ಅಲ್ಲಿರುವುದೇನೋ ಸತ್ಯ! ಆದರೆ ಇಂದು ಬಹುಶಃ ಶ್ರೀರಾಮಚಂದ್ರನು ಹೇಳಿದ ಯಾವುದೋ ಒಂದು ಕಾರ್ಯವನ್ನು ಮಾಡಲು ಹೋಗಿರಬಹುದು. ಅದಕ್ಕೇ ಬರಲಿಲ್ಲ. ಇನ್ನೊಂದು ದಿನ ಸಿಕ್ಕುವನು" ಎಂದು ಹೇಳಿ ಸಂತವಿಟ್ಟಳು.[2] ಮಗನಿಗೆ ಸಮಯ ಸಿಕ್ಕಿದಾಗಲೆಲ್ಲ ಸರಸವಾದ ಕಥೆಗಳ ಮುಖಾಂತರ ಬುದ್ಧಿ ಹೇಳುತ್ತಿದ್ದಳು: ಸತ್ತರೂ ಸತ್ಯವನ್ನು ಬಿಡಬೇಡ; ಪರಿಶುದ್ಧನಾಗಿರು; ಗಂಭೀರವಾಗಿರು. ಇತರರ ಭಿನ್ನಾಭಿಪ್ರಾಯಗಳಿಗೆ ಗೌರವವನ್ನು ಕೊಡು. ಹೆರರ ಸ್ವಾತಂತ್ರ್ಯಕ್ಕೆ ಅಡ್ಡ ಬರಬೇಡ. ಕೋಮಲ ಹೃದಯಿಯಾಗಿರು. ಆದರೆ ಸಮಯ ಬಂದಲ್ಲಿ ಕಠೋರನಿಶ್ಚಲವಾಗಿರಲು ಹಿಂಜರಿಯಬೇಡ."

ಈ ಬುದ್ಧಿವಾದಗಳ ಪ್ರಭಾವವನ್ನು ವಿವೇಕಾನಂದರ ಆಚರಣೆಯಲ್ಲಿ ನಾವು ನೋಡಬಹುದು. ನಾನಾ ಜನಾಂಗಗಳಿಗೆ ನಾನಾ ದೇಶಗಳಿಗೆ ಸೇರಿದ್ದ ತಮ್ಮ ಶಿಷ್ಯರೆಲ್ಲರಿಗೂ ಕೆಲಸಕ್ಕೆ ಬಾರದ ಒಂದು ಶುಷ್ಕ ನಿಯಮವನ್ನು ಆರೋಪಿಸದೆ

ಅವರವರ ಪ್ರಕೃತಿಗೆ ಅನುಗುಣವಾಗಿ ಅವರವರು ನಡೆಯಬಹುದೆಂದು ಅನುಮತಿ ಕೊಟ್ಟರು. ಹೆರವರ ಸ್ವಾತಂತ್ರ್ಯಕ್ಕೆ ಅವರೆಂದೂ ಅಡ್ಡ ಬಂದುದಿಲ್ಲ. ಅವರ ಸ್ವಾತಂತ್ರ್ಯಪ್ರಿಯತೆಗೂ ಮಹಾ ಕರುಣೆಗೂ ಭುವನೇಶ್ವರೀಮಾತೆಯು ಕಾರಣಳು.

ವಿವೇಕಾನಂದರು ತಮ್ಮ ಮಾತೆಯನ್ನು ಅಕ್ಷರಶಃ ಪೂಜಿಸುತ್ತಿದ್ದರು. ತಾಯಿಯ ಬಡತನವನ್ನು ನೋಡಿಯೆ ಅವರು ತಮ್ಮ ಸಂನ್ಯಾಸ ಸ್ವೀಕಾರವನ್ನು ಮುಂದೆಮುಂದಕ್ಕೆ ತಳ್ಳಿದ್ದರು. ಪಾಶ್ಚಾತ್ಯ ದೇಶಗಳಿಂದ ಅವರು ಹಿಂದಿರುಗಿದ ಮೇಲೆಯೂ ಒಂದು ದಿನ ತಮ್ಮ ಮಾತೆ ರೋಗಸ್ಥಳಾದಂತೆ ಕನಸು ಬಿದ್ದಾಗ ಎಷ್ಟು ಉದ್ವಿಗ್ನರಾದರೆಂಬುದನ್ನು ಆಗ ಅವರ ಜೊತೆಯಲ್ಲಿದ್ದವರು ಬಲ್ಲರು. ತಂತಿಯ ಮೂಲಕ ತಾಯಿ ಸುಖವಾಗಿರುವುದನ್ನು ತಿಳಿದ ಮೇಲೆಯೇ ಅವರು ಶಾಂತರಾದರು.

ತಾಯಿಯಾದ ಭುವನೇಶ್ವರಿ ಸಿಂಹಿಣಿಯಾದುದರಿಂದಲೇ ಪುರುಷಸಿಂಹನನ್ನು ಪಡೆದಳು. ನಾರಿಯರಿಗೆ ಸಹಜವಾದ ಕೋಮಲತೆಯಿದ್ದರೂ ಆಕೆಯ ಹೃದಯದಲ್ಲಿ ಬೇಕಾದಷ್ಟು ದೃಢತೆಯಿತ್ತು. ಆಕೆಯ ಕಣ್ಣಮುಂದೆಯೆ ನರೇಂದ್ರನು ಹುಟ್ಟಿ ಬೆಳೆದು ಲೋಕವಿಖ್ಯಾತನಾಗಿ ಮಡಿದನು. ವಿವೇಕಾನಂದರು ದೇಹ ಪರಿತ್ಯಾಗ ಮಾಡಿದಮೇಲೆ ಒಂಬತ್ತು ವರ್ಷಗಳು ಬದುಕಿದ್ದಳು. ವಿಶ್ವ ವಿಖ್ಯಾತನಾದ ಪುತ್ರನ ರುದ್ರಚಿತೆಯ ಬಳಿಯಲ್ಲಿಯೇ ದಿಟ್ಟತಾಯಿ ನಿಂತಿದ್ದಳು. ಪೂತ ಭಾಗೀರಥಿಯ ತೀರದಲ್ಲಿ ತನ್ನ ಪುತ್ರನ ಚಿತಾ ಪಾರ್ಶ್ವದಲ್ಲಿಯೇ ಆ ತೇಜಸ್ವಿನೀ ರಮಣಿ ನಿಂತು, ತಾನೇ ಹಾಲೆರೆದು ಸಾಕಿ ಸಲಹಿದ ಮುದ್ದು ಮಗನ ಕೋಮಲಕಾಯವನ್ನು ದಹಿಸುತ್ತ ಮೇಲೆದ್ದ ರಕ್ತಾಗ್ನಿಜ್ವಾಲೆಗಳನ್ನು ನಿಶ್ಚಲಚಿತ್ತೆಯಾಗಿ ನೋಡುತ್ತ, ಎಲ್ಲರೂ ಹಾಡುತ್ತಿದ್ದ ನಿಧನ ಗೀತೆಯೊಡನೆ ತನ್ನ ವಾಣಿಯನ್ನೂ ಮಿಳಿತಮಾಡಿದುದನ್ನು ನೆನೆದರೆ ಯಾರಿಗಾದರೂ ರೋಮಾಂಚವಾಗದಿರದು! ಧನ್ಯೆ ಶ್ರೀಮತಿ ಭುವನೇಶ್ವರೀದೇವಿ!

ಕ್ರಿಸ್ತಾಬ್ದ ೧೯೧೧ನೆಯ ಜುಲೈ ೨೫ನೆಯ ತಾರೀಖಿನ ದಿನ ಪುರಿಗೆ ಯಾತ್ರೆ ಹೋಗಿದ್ದ ಸಮಯದಲ್ಲಿ ಜಗದ್ವಿಖ್ಯಾತ ಸ್ವಾಮಿ ವಿವೇಕಾನಂದರ ದಿವ್ಯ ಜನನಿಯಾದ ಶ್ರೀಮತಿ ಭುವನೇಶ್ವರೀ ಮಾತೆ ಶ್ರೀ ಜಗನ್ನಾಥನ ಸನ್ನಿಧಿಯಲ್ಲಿ ಶರೀರ ಪರಿತ್ಯಾಗ ಮಾಡಿದಳು. ಮಹಾಪುರುಷನೊಬ್ಬನನ್ನು ಜಗತ್ತಿಗೆ ದಾನ ಮಾಡಿದ ಆ ಪಾವನಮಾತೆಯ ಪವಿತ್ರನಾಮ ಸರ್ವದಾ ಸರ್ವತ್ರ ಸ್ಮರಣೀಯವಾಗಿರಲಿ!

---

[1] ಸುಮಾರು ಇಪ್ಪತ್ತೇಳು ವರ್ಷ ವಯಸ್ಸಿನ ಶ್ರೀರಾಮಕೃಷ್ಣರು ದಕ್ಷಿಣೇಶ್ವರದಲ್ಲಿ ಆತ್ಮಸಾಕ್ಷಾತ್ಕಾರದ ಅಗ್ನಿತೀರ್ಥದಲ್ಲಿ ಮಗ್ನರಾಗಿದ್ದರು. ವಂಗಕವಿ ರವೀಂದ್ರನಾಥಠಾಕೂರರು ಎರಡು ವರ್ಷದ ಹಸುಳೆಯಾಗಿದ್ದರು. ಮಹಾತ್ಮಾ ಗಾಂಧಿಯವರ ಜನನಕ್ಕೆ ಇನ್ನೂ ಆರು ವರ್ಷಗಳ ಕಾಲಾಂತರವಿತ್ತು. ಸಿಪಾಯಿದಂಗೆ ನಡೆದು ಆರು ವರ್ಷವಾಗಿತ್ತು. ಈಸ್ಟ್ ಇಂಡಿಯಾ ಕಂಪನಿ ಕೈಯಿಂದ ಭರತಖಂಡವು ಇಂಗ್ಲೆಂಡ್ ರಾಣಿಯ ಕೈಸೇರಿ ಐದು ವರ್ಷವಾಗಿತ್ತು.

[2] ಪ್ರತಿಕೃತಿಯ ದೃಷ್ಟಿಯಿಂದ ಆ ಸಮಾಧಾನ ಅಸತ್ಯವಾಗಿ ತೋರಿದರೂ ಪ್ರತಿಮಾದೃಷ್ಟಿಯಿಂದ ಸತ್ಯವನ್ನೆ ಸೂಚಿಸುತ್ತದೆ.

# ೩. ಹಿನ್ನೆಲೆ

ಭರತಖಂಡದ ಕುಬೇರಕಥೆಯನ್ನು ಬಹುಕಾಲದಿಂದಲೂ ಕೇಳಿ ಕೇಳಿ, ಅದರ ಅಲಕಾವತಿಯನ್ನು ಕೊಳ್ಳೆಹೊಡೆದು, ಹೊನ್ನು ರನ್ನಗಳ ಹೊಳೆಗಳನ್ನು ತಡೆಗಟ್ಟಿ ತಂತಮ್ಮ ದೇಶಗಳ ಮೇಲೆ ಹರಿಯಿಸಬೇಕೆಂಬ ಹೇರಾಸೆಯಿಂದ ಪಾಶ್ಚಾತ್ಯದೇಶಗಳು ಪರಸ್ಪರ ಸ್ಪರ್ಧೆ ಹೂಡಿದ ಆ ಸಮುದ್ರಸಾಹಸದ ಫಲರೂಪವಾಗಿ ಹೊಸ ಹೊಸ ಭೂಭಾಗಗಳೂ ವಿಪುಲಸಂಪತ್ತೂ ಅವರ ಕೈವಶವಾದುವು. ಸಾಹಸದಿಂದ ಸಂಪತ್ತು ಹೆಚ್ಚಿದರೆ ಸಂಪತ್ತಿನಿಂದ ಸಾಹಸ ಹೆಚ್ಚುತ್ತದೆ. ಅವುಗಳೆರಡೂ ಸೇರಿ ಸಂಸ್ಕೃತಿಯ ಕಲ್ಪವೃಕ್ಷಕ್ಕೆ ಬೆಳೆ ನೀರು ಹೊಯ್ಯುತ್ತವೆ. ತನ್ನ ಸುವರ್ಣ ಕಿರೀಟ ಕಾಂತಿಯಿಂದ ಪಾಶ್ಚಾತ್ಯ ಸಾಹಸಿಗಳನ್ನು ಸಂಮೋಹಿಸಿದ ಭರತಮಾತೆ, ಅವರ ತಕ್ಕಡಿ ಮತ್ತು ಕೋವಿಗಳಿಗೆ ಸೋತಂತೆ, ಆ ಕೋವಿ ತಕ್ಕಡಿಗಳನ್ನು ಅನಿವಾರ್ಯವಾಗಿ ಹಿಂಬಾಲಿಸಿದ ಅವರ ಸಂಸ್ಕೃತಿಗೂ ಮನಸೋಲಬೇಕಾಯಿತು.

ಆ ಕಥೆ ಕರ್ಣಾರ್ಜುನರ ಯುದ್ಧದಂತೆ ಭೀಷಣವಾಗಿದ್ದರೂ ಅದರ ವರ್ಣನೆಯಂತೆ ಹೃದಯಂಗಮವಾಗಿದೆ.

ಕ್ರಿಸ್ತಾಬ್ದ ೧೬೦೦ರಲ್ಲಿ ಹುಟ್ಟಿದ ಈಸ್ಟ್ ಇಂಡಿಯಾ ಕಂಪನಿ ಎಂಬ ಇಂಗ್ಲೀಷರ ವಾಣಿಜ್ಯ ಸಂಘವು ೧೬೧೩ರಲ್ಲಿ ಚಕ್ರವರ್ತಿ ಜಹಾಂಗೀರನಿಂದ ಅಪ್ಪಣೆ ಪಡೆದು ಸೂರತ್ತಿನಲ್ಲಿ ಮೊತ್ತಮೊದಲು ತನ್ನ ವ್ಯಾಪಾರಕೋಠಿಯನ್ನು ಸಂಸ್ಥಾಪಿಸಿತು.

ಮೂರು ವರ್ಷಗಳ ತರುವಾಯ ಮಚಲೀಪಟ್ಟಣದಲ್ಲಿ, ಹದಿನೇಳು ವರ್ಷಗಳ ತರುವಾಯ ಮಹಾನದಿಯ ನದೀಮುಖದ ಹರಿಹರಪುರದಲ್ಲಿ, ಏಳು ವರ್ಷಗಳ ತರುವಾಯ ಮದ್ರಾಸಿನಲ್ಲಿ, ಹತ್ತು ವರ್ಷಗಳ ತರುವಾಯ ಹೂಗ್ಲಿಯಲ್ಲಿ, ಹತ್ತೊಂಬತ್ತು ವರ್ಷಗಳ ತರುವಾಯ ಬೊಂಬಾಯಿಯಲ್ಲಿ, ಹದಿನೇಳು ವರ್ಷಗಳ ತರುವಾಯ (೧೬೮೬) ಕಲ್ಕತ್ತೆಯಲ್ಲಿ - ಮಹಾತಂತ್ರಿಗಳಾದ ಆಂಗ್ಲೇಯ ವಣಿಗ್ವರರು ತಮ್ಮ ವಾಣಿಜ್ಯದುರ್ಗಗಳನ್ನು ಬಲಿದರು. ಅಂತು ಹದಿನೇಳನೆಯ ಶತಮಾನ ಕೊನೆಗಾಣುವುದರೊಳಗಾಗಿ ಇಂಗ್ಲೀಷರು ಇಂಡಿಯಾ ದೇಶದ ತೀರ ಪ್ರದೇಶದ ಬಹುಮುಖ್ಯ ಸ್ಥಾನಗಳನ್ನು ವಶಪಡಿಸಿಕೊಂಡು ವ್ಯಾಪಾರಕ್ಕೂ ಮತ್ತು ಇತರ ಕಾರ್ಯಗಳಿಗೂ ಸುಸೂತ್ರವಾಗಿ ಕೈಹಾಕಿದರು. ವ್ಯಾಪಾರನಿಮಿತ್ತದಿಂದ ನಮ್ಮ ನೆಲದಲ್ಲಿ ಕಾಲಿಟ್ಟ ಇಂಗ್ಲೀಷರು, ಡಚ್ಚರು ಮತ್ತು ಫ್ರೆಂಚರನ್ನು ಅನುಸರಿಸಿ, ರಾಜ್ಯ ಕಟ್ಟುವುದಕ್ಕೂ ಮನಸ್ಸು ಮಾಡಿದರು. ಆಗಣ ಭಾರತವರ್ಷದ ರಾಜಕೀಯ ರಂಗದಲ್ಲಿದ್ದ ಅವ್ಯವಸ್ಥೆ ಮತ್ತು ದುರವಸ್ಥೆಗಳೂ ಅವರ ಉದ್ಯಮಾಗ್ನಿಗೆ ತುಪ್ಪವನ್ನು ಹೊಯ್ದುವು.

ಕಂಪನಿಯವರಿಗೆ ರಾಜ್ಯ ಕಟ್ಟಲು ಇಚ್ಛೆಯಿರಲಿಲ್ಲ. ವ್ಯಾಪಾರ ಮಾತ್ರ ಅವರ ಆಸೆಯಾಗಿದ್ದಿತು. ಏನೋ ಸನ್ನಿವೇಶದ ಅಂಕುಶದ ತಿವಿತಕ್ಕೆ ಸಿಕ್ಕಿ ಮನಸ್ಸಿಲ್ಲದ ಮನಸ್ಸಿನಿಂದ ನಮ್ಮ ಉದ್ಧಾರಕ್ಕಾಗಿ ಅವರು ರಾಜ್ಯಸ್ಥಾಪನೆ ಮಾಡಬೇಕಾಯಿತು - ಎಂದು ಮೊದಲಾಗಿ ಯಾರೂ ಭಾವಿಸದಿರಲಿ. ಸನ್ನಿವೇಶವೇನೋ ಸ್ವಲ್ಪಮಟ್ಟಿಗೆ ಅವರ ಉದ್ಯಮಕ್ಕೆ ಪ್ರೋತ್ಸಾಹ ಕೊಟ್ಟಿತೆಂಬುದು ನಿಜ. ಆದರೆ ಅದು ಮುಖ್ಯವಲ್ಲ. ಅವರು ೧೬೮೮ರಲ್ಲಿ ಮಾಡಿಕೊಂಡ ನಿರ್ಣಯವನ್ನು ನೋಡಿದರೆ ಗುಟ್ಟು ಬಯಲಿಗೆ ಬೀಳುತ್ತದೆ: “ಎಂತಹ ನಾಗರಿಕ ಮತ್ತು ಸೈನಿಕ ಸಂಸ್ಥೆಗಳನ್ನು

ನಿರ್ಮಿಸಬೇಕೆಂದರೆ, ಇಂಡಿಯಾ ದೇಶದಲ್ಲಿ ಆಂಗ್ಲೇಯ ಚಕ್ರಾಧಿಪತ್ಯವೊಂದು ಶಾಶ್ವತವಾಗಿ ನಿಲ್ಲುವಂತಿರಬೇಕು" ಎಂದು ಹೇಳುತ್ತದೆ ಆ ನಿರ್ಣಯ.

ಅನೇಕ ನೆವಗಳನ್ನು ಕಾರಣ ಮಾಡಿಕೊಂಡು, ಇಂಗ್ಲೀಷರು, ಪೋರ್ಚುಗೀಸರ, ಡಚ್ಚರ ಮತ್ತು ಫ್ರೆಂಚರ ಪ್ರಾಬಲ್ಯವನ್ನು ಮುರಿದು, ಶಿಥಿಲವಾಗುತ್ತಿದ್ದ ಭಾರತೀಯ ರಾಜಕೀಯ ಬಲಗಳನ್ನು ಚತುರೋಪಾಯಗಳಿಂದ ನೆಲಕ್ಕೆ ತಳ್ಳಿ, ನೇರವಾಗಿ ವಕ್ರವಾಗಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸತ್ಯವಾಗಿ ಅಸತ್ಯವಾಗಿ ಧಾರ್ಮಿಕವಾಗಿ ಅಧಾರ್ಮಿಕವಾಗಿ, ಬೆಳ್ಳಗೊಮ್ಮೆ ಕೆಂಪಗೊಮ್ಮೆ, ಹಗಲೊಮ್ಮೆ ಇರುಳೊಮ್ಮೆ ನಾನಾ ತಂತ್ರ ಕುತಂತ್ರಗಳಿಂದಲೂ ನಿರಂತರ ರಾಜಕೀಯ ವಿದ್ಯೆ ಮತ್ತು ಸಮರ ನೀತಿಯ ಪ್ರಭಾವದಿಂದಲೂ ಪ್ರಯಾಸದಿಂದಲೂ ನಿರುಪಮ ಸಾಹಸದಿಂದಲೂ ಶ್ರೇಷ್ಠತರವಾದ ಹತ್ತೊಂಬತ್ತನೆಯ ಶತಮಾನವು ಅರ್ಧಮುಕ್ಕಾಲು ಮುಗಿಯುವುದರೊಳಗಾಗಿ ಭರತಖಂಡದಲ್ಲಿ ಬ್ರಿಟಿಷ್ ಚಕ್ರಾಧಿಪತ್ಯದ ವಿಜಯ ವೈಜಯಂತಿಯನ್ನು ನೆಟ್ಟು ಮುಗಿಲು ಮುಟ್ಟುವಂತೆ ಎತ್ತಿ ಹಿಡಿದರು.

ಇಂಗ್ಲೀಷರು ಸಿಪಾಯಿ ದಂಗೆ ಎಂದೂ, ಭಾರತೀಯರು ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದೂ ಕರೆಯುವ ೧೮೫೭ನೆಯ ರಾಷ್ಟ್ರೀಯ ಕ್ರಾಂತಿ ನಿಷ್ಕರುಣೆಯಿಂದ ಪದದಲಿತವಾದಮೇಲೆ ಅದುವರೆಗೆ ಕಂಪೆನಿಯ ವಶದಲ್ಲಿದ್ದ ಭರತಖಂಡವು ೧೮೫೮ರಲ್ಲಿ ಇಂಗ್ಲೆಂಡ್ ರಾಣಿಯ ಸ್ವಂತ ಆಡಳಿತಕ್ಕೆ ಹೋಯಿತು. ಅಂದಿನಿಂದ ಚಕ್ರವರ್ತಿನಿ ಎಂಬ ಬಿರುದುವೊತ್ತ ಆ ಮಹಾರಾಜ್ಞಿ ಪಶುಬಲಿಯಾದ ಮೇಲೆ ಯಜ್ಞಾಂತ್ಯದಲ್ಲಿ ಶಾಂತಿಪಾಠ ಹೇಳುವಂತೆ ಕರುಣೆಯ, ಭರವಸೆಯ, ರಕ್ಷಣೆಯ, ಔದಾರ್ಯದ, ಆಶೀರ್ವಾದದ, ಶಾಂತಿಯ ಉದಾತ್ತ ನಿರೂಪಣೆಯನ್ನು ಹೊರಡಿಸಿ ಇಂಡಿಯಾ ದೇಶವನ್ನು ಭಾರತೀಯರ ಒಳ್ಳೆಯದಕ್ಕಾಗಿ ಆಳತೊಡಗಿದಳು.

ಆ ಮಹಾ ನಿರೂಪದ ಒಕ್ಕಣೆಯ ಸಾರವಿದು:

"ಇರುವ ರಾಜ್ಯವನ್ನು ಇನ್ನೂ ವಿಸ್ತರಿಸಬೇಕೆಂಬಾಸೆ ನಮಗಿಲ್ಲ.... ದೇಶೀಯ ರಾಜರುಗಳ ಹಕ್ಕುಬಾಧ್ಯತೆಗಳನ್ನೂ ಗೌರವವನ್ನೂ ನಮ್ಮ ಹಕ್ಕು ಬಾಧ್ಯತೆ ಗೌರವಗಳಿಗೆ ಸರಿಸಮವೆಂದು ಭಾವಿಸಿ ಗೌರವಿಸುತ್ತೇವೆ.... ಮತಭೇದವೆಣಿಸದೆ ಸರ್ವರಿಗೂ ಸಮಾನತೆಯಿರಬೇಕೆಂದೂ ಕಾನೂನಿನ ದೃಷ್ಟಿಯಲ್ಲಿ ಮತದ ನೆವದಿಂದಾಗಲಿ ಆಚಾರದ ನೆವದಿಂದಾಗಲಿ ಯಾರೊಬ್ಬರಿಗೂ ಪಕ್ಷಪಾತವನ್ನಾಗಲಿ ಅಥವಾ ಪಕ್ಷಘಾತವನ್ನಾಗಲಿ ಮಾಡಕೂಡದೆಂದೂ ನಮ್ಮ ರಾಜಚಿತ್ತವಿದೆ ಯೆಂದೂ ಸಾರುತ್ತೇವೆ... ನಮ್ಮ ಪ್ರಜೆಗಳಿಗೆ ಅವರು ಯಾವ ಜನಾಂಗದವರಾಗಲಿ ಯಾವ ಧರ್ಮದವರಾಗಲಿ ವಿದ್ಯಾಸಾಮರ್ಥ್ಯ ಕರ್ತವ್ಯ ಬುದ್ಧಿಗಳಿದ್ದರೆ, ಭೇದವಿಲ್ಲದೆ ಸ್ಥಾನಮಾನ ಗೌರವಾಧಿಕಾರಗಳು ದೊರೆಯುತ್ತವೆಂದೂ ಎಲ್ಲರೂ ತಿಳಿಯುವಂತೆ ಸಾರುತ್ತೇವೆ."

ಈ ಕೊಟ್ಟ ಮಾತುಗಳಲ್ಲಿ ಕೆಲವು ನೆರವೇರಿವೆ. ಮತ್ತೆ ಕೆಲವು ಇನ್ನೂ ಸಾರ್ಥಕವಾಗುವುದರಲ್ಲಿವೆ.

ಅಂತೂ ಜಗನ್ನಿಯಂತೃ ಶಕ್ತಿ ಕಡಲರಾಣಿಯ ಮತ್ತು ಭಾರತಾಂಬೆಯ ಜೀವನ ಸೂತ್ರಗಳನ್ನು ಹೆಣೆದುಬಿಟ್ಟಿತು. ಒಂದು ದೃಷ್ಟಿಯಿಂದ ಅದನ್ನು ನಮ್ಮ ದೌರ್ಬಲ್ಯದ ಸೂಚನೆಯೆಂದು ಭಾವಿಸಿ ಮರುಗಿದರೂ, ಮತ್ತೊಂದು ದೃಷ್ಟಿಯಿಂದ ಅದನ್ನು

ನಮ್ಮ ಪುಣ್ಯಕ್ಕೂ ಮತ್ತು ಪುರೋಭಾಗ್ಯಕ್ಕೂ ಕಾರಣವಾದ ಮಂಗಲ ಘಟನೆ ಎಂದು ತಿಳಿದು ಹಿಗ್ಗಬೇಕಾಗುತ್ತದೆ. ಉಷ್ಣವಲಯದ ಬಿಸಿಲಿಗೆ ಬತ್ತಿ, ಹರಿಯದೆ ನಿಂತುಹೋಗಿ, ಪಾಚಿ ಹಬ್ಬಿ, ಹುಳುವಾಗಿ, ಕೊಳಕಾದ ಹೊಲೆಗೆರೆಯಂತಿದ್ದ ಭಾರತದ ಬಾಳಿಗೆ ನವೀನವಾದ ಶೈತ್ಯವನ್ನೂ ಚೈತನ್ಯವನ್ನೂ ಕಾರ್ಯೋತ್ಸಾಹ ನೈಪುಣ್ಯಗಳನ್ನೂ ಮೂಢಮತ ವಿಧ್ವಂಸಕವಾದ ವೈಜ್ಞಾನಿಕ ಮತಿಯನ್ನೂ ಒಳಗೊಂಡ ಪಾಶ್ಚಾತ್ಯ ಜೀವನ ಪರ್ವತದ ನಿರ್ಝರಿಣಿಯ ಹೊಸ ನೀರು ಧುಮುಕಿದಂತಾಯಿತು! ಈ ಪ್ರವಾಹದ ರಭಸದಲ್ಲಿ ಪಾಚಿಯೊಡನೆ ಹಲ ಕೆಲವು ತಾವರೆ ಹೂವುಗಳೂ ಕೊಚ್ಚಿಹೋಗುವುದನ್ನು ನೋಡುತ್ತೇವೆ. ಆದರೆ ಅದು ಅನಿವಾರ್ಯ. ಅಲ್ಲದೆ, ನಿರ್ಮಲವಾದ ಜೀವನದಿಂದ ಮತ್ತೆ ಮೊದಲಿಗಿಂತಲೂ ಮನೋಹರವಾದ ತಾವರೆ ಹೂವುಗಳು ಮೂಡುವುದನ್ನೂ ಕಾಣುತ್ತೇವೆ.

ಅದನ್ನೊಂದು ಪುಣ್ಯ ನವಜೀವನ ಗರ್ಭಿತವಾದ ಸುಮುಹೂರ್ತವೆಂದು ಒಪ್ಪಿಕೊಳ್ಳಲೇಬೇಕಾಗುತ್ತದೆ: ೧೮೩೫ನೆಯ ಮಾರ್ಚಿ ೭ನೆಯ ತೇದಿ. ಶ್ರೀ ರಾಮಕೃಷ್ಣ ಪರಮಹಂಸರು ಹುಟ್ಟುವುದಕ್ಕೆ ಇನ್ನೂ ಸ್ವಲ್ಪ ಹೆಚ್ಚು ಕಡಿಮೆ ಒಂದು ಸಂವತ್ಸರ ವಿತ್ತು. ಗೌವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕನ ಆಳ್ವಿಕೆಯಲ್ಲಿ ಲಾರ್ಡ್ ಮೆಕಾಲೆಯ ಸಲಹೆಯಂತೆ ಇಂಗ್ಲಿಷು ಭಾಷೆ ಸಮಸ್ತ ಭರತಖಂಡದ ರಾಜಭಾಷೆಯಾಗಬೇಕೆಂದು ನಿರ್ಣಯವಾಯಿತು. ಮೆಕಾಲೆ ವಿಸ್ತಾರದಲ್ಲಿಯೂ ವಿಜೃಂಭಣೆಯಲ್ಲಿಯೂ ವಿಶೇಷಾಟೋಪ ಗರ್ಜನೆಗಳಲ್ಲಿಯೂ ಸಮುದ್ರವನ್ನು ಹೋಲುತ್ತಿದ್ದರೂ ಆತನಲ್ಲಿ ಅದರ ಗಾಂಭೀರ್ಯವಾಗಲಿ ಆಳವಾಗಲಿ ಇರಲಿಲ್ಲ. ಸುಸಂಸ್ಥಿತವಾದ ರಾಜಕೀಯರಂಗದಲ್ಲಿ ಅಂತಹ ಎರಡನೆಯ ದರ್ಜೆಯವರೇ ಬಹುಬೇಗನೆ ಮೇಲಕ್ಕೇರುತ್ತಾರೆ. ಅವರ ಮಾತೂ ನಡೆಯುತ್ತದೆ. ಕೈಯೆತ್ತುವುದರಿಂದಲೂ ಕೈಚಪ್ಪಾಳೆಯಿಂದಲೂ ಓಟುಗಳಿಂದಲೂ ಶ್ರೇಷ್ಠತೆಯನ್ನು ಗೊತ್ತು ಮಾಡುವ ಈ ಯುಗದಲ್ಲಿ ವೀಣೆಗಿಂತಲೂ ಡಮರುಗಳಿಗೇ ಶೀಘ್ರವಾಗಿ ಪಟ್ಟಾಭಿಷೇಕವಾಗುವುದರಲ್ಲಿ ಆಶ್ಚರ್ಯವೇನಿಲ್ಲ.

ಮೆಕಾಲೆ ತನ್ನ ಪ್ರಸಿದ್ಧವಾದ ವರದಿಯಲ್ಲಿ "ಐರೋಪ್ಯ ಸಾಹಿತ್ಯ ಮತ್ತು ವಿಜ್ಞಾನಗಳನ್ನು ದೇಶೀಯ ಜನರಲ್ಲಿ ಪ್ರಚಾರ ಮಾಡುವುದು ಬ್ರಿಟಿಷ್ ಸರ್ಕಾರದ ಮಹೋದ್ದೇಶವಾಗಬೇಕು. ಮತ್ತು ವಿದ್ಯಾಭ್ಯಾಸಕ್ಕಾಗಿ ವ್ಯಯಮಾಡುವ ಹಣವನ್ನೆಲ್ಲ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಮಾತ್ರ ವಿನಿಯೋಗಿಸಿದರೆ ಉತ್ತಮೋತ್ತಮ ಫಲವಾದೀತು." "ಉತ್ತಮ ಐರೋಪ್ಯ ಸಾಹಿತ್ಯದ ಒಂದು ಪುಟ್ಟ ಪುಸ್ತಕ ಭಂಡಾರ ಇಂಡಿಯಾ ಮತ್ತು ಅರೇಬಿಯಾ ದೇಶಗಳ ಸರ್ವ ಸಾಹಿತ್ಯ ಸಮೂಹಕ್ಕಿಂತಲೂ ಘನತರವಾದುದು." "ಇಂಗ್ಲಿಷ್ ಭಾಷೆಯನ್ನೂ ಪಾಶ್ಚಾತ್ಯ ಸಂಸ್ಕೃತಿಯನ್ನೂ ಯಾರು ಅರಿಯುತ್ತಾರೊ ಅವರು ಸರ್ವದೇಶದ ಸರ್ವಕಾಲದ ಸಮಸ್ತ ಶ್ರೇಷ್ಠ ಜನಾಂಗಗಳ ಅತ್ಯಂತ ಶ್ರೇಷ್ಠತಮ ಮಾನಸಿಕ ಸಂಪತ್ತಿಗೆ ಹಕ್ಕುದಾರರಾಗುತ್ತಾರೆ" ಎಂದು ಮೊದಲಾಗಿ ಅಲಂಕಾರೋಜ್ವಲವಾಗಿ ಕೂಗಾಡಿಬಿಟ್ಟಿದ್ದಾನೆ.

ಮೇಲಿನ ಉದ್ಗಾರದ ಕೆಲವಂಶದಲ್ಲಿ ಮೆಕಾಲೆಯ ವಿದ್ವತ್ತು ದೂರದೃಷ್ಟಿಗಳು ವ್ಯಕ್ತವಾಗುವಂತೆ ಉಳಿದಂಶದಲ್ಲಿ ಭ್ರಾಂತಿ, ಮೂರ್ಖತೆ, ಸ್ವದೇಶ ಸ್ವಭಾಷೆ ಸ್ವಸಂಸ್ಕೃತಿಯ ಮೋಹಾಂಧತೆಯಿಂದ ಹುಟ್ಟಿದ ಕುಬ್ಜದೃಷ್ಟಿಗಳು ರಾರಾಜಿಸುತ್ತವೆ. ಇಂಡಿಯಾ ಅರೇಬಿಯಾ ಸಾಹಿತ್ಯಗಳ ವಿಚಾರದಲ್ಲಿ ಅವನು ಸಂಪೂರ್ಣವಾಗಿ ಅಲ್ಲದಿದ್ದರೂ ಬಹುಮಟ್ಟಿಗೆ ಅಜ್ಞಾನಿ. ಅಜ್ಞಾನದ ಮಾತುಗಳನ್ನು ನಾವು ಲೆಕ್ಕಿಸದಿರಬಹುದು. ಆದರೆ ಇಂಗ್ಲಿಷ್ ಭಾಷಾ ಪರಿಚಯದ ವಿಚಾರದಲ್ಲಿ ಅವನ ಮಾತುಗಳನ್ನು ನಾವೀಗಲೂ ಒಪ್ಪಿಕೊಳ್ಳಬೇಕಾಗುತ್ತದೆ.

ಹೀಗೆ ಭಾರತವರ್ಷವೆಲ್ಲವೂ ಬ್ರಿಟಿಷ್ ರಾಜ್ಯಭಾರ ಸೂತ್ರದಿಂದ ಒಂದುಗೂಡಿದಂತೆ ಇಂಗ್ಲಿಷ್ ಭಾಷಾಸೂತ್ರದಿಂದಲೂ ಒಂದಾಯಿತು. ನಮ್ಮ ದೇಶಕ್ಕೆ ಪ್ರಾಯಶಃ ಹಿಂದೆ ಎಂದೂ ಇಂತಹ ಏಕರಾಜ್ಯ ಮತ್ತು ಏಕಭಾಷೆಗಳ ಐಕಮತ್ಯ ದೊರೆತಿರಲಿಲ್ಲ. ಆ ಒಂದು ವಿಚಾರದಲ್ಲಿ ನಾವು ಪೆಚ್ಚು ತಿಂದೆವೆಂದು ಬ್ರಿಟಿಷ್ ರಾಜ್ಯತಂತ್ರಜ್ಞರು ಹಿಂದೆಯೂ ಹೇಳಿಕೊಂಡಿದ್ದಾರೆ; ಇಂದೂ ಹೇಳಿಕೊಳ್ಳುತ್ತ ಕೈ ಕೈ ಹಿಸುಕಿಕೊಳ್ಳುತ್ತಿದ್ದಾರೆ. ಈ ದೃಷ್ಟಿಯಿಂದ ಲಾರ್ಡ್ ಮೆಕಾಲೆಗೆ ಭರತಖಂಡವು ಚಿರಋಣಿ!

ಪಾಶ್ಚಾತ್ಯ ಸಂಸ್ಕೃತಿಯ ಮೋಹಿನಿ ಯಾವ ದಿನ ಭಾರತೀಯರ ನಯನ ಸಮ್ಮುಖದಲ್ಲಿ ಸುರಂಜಿತ ಸುರಚಾಪದಂತೆ ವಿವಿಧ ವೈಚಿತ್ರ್ಯಮಯ ದೃಶ್ಯಗಳಿಂದ ನಲಿದಾಡತೊಡಗಿದಳೋ ಆ ದಿನವೇ ಭರತಖಂಡದ ಇತಿಹಾಸದಲ್ಲಿ ಒಂದು ನವೀನ ಅಧ್ಯಾಯ ಆರಂಭವಾಯಿತು. ಪ್ರಾಚ್ಯ ಪಾಶ್ಚಾತ್ಯ ಆದರ್ಶಗಳ ಪರಸ್ಪರ ಸಂಘರ್ಷಣೆ ಮೊತ್ತಮೊದಲು ಆರಂಭವಾದುದು ವಂಗದೇಶದಲ್ಲಿ. ಅದರಲ್ಲಿಯೂ ಭಾರತವರ್ಷದ ನವರಾಜಧಾನಿಯಾಗಿದ್ದ ಕಲ್ಕತ್ತಾ ನಗರದಲ್ಲಿ. ಈ ಎರಡು ಸಂಸ್ಕೃತಿಗಳ ಪರಸ್ಪರ ಕ್ರಿಯೆ ಪ್ರತಿಕ್ರಿಯೆಗಳು ವಂಗದೇಶದಲ್ಲಿ ಪ್ರಬಲಾಕಾರವನ್ನು ಧಾರಣೆಮಾಡಿದುವು. ನಿಶ್ಚಲವಾಗಿದ್ದ ಹಿಂದೂ ಸಮಾಜವು ಸಮಾಜ ಸಂಸ್ಕಾರಕರ ಪ್ರಹಾರಗಳಿಂದ ಅಲ್ಲೋಲಕಲ್ಲೋಲವಾಯಿತು.

ಭಾರತವರ್ಷದಲ್ಲಿ ಆಂಗ್ಲೇಯ ಸಾಮ್ರಾಜ್ಯವು ಸಂಸ್ಥಾಪಿತವಾಗುತ್ತಿದ್ದಾಗಲೆ ಕ್ರೈಸ್ತಧರ್ಮ ಪ್ರಚಾರಕ್ಕಾಗಿ ಕ್ರೈಸ್ತಪಾದ್ರಿಗಳು ಹಿಂಡು ಹಿಂಡಾಗಿ ಇಂಗ್ಲೆಂಡಿನಿಂದ ಇಂಡಿಯಾ ದೇಶಕ್ಕೆ ನುಗ್ಗತೊಡಗಿದರು. ಬಂದವರು ಮೊದಮೊದಲು ವಿದ್ಯಾ ಪ್ರಚಾರಕ್ಕೆ ಕೈಹಾಕಿದರು. ಕ್ರಮೇಣ ವಿದ್ಯೆಯ ಜೊತೆಗೆ ಮತಬೋಧನೆ ಮಾಡಲಾರಂಭಿಸಿದರು. ಅಲ್ಲಲ್ಲಿ ವಿದ್ಯಾಲಯಗಳನ್ನು ನಿರ್ಮಿಸಿದರು. ಓದು ಕಲಿಯಲು ಶಾಲೆಗೆ ಬಂದ ಮಕ್ಕಳ ಎಳೆಯೆದೆಗಳ ಮೇಲೆ ಕ್ರೈಸ್ತಮತದ ಮುದ್ರೆಯನ್ನು ಮೆಲ್ಲಮೆಲ್ಲನೆ ಒತ್ತತೊಡಗಿದರು. ತರುವಾಯ ಭಾರತಮಾತೆಯ ತರುಣ ಪುತ್ರರ ಹೃದಯಗಳಲ್ಲಿ ಸ್ವಧರ್ಮ ವಿದ್ವೇಷದ ವಿಷಬೀಜಗಳನ್ನು ಬಿತ್ತುವ ಸಾಹಸಕ್ಕೆ ಕೈಯಿಟ್ಟರು. ಪ್ರಾಚೀನ ಹಿಂದೂ ಸಮಾಜವು ಸನಾತನ ಕಾಲದಿಂದಲೂ ಯಾವ ಯಾವ ಆಚಾರ ವ್ಯವಹಾರ ರೀತಿ ನೀತಿಗಳನ್ನು ಪವಿತ್ರ ಎಂದು ಪರಿಗಣಿಸುತ್ತಿದ್ದಿತೋ ಅವುಗಳೆಲ್ಲವೂ ಭಯಾವಹವಾದ ಪೈಶಾಚಿಕತಾಪೂರ್ಣವಾದುವು ಎಂದು ಸಾರಿದರು. ಹಿಂದೂ ಮತವನ್ನು ಅನುಸರಿಸಿದರೆ ಇಹಲೋಕದ ಸುಖದಿಂದಲೂ ವಂಚಿತರಾಗಿ ಪರಲೋಕದಲ್ಲಿ ಅನಂತ ನರಕಭಾಜನರಾಗುವರು ಎಂದು ಬೋಧಿಸಿದರು. ಹಿಂದೂಧರ್ಮವನ್ನು ನಿಂದಿಸುವುದಕ್ಕೆ ಇದ್ದ ಹಾದಿಗಳಲ್ಲಿ ಒಂದನ್ನಾದರೂ ಬಿಡಲಿಲ್ಲ. ಘನೀಕೃತವಾದ ದುರ್ನೀತಿಯೆ ಹಿಂದೂಧರ್ಮ, ಮೈಗೊಂಡ ದುರಾಚಾರವೆ ಹಿಂದೂಧರ್ಮ, ಪಾಪದ ಮುದ್ದೆಯೆ ಹಿಂದೂಧರ್ಮ ಎಂದು ಬಾಯಿಗೆ ಬಂದಂತೆಲ್ಲ ಶಪಿಸತೊಡಗಿದರು.

ಪ್ರಾಚೀನ ಸಮಾಜವು ಮಾತ್ರ ನಿಶ್ಚಲವಾಗಿತ್ತು! ಏನೊಂದು ಮಾತನ್ನೂ ಅಡಲಿಲ್ಲ. ಬಾಯಲ್ಲಿಯೇ ಶಪಿಸುತ್ತ, ಒಳಗೊಳಗೆ ಗೊಣಗುಡುತ್ತ, ಸಾಮಾನ್ಯಜನರು ಅಂತೂ ಇಂತೂ ಮುಂಡದ ಮೇಲೆ ರುಂಡಗಳನ್ನು ಇಟ್ಟುಕೊಂಡಿದ್ದರು. ಶ್ರೀಮಂತರು ಅಶ್ಲೀಲವಾದ ಅಮೋದಪ್ರಮೋದಗಳಲ್ಲಿ ತೊಡಗಿದ್ದರು. ಬ್ರಾಹ್ಮಣ ಪಂಡಿತ ವರ್ಗದವರು ಶ್ರೀಮಂತೋಪಾಸನೆ ದೇಶಾಚಾರ ಲೋಕಾಚಾರ ಸ್ತ್ರೀಆಚಾರ ಇವೇ ಮೊದಲಾದವುಗಳನ್ನು ಪರಿಪಾಲಿಸುತ್ತಾ ನಿಶ್ಚಿಂತಾಲಸ್ಯದಿಂದ ಜೀವನಯಾಪನ ಪರಾಯಣರಾಗಿದ್ದರು. ಈ ಸಮಯದಲ್ಲಿ ಮೇಧಾವಿಯಾದ

ಮಹಾಪುರುಷನೊಬ್ಬನು ಆವಿರ್ಭೂತವಾದನು. ಬಂಗಾಳಿಗಳು ಮಂಜು ಮುಸುಕಿದ ತಮ್ಮ ಕಣ್ಣಳನ್ನು ನಸುದೆರದು ನೋಡಿದರು. ರಿಕ್ತಗಗನದಲ್ಲಿ ರಕ್ತಾಲೋಕಮಂಡಿತವಾದ ಒಂದು ಮಹಾ ಜ್ವಾಲಾನಕ್ಷತ್ರ: ಮಹಾಮನೀಷಿಯಾದ ರಾಜಾ ರಾಮಮೋಹನರಾಯ!

ಕ್ರಿ.ಶ. ೧೮೧೪ರಲ್ಲಿ ರಾಮಮೋಹನರಾಯರು ರಾಮಪುರದಿಂದ ಕಲ್ಕತ್ತಾಕ್ಕೆ ಬಂದು ಆತ್ಮೀಯ ಸಭಾ ಎಂಬ ಸಭೆಯನ್ನು ಸ್ಥಾಪಿಸಿ ವೇದಾಂತ ವಿಚಾರ ಮಾಡಲು ತೊಡಗಿದನು. ವಂಗದೇಶದಲ್ಲಿ ಸಾರ್ವಜನಿಕವಾಗಿ ಮತ್ತು ಬಹಿರಂಗವಾಗಿ ವೇದಾಂತಾಲೋಚನೆಗೆ ಪ್ರಾರಂಭವಾದುದು ಅದೇ ಮೊತ್ತಮೊದಲು. ರಾಮಮೋಹನರಾಯರು ದೇಶದ ದುರವಸ್ಥೆಯನ್ನು ತಿಳಿದು ಸ್ವಭಾವವನ್ನು ಪರಿಶೀಲಿಸಿ ಅನುಕೂಲ ಪ್ರತಿಕೂಲಗಳನ್ನು ಸಮಾಲೋಚಿಸಿ ಕರ್ತವ್ಯಕಾರ್ಯಕ್ಕೆ ಕೈಹಾಕಿದನು. ಜೊತೆಗೆ ಆಂಗ್ಲೇಯ ವಿದ್ಯಾಪ್ರಚಾರ ಮಾಡುವುದಕ್ಕೂ ಕಂಕಣಬದ್ಧನಾಗಿ ನಿಂತನು. ಒಂದು ಕಡೆ ಸಮಾಜದ ಧರ್ಮಸಂಸ್ಕಾರಕ್ಕಾಗಿ ವೇದಾಂತ ಪ್ರಚಾರ ಮಾಡುತ್ತ ಮೂರ್ತಿಪೂಜೆ ನಿಷ್ಪ್ರಯೋಜನವೆಂದು ಅದನ್ನು ತಿರಸ್ಕರಿಸಿದನು. ಮತ್ತೊಂದು ಕಡೆ ವೇದಾಂತದಲ್ಲಿ ಹೇಳಿರುವುದು ಏಕೇಶ್ವರವಾದವೊಂದೇ ಎಂದು ಘೋಷಣ ಮಾಡಿದನು. ಇದರಿಂದ ಮಲಗಿ ನಿದ್ರಿಸುತ್ತಿದ್ದ ಪ್ರಾಚೀನ ಹಿಂದೂ ಸಮಾಜ ಮೈತಿಳಿದು ಪ್ರತಿಭಟಿಸಲು ಮೇಲೆದ್ದಿತು. ಆಂಗ್ಲೇಯ ವಿದ್ಯಾಪ್ರಚಲನಕ್ಕೆ ವಿರುದ್ಧವಾಗಿ ಅನೇಕರು ಸಾಹಸ ಮಾಡಿದರು. ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ರಾಜಾ ರಾಮಮೋಹನರಾಯನು ಒಂದಿನಿತೂ ಎದೆಗೆಡಲಿಲ್ಲ.

ಯಾವಾಗ ರಾಮಮೋಹನನು ವೇದಾಂತ ಪ್ರಚಾರ ಮಾಡತೊಡಗಿ ಸನಾತನ ಧರ್ಮಚ್ಯುತರಾಗಲಿದ್ದ ಯುವಕರಲ್ಲಿ ಕೆಲವರನ್ನು ತನ್ನ ಕಡೆಗೆ ಸೆಳೆಯತೊಡಗಿದನೋ ಆಗ ಕ್ರೈಸ್ತಪಾದ್ರಿಗಳು ಭೀತರಾದರು. ವೇದಾಂತ ತತ್ತ್ವವು ಯೇಸುರಾಜ್ಯ ಸ್ಥಾಪನೆಗೆ ದೊಡ್ಡ ಕಂಟಕವೆಂದು ತಿಳಿದು ಅದನ್ನು ಎದುರಿಸಿ ಖಂಡಿಸಲೆಳಸಿದರು. ರಾಯನೂ ಧೀರಭಾವದಿಂದ ಮಿಷನರಿಗಳ ಅಯುಕ್ತವಾದ ಮತಗಳನ್ನೆಲ್ಲ ಒಂದೊಂದಾಗಿ ಖಂಡಿಸತೊಡಗಿದನು. ರಾಯನಿಗೂ ಪಾದ್ರಿಗಳಿಗೂ ಬಂದೊದಗಿದ ವಿಖ್ಯಾತವಾದ ಈ ವೇದಾಂತ ಯುದ್ಧವು ಪ್ರಸಿದ್ಧವಾದ ಒಂದು ಐತಿಹಾಸಿಕ ಘಟನೆಯಾಗಿದೆ. ರಾಯನ ಮೇಲೆ ಕ್ರೈಸ್ತಪಾದ್ರಿಗಳು ಮಾತ್ರವಲ್ಲದೆ ಸ್ವದೇಶಿಯರೂ ಕತ್ತಿಕಟ್ಟಿದರು. ಸಹಗಮನ ಪದ್ಧತಿಯನ್ನು ನಿಲ್ಲಿಸಲು ರಾಮಮೋಹನನು ಸೊಂಟಕಟ್ಟಿ ನಿಂತುದನ್ನು ಕಂಡು ಪ್ರಾಚೀನ ಸಮಾಜ ಮುಖಪಾತ್ರಸ್ವರೂಪನಾದ ರಾಧಕಾಂತನು ವಿರುದ್ಧವಾಗಿ ಆಂದೋಳನ ಮಾಡತೊಡಗಿದನು. ೧೮೨೮ರಲ್ಲಿ ನಿಯಮಿತ ರೂಪದಿಂದ ಮಂತ್ರಾಲೋಚನೆ ಮಾಡಲೋಸುಗ ಕೆಲವು ಜನ ಬಂಧುಮಿತ್ರರ ಸಂಗದಿಂದ "ಬ್ರಹ್ಮಸಭೆ"ಯನ್ನು ಸ್ಥಾಪಿಸಿ, ಅದ್ವಯ ಬ್ರಹ್ಮತತ್ತ್ವದ ಆಲೋಚನೆಯ ಜೊತೆಗೆ ಸಮಾಜ ಸುಧಾರಣೆಗೂ ರಾಮಮೋಹನನು ಕೈಯಿಟ್ಟನು. ರಾಧಾಕಾಂತನು ಬ್ರಹ್ಮಸಭೆಗೆ ಪ್ರತಿವಾದ ಸ್ವರೂಪವಾದ "ಧರ್ಮಸಭೆ"ಯನ್ನು ಸ್ಥಾಪಿಸಿದನು. ಕಡೆಗೂ ಪ್ರಾಚೀನ ಸಮಾಜದ ಪ್ರಯತ್ನ ವಿಫಲವಾಯಿತು. ೧೮೨೯ನೆಯ ಇಸವಿ ಡಿಸೆಂಬರ್ ೮ನೆಯ ತಾರೀಖಿನ ದಿನ ರಾಮಮೋಹನನ ಅವಿಶ್ರಾಂತ ಯತ್ನದಿಂದ ಸಹಗಮನ ನಿವಾರಣೆ ಸರಕಾರದ ಕಾಯಿದೆಯಾಯಿತು.

ಇತ್ತ ಕಾಲೇಜುಗಳಲ್ಲಿ ಓದುತ್ತಿದ್ದ ಹಿಂದೂ ತರುಣರು ಪಾಶ್ಚಾತ್ಯ ಶಿಕ್ಷಾದೀಕ್ಷಿತರಾಗಿ ಸ್ವೇಚ್ಛಾಚಾರಿಗಳಾಗಿ ಪುಂಡೆದ್ದರು. ಸ್ವಾತಂತ್ರ್ಯದ ಹೆಸರಿನಲ್ಲಿ ಸ್ವಾಚ್ಛಂದ್ಯವನ್ನು ಹಿಡಿದರು; ಅಭಕ್ಷ್ಯಭಕ್ಷಣ, ಸುರಾಪಾನ, ಮುಸಲ್ಮಾನರ ದುಖಾನೆಗಳಲ್ಲಿ

ಮಾಂಸಾಹಾರ ಮಾಡುವುದು ಇತ್ಯಾದಿ ದುರಾಚಾರಗಳನ್ನು ಸದಾಚಾರಗಳೆಂದು ಸಾಧಿಸುತ್ತ ಹಿರಿಯರನ್ನು ಹಂಗಿಸತೊಡಗಿದರು. ಕಾಲೇಜುಗಳಲ್ಲಿ ಕ್ರೈಸ್ತ ಅಧ್ಯಾಪಕರು ದುರಾಚಾರಿಗಳಾದ ಯುವಕರಿಗೆ ಉತ್ತೇಜನಕಾರಿಗಳಾದರು. ಫ್ರಾನ್ಸ್ ದೇಶದ ಮಹಾ ವಿಪ್ಲವದ ಅಗ್ನಿಜಲವನ್ನು ತಂದು ವಂಗ ಯುವಕರಿಗೆ ಪ್ರತಿಭಾಶಾಲಿಗಳಾದ ಅಧ್ಯಾಪಕರು ಮನೋಹರವಾಗಿ ಪಾನಮಾಡಿಸಿದರು. ನಾಸ್ತಿಕ್ಯ ಹಬ್ಬಿತು. ತರುಣರು ಮತ್ತರಾದರು. ಕ್ರಾಂತಿ ಸರ್ವತ್ರ ಚಲಿಸತೊಡಗಿತು. 'ಹಿಂದೂ' ಎಂದು ಹೆಸರಿದ್ದುದೆಲ್ಲ ಕುಸಂಸ್ಕಾರವೆಂದೂ, 'ಇಂಗ್ಲೀಷು' ಎಂದುದೆಲ್ಲ ಸುಸಂಸ್ಕಾರವೆಂದೂ ವಾದಿಸಿ ಕುಸಂಸ್ಕಾರ ಭಂಜನಾರ್ಥವಾಗಿಯೂ ಸುಸಂಸ್ಕಾರ ರಂಜನಾರ್ಥವಾಗಿಯೂ ತರುಣರು ಹೆಂಡದ ಹೊಳೆಯಲ್ಲಿ ಧುಮುಕತೊಡಗಿದರು. ಕಲ್ಕತ್ತಾ ನಗರವನ್ನು ಬಿಟ್ಟು ಬೇರೆ ಬೇರೆ ನಗರಗಳಿಗೆ ಹೋದ ಕೃತವಿದ್ಯರಾದ ವಿದ್ಯಾರ್ಥಿಗಳು ತಮ್ಮ ವಿನೂತನ ಧರ್ಮವನ್ನು ಅಲ್ಲಿಯೂ ಸಾರಿದರು. ವಿಷವಾತವು ದೇಶದ ಮೇಲೆಲ್ಲ ಬೀಸಿತು. ಇದನ್ನು ಕಂಡು ರಾಜಾ ರಾಮಮೋಹನರಾಯನು ದಿಗಿಲುಬಿದ್ದನು. ಕಾಲೇಜುಗಳಲ್ಲಿ ನೀತಿಬೋಧೆಯನ್ನು ಉಪಕ್ರಮಿಸಿದನು. ಆದರೆ ಅಷ್ಟರಲ್ಲಿಯೆ ಆತನು ವಿಲಾಯಿತಿಗೆ ಹೋಗಿ ಅಲ್ಲಿ ಕಾಲವಾದನು.

ರಾಮಮೋಹನರಾಯನು ಮಡಿದಮೇಲೆ ಆತನ "ಬ್ರಹ್ಮಸಭೆ" ರಾಮಚಂದ್ರ ವಿದ್ಯವಾಗೀಶನ ಅಧಿಕಾರದಲ್ಲಿ ಹಾಗೂ ಹೀಗೂ ಜೀವಧಾರಣೆ ಮಾಡಿಕೊಂಡಿತ್ತು. ೧೮೪೩ರಲ್ಲಿ ಅದು ಮಹರ್ಷಿ ದೇವೇಂದ್ರನಾಥ ಠಾಕೂರರ ಕೈಗೆ ಬಿತ್ತು. ಅವರು "ಬ್ರಾಹ್ಮಧರ್ಮ" ಎಂಬ ಅಭಿನವ ಧರ್ಮವನ್ನು ಬೋಧಿಸಿ, ಆ ಸಭೆಗೆ "ಬ್ರಾಹ್ಮಸಮಾಜ" ಎಂಬ ಹೆಸರನ್ನಿಟ್ಟರು. ಬ್ರಾಹ್ಮಧರ್ಮವು ಸ್ವಲ್ಪ ದೇಶೀ ಸ್ವಲ್ಪ ವಿದೇಶೀ ಆದರ್ಶಗಳ ಸಮುಚ್ಚಯವಾಗಿತ್ತು. ಅಂತೂ ಮಹರ್ಷಿಗಳ "ಬ್ರಾಹ್ಮಧರ್ಮ" ಪ್ರಚಾರವು ಕ್ರೈಸ್ತಮತಕ್ಕೆ ಸೇರುವುದರಲ್ಲಿದ್ದ ಬಹುಮಂದಿ ಯುವಕರನ್ನು ತನ್ನ ಕಡೆಗೆ ಸೆಳೆಯಿತು. ಆಗ ವಂಗ ಸಾಹಿತ್ಯ ಪ್ರಪಂಚದಲ್ಲಿ ವಿಖ್ಯಾತರಾಗಿದ್ದ ಅಕ್ಷಯಕುಮಾರದತ್ತ ಮತ್ತು ರಾಜನಾರಾಯಣ ವಸು ಎಂಬ ಇಬ್ಬರು ಪ್ರತಿಭಾಶಾಲಿಗಳು ಮಹರ್ಷಿಗಳೊಡನೆ ಸೇರಿಕೊಂಡರು. ಅದರಿಂದ ಬ್ರಾಹ್ಮ ಸಮಾಜದ ಶಕ್ತಿ ಪ್ರಭಾವಗಳು ಮತ್ತಷ್ಟು ಮಿಗಿಲಾದುವು. ಕ್ರೈಸ್ತಪಾದ್ರಿಗಳು ನೋಡುತ್ತಾರೆ. ಯೇಸುರಾಜ್ಯಕ್ಕೆ ಹೋಗುವ ಹೆದ್ದಾರಿಯಲ್ಲಿ ಬ್ರಾಹ್ಮ ಸಮಾಜವೆಂಬ ದೊಡ್ಡ ಪರ್ವತವು ಅಡ್ಡ ಬಂದು ನಿಂತಿದೆ! ಸರಿ, ಮರಳಿ ಹೋರಾಟಕ್ಕೆ ಪ್ರಾರಂಭವಾಯಿತು. ಕ್ರೈಸ್ತಪಾದ್ರಿಗಳು ಮೂವರು ಪ್ರತಿಭಾಶಾಲಿಗಳ ಮುಂದೆ ತಲೆಯೆತ್ತಿ ನಿಲ್ಲಲಾರದೆ ಹಿಂತಿರುಗಿದರು.

ಇದೇ ಸಮಯದಲ್ಲಿ ಮತ್ತೊಬ್ಬ ಶಕ್ತಿಶಾಲಿಯಾದ ಪುರುಷನು ವಂಗಸಮಾಜದಲ್ಲಿ ಮೂಡಿದನು. ಆತನೇ ವೀರಸಿಂಹ ಗ್ರಾಮದ ಸಿಂಹಶಿಶು! ಪಂಡಿತ ಈಶ್ವರಚಂದ್ರ ವಿದ್ಯಾಸಾಗರ! ವಿದ್ಯಾಸಾಗರನು ಪಾಶ್ಚಾತ್ಯ ನವನಾಗರಿಕತೆಯ ತಳುಕಿಗೆ ಮರುಳಾಗಲಿಲ್ಲ. ಪರದುಃಖಾ ಕಾತರಹೃದಯನಾದ ಈತನು ಇತರರಂತೆ ಧ್ವಂಸ ಮಾರ್ಗಾವಲಂಬಿಯಾಗದೆ ನಿರ್ಮಾಣ ಮಾರ್ಗಸ್ಥನಾದನು. ಪೋಷಕ ವೀಥಿಯಲ್ಲದೆ ನಾಶಕಮಾರ್ಗವು ಈತನಿಗೆ ಸರಿಬೀಳಲಿಲ್ಲ. ಬಾಲವಿಧವೆಯರ ಅಸಹನೀಯ ಕ್ಲೇಶಗಳನ್ನು ನೋಡಿದ ಈತನು ಹಿಂದೂ ಶಾಸ್ತ್ರಪದ್ಧತಿಯಂತೆ ವಿಧವಾ ವಿವಾಹ ದುರಾಚಾರವಲ್ಲ ಎಂಬ ತತ್ತ್ವಸಮರ್ಥನೆಗೆ ಕೈಹಾಕಿದನು. ಈತನ ಪ್ರಯತ್ನ ಸಾಹಸಗಳಿಂದ ವಿಧವಾ ವಿವಾಹ ಸರಕಾರದಿಂದ ನಿಯಮಬದ್ಧವಾಗಿ ಕಾಯಿದೆಯಾಯಿತು. ಇದರಿಂದ ಪ್ರಾಚೀನ ಸಮಾಜದಲ್ಲಿ ಗಲಭೆಯೆದ್ದಿತು. ಎಲ್ಲರ ದೃಷ್ಟಿಯೂ ವಿದ್ಯಾಸಾಗರ ಕಡೆಗೆ ತಿರುಗಿತು. ಎಲ್ಲರೂ ಆತನ ಮೇಲೆಯೆ ಕತ್ತಿ ಕಟ್ಟಲಾರಂಭಿಸಿದರು. ಈ ಮಧ್ಯೆ ಜನಗಳ ದೃಷ್ಟಿಗಮನಗಳು "ಬ್ರಾಹ್ಮಸಮಾಜ"ದಿಂದ ಸ್ವಲ್ಪ ಪರಾಙ್ಮುಖವಾದುವು.

೧೮೫೯ರಲ್ಲಿ ಯಾವ ದಿನ ಶ್ರೀಯುತ ಕೇಶವಚಂದ್ರಸೇನನು ತನ್ನ ಬಂಧುವರ್ಗ ಸಹಿತ ಬ್ರಾಹ್ಮಸಮಾಜವನ್ನು ಸೇರಿದನೋ ಅಂದಿನಿಂದ ಸಂಸ್ಕಾರಯುಗದಲ್ಲಿ ಒಂದು ನೂತನ ಅಧ್ಯಾಯ ಪ್ರಾರಂಭವಾಯಿತು. ಕೇಶವನು ಆಂಗ್ಲೇಯ ಸಮಾಜ ಪದ್ಧತಿಗಳನ್ನು ಚಾಚೂ ತಪ್ಪದೆ ಅನುಕರಣ ಮಾಡತೊಡಗಿದನು. ಸ್ತ್ರೀಸ್ವಾತಂತ್ರ್ಯ, ಯಜ್ಞೋಪವೀತ ಪರಿತ್ಯಾಗ, ಅಸವರ್ಣ ವಿವಾಹ ಮೊದಲಾದ ವಿನೂತನ ಮತಗಳನ್ನು ಬ್ರಾಹ್ಮಸಮಾಜದಲ್ಲಿ ಚಲಾಯಿಸಿದನು. ಮಹರ್ಷಿ ದೇವೇಂದ್ರನಾಥನು ತತ್ತ್ವವಿಚಾರ ಮಾಡುವುದರಲ್ಲಿ ಆಸಕ್ತನಾಗಿದ್ದನೆ ಹೊರತು ಆತನಿಗೆ ಸಮಾಜಸಂಸ್ಕಾರ ಕಾರ್ಯದಲ್ಲಿ ಅಷ್ಟೇನೂ ಅಭಿರುಚಿಯಿರಲಿಲ್ಲ. ಆತನಿಗೆ ಕೇಶವಚಂದ್ರಸೇನನ ನೂತನ ಮತಗಳು ಸರಿಬೀಳಲಿಲ್ಲ. ಆದರೂ ಆತನನೇನೂ ಮಾಡಲಾರದವನಾದನು. ಏಕೆಂದರೆ, ಕೇಶವನು ಅಸಾಧಾರಣ ವಾಗ್ಮಿಯಾಗಿದ್ದನು. ಆತನ ವಾಗ್ಝರಿಯ ಪ್ರಚಂಡ ಪ್ರವಾಹದ ವೇಗದಲ್ಲಿ ವಂಗದೇಶದ ಇಂತಹ ಸಂಸ್ಥೆಗಳು ಕೊಚ್ಚಿಹೋದುವು. ಯುವಕ ಬಂಗಾಳವು ಕೇಶವನ ಹಸ್ತಗತವಾಯಿತು. ಕೇಶವಚಂದ್ರನ ಸಾಹಸದಿಂದ ಅಸವರ್ಣ ವಿವಾಹವೂ ಸರಕಾರದಿಂದ ಅಂಗೀಕೃತವಾಗಿ ಕಾಯಿದೆಯಾಗಿ ಹೋಯಿತು. ಮಹರ್ಷಿಗಳಿಗೆ ಇದೆಲ್ಲ ಸರಿಬೀಳಲಿಲ್ಲ. ಬ್ರಾಹ್ಮಸಮಾಜವು ಒಡೆದು ಎರಡಾಯಿತು. ಮಹರ್ಷಿಗಳ ಪಕ್ಷ "ಆದಿ ಸಮಾಜ"ವಾಯಿತು. ಕೇಶವಚಂದ್ರನ ಪಕ್ಷ "ಭಾರತವರ್ಷೀಯ ಬ್ರಾಹ್ಮಸಮಾಜ"ವಾಯಿತು.

ಈ ಗಲಭೆಯಲ್ಲಿ ಪ್ರಾಚೀನ ಸಮಾಜದವರಾದ ಪಂಡಿತರು ಶಾಸ್ತ್ರಿಗಳು ಏನು ಮಾಡಿಯಾರು? "ಹರಿಸಭಾ" "ಧರ್ಮಸಭಾ" ಮೊದಲಾದವುಗಳನ್ನು ಸ್ಥಾಪಿಸಿ, ವಾಗ್ವಾದ ಭೂರಿಭೋಜನ ಸಂಕೀರ್ತನೆ ದಾನ ಮೊದಲಾದ ಮಹಾಕಾರ್ಯಗಳಿಂದ ತಮ್ಮ ಅಪ್ರತಿಹತ ಪ್ರತಿಭಟನೆಯನ್ನು ಪ್ರದರ್ಶಿಸಿದರು! ಒಂದು ಕಡೆ ಆದಿ ಸಮಾಜ, ಭಾರತವರ್ಷೀಯ ಬ್ರಾಹ್ಮಸಮಾಜ; ಒಂದು ಕಡೆ ಹರಿಸಭೆ ಧರ್ಮ ಸಭೆಗಳು; ಒಂದು ಕಡೆ ಕ್ರಿಸ್ತಸಭೆಗಳು, ಇತ್ತ ಮಹರ್ಷಿ ಕೇಶವರು; ಅತ್ತ ಪಾದ್ರಿಗಳು, ಇವರ ಮಧ್ಯೆ ಪಂಡಿತ ಈಶ್ವರಚಂದ್ರ ವಿದ್ಯಾಸಾಗರನೆ ಮೊದಲಾದ ಸ್ವತಂತ್ರ ವ್ಯಕ್ತಿಗಳು. ವಂಗಸಮಾಜವು ಅಲ್ಲೋಲಕಲ್ಲೋಲವಾಗಿ ಕಂಗೆಟ್ಟು ಗಡಿಬಿಡಿಯ ಮುದ್ದೆಯಾಯಿತು.

ಈ ರೀತಿ ವಂಗಸಮಾಜವು ಪ್ರಬಲವಾದ ಆಂದೋಳನಗಳ ಕ್ರಿಯೆ ಪ್ರತಿಕ್ರಿಯೆಗಳ ಬಿರುಗಾಳಿಯಲ್ಲಿ ಸಿಕ್ಕಿಬಿದ್ದು ವಿಕ್ಷೋಭಿತವಾಗುತ್ತಿರುವಾಗ ಕಲ್ಕತ್ತಾ ನಗರದ ಬಳಿಯಿರುವ ರಾಣಿ ರಾಸಮಣಿಯ ದಕ್ಷಿಣೇಶ್ವರ ದೇವಾಲಯದಲ್ಲಿ ಅಖ್ಯಾತನೂ ಅಜ್ಞಾತನೂ ಆದ ಪೂಜಾರಿ ಬ್ರಾಹ್ಮಣನೊಬ್ಬನು ಲೋಕಲೋಚನಗಳ ಅಂತರಾಳದಲ್ಲಿರುವ ತ್ರೈಲೋಕ್ಯಕಂಪನಕಾರಿಯಾದ ಮಹಾ ಧರ್ಮಶಕ್ತಿಯನ್ನು ಪಡೆದು ಜಗದಂಬೆಯ ಕೃಪೆಯ ಆಶ್ರಯದಲ್ಲಿ ಮೆಲ್ಲಮೆಲ್ಲನೆ ತಲೆಯೆತ್ತಲಾರಂಭಿಸಿದನು. ಈ ಮಹಾಪುರುಷನೆ ಶ್ರೀರಾಮಕೃಷ್ಣ ಪರಮಹಂಸದೇವ! ವಿಲಾಯಿತಿಯಿಂದ ಹಿಂದಿರುಗಿ ಬಂದವನೂ ಪ್ರಖ್ಯಾತನಾಮ ವಾಗ್ಮಿಯೂ ಧರ್ಮಪ್ರಚಾರಕನೂ ಸಮಾಜಸುಧಾರಕಾಗ್ರಣಿಯೂ ಭಕ್ತಚೂಡಾಮಣಿಯೂ ಆಗಿದ್ದ ಕೇಶವಚಂದ್ರ ಸೇನನು ಆತನ ಪದತಲದಲ್ಲಿ ಕುಳಿತನು. ಆಜನ್ಮ ಮೂರ್ತಿಪೂಜಾದ್ವೇಷಿಯೂ ದೃಢಹೃದಯಿಯೂ ಆದ ಕೇಶವನು ಶ್ರೀರಾಮಕೃಷ್ಣರನ್ನು ಸಂದರ್ಶಿಸಿದ ಮೇಲೆ ಮೃಣ್ಮಯಿ ವಿಗ್ರಹದಲ್ಲಿ ಚಿನ್ಮಯಿ ಮಾತೆಯನ್ನು ಕಂಡು ಮೂರ್ತಿಪೂಜೆಗೆ ತೊಡಗಿ ಅದನ್ನು ಇತರರಿಗೂ ಬೋಧಿಸತೊಡಗಿದನು. ಶ್ರೀಯುತ ವಿಜಯಕೃಷ್ಣ ಗೋಸ್ವಾಮಿ ಮೊದಲಾದವರು ಆತನ ಪ್ರಭಾವದಿಂದ ಬ್ರಾಹ್ಮಸಮಾಜ ಪರಿತ್ಯಾಗ ಮಾಡಿದರು.

ವಿಲಾಯಿತಿ ಪ್ರತ್ಯಾಗತನಾಗಿದ್ದ ಪ್ರತಾಪಚಂದ್ರ ಮುಜುಮದಾರ ಮಹಾಶಯನು ಆತನ ಸನ್ನಿಧಿಯಲ್ಲಿ ಕುಳಿತು ಬೆರಗಾಗಿ ಹೀಗೆಂದು ಬರೆದನು: "ನನ್ನ ಮನಸ್ಸು ಇನ್ನೂ ಆ ಮಹಾಪುರುಷನ ಸಾನ್ನಿಧ್ಯದ ಜ್ಯೋತಿರ್ಮಯ ರಾಜ್ಯದಲ್ಲಿ ಸಂಚರಿಸುತ್ತಿದೆ. ಆತನು ಹೋದೆಡೆಯಲ್ಲೆಲ್ಲ ಬೆಳಕನ್ನು ಬೀರುತ್ತಾನೆ. ಆ ರಹಸ್ಯ ಪುರುಷನ ಸಂಸರ್ಗದಿಂದ ನನಗುಂಟಾದ ಆ ಅನಿರ್ವಚನೀಯ ರಹಸ್ಯಪೂರ್ಣ ಭಾವನೆಗಳು ಇನ್ನೂ ನನ್ನ ಹೃದಯದಲ್ಲಿ ತುಂಬಿ ತುಳುಕುತ್ತಿವೆ. ನನಗೂ ಆತನಿಗೂ ಇರುವ ಸಾದೃಶ್ಯವಾದರೂ ಏನು? ನಾನು ಯೂರೋಪೀಯ ಭಾವಾಪನ್ನನು, ನಾಗರಿಕನು, ಸ್ವಾಭಿಮಾನಿ, ಅರ್ಧಸಂದೇಹವಾದಿ, ಸುಶಿಕ್ಷಿತ ಯುಕ್ತಿವಾದಿ. ಆತನೋ ದರಿದ್ರನು, ವರ್ಣಜ್ಞಾನಹೀನನು, ನಯರುಚಿಹೀನನು, ಮೂರ್ತಿ ಪೂಜಕ ಬಂಧುಹೀನ ಹಿಂದೂ ಭಕ್ತನು! ನಾನೇಕೆ ಆತನ ಚರಣತಳದಲ್ಲಿ ಹಸುಳೆಯಂತೆ ಕುಳಿತು ಆತನ ಮಾತುಗಳನ್ನು ಕೇಳಿ ಮುಗ್ಧನಾಗಬೇಕು? ನಾನು, ಡಿಸ್ರೇಲಿ ಫಾಸೆಟ್ ಸ್ಟ್ಯಾನ್ಲಿ ಮ್ಯಾಕ್ಸ್‌ಮುಲ್ಲರ್ ಮೊದಲಾದ ಐರೋಪ್ಯ ಮನೀಷಿ ಮತ್ತು ಧರ್ಮಪ್ರಚಾರಕರ ವಾಗ್ವಿಲಾಸವನ್ನು ಕೇಳಿ ಬೆರಗಾದ ನಾನು, ಆತನ ಪದತಲದಲ್ಲಿ ಕುಳಿತುಕೊಳ್ಳಬೇಕೇಕೆ? ನಾನು, ಪರಮಕ್ರಿಸ್ತಭಕ್ತನಾದ ನಾನು, ಕ್ರೈಸ್ತಪಾದ್ರಿಗಳ ಸ್ನೇಹಿತನೂ ಪ್ರಶಂಸಕನೂ ಆದ ನಾನು, ಯುಕ್ತಿಪಂಥಿಯಾದ ಬ್ರಾಹ್ಮಸಮಾಜಕ್ಕೆ ಸೇರಿದ ನಾನು, ಆತನಿಗೇಕೆ ಮರುಳಾಗಬೇಕು! ಅದರಲ್ಲಿಯೂ ನಾನೊಬ್ಬನೇ ಅಲ್ಲ, ನನ್ನಂತೆಯೇ ಇರುವ ನೂರಾರು ಜನರು ಆತನೆಡೆಗೆ ಬರುತ್ತಿದ್ದಾರೆ.... ಅದು ಹೇಗಾದರೂ ಇರಲಿ. ಎಲ್ಲಿಯವರೆಗೆ ಆತನು ನಮ್ಮ ಬಳಿ ಜೀವಂತನಾಗಿರುವನೋ ಅಲ್ಲಿಯವರೆಗೆ ಆತನ ಪಾದಗಳ ಬಳಿ ಸಂತೋಷದಿಂದ ಕುಳಿತು ಪವಿತ್ರತೆ, ವೈರಾಗ್ಯ, ಸಂಸಾರ ನಿರಾಸಕ್ತಿ, ಆಧ್ಯಾತ್ಮಿಕತೆ, ಭಗವತ್ಪ್ರೇಮ ಮೊದಲಾದ ಧರ್ಮ ಕಥಾಶ್ರವಣ ಮಾಡುತ್ತೇವೆ."

ದಕ್ಷಿಣೇಶ್ವರದ ಕಾಳಿಯ ಗುಡಿಯಲ್ಲಿ ಭಾಗೀರಥಿಯ ತೀರದಲ್ಲಿ ಪಂಚವಟಿಯ ಮೂಲದಲ್ಲಿ ಇದ್ದ ಶಕ್ತಿಸಾಧಕನೂ ನಿರ್ವಿಕಲ್ಪ ಸಮಾಧಿಸ್ಥನೂ ಮಹಾ ಯೋಗಿಯೂ ಭಕ್ತಚೂಡಾಮಣಿಯೂ ವೈಷ್ಣವ ಶಾಕ್ತ ಕ್ರೈಸ್ತ ಮುಸಲ್ಮಾನ ಇತ್ಯಾದಿ ವಿಭಿನ್ನ ಧರ್ಮಮಾರ್ಗಗಳಲ್ಲಿ ಸಿದ್ಧಪುರುಷನೂ ಆದ ಶ್ರೀರಾಮಕೃಷ್ಣ ಪರಮಹಂಸರ ಪ್ರಭಾವವು ಬ್ರಾಹ್ಮಸಮಾಜದ ಮೇಲೆ ಚೆನ್ನಾಗಿ ಮುದ್ರಿತವಾಯಿತು. ಕೇಶವಚಂದ್ರನ ಧರ್ಮಜೀವನದಲ್ಲಿ ಒಂದು ವಿಚಿತ್ರ ಪರಿವರ್ತನೆಯಾಯಿತು. ಆತನು ತನ್ನ ಸಮಾಜದಲ್ಲಿ ಪರಮಹಂಸರ ಉಪದೇಶ ಪ್ರಚಾರ ಮಾಡಲಾರಂಭಿಸಿದನು. ತನ್ನ ಅನುಯಾಯಿಗಳಿಗೆ ಪರಮಹಂಸರ ಜೀವನದ ಉನ್ನತಾದರ್ಶವನ್ನು ತೋರಿದನು. ಬ್ರಾಹ್ಮಸಮಾಜಕ್ಕೆ ಅದುವರೆಗೂ ಅಪರಿಚಿತವಾಗಿದ್ದ ವೈರಾಗ್ಯ ಸಂಯಮ ಸಾಧನೆಗಳನ್ನು ಬೋಧಿಸತೊಡಗಿದನು. ಇದರಿಂದ ಭಾರತವರ್ಷೀಯ ಬ್ರಾಹ್ಮಸಮಾಜವೂ ಕವಲೊಡೆಯಿತು. ಏಕೆಂದರೆ ಅನೇಕರಿಗೆ ಸಾಧನೆ ಭಜನೆ ಯೋಗ ಧ್ಯಾನಗಳು ಅಷ್ಟೇನೂ ಇಂಪಾಗಿ ತೋರಲಿಲ್ಲ! ವಿಜಯಕೃಷ್ಣಗೋಸ್ವಾಮಿಯ ನೇತೃತ್ವದಲ್ಲಿ ಸಾಧಾರಣ ಬ್ರಾಹ್ಮಸಮಾಜವು ಏರ್ಪಟ್ಟಿತು. ಕೇಶವಚಂದ್ರನ ನೇತೃತ್ವದಲ್ಲಿ ಎಲ್ಲ ಧರ್ಮಗಳೂ ಸತ್ಯ, ಮತವಿರುವಂತೆ ಪಥವಿರುವುದು ಎಂಬ ಶ್ರೀರಾಮಕೃಷ್ಣರ ಉಪದೇಶಗಳನ್ನು ಒಳಗೊಂಡ ನವವಿಧಾನ ಎಂಬ ಸಮಾಜವು ಸ್ಥಾಪಿತವಾಯಿತು. ಅಲ್ಲಿ ಎಲ್ಲರೂ ಪರಮಾತ್ಮನನ್ನು ಶ್ರೀರಾಮಕೃಷ್ಣರಂತೆ 'ಮಾತೆ' ಎಂದು ಸಂಬೋಧಿಸಿ ಆರಾಧಿಸಲು ತೊಡಗಿದರು.

ಇತ್ತ ೧೮೭೦ರಲ್ಲಿ ಬ್ರಾಹ್ಮಧರ್ಮಕ್ಕೆ ವಿರುದ್ಧವಾಗಿ ಅನೇಕ ಚಳವಳಿಗಳು ಮೂಡಿದುವು. ಪರಿವ್ರಾಜಕ ಸಂನ್ಯಾಸಿಯಾಗಿದ್ದ ಶ್ರೀಕೃಷ್ಣಪ್ರಸನ್ನಸೇನನು ನಗರ ನಗರಗಳಿಗೂ ಹೋಗಿ ತನ್ನ ವಾಕ್ಶಕ್ತಿಯಿಂದ ಬ್ರಾಹ್ಮಧರ್ಮವನ್ನು ಪ್ರತಿಭಟಿಸಿದನು.

ಕಲ್ಕತ್ತಾನಗರದಲ್ಲಿ ಶಶಧರ ತರ್ಕಚೂಡಾಮಣಿ ಎಂಬ ಪಂಡಿತನು ಹಿಂದೂಶಾಸ್ತ್ರಗಳ ಮೇಲೆ ಸನಾತನ ಪದ್ಧತಿಯಂತೆ ವ್ಯಾಖ್ಯಾನಮಾಡಲಾರಂಭಿಸಿದನು. ರಾಜಾ ಕಮಲಕೃಷ್ಣ ಪ್ರತಿಷ್ಠಿತವಾದ "ಸನಾತನ ಧರ್ಮರಕ್ಷಿಣೀ ಸಭಾ" ಎಂಬ ಸಂಸ್ಥೆ ನೂತನ ಶಕ್ತಿಯಿಂದ ತಲೆಯೆತ್ತಿತು. ಹಿಂದೂಧರ್ಮದ ಶ್ರೇಷ್ಠತೆಯ ಸಲುವಾಗಿ ಎಲ್ಲೆಲ್ಲಿಯೂ ಉಪನ್ಯಾಸಗಳು ಮತ್ತು ಪ್ರಬಂಧಾದಿಗಳು ಮೈದೋರಿದುವು. ಹೀಗಾಗಿ ಬ್ರಾಹ್ಮಧರ್ಮದ ಪ್ರಭಾವವು ಕುಂದುತ್ತ ಬಂದಿತು.

ಇದೇ ಸಮಯದಲ್ಲಿ ಸುರೇಂದ್ರನಾಥ ಬ್ಯಾನರ್ಜಿ ಮತ್ತು ಆನಂದಮೋಹನ ವಸು ಇವರಿಬ್ಬರ ನಾಯಕತ್ವದಲ್ಲಿ ರಾಜಕೀಯ ಆಂದೋಲನವೂ ಪ್ರಾರಂಭವಾಯಿತು. ಜನರ ಮನಸ್ಸು ಧರ್ಮದಿಂದ ರಾಜಕೀಯದ ಕಡೆಗೆ ತಿರುಗಿತು. ಸಮಾಜ ಸುಧಾರಣೆಗಳ ಕೋಟಲೆಗಳಲ್ಲಿ ಸಿಕ್ಕಿ ಕಂಗೆಟ್ಟ ಜನರು ರಾಜನೀತಿಯ ಸಹಾಯದಿಂದ ಸಮಾಜದ ಸಮಸ್ಯೆಯನ್ನು ಬಿಡಿಸತೊಡಗಿದರು. ಹೀಗೆ ನೂರಾರು ನವಶಕ್ತಿಗಳ ಸಂಗಮದಲ್ಲಿ ಸಿಕ್ಕಿ ಹಿಂದಕ್ಕೂ ಮುಂದಕ್ಕೂ ತಿರುಗಿ ತಿರುಗಿ, ಬೇಸತ್ತು, ಕಂಗೆಟ್ಟು, ಸಮಸ್ಯೆಗಳ ಮೇಲೆ ಸಮಸ್ಯೆಗಳೂ ಸಂದೇಹಗಳ ಮೇಲೆ ಸಂದೇಹಗಳೂ ಪುಂಜೀಭೂತವಾಗಿ ಬರುತ್ತಿದ್ದುದನ್ನು ಕಂಡು, ಅಳುಕಿ, ಸಮಾಜ ರಥವು ಮುಂದುಗಾಣದೆ ಮುಗ್ಗರಿಸಿ ಮುಂಬರಿಯುತ್ತಿರಲು, ಸಾಂಸಾರಿಕ ಆಂದೋಳನಗಳ ಕ್ರಿಯೆ ಪ್ರತಿಕ್ರಿಯೆಗಳ ಮಂಥನದಿಂದ ವಂಗಸಮಾಜದ ಜಠರದಿಂದ ಮತ್ತೊಬ್ಬ ಮಹಾ ಪುರುಷನು ಆವಿರ್ಭವಿಸಿದನು. ಆತನೆ ಜಗದ್ವಿಖ್ಯಾತ ಸ್ವಾಮಿ ವಿವೇಕಾನಂದ!

[1]

---

[1] ಹಿನ್ನೆಲೆಯ ವಿವರವಾದ ವರ್ಣನೆಗೆ ಪಾಠಕರು ಇದೇ ಲೇಖಕನ 'ಶ್ರೀರಾಮಕೃಷ್ಣ ಪರಮಹಂಸ' ಎಂಬ ಗ್ರಂಥದ ಪೀಠಿಕೆಯನ್ನು ನೋಡಬಹುದು

# ೪. ನಿರಂಕುಶಮತಿ

ಭಾರತೀಯ ತರುಣರ ಜೀವನವಾಹಿನಿ ಪಾಶ್ಚಾತ್ಯ ಸಂಸ್ಕರತಿಯ ತಿಲೋತ್ತಮೆಯ ರಮಣೀಯ ನರ್ತನಲೀಲೆಯನ್ನು ಸಂದರ್ಶಿಸಿದೊಡನೆ ಹುಚ್ಚುಹೊಳೆಯಾಗಿ ಹರಿಯತೊಡಗಿತೆಂದು ಹಿಂದಿನ ಅಧ್ಯಾಯದಲ್ಲಿ ಹೇಳಿದ್ದೇವೆ. ಅದನ್ನು ಕಂಡು ಮುದುಕರಾದ ಹಿರಿಯರು ದಿಗಿಲುಬಿದ್ದರೆಂಬುದನ್ನೂ ತಿಳಿಸಿದ್ದೇವೆ. ತರ್ಕ ಚೂಡಾಮಣಿ ಎಂಬ ಬಿರುದಿನ ಸಂಪ್ರದಾಯಮತಿ ಶಶಧರ ಪಂಡಿತನಿಗೆ ಗಾಬರಿಯಾದಂತೆ ಉಜ್ವಲ ಸ್ಫೂರ್ತಿಯಿಂದಲೂ ತೀಕ್ಷ್ಣ ಬುದ್ಧಿಯಿಂದಲೂ ಸ್ವತಂತ್ರ ವಿಚಾರದಿಂದಲೂ ಮಹಾ ವಿದ್ವತ್ತಿನಿಂದಲೂ ನಿರಂಕುಶಮತಿಯಾಗಿದ್ದ ರಾಮಮೋಹನರಾಯನಿಗೂ ಆ ಶಂಕೆಯುಂಟಾಯಿತೆಂದು ನಮಗೆ ಗೊತ್ತಾಗಿದೆ. ತಾರುಣ್ಯದ ಬೆಳವಣಿಗೆಯನ್ನು ಚಂಚಲತೆ ಎಂದು ಕರೆದು ಎಲ್ಲ ಹಾಳಾಗುತ್ತಿದೆ ಎಂದು ಚಚ್ಚಿಕೊಂಡು ಕೂಗಿಕೊಳ್ಳುವುದು ಸಹಜವಾದುದು, ಬೆಳವಣಿಗೆ ಮುಕ್ತಾಯವಾದ ಮುದಿತನಕ್ಕೆ! ನೂತನವು ಮುಂದಕ್ಕೆ ನುಗ್ಗಿದರೆ ಪುರಾತನವು ಹಿಂದಕ್ಕೆ ಜಗ್ಗುತ್ತದೆ. ಬಹುಶಃ ಪ್ರಗತಿಗೆ ಆ ಎರಡು ಶಕ್ತಿಗಳೂ ಬೇಕೆಂದು ತೋರುತ್ತದೆ. ಜೀವನ ರಥದ ಚಲನೆಯಲ್ಲಿ ಯೌವನವು ಚಕ್ರದಂತೆ ಉರುಳುತ್ತಿದ್ದರೆ ಮುದಿತನವು ಬಿರಿಯಂತೆ ಅದನ್ನು ತಡೆತಡೆದು, ಹಿಡಿಹಿಡಿದು, ಮುಗ್ಗರಿಸಿ ಮೂಗು ಮುರಿದುಕೊಳ್ಳದಂತೆ ಹುಷಾರಾಗಿ ಮುಂದಕ್ಕೆ ಬಿಡುತ್ತದೆ. ಬಾಳಿನ ಇಳಿಜಾರಿನಲ್ಲಿ ಬಿರಿಯಿಲ್ಲದೆ ತೇರು ನಡೆಯುವುದೂ ಅಪಾಯಕರವೆಂದೂ ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಬರಿಯ ಬಿರಿಯ ಮೇಲೆ ಇದುವರೆಗೆ ಯಾವ ತೇರೂ ಮುಂದುವರಿದಿಲ್ಲ. ಗಾಲಿ ಬಿರಿಯ ಉಪಯೋಗವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಹಾಗೆಯೆ ಬಿರಿಯೂ ತನ್ನ ಸ್ಥಾನವನ್ನೂ ಮಾನವನ್ನೂ ನಿಷ್ಕೃಷ್ಟವಾಗಿ ತಿಳಿದುಕೊಂಡರೆ ಲೇಸು.

ಈ ದೃಷ್ಟಿಯಿಂದ ನೋಡಿದರೆ ತರುಣ ಭಾರತೀಯರಲ್ಲಿ ವ್ಯಕ್ತವಾದ ವಿಶೃಂಖಲತೆಯೂ ನವೀನತಾಪ್ರೇಮವೂ ಸ್ವತಂತ್ರಭಾವವೂ ಅರ್ಥಪೂರ್ಣವಾಗುವುದಲ್ಲದೆ ಪ್ರಶಂಸನೀಯವಾಗುತ್ತದೆ. ಬೈಬಲ್ಲಿನ, ಚರ್ಚಿನ ಮತ್ತು ಐತಿಹ್ಯದ ಕುರುಡು ನಂಬುಗೆಯ ಮೊಟ್ಟೆಯ ಚಿಪ್ಪನ್ನು ಕುಕ್ಕಿ ಒಡೆದು ನಮ್ಮೆಡೆಗೆ ಹಾರಿ ಬಂದ ಪಾಶ್ಚಾತ್ಯದ ವಿಚಾರಪಕ್ಷಿ ಮತಮೌಢ್ಯದ ಮೊಟ್ಟೆಯನ್ನು ಬಿರಿದು ಹಾರುವ ವಿಜ್ಞಾನ ವಿದ್ಯೆಯನ್ನು ಪ್ರಾಚ್ಯಕ್ಕೂ ಕಲಿಸಿದುದರ ಫಲವಾಗಿ ಭಾರತವರ್ಷದಲ್ಲಿಯೂ ವಿಚಾರದ ಪಕ್ಷಿಶಿಶು ಗರಿಗೆದರಿ ಹಾರಿಯಾಡಲು ರೆಕ್ಕೆ ಬಡಿಯಲಾರಂಭಿಸಿತು.

ಪಾಶ್ಚಾತ್ಯರಲ್ಲಿ ಹದಿನೆಂಟನೆಯ ಶತಮಾನವು ಪ್ರಬೋಧ ಯುಗವೆಂದೂ ಹತ್ತೊಂಬತ್ತನೆಯ ಶತಮಾನವು ವಿಜ್ಞಾನಯುಗವೆಂದೂ ಪ್ರಸಿದ್ಧವಾಗಿವೆ. ಅಲ್ಲಿ ಆ ಇನ್ನೂರು ವರ್ಷಗಳಲ್ಲಿ ರಾಜಕೀಯ ಪ್ರಪಂಚದಲ್ಲಿಯೂ ಮಾನಸಿಕ ಪ್ರಪಂಚದಲ್ಲಿಯೂ ಸಂಭವಿಸಿರುವ ಸುಧಾರಣೆಗಳನ್ನೂ ಪರಿವರ್ತನೆಗಳನ್ನೂ ವಿಪ್ಲವಗಳನ್ನೂ ಪರಿಶೀಲಿಸಿದರೆ ಅದನ್ನು ಸ್ವಾತಂತ್ರ್ಯ ಸಾಧನೆಯ ಯುಗವೆಂದು ಕರೆದರೂ ಕರೆಯಬಹುದು. ಅದು ಮಹಾವ್ಯಕ್ತಿಗಳ ಮಹದಾಲೋಚನೆಗಳ ಕಾಲ. ಧೀರ ಸಂಶೋಧಕರು ಪ್ರಚಂಡ ಪ್ರಯೋಗಗಳನ್ನು ಹೂಡಿದ ಮಾನನೀಯ ಕಾಲ. ಮಾನವನು ಚಕ್ರವರ್ತಿಗಳ ನಿರಂಕುಶ ಪ್ರಭುತ್ವದಿಂದಲೂ ಅಂಧಶ್ರದ್ಧೆ ಮತ್ತು ಸಂಪ್ರದಾಯಗಳ ಮೋಹ ಬಂಧನದಿಂದಲೂ ಸ್ವೀಯ ಮಾನಸಿಕ

ದುರ್ಬಲತೆ ಮತ್ತು ಪಕ್ಷಪಾತಗಳ ವಜ್ರಪಂಜರದಿಂದಲೂ ಮುಕ್ತನಾಗಿ ನಿರಂಕುಶಮತಿಯಾಗಲು ಪ್ರಯತ್ನಿಸಿದ ಆ ಕಾಲವು ಗೌರವಾರ್ಹವಾಗಿದೆ.

ವಿಜ್ಞಾನ ಸಂಶೋಧನೆಯ ಮಹಿಮೆಯಿಂದ ಮನುಷ್ಯನ ದೃಷ್ಟಿದಿಗಂತವು ವಿಶಾಲವಾಯಿತು. ಪ್ರಶ್ನೆಯ ಮೇಲೆ ಪ್ರಶ್ನೆ, ಸಂದೇಹದ ಮೇಲೆ ಸಂದೇಹ, ಸಿದ್ಧಾಂತದ ಮೇಲೆ ಸಿದ್ಧಾಂತಗಳು ಪುಂಖಾನುಪುಂಖವಾಗಿ ಚಿಮ್ಮಿದುವು. ಪುರಾತನವು ನೂತನದ ಆಘಾತದಿಂದ ತತ್ತರಿಸಿತು. ಜನರಲ್ಲಿ ಅಂಧಶ್ರದ್ಧೆಗೆ ಬದಲು ವಿಚಾರ ಬುದ್ಧಿ ಪ್ರಬುದ್ಧವಾಯಿತು. ಹಳೆಯ ಸಂಪ್ರದಾಯ, ಆಚಾರ ಮತ್ತು ಪ್ರಮಾಣಗಳೆಲ್ಲವೂ ಮತಿಯ ಒರೆಗಲ್ಲಿನಲ್ಲಿ ಮೋರೆ ತೀಡಿಸಿಕೊಳ್ಳಬೇಕಾಯಿತು. ಅನುಭವ, ಆಲೋಚನೆ ಮತ್ತು ಕಾರ್ಯಗಳಲ್ಲಿ ಸ್ವಾತಂತ್ರ್ಯವು ತಲೆದೋರಿ ಭಕ್ತಿಯ ಕಿರೀಟವು ಯುಕ್ತಿಗಾಯಿತು. ವಿಜ್ಞಾನಶಾಸ್ತ್ರವೂ ತತ್ತ್ವಶಾಸ್ತ್ರವೂ ಪರೀಕ್ಷೆ, ವಿಮರ್ಶೆ ಮತ್ತು ವಿಚಾರ ಇವುಗಳನ್ನೆ ಪ್ರಧಾನ ಕರಣಗಳನ್ನಾಗಿ ಸ್ವೀಕರಿಸಿದುವು. ಸತ್ಯವು ಜಗದ್ಗುರುಗಳಿಂದಾಗಲಿ ಪುರೋಹಿತರಿಂದಾಗಲಿ ಕೃಪೆಗಾಗಲಿ ಕ್ರಯಕ್ಕಾಗಲಿ ಕೊಂಡುಕೊಳ್ಳುವ ವಸ್ತುವಲ್ಲವೆಂದೂ, ವಿಚಾರಪೂರ್ಣವಾದ ನಿಷ್ಪಕ್ಷಪಾತವಾದ ಸಾಹಸದಿಂದ ವ್ಯಕ್ತಿ ತನಗೆ ತಾನೇ ಸ್ವತಃ ಕಂಡುಕೊಳ್ಳಬೇಕಾದುದೆಂದೂ ನಿರ್ಣಯವಾಯಿತು. ದೇವತೆಗಳಲ್ಲಿಯೂ ಮತದಲ್ಲಿಯೂ ಇದ್ದ ನಂಬುಗೆ ಸಡಿಲವಾಯಿತು. ಅದುವರೆಗೆ ಸ್ವರ್ಗದ ಕಡೆಗೂ ಅಲೌಕಿಕದ ಕಡೆಗೂ ತಿರುಗಿದ್ದ ದೃಷ್ಟಿ ಈಗ ಮರ್ತ್ಯದ ಕಡೆಗೂ ಪ್ರಕೃತಿಯ ಕಡೆಗೂ ತಿರುಗಿತು. ಘಟನೆಗಳಿಗೆಲ್ಲ ಪ್ರಕೃತಿ ನಿಯಮಗಳೆ ಕಾರಣವೆಂದು ಗೊತ್ತಾಗಿ ಅಪ್ರಾಕೃತವಾದುದೆಲ್ಲವೂ ತಿರಸ್ಕೃತವಾಯಿತು. ಮಾನವನ ಯುಕ್ತಿ ಅಥವಾ ವಿಚಾರಬುದ್ಧಿಯೆ ಸರ್ವಶಕ್ತವಾದುದೆಂದೂ ಸರ್ವಶ್ರೇಷ್ಠವಾದುದೆಂದೂ ಪೂಜ್ಯವಾಯಿತು. ಜನರಿಗೆ ಪ್ರಕೃತಿಯಲ್ಲಿ ಎಂದಿಗಿಂತಲೂ ಹೆಚ್ಚು ಕುತೂಹಲ ಹುಟ್ಟಿತು. ಸಂಸ್ಕೃತಿಯಲ್ಲಿಯೂ ಪ್ರಗತಿಯಲ್ಲಿಯೂ ಉತ್ಸಾಹ ಹೆಚ್ಚಿತು. ಕನಸಿಗಿಂತಲೂ ನನಸಿಗೆ ಹೆಚ್ಚು ಪುರಸ್ಕಾರ ದೊರೆಯಿತು. ಧರ್ಮಕ್ಕಿಂತಲೂ ಕರ್ಮವೆ ಯಶಸ್ವಿಯಾಯಿತು. ಮಂತ್ರಕ್ಕಿಂತಲೂ ಯಂತ್ರವೆ ವಂದನೀಯವಾಯಿತು. ಶ್ರುತಿಗಿಂತಲೂ ಮತಿಯೆ ಸರ್ವೋಚ್ಚ ಪದವಿಗೇರಿತು.

ಮನಸ್ಸು ಮಾನವನ ಸರ್ವಸ್ವವೆಂದೂ ಮತಿ ಪರಮಪ್ರಮಾಣವೆಂದೂ ಹೃದಯವಾಣಿ ಮಿಥ್ಯೆಯೆಂದೂ ಪ್ರಕೃತಿ ಘಟನೆಗಳನ್ನು ಪ್ರಕೃತಿ ನಿಯಮಗಳಿಂದಲೆ ವಿವರಿಸಬಹುದೆಂದೂ ಬುದ್ಧಿ ದೃಢವಾದ ಮೇಲೆ ವೈಜ್ಞಾನಿಕರು ಸೃಷ್ಟಿಯ ಸರ್ವ ಕರ್ಮಗಳನ್ನೂ ಸಕಲ ಮರ್ಮಗಳನ್ನೂ ಯಾಂತ್ರಿಕವಾಗಿ ವಿವರಿಸಲು ಕಂಕಣಬದ್ಧರಾಗಿ ನಿಂತರು. ಜಡವಾದ, ನಾಸ್ತಿಕವಾದ, ನಿರೀಶ್ವರವಾದ ಮೊದಲಾದ ನೂರಾರು ವಾದಗಳು ಹೆಡೆಯೆತ್ತಿದುವು. ಮೊದಮೊದಲು ಪುರಾತನ ಪುರೋಹಿತ ವರ್ಗದವರು, ಸನಾತನ ಧರ್ಮದ ಹೆಸರಿನಲ್ಲಿ, ತಮ್ಮ ನಿರಂಕುಶ ಸ್ವಾಸ್ಥ್ಯಕ್ಕೆ ಕುಠಾರ ಸ್ವರೂಪವಾದ ಆ ಪ್ರಚಂಡ ನವಶಕ್ತಿಯನ್ನು ನಿರ್ಮೂಲ ಮಾಡಲು ಸಾಹಸಗೈದರು.

ಭೂಮಿ ವಿಶ್ವದ ಕೇಂದ್ರವಲ್ಲ, ಸೂರ್ಯನ ಸುತ್ತಲೂ ತಿರುಗುವ ಕ್ಷುದ್ರಗ್ರಹಗಳಲ್ಲಿ ಒಂದು - ಎಂದವರನ್ನು ವಿಚಾರಣೆಗೆ ಗುರಿಮಾಡಿ ಕೆಲವರನ್ನು ಸೆರೆಯಲ್ಲಿಟ್ಟು ಮತ್ತೆ ಕೆಲವರನ್ನು ಚಿತ್ರಹಿಂಸೆ ಮಾಡಿ ಕೊಂದರು. ಸ್ವತಂತ್ರವಾಗಿ ಕ್ರೈಸ್ತ ಶ್ರುತಿಗೆ ವಿರೋಧವಾಗಿ ಆಲೋಚನೆ ಮಾಡಿದ ಮೇಧಾವಿಗಳನ್ನು ನಾನಾ ರೀತಿಗಳಿಂದ ಪೀಡಿಸಿದರು. ಪುರಾತನಿಗಳು ಏನು ಮಾಡಿದರೂ ನೂತನದ ತಲೆ ಕೆಡಲಿಲ್ಲ. ಖಗೋಳಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಜೀವಶಾಸ್ತ್ರ

ಮತ್ತು ಮನಃಶಾಸ್ತ್ರಗಳು ಅಪ್ರತಿಹತವಾಗಿ ಮೇಲೆದ್ದುವು. ತತ್ತ್ವಶಾಸ್ತ್ರಜ್ಞರೂ ವಿಜ್ಞಾನದ ಹೊಸ ಹೊಸ ಅನ್ವೇಷಣೆ, ಆವಿಷ್ಕಾರ ಮತ್ತು ಸಿದ್ಧಾಂತಗಳನ್ನು ಸ್ವೀಕರಿಸಿ ತಮ್ಮ ಮಹಾ ತತ್ತ್ವಮಂದಿರಗಳನ್ನು ಕಟ್ಟಿದರು. ರಾಜ್ಯಶಾಸ್ತ್ರಜ್ಞರು ವ್ಯಕ್ತಿಯ ಹಕ್ಕುಬಾಧ್ಯತೆಗಳನ್ನೂ ಪರಮ ಸ್ವಾತಂತ್ರ್ಯವನ್ನೂ ಕುರಿತು ಸಾರಿದರು. ಕವಿಗಳು ನವಯುಗದ ನವದೃಷ್ಟಿಯ ಸುವಿಚಾರ ಪೂರ್ವಕವಾದ ಮಹಾಮಂತ್ರವನ್ನು ಸುಮಧುರ ವೀರವಾಣಿಯಿಂದ ಹಾಡಿದರು. ಪಾಮರ ಜನಗಳು ಯುಗ ಯುಗದ ನಿದ್ರೆಯಿಂದ ಎಚ್ಚತ್ತು ಕಣ್ದೆರೆದರು. ಮಾನಸಿಕ ಕ್ರಾಂತಿ ಸಾಮಾನ್ಯ ಜನಜೀವನಕ್ಕೂ ಕಿಡಿಯಿಟ್ಟಿತು. ಫ್ರಾನ್ಸ್ ದೇಶದಲ್ಲಿ ಪ್ರಚಂಡವಾಗಿಯೂ ಇತರೆಡೆಗಳಲ್ಲಿ ಸಾಧಾರಣವಾಗಿಯೂ ರಾಜಕೀಯ ಮಹಾವಿಪ್ಲವಗಳಾದುವು. ಮನುಷ್ಯರೆಲ್ಲರೂ ಜನ್ಮತಃ ಸ್ವತಂತ್ರರು, ಸಮಾನರು, ಸೋದರರು - ಎಂಬ ಉದಾರ ತತ್ತ್ವ ಸರ್ವತ್ರ ಹಬ್ಬಿತು. ಪ್ರಗತಿ ಎಂಬ ಮಹಾ ಕುದುರೆಯ ನಾಗಾಲೋಟದಿಂದ ಮೇಲೆದ್ದ ಕೆಂಧೂಳಿ ಮುಗಿಲು ಮುಗಿಲಾಗಿ ಪಾಶ್ಚಾತ್ಯ ಜಗತ್ತನ್ನೆಲ್ಲ ಮುಸುಗಿ ಬಿಟ್ಟಿತು.

ಇಂತಹ ವಿಪ್ಲವಗರ್ಭದ ರಕ್ತಾಗ್ನಿಯಲ್ಲಿ ಆಗತಾನೆ ಮಿಂದು ಬೆಂದು ಬಂದುದಾಗಿತ್ತು ಭಾರತವರ್ಷಕ್ಕೆ ಬಿಜಯಂಗೈದ ಪಾಶ್ಚಾತ್ಯ ಸಂಸ್ಕೃತಿ! ಅದರ ಕಾವಿಗೆ ನಮ್ಮವರ ಎಳೆನೆತ್ತರು ಕುದಿಯದೆ ಇದ್ದಿದ್ದರೆ ಅದು ಜನಾಂಗದ ಜೀವನ ಸೂಚನೆಯಾಗುತ್ತಿರಲಿಲ್ಲ, ಶವದ ಸೂಚನೆಯಾಗುತ್ತಿತ್ತು. ಉದ್ಧಾರದಲ್ಲಿ ನೆಚ್ಚಿರುವ ಪ್ರತಿಯೊಬ್ಬರಿಗೂ ತರುಣ ರಕ್ತದ ಕುದಿದಾಟವು ಆಶಾಜನಕವಾಗಬೇಕು, ಅಭಿಮಾನದ ವಿಷಯವಾಗಬೇಕು.

ಇಲ್ಲಿ ಭಾರತೀಯ ತರುಣರ ಪರವಾಗಿ ನಾಲ್ಕು ಮಾತುಗಳನ್ನು ಹೇಳಲೇ ಬೇಕಾಗುತ್ತದೆ.

ಪುರಾತನವಾದುಲೆಲ್ಲ ಪವಿತ್ರವಾದುದು, ಆದ್ದರಿಂದ ಸತ್ಯವಾದುದು ಎಂಬ ಭಾವನೆ ನಮ್ಮವರ ತಲೆಗಳಲ್ಲಿ ಇಲ್ಲಣ ತುಂಬಿದ ಜೇಡರ ಬಲೆಯಾಗಿತ್ತು, ಯಾವ ಕಾಲಕ್ಕೊ ಯಾವ ದೇಶಕ್ಕೊ ಎಂದೋ ಒಪ್ಪುವಂತೆ ಯಾರೋ ಬರೆದಿಟ್ಟಿದ್ದ ಸಮಾಜದ ಕಟ್ಟುನಿಟ್ಟುಗಳನ್ನೂ ಕಟ್ಟುಕತೆಗಳನ್ನೂ ಸ್ವಲ್ಪವೂ ವಿಚಾರ ಮಾಡದೆ ನಂಬಿಕೊಂಡು, ಮತದ ಹೆಸರಿನಲ್ಲಿ ಮಾನವ ಸಹೋದರರರನ್ನು ಕೋಟಲೆಗೊಳಿಸಿ, ಇಲ್ಲದ ಸಲ್ಲದ ಭೇದಭಾವಗಳನ್ನು ನೂತನ ಧರ್ಮವೆಂದು ಭ್ರಮಿಸಿದ್ದರು. ಪುರಾತನ ಪೌರಾಣಿಕ ಜ್ಞಾನವನ್ನು ಸನಾತನ ವಿಜ್ಞಾನವೆಂದು ಭಾವಿಸಿ ಹೊಸದನ್ನು ವಿಷದಂತೆ ಕಾಣತೊಡಗಿದ್ದರು. ಸಹಗಮನಾದಿ ಭೀಷಣ ಮೃಗೀಯ ಪದ್ಧತಿಗಳನ್ನು ಶಾಸ್ತ್ರೋಕ್ತವೆಂದು ಪ್ರತಿಪಾದಿಸುತ್ತಾ ಪಂಡಿತರೆನಿಸಿಕೊಂಡವರು ಮಾನವ ಸಹಜವಾದ ಕರುಣೆ ಕಣ್ಣೀರುಗಳಿಂದಲೂ ವಿಮುಕ್ತರಾಗಿದ್ದರು. ಅನೇಕ ವಿಚಾರಗಳಲ್ಲಿ ಅನೇಕರು ದ್ವಾಪರಯುಗದವರಾಗಿದ್ದರು. ಕಲಿಯುಗವನ್ನು ಅಧರ್ಮದ ಯುಗವೆಂದೂ ವಿನಾಶದ ಯುಗವೆಂದೂ ಹಳಿಯುತ್ತಾ ತಮ್ಮ ದೃಷ್ಟಿಯನ್ನೆಲ್ಲಾ ದ್ವಾಪರ ಕೃತ ತ್ರೇತಾಯುಗಗಳ ಕಡೆಗೆ ತಿರುಗಿಸಿ ಪುರಾತನವನ್ನು ಸ್ತೋತ್ರ ಮಾಡುವುದುರಲ್ಲಿಯೆ ತಲ್ಲೀನರಾಗಿದ್ದರು. ನಾಡಿನ ಬಾಳು ಮುಂದಿನ ಆಸೆಯಿಂದ ಮುಮ್ಮೊಗವಾಗಿರುವುದಕ್ಕೆ ಬದಲಾಗಿ ಹಿಂದನ ಮೆರುಗನ್ನೇ ಉತ್ಪ್ರೇಕ್ಷಿಸಿ ನೆನೆಯುತ್ತಾ ಹಿಮ್ಮೊಗವಾಗಿತ್ತು. ರಾಷ್ಟ್ರಜೀವನ ಶರೀರದ ಶ್ವಾಸಕೋಶಗಳಿಗೆ ಕ್ಷಯರೋಗ ತಗುಲಿದಂತಿತ್ತು.

ದೇಶವು ದುರವಸ್ಥೆಗಿಳಿದಿದ್ದುದನ್ನು ಕಂಡು, ಅದಕ್ಕೆ ಬಹುಮಟ್ಟಿಗೆ ತಮಗೆ ಹಿಂದಿದ್ದ ಹಿರಿಯರೇ ಕಾರಣರೆಂದು - ಸರಿಯಾಗಿಯೋ ತಪ್ಪಾಗಿಯೋ ಭಾವಿಸಿ - ತರುಣರು ದಂಗೆಯೆದ್ದು, ತಮ್ಮನ್ನು ದುಃಸ್ಥಿತಿಗೆ ತಂದ ಹಳೆಯ ಪ್ರಾಚ್ಯ ವಿಧಾನಗಳನ್ನು ಮೂಲೆಗೆ ತಳ್ಳಿ, ಪಾಶ್ಚಾತ್ಯರನ್ನು ಜಗದ್ವಿಜಯಿಗಳನ್ನಾಗಿ ಮಾಡಿದ ಹೊಸ ವಿಜ್ಞಾನ ವಿಧಾನವನ್ನು ಕೈಕೊಳ್ಳಲೆಂದು ಸ್ವತಂತ್ರಮತಿಗಳಾದುದು ಭಾರತಾಂಬೆಯ ಪುಣ್ಯೋದಯವಲ್ಲದೆ ಮತ್ತೇನು? ಇಂದು ನಮ್ಮ ದೇಶದಲ್ಲಿ ಏನಾದರೂ ಜೀವವಾಡುತ್ತಿದ್ದರೆ ಅದಕ್ಕೆ ಅಂದಿನ ತರುಣರ 'ನಿರಂಕುಶಮತಿ' ಬಹುಮಟ್ಟಿಗೆ ಕಾರಣವಾಗಿದೆ.

ಹೇಳಿದೊಡನೆ ನಂಬುವವರು ಕೆಲವರು, ಹೇಳಿದುದು ಸಕಾರಣವಾಗಿದ್ದರೆ ಮಾತ್ರ ನಂಬುವವರು ಕೆಲವರು; ಹೇಳಿದುದನ್ನು ತಮ್ಮ ಸ್ವಂತ ಅನುಭವಕ್ಕೆ ತಂದುಕೊಂಡಮೇಲೆ ನಂಬುವವರು ಮತ್ತೆ ಕೆಲವರು. ಮೊದಲನೆಯದು ಶ್ರದ್ಧೆ, ಭಕ್ತಿ. ಎರಡನೆಯದು ವಿಚಾರ, ಬುದ್ಧಿ, ಯುಕ್ತಿ. ಮೂರನೆಯದು ಪ್ರತ್ಯಕ್ಷಾನುಭವ, ಸಾಕ್ಷಾತ್ಕಾರ. ಈ ಪ್ರಮಾಣಗಳಲ್ಲಿ ಕಡೆಯದನ್ನು ಪ್ರತ್ಯಕ್ಷವೆಂದೂ ನಡುವಣದನ್ನು ಅನುಮಾನವೆಂದೂ ಮೊದಲೆಯದನ್ನು ಶಬ್ದವೆಂದೂ ಕರೆಯುತ್ತಾರೆ. ಪ್ರಾಸಪ್ರೀತಿಗಾಗಿ ಮೊದಲನೆಯದನ್ನು 'ಶ್ರುತಿ' ಎಂದೂ, ಎರಡನೆಯದನ್ನು 'ಮತಿ' ಎಂದೂ, ಮೂರನೆಯದನ್ನು 'ಅನುಭೂತಿ' ಎಂದೂ ಕರೆದರೆ ತಪ್ಪಾಗುವುದಿಲ್ಲ.

ವೇದ, ಬೈಬಲ್ಲು, ಕೊರಾನು ಮೊದಲಾದ ಧರ್ಮಗ್ರಂಥಗಳು ಶ್ರುತಿವರ್ಗಕ್ಕೆ ಸೇರಿವೆ. ಅವುಗಳನ್ನು ನಂಬುವವರಿಗೆ ಅವುಗಳಿಗಿಂತಲೂ ಹೆಚ್ಚಿನ ಪ್ರಾಮಾಣ್ಯವಿನ್ನಿಲ್ಲ. ಆಯಾ ಮತದವರು ಅವರವರ ಶ್ರುತಿಗಳನ್ನು ದೇವರೇ ಹೇಳಿದನೆಂದೋ ಹೇಳಿಸಿದನೆಂದೋ ನಂಬುತ್ತಾರೆ. ಆ ನಂಬಿಕೆಗೆ ನಂಬಿಕೆಯೊಂದನ್ನಲ್ಲದೆ ಇನ್ನಾವ ಹೆಚ್ಚಿನ ಕಾರಣವನ್ನೂ ಅವರು ಕೊಡುವುದಿಲ್ಲ. ಕಾರಣಗಳನ್ನು ಕೊಡುವುದಕ್ಕೆ ಅವರು ಪ್ರಯತ್ನಿಸುವುದೂ ಇಲ್ಲ. ಅಷ್ಟೇಕೆ? ಸ್ವತಃ ಸಿದ್ಧವಾದುದಕ್ಕೆ ಕಾರಣಗಳನ್ನೇಕೆ ಹುಡುಕಬೇಕು? ಸತ್ಯನಿಧಿಯಾದ ದೇವರಿಂದ ಬಂದಿರುವ ಗ್ರಂಥಗಳಲ್ಲಿ ಅಸತ್ಯವಿರುವುದಾದರೂ ಹೇಗೆ? - ಎಲ್ಲಿಯಾದರೂ ಶ್ರುತಿ ನಮ್ಮ ಅನುಭವಕ್ಕೆ ವಿರುದ್ಧವಾಗಿದ್ದರೆ, ಅದು ಅನುಭವದ ದೋಷವೇ ಹೊರತು ಶ್ರುತಿಯ ತಪ್ಪಲ್ಲ. ಶ್ರುತಿ ಎಂದಿಗೂ ತಪ್ಪಾಗುವುದಿಲ್ಲ. ಆದ್ದರಿಂದ ಅನುಭವವನ್ನು ಶ್ರುತಿಗೆ ಹೊಂದಿಕೊಳ್ಳುವಂತೆ ಬೇಗಬೇಗನೆ ತಿದ್ದಿಕೊಳ್ಳಬೇಕು. ಹಾಗೆ ಮಾಡದಿದ್ದರೆ ಶ್ರುತಿಯನ್ನು ನಂಬುವವರಿಂದ ನಿನಗೆ ನರಕಸೃಷ್ಟಿಯಾಗುತ್ತದೆ! - ನಾನು ನರಕವನ್ನೇ ನಂಬುವುದಿಲ್ಲ! ಹಾಗಾದರೆ ಇಲ್ಲಿಯೇ ಅದರ ಅನುಭವವನ್ನು ನಿನಗೆ ದಯಪಾಲಿಸುತ್ತಾರೆ! - ಈ ವಾದವು ನಾಗರಿಕತೆಯ ಶೈಶವಾವಸ್ಥೆಯಲ್ಲಿದ್ದ ಹಿಂದಿನವರಿಗೂ ಆ ಸ್ಥಿತಿಯಲ್ಲಿಯೇ ಇರುವ ಇಂದಿನವರಿಗೂ, ಮಕ್ಕಳಂತೆ ಮಿದುಳಿರುವ ಸರಳ ಹೃದಯದ ಹಿರಿಯರಿಗೂ ಸರಿಹೋಗಬಹುದು. ಆದರೆ ವಿಚಾರಮತಿಗಳಿಗೆ ಸರಿಹೋಗುವುದೂ ಇಲ್ಲ; ಸಾಕಾಗುವುದೂ ಇಲ್ಲ. ಮತಿಯ ಸಹಾಯವಿಲ್ಲದೆ ಬರಿಯ ಇಂತಹ ಶ್ರುತಿಯ ಆಧಾರದ ಮೇಲೆ ನಿಂತಿರುವ ಮತಗಳೆಲ್ಲವೂ ವಿಜ್ಞಾನಶಾಸ್ತ್ರ ಮುಂದುವರಿದ ಹಾಗೆ ಕೃಶವಾಗಿ ಕೊನೆಗೆ ಸಂಪೂರ್ಣವಾಗಿ ಲಯಹೊಂದಿದರೂ ಹೊಂದಬಹುದು.

ವೈಜ್ಞಾನಿಕವಾದ ಆಧುನಿಕ ಶಾಸ್ತ್ರಗಳೆಲ್ಲ ಮತಿಯ ಆಧಾರದ ಮೇಲೆ ನಿಂತಿವೆ. ಪ್ರತಿಯೊಂದಕ್ಕೂ ಕಾರಣಗಳನ್ನು ಹುಡುಕಿ ತಿಳಿಯಲೆಳಸುವುದು ಮತಿಯ ಲಕ್ಷಣ. ಸತ್ಯನಿರ್ಣಯದ ವಿಚಾರದಲ್ಲಿ ಮತಿ ಮೊಂಡಾಟ ಮಾಡುವುದಿಲ್ಲ. ತನ್ನ ಸಿದ್ಧಾಂತವೇ ಪರಮಸತ್ಯವೆಂದೂ ಅದು ವಾದಿಸುವುದಿಲ್ಲ. ಅದರ ಸ್ವಭಾವ ಆರಾಧನೆಯಲ್ಲ, ಶೋಧನೆ. ಅತ್ಯಂತ

ಪುರಾತನವಾದುದು ಅತ್ಯಂತ ಸತ್ಯವಾದುದೆಂದು ಅದು ಒಪ್ಪುವುದಿಲ್ಲ. ನಿಜವಾಗಿಯೂ ಅದಕ್ಕೆ ಪುರಾತನ ನೂತನ ಎಂಬ ಭೇದಬುದ್ಧಿಯಿಲ್ಲ. ಹಳೆಯದಾಗಲಿ ಹೊಸದಾಗಲಿ ವಿಚಾರಪೂರ್ವಕವಾಗಿದ್ದರೆ ಅದು ಒಪ್ಪಿಕೊಳ್ಳುತ್ತದೆ. ಹಳೆಯದಕ್ಕಿಂತಲೂ ಹೊಸದು ಹೆಚ್ಚು ಸಕಾರಣವಾಗಿದ್ದರೆ ಹಳೆಯ ವಿಗ್ರಹವನ್ನು ಇತಿಹಾಸದ ಪೆಟ್ಟಿಗೆಗೆ ಹಾಕಿ ಹೊಸ ಮೂರ್ತಿಯನ್ನು ವೇದಿಕೆಯ ಮೇಲೆ ಇಡಲು ಸಿದ್ಧವಾಗುತ್ತದೆ. ಯಾವ ದೇಶದಿಂದಲೆ ಬರಲಿ, ಯಾವ ನೆಪದಿಂದಲೆ ಬರಲಿ, ಶ್ರುತಿಯ ಸೆರೆಗೆ ಸಿಲುಕದ ಮತಿ 'ನಿರಂಕುಶಮತಿ' ಅಥವಾ 'ಸ್ವತಂತ್ರಮತಿ'. ಮಾನವ ಸಂಸ್ಕೃತಿಯ ಪ್ರಗತಿಗೆ ಅದೊಂದು ತೇಜಸ್ವಿಯಾದ ತೇಜಿ.

'ಅನುಭೂತಿ'ಯು ಶ್ರುತಿ ಮತ್ತು ಮತಿಗಳಿಂದಲೂ ಹೆಚ್ಚಾದ, ಅಪ್ರತಿಹತವಾದ ಮತ್ತು ಸ್ವತಃಸಿದ್ಧವಾದ ಪ್ರಮಾಣ. ಏಕೆಂದರೆ ಅಲ್ಲಿ ಸತ್ಯವು ಸ್ವಸಂವೇದ್ಯವಾಗುತ್ತದೆ. ಆದರೂ ಅದರ ವ್ಯಾಪನೆಗೆ ಮಿತಿಯಿದೆ. ಅನುಭವವನ್ನು ಪಡೆದ ವ್ಯಕ್ತಿಗೇನೋ ಆ ಸತ್ಯವು ನಿರ್ವಿವಾದವಾಗುತ್ತದೆ. ಆದರೆ ಇತರರು ಆ ಅನುಭೂತಿಯನ್ನು ಒಪ್ಪಿದರೆ ಒಪ್ಪಬಹುದು; ಬಿಟ್ಟರೆ ಬಿಡಬಹುದು. ಒಂದು ವೇಳೆ ಕೆಲವು ಸರಳ ಹೃದಯಿಗಳು ಆ ಅನುಭೂತಿಯನ್ನು ಒಂದಿನಿತೂ ವಿಮರ್ಶೆ ಮಾಡದೆ, ಪರೀಕ್ಷಿಸದೆ, ಮತಿಯ ಒರೆಗಲ್ಲಿಗೆ ಹಚ್ಚದೆ ಭಕ್ತಿಯಿಂದ ಸ್ವೀಕರಿಸಿದರೆ ಅಂಥವರಿಗೆ ಆ 'ಅನುಭೂತಿ'ಯೇ 'ಶ್ರುತಿ'ಯಾಗಿಬಿಡುತ್ತದೆ. ಆದರೆ ಹಾಗೆ ಒಪ್ಪಿಕೊಳ್ಳದ ವಿಚಾರಪ್ರೇಮಿಗಳಾದ ಮತಿವಂತರೂ ಇರುತ್ತಾರೆ. ಅಂಥವರು 'ಅನುಭೂತಿ'ಯು 'ಮತಿಗೆ' ವಿರುದ್ಧವಾಗಿದ್ದರೆ ಅದನ್ನು ತಿರಸ್ಕರಿಸುತ್ತಾರೆ. ವಿರುದ್ಧವಲ್ಲದಿದ್ದರೆ ಒಪ್ಪಿಕೊಳ್ಳುತ್ತಾರೆ. ಆದರೆ ವಾಸ್ತವವಾಗಿ ನಿಜವಾದ ಮತಿಗೆ ನಿಜವಾದ ಅನುಭೂತಿ ವಿರುದ್ಧವಾಗಿರುವುದಿಲ್ಲ. ಅನುಭೂತಿ ಮತಿಗೆ ಪೂರಕವಾಗುತ್ತದೆ. ಅವೆರಡಕ್ಕೂ ಇರುವ ವ್ಯತ್ಯಾಸ ರೂಪಾಂತರವೇ ಹೊರತು ಜಾತ್ಯಂತರವಲ್ಲ. ಕಾಂತಿ ಉಷ್ಣಕ್ಕೆ ವಿರೋಧಿಯಲ್ಲ; ಅವೆರಡಕ್ಕೂ ಇರುವ ಭೇದವೆಂದರೆ ವಿದ್ಯುತ್ಕಣಗಳ ವೇಗ ತಾರತಮ್ಯ ಮಾತ್ರ. ಆದ್ದರಿಂದ ಮತಿಗೆ ಅವಿರುದ್ಧವಾದ ಅನುಭೂತಿ ಶ್ರುತಿಯ ಪಟ್ಟಕ್ಕೇರಲು ಯೋಗ್ಯವಾಗುತ್ತದೆ.

ಈ ತತ್ತ್ವಸಂವಿಧಾನವನ್ನು ಸ್ವಲ್ಪ ಕಷ್ಟಪಟ್ಟು ನಿರಾಲಸ್ಯವಾದ ಮಾನಸಿಕ ಶ್ರಮದಿಂದ ಅರಿಯುವ ವಾಚಕರಿಗೆ ನಮ್ಮ ದೇಶದಲ್ಲಿ ಉಂಟಾದ ಪ್ರಾಚ್ಯ ಪಾಶ್ಚಾತ್ಯ ಸಂಸ್ಕೃತಿಗಳ ಸಂಘರ್ಷಣೆಯೂ, ಪುರಾತನ ನೂತನಗಳಿಗುಂಟಾದ ಹಣಾಹಣಿಯೂ, ಕಟ್ಟಕಡೆಗೆ ಕದನದ ಕೊನೆಯಲ್ಲಿ ಕೌಲಾಗುವಂತೆ ಬಂದೊದಗಿದ ಸಮನ್ವಯ ಸಂದೇಶವೂ ವಿಶದವಾಗಿ ಅರ್ಥವಾಗುತ್ತದೆ. ಪುರಾತನಿಗಳು ಶ್ರುತಿಯನ್ನು ಹಿಡಿದು ನೂತನಿಗಳು ಮತಿಯನ್ನು ಹಿಡಿದು ಹೋರಾಡುತ್ತಿರಲು ಶ್ರುತಿಯ ಭಕ್ತಿಯನ್ನೂ ಮತಿಯ ಯುಕ್ತಿಯನ್ನೂ, ಹೆಣ್ಣು ಗಂಡು ಎರಡು ವಿದ್ಯುಚ್ಛಕ್ತಿಗಳನ್ನೂ ಒಟ್ಟು ಸೇರಿಸುವಂತೆ, ತನ್ನ ಸಾಧನೆಯಲ್ಲಿ ಸಂಗಮಗೈದು ಅನುಭೂತಿಯ ಸಮನ್ವಯಜ್ಯೋತಿಯನ್ನು ಪ್ರಜ್ವಲಿಸುತ್ತಾ ಮಹಾಪುರುಷನೊಬ್ಬನು ಮೂಡಬೇಕಾಯಿತು. ಹಾಗೆ ಆವಿರ್ಭವಿಸಿದ ಪರಮಹಂಸರಲ್ಲಿಗೆ ಶ್ರುತಿಯ ಭಕ್ತರೂ ಮತಿಯ ಭಕ್ತರೂ ಇಬ್ಬರೂ ಬಂದು ತಮ್ಮ ತಮ್ಮ ಅರ್ಧ ಸತ್ಯಗಳನ್ನು ತಿದ್ದಿಕೊಳ್ಳಬೇಕಾಯಿತೆಂಬುದನ್ನು ಶ್ರೀರಾಮಕೃಷ್ಣ ಪರಮಹಂಸರ ಜೀವನಚರಿತ್ರೆಯಲ್ಲಿ ನೋಡಿದ್ದೇವೆ.

ನರೇಂದ್ರನಾಥನ ತಾರುಣ್ಯವು ಮೇಲೆ ವರ್ಣಿಸಿರುವ ರಣರಂಗದ ಮಧ್ಯೆ ಬೆಳಯುತ್ತಾ ಅದರ ನೂತನತೆ, ಅದರ ಉತ್ಸಾಹ, ಅದರ ಪ್ರತಿಭಟನೆ, ಅದರ ಧೂರ್ತತೆ, ಅದರ ಸಾಹಸಪ್ರಿಯತೆ, ಅದರ ಸತ್ಯಾನ್ವೇಷಣೆ, ಅದರ ನಿರ್ವಂಚನೆ,

ಅದರ ನಿರಂಕುಶಮತಿ, ಅದರ ಪ್ರಯೋಗಶೀಲತೆ ಇತ್ಯಾದಿ ಗುಣಗಣಗಳೆಲ್ಲವನ್ನೂ ಹೀರಿಕೊಂಡು ತೋಳುತಟ್ಟಿ ಮಲೆಯುವ ಜಗಜಟ್ಟಿಯಾಗುತ್ತಿತ್ತು.

೧೮೭೯ರಲ್ಲಿ ಪ್ರವೇಶಪರೀಕ್ಷೆ ಉತ್ತೀರ್ಣನಾಗಿ ಕಾಲೇಜನ್ನು ಪ್ರವೇಶಿಸಿದಾಗ ನರೇಂದ್ರನಾಥನಿಗೆ ಹದಿನೆಂಟನೆಯ ವರ್ಷವಾಗಿದ್ದಿತು. ಅಲ್ಲಿಯೂ ನಾಯಕವ್ಯಕ್ತಿ ನರೇಂದ್ರನು ಬಾಲಕರ ಕಣ್ಣಾದನು. ವಿದ್ಯಾರ್ಥಿಗಳು ಆತನ ಪ್ರತಿಭೆಗೂ ಸೂಕ್ಷ್ಮ ಬುದ್ಧಿಗೂ ಮರುಳಾದರು. ಅಷ್ಟೇ ಅಲ್ಲದೆ ಆತನ ಮಧುರ ಸಂಗೀತದ ಮೋಹಿನೀ ಶಕ್ತಿಯೂ ಸಬಲದೃಢ ದೀರ್ಘ ದೇಹದ ಸ್ನಿಗ್ಧ ಲಾವಣ್ಯವೂ ಸಹಪಾಠಿಗಳನ್ನು ಆತನೆಡೆಗೆ ಎಳೆತಂದುವು. ಆತನ ಅಸಾಧಾರಣ ದೈಹಿಕ ಸೌಂದರ್ಯವನ್ನೂ ಸಮುಜ್ವಲ ಮರ್ಮಭೇದಿಯಾದ ದೃಷ್ಟಿಪೂರ್ಣ ವಿಶಾಲ ನೇತ್ರಗಳನ್ನೂ ನೋಡಿ ಸಹಾಧ್ಯಾಯಿಗಳು ಮುಗ್ಧರಾಗುತ್ತಿದ್ದರು ಎಂಬುದನ್ನು ಕಂಡವರನೇಕರು ಈಗಲೂ ಹೇಳುತ್ತಾರೆ. ನರೇಂದ್ರನ ವ್ಯಂಗ್ಯ ವಾಕ್ಯಗಳಿಂದ ಅನೇಕರು ಜರ್ಜರಿತ ಹೃದಯರಾಗುತ್ತಿದ್ದರಂತೆ. ತಪ್ಪು ತೋರಿದರೆ ಆತನು ಯಾರನ್ನೂ ಉಳಿಸುತ್ತಿರಲಿಲ್ಲ. ಇತರರನ್ನು ಪರಿಹಾಸ್ಯಕ್ಕೆ ಈಡುಮಾಡುವಾಗ ಆತನಲ್ಲಿ ಮಾತ್ಸರ್ಯ ಮೊದಲಾದ ನೀಚಭಾವಗಳು ಇರುತ್ತಿರಲಿಲ್ಲ. ತಮ್ಮ ತಪ್ಪನ್ನು ಹೊರಗೆಡಹಿದುದಕ್ಕಾಗಿ ಯಾರಾದರೂ ತನ್ನನ್ನು ನಿಂದಿಸಿದರೆ ಅಥವಾ ಇಲ್ಲದ ಸಲ್ಲದ ದೋಷಾರೋಪಣೆ ಮಾಡಿದರೆ ಅದನ್ನು ಗಣನೆಗೆ ತರುತ್ತಿರಲಿಲ್ಲ. ಅಪರಿಚಿತರನ್ನು ಎವೆಯಿಕ್ಕದೆ ನೋಡುವುದು, ಮುಗುಳ್ನಗೆ ನಗುವುದು, ಅವರನ್ನೇ ನೋಡುತ್ತಿದ್ದು ಅವರನ್ನು ತನ್ನ ಕಡೆಗೆ ತಿರುಗಿಸುವುದು, ಕೋಮಲವಾದ ಅಂಗಭಂಗಿಯಿಂದ ಮೆರೆಯುವುದು, ತರಳೆಯರಂತೆ ಬಳುಕಿ ನಡೆಯುವುದು ಮೊದಲಾದುವುಗಳನ್ನು ಕಂಡಲ್ಲಿ ಖಂಡಿಸದೆ ಇರುತ್ತಿರಲಿಲ್ಲ. ನರೇಂದ್ರನಲ್ಲಿ ಸಹಪಾಠಿಗಳಿಗೆ ಒಂದು ವಿಧವಾದ ಗೌರವವಿತ್ತು. ಕುಸ್ತಿ, ಕ್ರಿಕೆಟ್ಟು, ಚೆಂಡಾಟ ಮೊದಲಾದುವುಗಳಲ್ಲಿ ಮುಂದಾಳಾಗಿದ್ದ ನರೇಂದ್ರನು ಮಾನಸಿಕ ದೈಹಿಕ ಶಕ್ತಿಗಳಲ್ಲಿ ಯಾರಿಗೇನು ಕಡಿಮೆಯಾಗಿರಲಿಲ್ಲ.

ಗಂಭೀರ ಪ್ರಕೃತಿಯುಳ್ಳವನಾಗಿದ್ದರೂ ಎಷ್ಟೋ ಸಾರಿ ಹಾಸ್ಯ ಪರಿಹಾಸ್ಯಗಳಲ್ಲಿ ತೊಡಗುತ್ತಿದ್ದನು. ಮನಸ್ಸು ಬಂದರೆ ಅವನ ಲೇವಡಿಯ ಮುಂದೆ ಯಾರ ಕೈಯೂ ಸಾಗುತ್ತಿರಲಿಲ್ಲ. ತೀಕ್ಷ್ಣ ಬುದ್ಧಿಯುಳ್ಳ ಆತನು ಸ್ವಲ್ಪ ಕಾಲದಲ್ಲಿಯೆ ನಿರ್ದಿಷ್ಟ ಪಾಠಗಳನ್ನು ಗ್ರಹಿಸಿಬಿಡುತ್ತಿದ್ದನು. ಉಳಿದ ಕಾಲವನ್ನು ಸಂಗೀತ ಹಾಸ್ಯ ಪರಿಹಾಸ್ಯಗಳಲ್ಲಿ ಕಳೆಯುತ್ತಿದ್ದನು. ನರೇಂದ್ರನ ಸಂಗಮವೆಂದರೆ ವಿದ್ಯಾರ್ಥಿಗಳಿಗೊಂದು ಹಬ್ಬವಾಗುತ್ತಿತ್ತು.

ಆದರೆ ಆತನ ಮಿತ್ರರಿಗೆ ಅಗೋಚರವಾಗಿ, ಹಾಸ್ಯಪ್ರಮೋದಗಳ ಹಿಂದೆ ಆತ್ಮದ ಅಂತರಾಳದಲ್ಲಿ, ಸಿಡಿಲು ಮಿಂಚು ಮುಗಿಲು ಕವಿದ ಪ್ರಲಯ ಸನ್ನಾಹವಾಗುತ್ತಿತ್ತು.

ಚಲನೆಯೆ ಚೇತನದ ಚಿಹ್ನೆ. ನಿರಂತರವಾಗಿ ಎಚ್ಚತ್ತಿರುವುದೆ ನಿಜವಾದ ಎಚ್ಚರಿಕೆಯ ಕುರುಹು. ಬುದ್ಧಿ ಸದಾ ನೂತನ ವಿಚಾರಗಳಲ್ಲಿ ತೊಡಗುತ್ತಿರುವುದೆ ಆತ್ಮಪ್ರಗತಿಯ ಪ್ರಥಮ ಸೋಪಾನ. ವಿಚಾರವಿಲ್ಲದ ಬುದ್ಧಿ ಮೃತಬುದ್ಧಿಯೇ ಸರಿ. ಯಾವ ತರುಣನ ಬುದ್ಧಿ ತತ್ತ್ವವಿಚಾರಗಳಲ್ಲಿ ತೊಡಗಿ, ಗಮನವು ಜೀವನದ ಚರಮೋದ್ದೇಶದ ಕಡೆಗೆ ತಿರುಗುವುದೋ ಆತನ ಹೃದಯದ ಐಶ್ವರ್ಯ ಬೆಳೆದು ನಳನಳಿಸುತ್ತದೆ. ತರುಣರು ಜೀವನದ ಸಮಸ್ಯೆಗಳನ್ನು ಧೈರ್ಯವಾಗಿ ಸಂಧಿಸಬೇಕು. ಹೃದಯದ ಅಂತರಾಳದ ನಿಗೂಢ ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಸಾಹಸದಿಂದ ಹುಡುಕಬೇಕು.

ಸೋಲಿಗೆ ಅಂಜದೆ ವಿಚಾರಮಾರ್ಗದಲ್ಲಿ ಮುಂದುವರಿಯಬೇಕು. ಜ್ಞಾನವೃಕ್ಷವನ್ನು ಹಿಡಿದು ಚೆನ್ನಾಗಿ ಅಲುಗಾಡಿಸಬೇಕು. ಅದರಲ್ಲಿ ನಿಷ್ಪ್ರಯೋಜಕವಾದ ಶುಷ್ಕ ಶಾಖೆಗಳಿದ್ದರೆ, ಹಣ್ಣೆಲೆಗಳಿದ್ದರೆ ಕೆಳಗುದುರಿ ಬೀಳಲಿ. ಬಲವಾದ ಕೊಂಬೆಗಳು ಹಸುರೆಲೆಗಳು ಹೊಸ ಹೂವುಗಳು ಚೆನ್ನಾಗಿ ಬದುಕಿ ಬಾಳಲಿ. ಸತ್ಯವು ಕೆಣಕಿದಂತೆಲ್ಲ ವಿಶಾಲವಾಗುವುದು, ಕೆಣಕಿದಂತೆಲ್ಲ ತಳತಳಿಸುವುದು, ಹೊಗೆಯಾಡುವ ಬೆಂಕಿಯಂತೆ, ಬೂದಿಮುಚ್ಚಿದ ಕೆಂಡದಂತೆ.

ನರೇಂದ್ರನಾಥನ ವಿಚಾರಶಕ್ತಿ ವಿಪುಲವಾದಂತೆಲ್ಲ ಆತನ ಸಂದೇಹಗಳೂ ಹೆಚ್ಚಿದುವು. ಪ್ರಶ್ನೆಗಳೂ ಸಮಸ್ಯೆಗಳೂ ಒಂದಾದ ಮೇಲೊಂದು ಬಂದು ಆತನ ಚಿತ್ತವನ್ನು ಮುತ್ತಿದುವು. ಹೊಸ ಹೊಸ ದರ್ಶನಶಾಸ್ತ್ರಗಳನ್ನು ಓದಿದಂತೆಲ್ಲ ಹಳೆಯ ಕುರುಡು ನಂಬಿಕೆಗಳು ಸಿಡಿದೊಡೆದು ಹಾರಿಹೋದುವು. ಪಾಶ್ಚಾತ್ಯ ವಿಜ್ಞಾನ ತತ್ತ್ವಶಾಸ್ತ್ರಗಳ ಪ್ರಭಾವದಿಂದ ಆತನ ಹೃದಯದಲ್ಲಿ ಸಂಶಯಗಳ ತುಮುಲಯುದ್ಧ ಆರಂಭವಾಯಿತು. ಜನ್ಮತಃ ಆತನಲ್ಲಿದ್ದ ಸಂಸ್ಕಾರ ಮತ್ತು ವಿಶ್ವಾಸಗಳು ನಷ್ಟವಾದುವು. ಆತ್ಮಜೀವನ ನೂತನ ಜ್ಞಾನದ ಸಂದಿಗ್ಧತೆಯ ಆಘಾತದಿಂದ ತತ್ತರಿಸಿತು. ಡೇಕಾರ್ಟ್‌ನ ಅಹಂವಾದ, ಹ್ಯೂಮ್‌ನ ನಾಸ್ತಿಕ ನಿರೀಶ್ವರವಾದ, ಸ್ಪೆನ್ಸರರ ಅಜ್ಞೇಯವಾದ ಇತ್ಯಾದಿ ವಿಭಿನ್ನ ದರ್ಶನಗಳ ಚಿಂತಾರಣ್ಯದ ನಡುವೆ ಬಗೆ ಬಟ್ಟೆಗೆಟ್ಟ ನರೇಂದ್ರನು ಸತ್ಯದ ಲಾಭಕ್ಕಾಗಿ ವ್ಯಾಕುಲಚಿತ್ತನಾದನು.

ಪಂಚೇಂದ್ರಿಯ ಗ್ರಾಹ್ಯವಾದ ಜಡಜಗತ್ತಿನ ಅಂತರಾಳದಲ್ಲಿ ಸೂತ್ರಧಾರನಾದ ಶಕ್ತಿಪುರುಷನೊಬ್ಬನು ಇದ್ದಾನೆಯೆ? ಈ ಮಾನವ ಜೀವನದ ಉದ್ದೇಶವೇನು? ನಾವೇಕೆ ಬಂದೆವು? ಎಲ್ಲಿಗೆ ಹೋಗುವೆವು? ಈ ಗಮನಾಗಮನವಾದರೂ ಏಕೆ? ಇದಕ್ಕೆ ಆದಿಯೆಲ್ಲಿ? ಅಂತ್ಯವೆಲ್ಲಿ? ಇವುಗಳನ್ನು ತಿಳಿಯಲಳವೇ? ಅನುಭವಿಸಲಳವೇ? ಇವೇ ಮೊದಲಾದ ಅತೀಂದ್ರಿಯ ಲೋಕದ ರಹಸ್ಯಪೂರ್ಣವಾದ ಸಮಸ್ಯೆಗಳು ಒಂದಾದ ಮೇಲೊಂದು ಮೂಡತೊಡಗಿದುವು. ತತ್ತ್ವಶಾಸ್ತ್ರಗಳ ದಂಡಕಾರಣ್ಯದಲ್ಲಿ ತೊಳಲಿ ತೊಳಲಿ ಬಳಲಿ ಕಡೆಗೆ ನರೇಂದ್ರನು ವಿಜ್ಞಾನ ಮತ್ತು ತತ್ತ್ವಶಾಸ್ತ್ರಗಳು ಬುದ್ಧಿಯನ್ನು ಚುರುಕು ಮಾಡುತ್ತವೆಯೇ ಹೊರತು ಸಿದ್ಧಿಯನ್ನು ದಾನ ಮಾಡಲಾರವು ಎಂಬ ನಿಜವನ್ನು ತಿಳಿದನು. ಆದ್ದರಿಂದ ಸತ್ಯಾನ್ವೇಷಣೆಗಾಗಿ ಆಗಿನ ಕಾಲದ ಪ್ರಸಿದ್ಧ ಧರ್ಮಪ್ರಚಾರಕರ ಬಳಿಗೆ ಹೋಗತೊಡಗಿದನು. ಸ್ವಲ್ಪ ದಿನಗಳಲ್ಲಿಯೆ 'ಬ್ರಾಹ್ಮಸಮಾಜ'ವನ್ನೂ ಸೇರಿದನು. ಆದರೆ ಧರ್ಮಪ್ರಚಾರಕರ ವಾದವಿವಾದಗಳಿಂದ ಆತನ ಎದೆಗೆ ಯಾವ ಬೆಳಕೂ ಬರಲಿಲ್ಲ. 'ಈಶ್ವರನಿರುವುದು ನಿಜವೇ? ಆತನಿರುವುದು ಸತ್ಯವಾದರೆ ನಾನವನನ್ನು ನೋಡಲೇಬೇಕು' ಎಂಬ ಚಿಂತೆ ಜ್ವಾಲೆಯೋಪಾದಿಯಲ್ಲಿ ಆತನ ಹೃದಯವನ್ನು ಆಕ್ರಮಿಸಿತು.

ಪ್ರಚಂಡ ಈಶ್ವರ ದರ್ಶನಾಕಾಂಕ್ಷೆಯಿಂದ ಪೀಡಿತನಾದ ನರೇಂದ್ರನು ಒಂದು ದಿನ ಮಹರ್ಷಿ ದೇವೇಂದ್ರನಾಥ ಠಾಕೂರರ ಭವನಕ್ಕೆ ಹೋದನು. ಮಹರ್ಷಿಗಳು ತಮ್ಮ ಆಫೀಸು ಕೋಣೆಯಲ್ಲಿ ಕುಳಿತಿದ್ದರು. ನರೇಂದ್ರನು ಹಿಂದು ಮುಂದು ನೋಡದೆ ಬಾಗಿಲನ್ನು ನೂಕಿ ಒಳಹೊಕ್ಕು ಋಷಿವರ್ಯರ ಮುಂದೆ ನಿಂತನು. ಧ್ಯಾನದಲ್ಲಿದ್ದ ಮಹರ್ಷಿಗಳು ಬೆಚ್ಚಿಬಿದ್ದು ಮೈತಿಳಿದು ಮಾತನಾಡುವುದಕ್ಕೆ ಮುನ್ನವೆ ನರೇಂದ್ರನು "ಮಹಾಶಯಾ, ನೀವು ದೇವರನ್ನು ನೋಡಿದ್ದೀರಾ?" ಎಂದು ದಿಟ್ಟದನಿಯಿಂದ ಪ್ರಶ್ನೆ ಮಾಡಿಬಿಟ್ಟನು. ಮಹರ್ಷಿಗಳು ಬಾಲಕನನ್ನು ಎವೆಯಿಕ್ಕದೆ ನೋಡಿದರು. ತೇಜಸ್ವಿಯಾದ ನರೇಂದ್ರನ ವದನ ಅರ್ಥಗರ್ಭಿತವಾಗಿ ಜಾಜ್ವಲ್ಯಮಾನವಾಗಿತ್ತು. ಕಣ್ಣುಗಳು ಮಿಂಚುತ್ತಿದ್ದುವು. ತೆರೆದಿದ್ದ ಬಾಯನ್ನು ಮುಚ್ಚಿರಲಿಲ್ಲ. ಮಹರ್ಷಿಗಳು ಪ್ರಶ್ನೆಯ ಅಗಾಧತೆಗೂ ವಾಣಿಯ ಗಂಭೀರತೆಗೂ

ವಿಸ್ಮಯಸ್ತಂಭಿತರಾದರು. ಅವರ ಎದೆ ಅಳಿಮಸಗಿದಂಬುಧಿಯಂತೆ ಅಲ್ಲೋಲಕಲ್ಲೋಲವಾಯಿತು. ಒಂದು ಸಲ ಪ್ರತ್ಯುತ್ತರವೀಯಲು ಯತ್ನಿಸಿದರು; ಆಗಲಿಲ್ಲ. ಎರಡನೆಯ ಸಲ, ಮೂರನೆಯ ಸಲ, ಆದರೂ ಆಗಲಿಲ್ಲ. ಮಾತುಗಳು ಸೋತುಹೋದುವು. ಕೊನೆಗೆ ನರೇಂದ್ರನ ಉಜ್ವಲ ವಿಶಾಲ ನೇತ್ರದ್ವಯವನ್ನು ಅನಿಮಿಷ ನಯನರಾಗಿ ಈಕ್ಷಿಸುತ್ತ ಮಹರ್ಷಿಗಳು "ವತ್ಸ, ನಿನಗೆ ಯೋಗಿಯ ಕಣ್ಣುಗಳಿವೆ!" ಎಂದರು.

ನರೇಂದ್ರನು ಹತಾಶನಾದನು. ಯಾರೂ ಸತ್ಯವನ್ನು ತಿಳುಹಲಾರದೆ ಹೋದರು. ಧರ್ಮಪ್ರಚಾರಕರ ನಾನಾ ಪ್ರಕಾರವಾದ ಅಸಂಬದ್ಧ ಪ್ರಲಾಪಗಳಿಂದಲೂ ಚರ್ವಿತಚರ್ವಣಲಬ್ಧ ಸಾಮಾನ್ಯ ಜ್ಞಾನದಿಂದಲೂ ನರೇಂದ್ರನ ಆಧ್ಯಾತ್ಮಿಕ ಪಿಪಾಸೆ ತಣಿಯಲಿಲ್ಲ. ಇನ್ನೂ ದಿನದಿನವೂ ಅದು ವರ್ಧಿತವಾಗುತ್ತ ಹೋಯಿತು. ಬ್ರಾಹ್ಮ ಸಮಾಜಕ್ಕೇನೊ ಹೋಗುವುದನ್ನು ಬಿಡಲಿಲ್ಲ. ಪ್ರತಿ ಭಾನುವಾರವೂ ಸಮಾಜದಲ್ಲಿ ಜರುಗುತ್ತಿದ್ದ ಉಪಾಸನೆಗಳಲ್ಲಿ ನರೇಂದ್ರನ ಮಧುರಕಂಠದಿಂದ ನೆರೆದವರು ಹರ್ಷಿತರಾಗುತ್ತಿದ್ದರು.

ಆಧ್ಯಾತ್ಮಿಕ ತೃಷ್ಣೆ ಹೆಚ್ಚಿದಂತೆಲ್ಲ ಆತನ ಅನ್ವೇಷಣೆಯೂ ಹೆಚ್ಚಿತು. ಅನೇಕ ವ್ಯಕ್ತಿಗಳನ್ನು ಸಂದರ್ಶಿಸಿ ಪ್ರಶ್ನೆ ಮಾಡಿದನು. ಒಬ್ಬೊಬ್ಬರು ಒಂದೊಂದು ರೀತಿಯಾಗಿ ಹೇಳಿಬಿಟ್ಟರು. ಧರ್ಮನಟರಲ್ಲಿ ನರೇಂದ್ರನಿಗೆ ನಂಬುಗೆಗೆಟ್ಟಿತು. ಅನೇಕ ಗ್ರಂಥಗಳಲ್ಲಿ ಸತ್ಯವನ್ನು ಹುಡುಕಿದನು. ಭಗವದ್ಗೀತೆಯನ್ನು ಓದಿದನು. ಓದುವಾಗಲೇನೋ ಆತನ ಮೈಯಲ್ಲಿ ಮಿಂಚಿನ ಹೊನಲು ಹರಿಯುತ್ತಿತ್ತು. ಆದರೆ ಎದೆ ಶಾಂತವಾಗಲಿಲ್ಲ. ಸನಾತನ ಧರ್ಮ, ವೇದಗಳು, ಉಪನಿಷತ್ತುಗಳು, ಷಡ್ದರ್ಶನಗಳು, ಕಾಂಟ್, ಹೇಗಲ್, ಅರಿಸ್ಟಾಟಲ್, ಪ್ಲೇಟೋ, ವ್ಯಾಸ, ವಾಲ್ಮೀಕಿ, ವರ್ಡ್ಸ್‌ವರ್ತ್, ಷೆಲ್ಲಿ ಎಲ್ಲವೂ ಪರ್ಯಾಯಕ್ರಮದಿಂದ ಮುಗಿದುವು. ಏನೂ ಪ್ರಯೋಜನವಾಗಲಿಲ್ಲ.

ಇನ್ನೇನು ಮಾಡುವುದು? ದಾರುಣವಾದ ಹೃದಯದ ತೃಷ್ಣೆಯನ್ನು ತವಿಸುವುದೆಂತು? "ಸಂಶಯಾತ್ಮಾ ವಿನಶ್ಯತಿ." ಸಂದೇಹಗಳನ್ನು ಛಿದ್ರಿಸುವುದೆಂತು? ಛಿದ್ರಿಸುವರಾರು? ಯಾರೂ ಇಲ್ಲವೆ?

ಜಗಜ್ಜೀವನದ ಅನಂತ ಕಾಲಪಥದಲ್ಲಿ ಮಹಾಪುರುಷರು ಜ್ಯೋತಿರ್ಧಾರಿಗಳಾಗಿ ಅಲ್ಲಲ್ಲಿ ನಿಂತಿದ್ದಾರೆ. ಅವರ ಜೀವನ ಚರಿತ್ರೆಗಳು ನಿರಾಶೆಯ ಕತ್ತಲೆಯಲ್ಲಿ ಆಶಾಕಿರಣಗಳಾಗುತ್ತವೆ. ನರೇಂದ್ರನಲ್ಲಿ ಅಂತಹ ಒಬ್ಬೊಬ್ಬರ ಜೀವನ ಚರಿತ್ರೆಗಳನ್ನು ಓದಿದಂತೆಲ್ಲ ಒಂದೊಂದು ಆದರ್ಶ ಉದ್ದೀಪನವಾಗುತ್ತಿತ್ತು. ಅವುಗಳಲ್ಲಿ ಎರಡು ಆದರ್ಶಗಳಂತೂ ಅವನ ಆತ್ಮವನ್ನು ಪ್ರಬಲವಾಗಿ ಆಕ್ರಮಿಸಿ ಎಳೆದಾಡತೊಡಗಿದ್ದುವು. ಒಂದು ಚಿತ್ರದಲ್ಲಿ ನರೇಂದ್ರನು ಸಂಸಾರಿ, ಭೋಗಿ; ಪ್ರಪಂಚದ ಸುಖಗಳನ್ನೂ ಸಂಪತ್ತನ್ನೂ ವಿಪುಲವಾಗಿ ಸಂಪಾದಿಸಿ ಎಲ್ಲರ ವಿಶ್ವಾಸಕ್ಕೂ ಗೌರವಕ್ಕೂ ಪಾತ್ರನಾಗಿ ದೊಡ್ಡಮನುಷ್ಯನಾಗಿದ್ದಾನೆ. ಮತ್ತೊಂದು ಚಿತ್ರದಲ್ಲಿ ಆತನು ಸಂನ್ಯಾಸಿ, ತ್ಯಾಗಿ; ಸುಖ ಸಂಪತ್ತುಗಳನ್ನೆಲ್ಲ ತಿರಸ್ಕರಿಸಿ ಕಾವಿಯುಟ್ಟು, ಆತ್ಮಸಾಕ್ಷಾತ್ಕಾರದ ಮಹಾಸಾಧನೆಯೊಂದರಲ್ಲಿಯೇ ಮಗ್ನನಾಗಿ, ಅಜ್ಞಾತತೆಯ ಮತ್ತು ಅನಾಮಧೇಯತೆಯ ವಿರಾಡಭಿಮಾನದ ಮಹಾನಂದವನ್ನು ಅನುಭವಿಸುತ್ತಿದ್ದಾನೆ. ಅನಿಶ್ಚಯತೆಯ ತೂಗುಯ್ಯಾಲೆಯಲ್ಲಿ ನರೇಂದ್ರನು ತೂಗಿ ತೂಗಿ ಬಳಲಿದನು.

ಪ್ರತಿ ರಾತ್ರಿಯೂ ಜಗತ್ತೆಲ್ಲವೂ ನೀರವವಾಗಿರುವಾಗ ತನ್ನ ಹಾಸಗೆಯ ಮೇಲೆ ಕೈಮುಗಿದು ಕುಳಿತು ಮಾರ್ಗದರ್ಶನಕ್ಕಾಗಿ ಭಗವಂತನನ್ನು ತೀವ್ರ ವೇಧೆಯಿಂದ ಪ್ರಾರ್ಥಿಸಲಾರಂಭಿಸಿದನು! "ದಾರಿ ತೋರೆನಗೆ, ದೇವದೇವ, ನೂರಾರು ಹಾದಿಗಳು ಸೇರುವೆಡೆ ಕತ್ತಲೆಯಲ್ಲಿ ಕಣ್ಣು ಕಾಣದೆ ನಿಂತು ಭೀತನಾಗಿದ್ದೇನೆ. ಲೋಕದ ಪ್ರಲೋಭನಗಳೂ ಹೃದಯದ ಅಶಾಂತಿಯೂ ದಿನ ದಿನವೂ ಹೆಚ್ಚಾಗುತ್ತಿವೆ. ನೂರಾರು ಪರಸ್ಪರ ವಿರುದ್ಧ ಬೋಧನೆಯಿಂದ ಮನಸ್ಸು ಕದಡಿಹೋಗಿದೆ. ಶಾಂತಿ ಬರುವ ಬದಲು ಮತೀಯ ಭ್ರಾಂತಿ ಹೆಚ್ಚುತ್ತಿದೆ. ಹಾಳಾಗುವ ಮೊದಲು, ಹುಡಿಯಲ್ಲಿ ಹೊರಳಿ ಬೀಳುವ ಮೊದಲು ರಕ್ಷಿಸೆನ್ನನು, ದೇವದೇವ!"

ಒಂದು ದಿನ ಕಾಲೇಜಿನಲ್ಲಿ ಇಂಗ್ಲೀಷು ಪಾಠ ನಡೆಯುತ್ತಿತ್ತು. ಅಧ್ಯಾಪಕರು ಆಂಗ್ಲೇಯ ಕವಿಗಳಲ್ಲಿ ಋಷಿಸದೃಶನಾದ ವರ್ಡ್ಸ್‌ವರ್ತ್ ಮಹಾಕವಿಯ ಕಾವ್ಯವನ್ನು ಪಾಠ ಹೇಳುತ್ತಿದ್ದರು. ಋಷಿಕವಿ ತನಗುಂಟಾಗಿದ್ದ ಭಾವಸಮಾಧ್ಯವಸ್ಥೆಯನ್ನು ವರ್ಣಿಸುವ ಪಂಕ್ತಿಗಳನ್ನು ವಿವರಿಸುವ ಸಮಯದಲ್ಲಿ ಅಧ್ಯಾಪಕರು ಆ ಮಹಾವಸ್ಥೆಯ ಅನಿರ್ವಚನೀಯತೆಯನ್ನು ಹೇಳಿ, ಅಂತಹ ಅವಸ್ಥೆಯನ್ನು ನೋಡಬೇಕಾದರೆ ದಕ್ಷಿಣೇಶ್ವರದಲ್ಲಿರುವ ಪರಮಹಂಸ ಶ್ರೀರಾಮಕೃಷ್ಣರ ಬಳಿಗೆ ಹೋದರೆ ಚೆನ್ನಾಗಿ ವಿಶದವಾಗುತ್ತದೆ ಎಂದು ವ್ಯಾಖ್ಯಾನ ಮಾಡಿದರು.

[1]ನರೇಂದ್ರನಾಥನು ಪರಮಹಂಸರ ಹೆಸರನ್ನು ಕೇಳಿದುದು ಅದೇ ಮೊತ್ತಮೊದಲು. ಐರೋಪ್ಯ ಅಧ್ಯಾಪಕರ ಬಾಯಿಂದ ಬಂದ ಈ ಮಾತುಗಳು ಆತನ ಚಿತ್ತದಲ್ಲಿ ಚಿರಮುದ್ರಿತವಾದುವು.
ಆತನ ಹೃದಯದಲ್ಲಿ ಭಕ್ತಿ ಮತ್ತು ಸಂಶಯಗಳ ಪ್ರಚಂಡ ತುಮುಲ ಯುದ್ಧಕ್ಕೆ ಆರಂಭವಾಗಿತ್ತು. ಧರ್ಮಪ್ರಚಾರಕರ ಶುಷ್ಕವಾಕ್ಯಗಳು ಆತನ ಬೆಂದೆದೆಯನ್ನು ತಣಿಸಲಾರದೆ ಹೋಗಿದ್ದುವು. ಆದ್ದರಿಂದಲೇ ಆತನು ಭಗವಾನ್ ಶ್ರೀರಾಮಕೃಷ್ಣರ ಬಳಿಗೆ ಹೋಗಲು ನಿರ್ಧರಿಸಿದನು. ಆದರೆ ಪರೀಕ್ಷೆ ಬಳಿ ಸಾರಿ ಬಂದುದರಿಂದ ಕೂಡಲೆ ಅಲ್ಲಿಗೆ ಹೋಗಲು ಆಗಲಿಲ್ಲ.

ಈ ಮಧ್ಯೆ ೧೮೮೧ನೆಯ ನವೆಂಬರು ತಿಂಗಳಲ್ಲಿ ಒಂದು ಸಂಗತಿ ಜರುಗಿತು. ಕಲ್ಕತ್ತಾ ನಗರದ ಸಿಮ್ಲಾಪಳ್ಳಿಯಲ್ಲಿ ವಾಸಿಸುತ್ತಿದ್ದ ಸುರೇಂದ್ರನಾಥಮಿತ್ರನು ತನ್ನ ಮನೆಯಲ್ಲಿ ಜರುಗಲಿದ್ದ ಯಾವುದೊ ಒಂದು ಉತ್ಸವಕ್ಕೆ ಶ್ರೀರಾಮಕೃಷ್ಣರನ್ನು ಆಹ್ವಾನಿಸಿದ್ದನು. ಆ ದಿನ ಉತ್ಸವಕ್ಕೆ ಹಾಡಲು ಯಾರೂ ದೊರಕದಿರಲು ತನ್ನ ಬಂಧುವೂ ನೆರೆಯವನೂ ಆದ ನರೇಂದ್ರನಾಥನನ್ನು ಸಂಗೀತಕ್ಕಾಗಿ ಕರೆತಂದನು. ನರೇಂದ್ರನ ಅಮರವಾಣಿಯ ಮಧುರ ವೀಚಿಗಳು ಅಲ್ಲಿ ನೆರೆದಿದ್ದವರೆಲ್ಲರನ್ನೂ, ವಿಶೇಷವಾಗಿ ಪರಮಹಂಸರನ್ನು, ಆನಂದಾಂಬುಧಿಯಲ್ಲಿ ಓಲಾಡಿಸಿದುವು. ಗುರುದೇವನು ತರುಣನನ್ನು ಮೇಲಿಂದ ಮೇಲೆ ಹೊಗಳಿ ದಕ್ಷಿಣೇಶ್ವರಕ್ಕೆ ಒಂದು ದಿನ ಬಂದು ಹೋಗುವಂತೆ ಆತನನ್ನು ಆಹ್ವಾನಿಸಿದರು. ನೆರೆತ ನವಿರಿನ ಸನಾತನ ಪ್ರಾಚೀನವು ಸಿರಿಜವ್ವನದ ನೂತನ ಅರ್ವಾಚೀನವನ್ನು ಭವತಾರಿಣಿಯ ಪ್ರಶಾಂತ ಮಂದಿರದಲ್ಲಿ ಸಾಧಿಸಲು ತನ್ನೆಡೆಗೆ ಆಹ್ವಾನಿಸಿತು: ದಿವ್ಯ ಆಹ್ವಾನ!

* * *

[1] ವರ್ಡ್ಸ್‌ವರ್ತ್ ಮಹಾಕವಿಯಲ್ಲಿ ವಿವೇಕಾನಂದರಿಗೆ ಪರಮಾದರವಿದ್ದಿತಂತೆ. ಹಾಗೆಯೆ ನೆಪೋಲಿಯನ್ ಮಹಾಯೋಧನನ್ನೂ ಬಹಳವಾಗಿ ಹೊಗಳುತ್ತಿದ್ದರಂತೆ.

## ೫. "ಮುಕ್ತಿರಾಹು"

ಪ್ರತಿಯೊಬ್ಬ ಮಹಾಪುರುಷನ ಜೀವನದಲ್ಲಿಯೂ - ಬಹುಶಃ ಸಾಮಾನ್ಯನ ಜೀವನದಲ್ಲಿಯೂ - ಒಂದು ಸಂಧಿಕಾಲ ಬರುತ್ತದೆ. ಚಿಕ್ಕಂದಿನಲ್ಲಿ ತಂದೆತಾಯಿಗಳಿಂದಲೂ ಇತರರಿಂದಲೂ ವಿಮರ್ಶೆಯಿಲ್ಲದೆ ವಿಚಾರವಿಲ್ಲದೆ ಸಂಶಯವಿಲ್ಲದೆ ಸ್ವೀಕರಿಸಿದ ಭಾವನೆ, ಆಲೋಚನೆ, ಶ್ರದ್ಧೆ, ಕಥೆ, ನಂಬುಗೆ ಇತ್ಯಾದಿಗಳ 'ಶ್ರುತಿ'ಗೂ ತರುವಾಯ ತಾರುಣ್ಯದಲ್ಲಿ ಬುದ್ಧಿ ಪ್ರಬುದ್ಧವಾದ ಮೇಲೆ ಮೂಡುವ ವಿಮರ್ಶೆಯ ವಿಚಾರದ ಸಂಶಯದ ಪ್ರತಿಭಟನೆಯ 'ಮತಿ'ಗೂ ಗದಾಯುದ್ಧವಾಗುವ ಕ್ರಾಂತಿಕಾಲದಿಂದ ಬುದ್ಧಿಯಿರುವವರು ಯಾರೂ ತಪ್ಪಿಸಿಕೊಳ್ಳಲಾರರು. ಅಂತಹ ಮಾನಸಿಕ ಕ್ರಾಂತಿ ಹೊಸಬಾಳಿಗೆ ಕಾರಣವಾಗುತ್ತದೆ. ಹಾಗೆ ಎರಡನೆಯ ಸಾರಿ ಹೊಸತಾಗಿ ಹುಟ್ಟಿದವರೆಲ್ಲರೂ ನಿಜವಾಗಿ ದ್ವಿಜರಾಗುತ್ತಾರೆ.

ವಸಂತ ಸಮಯದಲ್ಲಿ ಸಸ್ಯಪ್ರಪಂಚದಲ್ಲಿ ನವಚೇತನ ತೋರುವಂತೆ ಯೌವನೋದಯದಲ್ಲಿ ತಾರುಣ್ಯವು ಅನಂತವಿರಹದಿಂದ, ಅನಂತಾಕಾಂಕ್ಷೆಯಿಂದ, ಅನಂತಸಾಮರ್ಥ್ಯದ ಶ್ರದ್ಧೆಯಿಂದ ಉಜ್ಜ್ವಲವಾಗಿ ಅಸೀಮ ಸಾಹಸೋನ್ಮುಖವಾಗುತ್ತದೆ. ಹೊಸದಾಗಿ ಕೋಡುಮೂಡುತ್ತಿರುವ ಎಳೆಯ ಗೂಳಿ ತನ್ನ ಜೊತೆಯ ಗೂಳಿಗಳನ್ನೂ ಹುತ್ತವನ್ನೂ ಮರವನ್ನೂ ಕಡೆಗೆ ಗಾಳಿಯನ್ನೂ ಕೂಡ ತಿವಿಯುವಂತೆ ಯುವಕನು ಹೊಸದಾಗಿ ಹೊರದೋರುವ ತನ್ನ ಮತಿಯ ನಖಗಳಿಂದ ಹಳೆಯ ನಂಬುಗೆಗಳನ್ನು ಪರಚುತ್ತಾನೆ; ಹಳೆಯ ವಿಗ್ರಹಗಳ ಹೊಟ್ಟೆಯನ್ನು ಸೀಳುತ್ತಾನೆ; ಹಳೆಯ ಶ್ರುತಿಗಳನ್ನು ಕೆಣಕಿ ಕೆರಳಿಸಿ ತಲೆ ಬಿರಿಯುವಂತೆ ಅಪ್ಪಳಿಸುತ್ತಾನೆ! ಪರಿಣಾಮವಾಗಿ ಟೊಳ್ಳುಗುಳ್ಳೆಗಳೆಲ್ಲ ಒಡೆದುಹೋಗುತ್ತವೆ; ಗಟ್ಟಿ ಮುತ್ತುಗಳು ಉಳಿದುಕೊಳ್ಳುತ್ತವೆ.

ನರೇಂದ್ರನ ಜೀವನದಲ್ಲಿ ಅಂತಹ ಸಂಧಿಕಾಲ ಬಂದೊದಗಿತ್ತು. ಆತನ ಬಲಿಷ್ಠಮತಿಯ ಕಿಶೋರಕೇಸರಿಗೆ ಅಂತಹ ವಜ್ರನಖತತಿ ಮೊಳೆದೋರಿತ್ತು. ಮುಕ್ತಿರಾಹು ನಿರ್ದಯ ನಿಶ್ಚಯತೆಯಿಂದ ಅವನ ಆತ್ಮವನ್ನು ಬೆನ್ನಟ್ಟಿಯಟ್ಟಿ ಬರುತ್ತಿತ್ತು!

ಕಾಲೇಜು, ವಿದ್ಯಾಭ್ಯಾಸ, ಮಿತ್ರಗೋಷ್ಠಿ, ಬಂಧುಸ್ನೇಹ, ಸಂಗೀತಾಭ್ಯಾಸ, ತತ್ತ್ವಶಾಸ್ತ್ರಾಧ್ಯಯನ ಇವುಗಳೊಂದರಿಂದಲೂ ಆ ರಾಹು ವಂಚಿತವಾಗಲಿಲ್ಲ; ಹಿಂದಿರುಗಲಿಲ್ಲ. ಹಳುವಿನವರು ಕಾಡಿನಲ್ಲಿರುವ ಜಂತುಗಳನ್ನು ಬಿಲ್ಲಿಗೆ ಅಟ್ಟುವಂತೆ ಅದು ನರೇಂದ್ರನನ್ನು ದಕ್ಷಿಣೇಶ್ವರದ ದೇವಕಿರಾತನೆಡೆಗೆ ಎಬ್ಬತೊಡಗಿತ್ತು.

ಪರೀಕ್ಷೆ ಪೂರೈಸಿತು. ವಿಶ್ವನಾಥದತ್ತನು ಮಗನ ಮದುವೆಯ ವಿಚಾರವಾಗಿ ಪ್ರಸ್ತಾಪಿಸತೊಡಗಿದನು. ಆಜನ್ಮ ವಿವಾಹವಿತೃಷ್ಣನಾದ ನರೇಂದ್ರನಿಗೆ ವಿಷಮಾಪತ್ತಿ ಬಂದೊದಗಿತು. ಧೈರ್ಯದಿಂದ ತಂದೆಯ ಅಭಿಮತವನ್ನು ವಿರೋಧಿಸಿದನು. ವಿಶ್ವನಾಥನು ಇತರ ಬಂಧುಗಳ ಮುಖಾಂತರ ಮಗನಿಗೆ ಬುದ್ಧಿ ಹೇಳಿಸಿದನು. ಶ್ರೀರಾಮಕೃಷ್ಣ ಪರಮಹಂಸರ ಗೃಹೀಭಕ್ತರಲ್ಲಿ ಶ್ರೇಷ್ಠನಾದ ರಾಮಚಂದ್ರದತ್ತ ಮಹಾಶಯನೂ ವಿಶ್ವನಾಥದತ್ತನಿಂದ ಪ್ರೇರಿತನಾಗಿ ನರೇಂದ್ರನಿಗೆ ಮದುವೆ ಮಾಡಿಕೊಳ್ಳುವಂತೆ ಬುದ್ಧಿ ಹೇಳಿದನು. ಆದರೆ ತರುಣನ ತೀವ್ರ ವೈರಾಗ್ಯವನ್ನೂ ಆಧ್ಯಾತ್ಮಿಕ ಪಿಪಾಸೆಯನ್ನೂ ಕಂಡು ಆತನು “ಸತ್ಯಲಾಭಕ್ಕಾಗಿ ನೀನು ಅಲ್ಲಿ ಇಲ್ಲಿ ಅಲೆಯುವುದೇಕೆ? ನಿನಗೆ ನಿಜವಾಗಿಯೂ ಧರ್ಮಾಕಾಂಕ್ಷೆಯಿದ್ದರೆ ದಕ್ಷಿಣೇಶ್ವರಕ್ಕೆ ಹೋಗು. ಪರಮಹಂಸರು ನಿನಗೆ ಸತ್ಯಾನುಭವ ನೀಡುತ್ತಾರೆ” ಎಂದನು. ನರೇಂದ್ರನು “ಅನೇಕ ಧರ್ಮ ಪ್ರಚಾರಕರು ನನಗೆ ಈಗಾಗಲೆ ಸತ್ಯವನ್ನು ನೀಡಿದ್ದಾರೆ! ಹಾಗೆಯೆ ನಿಮ್ಮ ಪರಮಹಂಸನೂ ನೀಡುವುದು!” ಎಂದನು. ಅದಕ್ಕೆ ರಾಮಚಂದ್ರದತ್ತನು “ನೀನು ಒಂದು ಸಾರಿ ಪರೀಕ್ಷಿಸು” ಎಂದನು.

೧೮೮೨ನೆಯ ಸಂವತ್ಸರದ ಚೈತ್ರಮಾಸ. ಶಿಶಿರಋತುವಿನ ಆಟೋಪ ಆಗ ತಾನೆ ಅಡಗಿ ವಸಂತನು ಭೂಮಿಗೆ ಕಾಲಿಟ್ಟಿದ್ದಾನೆ. ನವಚೇತನಾನ್ವಿತಳಾದ ಭೂದೇವಿ ನವಸೌಂದರ್ಯದಿಂದ ಮೆರೆಯುತ್ತಿದ್ದಾಳೆ. ದಕ್ಷಿಣೇಶ್ವರ ದೇವಾಲಯದ ಮುಂದುಗಡೆ ಮಂದಗಾಮಿನಿಯಾದ ಮಂದಾಕಿನಿ ಪ್ರವಹಿಸುತ್ತಿದ್ದಾಳೆ. ಶ್ರೀರಾಮಕೃಷ್ಣ ಪರಮಹಂಸರು ದಕ್ಷಿಣೇಶ್ವರ ದೇವಾಲಯದ ಪ್ರಾಕಾರಾಂತರ್ಗತವಾಗಿರುವ ತಮ್ಮ ಕೋಣೆಯಲ್ಲಿ ಕುಳಿತಿದ್ದಾರೆ. ಯುವಕ ವೃದ್ಧ ಶಿಷ್ಯ ಸರ್ವರೂ ಸುತ್ತಲೂ ಕುಳಿತು ಅಮೃತಮಯವಾದ ಅವರ ಮರಣಹರಣವಾಣಿಯನ್ನು ಅನನ್ಯಮನಸ್ಕರಾಗಿ ಕೇಳುತ್ತ ಚಿತ್ರಾರ್ಪಿತ ಪ್ರತಿಮೆಗಳಂತಿದ್ದಾರೆ. ನರೇಂದ್ರನು ಮೂರು ನಾಲ್ಕು ಮಂದಿ ಗೆಳೆಯರೊಡನೆ ಕೊಠಡಿಯನ್ನು ಪ್ರವೇಶಿಸಿ ಒಂದು ಮೂಲೆಯಲ್ಲಿ ಕುಳಿತನು.

ಪರಮಹಂಸರು ತಮ್ಮ ಶಿಷ್ಯಶ್ರೇಷ್ಠನ ಪ್ರಥಮಾಗಮನವನ್ನು ಈ ರೀತಿಯಾಗಿ ವರ್ಣಿಸಿದ್ದಾರೆ:

“ನರೇಂದ್ರನು ಪಶ್ಚಿಮದ್ವಾರದಿಂದ ಮಂದಿರಪ್ರವೇಶ ಮಾಡಿದನು. ಆತನ ಮುಖದಲ್ಲಿ ಒಂದು ವಿಧವಾದ ದಿವ್ಯ ನಿರ್ಲಕ್ಷತೆ ರಂಜಿಸುತ್ತಿತ್ತು. ಬಟ್ಟೆಬರೆಗಳ ಮೇಲೆ ಆತನ ದೃಷ್ಟಿಯಿದ್ದಂತೆ ತೋರಲಿಲ್ಲ. ಇತರರಂತಲ್ಲದೆ ಅಂತರ್ಮುಖಿಯಾಗಿ ಕಂಡುಬಂದನು. ಆತನ ನೇತ್ರಗಳು ಧ್ಯಾನಾಸಕ್ತನ ನೇತ್ರಗಳಂತೆ ಅಂತರಂಗವಿಹಾರಿಗಳಾಗಿದ್ದುವು. ಕಲ್ಕತ್ತಾ ನಗರದ ಜಡಜೀವನದ ನಡುವೆ ಅಂತಹ ಆಧ್ಯಾತ್ಮಿಕಜೀವಿ ಇರುವುದನ್ನು ಕಂಡು ನನಗೆ ಪರಮಾಶ್ಚರ್ಯವಾಯಿತು. ನೆಲದ ಮೇಲೆ ಹಾಸಿದ್ದ ಚಾಪೆಯ ಮೇಲೆ ಕೂತುಕೊಳ್ಳುವಂತೆ ಅವನಿಗೆ ಹೇಳಿದೆ. ಆತನ ಜೊತೆಯಲ್ಲಿ ಬಂದಿದ್ದ ತರುಣರು ಭೋಗಾಸಕ್ತರಾಗಿ ಕಂಡುಬಂದರು. ನನ್ನ ಕೋರಿಕೆಯಂತೆ ಆತನಿಗೆ ಗೊತ್ತಿದ್ದ ಕೆಲವು ಬಂಗಾಳಿ ಗೀತೆಗಳನ್ನು ಹಾಡಿದನು. ಗಾನದಲ್ಲಿ ಯೋಗಿಯ ವಾಣಿಯೂ ಭಕ್ತನ ಹೃದಯವೂ ತುಂಬಿ ತುಳುಕುತ್ತಿದ್ದುವು. ಆವೇಶದ ಆವೇಗವನ್ನು ತಡೆಯಲಾರದೆ ಸಮಾಧಿಸ್ಥನಾಗಿಬಿಟ್ಟೆ.”

ಮುಂದಾದುದನ್ನು ಸ್ವಾಮಿ ವಿವೇಕಾನಂದರೆ ಈ ರೀತಿ ವರ್ಣಿಸಿದ್ದಾರೆ:

“ಸರಿ, ನಾನು ಹಾಡಿದೆ. ತುಸುಹೊತ್ತಾದ ಮೇಲೆ ಆತನು ತಟಕ್ಕನೆ ಮೇಲೆದ್ದು ನನ್ನ ಕೈಹಿಡಿದು ಉತ್ತರದಿಕ್ಕಿನ ವರಾಂಡಕ್ಕೆ ಕರೆದೊಯ್ದು ಕೋಣೆಯ ಬಾಗಿಲನ್ನು ಮುಚ್ಚಿದನು. ಹೊರಗಡೆ ಒಂದು ತೆರೆಮರೆಯಿದ್ದುದರಿಂದ ಅಲ್ಲಿ ನಾವಿಬ್ಬರೇ ಏಕಾಂತದಲ್ಲಿದ್ದೆವು. ಏನಾದರೂ ತತ್ತ್ವೋಪದೇಶ ಮಾಡಬಹುದೆಂದು ಭಾವಿಸಿದೆ. ಆದರೆ ಆತನ ಕಾರ್ಯವನ್ನು ಕಂಡು ಬೆಚ್ಚುಬೆರಗಾದೆ! ನನ್ನನ್ನು ಹಿಡಿದುಕೊಂಡು ಎಡೆಬಿಡದೆ ಕಂಬನಿ ಸೂಸುತ್ತ ಚಿರಪರಿಚಿತನೆಂಬಂತೆ ಸಲುಗೆಯಿಂದ “ಬರಲು ಇಷ್ಟು ತಡಮಾಡುವುದೆ? ನನ್ನನ್ನು ಈ ಪರಿ ಕಾಯಿಸಲು ನಿನಗೆ ಹೇಗೆ ಮನಸ್ಸು ಬಂತು? ಪ್ರಾಪಂಚಿಕರ ಮಾತು ಕೇಳಿ ಕೇಳಿ ನನ್ನ ಕಿವಿ ಇನ್ನೇನು ಬೆಂದುಹೋಗುವುದರಲ್ಲಿದೆ. ಅಯ್ಯೋ ನಾನು ಏದುತ್ತಿದ್ದೇನೆ. ನನ್ನ ಅಂತರಂಗದ ಅನುಭವಗಳನ್ನು ಅಧಿಕಾರಿಯೊಬ್ಬನು ಸಿಕ್ಕಿದರೆ ಸಾಕು, ಕೊಡಬೇಕೆಂದು ಕಾತರನಾಗಿದ್ದೇನೆ” ಎಂದು ಮುಂತಾಗಿ ಹೇಳುತ್ತ ಬಿಕ್ಕಿ ಬಿಕ್ಕಿ ಅಳತೊಡಗಿದನು. ತರುವಾಯ ಕೈಮುಗಿದು ನನ್ನೆದುರು ನಿಂತು “ನಾನು ಬಲ್ಲೆ. ನೀನು ಸಪ್ತರ್ಷಿ ಮಂಡಲದ ಋಷಿ, ನರ ರೂಪದ ನಾರಾಯಣ. ಜೀವರ ಕಲ್ಯಾಣಾರ್ಥವಾಗಿ ದೇಹಧಾರಣೆ ಮಾಡಿ ಅವತರಿಸಿರುವೆ” ಎಂದು ಮೊದಲಾಗಿ ಸಂಬೋಧಿಸತೊಡಗಿದನು.

“ನಾನಂತೂ ಆತನ ನಡತೆಯನ್ನು ನೋಡಿ ಬೆಚ್ಚು ಬೆರಗಾದೆ. ‘ನನಗೇನು ಮರುಳೆ? ನಾನು ಯಾರನ್ನು ನೋಡಲು ಬಂದಿದ್ದೇನೆ? ಇವನು ಬರಿಯ ಹುಚ್ಚನಾಗಿರಬೇಕು. ಇದೇನಿದು? ನಾನು ವಿಶ್ವನಾಥದತ್ತನ ಪುತ್ರ ನರೇಂದ್ರನಾಥದತ್ತ, ನನ್ನನ್ನು ನರನಾರಾಯಾಣ ಎಂದು ಕರೆಯುತ್ತಿದ್ದಾನಲ್ಲಾ!’ ಎಂದುಕೊಂಡೆ. ಹೇಳುವಷ್ಟು ಹೇಳಿಕೊಂಡುಬಿಡಲಿ ಎಂದು ಸುಮ್ಮನಿದ್ದೆ. ಇದ್ದಕ್ಕಿದ್ದ ಹಾಗೆ ನನ್ನನ್ನು ಅಲ್ಲಿಯೇ ಇರುವಂತೆ ಹೇಳಿ ಕೋಣೆಯೊಳಗೆ ನುಗ್ಗಿ ಮಿಠಾಯಿ ಸಕ್ಕರೆ ಬೆಣ್ಣೆ ಮೊದಲಾದುವುಗಳನ್ನು ತೆಗೆದುಕೊಂಡುಬಂದು ತಾನೇ ತಿನ್ನಿಸತೊಡಗಿದನು. ‘ಹೊರಗೆ ಗೆಳೆಯರಿದ್ದಾರೆ, ಅವರೊಡನೆ ತಿನ್ನುತ್ತೇನೆ’ ಎಂದು ಎಷ್ಟು ಹೇಳಿದರೂ ಕೇಳಲಿಲ್ಲ. ‘ಅವರಿಗೆ ಆಮೇಲೆ ಕೊಟ್ಟರಾಯಿತು’ ಎಂದು ಹೇಳಿ, ನಾನೆಲ್ಲವನ್ನೂ ಪೂರೈಸಿದ ಮೇಲೆಯೇ ಕೈಬಿಟ್ಟನು. ತರುವಾಯ ಮರಳಿ ಕೈಹಿಡಿದುಕೊಂಡು ‘ಬೇಗ ಬರುತ್ತೇನೆ ಎಂದು ಮಾತುಕೊಡು’ ಎಂದನು. ಆತನ ಅಟಮಟವನ್ನು ತಡೆಯಲಾರದೆ ‘ಹೂಂ, ಆಗಲಿ’ ಎಂದುಸುರಿ ಆತನೊಡನೆ ಗೆಳೆಯರಿದ್ದ ಕೊಠಡಿಗೆ ಬಂದೆ.

“ಬಂದವನು ಕುಳಿತುಕೊಂಡು ಆತನನ್ನೇ ಪರೀಕ್ಷಿಸತೊಡಗಿದೆ. ಸರಿಯಾಗಿ ಮಾತಾಡುತ್ತಿದ್ದನು. ಇತರರೊಡನೆ ಒಂದಿನಿತೂ ಕುಂದಿಲ್ಲದೆ ಆಚರಿಸುತ್ತಿದ್ದನು. ಮಾತಿನಿಂದಲೂ ನಡತೆಯಿಂದಲೂ ಆತನು ತ್ಯಾಗಮೂರ್ತಿಯಾಗಿ ಕಂಡುಬಂದನು.”

ಆ ದಿನವೂ ನರೇಂದ್ರನು ಇತರ ಧರ್ಮಪ್ರಚಾರಕರಿಗೆ ಹಾಕಿದ ಪ್ರಶ್ನೆಯನ್ನೇ ಹಾಕಿದನು: “ಮಹಾಶಯ, ತಾವು ದೇವರನ್ನು ನೋಡಿದ್ದೀರಾ?”

ಮಹಾಪುರುಷನ ಮೃದುಹಾಸ್ಯರಂಜಿತ ಪ್ರಶಾಂತವದನಮಂಡಲವು ಅಪೂರ್ವ ಕಾಂತಿಶಾಂತಿಗಳಿಂದ ಶೋಭಿಸಿತು. “ಹೌದು, ನೋಡಿದ್ದೇನೆ; ನೋಡುತ್ತಿದ್ದೇನೆ. ನಿಮ್ಮೆಲ್ಲರನ್ನು ನೋಡುವುದಕ್ಕಿಂತಲೂ ಇನ್ನೂ ಅತಿಶಯವಾಗಿ ಶಾಶ್ವತವಾಗಿ ನೋಡುತ್ತಿದ್ದೇನೆ. ಬೇಕಾದರೆ ನಿನಗೂ ತೋರಿಸುತ್ತೇನೆ. ದೇವರನ್ನು ನೋಡಬಹುದು; ಅವನೊಡನೆ ಮಾತಾಡಬಹುದು,

ನಾನೀಗ ನಿಮ್ಮೊಡನೆ ಮಾತಾಡುವಂತೆ. ಆದರೆ ದೇವರು ಯಾರಿಗೆ ಬೇಕಾಗಿದ್ದಾನೆ? ಹೆಂಡಿರು ಮಕ್ಕಳು ಹೊನ್ನು ಮಣ್ಣುಗಳಿಗಾಗಿ ಜನರು ಕೊಡಗಟ್ಟಲೆ ಕಣ್ಣೀರು ಸುರಿಯುತ್ತಾರೆ. ಆದರೆ ದೇವರಿಗಾಗಿ ಯಾರು ಹಾಗೆ ಮಾಡುವರು? ದೇವರಿಗಾಗಿ ಎದೆಮುಟ್ಟಿ ಅತ್ತರೆ ಆತನು ತೋರಿಯೇ ತೋರುತ್ತಾನೆ" ಎಂಬ ಉತ್ತರ ಸಿಡಿಲಿನಂತೆ ಮೊಳಗಿತು. ನರೇಂದ್ರನು ಮುಗ್ಧನಾದನು; ಮಾರುಹೋದನು. ಏನಾದರೂ ಆಗಲಿ, ಜಗತ್ತಿನಲ್ಲಿ ದೇವರನ್ನು ನೋಡಿದ್ದೇನೆ ಎನ್ನುವವನು ಒಬ್ಬನಾದರೂ ಲಭಿಸಿದನಲ್ಲಾ! ಎಂದು ಸಂತೃಪ್ತನಾದನು. ಆದರೂ ತನ್ನೊಡನೆ ಜರುಗಿದ ಆತನ ನಡತೆಯನ್ನು ನೆನೆದು, ಮನಶ್ಶಾಸ್ತ್ರದ ತತ್ತ್ವಗಳನ್ನು ಓದಿದ್ದ ನರೇಂದ್ರನು, ಪರಮಹಂಸರನ್ನು ಸಂಪೂರ್ಣೋನ್ಮತ್ತ ನಲ್ಲದಿದ್ದರೂ ಅರೆ ಮರುಳಾಗಿರಬೇಕೆಂದು ಭಾವಿಸಿ ಬೀಳ್ಕೊಂಡನು.

ನರೇಂದ್ರನು ಮನೆಗೆ ಹಿಂತಿರುಗಿ ಬಂದನು. ದಕ್ಷಿಣೇಶ್ವರದ ಹುಚ್ಚು ಪೂಜಾರಿ ಆತನ ಮನಸ್ಸೆಲ್ಲವನ್ನೂ ತುಂಬಿಬಿಟ್ಟಿದ್ದನು. ತರುಣನ ಸೂಕ್ಷ್ಮಬುದ್ಧಿ ಗುಡಿಯ ಪೂಜಾರಿಯ ವಿಚಿತ್ರ ವ್ಯಕ್ತಿತ್ವವು ತಂದೊಡ್ಡಿದ ಸಮಸ್ಯೆಯನ್ನು ಭೇದಿಸಲಾರದೆ ಪರಾಜಿತವಾಗಿ ಹೋಯಿತು. ಒಂದು ಸಾರಿ ಪೂಜಾರಿ ಬರಿಯ ಹುಚ್ಚನೆಂದು ತರ್ಕಿಸುವನು; ಮತ್ತೊಂದು ಸಾರಿ ಯಾರ ಪವಿತ್ರ ಸಂಗದಿಂದ ಕೇಶವಚಂದ್ರಸೇನ, ವಿಜಯಕೃಷ್ಣಗೋಸ್ವಾಮಿ ಮೊದಲಾದ ಪ್ರಸಿದ್ಧ ಆಚಾರ್ಯವರ್ಗದವರ ಧರ್ಮಜೀವನದಲ್ಲಿ ಅದ್ಭುತ ಪರಿವರ್ತನೆಗಳುಂಟಾದುವೋ ಅಂತಹವನನ್ನು ಹುಚ್ಚನೆನ್ನುವುದೆಂತು ಎಂದು ಚಿಂತಿಸುವನು. ಅಂತೂ ಯಾವ ತೀರ್ಮಾನವೂ ಮನಸ್ಸಿಗೆ ಹೊಳೆಯದೆ ಹೋಯಿತು. ಕಡೆಗೆ ಅವನು ಯಾರೇ ಆಗಲಿ ಚೆನ್ನಾಗಿ ಪರೀಕ್ಷಿಸದ ಹೊರತು ಈಶ್ವರದರ್ಶಿಯೆಂದೂ ಮಹಾಪುರುಷನೆಂದೂ ಸುಮ್ಮನೆ ಪರಿಗಣಿಸಬಾರದು ಎಂದು ನಿರ್ಣಯಿಸಿದನು. ಆದರೂ ಆ ಮರುಳು ಪೂಜಾರಿಯಲ್ಲಿ ಯಾವುದೊ ಒಂದು ಪ್ರಬಲತರ ಆಕರ್ಷಣಶಕ್ತಿಯಿರುವುದೆಂದು ನರೇಂದ್ರನು ಅನುಭವದಿಂದ ತಿಳಿದನು. ಗುರುದೇವನ ಅಪೂರ್ವ ತ್ಯಾಗ, ಶಿಶು ಭಾವ, ಅಭಿಮಾನ ಶೂನ್ಯವಾದ ಆಚರಣೆ, ವಿನಯ ನಮ್ರ ಮಧುರ ವಾಕ್ಯಸರಣಿ, ಎಲ್ಲಕ್ಕೂ ಮಿಗಿಲಾಗಿ ಆತನ ರಹಸ್ಯಮಯ ನಿಷ್ಕಾಮ ವಾತ್ಸಲ್ಯ - ಇವುಗಳು ನರೇಂದ್ರನ ಹೃದಯವನ್ನು ಸೆರೆಗೈದುವು. ಅಂತೂ ಪರೀಕ್ಷಿಸದೆ ಮರುಳನೊಬ್ಬನನ್ನು ಮಹಾಪುರುಷನೆಂದು ಭ್ರಮಿಸಿ ಜೀವನಾದರ್ಶವನ್ನಾಗಿ ಸ್ವೀಕರಿಸಿಬಿಡಬಾರದೆಂದು ದೃಢನಿಶ್ಚಯ ಮಾಡಿಕೊಂಡನು.

ಬ್ರಾಹ್ಮಸಮಾಜಕ್ಕೆ ಸೇರಿದ್ದ ನರೇಂದ್ರನಾಥನು ಸಗುಣನಿರಾಕಾರ ಬ್ರಹ್ಮೋಪಾಸನೆ ಮಾಡುವೆನೆಂದೂ, ಮೂರ್ತಿಪೂಜೆಯನ್ನು ನಿರಾಕರಿಸುವೆನೆಂದೂ ಅಂಧಶ್ರದ್ಧೆಗೆ ಶರಣಾಗೆನೆಂದೂ ಪ್ರಮಾಣಪತ್ರಿಕೆಯನ್ನೂ ಬರೆದುಕೊಟ್ಟು ಪ್ರತಿಜ್ಞೆ ಮಾಡಿದ್ದನು. ಪಾಶ್ಚಾತ್ಯ ತತ್ತ್ವಶಾಸ್ತ್ರ ತರ್ಕಶಾಸ್ತ್ರಗಳಲ್ಲಿ ಕೃತವಿದ್ಯನಾದ ಆತನು ಗೊಡ್ಡು ಸಂಪ್ರದಾಯಕ್ಕೆ ಮಾರುಹೋಗುವವನಾಗಿರಲಿಲ್ಲ. ಪ್ರತಿಯೊಂದನ್ನೂ ಚೆನ್ನಾಗಿ ವಿಮರ್ಶಿಸಿಯೇ ಸ್ವೀಕರಿಸಬೇಕೆಂದು ಆತನ ಮತವಾಗಿತ್ತು. ಈ ಎಲ್ಲ ಕಾರಣಗಳಿಂದ ಆತನಿಗೆ ಪ್ರಾಚೀನ ದೇವತೆಗಳಾದ ಕಾಳಿ, ಹರಿ, ಕೃಷ್ಣ ಮೊದಲಾದುವುಗಳಲ್ಲಿ ನಂಬುಗೆಯಿರಲಿಲ್ಲ. ಪರಮಹಂಸರು ಜಗದಂಬೆಯಾದ ಕಾಳಿಯ ವಿಚಾರವಾಗಿ ಭಕ್ತಿಯಿಂದ ಹೇಳಿದ ಮಾತುಗಳನ್ನು ಕೇಳಿದ ಆತನು ಒಳಗೊಳಗೇ ನಗುತ್ತ "ಎಲ್ಲ ಶುದ್ಧ ಮೂರ್ಖತನ! ಸ್ವಲ್ಪ ದಿನಗಳು ಹೋಗಲಿ; ಮುದುಕನಿಗೆ ತನಗೆ ತಾನೇ ಗೊತ್ತಾಗುವುದು, ಅವನ ಕಾಳಿ ಬರಿಯ ಕಟ್ಟುಕಥೆಯೆಂದು!" ಎಂದು ಅಂದುಕೊಂಡನು. ಆದರೂ, ಮನಸ್ಸು ಹೀಗೆಲ್ಲ ಸಂದೇಹಪಟ್ಟರೂ ಕೂಡ ನರೇಂದ್ರನ ಹೃದಯ ಮರುಳು ಪೂಜಾರಿಯ ಕಡೆಗೆ ಮರಳಿ ಮರಳಿ ಹೋಗಲೆಳಸಿತು.

ಒಂದು ತಿಂಗಳು ಕಳೆಯಿತು. ಮರುಳು ಪೂಜಾರಿಯನ್ನು ನೋಡುವ ಹುಚ್ಚು ನರೇಂದ್ರನಿಗೆ ಹೆಚ್ಚಾಯಿತು. ಕಡೆಗೆ ದಕ್ಷಿಣೇಶ್ವರಾಭಿಮುಖವಾಗಿ ಒಬ್ಬನೇ ಹೊರಟನು. ಆ ದ್ವಿತೀಯ ಸಂದರ್ಶನದ ವಿಚಾರವಾಗಿ ಸ್ವಾಮಿ ವಿವೇಕಾನಂದರೇ ಹೀಗೆಂದು ಬರೆದಿದ್ದಾರೆ:

“ನಾನು ಮಂದಿರ ಪ್ರವೇಶಮಾಡುವಾಗ ಆತನು ಹಾಸಿಗೆಯ ಮೇಲೆ ಕುಳಿತಿದ್ದನು. ನನ್ನನ್ನು ಕಂಡು ಬಹಳ ಆನಂದಪಟ್ಟು ವಾತ್ಸಲ್ಯಪೂರಿತವಾದ ಧ್ವನಿಯಿಂದ ನನ್ನನ್ನು ಬಳಿಗೆ ಕರೆದು ಹಾಸಿಗೆಯ ಒಂದು ಪಕ್ಕದಲ್ಲಿ ಕುಳಿತುಕೊಳ್ಳುವಂತೆ ಮಾಡಿದನು. ಮರುಕ್ಷಣದಲ್ಲಿಯೆ ಆತನು ಭಾವಾವಿಷ್ಟನಾಗಿ ಮೆಲ್ಲಮೆಲ್ಲನೆ ನನ್ನ ಬಳಿಗೆ ಸಾರಿದನು. ಹಿಂದಿನಂತೆಯೆ ಏನಾದರೂ ವಿಚಿತ್ರವರ್ತನೆಗಳಲ್ಲಿ ತೊಡಗಬಹುದೆಂದಿದ್ದೆ. ಎವೆಯಿಕ್ಕುವುದರಲ್ಲಿಯೆ ಅತಿ ನಿಕಟವರ್ತಿಯಾಗಿ ತನ್ನ ಬಲಗಾಲನ್ನು ನನ್ನ ಮೇಲಿಟ್ಟನು. ಆ ಸ್ಪರ್ಶದಿಂದ ನನಗೊಂದು ವಿಚಿತ್ರ ನೂತನ ಅನುಭವವುಂಟಾಯಿತು. ನಾನು ಕಣ್ಣು ತೆರೆದುಕೊಂಡೆ ಇದ್ದೆ; ಮೈತಿಳಿದೆ ಇದೆ; ಇದ್ದಕ್ಕಿದ್ದ ಹಾಗೆ ಮಂದಿರದ ಭಿತ್ತಿಗಳೂ ಅಲ್ಲಿದ್ದ ವಸ್ತುಗಳೂ ಎಲ್ಲವೂ ಕಂಪಿಸಿ ಕಂಪಿಸಿ ವಿದ್ಯುದ್ವೇಗದಿಂದ ಮಾಯವಾದವು. ಒಡನೆಯೆ ನನ್ನೊಡನೆ ಸಮಸ್ತ ಬ್ರಹ್ಮಾಂಡವೂ ಯಾವುದೋ ಒಂದು ಅನಿರ್ವಚನೀಯವಾದ ರಹಸ್ಯತಮ ಶೂನ್ಯದಲ್ಲಿ ತಲ್ಲೀನವಾಗಲಾರಂಭಿಸಿತು. ಆ ಭಯಂಕರವಾದ ಅನುಭವವನ್ನು ಸಹಿಸಲಾರದೆ ಅತ್ಯಂತ ಭೀತನಾದೆ. ಮೃತ್ಯುಮುಖನಾಗುತ್ತಿರುವಂತೆ ನನಗೆ ಭಾಸವಾಯಿತು. ಹಾಗಲ್ಲದೆ ಮತ್ತೇನು? ಅಹಂಕಾರದ ಸಂಪೂರ್ಣ ವಿಸ್ಮೃತಿಯೆಂದರೆ ಸಾವಿಗೇನು ಕಡಿಮೆಯಲ್ಲ. ತಡೆಯಲಾರದೆ ಕೂಗಿಕೊಂಡೆ: ‘ಅಯ್ಯೋ, ಇದೇನು ನೀವು ಮಾಡುತ್ತಿರುವುದು? ಮನೆಯಲ್ಲಿ ನನಗೆ ತಾಯಿತಂದೆಗಳಿದ್ದಾರೆ!’ ಎಂದು ಗಟ್ಟಿಯಾಗಿ ಕೂಗಿಕೊಂಡೆ. ನನ್ನ ಕೂಗನ್ನು ಕೇಳಿ ಆತನು ಗಹಗಹಿಸಿ ನಕ್ಕು ನನ್ನೆದೆಯ ಮೇಲೆ ತನ್ನ ಕೈಗಳನ್ನು ಎಳೆಯುತ್ತ ‘ಇರಲಿ, ಈಗ ಸಾಕು. ಆಗುವುದೆಲ್ಲ ಮುಂದೆ ಆಗುವುದು’ ಎಂದನು. ಒಡನೆಯೆ ಆ ಮಹಾ ಭಯಂಕರ ಅನುಭವವು ಮಾಯವಾದುದನ್ನು ಕಂಡು ನಾನು ಆಶ್ಚರ್ಯದಿಂದ ಮೂಕನಾದೆ. ನಾನು ನಾನಾಗಿಯೆ ಇದ್ದೆ. ಎಲ್ಲ ಮೊದಲಿನಂತೆಯೇ ಇತ್ತು.

“ನನ್ನಂತಹ ದೃಢಚಿತ್ತನನ್ನು ಕೂಡ ತನ್ನ ಇಚ್ಛೆಯ ಲೀಲಾಮಾತ್ರದಿಂದ ಅವಸ್ಥಾಂತರಕರಿಸಲು ಸಮರ್ಥನಾದ ಈತನನ್ನು ಹುಚ್ಚನೆಂದು ತಳ್ಳಿಬಿಡುವುದೆಂತು ಎಂದು ಆಲೋಚಿಸತೊಡಗಿದೆ. ಪ್ರಥಮ ಸಂದರ್ಶನದಲ್ಲಿ ನಡೆದ ಆತನ ವರ್ತನೆಯನ್ನು ನೆನೆದರೆ ಅವನು ಹುಚ್ಚನಲ್ಲವೆಂದಾದರೂ ಹೇಳುವುದು ಹೇಗೆ? - ಅವತಾರ ಪುರುಷನೆಂಬ ಮಾತಂತೂ ಇರಲಿ, ಅದು ದೂರದ ಮಾತು. ನನ್ನ ಬಗೆ ಕದಡಿತು. ಶಿವಸದೃಶ ಪರಿಶುದ್ಧಾತ್ಮನಾದ ಆ ವಿಚಿತ್ರ ವ್ಯಕ್ತಿಯ ಗುಟ್ಟನ್ನು ಅರಿಯದಾದೆ. ನಾನು ಕಂಡ ಅನುಭವದ ತತ್ತ್ವವಂತೂ ನನಗೆ ಬಗೆಹರಿಯಲೇ ಇಲ್ಲ. ಯುಕ್ತಿಪಂಥಿಯನಾಗಿದ್ದ ನನ್ನ ಮಾನಸಿಕ ಅಹಂಕಾರವು ಆ ಮಹಾಪುರುಷನ ದುರ್ಜ್ಞೇಯ ವರ್ತನೆಗಳ ಆಘಾತದಿಂದ ತತ್ತರಿಸಿ ಹಿಮ್ಮೆಟ್ಟಿತು. ಆದರೂ ಹೇಗಾದರೂ ಮಾಡಿ ರಹಸ್ಯವನ್ನು ಭೇದಿಸಲೇಬೇಕೆಂದು ಮನಸ್ಸು ಗಟ್ಟಿ ಮಾಡಿಕೊಂಡೆ.

“ಆ ದಿನವೆಲ್ಲ ನನ್ನ ಮನದಲ್ಲಿ ವಿಧವಿಧವಾದ ಸಾವಿರಾರು ಆಲೋಚನೆಗಳು ತಾಂಡವವಾಡತೊಡಗಿದುವು. ಆದರೆ ಆತನು ಮಾತ್ರ ಸ್ವಲ್ಪ ಹೊತ್ತಿನಲ್ಲಿಯೆ ಬೇರೊಬ್ಬ ವ್ಯಕ್ತಿಯಾದನು. ಆತನ ರೀತಿಯ ಬದಲಾಯಿತು. ಮುನ್ನಿನಂತೆಯೆ ನನ್ನೊಡನೆ ಬಹಳ ಸಲಿಗೆಯಿಂದ ವರ್ತಿಸಲಾರಂಭಿಸಿದನು. ಬಹಳಕಾಲದಿಂದಲೂ ಕಣ್ಮರೆಯಾಗಿ ಹೋಗಿದ್ದ ಗೆಳೆಯನನ್ನು ಮರಳಿ ಕಂಡವನಂತೆ. ಎಷ್ಟು ಆದರದಿಂದ ನನಗೆ ಎಷ್ಟೆಷ್ಟು ಉಪಚಾರ ಮಾಡಿದರೂ ಆತನು

ತೃಪ್ತನಾಗಲಿಲ್ಲ. ಆತನ ಆತಿಥ್ಯಕ್ಕೆ ನಾನು ಮುಗ್ಧನಾಗಿಹೋದೆ. ಅಷ್ಟರಲ್ಲಿ ಸಂಜೆಯಾಯಿತು. ಹೊರಡಲು ಅಪ್ಪಣೆ ಕೇಳಿದೆ. ಮರಳಿ ಶೀಘ್ರದಲ್ಲಿಯೆ ಬರುವೆನೆಂದು ಮಾತು ಕೊಟ್ಟ ಮೇಲೆಯೆ ಆತನು ಮನಸ್ಸಿಲ್ಲದ ಮನಸ್ಸಿನಿಂದ ವಿಷಣ್ಣವದನನಾಗಿ ನನ್ನನ್ನು ಬೀಳ್ಕೊಟ್ಟನು."

ನರೇಂದ್ರನಾಥನು ಶ್ರೀರಾಮಕೃಷ್ಣರ ಬಳಿಗೆ ಬರುವುದಕ್ಕೆ ಪೂರ್ವದಲ್ಲಿಯೆ ಅವರು ತನ್ನ ಶಿಷ್ಯನ ಬರುವಿಕೆಯನ್ನು ಅರಿತಿದ್ದರು. ಅಲ್ಲದೆ ಇತರರೊಡನೆ ಅದನ್ನು ಕುರಿತು ಪ್ರಸ್ತಾಪಿಸಿಯೂ ಇದ್ದರು. ಶಿಷ್ಯನು ಹೇಗೆ ಗುರುವನ್ನು ಪರೀಕ್ಷಿಸದೆ ಸ್ವೀಕರಿಸಲಿಲ್ಲವೋ ಹಾಗೆಯೇ ಭಗವಾನರೂ ಶಿಷ್ಯನನ್ನು ಪರೀಕ್ಷಿಸದೆ ಸ್ವೀಕರಿಸಲಿಲ್ಲ. ಅವರು ಯಾರಿಗಾಗಿಯೋ ಕಾದುಕೊಂಡಿದ್ದುದೇನೊ ನಿಶ್ಚಯ. ಅವರ ಯೋಗದೃಷ್ಟಿಗೆ ಯಾರೊ ಒಬ್ಬರು ಗೋಚರವಾಗಿದ್ದುದೂ ನಿಶ್ಚಯ!

[1]ಅವರು ನರೇಂದ್ರನನ್ನು ಪ್ರಥಮ ಸಂದರ್ಶನದಲ್ಲಿಯೆ ಗುರುತಿಸಿದುದೂ ನಿಶ್ಚಯ! ಆದರೆ ಕೆಲವು ಸಾರಿ, ತಾವು ಸಮಾಧಿಯಲ್ಲಿ ಕಂಡ ಪುರುಷನು ಈತನೆ ಹೌದೊ ಅಲ್ಲವೊ ಎಂದು ಸಂದೇಹಪಡುತ್ತಿದ್ದರು. ಆ ಸಂದೇಹನಿವೃತ್ತಿಗಾಗಿ ಅವರು ತಮ್ಮ ಶಿಷ್ಯನನ್ನು ಪರೀಕ್ಷಿಸದೆ ಬಿಡಲಿಲ್ಲ. ಆತನ ಅಂತರಂಗ ಬಹಿರಂಗಗಳೆರಡನ್ನೂ ಪರೀಕ್ಷಿಸಿ, ತಾನು ಸಮಾಧಿಯಲ್ಲಿ ಕಂಡಾತನು ಈತನೇ ಹೌದೆಂದು ಚೆನ್ನಾಗಿ ತಿಳಿದಮೇಲೆಯೆ ಅವರು ನರೇಂದ್ರನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು.
ಮೂರನೆಯ ಸಾರಿ ನರೇಂದ್ರನು ಅಲ್ಲಿಗೆ ಬಂದಾಗ ತಮ್ಮ ಸಂದೇಹ ಪರಿಹಾರ ಮಾಡಿಕೊಂಡರು. ಸಮಾಧಿಯಲ್ಲಿ ತಾವು ಕಂಡ ನರಮಹರ್ಷಿ ಈತನೇ ಹೌದಾಗಿದ್ದರೆ ಮೈಮುಟ್ಟಿ ಸಮಾಧ್ಯವಸ್ಥೆಯನ್ನು ನೀಡಿದಾಗ ಕೂಗಿಕೊಂಡನೇಕೆ? ತಾವೇ ಎಲ್ಲಿಯಾದರೂ ಬಗೆದಪ್ಪಿನಿಂದ ತಪ್ಪಾಗಿ ಗುರುತಿಸಿರಬಹುದೇ? ಇವೇ ಮೊದಲಾದ ಸಂಶಯಗಳು ಅವರಲ್ಲಿ ಮೂಡಿದ್ದುವು. ಮೂರನೆಯ ಸಾರಿ ನರೇಂದ್ರನು ಬಂದಾಗ ಗುರುದೇವನು ಎಂದಿನಂತೆಯೆ ಆತನನ್ನು ಮುಟ್ಟಿದನು. ಬಾಹ್ಯಪ್ರಜ್ಞೆ ತಪ್ಪಿ ನರೇಂದ್ರನು ಭಾವದಲ್ಲಿದ್ದನು. ಆಗ ಠಾಕೂರರು ತಮಗೆ ಉಚಿತ ಮತ್ತು ಆವಶ್ಯಕವೆಂದು ತೋರಿದ ಅನೇಕ ಪ್ರಶ್ನೆಗಳನ್ನು ಹಾಕಿದರು. ನರೇಂದ್ರನು ಅವುಗಳೆಲ್ಲಕ್ಕೂ ಸಂದೇಹ ಪರಿಹಾರಕವಾದ ಯೋಗ್ಯವಾದ ಉತ್ತರಗಳನ್ನು ಕೊಟ್ಟನು. ಉತ್ತರಗಳಿಂದ ನರೇಂದ್ರನು ಧ್ಯಾನಸಿದ್ಧನಾದ ಮಹಾಯೋಗೀಶ್ವರನೆಂಬುದು ಅವರಿಗೆ ತಿಳಿಯಿತಂತೆ. ಅಲ್ಲದೆ ಆತನ ಭವಿಷ್ಯತ್ತೆಲ್ಲ ಅವರಿಗೆ ವಿಶದವಾಗಿ, ನರೇಂದ್ರನು ಯೋಗದಿಂದ ದೇಹಪರಿತ್ಯಾಗ ಮಾಡುವನೆಂಬುದನ್ನೂ ಅವರು ಅರಿತರಂತೆ.

ದಕ್ಷಿಣೇಶ್ವರದ ಅಲೌಕಿಕ ದೈವಿಕ ಪುರುಷನ ಬಳಿಗೆ ಬಂದಾಗಲೆಲ್ಲ ನರೇಂದ್ರನಿಗೆ ಅದ್ಭುತದ ಮೇಲೆ ಅದ್ಭುತ ಅನುಭವಗಳಾಗಲಾರಂಭಿಸಿದುವು. ಅವನು ಬೆರಗಾದನು. ಯಾವನಾದರೊಬ್ಬನು ಶಕ್ತಿಶಾಲಿಯಾದ ಮಹಾಪುರುಷನೆಂದು ತಿಳಿದೊಡನೆಯೆ ಆತನು ಹೇಳಿದುದನ್ನೇ ನಿರ್ವಿಚಾರವಾಗಿ ಸ್ವೀಕರಿಸಿಬಿಡುವುದು ಸಾಮಾನ್ಯ ಮನುಷ್ಯರ ಸ್ವಭಾವ. ಆದರೆ ಸುತೀಕ್ಷ್ಣ ಬುದ್ಧಿವಂತನಾದ ನರೇಂದ್ರನು ತುಂಬ ಎಚ್ಚರಿಕೆಯಿಂದಿದ್ದನು. ಪ್ರತ್ಯಕ್ಷ ಪ್ರಮಾಣವಿಲ್ಲದೆ ಏನೊಂದನ್ನೂ ಸ್ವೀಕರಿಸಬಾರದೆಂದೂ ದೃಢನಿಶ್ಚಯ ಮಾಡಿಕೊಂಡನು. ಗುರುವಿನ ಬಳಿ ಅಪ್ರಿಯ ಭಾಜನನಾದರೂ ಚಿಂತೆಯಿಲ್ಲ ಸತ್ಯವನ್ನು ಮಾತ್ರ ಬಿಟ್ಟುಕೊಡಬಾರದೆಂದು ಮನಸ್ಸು ಮಾಡಿದನು. ತನಗೊದಗಿದ ಅಲೌಕಿಕಾನುಭವಗಳನ್ನು ಮನಃಶಾಸ್ತ್ರೀಯವಾಗಿ ವಿವರಿಸಲು ಹೊರಟನು. ಹುಚ್ಚು ಪೂಜಾರಿ

ಮಾಟಗಾರನಾಗಿರಬಹುದೇ? ಆತನು ತನ್ನ ಮೇಲೆ ಪ್ರಯೋಗಿಸಿದ ವಿದ್ಯೆ ಸಮ್ಮೋಹನ ವಿದ್ಯೆಯಾಗಿರಬಾರದೇಕೆ? ಆದರೆ ಉತ್ತರಕ್ಷಣದಲ್ಲಿಯೇ ತನ್ನಂತಹ ದೃಢ ಸಬಲ ಸುತೀಕ್ಷ್ಣ ಚಿತ್ತಾನ್ವಿತನೂ ಕೃತವಿದ್ಯನೂ ಆದ ಅರ್ಧಸಂದೇಹವಾದಿ ಒಬ್ಬ ಕ್ಷುದ್ರ ಪುರೋಹಿತನ ಸಮ್ಮೋಹನ ವಿದ್ಯೆಗೆ ಠಕ್ಕುಗೊಳ್ಳುವುದಾದರೂ ಹೇಗೆ? ಎಂದು ವಿಚಾರಪರನಾದನು. ಕಡೆಗೆ ಇತರರೊಡನೆ ತನ್ನ ಸಂದೇಹಗಳನ್ನು ಕುರಿತು ಪ್ರಸ್ತಾಪಿಸಿ ಅವರ ಅಭಿಪ್ರಾಯಗಳನ್ನೂ ತಿಳಿಯತೊಡಗಿದನು. ಕೆಲವರು ಪೂಜಾರಿಗೆ ಹುಚ್ಚು ಹಿಡಿದಿದೆ ಎಂದರು; ಮತ್ತು ಕೆಲವರು ಆತನು ಅಲೌಕಿಕ ಸಿದ್ಧಪುರುಷ ಎಂದರು; ಇನ್ನು ಕೆಲವರು ಅವನದೆಲ್ಲ ಬರಿಯ ನಟನೆ ಎಂದರು; ಉಳಿದ ಕೆಲವರು ಆತನು ಅವತಾರಪುರುಷ ಎಂದರು. ಹೀಗೆ ನಾನಾ ಜನರು ನಾನಾ ವಿಧವಾಗಿ ಹೇಳತೊಡಗಿದರು. ವಾಗ್ಮಿವರ್ಯ ಸೂಕ್ಷ್ಮಮತಿ ಮಾನನೀಯ ಕೇಶವಚಂದ್ರನು ಮರುಳು ಪೂಜಾರಿಯನ್ನು ಮುಕ್ತಕಂಠದಿಂದ ಸ್ತೋತ್ರ ಮಾಡಲಾರಂಭಿಸಿದ್ದನು. ವಿಜಯಕೃಷ್ಣ ಗೋಸ್ವಾಮಿ ಮೊದಲಾದ ಧರ್ಮಜೀವಿಗಳು ಹುಚ್ಚನ ಪದಪ್ರಾಂತದಲ್ಲಿ ಕುಳಿತು ಅಮೃತ ಮಧುರ ಧರ್ಮೋಪದೇಶವನ್ನು ಕೈಕೊಳ್ಳುತ್ತಿದ್ದರು. ಪ್ರತಾಪಚಂದ್ರ ಮಜುಮದಾರ ಮೊದಲಾದ ಪಾಶ್ಚಾತ್ಯ ಪ್ರತ್ಯಾಗತ ಮೇಧಾವಿಗಳು ಪೂಜಾರಿಯ ಮಾತುಗಳಿಗೆ ಮರುಳಾಗುತ್ತಿದ್ದರು. ಇದೆಲ್ಲವೂ ನರೇಂದ್ರನಿಗೆ ಗೊತ್ತಿತ್ತು. ಆತನು ಬ್ರಾಹ್ಮ ಸಮಾಜಕ್ಕೂ ಹೋಗುತ್ತಿದ್ದನು; ದಕ್ಷಿಣೇಶ್ವರಕ್ಕೂ ಹೋಗಿಬರುತ್ತಿದ್ದನು. ಉಗ್ರ ಬ್ರಾಹ್ಮ ಸಮಾಜಿಯಾಗಿದ್ದ ಪಂಡಿತ ಶಿವನಾಥ ಶಾಸ್ತ್ರಿಗೆ ಇದು ಸರಿಬೀಳಲಿಲ್ಲ. ಆತನು ನರೇಂದ್ರನಿಗೆ ದಕ್ಷಿಣೇಶ್ವರಕ್ಕೆ ಹೋಗಬಾರದೆಂದು ಬೋಧಿಸಿದನು. ಅಷ್ಟೇ ಅಲ್ಲದೆ ಪರಮಹಂಸರ ಸಮಾಧ್ಯವಸ್ಥೆಗಳನ್ನು ನಿರ್ದೇಶಿಸಿ "ಅದೇನು ಸಮಾಧಿ? ಸ್ವಲ್ಪ ವಿಚಾರಿಸಿದರೆ ಎಲ್ಲ ಗೊತ್ತಾಗುವುದು. ಅದೊಂದು ನರಗಳ ಜಾಡ್ಯವಿರಬೇಕು. ಕಠೋರತರ ಶಾರೀರಕ ಅಭ್ಯಾಸಗಳಿಂದ ಪರಮಹಂಸನ ತಲೆ ಕೆಟ್ಟುಹೋಗಿದೆ" ಎಂದನು. ನರೇಂದ್ರನು ಸಂಶಯಗಳ ತುಮುಲದಲ್ಲಿ ಸಿಕ್ಕಿ ಗಂಭೀರ ಚಿಂತಾಮಗ್ನನಾದರೂ ಎದೆಗೆಡದೆ ಪರೀಕ್ಷಿಸಲು ಸಿದ್ಧನಾದನು.

ನರೇಂದ್ರನು ಪರಮಹಂಸರಿಂದ ಬಹಳ ಆಕರ್ಷಿತನಾದರೂ ಪ್ರಯತ್ನಪೂರ್ವಕವಾಗಿ ಆಕರ್ಷಣೆಯಿಂದ ಹೊರಗಿರಲು ಸಾಧಿಸುತ್ತಿದ್ದನು. ಪರಮಹಂಸರಾದರೋ ಶಿಷ್ಯನ ಜ್ಯೋತಿರ್ಮಯ ಭಾವೀ ಜೀವಮಾನವನ್ನೂ ಆತನಿಂದ ಒದಗಬೇಕಾದ ಲೋಕಕಲ್ಯಾಣವನ್ನೂ ಆತನ ಜನ್ಮೋದ್ದೇಶವನ್ನೂ ಯೋಗದೃಷ್ಟಿಯಿಂದ ಮೊದಲೇ ತಿಳಿದವರಾದುದರಿಂದ ನರೇಂದ್ರನ ಮೇಲೆ ಸ್ವಾರ್ಥಶೂನ್ಯವಾದ ಅಹೇತುಕಪ್ರೇಮವನ್ನು ಬೀರಿದರು. ಸರ್ವಧರ್ಮಗಳನ್ನೂ ತಮ್ಮ ಅಮೋಘವಾದ ತಪಸ್ಸು ಮತ್ತು ಸಾಧನೆಗಳಿಂದ ಅರಿತ ಅವರ ಉಪದೇಶಮಾರ್ಗ ಇತರ ಹಾದಿಗಳಿಂದ ಬೇರೆಯಾಗಿತ್ತು. ಅವರು ನಾಶಕಮಾರ್ಗಗಾಮಿಗಳಾಗಿರಲಿಲ್ಲ; ಪೋಷಕ ಪಥಾವಲಂಬಿಯಾಗಿದ್ದರು. ಸರ್ವಧರ್ಮಗಳೂ ಸತ್ಯ, ಮತವಿರುವಂತೆ ಪಥ ಎಂದು ಅನುಭವದಿಂದ ಅರಿತ ಅವರು ಯಾವ ಭಾವವನ್ನೂ ಖಂಡಿಸದೆ, ಯಾರ ನಂಬುಗೆಯನ್ನೂ ಕೆಡಿಸದೆ, ಅವರವರ ಸಂಸ್ಕಾರ ಅಭಿರುಚಿಗಳಿಗೆ ತಕ್ಕಂತೆ ಅವರವರಿಗೆ ಉಪದೇಶ ಕೊಡುತ್ತಿದ್ದರು. ಆದ್ದರಿಂದ ಅವರು ಎರೆಮಣ್ಣಿನಿಂದ ತನಗೆ ಬೇಕಾದ ಆಕೃತಿಯ ಮಡಕೆಗಳನ್ನು ಮಾಡುವ ಕುಶಲನಾದ ಕುಂಬಾರನಂತೆ ಜನರ ಮನಸ್ಸುಗಳನ್ನು ತಿದ್ದಲು ಸಮರ್ಥರಾಗಿದ್ದರು. ಎಂತಹ ಕೊಂಕು ಎದೆಯೂ ಅವರ ದಿವ್ಯಪ್ರಭಾವದಿಂದ ಬಹುಬೇಗನೆ ನೆಟ್ಟಗಾಗುತ್ತಿತ್ತು. ಆದ್ದರಿಂದ ನರೇಂದ್ರನೂ ಕೆಲವು ದಿನಗಳಲ್ಲಿಯೆ ಮೆಲ್ಲಮೆಲ್ಲನೆ ಅವರ ಹಾದಿಗೆ ಬಂದುದನ್ನು ನಾವು ನೋಡಲಿದ್ದೇವೆ.

ಬ್ರಾಹ್ಮಸಮಾಜಕ್ಕೆ ಸೇರಿದ್ದ ನರೇಂದ್ರನು ಸಗುಣ ನಿರಾಕಾರ ಬ್ರಹ್ಮೋಪಾಸಕನಾಗಿದ್ದನೆಂಬುದನ್ನು ನಾವು ಹಿಂದೆಯೆ ತಿಳಿದಿದ್ದೇವೆ. ಆದ್ದರಿಂದ ಆತನಿಗೆ ಮೂರ್ತಿಪೂಜೆಯಲ್ಲಿ ತುಂಬಾ ತಿರಸ್ಕಾರವಿತ್ತು. ತರುವಾಯ ಸ್ವಾಮಿ ಬ್ರಹ್ಮಾನಂದರಾದ ರಾಖಾಲಚಂದ್ರಘೋಷನೂ ನರೇಂದ್ರನಾಥನೊಡನೆ ಬ್ರಾಹ್ಮಸಮಾಜಕ್ಕೆ ಸೇರಿದ್ದನು. ಆತನು ಗುಟ್ಟಾಗಿ ಕಾಳಿಯ ಮಂದಿರವನ್ನು ಪ್ರವೇಶಿಸಿ ದೇವಿಯ ವಿಗ್ರಹದ ಮುಂದೆ ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದುದು ನರೇಂದ್ರನ ಕಣ್ಣಿಗೆ ಬಿತ್ತು. ಅವನು ಕಿಡಿಕಿಡಿಯಾದನು. ರಾಖಾಲನನ್ನು ಮೋಸಗಾರನೆಂದೂ ಮಿಥ್ಯಾವಾದಿಯೆಂದೂ ಠಾಕೂರರ ಮುಂದೆಯೆ ಬೈಯತೊಡಗಿದನು. ಏಕೆಂದರೆ ಬ್ರಾಹ್ಮಸಮಾಜಕ್ಕೆ ಸೇರಿದವರು ಯಾರೆ ಆಗಲಿ ಮೂರ್ತಿಗಳ ಮುಂದೆ ನಿಂತು ಕೈಮುಗಿಯಬಾರದೆಂಬ ಕಟ್ಟಳೆಯಿತ್ತು. ರಾಖಾಲನೂ ತಲೆತಗ್ಗಿಸಿಬಿಟ್ಟನು. ಆದರೆ ಗುರುಗಳು ಅವನ ಸಹಾಯಕ್ಕೆ ಬಂದು ನರೇಂದ್ರನನ್ನು ಕುರಿತು "ನೀನು ಬಯ್ಯುವುದೇಕೆ? ಯಾರಲ್ಲಿ ಭಕ್ತಿಯಿದೆಯೋ ಅವರು ಮೂರ್ತಿಪೂಜೆ ಮಾಡಿದರೇನು ತಪ್ಪು? ನಿನಗೆ ಇಷ್ಟವಿಲ್ಲದಿದ್ದರೆ ನೀನು ಮಾಡಬೇಡ. ಇತರರ ಭಾವನಷ್ಟ ಮಾಡಲು ನಿನಗೇನು ಅಧಿಕಾರ?" ಎಂದರು. ನರೇಂದ್ರನು ಚಿಂತಿತಭಾವದಿಂದ ನಿರಸ್ತನಾದನು.

ಸಗುಣನಿರಾಕಾರ ಬ್ರಹ್ಮದಲ್ಲಿ ನರೇಂದ್ರನಿಗೆ ಪ್ರೀತಿಯಿದ್ದುದನ್ನು ಕಂಡು ಭಗವಾನರು ಆತನಿಗೆ ಮೊದಮೊದಲು ನಿರಾಕಾರ ಬ್ರಹ್ಮೋಪದೇಶವನ್ನು ಕೊಡುತ್ತಿದ್ದರು. ಏಕೆಂದರೆ ಯಾರು ಮುಂದೆ ಲೋಕದಲ್ಲೆಲ್ಲ ಸರ್ವ ಧರ್ಮ ಸಮನ್ವಯ ತತ್ತ್ವವನ್ನು ಪ್ರಚಾರ ಮಾಡಲು ಜನ್ಮಧಾರಣೆ ಮಾಡಿರುವನೋ ಅಂತಹವನು ಯಾವುದಾದರೂ ಒಂದೇ ಸಣ್ಣ ಭಾವವನ್ನು ಮಾತ್ರ ಹಿಡಿದು ಬಿಟ್ಟರೆ ಜಗತ್ತಿಗೆ ಕೆಡುಕಾಗುವುದು ಎಂಬುದನ್ನು ತಿಳಿದು ಅವರು ನರೇಂದ್ರನಿಗೆ ಸರ್ವ ಭೂಮವೂ ಸರ್ವಮತಗ್ರಾಸಿನಿಯೂ ಆದ ವೇದಾಂತೋಕ್ತ ಸಾಧನಮಾರ್ಗವನ್ನು ಬೋಧಿಸಲು ತೊಡಗಿದರು. ನರೇಂದ್ರನೂ ಮೊದಮೊದಲು ಅದನ್ನು ತಿರಸ್ಕಾರ ಪೂರ್ವಕವಾಗಿ ಖಂಡಿಸತೊಡಗಿದನು. ಗುರುದೇವನು 'ತತ್ತ್ವಮಸಿ' ಎಂಬ ತತ್ತ್ವವನ್ನು ನಿರೂಪಿಸಿ 'ಸರ್ವವೂ ಬ್ರಹ್ಮ, ನೀನೂ ಬ್ರಹ್ಮ' ಎಂದು ಹೇಳಿದರೆ, ನರೇಂದ್ರನು ನಗುತ್ತ 'ನಾನೂ ಬ್ರಹ್ಮ! ಇದು ಬರಿಯ ಶಿಶುಪ್ರಲಾಪವಲ್ಲದೆ ಮತ್ತೇನೂ ಅಲ್ಲ' ಎಂದುಬಿಡುವನು.

ಗುರು ಶಿಷ್ಯ ಸಂಬಂಧವು ರಹಸ್ಯತಮವಾದುದು. ನಿಜವಾಗಿ ಸಿದ್ಧಪುರುಷನಾದ ಗುರು ಪರಮಾತ್ಮನ ಪ್ರತಿನಿಧಿ. ಆದ್ದರಿಂದಲೆ ಗುರುವಿಲ್ಲದೆ ಯಾವ ಸಿದ್ಧಿಯೂ ದೊರಕದೆಂದು ಶಾಸ್ತ್ರಗಳು ಸಾರುತ್ತಿವೆ. ಪರಿಪಕ್ವವಾದ ಸಂಸ್ಕಾರವುಳ್ಳ ನರನಿಗೆ ಗುರು ಯಾವ ರೂಪದಿಂದಾದರೂ ಬರಬಹುದು. ಒಂದು ಪುಸ್ತಕ ಗುರುವಾಗಬಹುದು. ಒಂದು ರಮಣೀಯ ದೃಶ್ಯ ಗುರುವಾಗಬಹುದು. ಬ್ರದರ್ ಲಾರೆನ್ಸ್ ಎಂಬುವವನಿಗೆ ಎಲೆಗಳಿಲ್ಲದೆ ಬರಲು ಬರಲಾಗಿ ನಿಂತಿದ್ದ ಚಳಿಗಾಲದ ಮರವೊಂದು ಗುರುವಾಯಿತಂತೆ. ದೈವಿಕ ಗುರು ಶಿಷ್ಯನ ಅಂತರಂಗದಲ್ಲಿ ಗುಪ್ತವಾಗಿರುವ ಸಮಸ್ತ ಶಕ್ತಿಗಳನ್ನೂ ಈಚೆಗೆ ಎಳೆಯಬಲ್ಲನು.

ಶ್ರೀರಾಮಕೃಷ್ಣ ನರೇಂದ್ರನಾಥ ಗುರು ಶಿಷ್ಯ ಸಂಬಂಧವೂ ಅದ್ಭುತವಾದುದು. ಅದರಲ್ಲಿ ಒಂದು ಎರಡು ಮೂರು ನಾಲ್ಕು ಎಂದು ಲೆಕ್ಕ ಮಾಡಿ ಬರೆಯಬಹುದಾದ ಘಟನೆಗಳು ಅಷ್ಟೇನೂ ಹೆಚ್ಚಾಗಿಲ್ಲ. ಏಕೆಂದರೆ ಅದು ಅನಿರ್ವಚನೀಯವಾದ ಸಾಧನೆ ಸಿದ್ಧಿಗಳ ರಹಸ್ಯ ಕಥೆ! ಸ್ವಾಮಿ ವಿವೇಕಾನಂದರಲ್ಲಿ ತೋರಿಬರುವ ಸ್ವಾರ್ಥಶೂನ್ಯತೆ, ತೀವ್ರ ವೈರಾಗ್ಯ, ಅಮಿತಶಕ್ತಿ, ಅಹೇತುಕ ಭಕ್ತಿ, ಸುತೀಕ್ಷ್ಣ ಬುದ್ಧಿ, ಗಭೀರಸಿದ್ಧಿ ಇವುಗಳಿಂದ ನಾವು ಅದರ ಮಹಿಮೆಯನ್ನು ಸ್ವಲ್ಪ ಮಾತ್ರ

ತಿಳಿಯಬಹುದು. ಪರಮಹಂಸರು ಹಾಲಿನ ಬಿಣ್ಣಿನಿಂದ ಕೆಚ್ಚಲು ಬಿರಿಯುತ್ತಿರುವ ಹಸು ತನ್ನ ಕರುವಿನ ಬರವನ್ನೆ ಕಾತರತೆಯಿಂದ ಹಾರೈಸುವಂತೆ ತಮ್ಮ ಅಂತರಂಗ ಶಿಷ್ಯರ ಆಗಮನವನ್ನು ವ್ಯಾಕುಲತೆಯಿಂದ ಇದಿರುನೋಡುತ್ತಿದ್ದರು. ಅದರಲ್ಲಿಯೂ ನರೇಂದ್ರನು ಬರುವುದು ಒಂದೆರಡು ದಿವಸ ತಡವಾದರೆ "ನರೇಂದ್ರ! ನರೇಂದ್ರ! ಅವನೆಲ್ಲಿ? ಇನ್ನೂ ಬರಲಿಲ್ಲವಲ್ಲಾ" ಎಂದು ಅತ್ಯುದ್ವಿಗ್ನರಾಗುತ್ತಿದ್ದರು. ಎಷ್ಟೋ ಸಾರಿ ತಾವೇ ಆತನನ್ನು ಹುಡುಕಿಕೊಂಡು ಕಲ್ಕತ್ತಾ ನಗರಕ್ಕೇ ಹೋಗಿ ಬಿಡುತ್ತಿದ್ದರು. ಒಂದು ಸಾರಿ ನರೇಂದ್ರನು ಒಂದೆರಡು ದಿನಗಳಾದರೂ ದಕ್ಷಿಣೇಶ್ವರಕ್ಕೆ ಬರಲಿಲ್ಲ. ಪರಮಹಂಸರು ಕಲ್ಕತ್ತಾಕ್ಕೆ ತಾವೆ ಹೊರಟರು. ಆ ದಿನ ಭಾನುವಾರವಾದ್ದರಿಂದ ನರೇಂದ್ರನು ಸಾಧಾರಣ ಬ್ರಾಹ್ಮ ಸಮಾಜದ ಸಂಧ್ಯೋಪಾಸನೆಗೆ ಹೋಗಿದ್ದನು. ಪರಮಹಂಸರು ಆಹ್ವಾನಿತರಾಗದೆ ಅಲ್ಲಿಗೆ ಹೋಗುವುದು ಅಷ್ಟೇನೂ ಮರ್ಯಾದೆಯಲ್ಲವೆಂದು ಅರಿತಿದ್ದರೂ ನರೇಂದ್ರನನ್ನು ನೋಡುವ ಮಹದಾಕಾಂಕ್ಷೆಯ ನಿಮಿತ್ತವಾಗಿ ಬ್ರಾಹ್ಮಸಮಾಜದ ಮಂದಿರಕ್ಕೆ ಹೋದರು. ಅಲ್ಲಿ ಭಕ್ತರೆಲ್ಲರೂ ಸೇರಿ ವೇದಿಕೆಯ ಮೇಲೆ ಕುಳಿತು ಮಾತಾಡುತ್ತಿದ್ದ ಆಚಾರ್ಯನ ಉಪದೇಶವನ್ನು ಆಲಿಸುತ್ತಿದ್ದರು. ನರೇಂದ್ರನು ಭಜನ ಮಂಡಲಿಯ ನಡುವೆ ಮತ್ತೊಂದು ವೇದಿಕೆಯ ಮೇಲೆ ಕುಳಿತಿದ್ದನು. ಅಷ್ಟರಲ್ಲಿ ಪರಮಹಂಸರು ಅರ್ಧ ಬಾಹ್ಯಾವಸ್ಥಿತರಾಗಿ "ನರೇನ್! ನರೇನ್!" ಎಂದು ಕರೆಯುತ್ತ ಮಂದಿರದೊಳಕ್ಕೆ ನುಗ್ಗಿದರು. ಕುಳಿತಿದ್ದವರೆಲ್ಲರೂ ಎದ್ದುನಿಂತರು. ಗಲಭೆಯಾಯಿತು. ವೇದಿಕೆಯ ಮೇಲಿದ್ದ ಆಚಾರ್ಯನು ಉಪದೇಶವನ್ನು ನಿಲ್ಲಿಸಬೇಕಾಯಿತು. ಅಷ್ಟರಲ್ಲಿ ನರೇಂದ್ರನು ಪರಮಹಂಸರ ಬಳಿಗೆ ಬಂದನು. ಅವರು ಸಮಾಧಿಸ್ಥರಾಗಿದ್ದರು. ಅದನ್ನು ನೋಡುವುದಕ್ಕೆ ಸುತ್ತಲಿಂದಲೂ ಜನರು ಮುತ್ತಿದರು. ಅಷ್ಟು ಹೊತ್ತಿಗೆ ಯಾರೋ ದೀಪಗಳನ್ನು ಆರಿಸಿಬಿಟ್ಟರು. ಗಡಿಬಿಡಿ ಅತಿಯಾಯಿತು. ನರೇಂದ್ರನು ಪರಮಹಂಸರನ್ನು ಹಿಂಬಾಗಿಲಿನಿಂದ ಹೊರಗೆ ಸಾಗಿಸಿ, ಒಂದು ಗಾಡಿಯನ್ನು ಗೊತ್ತುಮಾಡಿ ಅವರೊಡನೆ ದಕ್ಷಿಣೇಶ್ವರಕ್ಕೆ ಹೋದನು.

ಅಲ್ಲಿಗೆ ಹೋದ ಮೇಲೆ ಗುರುಗಳನ್ನು ತರಾಟೆಗೆ ತೆಗೆದುಕೊಂಡನು. "ಹೊತ್ತು ಗೊತ್ತಿಲ್ಲದೆ ನೀವು ನನ್ನನ್ನು ಹುಡುಕಿಕೊಂಡು ಬಂದುದೇಕೆ? ನೋಡಿದವರು ಏನನ್ನುವರು? ನೀವು ಹೀಗೆ ಧ್ಯಾನ ಜಪಗಳನ್ನೆಲ್ಲಾ ಬಿಟ್ಟು ನನ್ನನ್ನೇ ಕುರಿತು ಚಿಂತಿಸುತ್ತಿದ್ದರೆ ಮುಂದಿನ ಜನ್ಮದಲ್ಲಿ ನನ್ನ ಹಾಗೆಯೇ ಆಗಿಬಿಡುವಿರಿ. ಭರತ ರಾಜನು ತನ್ನ ಮುದ್ದಿನ ಜಿಂಕೆಯ ಮರಿಯನ್ನು ಕುರಿತು ಚಿಂತಿಸಿ ಚಿಂತಿಸಿ ಕಡೆಗೆ ಮರುಜನ್ಮದಲ್ಲಿ ಜಿಂಕೆಯಾದಂತೆ!" ಎಂದು ಮೊದಲಾಗಿ ಗದರಿಸಿದನು. ಪರಮಹಂಸರು ಮಾತನಾಡಲಿಲ್ಲ. ಚಿಂತೆಗೊಳಗಾದರು. ಸ್ವಲ್ಪ ಹೊತ್ತಾದ ಮೇಲೆ ಕಾಳಿಯ ಮಂದಿರಕ್ಕೆ ಹೋದರು.

ಹಿಂದಿರುಗಿ ಬಂದು "ನರೇನ್, ನರೇನ್, ತಾಯಿ ನನಗೆಲ್ಲಾ ಹೇಳಿದಳು: 'ಅವನಿನ್ನೂ ಚಿಕ್ಕ ಹುಡುಗ, ಅನುಭವ ಸಾಲದು, ಸುಮ್ಮನೆ ಅವನ ಮಾತನ್ನು ಕಟ್ಟಿಕೊಂಡು ನೀನೇಕೆ ವ್ಯಸನ ಮಾಡುವುದು? ಅವನಲ್ಲಿ ನಿನಗೆ ನಾರಾಯಣನು ತೋರುವುದರಿಂದಲೇ ನೀನು ಅವನಿಂದ ಆಕರ್ಷಿತನಾಗಿದ್ದೀಯೆ' ಎಂದು ಹೇಳಿದಳು. ನಿನ್ನಲ್ಲಿ ನಾರಾಯಣನನ್ನು ನಾನು ಕಾಣಲಾರದ ಮರುದಿನ ನಿನ್ನ ಮುಖವನ್ನು ನಾನು ನೋಡುವುದೇ ಇಲ್ಲ" ಎಂದರು.

ನರೇಂದ್ರನ ಶಕ್ತಿಸಾಮರ್ಥ್ಯಗಳನ್ನೂ ಮಹಿಮೆಯನ್ನೂ ಕುರಿತು ಪರಮಹಂಸರು ಎಲ್ಲರೊಡನೆಯೂ ನಿರ್ದಾಕ್ಷಿಣ್ಯವಾಗಿ ಪ್ರಸ್ತಾಪಿಸುತ್ತಿದ್ದರು. ಒಂದು ದಿನ ಕೇಶವಚಂದ್ರ, ವಿಜಯಕೃಷ್ಣಗೋಸ್ವಾಮಿ ಮೊದಲಾದವರು ದಕ್ಷಿಣೇಶ್ವರಕ್ಕೆ ಬಂದಿದ್ದರು. ನರೇಂದ್ರನೂ ಅಲ್ಲಿ ಒಂದು ಕಡೆ ಕುಳಿತಿದ್ದನು. ಸ್ವಲ್ಪ ಹೊತ್ತಾದ ಮೇಲೆ ಕೇಶವ, ವಿಜಯ ಮೊದಲಾದವರು

ಹೊರಟುಹೋದರು. ಪರಮಹಂಸರು ಅಲ್ಲಿ ನೆರೆದಿದ್ದ ಭಕ್ತವೃಂದವನ್ನು ನಿರ್ದೇಶಿಸಿ ನರೇಂದ್ರನನ್ನು ತೋರಿಸುತ್ತ "ನೋಡಿ, ಇವನ ಮುಂದೆ ಅವರೆಲ್ಲ ಎಲ್ಲಿ? ಕೇಶವ ವಿಜಯರಲ್ಲಿ ಜ್ಞಾನ ಒಂದು ಸೊಡರಿನಂತೆ ಮಿಣುಕುತ್ತದೆ; ಇವನಲ್ಲಿ ಜ್ಞಾನ ಸೂರ್ಯನಂತೆ ಪ್ರಜ್ವಲಿಸುತ್ತಿದೆ" ಎಂದರು. ಅದನ್ನು ಕೇಳಿದ ನರೇಂದ್ರನು ತಟಕ್ಕನೆ ತನ್ನ ಸ್ಥಾನವನ್ನು ಬಿಟ್ಟೆದ್ದು ಮುಂದೆ ಬಂದು ಪ್ರತಿಭಟಿಸಿದನು. "ನೀವು ಹೇಳುವುದೇನು, ಮಹಾಶಯ! ಜಗದ್ವಿಖ್ಯಾತ ಕೇಶವಸೇನರೆಲ್ಲಿ? ಶಾಲೆಯ ಹುಡುಗನಾದ ನಾನೆಲ್ಲಿ? ಕೇಳಿದವರು ನಿಮ್ಮನ್ನು ಮರುಳು ಎನ್ನದಿರುವುದಿಲ್ಲ!" ಎಂದನು. ಪರಮಹಂಸರು ಮುಗುಳ್ನಗೆ ನಗುತ್ತ ಸರಳಭಾವದಿಂದ "ನಾನೇನು ಮಾಡಲಿ ಹೇಳು; ತಾಯಿ ತೋರಿದಳು, ನಾನು ಹೇಳಿಬಿಟ್ಟೆ" ಎಂದರು. ನರೇಂದ್ರನು ಸಂದಿಗ್ಧ ಭಾವದಿಂದ "ತಾಯಿ ಹೇಳಿದಳೋ, ಅಥವಾ ನಿಮ್ಮ ತಲೆಯ ಮರುಳ್ತನವೊ - ನನಗೆ ಹೇಗೆ ಗೊತ್ತಾಗಬೇಕು? ನಾನಾಗಿದ್ದರೆ ಅದನ್ನು ಮರುಳ್ತನವೆಂದು ಮೂಲೆಗೊತ್ತುತ್ತಿದ್ದೆ" ಎಂದುಬಿಟ್ಟನು.

ನರೇಂದ್ರನನ್ನು ನೋಡಿದಂದಿನಿಂದ ಆತನು ಅದ್ವೈತ ವೇದಾಂತ ರಹಸ್ಯಗಳಲ್ಲಿ ಸಿದ್ಧಿ ಹೊಂದಲು ಯೋಗ್ಯತಮನಾದ ಅಧಿಕಾರಿಪುರುಷನೆಂದು ಪರಮಹಂಸರು ತಿಳಿದಿದ್ದರು. ನರೇಂದ್ರನಿಗೆ ಮಾತ್ರ 'ಅಹಂ ಬ್ರಹ್ಮಾಸ್ಮಿ', 'ಶಿವೋಽಹಂ', 'ತತ್ತ್ವಮಸಿ' ಮೊದಲಾದ ಮಾತುಗಳನ್ನು ಕೇಳಿದರೆ ಆಗುತ್ತಿರಲಿಲ್ಲ. ಆದರೂ ಭಗವಾನರು ಆತನು ದಕ್ಷಿಣೇಶ್ವರಕ್ಕೆ ಬಂದಾಗಲೆಲ್ಲ ಅಷ್ಟಾವಕ್ರ ಸಂಹಿತೆ ಮೊದಲಾದ ಅದ್ವೈತದರ್ಶನ ಸಂಬಂಧವಾದ ಗ್ರಂಥಗಳನ್ನು ತಮಗೆ ಓದಿ ಹೇಳುವಂತೆ ಮಾಡುತ್ತಿದ್ದರು. ನರೇಂದ್ರನು ಗ್ರಂಥವನ್ನು ಓದಿ ಹೇಳುತ್ತ ಹೇಳುತ್ತ ಮಧ್ಯೆ ಮಧ್ಯೆ ಜುಗುಪ್ಸೆಯನ್ನು ಸೂಚಿಸಿ "ನಾನೂ ಬ್ರಹ್ಮ, ನೀನೂ ಬ್ರಹ್ಮ, ಎಲ್ಲವೂ ಬ್ರಹ್ಮ! ಎಲ್ಲ ಬರಿಯ ಕಾಡುಹರಟೆ! ಇದನ್ನೆಲ್ಲ ಬರೆದ ಋಷಿಗಳಿಗೆ ತಲೆ ಕೆಟ್ಟಿತ್ತೆಂದೇ ತೋರುತ್ತದೆ!" ಎಂದು ಸ್ವಲ್ಪವೂ ಹಿಂದುಮುಂದು ನೋಡದೆ ಅಣಕಿಸುತ್ತಿದ್ದನು. ತಟಕ್ಕನೆ ಶಿಷ್ಯನ ಭಾವಭಂಗ ಮಾಡಲು ಇಷ್ಟಪಡದೆ ಪರಮಹಂಸರು "ಅವರ ಮತ ನಿನಗೆ ಸೇರದೆ ಹೋಗಬಹುದು. ಅಂದಮಾತ್ರಕ್ಕೆ ಅವರನ್ನು ನಿಂದಿಸುವುದೇಕೆ? ಪರಮಾತ್ಮನ ಅನಂತತ್ವಕ್ಕೆ ಮೇರೆಯನ್ನೇಕೆ ಕಲ್ಪಿಸುವುದು? ಪರಮಾತ್ಮನನ್ನು ಕುರಿತು ಧ್ಯಾನಮಾಡು. ಆತನು ಯಾವ ಮಾರ್ಗವನ್ನು ನಿನಗೆ ತೋರಿಸುವನೋ ಅದರಲ್ಲಿ ಶ್ರದ್ಧೆಯಿಂದ ಮುಂದುವರಿ! ಸುಮ್ಮನೆ ಈ ವಿಧವಾದ ರಂಧ್ರಾನ್ವೇಷಣೆಯಿಂದ ಏನು ಪ್ರಯೋಜನ!" ಎನ್ನುತ್ತಿದ್ದರು. ನರೇಂದ್ರನು ಮಾತ್ರ ತನಗೆ ಮಿಥ್ಯೆಯೆಂದು ತೋರಿದುದನ್ನು ಸತ್ಯವೆನ್ನಲು ಮನಸ್ಸಿಲ್ಲದ ಅದ್ವೈತ ವೇದಾಂತವನ್ನು ಮನಬಂದಂತೆ ಪರಿಹಾಸ್ಯ ಮಾಡುತ್ತಿದ್ದನು.

ಶಿಷ್ಯನು ಮಾರ್ಗವು ಜ್ಞಾನಮಾರ್ಗವೆಂದೂ ಅದ್ವೈತವೇ ಆತನನ್ನು ಉನ್ನತೋನ್ನತ ಸಿದ್ಧಿಗೆ ಕೊಂಡೊಯ್ಯುವುದೆಂದೂ ಗುರುಗಳು ಚೆನ್ನಾಗಿ ಅರಿತಿದ್ದರು. ಒಂದು ದಿನ ಜೀವಬ್ರಹ್ಮರ ಐಕ್ಯವನ್ನು ಶಿಷ್ಯನಿಗೆ ಯುಕ್ತಿಯಿಂದ ತಿಳಿಸಲು ಪ್ರಯತ್ನಪಟ್ಟರು. ಕಡೆಗೂ ಶಿಷ್ಯನು ಶರಣಾಗತನಾಗಲಿಲ್ಲ. ಪ್ರತಾಪಚಂದ್ರ ಹಾಜರನೊಡನೆ ಕೋಣೆಯಿಂದ ಹೊರಗೆ ಬಂದು ಸಿಗರೇಟು ಸೇದುತ್ತಾ "ಜೀವಬ್ರಹ್ಮರು ಒಂದೆಯಂತೆ! ಅದು ಹೇಗಾದೀತು? ಹೂಜಿಯೂ ಬ್ರಹ್ಮ! ನೀರೂ ಬ್ರಹ್ಮ! ಸಿಗರೇಟು ಬ್ರಹ್ಮ! ಹೊಗೆಯೂ ಬ್ರಹ್ಮ! ನಾನೂ ಬ್ರಹ್ಮ! ನೀನೂ ಬ್ರಹ್ಮ! ಎಲ್ಲಾದರೂ ಉಂಟೆ, ಇದಕ್ಕಿಂತ ಹೆಚ್ಚಾದ ಮರುಳ್ತನ? ಪಿತ್ತ ನೆತ್ತಿಗೇರಿದ್ದರೇ ಸರಿ ಇದನ್ನು ಒಪ್ಪುವುದು!" ಎಂದು ಹರಟುತ್ತಿದ್ದನು. ಹಾಜರನೂ ನರೇಂದ್ರನೊಡನೆ ಸೇರಿ ಅದ್ವೈತವನ್ನು ಅಣಕಿಸಲಾರಂಭಿಸಿದನು. ಪರಮಹಂಸರು ಒಳಗಿನಿಂದಲೇ ನರೇಂದ್ರನ ಮಾತುಗಳನ್ನೂ ಅವನು ಗಹಗಹಿಸಿ ನಗುವುದನ್ನೂ ಕೇಳಿ, ಬಟ್ಟೆಯನ್ನು ಕಂಕುಳಲ್ಲಿಟ್ಟುಕೊಂಡು ಹೊರಗೆ ಬಂದು, ಮುಗುಳ್ನಗೆ ನಗುತ್ತ, "ಓಹೋ!

ಏನು ಮಾತಾಡುತ್ತಿದ್ದೀರಿ!" ಎಂದು ಹೇಳುತ್ತ ನರೇಂದ್ರನನ್ನು ಮುಟ್ಟಿದರು. ಅವನು ಸಮಾಧಿಸ್ಥನಾದನು. ಸ್ವಾಮಿ ವಿವೇಕಾನಂದರು ಆ ಘಟನೆಯ ವಿಚಾರವಾಗಿ ಹೀಗೆಂದು ಬರೆದಿರುವರು:

"ಆ ಐಂದ್ರಜಾಲಿಕ ಸ್ಪರ್ಶದಿಂದ ನನ್ನ ಬಗೆಯೆ ಬೇರೆಯಾಯಿತು. ಬ್ರಹ್ಮವಲ್ಲದ ವಸ್ತು ವಿಶ್ವದಲ್ಲಿ ಬೇರೊಂದಿಲ್ಲದಿರುವುದನ್ನೂ ಸರ್ವವೂ ಬ್ರಹ್ಮಮಯವಾದುದನ್ನೂ ಕಂಡು ನಾನು ವಿಸ್ಮಯಸ್ತಂಭಿತನಾದೆ. ನನ್ನ ಮನಸ್ಸೇನೋ ತಿಳಿಯಾಗಿಯೇ ಇತ್ತು. ಆ ಭಾವವು ಎಷ್ಟು ಹೊತ್ತು ಇರುವುದೊ ನೋಡಬೇಕೆಂದು ಸುಮ್ಮನಾದೆ. ಆ ದಿನವೆಲ್ಲಾ ಹಾಗೆಯೇ ಇತ್ತು. ಮನೆಗೆ ಹಿಂತಿರುಗಿದೆ. ಅಲ್ಲಿರುವ ವಸ್ತುಗಳೆಲ್ಲ ಬ್ರಹ್ಮವಾಗಿ ತೋರಿದುವು! ಊಟ ಮಾಡಲು ಕುಳಿತೆ. ಅನ್ನ, ಬಟ್ಟಲು, ಬಾಣಸಿಗ ಎಲ್ಲವೂ ಬ್ರಹ್ಮವಾಗಿ ಕಂಡುಬಂದುವು. ಒಂದೆರಡು ತುತ್ತುಗಳನ್ನು ತಿಂದು ಮಂಕುಹಿಡಿದವನಂತೆ ಸುಮ್ಮನೆ ಕುಳಿತುಬಿಟ್ಟೆ. ನಮ್ಮ ಅಮ್ಮ 'ಏಕೆ ಸುಮ್ಮನೆ ಕುಳಿತಿರುವೆ? ಊಟ ಮಾಡು' ಎಂದಳು. ನಾನು ಬೆಚ್ಚಿಬಿದ್ದು ಉಣ್ಣತೊಡಗಿದೆ. ಉಣ್ಣುವಾಗಲೂ ಮಲಗುವಾಗಲೂ ಕಾಲೇಜಿಗೆ ಹೋಗುವಾಗಲೂ ಸರ್ವದಾ ಅದೇ ಅವಸ್ಥೆಯಲ್ಲಿ ಬಾಹ್ಯಪ್ರಜ್ಞಾಹೀನನಾಗಿರುತ್ತಿದ್ದೆ. ದಾರಿಯಲ್ಲಿ ಹೋಗುತ್ತಿರುವಾಗ ಎದುರುಗಡೆಯಿಂದ ಗಾಡಿಗಳು ಬಂದರೆ ಅರುಗಾಗುವಂತೆ ಮನಸ್ಸಾಗುತ್ತಿರಲಿಲ್ಲ. ಗಾಡಿಯೂ ನಾನೂ ಒಂದೇ ವಸ್ತುವಾಗಿ ತೋರುತ್ತಿತ್ತು. ಇಂದ್ರಿಯಗಳೆಲ್ಲ ಜಡವಾದಂತೆ ತೋರಿದುವು. ಊಟದಲ್ಲಿ ನನಗೆ ಮೊದಲಿನಂತೆ ರುಚಿ ತೋರುತ್ತಿರಲಿಲ್ಲ. ಯಾರೋ ತಿಂದಂತೆ ಭಾಸವಾಗುತ್ತಿತ್ತು. ಕೆಲವು ಸಾರಿ ಊಟಕ್ಕೆ ಕುಳಿತಾಗ, ನಡುವೆ ನಿದ್ರಿಸಿ, ಮರಳಿ ಎಚ್ಚತ್ತು ಉಣ್ಣುತ್ತಿದ್ದೆ. ಹೀಗಾಗಿ ಕೆಲವು ದಿನ ಮಿತಿಮೀರಿ ತಿನ್ನುತ್ತಿದ್ದೆ. ಅಂತೂ ಇದರಿಂದ ಯಾವ ರೋಗವೂ ಬರಲಿಲ್ಲ. ಇದನ್ನೆಲ್ಲಾ ಕಂಡು ಅಮ್ಮ ಬೆದರಿದಳು. ಯಾವುದೋ ರೋಗವಿರಬೇಕೆಂದು ಭಾವಿಸಿದಳು. ನಾನು ಬಹುದಿನ ಬಾಳೆನೆಂದು ಹೆದರಿದಳು. ಈ ಅವಸ್ಥೆ ಸ್ವಲ್ಪ ಕಡಿಮೆಯಾದ ಮೇಲೆ ಲೋಕವೆಲ್ಲ ಒಂದು ಕನಸಿನಂತೆ ತೋರ ತೊಡಗಿತು. ಕಾರ್ನ್‌ವಾಲೀಸ್ ಚೌಕದ ಮಾರ್ಗವಾಗಿ ಕಾಲೇಜಿಗೆ ಹೋಗುವಾಗ ಅಲ್ಲಿದ್ದ ತಂತಿಯ ಕಂಭಗಳಿಗೆ ತಲೆಯನ್ನು ಬಡಿದು ಅವು ಸತ್ಯವೋ ಸ್ವಪ್ನವೋ ಎಂಬುದನ್ನು ಪರೀಕ್ಷಿಸುತ್ತಿದ್ದೆ. ಹೀಗೆಯೇ ಕೆಲವು ದಿನಗಳು ಹೋದುವು. ಎಲ್ಲ ಸರಿಯಾದ ಮೇಲೆ ನಾನು ಕಂಡದ್ದು ಅದ್ವೈತ ಸಿದ್ಧಿಯ ಕ್ಷಣಿಕದರ್ಶನವಾಗಿರಬೇಕೆಂದು ಆಲೋಚಿಸಿದೆ. ಶಾಸ್ತ್ರಗಳ ಮಾತು ಸುಳ್ಳಾಗಿರದೆಂದು ಊಹಿಸಿದೆ. ಈ ಅನುಭವವಾದ ಮೇಲೆ ಅದ್ವೈತ ದರ್ಶನದ ಸಿದ್ಧಾಂತಗಳಲ್ಲಿ ನನಗಿದ್ದ ಸಂದೇಹ ತೊಲಗತೊಡಗಿತು."

ಈ ರೀತಿ ಸಮಯ ದೊರೆತಾಗೆಲ್ಲ ನರೇಂದ್ರನು ದಕ್ಷಿಣೇಶ್ವರಕ್ಕೆ ಬಂದು ಭಗವಾನರ ಪದಪ್ರಾಂತದಲ್ಲಿ ಕುಳಿತು ಅವರ ಉಪದೇಶಾಮೃತ ಪಾನಮಾಡಿ ದಿನೇದಿನೇ ವಿಕಸಿತವಾಗುತ್ತಿದ್ದನು. ಮೊದಲಿದ್ದ ಆತನ ಅಭಿಪ್ರಾಯಗಳೆಲ್ಲ ಮೆಲ್ಲಮೆಲ್ಲನೆ ಪರಿವರ್ತನೆ ಹೊಂದತೊಡಗಿದುವು. ಗುರುವರ್ಯನ ಸಹಾಯದಿಂದ ಧ್ಯಾನಸಾಧನೆಗಳಲ್ಲಿಯೂ ಸ್ವಲ್ಪಸ್ವಲ್ಪವಾಗಿ ಕಾಲಿಟ್ಟನು. ಬಾಲ್ಯದಿಂದಲೂ ಆತನಲ್ಲಿ ಸಹಜವಾಗಿದ್ದ ವಿವಾಹ ವಿತೃಷ್ಣೆ, ವೈರಾಗ್ಯ, ತ್ಯಾಗಬುದ್ಧಿಗಳು ಅಭಿವೃದ್ಧಿ ಹೊಂದಿದುವು.

ಒಂದು ಸಾರಿ ಶಿಷ್ಯನಿಗೆ ತಮ್ಮ ಮೇಲಿದ್ದ ಪ್ರೇಮವನ್ನು ಪರೀಕ್ಷಿಸಬೇಕೆಂದು ಪರಮಹಂಸರು ಒಂದು ಆಟ ಹೂಡಿದರು. ಒಂದು ದಿನ ನರೇಂದ್ರನು ದಕ್ಷಿಣೇಶ್ವರಕ್ಕೆ ಬಂದ ಗುರುಗಳಿಗೆ ನಮಸ್ಕಾರ ಮಾಡಿದನು. ಗುರುಗಳು ಮಾತಾಡಲಿಲ್ಲ. ಶಿಷ್ಯನನ್ನು ಕಣ್ಣೆತ್ತಿ ನೋಡಲಿಲ್ಲ. ಅವರು ಧ್ಯಾನಮಗ್ನರಾಗಿರಬೇಕೆಂದು ನರೇಂದ್ರನು ಊಹಿಸಿ ಆ ದಿನವೆಲ್ಲ ಹಾಜರ

ಮೊದಲಾದವರೊಡನೆ ಹರಟೆ ಮನೆಗೆ ಹೋದನು. ಒಂದು ವಾರವಾದಮೇಲೆ ಪುನಃ ದಕ್ಷಿಣೇಶ್ವರಕ್ಕೆ ಬಂದನು. ಗುರುಗಳ ಭಾವ ಹಿಂದಿನಂತೆಯೇ ಇತ್ತು. ಆ ದಿನವೂ ಹಾಜರನೊಡನೆ ಹರಟೆ ಹೊಡೆದು ಸಂಜೆಯ ಹೊತ್ತಿಗೆ ಮನೆಗೆ ಹೋದನು. ಹೀಗೆಯೇ ಅನೇಕ ದಿನಗಳು ಕಳೆದುವು. ಗುರುಗಳು ತನ್ನೊಡನೆ ಮಾತಾಡದಿದ್ದರೂ ತನ್ನನ್ನು ಗಣನೆಗೆ ತಾರದೆ ಇದ್ದರೂ ನರೇಂದ್ರನು ಮಾತ್ರ ದಕ್ಷಿಣೇಶ್ವರಕ್ಕೆ ಬಂದು ಅವರಿಗೆ ನಮಸ್ಕಾರ ಮಾಡುವುದನ್ನು ಬಿಡಲಿಲ್ಲ. ಅವರು ನರೇಂದ್ರನ ಯೋಗಕ್ಷೇಮವನ್ನು ಇತರರಿಂದ ಗುಟ್ಟಾಗಿ ತಿಳಿದುಕೊಳ್ಳುತ್ತಿದ್ದರು.

ಒಂದು ದಿನ ಪರಮಹಂಸರು ನರೇಂದ್ರನನ್ನು ಬಳಿಗೆ ಕರೆದು “ನಾನು ನಿನ್ನೊಡನೆ ಮಾತಾಡದಿದ್ದರೂ ನಿನ್ನನ್ನು ಲಕ್ಷಿಸದಿದ್ದರೂ ನೀನು ಮಾತ್ರ ಇಲ್ಲಿಗೆ ಬಂದು ಹೋಗುವುದನ್ನು ಬಿಟ್ಟಿಲ್ಲವಲ್ಲ; ಅದೇನು?” ಎಂದು ಕೇಳಿದರು. ಅದಕ್ಕೆ ನರೇಂದ್ರನು “ಮಹಾಶಯ, ನಿಮ್ಮ ಮಾತುಗಳಿಗಾಗಿ ಮಾತ್ರವೇ ನಾನು ಇಲ್ಲಿಗೆ ಬರುತ್ತಿಲ್ಲ. ನಿಮ್ಮನ್ನು ಕಂಡರೆ ಬಹಳ ಆದರ. ಅದಕ್ಕಾಗಿ ನಿಮ್ಮನ್ನು ನೋಡಲು ಬರುತ್ತೇನೆ” ಎಂದನು. ಶಿಷ್ಯನ ಮಾತನ್ನು ಕೇಳಿ ಗುರುವಿಗೆ ಮೇರೆಯಿಲ್ಲದ ಸಂತಸವಾಯಿತು. “ಅಯ್ಯಾ, ನಿನ್ನನ್ನು ಪರೀಕ್ಷಿಸಬೇಕೆಂದು ನಾನು ಹಾಗೆ ಮಾಡಿದೆ. ಇನ್ನಾರಾಗಿದ್ದರೂ ಇಲ್ಲಿಗೆ ಬರುವುದನ್ನೇ ಬಿಟ್ಟುಬಿಡುತ್ತಿದ್ದರು” ಎಂದರು.

ನರೇಂದ್ರನು ಬಿ.ಎ. ಪರೀಕ್ಷೆಗೆ ಓದುತ್ತಿರುವಾಗಲೆ ತಂದೆಯ ಅಭಿಲಾಷೆಯಂತೆ ಒಬ್ಬ ಪ್ರಸಿದ್ಧ ವಕೀಲನ ಕೈಕೆಳಗೆ ವಕೀಲಿತನವನ್ನು ಅಭ್ಯಾಸ ಮಾಡುತ್ತಿದ್ದನು. ಅದೇ ಸಮಯದಲ್ಲಿ ವಿಶ್ವನಾಥದತ್ತನು ಮಗನ ಮದುವೆಯ ವಿಚಾರವಾಗಿ ಮರಳಿ ಚಳವಳಿ ಮಾಡತೊಡಗಿದನು. ವೈರಾಗ್ಯವು ನರೇಂದ್ರನ ಹುಟ್ಟುಗುಣವಾಗಿತ್ತು. ಶ್ರೀರಾಮಕೃಷ್ಣರ ಸಂಗದಿಂದ ಅದು ಮತ್ತಷ್ಟು ಪರಿಪುಷ್ಟಿ ಹೊಂದಿತ್ತು. “ಸಂನ್ಯಾಸವೇ ಮಾನವ ಜೀವನದ ಸರ್ವೋಚ್ಚವಾದ ಆದರ್ಶ. ಆತ್ಮ ಕಲ್ಯಾಣಾಕಾಂಕ್ಷಿಗಳು ಅನಿತ್ಯವಾದ ಸಂಸಾರದ ಸುಖಲಾಲಸೆಗಳಿಗಾಗಿ ಅತ್ತಿತ್ತ ಅಲೆದಾಡುವುದು ಹುಚ್ಚುತನ” ಎಂದು ಆತನು ತನಗೆ ಸಂಸಾರಿಯಾಗುವಂತೆ ಬುದ್ಧಿ ಹೇಳಲು ಬಂದ ಸಹಾಧ್ಯಾಯಿಯಾದ ಬಂಧುವೊಬ್ಬನಿಗೆ ಹೇಳಿದನು.

* * *

---

[1] ‘ಶ್ರೀರಾಮಕೃಷ್ಣ ಪರಮಹಂಸ’ ಎಂಬ ಗ್ರಂಥದಲ್ಲಿ ೧೬೨ನೆಯ ಪುಟವನ್ನು ನೋಡಿ.

# ೬. ಅಗ್ನಿಪರೀಕ್ಷೆ

ಮಾಯಾ ಪ್ರಪಂಚದ ಬಂಧನಗಳು ವಜ್ರೋಪಮ ಕಠಿಣವಾದುವು. ಜಗತ್ತಿನ ಅಜ್ಞಾನತಿಮಿರ ಘನನಿಬಿಡವಾದುದು. ಇಂದ್ರಿಯ ಚಾಪಲ್ಯ ವಿಲಯಾಗ್ನಿ ಸದೃಶವಾದುದು. ಪ್ರಲೋಭನಗಳ ಸೆಳೆತ ದುರ್ನಿವಾರ್ಯವಾದುದು. ಮಾಯಾಬಂಧನಗಳ ಗಹನ ದುರ್ಭೇದ್ಯವಾದ ನಿಬಿಡಾರಣ್ಯವನ್ನು ಕಡಿದು ಉರುಳಿಸಲು ಪರಶುರಾಮ ಕುಠಾರೋಪಮ ಆತ್ಮಶಕ್ತಿ ಚಿಚ್ಛಕ್ತಿಗಳು ಬೇಕು; ಅವಿಶ್ರಾಂತ ಸಾಹಸ ಬೇಕು; ದೃಢನಿಶ್ಚಲವಾದ ಏಕಾಗ್ರತೆ ಬೇಕು. ನಿರಂತರ ಸಾಧನೆಯಿಂದಲ್ಲದೆ ಸಿದ್ಧಿ ಲಭಿಸದು. ಕೇವಲ ಸೌಜನ್ಯವೆ ಸಿದ್ಧಿಯ ಪರಮ ಚಿಹ್ನೆ.

ಶ್ರೀರಾಮಕೃಷ್ಣರು ತಮ್ಮ ಶಿಷ್ಯರಿಗೆ ಬರಿಯ ಉಪದೇಶಗಳನ್ನು ಮಾತ್ರವೇ ಕೊಟ್ಟು ಸುಮ್ಮನಾಗುತ್ತಿರಲಿಲ್ಲ. ಆ ಉಪದೇಶಗಳನ್ನು ಅನುಷ್ಠಾನಕ್ಕೆ ತರಲು ಬೇಕಾಗುವ ಆತ್ಮಶಕ್ತಿಯನ್ನೂ ದಾನಮಾಡುತ್ತಿದ್ದರು. ಅದರಲ್ಲಿಯೂ ನರೇಂದ್ರನಿಗೆ ತಮ್ಮ ಶಕ್ತಿಯನ್ನೆಲ್ಲ ಧಾರೆಯೆರೆದಿದ್ದರು. ಆದ್ದರಿಂದಲೆ ಆತನು ಶ್ರೀ ಸ್ವಾಮಿ ವಿವೇಕಾನಂದರಂತಹ ಸಿಡಿಲಾಳಾದದ್ದು. ಪರಮಹಂಸರ ಶಕ್ತಿಯನ್ನು ಸ್ವಲ್ಪವಾದರೂ ಅರಿಯದೆ ನರೇಂದ್ರನ ಸಾಮರ್ಥ್ಯವನ್ನು ಅಳೆಯಲಾಗುವುದಿಲ್ಲ. ಸಂತತವಾದ ಸಾಹಸದಿಂದ ಅವರು ಕಾಮಿನಿ ಕಾಂಚನಗಳನ್ನು ಸಂಪೂರ್ಣವಾಗಿ ತ್ಯಜಿಸಿದ್ದರು. ಸ್ತ್ರೀಪುರುಷರೆಂಬ ಲಿಂಗಭೇದವನ್ನು ವಿವಿಧ ವಿಚಿತ್ರ ಸಾಧನೆಗಳಿಂದ ಚಿತ್ತದಿಂದ ಕಿತ್ತೊಗೆದಿದ್ದರು. ಸ್ತ್ರೀಯರೆಲ್ಲ ಜಗನ್ಮಾತೆಯ ಪ್ರತಿಬಿಂಬಗಳೆಂಬುದನ್ನು ಹೃತ್ಪೂರ್ವಕವಾಗಿ ಅನುಭವದಿಂದ ತಿಳಿದಿದ್ದರು. ಶಾಕ್ತ, ವೈಷ್ಣವ, ಶೈವ, ಬೌದ್ಧ, ಮುಸಲ್ಮಾನ, ಕ್ರೈಸ್ತ ಮೊದಲಾದ ಮತಧರ್ಮ ಮಾರ್ಗಗಳೆಲ್ಲವೂ ಏಕಮಾತ್ರ ಧ್ಯೇಯವಾದ ಪರಮಾತ್ಮನೆಡೆಗೆ ಸಾಧಕನನ್ನು ಕೊಂಡೊಯ್ಯುತ್ತವೆ ಎಂಬುದನ್ನು ಪ್ರತ್ಯಕ್ಷಾನುಭವದಿಂದ ತಿಳಿದಿದ್ದರು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮೊದಲಾದ ದರ್ಶನಗಳೆಲ್ಲವೂ ವಿವಿಧ ಭಾವಗಳಿಗೆ, ವಿವಿಧ ದೃಷ್ಟಿಗಳಿಗೆ ತೋರಿಬರುವ ಏಕಮೇವಾದ್ವಿತೀಯವಾದ ಕೇವಲ ಸತ್ಯದ ವಿವಿಧರೂಪಗಳೆಂಬುದನ್ನು ಸ್ವತಃ ಸಿದ್ಧಿಯಿಂದ ಅರಿತ ಅಪಾರ್ಥಿವ ದೈವಿಕ ಮಹಾಪುರುಷರಾಗಿದ್ದರು. ಸಗುಣ ಬ್ರಹ್ಮಕ್ಕೆ ನಾವು ಯಾವ ಯಾವ ಗುಣಗಳನ್ನು ಆರೋಪಿಸಬಹುದೋ ಆ ಎಲ್ಲ ಗುಣಗಳನ್ನೂ ಸಂಪೂರ್ಣವಾಗಿ ಪಡೆದಿದ್ದರು. ಅಲ್ಲದೆ ನಿರ್ಗುಣ ಬ್ರಹ್ಮದಂತೆ ನಿಸ್ಪೃಹರಾಗಿದ್ದ ಜ್ಞಾನಿಯಾಗಿದ್ದರು; ಭಕ್ತರಾಗಿದ್ದರು; ಕರ್ಮಯೋಗಿಯಾಗಿದ್ದರು. ಆಧ್ಯಾತ್ಮಿಕ ವಿಚಾರಗಳಲ್ಲಿ ಅವರಿಗೆ ಎಷ್ಟು ಬುದ್ಧಿಸೂಕ್ಷ್ಮತೆಯಿತ್ತೋ ಅಷ್ಟೇ ಬುದ್ಧಿ ಸೂಕ್ಷ್ಮತೆ ವ್ಯಾವಹಾರಿಕ ವಿಷಯಗಳಲ್ಲಿಯೂ ಅವರಿಗಿತ್ತು. ಶಿರವನ್ನು ಗಗನತಲದಲ್ಲಿಟ್ಟು ಪಾದಗಳನ್ನು ಭೂತಲದಲ್ಲಿಟ್ಟ ಸರ್ವ ಭೂಮ ವ್ಯಕ್ತಿಗಳಾಗಿದ್ದರವರು. ಅಂತಹ ದಿವ್ಯ ಗುರುಗಳ ಶಿಷ್ಯತ್ವ ನರೇಂದ್ರನಿಗೆ ಲಭಿಸಿತು. ಆದ್ದರಿಂದಲೆ ನಿತ್ಯಸಿದ್ಧನಾದ ಆತನಿಗೆ ಬಹುಬೇಗನೆ ಸ್ವರೂಪಜ್ಞಾನವುಂಟಾಯಿತು.

ಒಂದು ದಿನ ಶ್ರೀರಾಮಕೃಷ್ಣರು ನರೇಂದ್ರನಾಥನನ್ನು ಪಂಚವಟಿಗೆ ಕರೆದುಕೊಂಡು ಹೋಗಿ "ನೋಡು, ಕಠೋರ ಸಾಧನೆಗಳಿಂದ ನನಗೆ ಅನೇಕ ಅಲೌಕಿಕ ಶಕ್ತಿಗಳು ದೊರಕಿವೆ; ಅಣಿಮಾದಿ ಅಷ್ಟಸಿದ್ಧಿಗಳು ಲಭಿಸಿವೆ. ಆದರೆ ಅವುಗಳಿಂದ ನನಗೇನೂ ಉಪಯೋಗವಿಲ್ಲ. ಜಗನ್ಮಾತೆಯ ಅನುಜ್ಞೆಯನ್ನು ಪಡೆದು ಅವುಗಳನ್ನೆಲ್ಲ ನಿನಗೆ ಕೊಡಬೇಕೆಂದು ಯೋಚಿಸಿದ್ದೇನೆ. ಆಕೆಯ ಕೃಪೆಯಿಂದ ನೀನು ಲೋಕದಲ್ಲಿ ಬಹಳ ಕಾರ್ಯಗಳನ್ನು ಮಾಡುವೆಯೆಂದು

ನನಗೆ ತಿಳಿದುಬಂದಿದೆ. ನಿನ್ನಲ್ಲಿ ಈ ಶಕ್ತಿಗಳಿದ್ದರೆ ಬೇಕಾದಾಗ ಉಪಯೋಗಿಸಿಕೊಳ್ಳಬಹುದು. ನಿನಗೆ ಸಮ್ಮತವೆ?" ಎಂದರು.

ನರೇಂದ್ರನು "ಮಹಾಶಯ, ಆ ಶಕ್ತಿಗಳಿಂದ ಬ್ರಹ್ಮಸಾಕ್ಷಾತ್ಕಾರಕ್ಕೆ ಸಹಾಯವಾಗುವುದೇ?" ಎಂದು ಕೇಳಿದನು.

ಗುರುಗಳು "ಇಲ್ಲ, ಆದರೆ ಈಶ್ವರ ದರ್ಶನವಾದಮೇಲೆ ಭೂಮಿಯಲ್ಲಿ ಆತನ ಕೆಲಸಗಳನ್ನು ಮಾಡಲು ಅವುಗಳಿಂದ ತುಂಬಾ ಸಹಾಯವಾಗುತ್ತದೆ" ಎಂದರು.

ಶಿಷ್ಯನು "ಹಾಗಾದರೆ ಅವು ನನಗೆ ಬೇಡ. ಮೊದಲು ಈಶ್ವರದರ್ಶನವಾಗಲಿ; ಆಮೇಲೆ ಅವು ಬೇಕೋ ಬೇಡವೊ ಎಂಬುದನ್ನು ನಿರ್ಣಯಿಸುವೆನು. ನನಗೀಗಲೆ ಈ ಶಕ್ತಿಗಳು ಸಿಕ್ಕಿಬಿಟ್ಟರೆ ನಿಜವಾದ ಧ್ಯೇಯವನ್ನು ಮರೆತುಬಿಟ್ಟು ಸ್ವಾರ್ಥತೆಯಿಂದ ಅಡ್ಡಹಾದಿಗೆ ಬೀಳಬಹುದು" ಎಂದನು.

ಈ ಅಲೌಕಿಕ ಶಕ್ತಿಗಳ ವಿಚಾರವಾಗಿ ಸರ್ವದಾ ಉದಾಸೀನರಾಗಿರಬೇಕೆಂದು ಶ್ರೀರಾಮಕೃಷ್ಣರು ತಮ್ಮ ಶಿಷ್ಯರಿಗೆ ಸಾರಿಸಾರಿ ಹೇಳುತ್ತಿದ್ದರು.

ಯಾವನಾದರಾಗಲಿ ಚೆನ್ನಾಗಿ ಪರೀಕ್ಷಿಸದೆ ಯಾರನ್ನೂ ಗುರುವಾಗಿ ಸ್ವೀಕರಿಸಿ ಬಿಡಬಾರದೆಂದೂ ಪರಮಹಂಸರು ತಮ್ಮ ಶಿಷ್ಯರಿಗೆ ಹೇಳುತ್ತಿದ್ದರು. ಅದರಂತೆಯೇ ನರೇಂದ್ರನು ಭಗವಾನರನ್ನೂ ಪರೀಕ್ಷಿಸದೆ ಬಿಡಲಿಲ್ಲ. ಗುರುಗಳು ಹೊನ್ನು ಮಣ್ಣುಗಳನ್ನು ಒಂದೇ ಸಮನಾಗಿ ಭಾವಿಸಿದವರಾಗಿದ್ದರು. ಒಂದು ಕೈಯಲ್ಲಿ ಚಿನ್ನವನ್ನೂ ಮತ್ತೊಂದು ಕೈಯಲ್ಲಿ ಮಣ್ಣನ್ನೂ ಹಿಡಿದುಕೊಂಡು ಭಾಗೀರಥಿಯ ತೀರದಲ್ಲಿ ಕುಳಿತು ಅವೆರಡನ್ನೂ ಸಮದೃಷ್ಟಿಯಿಂದ ನೋಡಿ ಹೊಳೆಯಲ್ಲಿ ಬಿಸುಟು ಸಾಧನೆಮಾಡಿದ್ದರು. ಸುವರ್ಣ ರೌಪ್ಯಗಳ ಸ್ಪರ್ಶದ ಮಾತ್ರದಿಂದ ಅವರ ದೇಹ ಕಂಪಿಸಿ ಸೆಡೆದುಕೊಳ್ಳುತ್ತಿತ್ತು. ನರೇಂದ್ರನು ಅದು ಬರಿಯ ಅಭಿನಯವೋ ಸತ್ಯವೋ ಎಂಬುದನ್ನು ಕಂಡುಹಿಡಿಯಲು ಸಿದ್ಧನಾದನು.

ಒಂದು ದಿನ ಆತನು ದಕ್ಷಿಣೇಶ್ವರಕ್ಕೆ ಬಂದಾಗ ಪರಮಹಂಸರು ಕಲ್ಕತ್ತಾಕ್ಕೆ ಹೋಗಿದ್ದರು. ಕೋಣೆಯಲ್ಲಿ ಯಾರೂ ಇರಲಿಲ್ಲ. ಆತನು ತನ್ನ ಜೇಬಿನಿಂದ ಒಂದು ರೂಪಾಯಿ ತೆಗೆದು ಅವರ ಹಾಸಗೆಯ ಕೆಳಗೆ ಹುದಿಗಿಸಿಟ್ಟು ಧ್ಯಾನ ಮಾಡಲು ಪಂಚವಟಿಗೆ ಹೋದನು. ಸ್ವಲ್ಪ ಹೊತ್ತಾದಮೇಲೆ ಗುರುಗಳು ಹಿಂತಿರುಗಿ ಬಂದು ತಮ್ಮ ಹಾಸಗೆಯ ಮೇಲೆ ಕುಳಿತುಕೊಳ್ಳಲು ಹೋದರು. ಲಘು ಪ್ರವಾಹದ ವಿದ್ಯುಚ್ಛಕ್ತಿಯ ಸ್ಪರ್ಶಮಾತ್ರದಿಂದ ಹಿಂದಕ್ಕೆ ಚಿಮ್ಮುವ ಬಾಲಕನಂತೆ ಪರಮಹಂಸರು ಹಾಸಗೆಯಿಂದ ನೆಗೆದು ನಿಂತು ನೋವಿನಿಂದಲೂ ವಿಸ್ಮಯದಿಂದಲೂ ಸುತ್ತಲೂ ನೋಡತೊಡಗಿದರು. ಅಷ್ಟರಲ್ಲಿ ಅಲ್ಲಿಗೆ ಬಂದ ನರೇಂದ್ರನು ದೂರ ನಿಂತು ಅವರ ಪೇಚಾಟವನ್ನು ನೀರವವಾಗಿ ನೋಡುತ್ತಿದ್ದನು. ಕಿಂಕರನೊಬ್ಬನು ಓಡಿಬಂದು ಹಾಸಗೆಯನ್ನು ಚೆನ್ನಾಗಿ ಕೊಡವಿ ನೋಡಲು ರೂಪಾಯಿ ಟಣ್ಣೆಂದು ನೆಲದಮೇಲೆ ಬಿತ್ತು. ಗುರು ಕಿಂಕರರಿಬ್ಬರೂ ಬೆರಗಾದರು. ನರೇಂದ್ರನು ಮಾತ್ರ ಮೆಲ್ಲಗೆ ಅಲ್ಲಿಂದ ನುಣುಚಿಕೊಂಡನು. ಗುರುಗಳಿಗೆ ವಿಷಯವೆಲ್ಲಾ ತಿಳಿದಮೇಲೆ ನರೇಂದ್ರನು ತಮ್ಮನ್ನು ಪರೀಕ್ಷಿಸಿದುದಕ್ಕಾಗಿ ಆತನನ್ನು ಕೊಂಡಾಡಿದರು.

೧೮೮೪ರಲ್ಲಿ ಬಿ.ಎ. ಪರೀಕ್ಷೆ ಮುಗಿಯಿತು. ರಜಾದಿನಗಳು ಬಂದುವು. ಪರೀಕ್ಷೆಗಾಗಿ ಶ್ರಮಪಟ್ಟಿದ್ದ ಮತ್ತು ಪಡದಿದ್ದ ವಿದ್ಯಾರ್ಥಿಗಳೆಲ್ಲರೂ ಆಮೋದ ಪ್ರಮೋದ ಮಗ್ನರಾದರು. ಕಲ್ಕತ್ತಾಕ್ಕೆ ಎರಡು ಮೈಲಿ ದೂರದಲ್ಲಿರುವ ವರಾಹ ನಗರದಲ್ಲಿದ್ದ ಸಹಾಧ್ಯಾಯಿಯಾದ ಬಂಧುವೊಬ್ಬನು ನರೇಂದ್ರನನ್ನೂ ಮತ್ತು ಕೆಲವು ಸ್ನೇಹಿತರನ್ನೂ ತನ್ನ ಮನೆಗೆ ಆಹ್ವಾನಿಸಿದನು. ಗೆಳೆಯರೆಲ್ಲರೂ ನೆರೆದರು. ತಿಂಡಿತೀರ್ಥಗಳು ಮುಗಿದುವು. ಹಾಸ್ಯಕಲರವದಿಂದ ಮಂದಿರವೆಲ್ಲ ತುಂಬಿ ಹೋಯಿತು. ನರೇಂದ್ರನನ್ನು ಹಾಡುವಂತೆ ಕೇಳಿಕೊಂಡರು. ಸ್ವರ್ಗೀಯ ಮಧುರವಾದ ಆತನ ಸುಂದರವಾಣಿ ಇಂಪಾಗಿ ಮೇಲೆದ್ದಿತು. ಅಷ್ಟು ಹೊತ್ತಿಗೆ ಯಾರೋ ಒಬ್ಬನು ಕೋಣೆಯೊಳಗೆ ಬಂದು ವಿಶ್ವನಾಥದತ್ತನು ಹೃದ್ರೋಗದಿಂದ ಮೃತನಾದನೆಂಬ ಭಯಂಕರ ವಾರ್ತೆಯನ್ನು ತಿಳಿಸಿದನು. ಮಂದಿರವು ಸಿಡಿಲು ಬಿದ್ದಂತಾಗಿ ನೀರವವಾಯಿತು. ಉಜ್ವಲಾಲೋಕಪ್ರದೀಪ್ತ ಮಂದಿರವು ನರೇಂದ್ರನ ಕಣ್ಣಿಗೆ ಕತ್ತಲೆಯ ನೆಲೆಬೀಡಾಗಿ ತೋರಿತು. ಬೇಬಬೇಗನೆ ಅಲ್ಲಿಂದ ಹೊರಟು ಮರುಳ್ಗೊಂಡವನಂತೆ ಮನೆಗೆ ಬಂದನು. ಅಭಿಮಾನಧನನಾಗಿಯೂ ಗೌರವಗರ್ವಗಳಲ್ಲಿ ಹಿಮಾಚಲ ಸದೃಶನಾಗಿಯೂ ಇದ್ದ ಪಿತನ ಕಳೇಬರವು ಸೆಜ್ಜೆಯ ಮೇಲೆ ಬಿದ್ದಿತು. ಅಕ್ಕತಮ್ಮಂದಿರೂ ತಾಯಿಯೂ ಸುತ್ತಲೂ ಕುಳಿತು ಬಿದ್ದು ಬಿದ್ದು ರೋದಿಸುತ್ತಿದ್ದರು. ನರೇಂದ್ರನ ದೃಢಹೃದಯವೂ ಕರಗಿಹೋಯಿತು. ಆತನ ನೇತ್ರಗಳಿಂದ ಮುಕ್ತಾಶ್ರು ಬಿಂದುಗಳು ಹರಿಯತೊಡಗಿದುವು.

ರಾಜಮಂದಿರವಾಗಿದ್ದ ದತ್ತಭವನವು ದಾರಿದ್ರ್ಯದ ಕ್ಲೇಶಗಳಿಗೆ ತುತ್ತಾಯಿತು. ಉದಾರಿಯಾಗಿದ್ದ ವಿಶ್ವನಾಥದತ್ತನು ನಾಳೆಯ ಕಡೆಗೆ ಕಣ್ಣಿಟ್ಟವನೇ ಅಲ್ಲ. ಸಂಪಾದಿಸಿದ ಹಣವನ್ನೆಲ್ಲ ಹಿಂದುಮುಂದು ನೋಡದೆ ಖರ್ಚು ಮಾಡಿದ್ದನು. ಆದ್ದರಿಂದ ಅವನು ತೀರಿಕೊಂಡ ಮರುದಿನವೇ ಕ್ಷಾಮದೇವತೆ ಮನೆಯೊಳಗೆ ನುಗ್ಗಿದಳು. ಉತ್ತರಕ್ರಿಯೆಗಳಿಗೂ ಕೂಡ ಬೇಕಾದಷ್ಟು ಸೌಭಾಗ್ಯವಿರಲಿಲ್ಲ. ಭುವನೇಶ್ವರೀ ಮಾತೆ ಕಂಗೆಟ್ಟಳು. ನರೇಂದ್ರನೂ ಆಕಸ್ಮಿಕವಾಗಿ ಬಂದೊದಗಿದ ಪೆಟ್ಟಿಗೆ ತತ್ತರಿಸಿ ನಡೆಗೆಟ್ಟನು. ಪ್ರಪಂಚದ ವಿಕಾರ ಕರ್ಕಶವದನವು ಅವನೆದುರು ರುದ್ರಶ್ಮಶಾನದ ರುದ್ರತರ ಪಿಶಾಚದಂತೆ ಹಲ್ಲುಕಿರಿದು ನಿಂತಿತು. ಆ ಗೋಳನ್ನು ಸ್ವಾಮಿ ವಿವೇಕಾನಂದರೆ ಹೀಗೆಂದು ಹೇಳಿಕೊಂಡಿದ್ದಾರೆ:

"ಪಿತೃಮರಣದ ದುಃಖವನ್ನು ಅತ್ತು ಪೂರೈಸುವುದರೊಳಗೆ ಚಾಕರಿಯನ್ನು ಹುಡುಕಿಕೊಂಡು ಬೀದಿಬೀದಿಗಳಲ್ಲಿ ಅಲೆಯಬೇಕಾಯಿತು. ಹೊಟ್ಟೆಗನ್ನವಿಲ್ಲ; ಕಾಲಿಗೆ ಮೆಟ್ಟಿಲ್ಲ; ಆಫೀಸಿನಿಂದ ಆಫೀಸಿಗೆ ಅರ್ಜಿಯೊಂದನ್ನು ಕೈಲಿ ಹಿಡಿದುಕೊಂಡು ರುದ್ರನಿದಾಘಸೂರ್ಯನ ತೀಕ್ಷ್ಣಾತಪದಲ್ಲಿ ತೊಳಲಿದೆ. ಕೆಲವು ಸಲ ಮಾತ್ರ ನನ್ನೊಡನೆ ಯಾರಾದರೂ ಒಬ್ಬಿಬ್ಬರು ಗೆಳೆಯರು ಬರುತ್ತಿದ್ದರು. ಆದರೆ ಎಲ್ಲೆಲ್ಲಿಯೂ ಎಲ್ಲರೂ ನನ್ನನ್ನು ಹೊರಗೆ ತಳ್ಳಿ ಬಾಗಿಲು ಮುಚ್ಚಿಕೊಂಡರು. ಅಸ್ವಾರ್ಥವಾದ ಸಹಾನುಭೂತಿ ಜಗತ್ತಿನಲ್ಲಿ ದೊರೆಯುವುದು ಅತಿ ವಿರಳವೆಂದೂ ದರಿದ್ರರಿಗೆ ಅಶಕ್ತರಿಗೆ ಅನಾಥರಿಗೆ ಲೋಕವು ಎಡೆಗೊಡದೆಂದೂ ನನಗಾಗ ಗೊತ್ತಾಯಿತು. ಯಾರು ಮೊದಲು ನನಗೆ ನೆರವಾಗಲು ಹೆಮ್ಮೆಪಡುತ್ತಿದ್ದರೊ ಅಂತಹ ಸೌಭಾಗ್ಯಶಾಲಿಗಳೆ ನನಗೆ ವಿಮುಖವಾದರು. ಇದನ್ನೆಲ್ಲಾ ನೋಡಿದ ನನಗೆ ಜಗತ್ತು ಪಿಶಾಚ ಕೃತ್ಯವೆಂದು ತೋರಿತು. ಒಂದು ದಿನ ಚಾಕರಿಗಾಗಿ ತಿರುತಿರುಗಿ ದಣಿದು ಬಂದು ಅಕ್ಬರ್‌ಲೋನಿ ಸ್ಮಾರಕಸ್ತೂಪದ ತಣ್ಣೆಳಲಿನಲ್ಲಿ ಕುಳಿತುಕೊಂಡೆ. ಅಲ್ಲಿಗೆ ಬಂದ ನನ್ನ ಮಿತ್ರರಲ್ಲಿ ಒಬ್ಬನು ಪರಮಾತ್ಮನು ಕೃಪಾಸಾಗರನೆಂಬ ಅರ್ಥದ ಒಂದು ಗೀತೆಯನ್ನು ಹಾಡತೊಡಗಿದನು. ಬಹುಶಃ ನನ್ನನ್ನು ಸಂತೈಸಲಿರಬೇಕು. ಅವನ ಕೀರ್ತನೆ ನನಗೆ ಶಿರೋಘಾತವಾಗಿ ಪರಿಣಮಿಸಿತು. ನಿಸ್ಸಹಾಯರಾಗಿದ್ದ ನನ್ನ ಮಾತಾ ಸೋದರ ಸೋದರಿಯರನ್ನು ನೆನೆದು ನಾನು ರೇಗಿಬಿದ್ದೆ.

ನೈರಾಶ್ಯದಿಂದಲೂ ಕೋಪದಿಂದಲೂ ಮಿತ್ರನನ್ನು ಕುರಿತು 'ಸಾಕು, ನಿಲ್ಲಿಸುತ್ತೀಯೋ ಇಲ್ಲವೋ ಆ ನಿನ್ನ ಅನಿಷ್ಟ ಗೀತೆಯನ್ನು. ನಿನ್ನ ಗೀತೆಗಳು ಬೆಳ್ಳಿಯ ಚಮಚವನ್ನು ಬಾಯಲ್ಲಿಟ್ಟುಕೊಂಡು ಹುಟ್ಟುತ್ತಾರಲ್ಲಾ ಅವರಿಗೆ ಇಂಪಾಗಿರಬಹುದು. ನಾನೂ ಹಿಂದೆ ನಿನ್ನಂತೆಯೇ ಯೋಚಿಸಿ ಬಣ್ಣದ ಕನಸುಗಳನ್ನು ಕಟ್ಟುತ್ತಿದ್ದೆ. ಆದರೆ ಇಂದು ಜೀವನದ ಕಠೋರ ನಿಷ್ಕರುಣ ಸತ್ಯಗಳ ಮುಂದೆ ಅವೆಲ್ಲ ಬರಿಯ ಹಾಸ್ಯದಂತಿವೆ' ಎಂದು ಕೂಗಿದೆ. ನನ್ನ ಮಿತ್ರನು ಬಹಳ ನೊಂದುಕೊಂಡಿರಬಹುದು.

"ಕೆಲವು ಸಾರಿ ಮನೆಯಲ್ಲಿ ಸಾಕಾದಷ್ಟು ಅನ್ನವಿಲ್ಲದಿದ್ದರೆ ಗೆಳೆಯರ ಮನೆಯಲ್ಲಿ ಊಟ ಮಾಡಿದೆನೆಂದು ತಾಯಿಗೆ ಸುಳ್ಳು ಹೇಳುತ್ತಿದ್ದೆ. ಕೆಲವು ಸಾರಿ ಊಟಕ್ಕೆ ಕರೆದಿದ್ದಾರೆ ಎಂದು ಹೇಳಿ ಹೊರಗೆ ಹೋಗುತ್ತಿದ್ದೆ. ಆದರೆ ಆತ್ಮಗೌರವದ ಸಂರಕ್ಷಣಾರ್ಥವಾಗಿ ಗುಟ್ಟನ್ನು ಯಾರೊಡನೆಯೂ ಬಿಚ್ಚುತ್ತಿರಲಿಲ್ಲ. ಹೀಗಾಗಿ ಎಷ್ಟೋ ದಿನಗಳು ಹೊಟ್ಟೆಗಿಲ್ಲದೆ ಇರುತ್ತಿದ್ದೆ. ಇದರ ಮಧ್ಯೆ ಶ್ರೀಮಂತರಾಗಿದ್ದ ನನ್ನ ಮಿತ್ರರು ಸಂಗೀತಕ್ಕಾಗಿ ನನ್ನನ್ನು ವನಭೋಜನಗಳಿಗೆ ಕರೆಯುತ್ತಿದ್ದರು. ನಾನು ಬರುವುದಿಲ್ಲ ಎಂದರೆ ಮನೆಯ ಗುಟ್ಟು ಬಯಲಾಗುವುದೆಂಬ ಭಯ. ಆದ್ದರಿಂದ ಅವರೊಡನೆ ಹೋಗಿ ಹಾಡಿ ಅವರಂತೆ ಸಂತೋಷವನ್ನು ನಟಿಸುತ್ತಿದ್ದೆ. ಒಬ್ಬ ಮಿತ್ರನಿಗೆ ಮಾತ್ರ ಹೇಗೋ ನಮ್ಮ ದುರವಸ್ಥೆ ಗೊತ್ತಾಗಿ ಹೆಸರು ಹಾಕದೆ ನನ್ನ ತಾಯಿಗೆ ಧನವನ್ನು ಕಳುಹಿಸುತ್ತಿದ್ದನು.

"ನನ್ನ ಹಳೆಯ ಗೆಳೆಯರಲ್ಲಿ ಕೆಲವರು ಕೆಟ್ಟ ಕೆಟ್ಟ ವಿದ್ಯೆಗಳಿಂದ ಹಣ ಸಂಪಾದನೆ ಮಾಡುತ್ತಿದ್ದರು. ಅವರು ನನ್ನನ್ನೂ ಗುಂಪಿಗೆ ಸೇರುವಂತೆ ಕರೆದರು. ಒಬ್ಬಿಬ್ಬರು ನನ್ನ ಗತಿಯನ್ನು ನೋಡಿ ಕನಿಕರಪಟ್ಟರು. ಶ್ರೀಮಂತಳಾದ ಸುಂದರಿಯೊಬ್ಬಳು ನನ್ನನ್ನು ದುರ್ಮಾರ್ಗ ಪ್ರವರ್ತಕನಾಗುವಂತೆ ಪ್ರೇರಿಸಲೆಳಸಿದಳು. ಬೇಕಾದಷ್ಟು ಹಣ ಸಹಾಯ ಮಾಡುವಂತೆಯೂ ಭರವಸೆಯಿತ್ತಳು. ಮತ್ತೊಬ್ಬ ಸ್ತ್ರೀಯೂ ಹಾಗೇ ಮಾಡಿದಳು. ಗುರುದೇವನ ಆಶೀರ್ವಾದ ಬಲದಿಂದ ಮಹಾಮಾಯೆಯ ಪ್ರಲೋಭನಗಳಿಗೆ ವಶನಾಗಲಿಲ್ಲ.

"ಇಷ್ಟಾದರೂ ನನಗೆ ಈಶ್ವರ ಕೃಪೆಯಲ್ಲಿ ನಂಬುಗೆ ತೊಲಗಲಿಲ್ಲ. ಪ್ರತಿ ದಿನವೂ ಹಾಸಗೆಯಿಂದ ಏಳುವಾಗ ಆತನ ನಾಮಸ್ಮರಣೆ ಮಾಡಿ ಚಾಕರಿ ಷಿಕಾರಿಗೆ ಹೊರಡುತ್ತಿದ್ದೆ. ಒಂದು ದಿನ ನನ್ನ ತಾಯಿ ನಾನು ಮಾಡುತ್ತಿದ್ದ ಈಶ್ವರನಾಮ ಸ್ಮರಣೆಯನ್ನು ಕೇಳಿ 'ಸಾಕಪ್ಪ, ನೀನೆಂತಹ ಮಂಕು! ಬಾಲ್ಯದಿಂದಲೂ ಈಶ್ವರ! ಈಶ್ವರ! ಎಂದು ಕೂಗುತ್ತಿದ್ದೀಯೆ. ಈಶ್ವರನು ನಿಜವಾಗಿಯೂ ಇರುವನೆ? ಇದ್ದರೆ ಮನುಜರ ಗೋಳನ್ನು ಕೇಳನೇಕೆ? ನನ್ನ ಗೋಳನ್ನು ಕೇಳನೇಕೆ? ದಯಾಸಾಗರದನ ದೃಷ್ಟಿಯಲ್ಲಿ ಇಷ್ಟೊಂದು ಶೋಕದುಃಖಗಳೇಕೆ?' ಅಂದಳು. ಆಗ ನನಗೆ ಪಂಡಿತ ಈಶ್ವರಚಂದ್ರ ವಿದ್ಯಾಸಾಗರರ ಮಾತುಗಳು ನೆನಪಿಗೆ ಬಂದುವು. 'ಈಶ್ವರನಲ್ಲಿ ಸೌಜನ್ಯವಿದ್ದರೆ, ಕೃಪೆಯಿದ್ದರೆ, ಲಕ್ಷಾಂತರ ಜನಗಳು ಹೊಟ್ಟೆಗಿಲ್ಲದೆ ಸಾಯುವುದೇಕೆ?' ಎಂಬ ತಿಕ್ತ ಪರಿಹಾಸ್ಯದ ಮಾತುಗಳು ನನ್ನ ಹೃದಯದ ಗುಹೆಯಲ್ಲಿ ಪ್ರತಿಧ್ವನಿತವಾದುವು. ಈಶ್ವರನನ್ನು ನಿಂದಿಸಿದೆ. ಅದೇ ಸಮಯದಲ್ಲಿ ಹೊಂಚಿ ನೋಡಿ ಸಂಶಯವೂ ಮೆಲ್ಲನೆ ನನ್ನೆದೆಗೆ ಕಾಲಿಟ್ಟಿತು.

“ಸರಿ, ನನ್ನ ಪದ್ಧತಿಯಂತೆ ಮನಸ್ಸನ್ನು ಬಿಚ್ಚಿ ಹೇಳತೊಡಗಿದೆ. ಈಶ್ವರನು ಇಲ್ಲವೆಂದೂ, ಒಂದು ವೇಳೆ ಇದ್ದರೂ ಅವನ ಕೈಯಲ್ಲಿ ಏನೂ ಸಾಗದೆಂದೂ, ಅವನನ್ನು ಕರೆಯುವುದರಿಂದ ಪ್ರಯೋಜನವಿಲ್ಲವೆಂದೂ ಭಕ್ತಿಯೆಂಬುದು ಬರಿಯ ಹುಚ್ಚೆಂದೂ ಎಲ್ಲರೊಡನೆಯೂ ಸಾರಿ ವಾದಿಸತೊಡಗಿದೆ. ಸರಿ, ಇನ್ನೇನು? ಹಬ್ಬಿತು ಗುಲ್ಲು ಊರಲ್ಲೆಲ್ಲ; ನಾನು ನಾಸ್ತಿಕನೆಂದೂ ಕುಡುಕನೆಂದೂ ದುರಾಚಾರಿಯೆಂದೂ ಕುಖ್ಯಾತ ಸ್ತ್ರೀಪುರುಷಮಿತ್ರನೆಂದೂ ಎಲ್ಲರೂ ಡಂಗುರ ಹೊಯ್ಯಲಾರಂಭಿಸಿದರು. ನನ್ನ ನೊಂದೆದೆ ಮತ್ತಷ್ಟು ರೇಗಿತು. ನಾನು ಬಾಯಿ ಬಿಟ್ಟು ಸಾರಿಬಿಟ್ಟೆ: ನಾಸ್ತಿಕ್ಯವೇ ಸರಿಯೆಂದೂ, ಕುಡಿದರೆ ತಪ್ಪಿಲ್ಲವೆಂದೂ, ದುಃಖಮಯವಾದ ಜಗತ್ತಿನಲ್ಲಿ ದುರ್ನೀತಿಯಿಂದ ಸುಖವೊದಗುವ ಪಕ್ಷದಲ್ಲಿ ದುರ್ನೀತಿಯೆ ಲೇಸೆಂದೂ ಸಾರಿಬಿಟ್ಟೆ.

“ಅಂತೂ ಈ ಸುದ್ದಿ ಅತ್ತ ಬಿದ್ದು ಇತ್ತ ಬಿದ್ದು ಶ್ರೀಗುರುದೇವನ ಕಿವಿಗೂ ಆತನ ಭಕ್ತರ ಕಿವಿಗೂ ಬಿತ್ತು. ಅವರಲ್ಲಿ ಕೆಲವರು ನನ್ನೆಡೆಗೆ ಬಂದು ಸುದ್ದಿಯಲ್ಲಿ ಸ್ವಲ್ಪವಾದರೂ ನಿಜವಿರಬೇಕೆಂದು ಸೂಚಿಸಿದರು. ನನಗೆ ಆತ್ಮಗೌರವ ಭಂಗವಾದಂತಾಗಿ, ನರಕದ ಭಯದಿಂದ ಈಶ್ವರನನ್ನು ಗುಲಾಮರಂತೆ ಓಲೈಸುವುದು ಬರಿಯ ಹೇಡಿತನವೆಂದೂ ಈಶ್ವರನಿರುವುದು ಸುಳ್ಳೆಂದೂ ಪಾಶ್ಚಾತ್ಯ ತತ್ತ್ವಜ್ಞರ ನಾಸ್ತಿಕವಾದವೆ ಸತ್ಯವೆಂದೂ ವಾದಿಸಿ ಸಾಧಿಸಿದೆ. ಅವರೆಲ್ಲರೂ ನನ್ನ ಗತಿ ಮುಗಿಯಿತೆಂದೂ ನಾನು ಕೆಟ್ಟುಹೋದೆನೆಂದೂ ಪತಿತನಾದೆನೆಂದೂ ಹತಾಶರಾಗಿ ಹೊರಟುಹೋದರು. ನಾನೂ ನಲಿದೆ! ಗುರುದೇವನೂ ಈ ಸುದ್ದಿಯನ್ನು ನಂಬುವನೆಂದು ಯೋಚಿಸಿದೆ. ಒಂದು ವಿಧವಾದ ಧರ್ಮಮುನಿಸಿನಿಂದ ನನ್ನೆದೆ ಕುದಿಯಿತು. ಕೀರ್ತಿಯಪಕೀರ್ತಿಗಳು ಇಂತಹ ಪೊಳ್ಳಾದ ಕ್ಷುದ್ರವರ್ತಮಾನಗಳ ಮೇಲಿರುವ ಪಕ್ಷದಲ್ಲಿ ಅವುಗಳ ಗೊಡವೆಯೆ ನನಗೇಕೆ? ಎಂದುಕೊಂಡೆ. ಆದರೆ ಗುರುದೇವನು ಆ ಸುದ್ದಿಯನ್ನು ಉದಾಸೀನನಾಗಿ ಕೇಳಿ ತಿರಸ್ಕರಿಸಿದುದನ್ನು ತಿಳಿದು ವಿಸ್ಮಿತನಾದೆ. ಭವನಾಥನು ಕಂಬನಿಗರೆಯುತ್ತಾ ನನ್ನ ದುರ್ದಶೆಯನ್ನು ಹೇಳಲು ಅವರು ‘ಮಹಾಶಯ, ನಾನು ಕನಸಿನಲ್ಲಿಯೂ ಕೂಡ ಅದನ್ನು ನಂಬಲಾರೆ’ ಎಂದರು. ಭವನಾಥನು ಅದನ್ನು ಸತ್ಯವೆಂದೂ ಸಾಧಿಸಲು ಮುಂದುವರಿಯಲು ಅವರು ಕುಪಿತರಾಗಿ, ‘ಮೂರ್ಖ, ಸುಮ್ಮನಿರು! ಜಗನ್ಮಾತೆ ನನಗೆಲ್ಲ ಹೇಳಿದ್ದಾಳೆ, ಅದು ಬರಿಯ ಸುಳ್ಳೆಂದು. ನೀನಿನ್ನು ಹಾಗೆ ಮಾತಾಡಿದರೆ ನಿನ್ನ ಮುಖವನ್ನೇ ನಾನು ನೋಡೆ’ ಎಂದು ಗರ್ಜಿಸಿದಂತೆ.

“ಇಷ್ಟಾದರೂ ಈಶ್ವರನಲ್ಲಿ ನನಗಿದ್ದ ನಂಬುಗೆ ಕೆಡಲಿಲ್ಲ. ಅದರಲ್ಲಿಯೂ ಶ್ರೀರಾಮಕೃಷ್ಣರ ನೆನಪು ನನ್ನನ್ನು ಬೀಳಗೊಡಲಿಲ್ಲ. ಈಶ್ವರ ಸಾಕ್ಷಾತ್ಕಾರ ಮಾಡದೆ ಜನ್ಮ ಸಾರ್ಥಕವಾಗದು. ಕಷ್ಟನಷ್ಟಗಳ ತುಮುಲದಲ್ಲಿಯೆ ಮಹಾತ್ತಾದುದನ್ನು ಸಾಧಿಸಬೇಕು. ಹೀಗೆ ಶ್ರದ್ಧೆ ಸಂಶಯಗಳ ದ್ವಂದ್ವಯುದ್ಧದಲ್ಲಿ ದಿನಗಳು ಕಳೆದುವು. ನಮ್ಮ ಬಡತನ ಎಂದಿನಂತೆಯೆ ಇತ್ತು.

“ಬೇಸಗೆ ಕಳೆಯಿತು. ಮಳೆಯ ದಿನಗಳು ಬಂದುವು. ನನ್ನ ಚಾಕರಿ ಷಿಕಾರಿ ಮಾತ್ರ ಮುಗಿಯಲಿಲ್ಲ. ಒಂದು ದಿನ ತೊಳಲಿ ಹಾದಿಯಲ್ಲಿ ಬರುತ್ತಿದ್ದಾಗ ಬಳಲಿ ಕುಳಿತೆ. ಸ್ವಲ್ಪಹೊತ್ತು ನನಗೆ ಪ್ರಜ್ಞೆ ಬರಲಿಲ್ಲ. ನೂರಾರು ಚಿಂತೆಗಳು ಸ್ವಪ್ನಸ್ಥ ಚಿತ್ತದಲ್ಲಿ ಮಿಂಚಿಹೋದುವು. ಇದ್ದಕ್ಕಿದ್ದ ಹಾಗೆ ಯಾವುದೋ ದಿವ್ಯಶಕ್ತಿಯೊಂದು ನನ್ನೆದೆಯ ಮೇಲ್ಮುಸುಕನ್ನು ತೆಗೆದೊಗೆದಂತೆ ಅನುಭವವಾಯಿತು. ಸಂಶಯಗಳು ತೂರಿಹೋದುವು. ಜಗತ್ತಿನ ಸುಖದುಃಖಗಳ ಅರ್ಥವು ಮನಸ್ಸಿಗೆ

ಹೊಳೆಯಿತು. ಮೇಲೆದ್ದು ಮನೆಗೆ ಹೊರಟೆ. ಯಾವುದೋ ಶಕ್ತಿ ದೇಹದಲ್ಲಿ ಪ್ರವಹಿಸುತ್ತಿತ್ತು. ಬಗೆ ತಿಳಿಯಾಗಿತ್ತು. ಆಗಲೆ ರಾತ್ರಿ ಕಳೆದು ಮುಂಬೆಳಕು ಮೈದೋರುತ್ತಿತ್ತು.

"ಅಜ್ಜನಂತೆ ಸಂನ್ಯಾಸಿಯಾಗಲು ಮನಸ್ಸು ಮಾಡಿದೆ. ಅದಕ್ಕಾಗಿ ಒಂದು ದಿನವನ್ನು ಗೊತ್ತುಮಾಡಿದೆ. ಆ ದಿನವೇ ಗುರುದೇವನು ಕಲ್ಕತ್ತಾಕ್ಕೆ ಬರುವನೆಂಬ ಸಮಾಚಾರವೂ ತಿಳಿಯಿತು. ಶುಭಸೂಚನೆ! ಗುರ್ವಾಶೀರ್ವಾದವನ್ನು ಕೈಕೊಂಡು ಸಂನ್ಯಾಸಿಯಾಗುವೆನೆಂದು ಭಾವಿಸಿದೆ. ಗುರುದೇವನು ನನ್ನನ್ನು ನೋಡಿದ ಕೂಡಲೆ ದಕ್ಷಿಣೇಶ್ವರಕ್ಕೆ ಬರುವಂತೆ ಹೇಳಿದನು. ನಾನು ಏನೇನೊ ಸಬೂಬುಗಳನ್ನು ತಂದೊಡ್ಡಿದೆ. ಬಿಡಲಿಲ್ಲ. ಕಡೆಗೆ ಅವರ ಜೊತೆಯಲ್ಲಿ ಗಾಡಿಯ ಮೇಲೆ ಕುಳಿತು ದಕ್ಷಿಣೇಶ್ವರಕ್ಕೆ ಹೋದೆ. ಅಲ್ಲಿ ನನ್ನನ್ನು ಬಳಿಗೆ ಕರೆದು ಅತ್ಯಾದರದಿಂದ ನನ್ನನ್ನು ನೋಡುತ್ತಾ ಭಕ್ತಿರಸಪೂರ್ಣವಾದ ಕೀರ್ತನೆಯೊಂದನ್ನು ಗಾನ ಮಾಡಿದರು.

"ತಡೆಯದಾದೆ, ನಿರಂತರ ಅಶ್ರುಧಾರಾಪೂರ್ವಕವಾಗಿ ರೋದಿಸತೊಡಗಿದೆ. ಆ ಕೀರ್ತನೆ ನನಗೆ ಚೆನ್ನಾಗಿ ಅರ್ಥವಾಯಿತು. ನನ್ನ ಸಂಕಲ್ಪ ಗುರುದೇವನಿಗೆ ಆಗಲೆ ತಿಳಿದಿತ್ತು. ಅಲ್ಲಿದ್ದ ಭಕ್ತರು ನಮ್ಮಿಬ್ಬರ ರೀತಿಯನ್ನು ನೋಡಿ ಬೆರಗಾದರು. ಗುರುದೇವನು ಅವರನ್ನು ನಿರ್ದೇಶಿಸಿ 'ಅದೆಲ್ಲಾ ನಿಮಗೇಕೆ? ಏನೋ, ನಮ್ಮ ನಮ್ಮ ಮಾತು' ಎಂದರು. ರಾತ್ರಿಯಾಯಿತು. ಎಲ್ಲರೂ ಹೊರಟುಹೋದರು. ಗುರುದೇವನು ನನ್ನನ್ನು ಕುರಿತು 'ನಾನು ಬಲ್ಲೆ, ನೀನು ಜಗನ್ಮಾತೆಯ ಕಾರ್ಯಕ್ಕಾಗಿ ಬಂದಿದ್ದೀಯೆ. ಪ್ರಾಪಂಚಿಕನಾಗಿರಲು ನಿನ್ನಿಂದ ಸಾಧ್ಯವಿಲ್ಲ. ಆದರೂ ನನಗಾಗಿ ಇನ್ನೂ ಕೆಲವು ದಿನಗಳ ತನಕ ನೀನು ಇಲ್ಲಿಯೇ ಇರಬೇಕು' ಎಂದು ಹೇಳುತ್ತ ಅಳತೊಡಗಿದರು.

"ಮರುದಿನ ಮನೆಗೆ ಬಂದೆ. ವಕೀಲನ ಆಫೀಸಿನಲ್ಲಿ ಕೆಲಸ ಮಾಡಿ ಒಂದೆರಡು ಕಾಸು ತರುತ್ತಿದ್ದೆ. ಆದರೆ ಅದು ತಾಯಿ ತಮ್ಮಂದಿರ ಹೊಟ್ಟೆಗೂ ಬಟ್ಟೆಗೂ ಸಾಲುತ್ತಿರಲಿಲ್ಲ."

ಎಲ್ಲಿಯಾದರೂ ವಿಶ್ವನಾಥದತ್ತನು ಬ್ಯಾಂಕಿನಲ್ಲಿ ದೊಡ್ಡದೊಂದು ನಿಧಿಯನ್ನು ಸಂಗ್ರಹಿಸಿಟ್ಟು ಹೋಗಿದ್ದರೆ? ಬಹುಶಃ – ಬಹುಶಃ ನರೇಂದ್ರನಾಥದತ್ತನು ಸ್ವಾಮಿ ವಿವೇಕಾನಂದನಾಗುತ್ತಿದ್ದನೋ ಇಲ್ಲವೋ ಹೇಳಬಲ್ಲವರಾರು? ಐಶ್ವರ್ಯವು ಭೋಗಪ್ರೇರಕವಾಗಿರುವಂತೆ ದಾರಿದ್ರ್ಯವು ತ್ಯಾಗಪ್ರೇರಕವಾಗುತ್ತದೆ. ವಿಧಿಯ ವಿಧಾನಗಳು ಬಹುವಿಧವಾಗಿವೆ.

ಅದು ಬರಿಯ ವಿನೋದದ ಊಹೆ ಮಾತ್ರವಲ್ಲ. ನರೇಂದ್ರನ ಜೀವನದಲ್ಲಿ ಸಕಾಲಕ್ಕೆ ಬಂದೊದಗಿದ ಸನ್ನಿವೇಶಗಳ ವ್ಯೂಹರಚನೆಯನ್ನು ಗಮನಿಸಿದರೆ ಸಂದೇಹಕ್ಕೂ ಆಸ್ಪದವಿರುವುದಿಲ್ಲ.

ವಿಶ್ವನಾಥದತ್ತನು ಮಗನಿಗೆ ಮದುವೆ ಮಾಡಬೇಕೆಂದು ಅನೇಕ ಸಾರಿ ಹವಣಿಸಿದ್ದನು. ಭೋಗಿಯಾಗಿದ್ದ ಆತನಿಗೆ ತ್ಯಾಗಜೀವನದಲ್ಲಿ ಅಷ್ಟೇನೂ ವಿಶ್ವಾಸವಿರಲಿಲ್ಲ ಎಂಬುದನ್ನು ನಾವು ಹಿಂದೆಯೆ ತಿಳಿದಿದ್ದೇವೆ. ಆದ್ದರಿಂದ ತನ್ನ ಕುಮಾರನು ಸಂನ್ಯಾಸಿಯಾಗುತ್ತಾನೆಂಬ ಆಶಂಕೆ ತೋರಿದ್ದರೂ ಕೂಡ ಸಾಕು, ಅವನು ಅದಕ್ಕೆ ತನ್ನಿಂದ ಸಾಧ್ಯವಾಗುವ ಎಲ್ಲಾ ಅಡಚಣೆಗಳನ್ನೂ ತಂದೊಡ್ಡದೆ ಬಿಡುತ್ತಿರಲಿಲ್ಲ. ಮಗನು ಆಗಾಗ ದಕ್ಷಿಣೇಶ್ವರದ ಪರಮಹಂಸರ ಬಳಿಗೆ ಹೋಗಿ ಬರುತ್ತಿದ್ದುದು ಅವನಿಗೆ ಗೊತ್ತಿದ್ದರೂ ಅದನ್ನು ಲಘುವಾಗಿ ಭಾವಿಸಿಬಿಟ್ಟನು. ಇತರ ಅನೇಕರು

ಹೋಗಿಬರುವಂತೆ ತನ್ನ ಮಗನೂ ಹೋಗಿಬರುತ್ತಿದ್ದಾನೆ ಎಂದು ತಿಳಿದು ಸುಮ್ಮನಾದನು. ಅದೂ ಅಲ್ಲದೆ ಆಗ ನರೇಂದ್ರನೂ ಪರಮಹಂಸರ ಶಿಷ್ಯತ್ವವನ್ನು ಹೃತ್ಪೂರ್ವಕವಾಗಿ ಒಪ್ಪಿಕೊಂಡಿರಲೂ ಇಲ್ಲ.

ವಿಶ್ವನಾಥದತ್ತನಿಗೆ ತನ್ನ ಮಗನು ತನಗಿಂತಲೂ ಸಮರ್ಥನೂ ಗಣ್ಯನೂ ಆದ ವಕೀಲನಾಗುತ್ತಾನೆ ಎಂಬ ಮಹತ್ವಾಕಾಂಕ್ಷೆ ಇದ್ದಿತೆ ಹೊರತು ಜಗದ್ವಿಖ್ಯಾತ ಸ್ವಾಮಿ ವಿವೇಕಾನಂದರಾಗುತ್ತಾನೆ ಎಂಬ ಹೆದರಿಕೆ ಇನಿತೂ ಇರಲಿಲ್ಲ. ಆತನಿಗೆ ಹಠಾತ್ತಾಗಿ ಹೃದ್ರೋಗದಿಂದ ಮರಣ ಸಂಭವಿಸದಿದ್ದರೆ ನರೇಂದ್ರನಿಗೆ - ತರುವಾಯ ಏನಾದರಾಗಲಿ - ಮದುವೆಯಾಗದೆ ಇರುತ್ತಿರಲಿಲ್ಲ.

ವಿಶ್ವನಾಥನು, ಸಾಯುವುದಕ್ಕೆ ಕೆಲವು ದಿನಗಳ ಹಿಂದೆ, ಶ್ರೀಮಂತ ಬಂಧುವೊಬ್ಬನ ಕುಮಾರ್ತಿಯನ್ನು, ವಿಪುಲ ವರದಕ್ಷಿಣೆಯೊಂದಿಗೆ, ನರೇಂದ್ರನಿಗೆ ತಂದುಕೊಳ್ಳಲು ನಿಶ್ಚಯ ಮಾಡಿದ್ದನಂತೆ. ಹಿಂದೆ ಅನೇಕ ಸಾರಿ ತಂದೆಯ ಮಾತನ್ನು ನಿರಾಕರಿಸಿದ್ದ ನರೇಂದ್ರನೂ ತಂದೆಯ ಪೀಡನೆಯನ್ನು ತಡೆಯಲಾರದೆ ಕಟ್ಟಕಡೆಗೆ ಮದುವೆ ಮಾಡಿಕೊಳ್ಳಲು ಒಪ್ಪಿಗೆಯನ್ನೂ ಕೊಟ್ಟಿದ್ದನಂತೆ. ಯೌವನೋದಯವಾಗುತ್ತಿದ್ದ ನರೇಂದ್ರನಿಗೂ ಅದರಲ್ಲಿ ಸಂಪೂರ್ಣವಾದ ಅಸಮ್ಮತಿಯಿತ್ತೆಂದೂ ಹೇಳಲಾಗುವುದಿಲ್ಲ; ಮಾವನು ಹೆಚ್ಚು ವರದಕ್ಷಿಣೆ ಕೊಡುತ್ತಾನೆ; ಆ ಧನದಿಂದ ತನ್ನನ್ನು ಇಂಗ್ಲೆಂಡಿಗೆ ಓದಲು ಕಳುಹಿಸುತ್ತಾರೆ; ದೊಡ್ಡ ಮನುಷ್ಯನಾಗುವುದಕ್ಕೆ ಒಳ್ಳೆಯ ಅವಕಾಶ ದೊರೆತಂತಾಗಿದೆ - ಎಂಬ ಭಾವನೆಗಳ ಪ್ರಲೋಭನದಿಂದ ನರೇಂದ್ರನು ಹೇಗೆ ತಾನೆ ತಪ್ಪಿಸಿಕೊಳ್ಳುತ್ತಾನೆ?

ತಂದೆಯೊಂದು ಕಡೆ ಮದುವೆ ಮಾಡಲು ಪ್ರಯತ್ನಿಸುತ್ತಿದ್ದರೆ ದಕ್ಷಿಣೇಶ್ವರದ ಪೂಜಾರಿಯೊಂದು ಕಡೆ ಅದನ್ನು ತಡೆಯಲು ಎಡೆಬಿಡದೆ ಸಾಹಸ ಮಾಡುತ್ತಿದ್ದನು. ನರೇಂದ್ರನಿಗೆ ಮದುವೆ ನಿಶ್ಚಯವಾದ ವಾರ್ತೆಯನ್ನು ಕೇಳಿದೊಡನೆ ಪರಮಹಂಸರು ಎದೆಕುದಿಯತೊಡಗಿದರು. ಗುಡಿಯೊಳಕ್ಕೆ ಹೋಗಿ ತಮ್ಮ ಜಗನ್ಮಾತೆ ಕಾಳಿಕಾದೇವಿಗೆ ಮೊರೆಯಿಟ್ಟು ಪ್ರಾರ್ಥಿಸಿದರು: "ನರೇಂದ್ರನು ಒಂದು ವ್ಯಕ್ತಿಯ ಪ್ರೇಮಕ್ಕೆ ಬಲಿಯಾಗದಿರಲಿ, ಸಮಸ್ತ ಜಗತ್ತಿನ ವಿಶ್ವಾಸ ಗೌರವಗಳಿಗೆ ಗುರಿಯಾಗಲಿ ಎಂದು!" ಅಷ್ಟೂ ಸಾಲದೆ ಮದುವೆಗೆ ಸನ್ನಾಹವಾಗುತ್ತಿದ್ದುದನ್ನು ಕೇಳಿ, ನರೇಂದ್ರನ ವಿವಾಹಕ್ಕೆ ತಮ್ಮ ಇಚ್ಛೆ ಪ್ರತಿಕೂಲವಾಗುತ್ತದೆ ಎಂದು ಮುನಿದೂ ಹೇಳಿದರಂತೆ! ಪುತ್ರನ ವಿವಾಹ ಮಹೋತ್ಸವದ ಸನ್ನಾಹದ ನಡುವೆಯೆ ವಿಶ್ವನಾಥದತ್ತನು ತೀರಿಕೊಂಡನು.

ಅಂತೂ ನರೇಂದ್ರನ ಜೀವಮಾನದ ಒಂದು ಒಳ್ಳೆಯ ಸಂಧಿಸಮಯದಲ್ಲಿ ತಂದೆ ಹಠಾತ್ತಾಗಿ ತೀರಿಹೋಗಿ ನಿಯತಿಯ ಲೀಲಾಮುಖವು ಇಂಗ್ಲೆಂಡಿನ ಕಡೆಗಿದ್ದುದು ದಕ್ಷಿಣೇಶ್ವರದ ಕಡೆಗೆ ತಿರುಗಿತು. ಸಂಪಾದನೆ ಮಾಡುವ ತಂದೆ ತೀರಿಹೋದ ಮೇಲೆ ಮಗನಿಗೆ ಹೆಣ್ಣು ಕೊಡುವವರೂ ಸ್ವಲ್ಪ ಹಿಂಜರಿದರು; ನರೇಂದ್ರನೂ ವಿಮುಖನಾದನು. ವಿಪುಲ ವರದಕ್ಷಿಣೆ ಕೊಟ್ಟು ನರೇಂದ್ರನನ್ನು ವಿದ್ಯಾರ್ಜನೆಗಾಗಿ ಇಂಗ್ಲೆಂಡಿಗೆ ಕಳುಹಿಸುವುದಂತಿರಲಿ, ಆತನಿಗೂ ಆತನ ತಾಯಿ ಸಹೋದರಿಯರಿಗೂ ಹೊಟ್ಟೆಗೂ ಕೊಡಲೊಲ್ಲದೆ ಹೋದರು. ಸಿರಿಯಲ್ಲಿ ಓಲಾಡಿದ ಮನೆ ಬಡತನದಲ್ಲಿ ತೇಲಾಡತೊಡಗಿತು. ತಂದೆಯ ಸಾವು, ಮನೆಯ ದಾರಿದ್ರ್ಯ, ಬಂಧುಗಳ ದ್ರೋಹ, ಮಿತ್ರರ ತಿರಸ್ಕಾರ, ಮಾತೆಯ ಸಂಕಟ, ಸೋದರ ಸೋದರಿಯರ ಅನಾಥದಶೆ, ಗಾಯಗೊಂಡ ಸ್ವಾಭಿಮಾನ ಇವುಗಳೆಲ್ಲವೂ ಸೇರಿ, ಬೇಟೆನಾಯಿ

ಹಳುವಿನಲ್ಲಿರುವ ಪ್ರಾಣಿಯನ್ನು ಒಡೆಯನಿರುವಲ್ಲಿಗೆ ತರುಬುವಂತೆ ನರೇಂದ್ರನನ್ನು ದಕ್ಷಿಣೇಶ್ವರಕ್ಕೆ ಕತ್ತು ಹಿಡಿದು ನೂಕಿದುವು. ಜಗತ್ತಿನ ಕ್ರೌರ್ಯ ಸಮುದ್ರದಲ್ಲಿ ಶ್ರೀರಾಮಕೃಷ್ಣರೊಬ್ಬರೆ ಕರುಣೆಯ ದ್ವೀಪವಾಗಿ ಕಂಡುಬಂದರು, ನರೇಂದ್ರನ ನೊಂದೆದೆಗೆ!

ಒಂದು ಸಾರಿ ನರೇಂದ್ರನು ಶ್ರೀರಾಮಕೃಷ್ಣರಲ್ಲಿಗೆ ಬಂದು ತನಗೆ ಧನಪ್ರಾಪ್ತಿಯಾಗುವ ಸಲುವಾಗಿ ಜಗದಂಬೆಯನ್ನು ಬೇಡುವಂತೆ ಹೇಳಿದನು. ಅದಕ್ಕೆ ಅವರು "ನಾನು ಹಾಗೆಲ್ಲಾ ಬೇಡಲಾರೆ. ನೀನೇ ಹೋಗಿ ಬೇಡು. ಆಕೆಯನ್ನು ತಿರಸ್ಕರಿಸಿದುದರಿಂದಲೇ ನಿನಗೆ ಈ ಕಷ್ಟಗಳು ಬಂದಿವೆ" ಎಂದರು. ನರೇಂದ್ರನು "ನನಗೆ ಆಕೆಯ ಪರಿಚಯವಿಲ್ಲ. ನನ್ನ ಪರವಾಗಿ ನೀವೇ ಪ್ರಾರ್ಥಿಸಿ, ನೀವು ಬೇಡಲೇಬೇಕು" ಎಂದು ಹಠ ಹಿಡಿದನು. ಪರಮಹಂಸರು ಮುದ್ದಿನಿಂದ "ವತ್ಸ, ನಿನಗಾಗಿ ನಾನು ಎಷ್ಟೋಸಾರಿ ಪ್ರಾರ್ಥಿಸಿದ್ದೇನೆ. ಆದರೆ ನಾನೇನು ಮಾಡಲಿ? ನಿನಗೆ ಆಕೆಯಲ್ಲಿ ನಂಬುಗೆಯಿಲ್ಲ. ಅದರಿಂದ ಆಕೆ ಸುಮ್ಮನಿದ್ದಾಳೆ. ಆಗಲಿ ನೋಡೋಣ. ಈವೊತ್ತು ಮಂಗಳವಾರ. ರಾತ್ರಿ ಕಾಳಿಯ ಗುಡಿಗೆ ಹೋಗಿ ಅಡ್ಡಬಿದ್ದು ಬೇಕಾದುದನ್ನು ಕೇಳಿಕೋ. ಅವಳು ದಯಪಾಲಿಸದೆ ಬಿಡುವುದಿಲ್ಲ. ಆಕೆ ಸಚ್ಚಿದಾನಂದಮಯಿ, ಸರ್ವಶಕ್ತಳು, ಜಗನ್ಮಾತೆ, ಆಕೆಯಿಂದಾಗದ ಕಾರ್ಯವಿಲ್ಲ" ಎಂದರು.

ನಡುರಾತ್ರಿ! ನೀರವ! ನರೇಂದ್ರನು ತಾಯಿಯ ವಿಗ್ರಹದ ಮುಂದೆ ಕೈಮುಗಿದು ನಿಂತಿದ್ದಾನೆ. ವಿಗ್ರಹವು ಸಚೇತನವಾಗಿ ಕಾಣುತ್ತಿದೆ. ನರೇಂದ್ರನು ಭಕ್ತಿಪ್ರೇಮಗಳ ಸುಳಿಗೆ ಸಿಕ್ಕಿ ಭಾವವಶನಾದನು. "ದೇವಿ, ವಿವೇಕವನ್ನು ಕೊಡು! ವೈರಾಗ್ಯವನ್ನು ಕೊಡು! ಜ್ಞಾನಭಕ್ತಿಗಳನ್ನು ಕೊಡು! ತಾಯೆ, ನಿನ್ನ ಶಾಶ್ವತ ದರ್ಶನವನ್ನು ದಯಪಾಲಿಸು" ಎಂದು ಬೇಡಿದನು. ಆತ್ಮದಲ್ಲಿ ಶಾಂತಿಯುಂಟಾಯಿತು. ಪ್ರಪಂಚವನ್ನು ಮರೆತುಬಿಟ್ಟನು. ಜಗನ್ಮಾತೆಯೊಬ್ಬಳೇ ಅತನ ಹೃದಯದಲ್ಲಿ ರಂಜಿಸಿದಳು.

ನರೇಂದ್ರನು ಹಿಂತಿರುಗಿ ಬಂದನು. ಗುರುಗಳು "ಧನಪ್ರಾಪ್ತಿಗಾಗಿ ಪ್ರಾರ್ಥಿಸಿದೆಯಾ?" ಎಂದು ಕೇಳಿದರು. ನರೇಂದ್ರನು "ಇಲ್ಲ. ಓಹೋ ಮರೆತುಬಿಟ್ಟೆ, ಮಹಾಶಯ! ಈಗೇನು ಮಾಡುವುದು?" ಎಂದನು. "ಹೋಗು ಮತ್ತೊಂದು ಸಾರಿ ಬೇಡು" ಎಂದರು ಗುರುಗಳು. ಶಿಷ್ಯನು ಹೋದನು. ಆದರೆ ಎರಡನೆ ಸಾರಿಯೂ ಹಿಂದಿನಂತೆಯೆ ಮಾಡಿಬಿಟ್ಟನು. ಗುರುಗಳು "ಹುಚ್ಚ! ಸ್ವಲ್ಪ ಸ್ಥಿರಚಿತ್ತನಾಗಿ ಈ ಒಂದೆರಡು ಮಾತುಗಳನ್ನು ನೆನಪಿನಲ್ಲಿಟ್ಟುಕೊಂಡು ಬೇಡಲಾಗಲಿಲ್ಲವೇ? ಹೋಗು ಬೇಗ" ಎಂದರು. ಈ ಸಾರಿ ನರೇಂದ್ರನು "ಥೂ! ನಾನೇನು ಕೆಲಸಕ್ಕೆ ಬಂದುಬಿಟ್ಟಿದ್ದೇನೆ. ಚಕ್ರವರ್ತಿಯ ಹತ್ತಿರ ಹೋಗಿ ಎರಡು ಬದನೇಕಾಯಿ ಕೇಳುವುದೆ? ನಾನೆಂತಹ ಮೂರ್ಖ!" ಎಂದುಕೊಂಡು ತಾಯಿಗೆ ನಮಸ್ಕಾರ ಮಾಡಿ ಜ್ಞಾನಭಕ್ತಿವೈರಾಗ್ಯಗಳನ್ನು ಬೇಡಿ ಹಿಂತಿರುಗಿದನು. ಹಿಂತಿರುಗಿ ಬರುವಾಗ ತಾನು ಮೋಸಹೋದೆನೆಂದು ತಿಳಿದು ಗುರುದೇವನ ಬಳಿಗೆ ಬಂದು "ಮಹಾಶಯ, ನಾನೆಲ್ಲ ಬಲ್ಲೆ. ಎಲ್ಲ ನಿಮ್ಮ ಮಾಯೆ. ನನ್ನ ಮನೆಯಲ್ಲಿ ಬಡತನ ಹೋಗುವಂತೆ ನನಗೀಗ ವರವನ್ನು ನೀಡಿ" ಎಂದನು. ಪರಮಹಂಸರು "ಅದು ನನ್ನಿಂದಾಗದ ಕೆಲಸ. ನೀನೆಂತಹ ಜಾಣ! ನಿನ್ನನ್ನೇ ಬೇಡು ಎಂದರೆ ಕೆಲಸಕ್ಕೆ ಬಾರದ ವರಗಳನ್ನು ಬೇಡಿ, ಈಗ ನನ್ನನ್ನು ಬೇಡುವೆಯಲ್ಲಾ! ನಾನೇನು ಮಾಡಲಿ?" ಎಂದರು. ಶಿಷ್ಯನು ಬಿಡಲಿಲ್ಲ. ಕಡೆಗೆ ಗುರುಗಳು "ಆಗಲಿ, ನಿನ್ನ ಮನೆಯವರಿಗೆ ಇನ್ನು ಮುಂದೆ ಹೊಟ್ಟೆಗೆ ಬಟ್ಟೆಗೆ ಸಾಕಾಗುವಷ್ಟು ಧನ ದೊರೆಯುವುದು" ಎಂದರು.

ನರೇಂದ್ರನು ಸಂಕಟಕಾಲದಲ್ಲಿ ತನ್ನ ತಾಯಿಯನ್ನೂ ಸೋದರ ಸೋದರಿಯರನ್ನೂ ಕೈಬಿಡಲಿಲ್ಲ. ಅವರ ಕಷ್ಟವನ್ನೂ ಬಹುಮಟ್ಟಿಗೆ ಪರಿಹರಿಸಿದ ತರುವಾಯವೆ ತಾನು ಸಂನ್ಯಾಸಿಯಾದುದು. ಸಂನ್ಯಾಸಿಯಾದ ಮೇಲೆಯೂ ಮುಂದೆ ಜಗದ್ವಿಖ್ಯಾತ ವಿವೇಕಾನಂದರಾದ ಮೇಲೆಯೂ ಆತನು ಆಗಾಗ ತನ್ನ ಪೂರ್ವಾಶ್ರಮದ ಮನೆಗೆ ಹೋಗಿ, ತಾಯಿಗೆ ಮಣಿದು, ಯೋಗಕ್ಷೇಮವನ್ನು ವಿಚಾರಿಸಿ ಸಹಾಯ ಮಾಡುತ್ತಿದ್ದನು.

ನರೇಂದ್ರನಿಗೆ ವಿದ್ಯಾಸಾಗರ ಪಾಠಶಾಲೆಯಲ್ಲಿ ಒಂದು ಉಪಾಧ್ಯಾಯರ ಕೆಲಸ ಲಭಿಸಿ, ಹಾಗೂ ಹೀಗೂ ಮನೆಯ ಬಡತನ ಒಂದಿನಿತು ಕಡಿಮೆಯಾಯಿತು. ಆತನ ಜೀವನದಲ್ಲಿ ಒಂದು ನೂತನ ಅಧ್ಯಾಯ ಪ್ರಾರಂಭವಾಯಿತು.

* * *

## ೭. ಅನುಭೂತಿ

ಶ್ರೀರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರ ಗುರುಶಿಷ್ಯ ಸಂಬಂಧದಲ್ಲಿ ಒಂದು ಅಲೌಕಿಕತೆಯಿದೆ. ಅದು ಪ್ರಾಕೃತವಾಗಿಲ್ಲ; ಯೌಗಿಕವಾಗಿದೆ. ಅದು ಮಾಡಿದ ಉಪದೇಶದಂತಿಲ್ಲ; ನೀಡಿದ ಆದೇಶದಂತಿದೆ. ಅದು ಎರಡು ವ್ಯಕ್ತಿಗಳಲ್ಲಿರುವ ಪರಿಚಯ ಮಾತ್ರದಂತಿಲ್ಲ; ಎರಡು ವ್ಯಕ್ತಿತ್ವಗಳ ವಿದ್ಯುದಾಲಿಂಗನದಿಂದ ಹೊಮ್ಮಿದ ಅದ್ವಯವಾದ ಆತ್ಮಜ್ಯೋತಿಯಂತಿದೆ. ಅವರಿಬ್ಬರೂ ಒಂದೇ ಶಕ್ತಿಯ ಎರಡು ಮುಖಗಳಂತಿದ್ದಾರೆ. ಒಬ್ಬರನ್ನು ಬಿಟ್ಟರೆ ಇನ್ನೊಬ್ಬರು ನಮ್ಮ ಭಾಗಕ್ಕಾದರೂ ಅಪೂರ್ಣವಾಗುತ್ತಾರೆ.

ಮೊದಲು ಆಕಸ್ಮಿಕವಾಗಿ ನರೇಂದ್ರನ ಮೇಲೆ ಎರಗಿದ ಪರಮಹಂಸರ ಗರುಡ ದೃಷ್ಟಿ ಅವನನ್ನು ನುಂಗಿ ನೊಣೆಯುವವರೆಗೂ ಸುಮ್ಮನಾಗಲಿಲ್ಲ. ನರೇಂದ್ರನನ್ನು ಕಂಡೊಡನೆ ಅವನನ್ನು ಗುರುತಿಸಿದುದೂ, ಅವನ ಮಹಿಮೆಯ ಮಹತ್ವವನ್ನೂ ವಿಸ್ತಾರವನ್ನೂ ತಿಳಿದುದೂ, ಅವನಿಗಾಗಿ ಭ್ರಾಂತರಾದಂತೆ ತೋರಿದುದೂ ಯಾವುದೋ ಒಂದು ನಾವರಿಯಲಾರದಿರುವ ರಹಸ್ಯವನ್ನು ಸೂಚಿಸುತ್ತದೆ. ಯಾರ ಇಚ್ಛಾಮಾತ್ರದಿಂದ ಪಶುಫಲಕಗಳ ಮಧ್ಯೆ ದೇವತ್ವ ಪ್ರಾಪ್ತಿಯಾಗುವುದೋ, ಯಾರ ಸ್ಪರ್ಶಮಾತ್ರದಿಂದ ಸಾಧನಹೀನನಿಗೆ ಸಮಾಧಿ ಲಭಿಸುವುದೋ, ಯಾರ ಕೃಪಾಕಟಾಕ್ಷಮಾತ್ರದಿಂದ ಮುಹೂರ್ತವೊಂದರಲ್ಲಿಯೆ ಇಷ್ಟದರ್ಶನವಾಗುವುದೋ, ಯಾರು ಅಖಿಲ ಆಧ್ಯಾತ್ಮಿಕ ಅನುಭವ ಸಮೂಹದ ಸಮಷ್ಟಿ ಸ್ವರೂಪರಾಗಿರುವರೋ, ಯಾರು ಸಕಲ ಧರ್ಮಗಳ ಮತ್ತು ಸಕಲ ಮತಗಳ ಧರ್ಮ ಪಿಪಾಸುಗಳ ಚಿತ್ತದಲ್ಲಿ ಶಾಂತಿಯನ್ನು ಸೂಸುವರೋ ಆತನ ಇಚ್ಛೆಯನ್ನು ಅಲ್ಪ ಬುದ್ಧಿ ಮಾನವರು ಅರಿಯುವುದಾದರೂ ಎಂತು?

ಅಂತೂ ದೇವಗಂಗೆಯ ಮಹಾಮಕರವು ನೀರು ಕುಡಿಯಲು ಬಂದ ಕಿಶೋರ ಕೇಸರಿಯನ್ನು ಭದ್ರವಾಗಿ ಹಿಡಿದುಕೊಂಡಿತು. ಸಿಂಹದ ಮರಿ ತಪ್ಪಿಸಿಕೊಳ್ಳಲು ಎಷ್ಟು ಪ್ರಯತ್ನಪಟ್ಟರೂ ಪ್ರಯೋಜನವಾಗಲಿಲ್ಲ. ಒಮ್ಮೆ ಕಚ್ಚಿದ ಮಕರಕ್ಕೆ ತನ್ನ ಕೊಂಕುದಾಡೆಗಳನ್ನು ಕಳಚಿ ಬಿಚ್ಚಿ ಬಾಯ್ದೆರೆದು ಆ ಸಿಂಹಶಾಬಕವನ್ನು ಬಿಟ್ಟು ಬಿಡಲೂ ಸಾಧ್ಯವಾಗಲಿಲ್ಲ. ಹೋರಾಡುತ್ತಾ ಎರಡೂ ಅಮೃತ ನದಿಯ ಪವಿತ್ರ ತೀರ್ಥದಲ್ಲಿ ಮಗ್ನವಾಗುವುದನ್ನು ನೋಡುತ್ತೇವೆ.

ಉರಿಯಬೇಕಾದರೆ ಉರಿಯ ನಡುವೆ ಹೋಗುವುದಕ್ಕಿಂತಲೂ ಬೇರೆ ಉಪಾಯವಿಲ್ಲ. ಕಾದು ಕೆಂಪಗಾಗಬೇಕಾದರೆ ಕೆಂಡದ ಮಧ್ಯೆ ಬಹಳ ಹೊತ್ತು ಇದ್ದರಾಯಿತು! ತಪಸ್ವಿಗಳ ಸಾನ್ನಿಧ್ಯವೆ ಪರಮತಪಸ್ಸು. ಪರಮಹಂಸರ ಸಂಗ, ಸಹವಾಸ, ಸಂಭಾಷಣೆ, ಸೇವೆ ಮತ್ತು ಸಾನ್ನಿಧ್ಯ ಇವುಗಳ ಪರಿವೇಷದಲ್ಲಿ ನರೇಂದ್ರನೂ ಇನ್ನೂ ಇತರ ಅಂತರಂಗ ಶಿಷ್ಯರೂ ಸತ್ಯ ಸಾಕ್ಷಾತ್ಕಾರದ ಸಾಧನಕ್ಕೆ ತೊಡಗಿದರು. ಹಾಗೆಂದರೆ, ಉಪವಾಸ ಮಾಡುತ್ತಿದ್ದರೆಂದಾಗಲಿ, ಒಂಟಿ ಕಾಲಿನಲ್ಲಿ ನಿಂತು ತಪಸ್ಸು ಮಾಡುತ್ತಿದ್ದರೆಂದಾಗಲಿ, ಮುಳ್ಳಿನ ಹಾಸಗೆಯ ಮೇಲೆ ಮಲಗಿ ಅಥವಾ ತಲೆಕೆಳಗಾಗಿ ನೇತಾಡಿ ಅಥವಾ ತಲೆಗೆ ಮೊಳೆ ಹೊಡೆದುಕೊಂಡು ಅಥವಾ ನಾಲಗೆಗೆ ದಬ್ಬಣ ಚುಚ್ಚಿಕೊಂಡು ಅಥವಾ ಮೈಗೆ ಬೂದಿ ಬಳಿದುಕೊಂಡು ಸ್ನಾನ ಮಾಡದೆ ಕೊಳಕಿನ ಬಣಬೆಗಳಾಗಿ ಭೀಷಣ ರೀತಿಯಿಂದ ವರ್ತಿಸುತ್ತಿದ್ದರೆಂದಾಗಲಿ ಭಾವಿಸಬಾರದು. ಶ್ರೀರಾಮಕೃಷ್ಣ ಪರಮಹಂಸರು ಅಂತಹ ಧರ್ಮದ ಸರ್ಕಸ್ಸಿಗೆ ಮ್ಯಾನೇಜರಾಗಿರಲಿಲ್ಲ. ಅವರ ಬೋಧನೆಯಲ್ಲಿ ನಾಗರಿಕತೆಯಿದ್ದಂತೆ ಅವರ ಸಾಧನ ವಿಧಾನದಲ್ಲಿ ಸಂಸ್ಕೃತಿಯಿತ್ತು. ನೋವೆ ಸಾಧನೆ ಎಂಬುದು ಅವರ ಮಂತ್ರವಾಗಿರಲಿಲ್ಲ. ಸಂಕಟವೆ ಸಂಯಮವೆಂದು ಅವರು ಎಂದೂ ಉಪದೇಶ ಮಾಡಿಲ್ಲ.

ಯುಕ್ತಿಪೂರ್ಣವಾದ ತತ್ತ್ವಶಾಸ್ತ್ರದ ಸಿದ್ಧಾಂತಗಳಿಂದ ತೃಪ್ತಿ ಹೊಂದದ ನರೇಂದ್ರನ ಮನೋತೃಷ್ಣೆ ಸತ್ಯದ ಹೃದಯರಕ್ತವನ್ನು ಹೀರಿ ಸವಿಯುವ ಉತ್ಕಟಾಭಿಲಾಷೆಯಿಂದ ಅಲ್ಲಿಗಿಲ್ಲಿಗೆ ಹೋಗಿ, ಅತ್ತಯಿತ್ತ ಅಲೆದು, ಕಡೆಗೆ ಪರಮಹಂಸರಲ್ಲಿಗೆ ನಡೆದು ಹೇಗೆ ಹೆಡೆಮುಚ್ಚಿತೆಂಬುದನ್ನು ನಾವು ಹಿಂದಿನ ಅಧ್ಯಾಯಗಳಲ್ಲಿ ಅರಿತಿದ್ದೇವೆ. ಅಧ್ಯಯನಕ್ಕೂ ವಾದಕ್ಕೂ ಜಿಜ್ಞಾಸೆಗೂ ಬುದ್ಧಿಯ ಕಸರತ್ತಿಗೂ ಕೈವಶವಾಗದ ಜಗತ್ತೊಂದು ಇದೆ ಎಂಬರಿವು ಶ್ರೀರಾಮಕೃಷ್ಣರ ಸ್ಪರ್ಶಮಾತ್ರದಿಂದ ಉಂಟಾದ ಶಾಶ್ವತ ಸೂಚಕವಾದ ಕ್ಷಣಿಕ ದರ್ಶನದಿಂದ ಆತನಿಗೆ ಎಂದು ಸ್ಫುರಿಸಿತೋ ಅಂದಿನಿಂದ ಆ ಗುರುದೇವನ ಆತ್ಮಜ್ವಾಲೆಗೆ ತಾನೊಂದು ಪತಂಗವಾಗಿಬಿಟ್ಟನು. ಸಮಯ ದೊರೆತಾಗಲೆಲ್ಲಾ ನರೇಂದ್ರನು ದಕ್ಷಿಣೇಶ್ವರಕ್ಕೆ ಬಂದು, ಪಂಚವಟಿಯ ಸಾಧನರಂಗದಲ್ಲಿ ಗುರುವರ್ಯನ ನೇತೃತ್ವದಲ್ಲಿ, ಜನ, ಧ್ಯಾನ ಯೋಗಸಾಧನೆಗಳಲ್ಲಿ ನಿರತನಾಗಿ, ಬುದ್ಧಿಯ ಸಿಡಿಮದ್ದಿಗೆ ಭಾವದ ಕಿಡಿಯಿಟ್ಟು, ಸಿದ್ಧಿಯ ವಿದ್ಯುಜ್ಜ್ಯೋತಿ ಹೊರಹೊಮ್ಮುವಂತೆ ಮಾಡಲು ಪ್ರಯತ್ನಶೀಲನಾದನು.

ಹೀಗಿರುತ್ತಿರಲು ೧೮೮೫ನೆಯ ವರ್ಷದ ಮಧ್ಯಭಾಗದಲ್ಲಿ ಪರಮಹಂಸರ ಗಂಟಲುರೋಗ ದಿನೇದಿನೇ ವೃದ್ಧಿಹೊಂದಿತು. ಭಕ್ತಗಣವು ಚಿಕಿತ್ಸೆಗಾಗಿ ಅವರನ್ನು ಕಲ್ಕತ್ತಾಕ್ಕೆ ಕೊಂಡೊಯ್ದಿತು. ರಾಖಾಲ ನರೇಂದ್ರ ಮೊದಲಾದ ಬಾಲಕ ಭಕ್ತರೂ ಬಲರಾಮ, ರಾಮಚಂದ್ರ, ಗಿರೀಶ, ಈಶಾನ ಮೊದಲಾದ ಗೃಹೀಭಕ್ತರೂ ಗುರುವರ್ಯರ ಸೇವೆಗೆ ನಿಂತರು. ಸ್ವಲ್ಪ ದಿನಗಳಾದ ಮೇಲೆ ಕಲ್ಕತ್ತಾದ ಹವಾ ಸರಿಹೋಗದೆಂಬ ವೈದ್ಯರ ಹೇಳಿಕೆಯ ಮೇರೆಗೆ ಪರಮಹಂಸರು ಕಲ್ಕತ್ತಾ ನಗರಕ್ಕೆ ಒಂದು ಮೈಲಿ ದೂರದಲ್ಲಿರುವ ಕಾಶೀಪುರದ ಒಂದು ತೋಟದ ಮನೆಗೆ ಸಾಗಿಸಲ್ಪಟ್ಟರು. ಬಾಲಕ ಭಕ್ತಗಣವು

ಮನೆಮಾರುಗಳನ್ನು ತ್ಯಜಿಸಿ, ಮನೆಯವರ ಮುನಿಸಿಗೆ ಗುರಿಯಾಗಿ ಗುರುಸೇವೆಗೆ ನಿಂತಿತು. ನರೇಂದ್ರನೂ ತನ್ನ ಉಪಾಧ್ಯಾಯ ವೃತ್ತಿಯನ್ನು ಬಿಟ್ಟುಬಂದನು. ಅನೇಕರು ತಮ್ಮ ಮಕ್ಕಳನ್ನು ಹಿಂದಕ್ಕೆಳೆಯಲು ಪ್ರಯತ್ನಪಟ್ಟರು. ಆದರೆ ಸಾಧ್ಯವಾಗಲಿಲ್ಲ.

ಚಿಕಿತ್ಸೆಯಿಂದ ಪ್ರಯೋಜನವಾಗಲಿಲ್ಲ. ದಿನದಿನಕ್ಕೂ ರೋಗ ಪ್ರಬಲವಾಗುತ್ತಾ ಹೋಯಿತು. ಶಿಷ್ಯರೆಲ್ಲ ಅಮಂಗಳವನ್ನು ನೆನೆಯತೊಡಗಿ ವಿಷಣ್ಣವದನರಾದರು. ಪರಮಹಂಸರು ಉಳಿದ ಶಿಷ್ಯರೆಲ್ಲರ ಸೇವೆಯನ್ನು ಸ್ವೀಕರಿಸಿದರೂ ನರೇಂದ್ರನನ್ನು ಮಾತ್ರ ಸೇವೆ ಮಾಡಲು ಬಿಡುತ್ತಿರಲಿಲ್ಲ. ಆದ್ದರಿಂದ ಆತನು ಹೊರಗಿನ ಕಾರ್ಯಗಳನ್ನೆಲ್ಲ ನೋಡಿಕೊಳ್ಳುತ್ತಿದ್ದನು. ಕಾಶೀಪುರವು ಸ್ವಲ್ಪದಿನಗಳಲ್ಲಿಯೆ ಯಾತ್ರಾಸ್ಥಳವಾಯಿತು. ಸಾವಿರಾರು ಮಂದಿ ಭಕ್ತರೂ ಧರ್ಮಪಿಪಾಸುಗಳೂ ಬರತೊಡಗಿದರು. ಅದು ರೋಗಿ ನಿವಾಸವೂ ಶುಶ್ರೂಷಾಗಾರವೂ ಮಾತ್ರವಲ್ಲದೆ ತಪಸ್ವಿಗಳ ಮಠವೂ ವಿದ್ಯಾರ್ಥಿಗಳ ವಿಶ್ವವಿದ್ಯಾನಿಲಯವೂ ಆಯಿತು. ನರೇಂದ್ರನು ಶ್ರೀಗುರು ಪ್ರದರ್ಶಿತ ಸಾಧನ ಮಾರ್ಗದಲ್ಲಿ ಎಂದಿಗಿಂತಲೂ ಅತಿಶಯ ಯತ್ನಶೀಲನಾಗಿ ಮುಂದುವರಿಯತೊಡಗಿದನು. ಆ ಪ್ರಬಲೋತ್ಸಾಹ, ಆ ಕಠೋರ ಇಂದ್ರಿಯ ನಿಗ್ರಹ, ಆ ಪರಿಪೂರ್ಣ ವಿಶ್ವಾಸ - ಇವುಗಳು ವರ್ಣನಾತೀತವಾದುವು. ಅವನ್ನು ನೋಡಿ ಸಿದ್ಧ ಸಾರ್ವಭೌಮನಾದ ಗುರುವರ್ಯನೂ ಆನಂದಿತನಾದನು.

ಒಂದು ದಿನ ಇದ್ದಕ್ಕಿದ್ದ ಹಾಗೆ ನರೇಂದ್ರನು ಕಣ್ಮರೆಯಾದನು. ಎಲ್ಲೆಲ್ಲಿ ಹುಡುಕಿದರೂ ಸಿಕ್ಕಲಿಲ್ಲ. ಶಿಷ್ಯರೆಲ್ಲ ಕಳವಳಗೊಂಡರು. ಪರಮಹಂಸರು ಮಾತ್ರ, ನಿಮಗೆ ಕಳವಳ ಬೇಡ, ಅವನು ಎಲ್ಲಿಗೆ ಹೋದರೂ ಇಲ್ಲಿಗೆ ಬಂದೇ ಬರುತ್ತಾನೆ ಎಂದು ಹೇಳಿ ಎಲ್ಲರನ್ನೂ ಸಂತೈಸಿದರು.

ನರೇಂದ್ರನು, ನಿಶೆಯಲ್ಲಿ ಯಾರಿಗೂ ಹೇಳದೆ, ಇನ್ನಿಬ್ಬರು ಶಿಷ್ಯರೊಡನೆ ಬುದ್ಧಗಯೆಗೆ ಹೋಗಿದ್ದನು. ಅಲ್ಲಿಗೆ ಹೋಗಿ ಬೋಧಿಸತ್ವನ ಮಂದಿರ ದರ್ಶನ ಮಾಡಿದನು. ಅಲ್ಲಿಯೇ ಭಗವಾನ್ ಬುದ್ಧದೇವನು ಜನ್ಮಜರಾವ್ಯಾಧಿ ಮರಣಾ ಕ್ಲಿಷ್ಟ ಜೀವರಾಶಿಗಳ ದುಃಖನಿವಾರಣೆಗಾಗಿ ನಿರ್ಯಾಣ ಹೊಂದಿದ್ದು! ನರೇಂದ್ರನು ಬೋಧದ್ರುಮ ಮೂಲದಲ್ಲಿರುವ ಪ್ರಸ್ತರಾಸನದ ಮೇಲೆ ಕುಳಿತು ಧ್ಯಾನಸ್ಥನಾದನು. ಜೊತೆಯಲ್ಲಿದ್ದ ಗುರುಭ್ರಾತರಿಬ್ಬರೂ ತಮ್ಮ ಧ್ಯಾನಾನಂತರದಲ್ಲಿ ಕಣ್ಣುಬಿಟ್ಟು ನೋಡಿದರೆ, ಆತನು ಶಿಲಾವಿಗ್ರಹದಂತೆ ಸ್ಪಂದಹೀನ ನಿಶ್ಚಲನಾಗಿದ್ದನು! ಬಹುಕ್ಷಣಗಳಾದ ಮೇಲೆ ಆತನು ಅರೆಮೈ ತಿಳಿದು ಅಳತೊಡಗಿದನು. ಮತ್ತೆ ಧ್ಯಾನಸ್ಥನಾದನು. ಆತನು ಏನು ತಿಳಿದನೋ, ಏನು ಕಂಡನೋ, ಯಾರು ಬಲ್ಲರು? ಮೂರು ದಿನಗಳು ಹೀಗೆ ಕಠೋರ ತಪಸ್ಸನ್ನು ಮಾಡಿ ಕಾಶೀಪುರದ ತೋಟದ ಮನೆಗೆ ಹಿಂತಿರುಗಿ ಬಂದನು. ಭಕ್ತರು ತಮ್ಮ ಪ್ರಾಣಸ್ವರೂಪಿಯಾದ ನರೇಂದ್ರನನ್ನು ನೋಡಿ ಆನಂದಮಗ್ನರಾದರು. ಬುದ್ಧಗಯೆಯಿಂದ ಬಂದ ನರೇಂದ್ರನು ನಿರ್ವಿಕಲ್ಪಸಮಾಧಿ ಪ್ರಾಪ್ತಿಗಾಗಿ ಪರಮಹಂಸರನ್ನು ಬಿಟ್ಟು ಅಲ್ಲಿ ಇಲ್ಲಿ ಅಲೆಯುವುದು ನಿರರ್ಥಕವೆಂದು ತಿಳಿದು, ಶ್ರೀಗುರು ಸನ್ನಿಧಿಯಲ್ಲಿಯೇ ಘೋರ ಸಾಧನೆಗಳನ್ನು ಮಾಡತೊಡಗಿದನು.

ಒಂದು ದಿನ ರಾತ್ರಿ ಕಾಶೀಪುರದ ತೋಟದಲ್ಲಿ ಪ್ರಜ್ವಲಿತ ಅಗ್ನಿಕುಂಡದ ಮುಂದೆ ನರೇಂದ್ರನು ಧ್ಯಾನಮಗ್ನನಾಗಿದ್ದಾನೆ. ಇದ್ದಕ್ಕಿದ್ದ ಹಾಗೆ ತನ್ನ ದೇಹದಲ್ಲಿ ಯಾವುದೋ ಒಂದು ಪ್ರಚಂಡ ಶಕ್ತಿ ಸಂಚಾರವಾದಂತಾಯಿತು. ಸ್ಪರ್ಶಮಾತ್ರದಿಂದ

ಇತರರ ಮನೋರಾಜ್ಯದಲ್ಲಿ ಆಮೂಲಪರಿವರ್ತನೆಯನ್ನುಂಟುಮಾಡುವಂತಹ ಶಕ್ತಿ! ಅದನ್ನು ಪರೀಕ್ಷಿಸಿ ನೋಡಲೆಳಸಿ ಬಾಲಸುಲಭ ಚಪಲತಾವಶನಾದ ಆತನು ಹಿಂದುಮುಂದೆ ನೋಡದೆ ಪಕ್ಕದಲ್ಲಿ ಧ್ಯಾನಮಗ್ನನಾಗಿ ಕುಳಿತಿದ್ದ ಗುರುಭಾಯಿಯೊಬ್ಬನನ್ನು ಮುಟ್ಟಿದನು. ಆತನು ವಿದ್ಯುತ್ಪ್ರವಾಹವನ್ನು ಮುಟ್ಟಿದವನಂತೆ ನಡನಡ ನಡುಗಿದನು. ಅಷ್ಟೇ ಅಲ್ಲ; ದ್ವೈತವಾದಿಯೂ ಸಗುಣ ಸಾಕಾರೇಶ್ವರ ಭಕ್ತನೂ ಆಗಿದ್ದ ಆತನು ಒಂದು ನಿಮಿಷದಲ್ಲಿಯೆ ಅದ್ವೈತವಾದಿಯೂ ಜ್ಞಾನಯೋಗಿಯೂ ಆಗಿಬಿಟ್ಟನಂತೆ! ಯೋಗದೃಷ್ಟಿಯಿಂದ ಅದನ್ನು ಕೂಡಲೆ ಅರಿತ ಪರಮಹಂಸರು ನರೇಂದ್ರನನ್ನು ಬಳಿಗೆ ಕರೆಯಿಸಿ "ಸಂಗ್ರಹಿಸುವುದರೊಳಗಾಗಿ ವ್ಯಯಮಾಡುವೆಯೇನು? ಏನು ಕೆಲಸ ಮಾಡಿರುವೆ? ಆತನ ಭಾವ ನಷ್ಟ ಮಾಡಿ ಬಟ್ಟೆಯಲ್ಲಾ!" ಎಂದು ಎಚ್ಚರಿಸಿದರಂತೆ.

ಹಾಗೆಯೆ ಮತ್ತೊಂದು ದಿನ. ನೀರವ ಗಂಭೀರ ರಾತ್ರಿ. ಪರಮಹಂಸರು ರೋಗಶಯ್ಯೆಯಲ್ಲಿ ಪವಡಿಸಿದ್ದಾರೆ. ಪಕ್ಕದಲ್ಲಿ ನರೇಂದ್ರನು ನಿಂತಿದ್ದಾನೆ. ಕೋಣೆಯಲ್ಲಿ ಮತ್ತಾರೂ ಇಲ್ಲ. ಇಂದು ನರೇಂದ್ರನು ಹೇಗಾದರೂ ಮಾಡಿ ಗುರುಗಳಿಂದ ನಿರ್ವಿಕಲ್ಪ ಸಮಾಧಿಯನ್ನು ಅನುಗ್ರಹಿಸಿಕೊಳ್ಳಬೇಕೆಂದು ದೃಢನಿಶ್ಚಯ ಮಾಡಿಕೊಂಡು ಬಂದಿದ್ದಾನೆ. ಭಯ ವಿಸ್ಮಯ ಸಂಭ್ರಮಗಳ ಆವೇಗಭರದಿಂದ ಆತನ ಬಾಯಿಯಿಂದ ನುಡಿಗಳು ಹೊರಡದಿವೆ. ಅಂತರ್ಯಾಮಿಯಾದ ಮಹಾ ಪುರುಷನು ಶಿಷ್ಯನ ಮನೋಭಾವವನ್ನು ತಿಳಿದು ಮೆಲ್ಲನೆ ಕಣ್ದೆರೆದು ಮುದ್ದಿನ ನೋಟವನ್ನು ಬೀರಿ "ಏನಪ್ಪಾ ನರೇನ್, ನಿನಗೇನು ಬೇಕಾಗಿದೆ?" ಎಂದರು. ಸುಯೋಗವು ಲಭಿಸಿತೆಂದು ಹಿಗ್ಗಿ ನರೇಂದ್ರನು "ಗುರುದೇವ, ನಿಮ್ಮಂತೆ ನಾನೂ ಸರ್ವದಾ ನಿರ್ವಿಕಲ್ಪ ಸಮಾಧಿಯಲ್ಲಿ ಮುಳುಗಿರಬೇಕೆಂಬುದೆ ನನ್ನ ಮಹದಭಿಲಾಷೆ!" ಎಂದನು.

ಗುರುದೇವನು ಸ್ವಲ್ಪ ಅಧೀರನಾಗಿ "ಮರಳಿ ಮರಳಿ ಅದೇ ಕತೆ ಹೇಳಲು ನಿನಗೆ ನಾಚಿಕೆಯಾಗದೆ? ಇಷ್ಟು ಕಾಲ ಮಹಾವಟವೃಕ್ಷದಂತೆ ಬೆಳೆದಿರುವೆ; ಸಾವಿರಾರು ಜನರಿಗೆ ಶಾಂತಿಛಾಯೆಯನ್ನು ನೀನು ನೀಡಬೇಕಾಗಿದೆ. ಅದನ್ನು ಬಿಟ್ಟು ಸ್ವಂತ ಮುಕ್ತಿಗಾಗಿ ಬಾಯಿ ಬಾಯಿ ಬಿಟ್ಟು ಕಾತರನಾಗಿಹೆಯಲ್ಲಾ! ಎಂತಹ ಕ್ಷುದ್ರ ಆದರ್ಶ ನಿನ್ನದು!" ಎಂದರು.

ನರೇಂದ್ರನ ವಿಶಾಲ ನೇತ್ರಗಳು ಅಶ್ರುಜಲಪೂರ್ಣವಾದುವು. ಆತನು ಅಭಿಮಾನದಿಂದ ಹೇಳತೊಡಗಿದನು: "ನಿರ್ವಿಕಲ್ಪ ಸಮಾಧಿ ದೊರಕುವವರೆಗೂ ನನ್ನ ಮನಸ್ಸಿಗೆ ಶಾಂತಿಯಿರದು. ಅದು ದೊರಕುವವರೆಗೆ ನಾನು ಏನನ್ನೂ ಮಾಡುವುದಿಲ್ಲ."

"ಎಲ್ಲ ನಿನ್ನಿಚ್ಛೆಯೆಂದು ತಿಳಿದೆಯೊ? ಜಗದಂಬೆ ಕತ್ತು ಹಿಡಿದು ಬಗ್ಗಿಸಿ ಕೆಲಸ ಮಾಡಿಸುವಳು."

ನರೇಂದ್ರನು ಮರಳಿ ಮರಳಿ ಕಂಬನಿಗರೆಯುತ್ತ ಗುರುದೇವನನ್ನು ಬೇಡತೊಡಗಿದನು. ಕಡೆಗೆ ಪರಮಹಂಸರು "ಆಗಲಿ, ನಿರ್ವಿಕಲ್ಪ ಸಮಾಧಿ ದೊರಕುತ್ತದೆ" ಎಂದರು. ಇದಾದ ಒಂದೆರಡು ದಿನಗಳ ಮೇಲೆ ಸಂಜೆಯ ಹೊತ್ತಿನಲ್ಲಿ ಧ್ಯಾನಕ್ಕೆ ಕುಳಿತ ನರೇಂದ್ರನು ನಿರ್ವಿಕಲ್ಪಸಮಾಧಿಯ ಗಂಭೀರ ಜಲಧಿಯಲ್ಲಿ ಧುಮುಕಿದನು! ಇಂದ್ರಿಯಗ್ರಾಹ್ಯವಾದ ಪ್ರಪಂಚವು ಆತನ ಸಮ್ಮುಖದಿಂದ ಅಂತರ್ಹಿತವಾಯಿತು. ದೇಶಕಾಲ ನಿಮಿತ್ತಾತೀತವಾದ ನಿಜಬೋಧಸ್ವರೂಪವಾದ ಆತ್ಮವು ಸ್ವಮಹಿಮೆಯಿಂದ ವಿರಾಜಿಸಿತು. ಅದೆಂತಹ ಅವಸ್ಥೆ? ಮಾನವೀಯ ಭಾಷೆಗೆ ನಿಲುಕತಕ್ಕುದಲ್ಲ.

ನರೇಂದ್ರನನ್ನು ನೋಡಿ ಬಾಲಭಕ್ತರು ಗಾಬರಿಯಾದರು. ಶೂನ್ಯತೆ ಆತನ ಸುತ್ತಲೂ ಸುಳಿದಾಡುತ್ತಿತ್ತು. ಹೆಸರು ಕೂಗಿ ಕರೆದರು. ಮೈಯಲ್ಲಾಡಿಸಿ ನೋಡಿದರು. ಎಚ್ಚರವಿಲ್ಲ. ನಿಶ್ಚಲ, ನಿಷ್ಪಂದ, ನೀರವ, ಗಭೀರ! ಕಂಗೆಟ್ಟರು. ಗುರುಗಳ ಬಳಿಗೆ ಓಡಿದರು. ಪರಮಹಂಸರು ಶಾಂತಗಂಭೀರ ಮೂರ್ತಿಯಾಗಿದ್ದರು:

"ಇರಲಿ, ಇರಲಿ, ಇದಕ್ಕಾಗಿ ನನ್ನನ್ನು ಬಹಳವಾಗಿ ಕಾಡಿಸಿದ್ದಾನೆ. ಸುಮ್ಮನಿರಿ!" ಎಂದರು. ಶಿಷ್ಯರು ಧೈರ್ಯಗೊಂಡು ನರೇಂದ್ರನ ಬಳಿಗೆ ಬಂದರು.

ರಾತ್ರಿ ಒಂಬತ್ತು ಗಂಟೆಯಾದ ಮೇಲೆ ಬಾಹ್ಯಪ್ರಜ್ಞೆಯ ಚಿಹ್ನೆಗಳು ಮೆಲುಮೆಲನೆ ತೋರತೊಡಗಿದುವು. ಬಾಲಭಕ್ತರು ಹರ್ಷಿತರಾದರು. ಒಬ್ಬನು ಮಂಗಳ ವಾರ್ತೆಯನ್ನು ಶ್ರೀರಾಮಕೃಷ್ಣರಿಗೆ ತಿಳಿಸಲು ಓಡಿದನು. ಉಳಿದವರು "ನರೇನ್, ನರೇನ್!" ಎಂದು ಕೂಗುತ್ತಾ ಉಪಚರಿಸತೊಡಗಿದರು. ಕಲಕಲರವವು ಬರಬರುತ್ತ ಹೆಚ್ಚಾಯಿತು. ನರೇಂದ್ರನು ಯಾವುದೋ ಒಂದು ಅನಿರ್ವಚನೀಯವಾದ ಆನಂದವಾಹಿನಿಯಲ್ಲಿ ಬಹುದೂರದಿಂದ ಕೆಳಗಿಳಿದು ಬರುವವನಂತೆ ತೋರಿದನು. ಮುಖದಲ್ಲಿ ಕಾಂತಿ ಶಾಂತಿಗಳು ಮೈದೋರಿದುವು.

ಸ್ವಲ್ಪ ಹೊತ್ತಾದ ಮೇಲೆ ಆತನು "ಅಯ್ಯೋ ಏನಾಗಿಹೋಯಿತು? ನನ್ನ ದೇಹವೆಲ್ಲಿ?" ಎಂದು ಕೂಗಿಕೊಂಡನು.

"ಇಲ್ಲಿದೆ! ಇಲ್ಲಿದೆ!" ಎಂದು ಹತ್ತಾರು ವಾಣಿಗಳು ಕೂಗಿಕೊಂಡವು; ಹತ್ತಾರು ಕೈಗಳು ನರೇಂದ್ರನ ದೇಹವನ್ನು ಮುಟ್ಟಿದುವು!

ನರೇಂದ್ರನು ಮೈತಳೆದನು. ಅಪಾರ್ಥಿವ ಜ್ಯೋತಿ ನಯನಗಳಲ್ಲಿ ತಾಂಡವವಾಡುತ್ತಿತ್ತು. ವದನರಂಗದಲ್ಲಿ ಬ್ರಹ್ಮಾನಂದವು ಪ್ರತಿಬಿಂಬಿಸಿ ನಲಿದಿತ್ತು. ನರೇಂದ್ರನು ತೇಜೋಮೂರ್ತಿಯಾಗಿದ್ದನು. ಬಾಲಕ ಭಕ್ತರ ಸಂಭ್ರಮ ಎಲ್ಲೆ ಮೀರಿತು.

ನರೇಂದ್ರನು ಶ್ರೀರಾಮಕೃಷ್ಣರ ಬಳಿಗೆ ಬಂದು ದಂಡಪ್ರಣಾಮ ಮಾಡಿದನು. ಗುರುವರ್ಯರು ಮಂದಸ್ಮಿತವದನರಾಗಿ ಪ್ರಿಯತಮ ಶಿಷ್ಯನನ್ನು ಕೃಪಾಪೂರ್ಣ ದೃಷ್ಟಿಯಿಂದ ನೋಡುತ್ತ "ಜಗದಂಬೆ ನಿನಗೆಲ್ಲವನ್ನೂ ತೋರಿಸಿದಳಷ್ಟೆ? ಇನ್ನು ಅದಕ್ಕೆ ಬೀಗ ಹಾಕಿದೆ. ಬೀಗದಕ್ಕೆ ನನ್ನಲ್ಲಿದೆ. ನೀನು ಮಾಡಬೇಕಾಗಿರುವ ಕೆಲಸವೆಲ್ಲವನ್ನೂ ಮುಗಿಸಿದ ಮೇಲೆ ಬೀಗ ತೆಗೆಯುವೆನು" ಎಂದರು.

ಆ ದಿನ ಎಲ್ಲೆಲ್ಲಿಯೂ ಆನಂದ. ಹಗಲಿರುಳೆಲ್ಲ ಗಾನ, ಭಜನೆ. ನರೇಂದ್ರನು ಭಾವೋನ್ಮತ್ತನಾಗಿ ಕೀರ್ತನೆಗಳನ್ನು ಹಾಡಿದ್ದೂ ಹಾಡಿದ್ದೆ! ಭಕ್ತರನ್ನು ಪುಳಕಿತರನ್ನಾಗಿ ಮಾಡಿದ್ದೂ ಮಾಡಿದ್ದೆ! ಇತ್ತ ಪರಮಹಂಸರು ಜಗಜ್ಜನನಿಯೊಡನೆ "ಅಮ್ಮಾ, ಅವನ (ನರೇಂದ್ರನ) ಅದ್ವೈತಾನುಭೂತಿಯ ಮೇಲೆ ನಿನ್ನ ಮಾಯಾವರಣವನ್ನು ದಯಮಾಡಿ ಬೀಸು. ಅವನಿಂದ ನಾನು ಮಾಡಿಸಬೇಕೆಂದ ಕೆಲಸ ಬಹಳವಿದೆ" ಎಂದು ಬೇಡುತ್ತಿದ್ದರು.

೧೮೮೬ನೆಯ ಜುಲೈ ತಿಂಗಳ ಉತ್ತರಭಾಗದಲ್ಲಿ ಪರಮಹಂಸರ ಗಂಟಲು ರೋಗ ಕ್ರಮಶಃ ಭೀಷಣವಾಗತೊಡಗಿತು. ಬರಬರುತ್ತಾ ಮಾತು ಕಿರಿದಾಯಿತು. ಆಹಾರವೆಂದರೆ ಬಾರ್ಲಿಯ ಗಂಜಿ. ಅದನ್ನೂ ಕುಡಿಯಲಾಗುತ್ತಿರಲಿಲ್ಲ. ಅಷ್ಟಾದರೂ ಬಾಲಕ ಭಕ್ತರನ್ನು ಮುದ್ದಿನಿಂದ ಬಳಿಗೆ ಕರೆದು ಬುದ್ಧಿಯ ಮಾತುಗಳನ್ನು ಹೇಳುತ್ತಿದ್ದರು. ದೂರದಿಂದ ಬಂದ ನೂತನ ಭಕ್ತರಿಗೆ ಉಪದೇಶ ಮಾಡುತ್ತಿದ್ದರು.

ಒಂದು ಸಾರಿ ನರೇಂದ್ರನಾಥನನ್ನು ಬಳಿಗೆ ಕರೆದು “ನರೇನ್, ಇವರೆಲ್ಲ ನನ್ನ ಮಕ್ಕಳು. ಅವರೆಲ್ಲರಿಗಿಂತಲೂ ನೀನು ಬುದ್ಧಿವಂತ, ಶಕ್ತಿವಂತ. ಅವರ ಸಂರಕ್ಷಣೆಯ ಭಾರ ನಿನ್ನ ಮೇಲಿದೆ. ಅವರನ್ನೆಲ್ಲ ಸನ್ಮಾರ್ಗದಲ್ಲಿ ನಡೆಸಿ, ಕಾಪಾಡು. ನಾನು ಶೀಘ್ರದಲ್ಲಿಯೆ ದೇಹತ್ಯಾಗ ಮಾಡುವೆನು” ಎಂದರು.

ಪುನಃ ಮೌನವಾಗಿ ಕಂಬನಿಗರೆಯುತ್ತ ನಿಂತಿದ್ದ ಶಿಷ್ಯಶ್ರೇಷ್ಠನನ್ನು ಸಂಬೋಧಿಸಿ “ಅಪ್ಪಾ, ನಿನಗಿಂದು ನನ್ನ ಸರ್ವಸ್ವವನ್ನೂ ಕೊಟ್ಟುಬಿಟ್ಟಿದ್ದೇನೆ. ನಾನಿನ್ನು ಏನೊಂದಿಲ್ಲದ ಫಕೀರ!” ಎಂದರು.

ನರೇಂದ್ರನಿಗೂ ಗುರುವರ್ಯರ ಲೀಲಾವಸಾನಕಾಲವು ಬಳಿಸಾರಿತೆಂದು ತಿಳಿಯಿತು. ಆತನು ಭಾವಾವೇಗವನ್ನು ದಮನ ಮಾಡಲು ಅಸಮರ್ಥನಾಗಿ ಮಕ್ಕಳಂತೆ ಅಳುತ್ತಾ ಅಲ್ಲಿಂದ ಹೊರಗೆ ಹೋದನು.

ಭೀಷಣ ದಿನ ಸನ್ನಿಹಿತವಾಯಿತು. ೧೮೮೬ನೆಯ ವರ್ಷದ ಆಗಸ್ಟು ತಿಂಗಳು ೧೬ನೆಯ ಭಾನುವಾರ ಮೃತ್ಯುಲೀಲಾಮುಖವಾದ ಮಹಾಪುರುಷನ ಶಯ್ಯೆಯ ಸುತ್ತಲೂ ಮುತ್ತಿಕೊಂಡು, ಅಸಹನೀಯ ಶೋಕಭಾರಾಕ್ರಾಂತ ಸ್ತಂಭಿತಹೃದಯರಾದ ಭಕ್ತಶಿಷ್ಯರೆಲ್ಲರೂ ನವಯುಗಾವತಾರನ ಮಹಾಸಮಾಧಿಯನ್ನು ಪ್ರತೀಕ್ಷಿಸುತ್ತಿದ್ದಾರೆ. ಯಾರ ಯಾರ ಹೃದಯಗಳಲ್ಲಿ ಯಾವ ಯಾವ ಭಾವಗಳು ಸಂಚರಿಸುತ್ತಿದ್ದುವೊ ಅದನ್ನು ಅವರವರೆ ಬಲ್ಲರು!

ನರೇಂದ್ರನೂ ಯೋಚಿಸುತ್ತಿದ್ದಾನೆ: “ಪರಮಹಂಸರನ್ನು ಎಲ್ಲರೂ ಭಗವಂತನ ಅವತಾರವೆಂದು ನಂಬಿದ್ದಾರೆ. ನನಗೆ ಮಾತ್ರ ಅದು ಇನ್ನೂ ಒಂದು ಸಮಸ್ಯೆಯಾಗಿದೆ; ಈಗಲಾದರೂ ಗುರುವರ್ಯರು ನನ್ನ ಸಂಶಯವನ್ನು ಪರಿಹರಿಸಿದರೆ ಸರಿ, ಇಲ್ಲವಾದರೆ ನಾನು ನಂಬಲಾರೆ.” ಹೀಗೆಂದು ನರೇಂದ್ರನು ಯೋಚಿಸುತ್ತಿದ್ದಾಗಲೆ ಅಂತರ್ಯಾಮಿಯಾದ ಭಗವಾನರು ಮೆಲ್ಲನೆ ಕಣ್ದೆರೆದು ಪೂರ್ಣದೃಷ್ಟಿಯಿಂದ ನರೇಂದ್ರನನ್ನು ನೋಡುತ್ತಾ “ಏನಪ್ಪಾ ನರೇನ್! ನಿನಗಿನ್ನೂ ವಿಶ್ವಾಸ ಹುಟ್ಟಲಿಲ್ಲವೆ? ಯಾರು ರಾಮನೊ, ಯಾರು ಕೃಷ್ಣನೊ ಅವನೇ ಈಗ ರಾಮಕೃಷ್ಣನಾಗಿದ್ದಾನೆ - ನಿನ್ನ ವೇದಾಂತ ದೃಷ್ಟಿಯಿಂದಲ್ಲ” ಎಂದರು.

[1]ನರೇಂದ್ರ ಬೆಚ್ಚಿಬಿದ್ದನು. ಮನೆಗೆ ಸಿಡಿಲು ಬಡಿದಿದ್ದರೂ ಅವನಂತು ಬೆಚ್ಚುತ್ತಿರಲಿಲ್ಲ.
ಕ್ರಮೇಣ ಬ್ರಾಹ್ಮಮುಹೂರ್ತ ಬಳಿ ಸಾರಿತು. ಲೀಲಾಮಯ ದೀನಬಂಧು ಶ್ರೀರಾಮಕೃಷ್ಣ ಪರಮಹಂಸದೇವನು ಮಹಾಸಮಾಧಿಯೋಗದಿಂದ ನಶ್ವರ ದೇಹತ್ಯಾಗ ಮಾಡಿದನು. ಆತನ ಅಂತಿಮ ವಾಣಿ ನರೇಂದ್ರನ ಹೃದಯದಲ್ಲಿ ಚಿರಮುದ್ರಿತವಾಯಿತು.

ರುದ್ರಸ್ಮಶಾನ! ಪ್ರಶಾಂತ ಶ್ಮಶಾನ! ಸತ್ಯತರ ಶ್ಮಶಾನ! ಚಂದನ ಮರಗಳ ಇಂಧನ ರಾಶಿಯ ಮಹಾಚಿತೆ ನೇರ್ಪಟ್ಟಿದೆ. ಶ್ರೀಗುರುದೇವನ ಮೃತದೇಹ ಸೂಡಿನ ಮೇಲಿದೆ. ಸ್ವಲ್ಪ ಹೊತ್ತಿನಲ್ಲಿಯೆ ಭಯಭರಿತ ಭಕ್ತಿಯಿಂದ ಭಗವಾನ್ ಅಗ್ನಿ ದೇವನು ಪ್ರಜ್ವಲಿಸಲಾರಂಭಿಸಿದನು. ಅರುಣ ನೀಲ ಹರಿದ್ರ ಶ್ಯಾಮಲಾದಿ ನಾನಾ ವರ್ಣ ವಿರಾಜಿತ ಅಗ್ನಿಜ್ವಾಲೆಯಗಳು ಶಂಕರ ಭಯಂಕರವಾಗಿ ರಂಜಿಸಿದುವು. ಸಾವಿರಾರು ಜನ ಭಕ್ತರ ಮತ್ತು ಶಿಷ್ಯರ ಘನಘೋಷ ಸದೃಶವಾದ ಜಯನಾದ ಗಗನಮಂಡಲವನ್ನೆ ತುಂಬಿ ದಿಕ್ತಟದ ಭಿತ್ತಿಗಳಿಂದ ಪ್ರತಿಧ್ವನಿತವಾಯಿತು. ಅಸಂಖ್ಯಾಲೋಚನೆಗಳ ಆವೇಗಭರದಿಂದ ನೀರವವಾಗಿ ನಿಂತಿದ್ದ ನರೇಂದ್ರನೂ ಭಕ್ತರ ಜಯಘೋಷದಲ್ಲಿ ಸೇರಿದನು. ಜಯರವದಿಂದ ನಿಶ್ಚಲಶ್ಮಶಾನ ಸಮಸ್ತವೂ ಕಂಪಿಸಿತು:

ಜಯ ಭಗವಾನ್!
ಜಯ ರಾಮಕೃಷ್ಣ!
ಜಯ ಗುರುದೇವ!

---

[1] ಬ್ರಾಹ್ಮಸಮಾಜದ ಸದಸ್ಯನೂ ವಿಚಾರವಾದಿಯೂ ಆಗಿದ್ದ ಪಂಡಿತ ಶಿವನಾಥಶಾಸ್ತ್ರಿ ಒಂದು ಸಾರಿ, ಶ್ರೀರಾಮಕೃಷ್ಣರು ರೋಗದಿಂದ ನರಳುತ್ತಿದ್ದ ಅವರ ಅಂತ್ಯದ ದಿನಗಳಲ್ಲಿ ದಕ್ಷಿಣೇಶ್ವರಕ್ಕೆ ಹೋಗಿದ್ದಾಗ ಮಾತುಮಾತಾಡುತ್ತಾ ಹೀಗೆ ವಿನೋದವಾಗಿಯಾದರೂ ಮನಃಪೂರ್ವಕವಾಗಿ ಹೇಳಿದನಂತೆ:

“ಒಂದೇ ಗ್ರಂಥಕ್ಕೆ ಅನೇಕ ಮುದ್ರಣಗಳಾಗುವಂತೆ ಸರ್ವಶಕ್ತನಾದ ಜಗದೀಶ್ವರನಿಗೂ ಅನೇಕ ಮುದ್ರಣಗಳಾಗಿವೆ. (ಅವತಾರಗಳು ಎಂದು ಭಾವ). ಹಾಗೆಯೆ ನಿಮ್ಮ ಶಿಷ್ಯರು ನಿಮ್ಮನ್ನೂ ಪರಮಾತ್ಮನ ಒಂದು ಹೊಸ ಮುದ್ರಣವನ್ನಾಗಿ ಮಾಡುತ್ತಿದ್ದಾರೆ” ಎಂದು. (ಶ್ರೀರಾಮಕೃಷ್ಣರನ್ನು ಅವತಾರಪುರುಷ ಎಂಬುದಾಗಿ ಸಾರುತ್ತಿದ್ದಾರೆ ಎಂದು ಧ್ವನಿ.)

ಪರಮಹಂಸರು ಮೃದುಹಾಸ್ಯಮುಖರಾಗಿ:

“ನೋಡಪ್ಪಾ, ಊಹಿಸಿಕೊಂಡರೆ ನಗು ಬರುತ್ತದೆ. ಸರ್ವಶಕ್ತನಾದ ಜಗದೀಶ್ವರನು ಗಂಟಲು ರೋಗದಿಂದ ನರಳಿ ಸಾಯುತ್ತಿದ್ದಾನಂತೆ! ಅವರೆಂತಹ ಮಂಕುಗಳಾಗಿರಬೇಕು ಹಾಗೆ ಸಾರುವುದಕ್ಕೆ?” ಎಂದರಂತೆ.

(ಪಂಡಿತ ಶಿವನಾಥಶಾಸ್ತ್ರಿಯ Men I Have Seen ಎಂಬ ಪುಸ್ತಕದಿಂದ)

# ೮. ಧರ್ಮನೀಡವಿರಚನೆ

ದಕ್ಷಿಣೇಶ್ವರದ ಮಹಾಕಾಳಿಯ ಭಕ್ತಭೈರವನು ತನ್ನ ಶಿಷ್ಯಗಣಾಗ್ರಣಿಯ ಧೀರ ಲಲಾಟಕ್ಕೆ ರಕ್ತಚಂದನವಿಟ್ಟು, ಕೈಗೆ ಕಂಕಣಕಟ್ಟಿ, ಮಹಾಸಮಾಧಿಯಲ್ಲಿ ಮುಳುಗಿ ಕಣ್ಮರೆಯಾದನು. ಕಣ್ಣಿನ ಬೆಳಕು ಎದೆಯ ಬೆಳಕಾಯಿತು. ನರೇಂದ್ರನ ನಾಯಕತ್ವದಲ್ಲಿ ಪರಮಹಂಸರಿಂದ ಸಂನ್ಯಾಸ ಸ್ವೀಕಾರ ಮಾಡಿದ್ದ ಹನ್ನೆರಡು ಮಂದಿ ತರುಣರು, ಬಾಡಿಗೆಗೆ ಗೊತ್ತುಮಾಡಿದ್ದ ಅವಧಿ ಇನ್ನೊಂದು ವಾರವಿದ್ದುದರಿಂದ ಅದುವರೆಗೂ, ಕಾಶಿಪುರದ ತೋಟದ ಮನೆಯಲ್ಲಿ ಒಟ್ಟಾಗಿ ಸೇರಿ, ಗುರುದೇವನ ಪಾವನ ಪ್ರೇಮದ ಸ್ಮೃತಿಯ ತೊಟ್ಟಿಲಲ್ಲಿ ಸಾಧನನಿರತರಾದರು.

ಆದರೆ ಕೆಲವು ದಿನಗಳಲ್ಲಿಯೆ ಆ ಮನೆಯನ್ನು ಬಿಡಬೇಕಾಗಿ ಬಂದುದರಿಂದ ಬಾಲಕ ಸಂನ್ಯಾಸಿಗಳು ಆಶ್ರಯಹೀನರಾದರು. ಅಂತೂ ಗೃಹೀಭಕ್ತರಲ್ಲಿ ಒಬ್ಬನಾಗಿದ್ದ ಸುರೇಂದ್ರನಾಥಮಿತ್ರ ಮಹಾಶಯನ ಔದಾರ್ಯದಿಂದ ವರಾಹನಗರದಲ್ಲಿ ಹಾಳುಮನೆಯೊಂದನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿಗೆ ಶ್ರೀರಾಮಕೃಷ್ಣರ ದೇಹಾವಶಿಷ್ಟ ಭಸ್ಮಾಸ್ಥಿಪೂರ್ಣವಾದ ತಾಮ್ರಕಲಶವನ್ನು ಮಸ್ತಕದಲ್ಲಿ ಧರಿಸಿಕೊಂಡು ಹಿಂದಿನ ದಿನಗಳನ್ನು ನೆನೆದು ಕಂಬನಿಗರೆಯುತ್ತ ಬಾಲ ಸಂನ್ಯಾಸಿಗಳು ತೆರಳಿದರು. ವರಾಹನಗರದ ಆ ಹಾಳುಮನೆ ಭಾವೀ ನವಯುಗ ಪ್ರವರ್ತಕ ಸಂನ್ಯಾಸಿಗಳ ಕಠೋರ ತಪೋರಂಗವಾಯಿತು.

ಅನೇಕ ಜನ ಸಂಸಾರಿಗಳು ಬಾಲ ಸಂನ್ಯಾಸಿಗಳನ್ನು ಸಂಸಾರಕ್ಕೆ ಹಿಂತಿರುಗುವಂತೆ ಪ್ರೇರಿಸತೊಡಗಿದರು. ಭಯಪ್ರದರ್ಶನವನ್ನೂ ಮಾಡಿದರು. ಆದರೆ ನರೇಂದ್ರನ ನಿರಂತರೋತ್ಸಾಹದಿಂದಲೂ ಸಿಂಹಸದೃಶವಾದ ಸಮುಜ್ವಲ ವ್ಯಕ್ತಿತ್ವದಿಂದಲೂ ಮೋಹಿತರಾದ ಬಾಲಕ ಸಂನ್ಯಾಸಿಗಳು ಸಂಸಾರಿಗಳ ತಿಕ್ತವಾಕ್ಯ ಪ್ರಯೋಗಗಳಿಂದ ಅಪ್ರತಿಭರಾಗಲಿಲ್ಲ. ದಿನ ದಿನವೂ ನರೇಂದ್ರನೂ ತನ್ನ ಮಾತುಗಳಿಂದ ಅವರೆದೆಗೆ ಶಕ್ತಿಯನ್ನು ಸುರಿಯುತ್ತಿದ್ದನು. ಶ್ರೀರಾಮಕೃಷ್ಣ ಪರಮಹಂಸ ದೇವನ ಉನ್ನತಾದರ್ಶವನ್ನು ಅವರ ಮುಂದೆ ಹಿಡಿದು ಉತ್ತೇಜನಗೊಳಿಸುತ್ತಿದ್ದನು. ಯೇಸುಕ್ರಿಸ್ತನು ಸ್ವರ್ಗಾರೋಹಣ ಮಾಡಿದ ಮೇಲೆ ಆತನ ಶಿಷ್ಯರು ಹೇಗೆ ಕಷ್ಟಪರಂಪರೆಗಳ ತುಮುಲದಲ್ಲಿ ಹೋರಾಡಿ ಜಯಶೀಲರಾದರೆಂಬ ಕಥೆಯನ್ನು ಹೇಳುವನು. ಬುದ್ಧದೇವನ ನಿರ್ಯಾಣಾನಂತರ ಆನಂದ ಮೊದಲಾದ ಆತನ ಶಿಷ್ಯರು ಹೇಗೆ ಪ್ರತಿಕೂಲಗಳ ಕರಾಳದಂಷ್ಟ್ರಗಳನ್ನು ಮುರಿದು ಸಂಘ ಸಂಸ್ಥಾಪನೆ ಮಾಡಿದರೆಂಬ ಚರಿತ್ರೆಯನ್ನು ಹೇಳುವನು. ತೀವ್ರ ವೈರಾಗಿಯಾದ ಶ್ರೀ ಶಂಕರಾಚಾರ್ಯರ ಉದಾಹರಣೆಯನ್ನು ಕೊಡುವನು. ಜ್ಞಾನ ಭಕ್ತಿ ವೈರಾಗ್ಯಗಳ ಮಹಿಮೆಯನ್ನು ತನ್ನ ಅನನುಕರಣೀಯವಾದ ಶೈಲಿಯಲ್ಲಿ ವಿವರಿಸುವನು. “ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ” ಎಂದು ಗರ್ಜಿಸುವನು. ಇಂತು ನರೇಂದ್ರನು ಗುರುದೇವದತ್ತವೂ ಸ್ವಭಾವಸಿದ್ಧವೂ ಆದ ತನ್ನ ಅಲೌಕಿಕ ಪ್ರೇಮಪಾಶದಿಂದ ಸೋದರ ಸಂನ್ಯಾಸಿಗಳನ್ನು ಭದ್ರವಾಗಿ ಬಿಗಿದನು.

ಇದೇ ತಕ್ಕ ಸಮಯವೆಂದು ತಿಳಿದು ನರೇಂದ್ರನ ಬಂಧುವೊಬ್ಬನು ವಿಶ್ವನಾಥದತ್ತನ ಭವನವನ್ನು ಅಪಹರಿಸಬೇಕೆಂದು ಒಂದು ಮೊಕದ್ದಮೆ ಹೂಡಿದನು. ಅದಕ್ಕಾಗಿ ನರೇಂದ್ರನು ಆಗಾಗ ಕಲ್ಕತ್ತಾಕ್ಕೆ ಹೋಗಿ ಬರುತ್ತಿದ್ದನು. ಅಂತೂ ಗುರುದೇವನ ಕೃಪೆಯಿಂದ ಮೊಕದ್ದಮೆಯಲ್ಲಿ ನರೇಂದ್ರನಿಗೆ ಜಯವಾಯಿತು. ಕೋರ್ಟಿನಲ್ಲಿ ನರೇಂದ್ರನ

ವಾಗ್ವಿಜೃಂಭಣೆಯನ್ನು ಕೇಳಿದ ಪ್ರಸಿದ್ಧ ವಕೀಲನೊಬ್ಬನು ತರುಣನನ್ನು ಕುರಿತು "ಮಹಾಶಯ, ನೀನೇಕೆ ಲಾಯರಾಗಬಾರದು?" ಎಂದನಂತೆ!

ದೇವರು ಅವತರಿಸಿ ಅಜ್ಞಾನದ ಕತ್ತಲೆ ಮುತ್ತಿರುವ ನೀರಸಾಚಾರಗಳ ಶುಷ್ಕ ಕಾನನಕ್ಕೆ ಬೆಂಕಿಯಿಟ್ಟು ಜೀವನವನ್ನು ಉಜ್ವಲಗೈಯುತ್ತ ಮುಂದುವರಿದರೆ, ಪೂಜಾರಿ ಅನಿವಾರ್ಯವಾಗಿ ಅವನನ್ನು ಹಿಂಬಾಲಿಸಿ, ಪಂಚಪಾತ್ರೆಯ ತೀರ್ಥದಿಂದ ಆ ಜ್ವಾಲೆಯನ್ನು ಆರಿಸಿ, ಬೂದಿಯನ್ನು ಒಟ್ಟುಮಾಡಿ, ಅದರ ಪವಿತ್ರತೆಯನ್ನು ಸಾರಿ, ಹಂಚಿ, ಲಾಭ ಪಡೆಯುತ್ತಾನೆ. ಕೆಲವು ಸಾರಿ ಆರಿಹೋದ ಬೆಂಕಿಯನ್ನು ಪುನರುದ್ದೀಪನಗೊಳಿಸುವ ಗೋಜಿಗೆ ಹೋಗದೆ ಬೂದಿಗಾಗಿ ತನ್ನ ನೆತ್ತರನ್ನೂ ಚೆಲ್ಲಿ ಇತರರಿಂದಲೂ ಚೆಲ್ಲಿಸುತ್ತಾನೆ.

ವರಾಹನಗರದ ಹಾಳ್ಮನೆಯ ಮಠದಲ್ಲಿದ್ದ ಶ್ರೀರಾಮಕೃಷ್ಣರ ಭಸ್ಮಾವಶೇಷಕ್ಕಾಗಿ ಗೃಹೀಭಕ್ತರಿಗೂ ಸಂನ್ಯಾಸೀ ಶಿಷ್ಯರಿಗೂ ಭಿನ್ನಾಭಿಪ್ರಾಯ ಒಂದು ಹೋರಾಟವಾಗುವುದರಲ್ಲಿತ್ತು. ನರೇಂದ್ರನು ತನ್ನ ಸಂನ್ಯಾಸೀ ಸೋದರರನ್ನು ಕುರಿತೆಂದನು: "ಸೋದರರಿರಾ, ಮನುಷ್ಯರಂತೆ ವರ್ತಿಸಿ. ಗುರುದೇವನ ಉಪದೇಶವನ್ನು ಅನುಷ್ಠಾನಕ್ಕೆ ತರುವುದು ಬಿಟ್ಟು, ಬೂದಿಗಾಗಿ ಹೋರಾಡುವುದು ಯೋಗ್ಯ ಲಕ್ಷಣವಲ್ಲ. ಬೂದಿ ಅವರಿಗಿರಲಿ! ನಮಗೆ ಬೇಕಾದುದು ಬುದ್ಧಿ! ಗುರುದೇವನ ಬೋಧೆಯಂತೆ ನಡೆದುಕೊಳ್ಳಲಾರದವರು ಆತನ ಭಸ್ಮಾಸ್ಥಿಗಳನ್ನು ಎಷ್ಟು ಪೂಜಿಸಿದರೇನು ಪ್ರಯೋಜನ? ಶ್ರೀರಾಮಕೃಷ್ಣ ಪರಮಹಂಸರ ಶಿಷ್ಯರು ತಮ್ಮ ಗುರುಗಳ ಹೆಣಬೂದಿಗಾಗಿ ಕದನ ಮಾಡಿದರೆಂದು ಲೋಕವಾಡಿಕೊಳ್ಳುವಂತೆ ಮಾಡದಿರಿ. ಗುರೂಪದೇಶದಂತೆ ಬಾಳಿದರೆ ಜಗತ್ತು ನಮ್ಮ ಪದತಲಕ್ಕೆರಗಬೇಕಾಗುತ್ತದೆ!"

ನಾಯಕನ ಬುದ್ಧಿವಾದದಂತೆ ಆಮೇಲೆ ಯೋಗೋದ್ಯಾನ ಎಂಬ ಹೆಸರು ಪಡೆದ ರಾಮಚಂದ್ರದತ್ತರ ತೋಟದಲ್ಲಿ, ಪರಮಹಂಸರ ಭಸ್ಮಾವಶೇಷವನ್ನು ಸ್ಥಾಪಿಸಿ, ತರುವಾಯ ಸಮಾಧಿಮಂದಿರವನ್ನು ನಿರ್ಮಿಸಿದರು.

ಆದರೆ ವರಾಹನಗರಕ್ಕೆ ಹಿಂತಿರುಗಿದ ಮೇಲೆ ನರೇಂದ್ರನಿಗೆ ಗೊತ್ತಾಯಿತು, ಸಂಸಾರಿಗಳಿಗೆ ಸಿಕ್ಕಿದುದು ಅವಶೇಷದಲ್ಲಿ ಅರೆಪಾಲು ಮಾತ್ರವೆಂದು! ಇನ್ನರ್ಧವನ್ನು ಶಶಿ (ರಾಮಕೃಷ್ಣಾನಂದರು) ಮುಚ್ಚಿಟ್ಟಿದ್ದನು. ನರೇಂದ್ರನು ಕರುಣೆಯ ಮುಗುಳುನಗೆ ಬೀರಿ ಸುಮ್ಮನಾದನು. ಆ ವಿಚಾರವನ್ನು ತಿಳಿದ ಗೃಹೀಭಕ್ತರೂ ಹಾಗೆಯೆ ಕಿರುನಗೆ ಬೀರಿ ಸುಮ್ಮನಾದರಂತೆ.

ಈ ಸಮಯದಲ್ಲಿ ನರೇಂದ್ರನ ಹೃದಯದಲ್ಲಿ ಆತನ ಜನ್ಮೋದ್ದೇಶ ಮೂರ್ತಿಗೊಳ್ಳಲು ತೊಡಗಿದ್ದಿತು. ಗುರುಭಾಯಿಗಳಿಗೆ ಆತನು ವಿರೋಧಾಭಾಸಗಳ ಪಿಂಡಿಯಾಗಿ ತೋರುತ್ತಿದ್ದನಂತೆ.

ಒಂದು ಸಾರಿ ಜ್ಞಾನಿಯಂತೆ ತೋರುವನು; ಒಂದು ಸಾರಿ ಭಕ್ತನಂತೆ ಆಡುವನು. ಒಂದು ಸಾರಿ ಸೇವೆಯೆ ಚರಮ ಲಕ್ಷ್ಯವೆಂದು ಬೋಧಿಸುವನು; ಮತ್ತೊಂದು ಸಾರಿ ಧ್ಯಾನಸಮಾಧಿಗಳೇ ಉನ್ನತಾದರ್ಶವೆಂದು ವಾದಿಸುವನು. ಒಂದು ಸಾರಿ ಅತ್ಯಂತ ನಮ್ರತೆಯಿಂದ ತನ್ನ ಬಳಿಗೆ ಬಂದ ಭಕ್ತರಿಂದ ಸಲಹೆಗಳನ್ನು ಕೇಳುವನು. ಇನ್ನೊಂದು ಸಾರಿ ಅಧಿಕಾರವಾಣಿಯಿಂದ ಮಾತಾಡುವನು.

ದಿನಗಳ ಮೇಲೆ ದಿನಗಳು ಉರುಳಿಹೋದುವು. ನಡುನಡುವೆ ಶ್ರೀಗುರು ದೇವನ ಗೃಹೀಭಕ್ತರಾದ ಬಲರಾಮವಸು, ಸುರೇಂದ್ರನಾಥಮಿಶ್ರ, ಗಿರೀಶಚಂದ್ರ ಘೋಷ, ನಾಗಮಹಾಶಯ, ಮಾಸ್ಟರ್ ಮಹಾಶಯ ಮೊದಲಾದವರು ಮಠಕ್ಕೆ ಬಂದು ತರುಣ ಸಂನ್ಯಾಸಿಗಳೊಡನೆ ಪರಮಹಂಸರ ವಿಚಾರವಾಗಿ ಸಂವಾದ ಮಾಡುತ್ತಿದ್ದರು. ನರೇಂದ್ರನ ಯುಕ್ತಿಪೂರ್ಣವಾದ ಸಂಭಾಷಣೆಗಳನ್ನು ಕೇಳಿ ಅವರೆಲ್ಲರೂ ಹರ್ಷಿತರಾಗುತ್ತಿದ್ದರು.

ಹೀಗೆ ಇರುತ್ತಿರಲು ಒಮ್ಮೆ ಸಂನ್ಯಾಸಿಗಳಲ್ಲಿ ಒಬ್ಬರಾದ ಪ್ರೇಮಾನಂದರ ತಾಯಿಯಿಂದ ತಮ್ಮೂರಿಗೆ ಬರುವಂತೆ ಆಹ್ವಾನ ಬಂದಿತು. ಆಕೆ ಶ್ರೀರಾಮಕೃಷ್ಣರ ಭಕ್ತೆ ಯಾದುದರಿಂದಲೂ ತಮ್ಮ ಗುರುಭಾಯಿಯ ಜನನಿಯಾದುದರಿಂದಲೂ ತರುಣ ಸಂನ್ಯಾಸಿಗಳೆಲ್ಲರೂ ಆಹ್ವಾನವನ್ನು ಮನ್ನಿಸಿ ಆಂಟ್ಪುರಕ್ಕೆ ತೆರಳಿದರು. ಕಲ್ಕತ್ತಾಕ್ಕೆ ದೂರವಾಗಿದ್ದ ಆ ಗ್ರಾಮದ ಪ್ರಶಾಂತ ಸನ್ನಿವೇಶದಲ್ಲಿ, ಹಳ್ಳಿಗರ ಮೈತ್ರಿಯ ಮಾಧುರ್ಯದಲ್ಲಿ ಪ್ರೇಮಾನಂದರ ಮಾತೃದೇವತೆಯ ಆದರಾತಿಥ್ಯಗಳಲ್ಲಿ ಬಾಲಕ ಸಂನ್ಯಾಸಿಗಳು ಕೆಲದಿನಗಳು ಸುಖಶಾಂತಿಯಿಂದ ಕಳೆದರು.

ಅಲ್ಲಿ, ತತ್ಕಾಲದಲ್ಲಿ ಸಾಧಾರಣವಾಗಿ ಕಂಡುಬಂದಿದ್ದರೂ, ನಿಜವಾಗಿಯೂ ಮಹತ್ತಾಗಿರುವ ಒಂದು ಸಂಗತಿ ಜರುಗಿತು. ಮುಂದಿನ ಶ್ರೀರಾಮಕೃಷ್ಣ ಮಹಾ ಸಂಘಕ್ಕೂ ಅದರ ಬೃಹತ್ತಾದ ಸೇವಾಕಾರ್ಯಕ್ಕೂ ನರೇಂದ್ರನು ಒಂದು ಸಣ್ಣ ಪೀಠಿಕೆ ಹಾಕಿದನು.

ಶ್ರೀರಾಮಕೃಷ್ಣ ಭಕ್ತಿಯಲ್ಲಿ ಶಿಷ್ಯರೆಲ್ಲರೂ ಸಮಾನರಾಗಿದ್ದರೂ ಮೇಧಾಶಕ್ತಿಯಲ್ಲಾಗಲಿ ರಚನಾಪ್ರತಿಭೆಯಲ್ಲಾಗಲಿ ಅವರಲ್ಲಿ ಯಾರೊಬ್ಬರೂ ನರೇಂದ್ರನಿಗೆ ಎಣೆಯಾಗಿರಲಿಲ್ಲ. ಪರಮಹಂಸರ ಸಾನ್ನಿಧ್ಯ ಲಭಿಸದಿದ್ದರೆ ಉಳಿದವರು ಸಾಮಾನ್ಯರಾಗುತ್ತಿದ್ದರೂ ನರೇಂದ್ರನು ಯಾವುದಾದರೊಂದು ರೀತಿಯಲ್ಲಿ ಮಹಾಕಾರ್ಯ ಸಾಧನೆ ಮಾಡಿ ಕೀರ್ತಿ ಶಿಖರಕ್ಕೇರಿ ಜಗದ್ವಿಖ್ಯಾತನಾಗುತ್ತಿದ್ದನು ಎಂಬುದರಲ್ಲಿ ಸಂದೇಹವಿಲ್ಲ. ಅಂತಹ ಪ್ರತಿಭೆ ಆತನಲ್ಲಿ ಹುಟ್ಟುಗುಣವಾಗಿತ್ತು. ಆದ್ದರಿಂದಲೆ ಪರಮಹಂಸರು, ಕೆಲವರು ಅವನಿಗಿಂತಲೂ ಹಿರಿಯರಾಗಿದ್ದರೂ ಕೂಡ, ಇತರ ಶಿಷ್ಯರ ಯೋಗಕ್ಷೇಮವನ್ನೂ ಮಾರ್ಗದರ್ಶನವನ್ನೂ ಆತನಿಗೊಪ್ಪಿಸಿ ಹೋದುದು.

ಪರಮಹಂಸರ ಮಹಾಸಮಾಧಿಯ ನಂತರ ಅವರ ಇತರ ಶಿಷ್ಯರು ಗುರುದೇವನ ನೆನಹಿನ ಹಕ್ಕಿಯ ರೆಕ್ಕೆಯಿಂಬಿನಲ್ಲಿ ಬೆಚ್ಚಗೆ ಕುಳಿತು ಅಡಗಿ ಬಿಡಲು ಹವಣಿಸುತ್ತಿದ್ದರು. ಆತ್ಮಧ್ಯಾನದ ಸೋಮಪಾನದ ವಿಸ್ಮೃತಿಯಲ್ಲಿ ಲೋಕವನ್ನು ಇಲ್ಲಗೈಯಲು ಎಳಸುತ್ತಿದ್ದರು. ಅಜ್ಞಾತದ ಏಕಾಂತದ ಅನಾಮಧೇಯದ ಸಮಾಧಿಯಾನಂದದಲ್ಲಿ ಮಗ್ನರಾಗಿಬಿಡಬೇಕೆಂದು ಹಾರೈಸುತ್ತಿದ್ದರು. ಅಂತಹ ಹಾರೈಕೆಯ ಮೋಹಿನಿ ನರೇಂದ್ರನನ್ನು ಕೂಡ ಒಮ್ಮೊಮ್ಮೆ ಕೈಬೀಸಿ ಕರೆಯುತ್ತಿತ್ತು. ಆದರೆ ಮಹಾಗುರುವಿನ ಮಹಾ ಶಿಷ್ಯಕೇಸರಿ ಧರ್ಮಮೋಹದ ನಿದ್ರೆ ತನ್ನನ್ನು ಆಕ್ರಮಿಸದಂತೆ ಮತ್ತೆ ಮತ್ತೆ ಕೇಸರವನ್ನು ಕೊಡಹಿ ಕೊಡಹಿ ಗರ್ಜಿಸುತ್ತಾ ಯಾವಾಗಲೂ ಎಚ್ಚರವಾಗಿರುತ್ತಿತ್ತು. ಅಲ್ಲದೆ ಆ ಚಳಿನಿದ್ದೆ ತನ್ನ ಗುರುಭಾಯಿಗಳ ಹೃದಯಜೀವನವನ್ನು ಹೆಪ್ಪುಗಡಿಸದಂತೆ ಬಹು ಪ್ರಯತ್ನದಿಂದ ತನ್ನ ಎದೆಯುಸಿರ ಬಿಸಿಯನ್ನು ಅವರೆದೆಗೆ ಊದಿ ಊದಿ ಪೊರೆಯುತ್ತಿದ್ದನು.

ಆಂಟ್ಪುರದಲ್ಲಿ ನರೇಂದ್ರನು ತನ್ನ ಮಹಾ ಮೇಧಾಶಕ್ತಿಯ ದೀವಿಗೆಯಿಂದ ಇತರ ಶಿಷ್ಯರ ಎದೆಯ ಹಣತೆಯ ಬತ್ತಿಗಳಿಗೆ ದೀಪ ಹೊತ್ತಿಸುತ್ತಿದ್ದನು. ಜಗತ್ತಿನ ವಿವಿಧ ಮತಗಳ ಸಾಮ್ಯ ತಾರತಮ್ಯಗಳನ್ನು ಕುರಿತು ಶಾಸ್ತ್ರೀಯವಾಗಿ ಮಾತಾಡುತ್ತಿದ್ದನು. ವಿಜ್ಞಾನಶಾಸ್ತ್ರದ ನವೀನ ಆವಿಷ್ಕಾರಗಳನ್ನು ಕುರಿತು ಹೃದಯಂಗಮವಾಗಿ ಹೇಳುತ್ತಿದ್ದನು; ಜಗತ್ತಿನ ಇತಿಹಾಸದ ಕಥಾ ಪ್ರಪಂಚವನ್ನು ಕಲ್ಪನೆಯ ಕಣ್ಣಿಗೆ ಕಟ್ಟುವಂತೆ ಸಜೀವವಾಗಿ ಚಿತ್ರಿಸುತ್ತಿದ್ದನು! ತಾನು ಗಭೀರವಾಗಿ ಅಧ್ಯಯನ ಮಾಡಿ ಅರಿತ ಸಮಾಜಶಾಸ್ತ್ರ ಮನಶ್ಶಾಸ್ತ್ರಗಳನ್ನು, ಆಲಿಸುವವರು ಬೆರಗಾಗುವಂತೆ, ಅದ್ಭುತ ರೀತಿಯಿಂದ ವಿವರಿಸುತ್ತಿದ್ದನು. ಮನಸ್ಸು ಜಡವಾಗದಂತೆ, ಎದೆಯ ಬೆಂಕಿ ಆರದಂತೆ ನೋಡಿಕೊಳ್ಳುತ್ತಾ ಸಹೋದರ ಸಂನ್ಯಾಸಿಗಳನ್ನು ವಾದಕ್ಕೆ ಕರೆದು ಗರಡಿಯಾಚಾರ್ಯನು ಶಿಷ್ಯಸಾಧಕರನ್ನು ತರಬಿಯತ್ತು ಮಾಡುವಂತೆ ಮಾಡುತ್ತಿದ್ದನು. ಸ್ವಂತಮುಕ್ತಿಯ ಸಾಧನೆಯ ಸಂಕುಚಿತ ಆದರ್ಶಕ್ಕೆ ಬದಲಾಗಿ 'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' ಎಂಬ ಲೋಕೋತ್ತರವಾದ ಮಹಾ ಸಂಘ ಮಂತ್ರವನ್ನು ಉಪದೇಶಿಸಿ, ಅವರೆಲ್ಲರನ್ನೂ ಮಧುರ ಸ್ವಾರ್ಥತೆಯಿಂದ ಪರೋಪಕಾರದ ಹೊರಬಯಲಿಗೆಳೆಯುತ್ತಿದ್ದನು.

೧೮೮೬ನೆಯ ಕ್ರಿಸ್‌ಮಸ್ ತಿಂಗಳಲ್ಲಿ, ಬಾಬೂರಾಮನ (ಪ್ರೇಮಾನಂದರ) ಹೆತ್ತಮ್ಮನ ಮನೆಯಲ್ಲಿ, ಆಂಟ್ಪುರದಲ್ಲಿ 'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' ಎಂಬ ಮಂತ್ರದ ದೀಕ್ಷಾಕಾರ್ಯವು ನೆರವೇರಿ, ಶ್ರೀರಾಮಕೃಷ್ಣ ಮಹಾಸಂಘದ ಬೆಳೆಗೆ ಬಿತ್ತನೆಯಾಯಿತು.

ಸಾಯಂಕಾಲ ಕತ್ತಲಾಗುತ್ತಿತ್ತು. ಸಂನ್ಯಾಸಿಗಳೆಲ್ಲರೂ ಸೇರಿ ದೊಡ್ಡ ದೊಡ್ಡ ಕುಂಟೆ ಕಟ್ಟಿಗೆಗಳನ್ನು ಆಯ್ದು ತಂದು ಬೆಂಕಿ ಹೊತ್ತಿಸಿ ಒಂದು ಧುನಿ ಮಾಡಿದರು. ತಾರತಮ್ಯದಿಂದ ಸುತ್ತಲೂ ಮುತ್ತಿದ್ದ ಕತ್ತಲೆಯನ್ನೆ ಮನೋಹರಗೈಯುತ್ತಾ ಲೇಲಿಹ್ಯಮಾನವಾದ ಜ್ವಾಲಾಜಿಹ್ವೆಗಳಿಂದ ಅಗ್ನಿ ಉರಿಯತೊಡಗಿತು. ನೆತ್ತಿಯ ಮೇಲೆ ವಿಶಾಲ ಭಾರತರಾತ್ರಿಯ ಅನಂತ ಗಗನವಿತಾನವು ಅಸಂಖ್ಯ ನಕ್ಷತ್ರಗಳಿಂದ ಖಚಿತವಾಗಿ ಚಿರತೆಯ ಚರ್ಮದಂತೆ ರಮ್ಯವಾಗಿತ್ತು. ಅನಿರ್ವಚನೀಯವಾದ ಗ್ರಾಮ್ಯ ಶಾಂತಿ ಸರ್ವತ್ರ ವ್ಯಾಪಿಸಿತ್ತು. ಧ್ಯಾನ ಪ್ರಾರಂಭವಾಗಿ ದೀರ್ಘಕಾಲ ಸಾಗಿತು. ಅದು ಪೂರೈಸಿದ ಮೇಲೆ ಸಂಘನಾಯಕ ನರೇಂದ್ರನು ಆ ಮೂಕ ರಜನಿಯ ಮೌನವನ್ನು ಯೇಸುಕ್ರಿಸ್ತನ ಕಥನದಿಂದ ವಾಙ್ಮಯವನ್ನಾಗಿ ಮಾಡಿದನು...ಕ್ರಿಸ್ತನಿಗೂ ಆತನ ಶಿಷ್ಯರಿಗೂ ಇದ್ದ ಸಂಬಂಧವನ್ನು ಹೇಳುತ್ತಿದ್ದಾಗ ನೆರೆದವರೆಲ್ಲರಿಗೂ ತಮಗೂ ಪರಮಹಂಸರಿಗೂ ಇರುವ ಸಂಬಂಧದ ನೆನಪು ಬರುವಂತಾಯಿತು...ಯೇಸುಕ್ರಿಸ್ತನನ್ನು ಶಿಲುಬೆಗೆ ಹಾಕಿದ ದಾರುಣ ದುಃಖದ ಮಹಾಘಟನೆಯನ್ನು ಆಲಿಸುತ್ತಾ ಕೇಳುತ್ತಿದ್ದವರು ಕಂಬನಿಗರೆದರು...ಕ್ರಿಸ್ತನ ಶಿಷ್ಯರಿಗೆ ಬಂದೊದಗಿದ ಕಷ್ಟಪರಂಪರೆಗಳನ್ನೂ ಅವರ ಸಾಹಸವನ್ನೂ ಜಯವನ್ನೂ ಭಾವನೋಜ್ವಲವಾಗಿ ವಿವರಿಸಿ ನರೇಂದ್ರನು ನೆರೆದಿದ್ದ ಸೋದರ ಸಂನ್ಯಾಸಿಗಳಿಗೆ ತಾವೆಲ್ಲರೂ ಅವರಂತೆ ವರ್ತಿಸಿ ಲೋಕಸೇವೆಗೆ ಕಂಕಣಬದ್ಧರಾಗಿರಬೇಕೆಂದು ಹುರಿದುಂಬಿಸಿದನು...ಉಜ್ವಲವಾಗಿದ್ದ ಅಗ್ನಿ ಜ್ವಾಲೆಯ ದೀಪ್ತಿಯಿಂದ ಎಲ್ಲರ ವದನಗಳೂ ಮಿಂಚಿದುವು. ಉರಿವ ಬೆಂಕಿಯ ಚಟಪಟಧ್ವನಿಯಿಂದ ಮಾತ್ರ ಭಗ್ನವಾಗುವಂತಿದ್ದ ಆ ನಿಶಾನೀರವತೆಯಲ್ಲಿ ಸಂಘವು ತ್ಯಾಗಸೇವಾ ಧರ್ಮದೀಕ್ಷೆಯಿಂದ ಚಿರಮುದ್ರಿತವಾಯಿತು.

ಎಲ್ಲ ಮುಗಿದ ಮೇಲೆ ಅವರಿಗೆ ಗೊತ್ತಾಯಿತಂತೆ - ಅದು ಕ್ರಿಸ್‌ಮಸ್ ಸಂಧ್ಯೆ ಎಂದು!

ಆಂಟ್ಪುರದಿಂದ ಮರಳಿ ವರಾಹನಗರಕ್ಕೆ ಹಿಂತಿರುಗುವ ಮೊದಲು ಅವರೆಲ್ಲರೂ ತಾರಕೇಶ್ವರ ಕ್ಷೇತ್ರಕ್ಕೆ ಯಾತ್ರೆ ಹೋಗಿ ತ್ಯಾಗೀಕುಲಚಕ್ರವರ್ತಿ ಶಿವನಿಗೆ ಆರಾಧನೆಗೆ ಸಲ್ಲಿಸಿದರು.

ಹೀಗೆ ತರುಣ ಸಂನ್ಯಾಸಿಗಳು ಜಪತಪಸಾಧನಗಳಿಂದಲೂ ಶಾಸ್ತ್ರಾಧ್ಯಯನದಿಂದಲೂ ನರೇಂದ್ರನ ಸಹವಾಸದಿಂದಲೂ ಗುರುದೇವನ ಕೃಪೆಯಿಂದಲೂ ಆಶಿಷ್ಠರೂ ದೃಢಿಷ್ಠರೂ ಬಲಿಷ್ಠರೂ ಮೇಧಾವಿಗಳೂ ಆಗುತ್ತಿದ್ದಾಗಲೆ ಅವರಲ್ಲಿ ಕೆಲವರಿಗೆ ತೀರ್ಥಯಾತ್ರಾಭಿಲಾಷೆಯುಂಟಾಯಿತು. ಪರಿವ್ರಾಜಕ ಜೀವನವು ಸಂನ್ಯಾಸಿಗಳಿಗೆ ಯೋಗ್ಯವಾದುದು. ಅದರಲ್ಲಿಯೂ ದೇಶಸೇವೆಯಲ್ಲಿ ನಿರತರಾಗಲಿರುವ ತ್ಯಾಗಿಗಳಿಗೆ ಅದರಿಂದ ಮಹೋಪಕಾರವಿದೆ. ದೇಶದ ಸ್ಥಿತಿಯನ್ನು ಗ್ರಂಥಗಳಿಂದಲೂ ಪ್ರಯಾಣಿಕರ ದುರಾಗ್ರಹಪೂರ್ವಕವಾದ ಹೇಳಿಕೆಗಳಿಂದಲೂ ಪರೋಕ್ಷವಾಗಿ ತಿಳಿಯುವ ಬದಲು ಪ್ರತ್ಯಕ್ಷವಾಗಿ ನೋಡುವುದೇ ಮೇಲು. ಅಲ್ಲದೆ ಆಯಾ ಊರುಗಳಲ್ಲಿ ಅಜ್ಞಾತರಾಗಿರುವ ತಪಸ್ವಿಗಳು ಮತ್ತು ಮಹಾತ್ಮರು ಇವರ ಪರಿಚಯವೂ ಸಂಗಲಾಭವೂ ದೊರೆಕೊಳ್ಳುವುದು. ಅದೂ ಅಲ್ಲದೆ ಸಂನ್ಯಾಸಿಯಾದವನು ಒಂದೇ ಸ್ಥಳದಲ್ಲಿ ಬಹಳ ದಿನಗಳಿರುವುದರಿಂದ ಸ್ಥಳ ಮೋಹ ಬದ್ಧನಾಗಬಹುದೆಂಬ ಶಂಕೆಯಿಂದ ಆತನು ಜನಭರಿತವಾದ ನಗರಗಳಲ್ಲಿ ಬಹಳ ದಿನಗಳಿರದೆ ಮುಂದುವರಿಯುತ್ತಿರಬೇಕೆಂದೂ ವಿಧಿಸಲ್ಪಟ್ಟಿದೆ.

ಒಂದು ದಿನ ನರೇಂದ್ರನು ಕಾರ್ಯಾರ್ಥವಾಗಿ ಕಲ್ಕತ್ತಾಕ್ಕೆ ಹೋಗಿ ಹಿಂದಕ್ಕೆ ಬರುವಷ್ಟರಲ್ಲಿ ಶಾರದನು (ಸ್ವಾಮಿ ತ್ರಿಗುಣಾತೀತ) ಯಾರಿಗೂ ಹೇಳದೆ ಎಲ್ಲಿಗೊ ಹೊರಟುಹೋಗಿದ್ದನು. ಅನುಭವ ಸಾಲದ ಬಾಲಕನು ಏನೇನು ಕಷ್ಟಗಳಿಗೆ ಗುರಿಯಾಗುವನೊ ಎಂಬ ಆಶಂಕೆಯಿಂದ ನೊಂದುಕೊಂಡು ರಾಖಾಲನನ್ನು ಕುರಿತು “ಅವನನ್ನು ಹೋಗಲೇಕೆ ಬಿಟ್ಟೆ? ನೋಡು, ರಾಜಾ, ನಾನು ಯಾವ ಭೀಷಣಾವಸ್ಥೆಯಲ್ಲಿ ಸಿಕ್ಕಿಬಿದ್ದಿದ್ದೇನೆ? ಅಲ್ಲಿ ಒಂದು ಸಂಸಾರವನ್ನು ಬಿಟ್ಟು ಬಂದೆ: ಈಗ ಇಲ್ಲಿ ಮತ್ತೊಂದು ಗುರುತರವಾದ ಸಂಸಾರಕ್ಕೆ ಬಲಿಯಾಗಿದ್ದೇನೆ. ಆ ಹುಡುಗನಿಗಾಗಿ ನಾನು ಬಹಳ ಕಾತರನಾಗಿದ್ದೇನೆ” ಎಂದನು. ಅಷ್ಟರಲ್ಲಿ ಯಾರೋ ಒಂದು ಪತ್ರವನ್ನು ತಂದುಕೊಟ್ಟರು. ಅದು ಶಾರದನ ಪತ್ರವಾಗಿತ್ತು. ಅದರಲ್ಲಿ ಹೀಗೆಂದು ಬರೆದಿತ್ತು: “ನಾನು ಕಾಲು ನಡಿಗೆಯಲ್ಲಿಯೆ ಬೃಂದಾವನಕ್ಕೆ ಹೊರಟಿದ್ದೇನೆ. ಇಲ್ಲಿಯೆ ವಾಸವಾಗಿದ್ದರೆ ನನ್ನ ಮನಸ್ಸು ಬೇರೆಯಾಗಬಹುದು. ಮೊದಮೊದಲು ಕನಸಿನಲ್ಲಿ ತಂದೆತಾಯಿಗಳನ್ನು ಕಾಣುತ್ತಿದ್ದೆ; ಕಡೆಗೆ ಮೂರ್ತಿ ಮತ್ತಾದ ಮಾಯೆಯಿಂದ ಪ್ರಲೋಭಿತನಾದೆ. ನಾನೆಷ್ಟೊ ಪ್ರಯತ್ನಪಟ್ಟೆ. ಆದರೂ ಎರಡು ಸಾರಿ ಮನೆಗೆ ಹೋಗಿ ನೆಂಟರಿಷ್ಟರ ಮೊಗ ನೋಡಬೇಕಾಗಿ ಬಂತು. ಇವೆಲ್ಲ ಕಾರಣಗಳಿಂದ ಇಲ್ಲಿರುವುದು ನನಗೆ ಸರಿತೋರುವುದಿಲ್ಲ. ಅದಕ್ಕಾಗಿ ನಾನು ದೂರದೇಶಕ್ಕೆ ಹೋಗುವೆನು.”

ಪತ್ರವನ್ನು ಓದಿದ ಮೇಲೆ ರಾಖಾಲನು “ನೋಡು, ಅದಕ್ಕಾಗಿಯೇ ಅವನು ಹೋದುದು. ನಾನೂ ತೀರ್ಥಯಾತ್ರೆ ಹೋಗಬೇಕೆಂದು ಮನಸ್ಸು ಮಾಡಿದ್ದೇನೆ” ಎಂದನು.

ಎಲ್ಲರೂ ತೀರ್ಥಯಾತ್ರೆಗೆ ಹೊರಟರೆ ಮಠದ ಗತಿ! ನರೇಂದ್ರನು ವ್ಯಾಕುಲಚಿತ್ತನಾದನು. ಕಡೆಗೆ “ಹೋದರೆ ಹೋಗಲಿ! ಅವರ ಮನಸ್ಸಿನ ಮೇಲೆ ಅಧಿಕಾರ ಪ್ರಯೋಗ ಮಾಡಲು ನಾನಾರು?” ಎಂದುಕೊಂಡನು. ಅಷ್ಟೇ ಅಲ್ಲದೆ ಆತನಿಗೂ ಸೋದರ ಸಂನ್ಯಾಸಿಗಳ ಸಂಗದ ಮಧುರ ಮಾಯೆಯಿಂದ ವಿದೂರನಾಗಬೇಕೆಂಬುವ ಅಭಿಲಾಷೆ ಉಂಟಾಯಿತು.

ಒಂದು ದಿನ ಗುರುಭ್ರಾತೃವೃಂದವನ್ನು ಬಳಿಗೆ ಕರೆದು, ಅವರಿಗೆ ತನ್ನ ಇಚ್ಛೆಯೆಲ್ಲವನ್ನೂ ತಿಳಿಸಿ, ಪರಿವ್ರಾಜಕ ವೇಷವನ್ನು ಧರಿಸಿ, ದಂಡ ಕಮಂಡಲುಧಾರಿಯಾಗಿ ಶ್ರೀಸ್ವಾಮಿ ವಿವೇಕಾನಂದರು, ನರೇಂದ್ರತನವನ್ನು ಬಿಸುಟು, ವರಾಹನಗರದ ಮಠದಿಂದ ಹೊರಬಿದ್ದರು, ೧ಲಲಲರಲ್ಲಿ.

ನೇಸರು ಮೂಡಿದರೆ ಸಾರಿಹೇಳಬೇಕೆ? ಸ್ವಾಮಿಜಿ ಎಲ್ಲಿಗೆ ಹೋದರೂ ಅವರ ತಪ್ತಕಾಂಚನವರ್ಣದ ದೀರ್ಘತಪೋಜ್ವಲ ತನುಸೌಂದರ್ಯವನ್ನು ನೋಡಿ ಜನ ಮುಗ್ಧರಾದರು. ಯಾಯಾವರ ವೃತ್ತಿಯಿಂದ ಕಾಲಯಾಪನೆ ಮಾಡುತ್ತ, ದೇವಾಲಯ ಅನ್ನಸತ್ರಗಳಲ್ಲಿ ಮಲಗಿ ನಿದ್ರಿಸುತ್ತ, ಪವಿತ್ರ ಸ್ಥಳಗಳನ್ನು ನೋಡುತ್ತ ನೋಡುತ್ತ ಕಡೆಗೆ ಹಿಂದೂಗಳ ಪವಿತ್ರತಮ ಸ್ಥಾನವಾಗಿರುವ ಶ್ರೀ ಕಾಶಿಗೆ ಬಂದರು.

ತಂಗಲು ಯಾವ ಗೊತ್ತಾದ ಸ್ಥಾನವೂ ಅಲ್ಲಿರಲಿಲ್ಲ. ಭಿಕ್ಷಾನ್ನದಿಂದ ಉದರ ಪೋಷಣೆ ಮಾಡುತ್ತ, ದೇವಸ್ಥಾನಗಳನ್ನು ಸಂದರ್ಶಿಸುತ್ತ, ಶಾಸ್ತ್ರ ಚರ್ಚೆ ಧ್ಯಾನ ಜಪ ತಪ ಸಾಧುಸಂಗ ಇತ್ಯಾದಿ ನಿತ್ಯಕರ್ಮಗಳಲ್ಲಿ ಮಗ್ನರಾಗಿದ್ದರು. ಸಂಧ್ಯಾಕಾಲದಲ್ಲಿ ಭಾಗೀರಥಿಯ ತೀರದ ಸೋಪಾನಗಳ ಮೇಲೆ ಕುಳಿತು ಸಾಯಂಕಾಲೀನ ಕರ್ಮೋಪಾಸನೆಗಳಲ್ಲಿ ತೊಡಗಿರಲು ವಾಹಿನಿಯ ಕಲಕಲ ಮಧುರ ನಿನಾದವು ಅವರ ಬಗೆಯಲ್ಲಿ ಹಳೆಯ ನೆನಹುಗಳನ್ನು ತರುತ್ತಿತ್ತು. ಆ ಗಂಗಾ ತೀರ! ಆ ದಕ್ಷಿಣೇಶ್ವರ! ಆ ಅದ್ಭುತ ಪ್ರೇಮಿಕ ಪುರುಷ! ಅಂದಿನ ಆ ಸವಿಗನಸು ಸಿಡಿದೊಡೆದುಹೋಯಿತು! ಆತನು ಇಂದು ಶ್ರೀರಾಮಕೃಷ್ಣರ ಮುದ್ದಿನ ಮಗು ನರೇಂದ್ರನಲ್ಲ; ಶ್ರೀರಾಮಕೃಷ್ಣ ಸಂಘದ ನಾಯಕ ಸ್ವಾಮಿ ವಿವೇಕಾನಂದ! ಜಗತ್ತು ಆತನಿಂದ ನವಯುಗ ಧರ್ಮಬೋಧೆಯನ್ನು ಕೈಕೊಳ್ಳಲು ಕಾದುಕೊಂಡಿದೆ! - ಎಂತಹ ಗುರುತರಭಾರ ಆತನ ಹೆಗಲ ಮೇಲಿದೆ! ಆತನು ಮೂರ್ತಿ ಮತ್ತಾದ ಯುಗಧರ್ಮ! ಮುಡಿಗೆದರಿದ ನಂಜುಗೊರಲನ ತಲೆನವಿರಡವಿಯಲ್ಲಿ ಬಟ್ಟೆಗೆಟ್ಟು ಬಾಂದೊರೆ ಸದ್ದು ಮಾಡುತ್ತ ಹೋರಾಡಿ ಹೊರಗೆ ಚಿಮ್ಮಲು ಹಾದಿ ಹುಡುಕುವಂತೆ ಯುಗಧರ್ಮವು ಆತನೆದೆಯಲ್ಲಿ ಹೊರಹೊಮ್ಮಲೆಳಸಿ ಹೋರಾಡುತ್ತಿದೆ! ಆ ಕಾರ್ಯಭಾರದಿಂದ ಆದಷ್ಟು ಬೇಗನೆ ಮುಕ್ತಿ ಹೊಂದಲೋಸುಗ ಸಂನ್ಯಾಸಿ ಶ್ರೀಗುರುಚರಣದಲ್ಲಿ ಅವನತಮಸ್ತಕನಾಗಿದ್ದಾನೆ.

ಒಂದು ದಿನ ಸ್ವಾಮಿಜಿಗೆ ಕಾಶಿಯಲ್ಲಿ ಒಂದು ದೊಡ್ಡ ಅಧಿಕಾರದಲ್ಲಿದ್ದ ಭೂದೇವಮುಖ್ಯೋಪಾಧ್ಯಾಯನೆಂಬ ವಂಗಪಂಡಿತನ ಪರಿಚಯವಾಯಿತು. ಆತನು ಅದ್ಭುತ ಧೀಶಕ್ತಿಶಾಲಿಯಾದ ತರುಣ ಸಂನ್ಯಾಸಿಯೊಡನೆ ಧರ್ಮ, ಸಮಾಜನೀತಿ, ಭರತಖಂಡದ ಉದ್ಧಾರ ಮೊದಲಾದುವುಗಳನ್ನು ಕುರಿತು ಮಾತಾಡಿ ಮುಗ್ಧನಾಗಿ ಅಲ್ಲಿದ್ದವರೊಡನೆ ಈ ತರುಣನಲ್ಲಿ ಇಷ್ಟೊಂದು ಗಂಭೀರ ಅಂತರ್ದೃಷ್ಟಿ ವಿಪುಲ ಜ್ಞಾನಗಳಿರುವುದು ಆಶ್ಚರ್ಯ. ಮುಂದೆ ಈತನೊಬ್ಬ ಮಹದ್ವ್ಯಕ್ತಿಯಾಗುವುದರಲ್ಲಿ ಸಂದೇಹವಿಲ್ಲ ಎಂದನು. ಈ ನಡುವೆ ಸ್ವಾಮಿಜಿ ಶ್ರೀಮತ್ ತ್ರೈಲಿಂಗಸ್ವಾಮಿಗಳನ್ನು ಹೋಗಿ ಕಂಡು ಅನುಗೃಹೀತರಾದರು. ಹಾಗೆಯೆ ಶ್ರೀಮತ್ ಸ್ವಾಮಿ ಭಾಸ್ಕರಾನಂದರ ಕೀರ್ತಿಯನ್ನು ಕೇಳಿ ಅವರಲ್ಲಿಯೂ ಹೋದಾಗ ಭಾಸ್ಕರಾನಂದ ಸ್ವಾಮಿಗಳು ತಮ್ಮ ಶಿಷ್ಯರಿಗೆ ಉಪದೇಶ ಮಾಡುತ್ತಿದ್ದರು: "ಕಾಮಿನಿ ಕಾಂಚನಗಳನ್ನು ಸಂಪೂರ್ಣವಾಗಿ ತ್ಯಾಗ ಮಾಡಲು ಯಾರೂ ಸಮರ್ಥರಾಗರು" ಎಂದು. ಸ್ವಾಮಿಜಿಯವರು ವಿನೀತಭಾವದಿಂದ "ಮಹಾರಾಜ್, ಕಾಮಿನಿ ಕಾಂಚನಗಳನ್ನು ಸಂಪೂರ್ಣವಾಗಿ ತ್ಯಾಗ ಮಾಡಿದ ಸಂನ್ಯಾಸಿಗಳು ಎಷ್ಟೋ ಮಂದಿ ಇದ್ದಾರೆ. ಅದೇ ಸಂನ್ಯಾಸಿ ಜೀವನದ ಪ್ರಥಮ ಸಾಧನ. ಅಂತಹ ಮಹಾ ಪುರುಷನೊಬ್ಬನನ್ನು ನಾನು ನೋಡಿದ್ದೇನೆ" ಎಂದು

ಶ್ರೀರಾಮಕೃಷ್ಣ ಪರಮಹಂಸರ ಹೆಸರನ್ನು ಹೇಳಿದರು. ಭಾಸ್ಕರಾನಂದ ಸ್ವಾಮಿಗಳು ನಗುತ್ತ "ನೀನಿನ್ನೂ ಹುಡುಗ. ನೀನಿದನ್ನೆಲ್ಲಾ ತಿಳಿಯಲಾರೆ" ಎಂದುಬಿಟ್ಟರು. ಸ್ವಾಮಿಜಿ ಸುಮ್ಮನಾಗಲಿಲ್ಲ; ತಮ್ಮ ಗುರುಗಳ ಅಮಲಚರಿತ್ರೆಗೆ ಕಳಂಕ ಬರಬಾರದೆಂದು ವಿರ್ಭೀತ ದೃಢಭಾವದಿಂದ ಪ್ರತಿವಾದ ಹೂಡಲು ಉದ್ಯತರಾದರು. ತೇಜಸ್ವಿಯಾದ ತರುಣ ಸಂನ್ಯಾಸಿಯ ಯುಕ್ತಿಪೂರ್ಣವಾದ ವಚನಗಳನ್ನು ಕೇಳಿ ಅಲ್ಲಿ ನೆರೆದಿದ್ದ ಭಕ್ತರೂ ಸ್ವಯಂ ಭಾಸ್ಕರಾನಂದರ ಸ್ವಾಮಿಗಳೂ ವಿಸ್ಮಿತರಾದರು. ಭಾಸ್ಕರಾನಂದರು ತಮ್ಮ ಶಿಷ್ಯರನ್ನು ಕುರಿತು "ಈತನ ಕಂಠದಲ್ಲಿ ಸರಸ್ವತಿ ನೆಲೆಸಿದ್ದಾಳೆ. ಈತನ ಹೃದಯದಲ್ಲಿ ಜ್ಞಾನಜ್ಯೋತಿ ಥಳಿಸುತ್ತಿದೆ" ಎಂದರು. ಆದರೆ ಸ್ವಾಮಿಜಿ ಗುರುನಿಂದೆಯಾದ ಸ್ಥಳದಲ್ಲಿ ಇರಬಾರದೆಂದು ಅಲ್ಲಿಂದ ಹೊರಟುಹೋದರು.

ಕಾಶಿಯಿಂದ ಸ್ವಾಮಿಜಿ ಅಯೋಧ್ಯೆಗೆ ಹೋದರು. ಪುರಾಣ ಪ್ರಸಿದ್ಧರೂ ಅಲಘುಪರಾಕ್ರಮಿಗಳೂ ಆದ ಸೂರ್ಯವಂಶದ ಮಹಾಚಕ್ರವರ್ತಿಗಳ ರಾಜಧಾನಿಯಾಗಿತ್ತು ಅಂದು ಆ ಅಯೋಧ್ಯೆ! ಸೀತಾರಾಮರ ಚರಣಧೂಳಿಯಿಂದ ಪವಿತ್ರೀಕೃತವಾದ ಆ ದಿವ್ಯ ಪ್ರದೇಶದಲ್ಲಿ ಸಂಚರಿಸಲು ಯಾರು ತಾನೆ ಕಷ್ಟನಷ್ಟಗಳನ್ನು ಅನುಭವಿಸರು? ಆಜನ್ಮಬ್ರಹ್ಮಚಾರಿಯಾದಿ ಹನುಮಂತದೇವನ ಸ್ಪರ್ಶದಿಂದ ಮಂಗಳವಾದ ಆ ನೆಲದಲ್ಲಿ ತಿರುಗುವವರು ಯಾರು ತಾನೆ ಪೂತರಾಗರು? ಇವೇ ಮೊದಲಾದ ದಿವ್ಯಭಾವಗಳ ಮಾಧುರ್ಯವನ್ನು ಆಸ್ವಾದಿಸುತ್ತ ಸ್ವಾಮಿಜಿ ಲಕ್ನೋ ಮಾರ್ಗವಾಗಿ ಆಗ್ರಾಕ್ಕೆ ಬಂದರು. ಅಲ್ಲಿ ತಾಜಮಹಲಿನ ಸ್ವರ್ಗೀಯ ಸೌಂದರ್ಯವನ್ನೂ ಅಲೌಕಿಕ ಕೌಶಲ್ಯವನ್ನೂ ನೋಡಿ ಭಾವಪರವಶರಾದರು. ಮೊಗಲ್ ಬಾದಷಹರ ದುರ್ಗಪ್ರಾಸಾದಗಳನ್ನೂ ಇನ್ನೂ ಅನೇಕ ಐತಿಹಾಸಿಕ ದೃಶ್ಯಗಳನ್ನೂ ನೋಡಿಕೊಂಡು ಶ್ರೀಕೃಷ್ಣಲೀಲಾಸ್ಥಾನವಾದ ಬೃಂದಾವನಕ್ಕೆ ಹೊರಡರು. ಹೊರಡುವಾಗ ನಿಮಿಷನಿಮಿಷಕ್ಕೂ ದೂರದೂರವಾಗುತ್ತಿದ್ದ ಹಾಲ್ಗಲ್ಲಿನ ಬಿಳಿಗನಸಿನಂತೆ ಹೊಳೆಯುತ್ತಿದ್ದ ತಾಜಮಹಲನ್ನು ತಿರುತಿರುಗಿ ನೋಡಿ ನಿಟ್ಟುಸಿರುಬಿಟ್ಟರು.

ದಾರಿಯಲ್ಲಿ ಒಂದು ದಿನ ತೊಳತೊಳಲಿ ಹಸಿದು ಬಳಲಿ ಬಾಯಾರಿ ಗೋಧೂಳಿಯ ಸಮಯಕ್ಕೆ ಸರಿಯಾಗಿ ಒಂದು ಕ್ಷುದ್ರಗ್ರಾಮದ ಬಳಿಗೆ ಬಂದರು. ಅಲ್ಲಿದ್ದ ಒಬ್ಬನಿಂದ ಸ್ವಲ್ಪ ನೀರು ಕೇಳಿದರು. ಆತನು ತಾನು ಪಂಚಮನೆಂದು ಹೇಳಿದನು. ಅದನ್ನು ಕೇಳಿ ಸ್ವಲ್ಪದೂರ ಮುಂದುವರಿದ ಸ್ವಾಮಿಗಳು, ಜ್ಞಾನಿಯಾಗಿದ್ದರೂ ಭೇದಬುದ್ಧಿಯನ್ನು ತೋರಿದೆನಲ್ಲಾ ಎಂದು ಮರುಗಿ, ಹಿಂತಿರುಗಿ ಬಂದು ಪಂಚಮನಿಂದ ನೀರನ್ನು ಕುಡಿದು ಬೃಂದಾವನಕ್ಕೆ ತೆರಳಿದರು.

ಬೃಂದಾವನ! ಭರತಖಂಡದ ಕವಿಜನವಂದಿತ ಬೃಂದಾವನ! ಸುಂದರ ಗೋಪೀಜನ ಮನಮೋಹನ ಲೀಲಾರಂಗವದು! ಶ್ರೀಕೃಷ್ಣನ ವೇಣುವಿನ ಮಂಜು ನಿನಾದವನಾಲಿಸಿ ಬಳುಕಿ ಬಳುಕಿ ಮೆಲುಮೆಲ್ಲನೆ ಹರಿಯುವ ಯಮುನೆಯ ಶ್ಯಾಮಲ ತೀರವದು! ಸ್ವಾಮಿಗಳು ಯಮುನಾನದಿಯನ್ನು ಕಂಡೊಡನೆಯೆ ಅವರೆದೆ ನಲಿಯತೊಡಗಿತು. ಎಲ್ಲಿ ನೋಡಿದರಲ್ಲಿ ವ್ರಜಗೋಪಿಕೆಯರು! ಬಾಲ ಗೋಪರೊಡನೆ ನಲಿದಾಡುವ ಆ ಭೂಮಾಪುರುಷ ಶ್ರೀಕೃಷ್ಣನ ಕಾಮಗಂಧ ವಿಹೀನವಾದ ಪ್ರೇಮಲೀಲಾಭಿನಯದ ಪುಣ್ಯಸ್ಮೃತಿ! ಸಂನ್ಯಾಸಿಯ ಹೃದಯ ಶ್ರೀಕೃಷ್ಣ ಪ್ರೇಮೋನ್ಮತ್ತವಾಯಿತು. ಯಮುನೆಯ ದಡದಲ್ಲಿಯೂ ಬೃಂದಾವನದ ಕುಂಜಕುಂಜಗಳಲ್ಲಿಯೂ ಭಾವಾವೇಶದಿಂದ ಪರಿಭ್ರಮಣ ಮಾಡತೊಡಗಿದರು.

ಮೂಡುವೆಣ್ಣಿನ ಮುಗುಳುನಗೆಯಂತೆ ನರುಗೆಂಪನಾಂತ ಮುಂಬೆರಗು ಮೂಡಣ ಬಾಂದಳದಲ್ಲಿ ಮಿರುಗುತ್ತಿತ್ತು. ಹಾದಿ ನಡೆದು ನಡೆದು ಬೃಂದಾವನದಿಂದ ಬದರಿಕಾಶ್ರಮಾಭಿಮುಖವಾಗಿ ಹೊರಟ ಸ್ವಾಮಿಜಿ ಹಸಿವು ನೀರಡಿಕೆಗಳಿಂದ ಬಳಲಿ ಹಾತರಾಸವೆಂಬ ರೈಲ್ವೆ ಸ್ಟೇಷನ್ನಿನ ಬಳಿಯಿದ್ದ ಒಂದು ವಿಶಾಲ ವೃಕ್ಷದ ಬುಡದಲ್ಲಿ ಕುಳಿತಿದ್ದರು. ಸ್ಟೇಷನ್ ಮಾಸ್ಟರಾಗಿದ್ದ ಶ್ರೀಯುತ ಶರಚ್ಚಂದ್ರ ಗುಪ್ತನು ಅಲ್ಲಿಗೆ ಬಂದು, ಸಂನ್ಯಾಸಿಯ ಪ್ರಭಾತಾರುಣ ರಾಗರಂಜಿತ ಶ್ರೀದೇಹದ ದಿವ್ಯಕಾಂತಿಯನ್ನು ನೋಡಿ ಮುಗ್ಧನಾಗಿ, ಮೆಲ್ಲಮೆಲ್ಲನೆ ಬಳಿ ಸಾರಿ, ವಿನಯ ನಮ್ರ ವಚನದಿಂದ “ತಾವು ಬಹಳ ಬಳಲಿರುವಂತೆ ತೋರುತ್ತದೆ, ನನ್ನ ಆತಿಥ್ಯವನ್ನು ಸ್ವೀಕರಿಸುವಿರಾದರೆ ಕೃತಾರ್ಥನಾಗುವೆನು” ಎಂದನು. ಸ್ವಾಮಿಜಿ ಮರು ಮಾತಾಡದೆ ದರಸ್ಮಿತ ಕರುಣಸ್ನಿಗ್ಧದೃಷ್ಟಿಯಿಂದ ಶರತ್‌ಗುಪ್ತನನ್ನು ನೋಡಿ ಮೇಲೆದ್ದು ಆತನನ್ನು ಹಿಂಬಾಲಿಸಿದರು.

ಶಾಸ್ತ್ರಗಳು ಹೇಳುತ್ತವೆ, ನಿಜವಾಗಿಯೂ ಈಶ್ವರದರ್ಶನಾಕಾಂಕ್ಷಿಯಾದ ಭಕ್ತನ ಬಳಿಗೆ ಗುರು ತಾನೆಯೆ ಬರುವನೆಂದು. ಶರಚ್ಚಂದ್ರಗುಪ್ತನಿಗೂ ಹಾಗೆಯೇ ಆಯಿತು. ಆತನು ಸ್ವಾಮಿಜಿಯ ಮುಂದೆ ಕೈಮುಗಿದು ನಿಂತು “ನನಗೆ ಆತ್ಮಜ್ಞಾನವನ್ನು ಕರುಣಿಸಬೇಕು” ಎಂದನು. ಸ್ವಾಮಿಗಳು ಮಾತಾಡಲಿಲ್ಲ. ಸ್ವಲ್ಪ ಹೊತ್ತು ಅವನ ಮುಖವನ್ನೆ ನೋಡುತ್ತ “ಹಾಗಾದರೆ ನಿನ್ನ ಸುಂದರ ವದನಕ್ಕೆ ಬೂದಿ ಬಳಿದುಕೊಂಡು ಎಲ್ಲವನ್ನೂ ತ್ಯಜಿಸಿ ನನ್ನೆಡೆಗೆ ಬರುವೆಯ?” ಎಂದರು. ಗುಪ್ತನು “ಸ್ವಾಮಿಜಿ, ನಾನು ನಿಮ್ಮ ಆಜ್ಞಾನುವರ್ತಿಯಾದ ಕಿಂಕರನು; ನೀವೇನು ಹೇಳಿದರೂ ಅದನ್ನು ಮಾಡಲು ಸಿದ್ಧನಾಗಿದ್ದೇನೆ” ಎಂದನು. ಸ್ವಾಮಿಜಿ ವಿಸ್ಮಿತರಾಗಿ “ಇದೀಗ ತ್ಯಾಗ!” ಎಂದರು.

ಒಂದು ದಿನ ಸ್ವಾಮಿಜಿ ಖಿನ್ನಮನಸ್ಕರಾಗಿರುವುದನ್ನು ಕಂಡು ಶರಚ್ಚಂದ್ರನು ಅದರ ಕಾರಣವನ್ನು ಕೇಳಿದನು. “ವತ್ಸ, ಒಂದು ಮಹಾಕಾರ್ಯಭಾರ ನನ್ನ ಹೆಗಲ ಮೇಲೆ ಕುಳಿತಿದೆ. ಕ್ಷುದ್ರಶಕ್ತಿಯುಳ್ಳ ನನ್ನಿಂದ ಅದು ಸಾಧ್ಯವೇ ಎಂದು ಚಿಂತೆ. ಶಿಥಿಲವಾಗಿರುವ ಸನಾತನ ಧರ್ಮದ ಲುಪ್ತ ಗೌರವವನ್ನು ಪುನರುದ್ಧಾರ ಮಾಡಬೇಕಾಗಿದೆ. ಅಯ್ಯೋ, ಅಧಃಪತಿತವಾದ ಧರ್ಮದ ಅವಸ್ಥೆ ಶೋಚನೀಯವಾಗಿದೆ! ಎಂತಹ ಭಯಂಕರ ನಿರಶನ ಕ್ಲಿಷ್ಟವಾದ ದುರವಸ್ಥೆಗೆ ಭಾರತಾಂಬೆ ಇಳಿದುಬಿಟ್ಟಿದ್ದಾಳೆ! ಧರ್ಮದ ವೈದ್ಯುತಶಕ್ತಿಯಿಂದ ಆಕೆ ಮರಳಿ ಸಂಜೀವಿತಳಾಗಬೇಕು. ಮಾತೆಯ ಆಧ್ಯಾತ್ಮಿಕತೆಯಿಂದ ಸಮಸ್ತ ಜಗತ್ತನ್ನೂ ಜಯಿಸಬೇಕು. ಆದರೆ ಅದಕ್ಕೆ ಉಪಾಯವೇನು? ಉಪಾಯವೇನು?” ಹೇಳುತ್ತ ಹೇಳುತ್ತ ಸ್ವಾಮಿಜಿಯ ಜ್ಯೋತಿರ್ಮಯ ವಿಶಾಲ ನೇತ್ರಗಳು ವ್ಯಥಿತ ಕರುಣೆಯಿಂದ ಪ್ರೋಜ್ವಲವಾದುವು. ಶರಚ್ಚಂದ್ರನು “ನಿಮಗೆ ನಾನಾವ ರೀತಿಯಲ್ಲಿ ನೆರವಾಗಬಲ್ಲೆ?” ಎಂದನು. ಸಂನ್ಯಾಸಿ ಮನುಷ್ಯನ ಅಂತಃಶಕ್ತಿಯನ್ನು ಪರೀಕ್ಷಿಸಬೇಕೆಂದು “ದಂಡ ಕಮಂಡಲು ಧಾರಿಯಾಗಿ ಈ ಮಹಾಕಾರ್ಯಕ್ಕೆ ನೆರವಾಗಬಲ್ಲೆಯೇನು? ಮನೆಮನೆಗೆ ತಿರುಗಿ ಭಿಕ್ಷೆ ಎತ್ತಬಲ್ಲೆಯೇನು? ತ್ಯಾಗಜೀವಿಯಾಗಬಲ್ಲೆಯೇನು?” ಎಂದು ಕಂಠೀರವ ಕಂಠವಾಣಿಯಿಂದ ಕೇಳಿದರು. “ಆಗಲಿ! ಎಲ್ಲವನ್ನೂ ಮಾಡಬಲ್ಲೆ!” ಎಂಬ ಪ್ರತ್ಯುತ್ತರ ಪ್ರಶ್ನೆಯಂತೆಯೆ ಪ್ರತಿಧ್ವನಿತವಾಯಿತು. “ಹಾಗಾದರೆ ಹೋಗು. ನಿನ್ನ ಕೈಕೆಳಗಿರುವ ಸ್ಟೇಷನ್ನಿನ ಕೂಲಿಯಾಳುಗಳ ಮನೆಗಳಲ್ಲಿ ಭಿಕ್ಷೆಬೇಡಿ ತೆಗೆದುಕೊಂಡು ಬಾ”. ಶರಚ್ಚಂದ್ರನು ಹಿಂದು ಮುಂದು ನೋಡದೆ ಜೋಳಿಗೆಯನ್ನು ಬಗಲಿಗೆ ಹಾಕಿಕೊಂಡು ಕೂಲಿಗಳ ಮನೆಯಲ್ಲಿ ತಿರುಪೆಯೆತ್ತಲು ಹೊರಟನು.

ಕೆಲವು ದಿನಗಳಲ್ಲಿ ಶರಚ್ಚಂದ್ರನು ತಂದೆತಾಯಿಗಳ ಸಮ್ಮತದಿಂದ ಸಂನ್ಯಾಸ ಸ್ವೀಕಾರ ಮಾಡಿ ಸ್ವಾಮಿ ಸದಾನಂದರಾಗಿ ಸ್ವಾಮಿಜಿಯೊಡನೆ ಬದರಿ ಕೇದಾರಗಳಿಗೆ ಹೊರಟರು. ಆದರೆ ಮಧ್ಯಮಾರ್ಗದಲ್ಲಿಯೇ ಸಂನ್ಯಾಸಜೀವನದ ಕಠನತೆಗೆ ಹೊಸಬರಾದ ಸ್ವಾಮಿ ಸದಾನಂದರು ಕಾಯಿಲೆ ಬಿದ್ದರು. ಸ್ವಾಮಿಜಿ ಬಹುಕಷ್ಟದಿಂದ ಅವರನ್ನು ಹೃಷಿಕೇಶಕ್ಕೆ ತಂದು, ಅಲ್ಲಿಂದ ಹಾತರಾಸಕ್ಕೆ ಸಾಗಿಸಿ, ಅವರ ತಂದೆತಾಯಿಗಳ ವಶದಲ್ಲಿ ಬಿಟ್ಟು, ಕಲ್ಕತ್ತಾದಿಂದ ಸೋದರ ಸಂನ್ಯಾಸಿಗಳು ಕಾಗದ ಬರೆದುದರಿಂದ ಕಾರ್ಯಾರ್ಥವಾಗಿ ವರಾಹನಗರದ ಮಠಕ್ಕೆ ಮರಳಿ ಬಂದರು. ಸ್ವಲ್ಪ ದಿನಗಳಾದ ಮೇಲೆ ರೋಗಮುಕ್ತರಾದ ಸದಾನಂದರೂ ಅಲ್ಲಿಗೆ ಬಂದು ಶ್ರೀರಾಮಕೃಷ್ಣ ಸಂಘಕ್ಕೆ ಸೇರಿಕೊಂಡರು.

ಗೃಹೀಭಕ್ತರೂ ಸಂನ್ಯಾಸೀ ಶಿಷ್ಯರೂ ಭಕ್ತರೂ ಬಹುದಿನಗಳಾದ ಮೇಲೆ ತಮ್ಮ ನರೇಂದ್ರನನ್ನು ಕಂಡು ಅತ್ಯಾನಂದಿತರಾದರು. ಸ್ವಾಮಿಜಿ ಎಂದಿನಂತೆ ತಮ್ಮ ನೂತನ ಅನುಭವಜನ್ಯವಾದ ವಿದ್ಯೆಯನ್ನು ಸೋದರ ಸಂನ್ಯಾಸಿಗಳಿಗೆ ದಾನಮಾಡತೊಡಗಿದರು. ಅವರಿಗಾಗಲೆ ಭರತಖಂಡದ ಉತ್ತರಭಾಗದ ನಾನಾ ಜನಗಳ ಆಚಾರ ವ್ಯವಹಾರ ರೀತಿನೀತಿಗಳು ಪ್ರತ್ಯಕ್ಷಾನುಭವಕ್ಕೆ ಬಂದಿದ್ದುವು. ಅವು ಮೇಲೆ ಮೇಲೆ ನೋಡುವುದಕ್ಕೆ ಬೇರೆಬೇರೆಯಾಗಿ ಕಂಡರೂ ಒಂದಕ್ಕೊಂದು ವಿರೋಧಿಗಳಾಗಿ ಕಂಡರೂ ಒಳಹೊಕ್ಕು ನೋಡಿದರೆ ಒಂದೇ ಧರ್ಮಸಮುದ್ರದ ಭಿನ್ನಭಿನ್ನ ತರಂಗಗಳು ಎಂಬುದಾಗಲೆ ಅವರ ಮನಸ್ಸಿಗೆ ಬಂದಿತ್ತು. ದೇಶೋದ್ಧಾರವಾಗಬೇಕಾದರೆ ಪಾಶ್ಚಾತ್ಯ ಭಾವಾಪನ್ನ ಶಿಕ್ಷಿತವ್ಯಕ್ತಿಗಳ ನಡುವೆ ತಾವು ಕೆಲಸ ಮಾಡುವುದಕ್ಕಿಂತಲೂ ಅತಿಶಯತರವಾಗಿ ಜನಸಾಮಾನ್ಯರ ನಡುವೆ ಕೆಲಸ ಮಾಡಬೇಕೆಂದು ಭಾವಿಸಿದ್ದರು. ಅಜ್ಞಾನಜನ್ಯವಾದ ವಿಭಿನ್ನ ಸಂಪ್ರದಾಯಗಳೂ ಕ್ಷುದ್ರಕ್ಷುದ್ರ ಕೃತ್ರಿಮ ಜಾತಿ ವಿಭಾಗಗಳೂ ಅರ್ಥಹೀನವಾದ ವಿವಿಧ ದೇಶಾಚಾರಗಳೂ ತಮ್ಮ ಉಗ್ರತೆಯನ್ನು ಬಿಟ್ಟು ಸಾಧುವಾದರೆ ಸಮಸ್ತ ಭಾರತ ವರ್ಷವೂ ಏಕಾಖಂಡವಾಗಿ ಉನ್ನತಿ ಹೊಂದುವುದು ಎಂದವರು ನಿಸ್ಸಂದೇಹವಾಗಿ ತಿಳಿದಿದ್ದರು.

ಸ್ವಲ್ಪ ದಿನಗಳಾದ ಮೇಲೆ ೧೮೮೯ರಲ್ಲಿ ಸ್ವಾಮಿಜಿ ಮರಳಿ ವರಾಹನಗರದ ಮಠವನ್ನು ಬಿಟ್ಟು ವಿಖ್ಯಾತ ಸಾಧುವಾಗಿದ್ದ ಪವಾಹಾರಿ ಬಾಬನನ್ನು ನೋಡಲು ಗಾಜಿಪುರಕ್ಕೆ ಹೋದರು. ಶ್ರೀರಾಮಕೃಷ್ಣ ಪರಮಹಂಸರನ್ನು ಅವತಾರ ಪುರುಷರೆಂದು ನಂಬಿದ್ದ ಬಾಬನು ಅವರ ಶಿಷ್ಯನಾದ ಸ್ವಾಮಿ ವಿವೇಕಾನಂದರನ್ನು ಸಾದರದಿಂದ ಬರಮಾಡಿಕೊಂಡನು. ಸ್ವಾಮಿಜಿಗೆ ಬಾಬನು ಮಹಾಯೋಗೀಶ್ವರನಾಗಿ ತೋರಿದರು. ಬಾಬನ ಪೂಜಾಪಾತ್ರೆಗಳನ್ನು ಕಳ್ಳನೊಬ್ಬನು ಒಂದು ದಿನ ಕದ್ದುಕೊಂಡು ಓಡಲಾಗಿ, ಆ ಯೋಗಿ ಇನ್ನುಳಿದ ಪಾತ್ರೆಗಳನ್ನೂ ಎತ್ತಿಕೊಂಡು ಅವನ ಹಿಂದೆ ಓಡಿದನಂತೆ. ಕಳ್ಳನು ಸಿಕ್ಕಿಬೀಳುವೆನೆಂದು ತಿಳಿದು ಇನ್ನೂ ವೇಗವಾಗಿ ಓಡಿದನು. ಕಡೆಗೂ ಸಾಧು ಅವನನ್ನು ಹಿಡಿದು, ಅವನು ಗಡಗಡ ನಡುಗುತ್ತಾ ಅಂಗಲಾಚಿಕೊಳ್ಳುತ್ತಿರಲು, ತಾನು ತಂದ ಉಳಿದ ಪಾತ್ರೆಗಳನ್ನೂ ಅವನ ಕೈಯಲ್ಲಿ ಕೊಟ್ಟು "ಅಪ್ಪಾ, ಭಯಪಡಬೇಡ, ತೆಗೆದುಕೊ. ಇವೆಲ್ಲ ನಿನ್ನವು. ನಿನಗೆ ಅವುಗಳ ಅಗತ್ಯ ಬಹಳವಾಗಿರಬೇಕು. ನನಗಾದರಷ್ಟಿಲ್ಲ" ಎಂದನು. ಕಳ್ಳನು ಆತನ ಶಿಷ್ಯನಾಗಿ ಸಂನ್ಯಾಸ ದೀಕ್ಷೆಯನ್ನು ಕೈಕೊಂಡನಂತೆ! ಇನ್ನೊಂದು ದಿನ ಸರ್ಪವೊಂದು ಬಾಬನನ್ನು ಕಡಿಯಲು "ಪ್ರಿಯನು ದೂತನನ್ನು ಕಳುಹಿಸಿದ್ದಾನೆ" ಎಂದನಂತೆ! ಸ್ವಾಮಿಜಿ ಬಾಬನನ್ನು ಬಹಳವಾಗಿ ಮೆಚ್ಚಿದರು. ಅವರ ಹೃದಯದಲ್ಲಿ ಇನ್ನೂ ಅನೇಕಾನೇಕ ಆಲೋಚನೆಗಳೂ ಸುಳಿದಿರಬಹುದು.

ಇದ್ದಕ್ಕಿದ್ದ ಹಾಗೆ ಒಂದು ದಿನ ಸ್ವಾಮಿಜಿ ಗಾಜಿಪುರದಿಂದ ವರಾಹನಗರಕ್ಕೆ ಮರಳಿದರು. ಪುನಃ ಅಲ್ಲಿಂದ ಹೊರಟು ಕಾಶಿ ಪ್ರಯಾಗ ಇತ್ಯಾದಿ ತೀರ್ಥಗಳನ್ನು ತಿರುಗಿ, ಮತ್ತೆ ಗಾಜಿಪುರಕ್ಕೆ ಬಂದರು. ಅಲ್ಲಿ ಪ್ರತಿದಿನವೂ ಪವಾಹಾರಿ ಬಾಬನಲ್ಲಿಗೆ ಹೋಗಿಬರತೊಡಗಿದರು. ಮೆಲ್ಲಮೆಲ್ಲನೆ ಅವರ ಮನಸ್ಸು ಪವಾಹಾರಿ ಬಾಬನ ಕಡೆಗೆ ಒಲಿಯತೊಡಗಿತು. ಬಾಬನಿಂದ ದೀಕ್ಷಾಗ್ರಹಣ ಮಾಡಲು ಮನಸ್ಸು ಮಾಡಿದರು. ಆದರೆ ಬಗೆ ಕದಡಿತು. ಇಬ್ಭಾಗವಾಯಿತು. ಶ್ರೀರಾಮಕೃಷ್ಣನೋ ಅಥವಾ ಪವಾಹಾರಿ ಬಾಬನೋ? ಹೀಗೆಂದು ತರ್ಕಿಸಿದರು: "ಭಗವಾನ್ ಶ್ರೀರಾಮಕೃಷ್ಣರ ಅಹೇತುಕ ಕೃಪೆಗೆ ಅಧಿಕಾರಿಯಾದರೂ ಇದುವರೆಗೆ ನನಗೆ ಚಿರಶಾಂತಿ ದೊರಕಿಲ್ಲ. ಸದಾ ಬ್ರಹ್ಮಸ್ಥನಾಗಿರುವ ಭಾಗ್ಯ ದೊರಕಿಲ್ಲ. ಬಹುಶಃ ಪವಾಹಾರಿ ಬಾಬನಿಂದ ಸಹಾಯ ಲಭಿಸಬಹುದು. ಆತನೇನೊ ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಲು ಹಿಂಜರಿಯುತ್ತಿದ್ದಾನೆ. ಆದರೂ ಆತನ ಶಿಷ್ಯನಾಗಿ ಸಾಧನೆ ಮಾಡಿ ನೋಡುವೆನು." ಈಶ್ವರ ದರ್ಶನಾಕಾಂಕ್ಷೆಯ ಆವೇಗದಲ್ಲಿ ಸ್ವಾಮಿಜಿ 'ಜಗದಂಬೆ ನಿನಗೆಲ್ಲವನ್ನೂ ತೋರಿಸಿದಳಷ್ಟೆ? ಇನ್ನು ಅವಕ್ಕೆ ಬೀಗ ಹಾಕಿದೆ. ಬೀಗದ ಕೈ ನನ್ನಲ್ಲಿದೆ. ನೀನು ಮಾಡಬೇಕಾಗಿರುವ ಕೆಲಸವೆಲ್ಲವನ್ನೂ ಮುಗಿಸಿದ ಮೇಲೆ ಬೀಗ ತೆಗೆಯುತ್ತೇನೆ' ಎಂದ ಗುರುವಾಣಿಯನ್ನು ಮರೆತುಬಿಟ್ಟರೆಂದು ತೋರುತ್ತದೆ.

ಗಭೀರನಿಶಿಯಲ್ಲಿ ಸ್ವಾಮಿಜಿ ಪವಾಹಾರಿ ಬಾಬನ ಗುಹೆಗೆ ಹೊರಡಲು ಉದ್ಯುಕ್ತರಾದರು. ಯಾವುದೋ ಶಕ್ತಿ ಅವರನ್ನು ಹಿಂದೆಳೆಯುವಂತಾಯಿತು. ಕಾಲು ಮುಂಬರಿಯಲಿಲ್ಲ. ದೇಹ ಭಾರವಾಯಿತು. ವಿಹ್ವಲಹೃದಯರಾಗಿ ನೆಲದ ಮೇಲೆ ಕುಳಿತುಬಿಟ್ಟರು. ಶ್ರೀರಾಮಕೃಷ್ಣರ ಅಸೀಮಪ್ರೇಮ, ಗಭೀರಸಾದರತೆ, ಸಸ್ನೇಹ ವ್ಯವಹಾರಗಳು ಒಂದೊಂದಾಗಿ ಪರ್ಯಾಯ ಕ್ರಮದಿಂದ ಸ್ಮೃತಿಪಥದಲ್ಲಿ ಸುಳಿದುವು. ಕಡೆಗೆ ತಮ್ಮನ್ನು ತಾವೇ ನಿಂದಿಸಿಕೊಂಡರು. ಕಗ್ಗತ್ತಲು ದಟ್ಟಯಿಸಿದ್ದ ಆ ಕೋಣೆ ಇದ್ದಕ್ಕಿದ್ದ ಹಾಗೆ ದಿವ್ಯಾಲೋಕ ಪ್ರದೀಪ್ತವಾಯಿತು. ಸ್ವಾಮಿಜಿ ನೋಡಿದರು: ಎದುರಿನಲ್ಲಿ ತಮ್ಮ ಜೀವನದ ಆದರ್ಶವಾದ ದಕ್ಷಿಣೇಶ್ವರದ ದೇವಮಾನವನು ನಿಂತಿದ್ದಾನೆ! ಆತನ ಉಜ್ಜ್ವಲವಾದ ವಿಶಾಲ ನೇತ್ರದ್ವಯ ಸ್ನೇಹ ಸಕರುಣ ವ್ಯಥಿತವಾದ ಭರ್ತ್ಸನೆಯಿಂದ ತುಂಬಿದೆ! ವಿವೇಕಾನಂದರು ವಿಸ್ಮಯಾನಂದ ಮೂಕರಾದರು. ಕಲ್ಲಿನ ಬೊಂಬೆಯಂತೆ ಕುಳಿತುಬಿಟ್ಟರು. ಬೆಳಗಾಯಿತು. ರಾತ್ರಿ ಕಂಡ ದರ್ಶನ ಬರಿಯ ಮನೋದೌರ್ಬಲ್ಯ ಜನ್ಯವಾದುದೆಂಬ ತರ್ಕಿಸಿ ಪುನಃ ಆಗಾಮಿಕ ರಜನಿಯಲ್ಲಿ ಪವಾಹಾರಿಯ ಬಳಿಗೆ ಹೋಗಲು ಸಂಕಲ್ಪ ಮಾಡಿದರು. ಆ ದಿನವೂ ಅದೇ ರೀತಿಯಲ್ಲಿ ಹಿಂದಿನ ರಾತ್ರಿ ನೋಡಿದ ಜ್ಯೋತಿರ್ಮಯ ಮೂರ್ತಿ ಎದುರು ನಿಂತಿತು! ಹೀಗೆಯೆ ಇಪ್ಪತ್ತೊಂದು ರಾತ್ರಿಗಳು ಕಳೆದುವು. ಆ ನೀರವ ಜ್ಯೋತಿರ್ಮೂರ್ತಿ ಎದುರಿಗೆ ಬಂದು ನಿಲ್ಲುತ್ತಿತ್ತು. ಕಡೆಯ ದಿನ ಸ್ವಾಮಿಜಿ ನೆಲದ ಮೇಲೆ ಬಿದ್ದು ಆರ್ತಸ್ವರದಿಂದ "ಇಲ್ಲ. ನಾನಿನ್ನು ನಿನ್ನನ್ನಗಲಿ ಹೋಗೆನು. ಹೇ ರಾಮಕೃಷ್ಣ, ನೀನೇ ನನ್ನ ಏಕಮಾತ್ರ ಆಚಾರ್ಯ! ನಾ ನಿನ್ನ ದಾಸ! ನನ್ನ ಅಪರಾಧವನ್ನು ಮನ್ನಿಸು, ಹೇ ಪ್ರಭೋ" ಎಂದು ಬೇಡಿದರು.

ಸ್ವಾಮಿ ಅಭೇದಾನಂದರು ಕಾಶಿಯಲ್ಲಿ ರೋಗಗ್ರಸ್ತರಾಗಿರುವ ಸುದ್ದಿಯನ್ನು ಕೇಳಿ ವಿವೇಕಾನಂದರು ಅಲ್ಲಿಗೆ ಹೊರಟರು. ಅಭೇದಾನಂದರ ಶುಶ್ರೂಷೆಗೆ ಪ್ರೇಮಾನಂದಜಿಯವರನ್ನು ನೇಮಿಸಿ, ತಾವು ಪ್ರಮೋದದಾಸ ಮಿತ್ರನೆಂಬ ನಿಷ್ಠಾವಂತನಾದ ಸಂಸ್ಕೃತ ವಿದ್ವಾಂಸನ ಮನೆಯಲ್ಲಿ ಇಳಿದುಕೊಂಡು ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಕೆಲವು ದಿನಗಳಲ್ಲಿಯೇ ಅಭೇದಾನಂದರ ರೋಗ ವಾಸಿಯಾಗುತ್ತ ಬಂತು ಅಷ್ಟರಲ್ಲಿ ಕಲ್ಕತ್ತಾದಿಂದ ಶ್ರೀರಾಮಕೃಷ್ಣ ಪರಮಹಂಸ ದೇವನ ಶ್ರೇಷ್ಠತಮ ಗೃಹಿಭಕ್ತರಾದ ಬಾಬು ಬಲರಾಮವಸು ಮಹಾಶಯನೂ, ಬಾಬು ಸುರೇಂದ್ರನಾಥಮಿತ್ರ

ಮಹಾಶಯನೂ ಕಾಲವಾದರೆಂಬ ಕಠೋರವಾರ್ತೆ ಬಂದಿತು. ಗುರುಭ್ರಾತೃವಿಯೋಗ ವ್ಯಥೆಯಿಂದ ಸ್ವಾಮಿಜಿ ವಿಲಾಪಿಸುತ್ತಿದ್ದುದನ್ನು ನೋಡಿ, ಪ್ರಮೋದದಾಸನು "ಸ್ವಾಮಿಜಿ, ನೀವು ಸಂನ್ಯಾಸಿಗಳು; ನೀವು ಶೋಕಾರ್ತರಾಗುವುದು ಅಷ್ಟೇನೂ ತರವಲ್ಲ" ಎಂದನು.

ಸ್ವಾಮಿಗಳು ಗಂಭೀರಭಾವದಿಂದ ಉತ್ತರಕೊಟ್ಟರು: "ಏನು ನೀವು ಹೇಳುವುದು? ಸಂನ್ಯಾಸಿಯಾದ ಮಾತ್ರಕ್ಕೆ ಹೃದಯವಿಲ್ಲವೆ? ನಿಜವಾದ ಸಂನ್ಯಾಸಿ ಇತರರಿಗಾಗಿ ಹೆಚ್ಚಾಗಿ ಮರುಗುವನು. ಅಲ್ಲದೆ ನಾವೆಲ್ಲ ಮನುಷ್ಯರಲ್ಲವೆ? ಅದರಲ್ಲಿಯೂ ಅವರಿಬ್ಬರೂ ನನ್ನ ಗುರುಭಾಯಿಗಳು. ನಾವೆಲ್ಲರೂ ಗುರುದೇವನ ಪದತಲದಲ್ಲಿ ಒಟ್ಟಿಗೆ ಕುಳಿತವರಲ್ಲವೆ? ಕಲ್ಲೆದೆಯ ಸಂನ್ಯಾಸಕ್ಕೆ ನನ್ನ ಧಿಕ್ಕಾರವಿರಲಿ!"

ಸಂಘಕ್ಕೆ ಮೇರುದಂಡಪ್ರಾಯರಾಗಿದ್ದ ಗೃಹೀಭಕ್ತವರ್ಯರ ನಿಧನದಿಂದ ಸಂಘ ಸ್ವಲ್ಪ ಕಷ್ಟಗಳಿಗೆ ಗುರಿಯಾಯಿತು. ಸ್ವಾಮಿಜಿ ಶೋಕಭಾರಾಕ್ರಾಂತರಾದ ಗುರುಭಾಯಿಗಳ ಬಂಧುಗಳನ್ನು ಸಂತವಿಡುವುದಕ್ಕೂ ಸಂಘದ ವ್ಯವಸ್ಥೆಗಳನ್ನು ಸರಿಪಡಿಸುವುದಕ್ಕೂ ಕಾಶಿಯಿಂದ ಕಲ್ಕತ್ತಾಕ್ಕೆ ತೆರಳಿದರು.

* * *

## ೯. ಪರಿವ್ರಾಜಕ ಸಂನ್ಯಾಸಿ

ಹಕ್ಕಿಗೆ ಗೂಡಿನ ಸಣ್ಣ ಬಾಳು ಸಾಲದೆಹೋಗಿ ಬೇಸರವಾಯಿತು. ಒಂದೆರಡು ಸಾರಿ ಸುತ್ತಮುತ್ತಲಿನ ಹತ್ತಿರದ ಬನಗಳಲ್ಲಿ ಹಾರಾಡಿ ರುಚಿಯರಿತ ರೆಕ್ಕೆಗಳಿಗೆ ಮಹಾರಣ್ಯಯಾತ್ರೆ ಹಗಲಿರುಳಿನ ಹೆಗ್ಗನಸಾಯಿತು. ಆತ್ಮದ ಅಕ್ಷಿಪಕ್ಷಿಗೆ ಅನಂತಾಕಾಶದ ಸುನೀಲ ಆಹ್ವಾನದ ಮಧುರ ಆಕರ್ಷಣೆಯಿಂದ ತಪ್ಪಿಸಿಕೊಳ್ಳುವುದು ಅಸಾಧ್ಯವಾಯಿತು. ವಿವೇಕಾನಂದರ ಹೃದಯದಲ್ಲಿ ಪ್ರಚಂಡ ಶಕ್ತಿ ನಿರ್ಝರಿಣಿಯೊಂದು ವಿಶಾಲ ಜಗಜ್ಜೀವನ ಸಮುದ್ರ ಲಗ್ನಕ್ಕಾಗಿ ಮಸಗಿ ತುಳುಕಿ ಕುದಿದು ಹೋರಾಡತೊಡಗಿತು.

ಕಾರ್ಯ ಮುಗಿದ ಮೇಲೆ ಸ್ವಾಮಿಜಿ ಸಮಸ್ತ ಭಾರತಭ್ರಮಣ ಕೃತ ಸಂಕಲ್ಪರಾಗಿ ಭಾಗೀರಥಿಯ ಪಶ್ಚಿಮತೀರದಲ್ಲಿ ವಾಸಮಾಡುತ್ತಿದ್ದ ಶ್ರೀಮಾತೆ ಶಾರದಾ ಮಣಿದೇವಿಯವರನ್ನು ಕಂಡು ನಮಿಸಿ, "ಜನನಿ, ಎಲ್ಲಿಯವರೆಗೆ ಶ್ರೀಗುರು ಈಪ್ಸಿತ ಕಾರ್ಯವನ್ನು ಮಾಡಿ ಮುಗಿಸಲಾರೆನೋ ಅಲ್ಲಿಯವರೆಗೆ ನಾನು ಹಿಂತಿರುಗೆನು. ನೀವು ಆಶೀರ್ವಾದ ಮಾಡಿದರೆ ನನ್ನ ಸಂಕಲ್ಪ ಸಿದ್ಧಿಯಾಗುತ್ತದೆ" ಎಂದು ಬೇಡಿದರು. ಕರುಣಾಮಯಿಯಾದ ಶ್ರೀಜನನಿ ವೀರಪುತ್ರನ ತಲೆಯಮೇಲೆ ತನ್ನ ಕಲ್ಯಾಣ ಹಸ್ತವನ್ನಿಟ್ಟು ಶ್ರೀಗುರುದೇವನ ನಾಮಗ್ರಹಣ ಪೂರ್ವಕವಾಗಿ ಆಶೀರ್ವದಿಸಿದಳು.

ನವಶಕ್ತಿಯನ್ನು ಪಡೆದು ಬಂಧನಮುಕ್ತ ಕೇಸರಿಯಂತೆ ಸ್ವಾಮಿಜಿ ತಮ್ಮ ಮಹಾಪರ್ಯಟನೆಗೆ ಹೊರಟು, ಸ್ವಾಮಿ ಅಖಂಡಾನಂದರೊಡನೆ ಹಿಮಾಲಯ ಪರ್ವತದ ತಪ್ಪಲಿನಲ್ಲಿರುವ ಆಲ್ಮೋರಕ್ಕೆ ಬಂದರು. ಅಲ್ಲಿ ಕೆಲವು ದಿನಗಳು ಪ್ರಸಿದ್ಧನಾದೊಬ್ಬ ಸಂನ್ಯಾಸಿಯೊಡನೆ ವಾಸಿಸುತ್ತಿದ್ದರು. ಸ್ವಲ್ಪದಿನಗಳಲ್ಲಿ ಶಾರದಾನಂದ ಕೃಪಾನಂದರೂ ಅಲ್ಲಿಗೆ ಬಂದು ತಮ್ಮ ನಾಯಕನನ್ನು ಸೇರಿದರು. ಇಂತು ವರಾಹನಗರದ ಮಠದ ಸಂನ್ಯಾಸಿಗಳೆಲ್ಲ ಕಠೋರ ತಪಶ್ಚರ್ಯೆಗಾಗಿ ಹೊರಗೆ ಹೊರಟು ಕೆಲವರು ಹೃಷೀಕೇಶ ಹರಿದ್ವಾರಗಳಲ್ಲಿಯೂ ಕೆಲವರು ಹಿಮಾಲಯದ ನಿರ್ಜನ ನೀರವ ಗುಹಾಪ್ರಾಂತಗಳಲ್ಲಿಯೂ ವಾಸಿಸತೊಡಗಿದರು.

ಧೀರ ಹಿಮಾಲಯಗಳ ವೈರಾಗ್ಯೋದ್ದೀಪಕ ಮನೋಹರ ಗಾಂಭೀರ್ಯವು ಸ್ವಾಮಿಜಿಯ ಮನಸ್ಸನ್ನು ಅಂತರ್ಮುಖಿಯನ್ನಾಗಿ ಮಾಡಿತು. ಸೌಂದರ್ಯವು ದೇವರ ಕಣ್ಣಲ್ಲವೆ? ಒಂದು ದಿನ ರಾತ್ರಿ ಸ್ವಾಮಿಜಿ ಗುರುಭ್ರಾತೃಗಳಿಗೆ ಹೇಳದೆ ತಪಸ್ಸು ಮಾಡಲು ಹಿಮಮಯವಾದ ಗಿರಿಗುಹೆಗಳಲ್ಲಿ ಕಣ್ಮರೆಯಾದರು. ಶ್ವೇತವರ್ಣ! ಶ್ವೇತವರ್ಣ! ಎಲ್ಲೆಲ್ಲಿಯೂ ಶುಭ್ರ ತುಷಾರ ಶ್ವೇತವರ್ಣ! ನಿರ್ಜನ, ನೀರವ! ಸಮಾಧಿಸ್ಥವಾದ ಚಳಿವೆಟ್ಟಿನ ಗಂಭೀರಮೌನ! ವಿವೇಕಾನಂದರ ಧ್ಯಾನ ಸ್ತಿಮಿತ ಲೋಚನಗಳಲ್ಲಿ ಸತ್ಯದ ಶಾಶ್ವತಜ್ಯೋತಿಯ ಮಿಂಚಿನ ಹೊನಲು ಹರಿಯಿತು.

ಆದರೆ ಯಾವುದೋ ಒಂದು ಶಕ್ತಿ ಅವರನ್ನು ಹಿಮಾಲಯದ ಪರ್ವತ ಶ್ರೇಣಿಯ ಶುಭ್ರ ತುಷಾರಮಯ ನೀರವ ಗಂಭೀರ ಪ್ರಶಾಂತ ಶಿಖರಗಳಿಂದ ಗಡಿಬಿಡಿ ತುಂಬಿದ ಭಾರತವರ್ಷದ ನಿಮ್ನ ಪ್ರದೇಶಗಳಿಗೆ ಹಿಡಿದೆಳೆಯಿತು. ದೇಶಭಕ್ತ ಸಂನ್ಯಾಸಿ ಕಾರ್ಯಭಾರವನ್ನು ನೆನೆದು ಸಮಾಧಿ ಸುಖವನ್ನು ಮೂಲೆಗೊತ್ತಿ ಕೆಳಗಿಳಿದನು.

ಅಲ್ಲಿಂದ ಸ್ವಾಮಿಜಿ ಸೋದರ ಸಂನ್ಯಾಸಿಗಳೊಡನೆ ತುಹಿನಗಿರಿಯ ಶುಭ್ರ ರಮಣೀಯತೆಯನ್ನು ಅನುಭವಿಸುತ್ತ ಗರ್ವಾಲ್ ಪ್ರಾಂತವನ್ನು ಪ್ರವೇಶಿಸಿದರು. ಅಲ್ಲಿಂದ ಅಲಕನಂದೆಯ ತೀರದಲ್ಲಿರುವ ಕರ್ಣಪ್ರಯಾಗದ ಮಾರ್ಗವಾಗಿ ರುದ್ರ ಪ್ರಯಾಗಕ್ಕೆ ಬಂದರು. ಅಲ್ಲಿರುವ ಬಣ್ಣನೆಗೆ ನಿಲುಕದಿಹ ಚೆಲ್ವಿನ ನೋಟಗಳ, ನೀರೋಟಗಳ, ಪಸುರ್ದೋಟಗಳ ಶಾಂತಿ ಸೌಂದರ್ಯಗಳನ್ನು ಆಸ್ವಾದಿಸುತ್ತ ನೋಡುತ್ತ ಸೌಂದರ್ಯ ದೇವತೆಯ ಕಣ್ಣಿನಂತೆ ಮೆರೆಯುತ್ತಿರುವ ಸುಂದರ ಶ್ರೀನಗರಕ್ಕೆ ಬಂದರು. ಅಲ್ಲಿಂದ ಬದರಿಕಾಶ್ರಮಕ್ಕೆ ಹೋಗಿ ಬರುವಾಗ ಹಾದಿಯಲ್ಲಿ ಟೆಹರಿ ಸಂಸ್ಥಾನಕ್ಕೆ ಬಂದಿಳಿದರು. ಅಷ್ಟರಲ್ಲಿ ಸ್ವಾಮಿ ಅಖಂಡಾನಂದರು ಅಸ್ವಸ್ಥರಾದುದರಿಂದ ಎಲ್ಲರೂ ಡೆಹರಾಡೂನಿಗೆ ಬಂದರು. ಅಖಂಡಾನಂದರು ಸ್ವಸ್ಥರಾದರು. ಮುಂದೆ ಪವಿತ್ರ ಕ್ಷೇತ್ರವಾದ ಹೃಷೀಕೇಶ! ವ್ಯಾಸರಾಶ್ರಮವಿದ್ದುದಲ್ಲಿಯೆ! ಅಲ್ಲಿಯೆ ವೇದಗಳನ್ನು ಸಂಗ್ರಹಿಸಿದುದು! ಹೃಷೀಕೇಶವು ತುಹಿನಶೈಲಗಳ ಪದತಳದಲ್ಲಿರುವ ಮನೋಹರವಾದ ಪ್ರದೇಶ. ಗಂಗೆಯ ತೀರದ ಪಾವನ ಕುಟೀರ! ಸಾವಿರಾರು ಸಾಧುಗಳ, ನೂರಾರು ಯೋಗಿಗಳ, ಲಕ್ಷಾಂತರ ಯಾತ್ರಿಕರ ಮೇಳಭೂಮಿ! ಸ್ವಾಮಿಗಳು ಅದರ ವಿಚಾರವಾಗಿ ಹೀಗೆಂದು ಬರೆದಿರುತ್ತಾರೆ:

“ಹೃಷೀಕೇಶದಲ್ಲಿರುವ ಗಂಗೆಯ ಚಿತ್ರ ನೆನಪಿನಲ್ಲಿದೆಯೆ? ಎಂತಹ ನಿರ್ಮಲ ನೀಲಾಭ ಸಲಿಲ! ಸುಳಿಗಳಿಂದ ತಪ್ಪಿಸಿಕೊಂಡು ಸುಳಿದಾಡುವ ಹೊಳೆ ಹೊಳೆಯುವ ಮೀನುಗಳು! ಆ ಅಪೂರ್ವ ಸುಸ್ವಾದ ಹಿಮಶೀತಲ ವಾರಿ! ಆ ಅದ್ಭುತವಾದ ‘ಹರ! ಹರ!’ ಎಂಬ ತರಂಗವಾಣಿ! ಆ ನೀರವ ಗಿರಿ ನಿರ್ಝರಗಳ ‘ಹರ! ಹರ! ಹರ!’ ಎಂಬ ಪ್ರತಿಧ್ವನಿ! ಆ

ವಿಪಿನವಾಸ, ಆ ಮಧುಕರೀ ಭಿಕ್ಷೆ; ಆ ಗಂಗೆಯ ವಿಶಾಲ ವಕ್ಷಸ್ಥಳದಿಂದ ಮೇಲೆದ್ದಿರುವ ಸಣ್ಣ ಸಣ್ಣ ದ್ವೀಪಗಳಂತಹ ಬಂಡೆಗಳು! ಅವುಗಳ ಮೇಲೆ ಕುಳಿತು ಬೊಗಸೆ ಬೊಗಸೆಯಾಗಿ ನೀರೀಂಟುವ ದೃಶ್ಯ! ಅಲ್ಲಿಯ ಮತ್ಸ್ಯಗಳಿಗೆ ಎಷ್ಟು ನಿರ್ಭರತೆ? ಆ ಗಂಗೆಯ ಪ್ರೀತಿ! ಆ ಗಂಗೆಯ ಮಹಿಮೆ! ಆ ಗಂಗೆಯ ವೈರಾಗ್ಯಪ್ರದ ಸ್ಪರ್ಶ! ಪಶ್ಚಿಮದೇಶಗಳಿಗೆ ಹೋಗುವಾಗ ನಾನೂ ಸ್ವಲ್ಪ ಗಂಗಾಜಲವನ್ನು ತೆಗೆದುಕೊಂಡು ಹೋಗಿದ್ದೆ, ಗೊತ್ತಾಯಿತೆ! ನಡುನಡುವೆ ಒಂದೊಂದು ಹನಿಯನ್ನು ಬಾಯಿಗೆ ಹಾಕಿಕೊಳ್ಳುತ್ತಿದ್ದೆ. ಆ ಪಾಶ್ಚಾತ್ಯ ಜನಗಳ ಗೊಂದಲದ ನಡುವೆ, ಅವರ ನವನಾಗರಿಕತೆಯ ಕಲ್ಲೋಲದ ನಡುವೆ, ಆ ಕೋಟಿ ಕೋಟಿ ಮಾನವನ ಉನ್ಮತ್ತಪ್ರಾಯವಾದ ದ್ರುತಪದ ಸಂಚಾರದ ನಡುವೆ, ಮನಸ್ಸು ಸ್ವಲ್ಪ ಸ್ಥಿರವಾಗುತ್ತಿತ್ತು. ಆ ಜನ, ಆ ಧೂಳಿ, ಆ ಹೋರಾಟ, ಆ ವಿಲಾಸ ಕ್ಷೇತ್ರ, ಆ ಅಮರಾವತಿ ಸದೃಶವಾದ ಪ್ಯಾರಿಸ್, ನ್ಯೂಯಾರ್ಕ್, ಬರ್ಲಿನ್, ರೋಮ್ ಎಲ್ಲವೂ ನಿಮಿಷಮಾತ್ರದಲ್ಲಿಯೆ ಮಾಯವಾಗಿ, ಕೇಳುತ್ತಿತ್ತು ಕಿವಿಗಳಿಗೆ ಆ 'ಹರ! ಹರ! ಹರ!' ತರಂಗ ವಾಣಿ; ತೋರುತ್ತಿತ್ತು ಕಂಗಳಿಗೆ ಆ ಹಿಮಾಲಯ ವಕ್ಷಸ್ಥ ವಿಜನ ವಿಪಿನ; ಆ ಕಲ್ಲೋಲಿನಿಯಾದ ಸುರತರಂಗಿಣಿಯ ರಮ್ಯರಮಣೀಯವಾದ ಸ್ವರ್ಗೀಯ ದೃಶ್ಯ! ಕರೆಯುತ್ತಿತ್ತು ನನ್ನನ್ನು ಅದೇ 'ಹರ! ಹರ! ಹರ!' ಎಂಬ ತೆರೆತೆರೆಗಳ ಮುದ್ದಿನ ಜೋಗುಳದಿಂಪು!"

ಹೃಷೀಕೇಶದಲ್ಲಿ ಸ್ವಾಮಿಗಳು ಪುನಃ ಕಠೋರ ಸಾಧನೆಗಳನ್ನು ಮಾಡಲು ಪ್ರಾರಂಭಿಸಿದರು. ಆದರೆ ಗುರುದೇವನ ಇಚ್ಛೆ ಬೇರೆಯಾಗಿತ್ತು; ಸ್ವಾಮಿಜಿ ಕಾಯಿಲೆ ಬಿದ್ದರು. ದಿನದಿನಕ್ಕೂ ರೋಗ ಪ್ರಬಲವಾಯಿತು. ಕಡೆಗೆ ಭೀಷಣಾವಸ್ಥೆಯನ್ನೂ ಹೊಂದಿತು. ಮಾತು ನಿಂತುಹೋಯಿತು. ಸೋದರ ಸಂನ್ಯಾಸಿಗಳು ನಾಯಕನಿಗೆ ಅಂತಿಮ ಕಾಲ ಸಮೀಪಿಸಿತೆಂದು ಶೋಕೋದ್ವೇಗಗಳಿಂದ ಅಧೀರರಾಗಿ ಕಂಗೆಟ್ಟು ಭಗವನ್ನಾಮಸ್ಮರಣೆ ಮಾಡತೊಡಗಿದರು. ಅಷ್ಟರಲ್ಲಿ ಯಾರೋ ಹೊರಗಡೆ ಬಂದಂತೆ ತರಗೆಲೆಗಳ ಸದ್ದಾಯಿತು. ಅಪರಿಚಿತ ಸಂನ್ಯಾಸಿಯೊಬ್ಬನು ಕುಟೀರ ಪ್ರವೇಶ ಮಾಡಿ, ಗೋಳಾಡುತ್ತಿದ್ದ ಸಂನ್ಯಾಸಿಗಳಿಂದ ವಿಷಯವೆಲ್ಲವನ್ನೂ ತಿಳಿದು, ತನ್ನ ಜೋಳಿಗೆಯಿಂದ ಯಾವುದೊ ಒಂದು ಔಷಧಿಯನ್ನು ತೆಗೆದು, ಪ್ರಜ್ಞಾಹೀನರಾಗಿ ದರಿದ್ರಶಯ್ಯೆಯಲ್ಲಿ ಪವಡಿಸಿದ್ದ ಸ್ವಾಮಿಗಳ ಬಾಯಲ್ಲಿ ಹಾಕಿ, ಬಂದಂತೆಯೆ ಹೊರಟುಹೋದನು. ಸ್ವಾಮಿಗಳಿಗೆ ಸ್ವಲ್ಪ ಹೊತ್ತಾದ ಮೇಲೆ ಪ್ರಜ್ಞೆ ಬಂತು. ಬಹುಕಷ್ಟದಿಂದ ಮಾತಾಡಿದರು. ಗುರುಭಾಯಿಯೊಬ್ಬನು ಅವರ ಮುಖದ ಬಳಿ ಕಿವಿಯೊಡ್ಡಿ ಆಲಿಸಿದನು. "ಸೋದರರಿರಾ, ನಿಮಗೆ ಭಯ ಬೇಡ; ನಾನು ಸಾಯುವುದಿಲ್ಲ" ಎಂದು ಕೇಳಿಸಿತು. ಸ್ವಲ್ಪ ಹೊತ್ತಿನಲ್ಲಿ ಸ್ವಾಮಿಜಿ ಎದ್ದು ಕುಳಿತುಕೊಂಡು "ನಾನು ಜ್ವರಮೂರ್ಛೆಯಲ್ಲಿದ್ದಾಗ ಕಂಡೆ. ನಾನು ಮಾಡಬೇಕಾದ ಕಾರ್ಯ ಬಹಳವಿದೆ. ಅದು ಪೂರೈಸುವವರೆಗೂ ದೇಹತ್ಯಾಗ ಮಾಡೆ" ಎಂದರು.

ಸುಸ್ವಸ್ಥರಾದ ಮೇಲೆ ಸ್ವಾಮಿಜಿ ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಭಾರತವರ್ಷವನ್ನೆಲ್ಲ ಸಂಚರಿಸಬೇಕೆಂಬ ಸಂಕಲ್ಪ ಮಾಡಿ, ಸೋದರ ಸಂನ್ಯಾಸಿಗಳನ್ನು ಬಳಿಗೆ ಕರೆದು, "ನಾನು ಇಲ್ಲಿಂದ ಹೊರಟು ಏಕಾಂಗಿಯಾಗಿ ಸಂಚರಿಸಬೇಕೆಂದು ಮನಸ್ಸು ಮಾಡಿದ್ದೇನೆ. ಆದ್ದರಿಂದ ನಿಮ್ಮಲ್ಲಿ ಯಾರೊಬ್ಬರೂ ನನ್ನನ್ನು ಹಿಂಬಾಲಿಸಬಾರದು" ಎಂದರು. ಸ್ವಾಮಿ ಅಖಂಡಾನಂದರು ತಾವು ಅವರ ಸೇವಾರ್ಥವಾಗಿ ಜೊತೆಯಲ್ಲಿರುತ್ತೇನೆ ಎಂದಾಗ ಸ್ವಾಮಿಜಿ "ನಿನ್ನ ಸ್ನೇಹಬಂಧವೂ ನನ್ನ ಕಾರ್ಯಕ್ಕೆ ಅಂತರಾಯ ಸ್ವರೂಪವಾಗಿದೆ. ಯಾರ ಸಂಗವು ಸ್ನೇಹಭಾವವನ್ನು ಉದ್ರೇಕಗೊಳಿಸುವುದೋ ಅವರ ಜೊತೆ ತರವಲ್ಲ. ಸೋದರ ಸಂನ್ಯಾಸಿಗಳ ಮಮತೆಯೂ ಒಂದು ವಿಧವಾದ

ಮಾಯೆಯೆ. ಆದ್ದರಿಂದ ನೀವಾರೂ ಅನುಸರಿಸಬಾರದು" ಎಂದು ನಾನಾ ಪ್ರಕಾರವಾಗಿ ವಾದಿಸಿ ಅಲ್ಲಿಂದ ಹೊರಟು, ಸಾಧುಗಳ ಪವಿತ್ರಾಸ್ಥಿಗಳಿಂದಲೂ ವೀರ ಸತಿಯರ ಶೋಣಿತದಿಂದಲೂ ಪೂತವಾದ, ಪ್ರತಾಪಸಿಂಹ ಪದ್ಮಿನಿಯರ ದೇಶವಾದ, ರಾಜಪುತ್ರಸ್ಥಾನವನ್ನು ಪ್ರವೇಶಿಸಿದರು.

ಇಂತು ೧೮೯೧ರಲ್ಲಿ ಅನಿಶ್ಚಿತ ನಾಮಧೇಯರಾಗಿದ್ದ ಸ್ವಾಮಿಜಿ ಈ ನಮ್ಮ ಮಹಾಭಾರತ ಮಹಾಮಾನವ ಸಾಗರದಲ್ಲಿ ಮಗ್ನರಾಗಿ ಸೋದರಸಂನ್ಯಾಸಿಗಳ ದೃಷ್ಟಿಗೆ ಮರೆಯಾಗಿಬಿಟ್ಟರು. ಅವರಿಗಿನ್ನೂ ಯಾವ ಹೆಸರೂ ನಿಶ್ಚಿತವಾಗಿರಲಿಲ್ಲ. ಅವರ ಪರ್ಯಟನಕ್ಕೆ ಗೊತ್ತಾಗಲಿ ಗುರಿಯಾಗಲಿ ಇರಲಿಲ್ಲ. ಉದ್ದೇಶವೂ ಇತ್ತೆಂದು ಹೇಳಲಾಗುವುದಿಲ್ಲ ಅಥವಾ ಇದ್ದರೂ ಅರೂಪವಾಗಿತ್ತೆಂದು ಹೇಳಬೇಕಾಗುತ್ತದೆ. ಆದ್ದರಿಂದ ಎಲ್ಲಿಯೆಂದರೆ ಅಲ್ಲಿ, ಯಾವಾಗೆಂದರೆ ಆಗ, ಯಾರೊಡನೆಂದರೆ ಅವರೊಡನೆ ಯಃಕಶ್ಚಿತ್ ಕಾಷಾಯಧಾರಿಮಾತ್ರರಾಗಿ ಅನೇಕರ ಮಧ್ಯೆ ತಾವೂ ಒಬ್ಬರಾಗಿ ತಿರುಗಿದರು. ಆದರೆ ಕಣ್ಣುಬಿಟ್ಟುಕೊಂಡು ತಿರುಗಿದರು.

ಆ ಮಹಾಯಾತ್ರೆ ಮಹಾಫಲಗರ್ಭಿತವಾಗಿತ್ತು. ಬಹುಶಃ ಸ್ವಾಮಿಗಳಿಗೂ ಕೂಡ ಅದರ ಸಂಪೂರ್ಣ ಪ್ರಭಾವವು ವೇದ್ಯವಾಗಿರದಿದ್ದರೂ ಇರಬಹುದು. ನರೇಂದ್ರನ ವ್ಯಕ್ತಿತ್ವ ಪರಿಚಯಕ್ಕೆ ಪಾಶ್ಚಾತ್ಯ ವಿದ್ಯಾ ಪ್ರಭಾವದ ಅರಿವೂ ಪ್ರಾಚ್ಯ ವಿದ್ಯಾ ಪ್ರತಿನಿಧಿ ಸ್ವರೂಪವಾದ ಶ್ರೀರಾಮಕೃಷ್ಣ ಪರಮಹಂಸರ ಪ್ರಭಾವದ ಅರಿವೂ ಅವಶ್ಯಕವಾಗಿರುವಂತೆಯೆ ದೇಶಭಕ್ತ ಸ್ವಾಮಿ ವಿವೇಕಾನಂದರ ವ್ಯಕ್ತಿತ್ವದ ಪರಿಚಯಕ್ಕೆ ಅವರ ಭಾರತ ಪರ್ಯಟನದ ಅರಿವೂ ಆವಶ್ಯಕ. ಏಕೆಂದರೆ ಆ ಮಹಾಯಾತ್ರೆಯ ಕಾಲದಲ್ಲಿಯೆ ಅವರ ಕುದಿಯುತ್ತಿದ್ದ ತರುಣ ರಕ್ತವು ಭಾರತ ಮಾತೆಯ ದುಃಖ ದಾರಿದ್ರ್ಯಗಳ ದರ್ಶನ ಸ್ಪರ್ಶನಗಳ ದೆಸೆಯಿಂದ ಉಕ್ಕಿಬಂದ ಕಣ್ಣೀರಿನಿಂದ ಒಂದಿನಿತು ತೆಳುವಾಗಿ ಹದಗೊಂಡುದು. ಆ ಕಾಲದಲ್ಲಿಯೆ ಸಮಾಧಿಯ ಮರ್ಮಸುಖದಿಂದ ವಿಮುಖವಾಗಿ ಅವರ ಆತ್ಮವು ಲೋಕಾನುಗ್ರಹದ ಕರ್ಮಜೀವನದ ಕಡೆಗೆ ಒಲೆದೊಲಿದು ಕಂಕಣಬದ್ಧವಾದುದು. ಆ ಕಾಲದಲ್ಲಿಯೆ ದೇಶದ ದೌರ್ಬಲ್ಯವನ್ನೂ ದಾರಿದ್ರ್ಯವನ್ನೂ ದುಸ್ಥಿತಿಯನ್ನೂ ದಾಸ್ಯವನ್ನೂ ಕಂಡು ಕಂಡು ಕೆಂಪಾದ ಅವರ ಕಣ್ಗಳಿಂದ, ಅವುಗಳನ್ನೆಲ್ಲ ದಹಿಸಲೆಂದು, ದಳ್ಳುರಿ ದಾಳಿಯಿಡತೊಡಗಿದುದು.

ಭಾರತವರ್ಷದಲ್ಲಿ ಆಗ ತಾನೆ ಮೊಳೆದೋರುತ್ತಿದ್ದ ರಾಷ್ಟ್ರೀಯತೆಯ ಮತ್ತು ಸ್ವಾತಂತ್ರ್ಯದ ಭಾವದೀಪಾಂಕುರವು, ಸಂನ್ಯಾಸಿಯಾಗಿದ್ದರೂ ಸುಮಾರು ಇಪ್ಪತ್ತೆಂಟು ವಯಸ್ಸಿನ ವಂಗ ತರುಣ ನರೇಂದ್ರನಾಥದತ್ತನೂ ಆಗಿದ್ದ ಸ್ವಾಮಿಜಿಯ ಎದೆಯ ಬತ್ತಿಗೆ ತಗುಲಿ, ಅಲ್ಲಿ ಬೆಂಕಿ ಹೊತ್ತಿಸದಿರಲಿಲ್ಲ.

ಇಂದು ತಿರುಕರೊಡನೆ ತಿರುಕನಾಗಿ, ನಾಳೆ ಶ್ರೀಮಂತರೊಡನೆ ಅವರ ಗೌರವಕ್ಕೂ ಪೂಜೆಗೂ ಪಾತ್ರನಾಗಿ, ಇಂದು ಬಡವರ ಗುಡಿಸಲಿನಲ್ಲಿ ಬಡವನಾಗಿ ಮಲಗಿ, ನಾಳೆ ರಾಜರ ಮನೆಗಳಲ್ಲಿ ದೊರೆಗೆ ದೊರೆಯಾಗಿ ಬಾಳಿ, ಇಂದು ಪಂಡಿತರೊಡನೆ ಕಲೆತು ಕಲಿತು, ನಾಳೆ ಪಾಮರರೊಡನೆ ಮಿಳಿತವಾಗಿ ಅವರ ಜೀವನದ ನಾಡಿಯನ್ನು ಪರೀಕ್ಷಿಸಿ ತಿಳಿದು, ಇಂದು ಸನ್ಮಾನಿತನಾಗಿ ಪುರಸ್ಕೃತನಾಗಿ, ನಾಳೆ ಅವಮಾನಿತನಾಗಿ ತಿರಸ್ಕೃತನಾಗಿ, ಇಂದು ಸರಕಾರದ ಪಕ್ಷವಾಗಿರುವ ಅಧಿಕಾರಿಗಳ ಸೇವಾ ಶುಶ್ರೂಷೆಗಳನ್ನು ಸ್ವೀಕರಿಸುತ್ತಾ, ನಾಳೆ ರಾಜದ್ರೋಹಿಗಳೆಂದೆನಿಸಿಕೊಳ್ಳುವ

ಮಹಾ ದೇಶಭಕ್ತರ ಪ್ರಿಯ ಅತಿಥಿಯಾಗಿ ವಿಷಯಗಳನ್ನು ಸಂಗ್ರಹಿಸುತ್ತಾ ಅನಾಮಧೇಯನೂ ಅಜ್ಞಾತನೂ ಆದ ವೀರ ಸಂನ್ಯಾಸಿ ಸಮಸ್ತ ಭಾರತದ ಮನೋಮೂರ್ತಿಯಾಗುತ್ತಿದ್ದನು; ಭಾರತವರ್ಷದ ಮಹಾ ಆತ್ಮದ ಅವತಾರಸ್ವರೂಪಿಯಾಗಿ ಸ್ವಾಮಿ ವಿವೇಕಾನಂದರಾಗುತ್ತಿದ್ದರು.

ಸ್ವಾಮಿಜಿ ಆಳ್ವಾರ್ ಸಂಸ್ಥಾನದಲ್ಲಿ ದೊಡ್ಡ ಮನುಷ್ಯರೊಬ್ಬರ ಅತಿಥಿಯಾಗಿದ್ದಾಗ ಅವರ ಧಾರ್ಮಿಕ ವ್ಯಕ್ತಿತ್ವಕ್ಕೆ ಮನಸ್ಸು ಸೋತು ಮೌಲ್ವಿಯೊಬ್ಬನು ಅವರನ್ನು ತನ್ನ ಮನೆಗೆ ಊಟಕ್ಕೆ ಕರೆಯಬೇಕೆಂದು ಮನಸ್ಸು ಮಾಡಿದನು.

ಆದರೆ ಸ್ವಾಮಿಜಿ ಮ್ಲೇಚ್ಛರ ಮನೆಯಲ್ಲಿ ಊಟಮಾಡುವರೋ ಇಲ್ಲವೋ ಎಂಬ ಸಂದೇಹವುಂಟಾಯಿತು. ಮತ್ತೆ ಸ್ವಾಮಿಜಿ ಜ್ಞಾನಿ; ಅವರಿಗೆ ಈ ಭೇದಗಳು ಇಲ್ಲ ಎಂದುಕೊಂಡನು. ಆದರೆ ಸ್ವಾಮಿಜಿಯೇನೋ ಒಪ್ಪಬಹುದು. ಮನೆಯ ಯಜಮಾನ ಶಂಭುನಾಥನು ಒಪ್ಪದಿದ್ದರೆ! ಮೌಲ್ವಿ ಪಂಡಿತನ ಬಳಿಗೆ ಹೋಗಿ "ಪಂಡಿತಜಿ, ನಾನು ಸ್ವಾಮಿಜಿಯನ್ನು ಊಟಕ್ಕೆ ಕರೆಯಬೇಕೆಂದು ಇದ್ದೇನೆ. ದಯಮಾಡಿ ತಾವು ಅಪ್ಪಣೆ ಕೊಡಬೇಕು. ಬ್ರಾಹ್ಮಣರಿಂದ ಅಡಿಗೆ ಮಾಡಿಸುತ್ತೇನೆ. ಬ್ರಾಹ್ಮಣರಿಂದಲೆ ಬಡಿಸುತ್ತೇನೆ. ಬ್ರಾಹ್ಮಣರಿಂದಲೆ ಬಟ್ಟಲು ತೊಳೆಯಿಸುತ್ತೇನೆ. ಈ ಯವನನು ದೂರದಲ್ಲಿ ಕುಳಿತು ಅವರು ಪ್ರಸಾದ ಸ್ವೀಕಾರ ಮಾಡುವುದನ್ನು ಮಾತ್ರ ನೋಡುತ್ತಾನೆ" ಎಂದನು. ಇದನ್ನು ಕೇಳಿ ಅಲ್ಲಿದ್ದವರೆಲ್ಲರೂ ನಕ್ಕರು. ಪಂಡಿತನು ಮೌಲ್ವಿಯ ಕೈಯನ್ನು ಹಿಡಿದುಕೊಂಡು "ಸಾಹೇಬ್, ಏನು ನೀವು ಹೇಳುವುದು? ಸ್ವಾಮಿಜಿ ಸಂನ್ಯಾಸಿ, ಸಂನ್ಯಾಸಿಗೆ ಜಾತಿಯೆಂದರೇನು? ಅದಕ್ಕೆ ನಾನೇನೂ ಅಡ್ಡಿ ಮಾಡೆನು. ನಿಮ್ಮಂತಹ ಮನೆಯಲ್ಲಿ ನಾನು ಕೂಡ ಉಣಬಲ್ಲೆ! ಇನ್ನು ಮುಕ್ತರಾದ ಸ್ವಾಮಿಜಿಯ ಮಾತೇನು?" ಎಂದನು. ಅಂತೂ ಮೌಲ್ವಿಯ ಇಚ್ಛೆ ಸಾಂಗವಾಗಿ ನೆರವೇರಿತು.

ಮಹಾಸಾಧುವೊಬ್ಬನು ನಗರದಲ್ಲಿದ್ದಾನೆ ಎಂಬ ಸುದ್ದಿ ಸಂಸ್ಥಾನದ ದಿವಾನರ ಕಿವಿಗೆ ಬಿತ್ತು. ಅವರು ಆಂಗ್ಲೇಯ ಸಂಸ್ಕೃತಿಯ ಬಲೆಗೆ ಸಿಕ್ಕಿಬಿದ್ದಿದ್ದ ತಮ್ಮ ಮಹಾರಾಜರಾದ ಮಂಗಳಸಿಂಗರು ತೇಜಸ್ವಿಯಾದ ಸಾಧುವಿನ ಪ್ರಭಾವದಿಂದಾದರೂ ಬೇರೆಯ ಹಾದಿಗೆ ತಿರುಗಬಹುದೆಂದು ಯೋಚಿಸಿ ಅವರಿಗೆ ಸ್ವಾಮಿಜಿಯ ಪರಿಚಯ ಮಾಡಿಸಿದರು.

"ಸ್ವಾಮಿಜಿ, ನೀವು ದೊಡ್ಡ ಪಂಡಿತರು. ಬೇಕಾದಷ್ಟು ಧನಾರ್ಜನೆ ಮಾಡುವ ಶಕ್ತಿಯಿದೆ. ಆದರೂ ಫಕೀರರಂತೇಕೆ ಅಲೆಯುವುದು?" ಎಂದು ಮಂಗಳಸಿಂಗರು ಕೇಳಿದರು.

"ಮಹಾರಾಜ, ನೀನು ರಾಜನ ಕರ್ತವ್ಯಗಳನ್ನು ತ್ಯಜಿಸಿ ಫರಂಗಿಯವರೊಡನೆ ಸೇರಿ, ಯಾವಾಗಲೂ ಬೇಟೆಯಲ್ಲಿ ಕಾಲ ಕಳೆಯುವುದೇಕೆ?" ಎಂದರು ಸ್ವಾಮಿಗಳು. ಬಳಿಯಲ್ಲಿಯೆ ನಿಂತಿದ್ದ ಅಧಿಕಾರಿಗಳು ಸ್ತಂಭಿತರಾದರು. 'ಏನು ಧೈರ್ಯ ಈ ಸಾಧುವಿಗೆ' ಎಂದುಕೊಂಡರು. ಮಹಾರಾಜನು ಸ್ವಲ್ಪ ಚಿಂತಿಸಿ, "ಏತಕ್ಕೆ ಹಾಗೆ ಮಾಡುವೆನೊ ನಾನರಿಯೆ. ಅಂತೂ ಅದರಲ್ಲಿ ನಮಗೆ ಇಚ್ಛೆ" ಎಂದನು.

"ಅದೇ ನನ್ನ ಫಕೀರತನಕ್ಕೂ ಕಾರಣ!" ಎಂದರು ಸ್ವಾಮಿಗಳು.

“ಬಾಬಾಜಿ, ನನಗೆ ಮೂರ್ತಿಪೂಜೆಯಲ್ಲಿ ನಂಬುಗೆಯಿಲ್ಲ. ನನ್ನ ಗತಿ ಏನಾಗುವುದು?” ಎಂದು ಮಂಗಳಸಿಂಗರು ದರಹಸಿತರಾದರು.

“ಏನು ನನ್ನೊಡನೆ ಸರಸವಾಡುವಿರೇನು?”

“ಇಲ್ಲ ಸ್ವಾಮಿಜಿ, ಹಾಗಲ್ಲ. ನನಗೆ ನಿಜವಾಗಿಯೂ ನಂಬುಗೆಯಿಲ್ಲ. ಕಲ್ಲು, ಮರ, ಲೋಹಗಳನ್ನು ನಾನು ಪೂಜಿಸಲಾರೆ. ಅದರಿಂದ ನನಗೆ ಪರಲೋಕದಲ್ಲಿ ದುರ್ಗತಿಯುಂಟಾಗುವುದೇ?”

“ಇರಲಿ, ತಪ್ಪೇನು ಅದರಿಂದ! ಅವರವರ ಭಾವದಂತೆ ಅವರವರು ಪೂಜಿಸಲಿ.” ಬಳಿಯಿದ್ದ ಅಧಿಕಾರಿಗಳು ಬೆರಗಾದರು. ಸ್ವಾಮಿಜಿ ಮೂರ್ತಿಗಳ ಮುಂದೆ ಭಾವಾವಿಷ್ಟರಾಗಿ ಕಂಬನಿಗರೆದುದನ್ನು ನೋಡಿದ್ದರವರು. ಆದ್ದರಿಂದ ಮೂರ್ತಿಪೂಜೆಯ ಪರವಾಗಿ ವಾದಿಸುವರೆಂದು ತಿಳಿದಿದ್ದರು.

ಇದ್ದಕ್ಕಿದ್ದ ಹಾಗೆ ಸ್ವಾಮಿಜಿ ಗೋಡೆಗೆ ತಗುಲಿ ಹಾಕಿದ್ದ ಒಂದು ಭಾವಚಿತ್ರವನ್ನು ನೋಡಿ “ಅದಾರ ಚಿತ್ರ?” ಎಂದು ಕೇಳಿದರು. ದಿವಾನರು “ಮಹಾರಾಜರದು” ಎಂದರು. ಪ್ರಶ್ನೆಯ ರಹಸ್ಯವನ್ನು ಅರಿಯಲಾರದೆ ಎಲ್ಲರೂ ವಿಸ್ಮಿತರಾದರು. ಸ್ವಾಮಿಜಿ ಆ ಚಿತ್ರವನ್ನು ಕೈಲಿ ಹಿಡಿದುಕೊಂಡು “ಇದರ ಮೇಲೆ ಉಗುಳಿರಿ!” ಎಂದು ದಿವಾನರಿಗೆ ಹೇಳಿದರು. ಅವರೆದೆಗೆ ಸಿಡಿಲು ಬಡಿದಂತಾಯಿತು. “ನಿಮ್ಮಲ್ಲಿ ಯಾರಾದರೂ ಇದರ ಮೇಲೆ ಉಗುಳಿರಿ!” ಎಂದು ಸ್ವಾಮಿಜಿ ಗರ್ಜಿಸಿದರು. ಎಲ್ಲರೂ ಬೆದರಿದರು. ದಿವಾನರು “ಬಾಬಾಜಿ, ನೀವು ಹೇಳುವುದು ಏನು ಮಾತು? ಅದು ನಮ್ಮ ರಾಜರ ಚಿತ್ರ. ಅದರ ಮೇಲೆ ಹೇಗೆ ಉಗುಳುವುದು?” ಎಂದರು.

“ಆದರೇನು? ಇಲ್ಲಿ ನಿಮ್ಮ ಮಹಾರಾಜರು ಕುಳಿತಿಲ್ಲ! ಇದರಲ್ಲಿ ಅವರ ರಕ್ತವಿಲ್ಲ; ಮಾಂಸವಿಲ್ಲ! ಇದು ಬರಿಯ ಚಿತ್ರ! ಆದರೂ ನೀವು ಈ ಚಿತ್ರವನ್ನು ಮಹಾರಾಜರೆಂದೇ ಗೌರವಿಸುತ್ತೀರಿ. ಈ ಚಿತ್ರಕ್ಕೆ ಅವಮಾನ ಮಾಡಿದರೆ ಮಹಾರಾಜರಿಗೆ ಅವಮಾನ ಮಾಡಿದಂತಾಗುವುದೆಂದು ನಿಮ್ಮ ಭಾವ” ಎಂದು ಮಂಗಳಸಿಂಗರ ಕಡೆಗೆ ತಿರುಗಿ ಹೇಳತೊಡಗಿದರು: “ಮಹಾರಾಜ, ನೋಡಿದೆಯಾ; ಒಂದು ರೀತಿಯಲ್ಲಿ ನೋಡಿದರೆ ಈ ಚಿತ್ರ ನೀನಲ್ಲ. ಇನ್ನೊಂದು ರೀತಿಯಿಂದ ನೋಡಿದರೆ ನೀನು ಚಿತ್ರದಲ್ಲಿರುವೆ. ಆದ್ದರಿಂದ ನಿನ್ನ ಅಧಿಕಾರಿಗಳು ಅದನ್ನು ನೋಡಿದಾಗ ನಿನ್ನನ್ನು ನೆನೆಯುವರು. ಹಾಗೆಯೆ ಭಕ್ತರಿಗೆ ವಿಗ್ರಹವನ್ನು ನೋಡಿದಾಗ ಪರಮಾತ್ಮನ ನೆನಪಾಗುವುದು. ಅವರು ವಿಗ್ರಹ ಸೂಚಿಸುವ ಈಶ್ವರನನ್ನು ಪೂಜಿಸುವರೇ ಹೊರತು ವಿಗ್ರಹವನ್ನೇ ಪೂಜಿಸುವುದಿಲ್ಲ. ಯಾವ ಭಕ್ತನೂ ‘ಎಲೈ ಕಲ್ಲೇ, ಎಲೈ ಕಬ್ಬಿಣವೇ, ನನ್ನನ್ನು ಪೊರೆ’ ಎಂದು ಬೇಡುವುದಿಲ್ಲ. ಅವರವರ ಭಾವದಂತೆ ಅನಂತಭಾವಮಯನಾದ ದೇವರು ಅವರವರಲ್ಲಿ ತೋರುತ್ತಾನೆ.”

ಹೇಳುತ್ತ ಹೇಳುತ್ತ ಸ್ವಾಮಿಜಿಯ ವದನಮಂಡಲ ದಿವ್ಯತೇಜಸ್ಸಿನಿಂದ ರಂಜಿಸಿತು. ಮಹಾರಾಜರು ವಿನಯನಮ್ರ ವಚನದಿಂದ “ಸ್ವಾಮಿಜಿ, ತಮ್ಮ ಕೃಪೆಯಿಂದ ಮೂರ್ತಿಪೂಜೆಯ ರಹಸ್ಯ ನನಗಿಂದು ತಿಳಿಯಿತು. ನಿಮ್ಮಿಂದ ನನ್ನ ಕಣ್ಣು ತೆರೆದಂತಾಗಿದೆ” ಎಂದರು. ಸ್ವಾಮಿಗಳು ಹೊರಡಲೆಂದು ಮೇಲೇಳಲು ದೊರೆಗಳು “ಮಹಾರಾಜ್, ನನ್ನ ಮೇಲೆ

ಕೃಪೆಯಿರಬೇಕು" ಎಂದರು. ಸ್ವಾಮಿಗಳು ನಸುನಗುತ್ತ "ಭಗವಂತನೊಬ್ಬನೇ ಕೃಪೆ ಮಾಡಲು ಸಮರ್ಥ. ನೀನು ಭಕ್ತಿಭಾವದಿಂದ ಆತನ ಚರಣತಲದಲ್ಲಿ ಶರಣಾಗತನಾದರೆ ಎಲ್ಲವೂ ಸರಿಹೋಗುತ್ತದೆ" ಎಂದು ಆಶೀರ್ವದಿಸಿದರು.

ಸ್ವಾಮಿಜಿ ಹೊರಟುಹೋದ ಮೇಲೆ ಮಂಗಳಸಿಂಗರು ತಮ್ಮ ದಿವಾನರನ್ನು ಕುರಿತು, "ನಾನಿಂದಿನವರೆಗೂ ಇಂತಹ ಮಹಾಪುರುಷನನ್ನು ಕಂಡಿಲ್ಲ. ಆತನು ನನ್ನಾಲಯದಲ್ಲಿಯೇ ಇನ್ನೂ ಕೆಲವು ದಿನಗಳ ತನಕ ಇರುವಂತೆ ಹೇಗಾದರೂ ಮಾಡು" ಎಂದರು. ಅದಕ್ಕೆ ದಿವಾನರು ಆತನು "ಬೆಂಕಿಯ ಮುದ್ದೆ! ಸಿಡಿಲಾಳು! ನಮ್ಮ ಬೇಡಿಕೆಗೆ ಲಕ್ಷ್ಯ ಕೊಡುವನೋ ಇಲ್ಲವೋ ಸಂದೇಹ" ಎಂದರು.

ಆಳ್ವಾರಿನಿಂದ ಜಯಪುರಕ್ಕೆ ಹೋಗಿದ್ದ ಸ್ವಾಮಿಜಿ ಅಲ್ಲಿಂದ ಮನೋಹರವಾದ ಆಬೂ ಪರ್ವತಗಳಿಗೆ ಹೋದರು. ಅಲ್ಲಿ ಕೋಟಾ ಮಹಾರಾಜರ ಮಂತ್ರಿಗಳ ಭವನದಲ್ಲಿ ಇಳಿದುಕೊಂಡಿದ್ದಾಗ ಖೇತ್ರಿ ಮಹಾರಾಜರ ಅಂತರಂಗ ಸಚಿವರ ಪರಿಚಯವಾಯಿತು. ಆತನು ಸಾಧುವಿನ ವ್ಯಕ್ತಿತ್ವವನ್ನು ನೋಡಿ ಮುಗ್ಧನಾಗಿ ಈ ವಿಚಾರವನ್ನು ತಮ್ಮ ಮಹಾರಾಜರಿಗೆ ತಿಳಿಸಿದನು. ಮಹಾರಾಜರೂ ಬಂದು ಕಂಡು ಮುಗ್ಧರಾದರು. ಅವರು ಕೇಳಿದ ಮೊದಲನೆಯ ಪ್ರಶ್ನೆ "ಸ್ವಾಮಿಜಿ, ಜೀವನವೆಂದರೇನು?" "ಆತ್ಮ ಸ್ವಭಾವತಃ ವಿಕಾಸವಾಗಲೆಳಸುತ್ತಿರುವುದು; ಬಾಹ್ಯಪ್ರಕೃತಿ ಅದನ್ನು ಕೆಳಗೊತ್ತುತ್ತಿರುವುದು. ಈ ಜಡಚೇತನಗಳ ಹೋರಾಟದ ವ್ಯಾಪಾರವೆ ಜೀವನ" ಎಂದು ಹೇಳಿದ ಸ್ವಾಮಿಗಳಿಗೆ ಇನ್ನೂ ಅನೇಕ ಪ್ರಶ್ನೆಗಳನ್ನು ಹಾಕಿ ವಿಸ್ಮಯದಿಂದ ಕೇಳುತ್ತ ಕುಳಿತರು.

ಕೆಲವು ದಿನಗಳಲ್ಲಿಯೆ ಸ್ವಾಮಿಜಿ ಖೇತ್ರಿಗೆ ಹೋದರು. ಅಲ್ಲಿ ಮಹಾರಾಜರು ಸ್ವಾಮಿಗಳಿಂದ ದೀಕ್ಷೆ ತೆಗೆದುಕೊಂಡು ಅವರ ಶಿಷ್ಯರಾದರು. ಆಗ ಖೇತ್ರಿಯ ಆಸ್ಥಾನದಲ್ಲಿ ಒಬ್ಬ ಮಹಾಪಂಡಿತನಿದ್ದನು. ಆತನ ಬಳಿ ಸ್ವಾಮಿಜಿ ಪಾಣಿನಿ ಸೂತ್ರಗಳ ಮೇಲೆ ಪತಂಜಲಿ ಬರೆದಿರುವ ಮಹಾಭಾಷ್ಯವನ್ನು ಅಧ್ಯಯನ ಮಾಡಿದರು. ಪಂಡಿತನು ಕೆಲವು ದಿನಗಳಾದ ಮೇಲೆ "ಸ್ವಾಮಿಜಿ, ನನ್ನಲ್ಲಿರುವುದೆಲ್ಲಾ ಮುಗಿದುಹೋಯಿತು. ಇಂತಹ ಪ್ರತಿಭೆ ಮಾನವರಿಗೆ ಇದೆಯೆಂದು ನಿಮ್ಮನ್ನು ತಿಳಿಯದಿದ್ದರೆ ನಾನು ನಂಬುತ್ತಿರಲಿಲ್ಲ" ಎಂದನು. ಸ್ವಾಮಿಜಿ ಪಂಡಿತನಲ್ಲಿ ಅಧ್ಯಾಪಕಭಾವವನ್ನು ಶಾಶ್ವತವಾಗಿ ಇಟ್ಟಿದ್ದರು.

ಖೇತ್ರಿ ಮಹಾರಾಜರು ಸ್ವಾಮಿಜಿಯಲ್ಲಿಟ್ಟಿದ್ದ ಭಕ್ತಿ ವರ್ಣನಾತೀತವಾದುದು. ಸ್ವಾಮಿಜಿಯೂ ಖೇತ್ರಿ ಮಹಾರಾಜರಲ್ಲಿ ಅತ್ಯಂತ ಪ್ರೀತಿಯನ್ನು ಇಟ್ಟಿದ್ದರು. ಅವರ ಪತ್ರಾವಳಿಗಳಲ್ಲಿ ಬಹುಭಾಗ ಖೇತ್ರಿ ಮಹಾರಾಜರಿಗೆ ಬರೆದ ಪತ್ರಗಳು. ಒಂದು ದಿನ ರಾಜರು ಸ್ವಾಮಿಜಿಯೊಡನೆ ಏಕಾಂತದಲ್ಲಿರುವಾಗ "ಗುರುದೇವ, ನನಗೊಂದು ಗಂಡುಮಗು ಆಗುವಂತೆ ಆಶೀರ್ವಾದ ಮಾಡಬೇಕು" ಎಂದು ಪ್ರಾರ್ಥಿಸಿದರು. ಅದನ್ನು ಕೇಳಿ ಸ್ವಾಮಿಜಿ ಚಿಂತಾಮಗ್ನರಾದರು. ಮಹಾರಾಜರು ಪುನಃ ಪುನಃ ಕಾತರರಾಗಿ ಬೇಡಿಕೊಂಡರು. ಕಡೆಗೆ ಸ್ವಾಮಿಜಿ "ಶ್ರೀ ಗುರುದೇವನ ಕೃಪೆಯಿಂದ ನಿನ್ನ ಮನೋರಥ ಪೂರ್ಣವಾಗಲಿ" ಎಂದು ಹರಸಿದರು.

ಒಂದು ದಿನ ಆಸ್ಥಾನದ ಸುಪ್ರಸಿದ್ಧ ಗಾಯಕಿಯೊಬ್ಬಳು ತಾನು ಒಂದೇ ಒಂದು ಗೀತೆಯನ್ನು ಸ್ವಾಮಿಗಳ ಮುಂದೆ ಹಾಡುವಂತೆ ಕರುಣಿಸಬೇಕೆಂದು ಅಂಗಲಾಚಿ ಬೇಡಿಕೊಂಡಳು. ಮೊದಲು ಮೊದಲು ಸ್ವಾಮಿಗಳು ಒಪ್ಪಲಿಲ್ಲ. ತರುವಾಯ ಆಕೆ ಮತ್ತೆ ಮತ್ತೆ ಬೇಡಿಕೊಂಡು ಭಕ್ತಿ ಪ್ರದರ್ಶನ ಮಾಡಲು ಸ್ವಾಮಿಗಳು ಒಪ್ಪಿದರು. ಕಡೆಗೆ ಗಾಯಕಿ ಬಂದು ಯತಿಚಕ್ರೇಶನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಪಾದ ರೇಣುವನ್ನು ಶಿರಸಾವಹಿಸಿ ವೀಣೆಯನ್ನು ಮಿಡಿದು ಹಾಡತೊಡಗಿದಳು. ಆ ಗೀತೆ ದೇಶವಿನುತ ಭಕ್ತಕವಿ ಸೂರದಾಸನದಾಗಿತ್ತು:

ನೋಡದಿರೆನ್ನಯ ದೋಷವ, ದೊರೆಯೆ
ಸಮದರ್ಶಿಯು ನೀನಲ್ಲವೆ, ಹರಿಯೆ ‖
೧
ಗುಡಿಯೊಳು ಮೂರ್ತಿಯು ಕಬ್ಬಿಣವೊಂದು,
ಕಟುಕನ ಕತ್ತಿಯು ಮತ್ತೊಂದು;
ಪರುಸವೇದಿ ತಾ ಸೋಂಕಿದರೆರಡೂ
ತಳತಳಿಸದೆ ಚೆಂಬೊನ್ನಾಗಿ?
೨
ಯಮುನೆಯೊಳಿರುವುದು ನೀರ್ಪನಿಯೊಂದು,
ಕೊಚ್ಚೆಯೊಳಿರುವುದು ಮತ್ತೊಂದು;
ಆ ಹನಿಯೆರಡೂ ಮಂಗಳವಾಗವೆ
ಗಂಗೆಯ ಸೇರಲು ತೀರ್ಥದಲಿ?

ಸ್ವಾಮಿಜಿ ಆ ಸುಮಧುರ ಗಾನದ ಇಂಗಿತವನ್ನರಿತು ಕುಡುಕ ಚಾಂಡಾಲನನ್ನು ಎದುರುಗೊಂಡ ಮಹಾ ಅದ್ವೈತಿ ಶಂಕರಾಚಾರ್ಯರಂತಾದರು. ತಮ್ಮ ಅಜ್ಞಾನವನ್ನು ತಾವೆ ಹಳಿದುಕೊಂಡರು. ಪರಮಹಂಸರು ಪ್ರತಿಯೊಬ್ಬ ಸ್ತ್ರೀಯೂ ಜಗನ್ಮಾತೆಯ ಪ್ರತಿಬಿಂಬವೆಂದು ಹೇಳುತ್ತಿದ್ದ ಮಾತುಗಳು ನೆನಪಿಗೆ ಬಂದುವು. ಅಂದಿನಿಂದ ಆ ಗಾಯಕಿಯನ್ನು ತಾಯಿ ಎಂದು ಸಂಬೋಧಿಸತೊಡಗಿದರು. ಆಕೆಯೂ ಸ್ವಾಮಿಜಿಯನ್ನು ಪುತ್ರನಂತೆ ಕಂಡಳು.

ಸ್ವಾಮಿಜಿ ಖೇತ್ರಿಯಿಂದ ಹೊರಟು ಕಾಲುನಡಿಗೆಯಲ್ಲಿಯೆ ಗುಜರಾತಿನ ಮರುಮಯ ಪ್ರದೇಶಗಳನ್ನು ಅತಿಕ್ರಮಿಸಿ ಅಹಮದಾಬಾದು, ಲಿಂಬಡಿ, ಜುನಾಗಡ, ಭೋಜ, ಪ್ರಭಾಸ, ಸೋಮನಾಥ ಮೊದಲಾದುವುಗಳ ಮಾರ್ಗವಾಗಿ ಪೋರ್ಬಂದರಿಗೆ ಬಂದರು. ದಾರಿಯಲ್ಲಿ ಬಡಜನಗಳ ಗುಡಿಸಲುಗಳಲ್ಲಿ ತಂಗುತ್ತಿದ್ದರೂ ಅವರಿಗೆ ತಮ್ಮ ಅದ್ವಿತೀಯ ಪಾಂಡಿತ್ಯ, ಇಂಗ್ಲೀಷು ಭಾಷಾಜ್ಞಾನ ಮೊದಲಾದವುಗಳನ್ನು ತಿಲಮಾತ್ರವೂ ತೋರಿಸದೆ ಸಾಮಾನ್ಯ ಬೈರಾಗಿಗಳಂತೆ ಇರುತ್ತಿದ್ದರು. ಈ ವಿಧಾನದ ಅನುಭವಗಳಿಂದ ಅವರಿಗೆ ಐಶ್ವರ್ಯದಲ್ಲಿ ಓಲಾಡುವ ರಾಜಕುಮಾರರಿಂದ ಹಿಡಿದು ದಾರಿದ್ರ್ಯದಲ್ಲಿ ಒದ್ದಾಡುವ ಶ್ರಮ ಜೀವಿಗಳವರೆಗೆ ಇರುವ ಎಲ್ಲ ಜೀವನಾವಸ್ಥೆಗಳ ಪರಿಚಯವೂ ಲಭಿಸಿತು.

ಪೋರ್ಬಂದರಿನಲ್ಲಿ ಸ್ವಾಮಿಜಿ ಆಸ್ಥಾನಪಂಡಿತ ಶಂಕರಪಾಂಡುರಂಗನ ಬಳಿ ಅನೇಕ ಸಂಸ್ಕೃತ ಗ್ರಂಥಗಳನ್ನು ಅಧ್ಯಯನ ಮಾಡಿದರು. ಅಲ್ಲದೆ ಫ್ರೇಂಚ್ ಭಾಷೆಯನ್ನೂ ಕಲಿತುಕೊಂಡರು. ಪಾಂಡುರಂಗಜಿ ಸ್ವಾಮಿಗಳ ಪವಿತ್ರ ಚಾರಿತ್ರ್ಯ ಮತ್ತು ಧೀಶಕ್ತಿಗಳನ್ನು ನೋಡಿ ಒಂದು ದಿನ ಅವರನ್ನು ಕುರಿತು "ಸ್ವಾಮಿಜಿ, ನೀವು ಪಾಶ್ಚಾತ್ಯ ದೇಶಗಳಿಗೆ ಹೋಗಿ ಸನಾತನ ಧರ್ಮವನ್ನು ಬೋಧಿಸಿದರೆ ನಮ್ಮ ಧರ್ಮಕ್ಕೆ ಮಹೋಪಕಾರವಾದಂತೆ ಆಗುತ್ತದೆ" ಎಂದರು. ಸ್ವಾಮಿಜಿ ಸ್ವಲ್ಪ ಹೊತ್ತು ಯೋಚಿಸಿ "ಒಂದು ದಿನ ಪ್ರಭಾತದ ಸಮುದ್ರ ತೀರದಲ್ಲಿ ನಿಂತು ದೂರ ದಿಗಂತದಲ್ಲಿ ಮಿಂಚುತ್ತಿದ್ದ ಆಲೋಕಮಂಡಿತ ಮಸ್ತಕದ ತರಂಗಮಾಲೆಗಳ ನೃತ್ಯ ಭಂಗಿಯನ್ನು ನೋಡುತ್ತಿದ್ದೆ. ಆಗ ಒಂದು ಯೋಚನೆ ನನ್ನ ಬಗೆಗೆ ಬಂತು. ನಾನೂ ಒಂದು ದಿನ ಈ ವೀಚಿವಿಕ್ಷೋಭಿತ ಸಿಂಧುವನ್ನು ದಾಟಿ ದೂರದೇಶಗಳಿಗೆ ಹೋಗುವೆನೆಂದು. ಅಂದರೆ ಅದು ಯಾವ ರೀತಿಯಲ್ಲಿ ಸಾಧ್ಯವಾಗುವುದೊ ನಾನರಿಯೆ" ಎಂದರು.

ಪೋರ್ಬಂದರಿನಿಂದ ಹೊರಟ ಯತಿ ಸಾರ್ವಭೌಮನು ದ್ವಾರಕೆ, ಮಾಂಡಲಿ, ಪಾಲಿಟಾನ ಮೊದಲಾದ ಸ್ಥಾನಗಳನ್ನು ನೋಡಿಕೊಂಡು, ಅನೇಕಾನೇಕ ಅನುಭವಗಳನ್ನು ಪಡೆದು, ೧೮೯೨ನೆಯ ಜುಲೈ ತಿಂಗಳ ಅಂತ್ಯಭಾಗದಲ್ಲಿ ಬೊಂಬಾಯಿ ನಗರಕ್ಕೆ ಬಂದಿಳಿದನು. ಅಲ್ಲಿ ಒಬ್ಬ ಪ್ರಸಿದ್ಧ ಬ್ಯಾರಿಷ್ಟರನ ಮನೆಯಲ್ಲಿ ಅತಿಥಿಯಾಗಿ ವೇದಾಧ್ಯಯನ ನಿರತರಾಗಿದ್ದರು. ಘಟನಾಕ್ರಮದಿಂದ ಅದೇ ಸಮಯದಲ್ಲಿ ಸ್ವಾಮಿ ಅಭೇದಾನಂದರೂ ಬೊಂಬಾಯಿಗೆ ಬಂದರು. ಸೋದರ ಸಂನ್ಯಾಸಿಗಳಿಬ್ಬರೂ ಸಂಧಿಸಿದರು. ಆ ಸಮಯದಲ್ಲಿ ಅಭೇದಾನಂದರ ಕಣ್ಣಿಗೆ ಸ್ವಾಮಿಜಿ ಪ್ರಜ್ವಲಿಸುವ ದಾವಾಗ್ನಿಯಂತೆ ತೋರಿದರಂತೆ. ಸಿಡಿಲು ಮಿಂಚು ಬಿರುಗಾಳಿಗಳನ್ನು ಗಬ್ಬದೊಳಾಂತ ಮುಂಗಾರಿನಂತೆ ತೋರಿದರಂತೆ. ಅವರು ಅಭೇದಾನಂದರನ್ನು ಕುರಿತು "ನನಗೀಗ ಅನಂತಶಕ್ತಿ ಮೂಡಿರುವಂತೆ ಅನುಭವವುಂಟಾಗಿದೆ. ಎಂದು ಸಿಡಿಯುವೆನೊ ನಾನರಿಯೆ!" ಎಂದರಂತೆ.

ಬೊಂಬಾಯಿಯಿಂದ ಪುಣೆಗೆ ಬಂದು ಅಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರ ಜೊತೆಯಲ್ಲಿ ಕೆಲದಿನಗಳಿದ್ದು ಅಲ್ಲಿಂದ ಮಹಾಬಲೇಶ್ವರಕ್ಕೆ ಹೋದರು. ಅಲ್ಲಿ ಶಿಷ್ಯರಾಗಿದ್ದ ಲಿಂಬಡಿ ಮಹಾರಾಜರು ಅವರನ್ನು ಕಂಡು "ಸ್ವಾಮಿಜಿ, ನೀವೇಕೆ ಸುಮ್ಮನೆ ಕಾಲುನಡಿಗೆಯಲ್ಲಿ ತಿರುತಿರುಗಿ ತೊಂದರೆ ಪಡುವುದು? ನನ್ನೊಡನೆ ಲಿಂಬಡಿಗೆ ಬನ್ನಿ. ನಿಮಗೆ ಬೇಕಾದ ಸಹಾಯ ಮಾಡುತ್ತೇನೆ" ಎಂದರು. ಅದಕ್ಕೆ ಸ್ವಾಮಿಜಿ "ಈಗಾಗದು, ಮಹಾರಾಜ; ನನಗಿನ್ನೂ ಕೆಲಸ ಬಹಳವಿದೆ. ಅದನ್ನು ಮುಗಿಸದ ಹೊರತೂ ನನಗೆ ಶಾಂತಿ ಲಭಿಸದು. ಗುರುಕೃಪೆಯಿಂದ ಅದು ಮುಗಿದ ಮೇಲೆ ನಿನ್ನೆಡೆಗೆ ಬರುತ್ತೇನೆ" ಎಂದು ಬೀಳ್ಕೊಂಡರು. ಆದರೆ ಲಿಂಬಡಿ ರಾಜರಿಗೆ ಆ ಸುದಿನ ಲಭಿಸಲಿಲ್ಲ.

ಪುಣೆಯಿಂದ ಸ್ವಾಮಿಜಿ ಕನ್ನಡನಾಡಿಗೆ ಕಾಲಿಟ್ಟರು. ಬೆಳಗಾವಿಯಲ್ಲಿ ಹತ್ತು ದಿವಸಗಳಿದ್ದರು. ಅಲ್ಲಿರುವಾಗಲೆ ಒಂದು ದಿನಪತ್ರಿಕೆಯಲ್ಲಿ ಕಲ್ಕತ್ತಾ ನಗರದ ಒಬ್ಬನು ಹೊಟ್ಟೆಗಿಲ್ಲದೆ ಸತ್ತನೆಂಬ ಸುದ್ದಿಯನ್ನು ಓದಿ ಎದೆ ಹಿಂಡಿದಂತಾಗಿ "ಅಯ್ಯೋ ನನ್ನ ದೇಶವೆ! ಅಯ್ಯೋ ನನ್ನ ದೇಶವೇ!" ಎಂದು ನರಳಿದರಂತೆ. ಭರತಖಂಡದ ದುಃಖ ದಾರಿದ್ರ್ಯದ ನೇಗಿಲಿನ ಮೊನಚಾದ ಕುಳವು ಈ ದಿವ್ಯ ದೈತ್ಯನ ಎದೆಹೊಲವನ್ನು ಉಳುತ್ತಿದ್ದುದು ಆತನ ಅಗಲವಾದ ಹಣೆಯ ಮೇಲೆ ನಿರಿನಿರಿಯಾಗಿ ಸುಕ್ಕುಗಳಲ್ಲಿ ಗೋಚರವಾಗುತ್ತಿತ್ತು.

ಬೆಳಗಾವಿಯಿಂದ ಬೆಂಗಳೂರಿಗೆ ಬಂದ ಸ್ವಾಮಿಜಿ ಅಲ್ಲಿ ಕೆಲವು ದಿನಗಳ ತನಕ ಅಜ್ಞಾತವಾಸದಲ್ಲಿದ್ದರು. ಆದರೆ ಕ್ರಮಕ್ರಮೇಣ ಅವರ ಕೀರ್ತಿ ಹರಡಿತು. ಹಾಗೆಯೆ ದಿವಾನರಾಗಿದ್ದ ಶೇಷಾದ್ರಿ ಅಯ್ಯರ್‌ರವರ ಪರಿಚಯವೂ ಆಯಿತು. ಪ್ರತಿಭಾಶಾಲಿಯಾಗಿದ್ದ ದಿವಾನರು ಸ್ವಲ್ಪ ಹೊತ್ತಿನ ಸಂಭಾಷಣೆಯಿಂದಲೆ ತರುಣ ಸಂನ್ಯಾಸಿಯ ಮಹಿಮೆಯನ್ನು ಅರಿತರು. ಆತನ ಸಮ್ಮೋಹಕ ತೇಜೋವ್ಯಕ್ತಿತ್ವವನ್ನೂ ಅಲೌಕಿಕ ದೈವಿಕ ಶಕ್ತಿಯನ್ನೂ ಕಂಡು ಆತನು ಕಾಲಾನಂತರದಲ್ಲಿ ಜಗದ್ವಿಖ್ಯಾತನಾದ ಮಹಾಪುರುಷನಾಗುವನೆಂದು ತಿಳಿದರು. ಒಂದು ಸಾರಿ ಅವರು ವಿವೇಕಾನಂದರನ್ನು ಕುರಿತು ಮತ್ತೊಬ್ಬ ಅಧಿಕಾರಿಯೊಡನೆ ಮಾತನಾಡುತ್ತಿದ್ದಾಗ "ಆತನ ಧೀಶಕ್ತಿ ಸಾಮರ್ಥ್ಯಗಳು ಅವರ್ಣನೀಯವಾದುವು. ನಮ್ಮಲ್ಲಿಯೂ ಅನೇಕರು ತತ್ತ್ವಧರ್ಮ ಗ್ರಂಥರಾಶಿಗಳನ್ನು ಓದಿದ್ದಾರೆ. ಆದರೆ ಏನು ಪ್ರಯೋಜನ? ಈ ಸಂನ್ಯಾಸಿಯ ಅಂತರ್ದೃಷ್ಟಿಯನ್ನು ಮೀರಿದ ದೃಷ್ಟಿಯನ್ನು ನಾನು ಬೇರೆ ಕಂಡಿಲ್ಲ. ಏನು ಅದ್ಭುತ ಶಕ್ತಿ! ಆತನು ಜನ್ಮತಃ ಜ್ಞಾನಿಯಾಗಿರಬೇಕು. ಇಲ್ಲದಿದ್ದರೆ ಇಷ್ಟು ಸಣ್ಣ ವಯಸ್ಸಿನಲ್ಲಿ ಪ್ರಾಚ್ಯ ಪಾಶ್ಚಾತ್ಯ ದರ್ಶನಗಳಲ್ಲಿಯೂ ವೇದವೇದಾಂತ ಶಾಸ್ತ್ರಗಳಲ್ಲಿಯೂ ಪ್ರವೀಣನಾಗುವುದೆಂದರೇನು?" ಎಂದರಂತೆ. ಸ್ವಾಮಿಜಿ ದಿವಾನರ ಅತಿಥಿಗಳಾದರು. ಅನೇಕ ದೊಡ್ಡ ದೊಡ್ಡ ಮನುಷ್ಯರು ಅವರಲ್ಲಿಗೆ ಬಂದು ಧರ್ಮ ಚರ್ಚೆ ಮಾಡಿ ಬೆಳಕು ಪಡೆಯುತ್ತಿದ್ದರು. ಕೆಲವು ದಿನಗಳಾದ ಮೇಲೆ ದಿವಾನರು ತರುಣ ಆಚಾರ್ಯನನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಶ್ರೀ ಚಾಮರಾಜೇಂದ್ರ ಒಡೆಯರಿಗೆ ಆತನ ಪರಿಚಯ ಮಾಡಿಕೊಟ್ಟರು. ದೊರೆಗಳು ಕಾಷಾಯ ವಸ್ತ್ರಧಾರಿಯೂ ರಾಜಪುತ್ರ ಸದೃಶದೇಹಿಯೂ ಆಗಿದ್ದ ಕುಮಾರಯೋಗಿಯನ್ನು ನೋಡಿ ಬಹಳ ಸಂತೋಷಪಟ್ಟರು. ಸ್ವಾಮಿಜಿಯ ಧೀಶಕ್ತಿಗೂ ತೇಜಸ್ಸಿಗೂ ಸೂಕ್ಷ್ಮದೃಷ್ಟಿಗೂ ಧರ್ಮಜೀವನಕ್ಕೂ ದೊರೆಗಳು ಮನಸೋತರು. ಸ್ವಾಮಿಜಿ ಅರಸರ ಅತಿಥಿಯಾದರು.

ದೊರೆಗಳೂ ಸ್ವಾಮಿಜಿಯೂ ಅನೇಕ ಸಾರಿ ಬಹಳ ಹೊತ್ತಿನವರೆಗೆ ಸಂಭಾಷಣೆ ಮಾಡುತ್ತಿದ್ದರು. ಬರುಬರುತ್ತ ರಾಜ ಮತ್ತು ರಾಜಸಂನ್ಯಾಸಿಗಳ ಮೈತ್ರಿ ಪ್ರಬಲವಾಯಿತು. ಸ್ವಾಮಿಜಿ ಅರಸರಲ್ಲಿ ತೋರಿಬಂದ ಕುಂದುಕೊರತೆಗಳನ್ನು ನಿರ್ಭೀತಿಯಿಂದ ಖಂಡನೆ ಮಾಡದೆ ಬಿಡುತ್ತಿರಲಿಲ್ಲ. ಒಂದು ದಿನ ಚಾಮರಾಜೇಂದ್ರ ಒಡೆಯರು ತಮ್ಮ ಕೆಲವು ಅಧಿಕಾರಿಗಳ ಮುಂದೆ ಸ್ವಾಮಿಜಿಯನ್ನು ಕುರಿತು "ಸ್ವಾಮಿಜಿ, ನನ್ನ ಅಧಿಕಾರಿಗಳ ವಿಚಾರವಾಗಿ ತಮ್ಮ ಅಭಿಪ್ರಾಯವೇನು?" ಎಂದು ಕೇಳಿದರು. "ಮಹಾರಾಜರಿಗೇನೋ ಬೇಕಾದಷ್ಟು ಔದಾರ್ಯವಿದೆ. ಆದರೆ ನಿಮ್ಮನ್ನು ಅಧಿಕಾರಿಗಳು ಮುತ್ತಿಕೊಂಡಿರುವರು. ಅಧಿಕಾರಿಗಳು ಎಲ್ಲಿ ಹೋದರೂ ಅಧಿಕಾರಿಗಳೇ!" ಎಂದು ಸ್ವಾಮಿಗಳು ನಸುನಕ್ಕರು. ರಾಜರಿಗೆ ಆಶ್ಚರ್ಯವುಂಟಾಯಿತು. ಅಧಿಕಾರಿಗಳಲ್ಲಿ ಕೆಲವರಿಗೆ ಖೇದವೂ ಮತ್ತೆ ಕೆಲವರಿಗೆ ವಿನೋದವೂ ಉಂಟಾಯಿತು. ಸಭೆ ಮುಕ್ತಾಯವಾದ ಮೇಲೆ ದೊರೆಗಳು ಸ್ವಾಮಿಜಿಯನ್ನು ಕುರಿತು ಸ್ವಾಮಿಜಿ, "ನೀವು ಹೀಗೆಲ್ಲ ಬಾಯಿಬಿಟ್ಟು ಮಾತಾಡಿದರೆ ಏನಾದರೂ ಕೇಡು ಸಂಭವಿಸಬಹುದು. ಇತರ ಸಾಧುಗಳಿಗೆ ಮಾಡಿರುವಂತೆ ನಿಮಗೂ ವಿಷಹಾಕಬಹುದು" ಎಂದರು. ಸ್ವಾಮಿಜಿ ನಸುಗೋಪದಿಂದ "ಏನು! ಜೀವ ಹೋದರೂ ನಿಜವಾದ ಸಂನ್ಯಾಸಿ ಸುಳ್ಳಾಡುವನೆಂದು ತಿಳಿದಿರುವಿರೇನು? ನಾಳೆ ನಿಮ್ಮ ಮಕ್ಕಳೇ ನಿಮ್ಮ ವಿಚಾರವಾಗಿ ಪ್ರಶ್ನೆ ಮಾಡಿದರೆ ನಿಮ್ಮದಲ್ಲದ ನಿಮಗಿಲ್ಲದ ಗುಣವನ್ನು ಆರೋಪಿಸಿ, ನಿಮ್ಮನ್ನು ಹೊಗಳಬೇಕೆ? ಮಿಥ್ಯಾವಾದಿಯಾಗಬೇಕೆ? ಸುಳ್ಳು ಹೇಳುವುದು, ಮುಖಸ್ತುತಿ ಮಾಡುವುದು ಇವೆಲ್ಲ ಆಸ್ಥಾನದ ಸ್ತುತಿ ಪಾಠಕರ ಕೆಲಸ! ಸತ್ಯ ಸಂನ್ಯಾಸಿಗಳ ಧರ್ಮ!" ಎಂದರು.

ಒಂದು ದಿನ ದಿವಾನರ ಅಧ್ಯಕ್ಷತೆಯಲ್ಲಿ ಒಂದು ದೊಡ್ಡ ವಿಚಾರ ಸಭೆ ಕೂಡಿತು. ಸಂಸ್ಥಾನದ ಪಂಡಿತರನೇಕರು ಆ ಸಭೆಯಲ್ಲಿ ಭಾಗಿಗಳಾಗಲು ಆಹೂತರಾಗಿದ್ದರು. ಸ್ವಾಮಿಗಳಿಗೂ ಆಹ್ವಾನ ಬಂದಿತು. ಮಹಾರಾಜರ ಕೇಳಿಕೆಯಂತೆ ಅವರೂ ಸಭಾಪ್ರವೇಶ ಮಾಡಿದರು. ವೇದಾಂತ ವಿಚಾರ ಆರಂಭವಾಯಿತು. ಪಂಡಿತ ವರ್ಗ ವೇದಾಂತದ ವಿಭಿನ್ನ ಪ್ರಕಾರವಾದ ಮತ ವಾದಗಳನ್ನು ಸಮರ್ಥಿಸುತ್ತ ವಾದಾನುವಾದಗಳಲ್ಲಿ ಪ್ರವೃತ್ತವಾಯಿತು. ಸ್ವಮತ ಪ್ರತಿಷ್ಠೆಗಾಗಿ ಪರಮತವನ್ನು ಭ್ರಾಂತಿಯೆಂದು ಹೇಳುತ್ತ ಎಷ್ಟು ವಾದವಿವಾದಗಳಲ್ಲಿ ತೊಡಗಿದರೂ ಯಾವುದೂ ನಿರ್ಣಯವಾಗಲಿಲ್ಲ. ತರುವಾಯ ಎಲ್ಲರ ಬೇಡಿಕೆಯಂತೆ ಸ್ವಾಮಿಗಳೂ ಮಾತನಾಡಿದರು. ಮುಂದೆ ಅಮೆರಿಕಾ, ಇಂಗ್ಲೆಂಡು ದೇಶಗಳಲ್ಲಿ ಯಾವ ಅಭಿಪ್ರಾಯಗಳನ್ನು ಸಾರಿ ವೇದಾಂತ ದರ್ಶನಕ್ಕೆ ಸಾರ್ವಭೌಮಿಕಾ ದರ್ಶನವೆಂಬ ಕೀರ್ತಿಯನ್ನು ತಂದರೋ ಅದೇ ಅಭಿಪ್ರಾಯಗಳನ್ನು ಸಂಕ್ಷೇಪವಾಗಿ ಹೇಳಿದರು.

ವೇದಾಂತವು ಕೆಲವು ಮತವಾದಗಳ ಸಮಷ್ಟಿ ಮಾತ್ರವಲ್ಲ. ಅದು ಸಾಧಕ ಜೀವನದ ವಿಭಿನ್ನಾವಸ್ಥೆಗಳಿಂಥ ಅನುಭೂತವಾದ ಸತ್ಯಸಮೂಹ. ಆದ್ದರಿಂದ ಅವುಗಳು ಪರಸ್ಪರ ವಿರೋಧಿಗಳಲ್ಲ; ಪರಸ್ಪರ ಪೂರಕಗಳು. ನಿಜವಾದ ತತ್ತ್ವ ಜ್ಞಾನ ಬರಿಯ ಸಿದ್ಧಾಂತಗಳ ಮುಂದೆಯಲ್ಲ; ಅದು ಸುವ್ಯವಸ್ಥಿತವಾದ ಅನುಭವಗಳ ಶ್ರೇಣಿ.

ಸಮದೃಷ್ಟಿಯ ಜ್ಯೋತಿಯನ್ನು ಮಳೆಗರೆಯುತ್ತಿದ್ದ ತರುಣ ಸಂನ್ಯಾಸಿಯ ಸ್ವರ್ಗೀಯ ಲಾವಣ್ಯಪಂಡಿತ ಮುಖಶ್ರೀಯನ್ನೂ ಮಿಂಚಿನುಂಡೆಗಳಂತೆ ತಳತಳಿಸುತ್ತಿದ್ದ ವಿಶಾಲ ನೇತ್ರದ್ವಯವನ್ನೂ ನೋಡಿ ಪಂಡಿತರೆಲ್ಲ ಬಿಲ್ಲುಂಬೆರಗಾಗಿ ಹೊಗಳಿದರು.

ಇನ್ನೊಂದು ದಿನ ಮಹಾರಾಜರು "ಸ್ವಾಮಿಜಿ, ನನ್ನಿಂದ ಏನಾದರೂ ಸೇವೆಯನ್ನು ಸ್ವೀಕರಿಸುವುದಿಲ್ಲವೇ?" ಎಂದು ಕೇಳಿದರು. ಸ್ವಾಮಿಗಳು ಭರತಖಂಡದ ಸರ್ವತೋಮುಖವಾದ ದುರವಸ್ಥೆಯನ್ನು ವರ್ಣಿಸಿ, ದೇಶ ವಿದೇಶಗಳಿಗೆ ಹೋಗಿ ಸನಾತನ ಧರ್ಮದ ಜ್ಯೋತಿಯನ್ನು ಹರಡಿ ತನ್ಮೂಲಕ ಸ್ವದೇಶ ಸೇವೆ ಮಾಡಬೇಕೆಂದಿರುವ ತಮ್ಮ ಸಂಕಲ್ಪವನ್ನೂ ತಿಳಿಸಿದರು. ರಾಜರು ಮುಗ್ಧರಾಗಿ ಎಲ್ಲವನ್ನೂ ಕೇಳಿದರು. "ಪಾಶ್ಚಾತ್ಯ ವಿಜ್ಞಾನದ ಸಹಾಯದಿಂದ ನಮ್ಮ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ಉನ್ನತಗೊಳಿಸಬೇಕು. ಆದರೆ ಯುರೋಪಿಯನ್ನರ ಮುಂದೆ ನಿಂತು ಅಳುತ್ತಾ ಭಿಕ್ಷೆ ಬೇಡುವುದರಿಂದ ನಮ್ಮ ಇಷ್ಟಾರ್ಥ ಕೈಗೂಡುವುದಿಲ್ಲ. ಅವರಿಂದ ಕೃಷಿ ವ್ಯಾಪಾರ ಮೊದಲಾದುವುಗಳನ್ನು ಕಲಿತುಕೊಂಡು ವಿನಿಮಯ ರೂಪವಾಗಿ ಅವರಿಗೆ ನಾವು ಏನಾದರೂ ಕೊಡಬೇಕು. ಸದ್ಯಕ್ಕೆ ಆಧ್ಯಾತ್ಮಿಕ ಜ್ಞಾನ ವೊಂದಲ್ಲದೆ ನಮ್ಮಲ್ಲಿ ಮತ್ತೇನಿದೆ? ಆದ್ದರಿಂದ ನಮ್ಮವರು ವೇದಾಂತ ದರ್ಶನದ ಅತ್ಯುದಾರ ಧರ್ಮವನ್ನು ಬೋಧಿಸಲು ಆಗಾಗ ಪಾಶ್ಚಾತ್ಯ ದೇಶಗಳಿಗೆ ಹೋಗಬೇಕು. ಈ ವಿಧವಾದ ಆದಾನಪ್ರದಾನ ಸಂಬಂಧವನ್ನು ಸ್ಥಾಪಿಸಿ, ಅದರಿಂದ ಸ್ವದೇಶ ಕಲ್ಯಾಣವನ್ನು ಸಾಧಿಸಬೇಕು. ತಮ್ಮಂತಹ ಮಹಾಕುಲ ಪ್ರಸೂತರೂ ಶಕ್ತಿಶಾಲಿಗಳೂ ಆದ ರಾಜರುಗಳು ಪ್ರಯತ್ನಪಟ್ಟರೆ ಕಾರ್ಯಾರಂಭವನ್ನಾದರೂ ಮಾಡಬಹುದು. ಇದರಲ್ಲಿ ತಾವು ಮುಂದಾಳುಗಳಾಗಬೇಕೆಂಬುದೇ ನನ್ನ ಪ್ರಾರ್ಥನೆ."

ಮಹಾರಾಜರು ಸ್ವಾಮಿಜಿ ಪಾಶ್ಚಾತ್ಯ ದೇಶಗಳಿಗೆ ಧರ್ಮಪ್ರಚಾರ ಮಾಡಲು ಹೋಗುವುದಾದರೆ ವ್ಯಯಭಾರವನ್ನೆಲ್ಲ ತಾವೆ ವಹಿಸಿಕೊಳ್ಳುವುದಾಗಿ ಹೇಳಿ, ಆಗಲೇ ಒಂದೆರಡು ಸಹಸ್ರ ರೂಪಾಯಿಗಳನ್ನೂ ಕೊಡಲು ಸಿದ್ಧರಾದರು. ಸ್ವಾಮಿಜಿ “ಮಹಾರಾಜ, ನಾನಿನ್ನೂ ಸ್ಥಿರಸಿದ್ಧಾಂತಕ್ಕೆ ಬಂದಿಲ್ಲ. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಮಾತ್ರ ಮಾಡಲು ಸಂಕಲ್ಪಿಸಿದ್ದೇನೆ. ಈ ಪರಿವ್ರಾಜಕ ವ್ರತ ಮುಗಿಯುವವರೆಗೂ ಇನ್ನಾವ ಕೆಲಸಕ್ಕೂ ಕೈಹಾಕೆನು. ತರುವಾಯವಾದರೂ ಏನು ಮಾಡಬೇಕು, ಎಲ್ಲಿ ಹೋಗಬೇಕು ಎಂಬುದೊಂದನ್ನೂ ನಾನು ನಿಶ್ಚಯಿಸಿಲ್ಲ” ಎಂದರು.

ಮೈಸೂರಿನಿಂದ ಹೊರಟ ಸ್ವಾಮಿಜಿ ಕೊಚ್ಚಿ, ತಿರುವಾಂಕೂರು, ಮಧುರೆ, ರಾಮನಾಡುಗಳ ಮಾರ್ಗವಾಗಿ ರಾಮೇಶ್ವರಕ್ಕೆ ಬಂದರು.

ರಾಮೇಶ್ವರವು ಭಾರತಾಂಬೆಯ ಪಾದಗಳಲ್ಲಿರುವ ಪುಣ್ಯಕ್ಷೇತ್ರ. ಪುರಾಣ ಪ್ರಖ್ಯಾತವಾಗಿರುವ ಪಾವನತಮ ತೀರ್ಥ. ವಾಯುಪುತ್ರನು ಲಂಕೆಗೆ ಹಾರಿದುದು ಇಲ್ಲಿಂದಲೆ. ಶ್ರೀರಾಮಚಂದ್ರನು ಲಂಕೆಗೆ ಹೋಗುವಾಗ ರಾಮೇಶ್ವರದ ಮೇಲೆಯೆ ಹೋದುದು. ಇಲ್ಲಿಯ ದೇವಾಲಯವನ್ನು ಕಟ್ಟಿಸಿದವನೂ ಶ್ರೀರಾಮನಂತೆ. ಶಿವಲಿಂಗ ಸ್ಥಾಪನೆ ಮಾಡಿದವನೂ ಆತನಂತೆ. ರಾಮೇಶ್ವರದ ರಮಣೀಯತೆಯನ್ನೂ ಪವಿತ್ರ ಸನ್ನಿವೇಶವನ್ನೂ ಪುರಾತತ್ತ್ವವನ್ನೂ ನೋಡಿ ನೋಡಿ ನೆನೆನೆನೆದು ಸ್ವಾಮಿಜಿ ಭಾವವಶರಾದರು.

ಅಲ್ಲಿಂದ ೧೮೯೩ನೆಯ ಸಂವತ್ಸರದ ಜನವರಿ ತಿಂಗಳಲ್ಲಿ ಕನ್ಯಾಕುಮಾರಿಯನ್ನು ಸೇರಿದರು. ಮುಂದೆ ಅನಿಲಾಂದೋಳಿತ ವೀಚಿವಿಕ್ಷೋಭಿತ ಸುನೀಲ ಜಲಧಿ! ಹಿಂದೆ ಶೈಲಕಾನನಕಾಂತಾರ ಪರಿಶೋಭಿತ ಸಸ್ಯಶ್ಯಾಮಲೆಯಾದ ಭಾರತ ವರ್ಷ! ನಡುವೆ ಸಮಾಸೀನ ನವ್ಯಭಾರತದ ಮಂತ್ರ ಗುರುವಾದ ಪರಿವ್ರಾಜಕಾಚಾರ್ಯ ವಿವೇಕಾನಂದ! ಎಂತಹ ಮಹಿಮಾಮಯ ದೃಶ್ಯ!

ಯತಿಚಕ್ರೇಶನು ಕಡಲಿನಲ್ಲಿ ಧುಮುಕಿ ಒಂದು ನಡುಬಂಡೆಯನ್ನೇರಿ ಭಾರತ ಮಾತೆಗೆ ಅಭಿಮುಖವಾಗಿ ಯೋಗಾಸನದಲ್ಲಿ ಕುಳಿತು ತನ್ನ ಜನ್ಮೋದ್ದೇಶ ನಿರ್ಣಯಪರನಾದನು. ಬಹಳ ಹೊತ್ತು ಹಾಗೆಯೆ ಕುಳಿತು ಭರತಖಂಡದ ದುರವಸ್ಥೆಯನ್ನೂ ಪುನರುತ್ಥಾನದ ಮಾರ್ಗವನ್ನೂ ಚಿಂತಿಸಿ ಚಿಂತಿಸಿ ಸುಪ್ರತಿಭನಾಗಿ ಮೇಲೆದ್ದನು.

“ಯಾರಿವನು?” ಎಂದು ಬೆರಗಾದ ಹಕ್ಕಿಗಳ ಪ್ರಶ್ನೆಗೆ, ಇನ್ನು ಸ್ವಲ್ಪವೆ ಕಾಲದೊಳಗಾಗಿಯೆ, “ಸ್ವಾಮಿ ವಿವೇಕಾನಂದ!” ಎಂಬ ಮಾರುತ್ತರವು ಅಪಾರ ಪಾರಾವಾರಗಳನ್ನೂ ಲಂಘಿಸಿ, ಸಮುದ್ರಘೋಷಕ್ಕಿಂತಲೂ ಸಮಧಿಕವಾಗಿ ಕೇಳಿಬರುತ್ತದೆ ಅಲ್ಲವೆ?

ಕನ್ಯಾಕುಮಾರಿಯಿಂದ ಹೊರಟು ಸ್ವಾಮಿಜಿ ಯಾಯಾವರ ವೃತ್ತಿಯಿಂದ ಕಾಯಾಪನೆಗೈಯ್ಯುತ್ತ ರಾಮನಾಡಿನ ಮಾರ್ಗವಾಗಿ ಪಾಂಡುಚೆರಿಗೆ ಬಂದರು. ಅಲ್ಲಿ ಪ್ರಾಚೀನ ಸಂಪ್ರದಾಯ ದಾಸನಾದ ಪಂಡಿತನೊಬ್ಬನು ಸ್ವಾಮಿಗಳೊಡನೆ ವಾಗ್ಯುದ್ಧ ಹೂಡಿದನು. ಶುಷ್ಕಾಚಾರ ವಿಷಕೀಟ ಪರಿಪೂರ್ಣವಾಗಿ ತಿಮಿರಾವೃತವಾಗಿದ್ದ ಆತನೆದೆ

ವೇದಾಂತಿಯ ಪ್ರಚಂಡ ಜ್ಯೋತಿಗೆ ಅಳುಕಿತು. ಎಷ್ಟು ಹೇಳಿದರೂ ಎಷ್ಟು ವಾದಿಸಿದರೂ ಆತನು ಬೇರೆ "ಕದಾಪಿ ನ! ಕದಾಪಿ ನ!" ಎಂಬ ಪಲ್ಲವಿಯನ್ನು ಬಿಡಲೇ ಇಲ್ಲವಂತೆ.

ಪಾಂಡುಚೆರಿಯಿಂದ ಮದರಾಸಿಗೆ ಬಂದ ಸ್ವಾಮಿಗಳ ಖ್ಯಾತಿ ಕೆಲದಿನಗಳಲ್ಲಿಯೇ ಹಬ್ಬಿತು. ಅನೇಕ ಕೃತವಿದ್ಯರಾದ ಪುರಜನರೂ ಅಧಿಕಾರಿಗಳೂ ವಿಶ್ವವಿದ್ಯಾನಿಲಯದ ಅಧ್ಯಾಪಕ ಮತ್ತು ವಿದ್ಯಾರ್ಥಿ ವರ್ಗದವರೂ ಅವರಲ್ಲಿಗೆ ಬಂದು ಸಂಭಾಷಣೆ ಮಾಡತೊಡಗಿದರು. ಎರಡು ವರ್ಷಗಳಿಂದಲೂ ಭಾರತ ಮಹಾಖಂಡದ ತಪ್ತಜೀವನದ ಮೂಷೆಯಲ್ಲಿ ಕರಗಿ ಕುದಿದು ಕಾಳಿಕೆಯನ್ನು ಕಳೆದುಕೊಂಡು ಹೊನ್ನಿನಂತೆ ತಪೋಜ್ವಲರಾಗಿದ್ದ ಸ್ವಾಮಿಜಿಯ ವ್ಯಕ್ತಿತ್ವ ಪ್ರದೀಪಕ್ಕೆ ಜನರು ಪತಂಗಗಳಂತೆ ಆಕರ್ಷಿತರಾಗಿ ಬಂದುದರಲ್ಲಿ ಆಶ್ಚರ್ಯವೇನು?

ಸ್ವಾಮಿಜಿ ಅಮೇರಿಕಾ ಖಂಡದ ಸಂಯುಕ್ತ ಸಂಸ್ಥಾನಗಳಲ್ಲಿ ನಡೆಯಲಿದ್ದ ಸರ್ವಧರ್ಮ ಸಮ್ಮೇಳನಕ್ಕೆ ಹೋಗುವ ತಮ್ಮ ಅಭೀಷ್ಟವನ್ನು ಬಹಿರಂಗಗೊಳಿಸಿದುದು ಮೊತ್ತಮೊದಲು ಮದರಾಸಿನಲ್ಲಿಯೆ. ಮೊತ್ತಮೊದಲು ಕೃತವಿದ್ಯರಾದ ಭಕ್ತಶಿಷ್ಯರು ದೊರಕಿದುದೂ ಮದರಾಸಿನಲ್ಲಿಯೆ. ಅವರ ಸರ್ವತೋಮುಖವಾದ ವಿದ್ವತ್ತಿಗೆ ಬಹಿರಂಗ ಪ್ರಶಂಸೆ ದೊರಕಿದುದೂ ಮೊತ್ತಮೊದಲು ಮದರಾಸಿನಲ್ಲಿಯೆ. ಮುಂದೆ ಅವರು ಪಾಶ್ಚಾತ್ಯ ದೇಶಗಳಿಂದ ಹಿಂತಿರುಗಿದ ಮೇಲೆ ಅವರ ಭರತಖಂಡದ ಕಾರ್ಯ ಪ್ರಾರಂಭವಾದುದೂ ಮದರಾಸಿನಲ್ಲಿಯೆ. ಅವರನ್ನು ಪಶ್ಚಿಮದೇಶಗಳಿಗೆ ಕಳುಹಿಸಲೂ, ಅಲ್ಲಿಗೆ ಹೋದ ಅವರಿಗೆ ನೆರವಾಗಲೂ, ಅವರು ಅಲ್ಲಿದ್ದಾಗ ಅವರ ಸಂದೇಶವನ್ನು ಇಲ್ಲಿ ಹರಡಲೂ ಮೊತ್ತಮೊದಲು ಸಾರ್ವಜನಿಕವಾಗಿ ಪ್ರಯತ್ನ ಮಾಡಿದವರೂ ಅವರ ಮದರಾಸಿನ ಶಿಷ್ಯರೆ!

ಫೆಬ್ರವರಿ ತಿಂಗಳ ಉತ್ತರಭಾಗದಲ್ಲಿ ಸ್ವಾಮಿಗಳು ಹೈದರಾಬಾದಿಗೆ ಆಹ್ವಾನಿತರಾಗಿ ಹೋಗಿ ಅಲ್ಲಿಯ ನವಾಬರ ಮತ್ತು ಇತರರ ಆದರಾತಿಥ್ಯ ಗೌರವಗಳನ್ನು ಸ್ವೀಕರಿಸಿ, ಅವರಿಗೆ ತಮ್ಮ ವಿದ್ಯಾಜ್ಯೋತಿಯನ್ನು ಒಂದಿನಿತು ದಾನಮಾಡಿ, ಮದರಾಸಿಗೆ ಹಿಂತಿರುಗಿದರು.

ಶಿಷ್ಯರು ಸ್ವಾಮಿಗಳನ್ನು ಸರ್ವಧರ್ಮಸಮ್ಮೇಳನಕ್ಕೆ ಕಳುಹುವ ನಿಮಿತ್ತವಾಗಿ ಧನಸಂಗ್ರಹ ಕಾರ್ಯದಲ್ಲಿ ತೊಡಗಿದ್ದರು. ಸ್ವಾಮಿಗಳು ತಮ್ಮ ಪ್ರಿಯತಮ ಶಿಷ್ಯರಾದ ಅಳಸಿಂಗರನ್ನು ಬಳಿಗೆ ಕರೆದು: "ನಾನು ಹಿಂದೂಧರ್ಮದ ಪ್ರತಿನಿಧಿಯಾಗಿ ಸರ್ವಧರ್ಮ ಸಮ್ಮೇಳನಕ್ಕೆ ಹೋಗಬೇಕೆಂದು ನೀವೆಲ್ಲರೂ ಹೇಳುತ್ತೀರಿ. ನಾನು ಬರಿಯ ಶ್ರೀಮಂತರ ಮತ್ತು ರಾಜರ ಪ್ರತಿನಿಧಿಯಾಗಿ ಅಲ್ಲಿಗೆ ಹೋಗಲಾರೆ; ಸಾಧಾರಣ ಜನರ ಪ್ರತಿನಿಧಿಯಾಗಿಯೂ ಇರಬೇಕು. ಆದ್ದರಿಂದ ನೀವು ಶ್ರೀಮಂತರಿಂದ ಮಾತ್ರವೆ ಧನಸಂಗ್ರಹ ಮಾಡುವುದು ಸರಿಯಲ್ಲ. ಸಾಧಾರಣ ಜನರಿಂದಲೂ ಹಣವನ್ನು ಕೇಳಿ, ಅವರ ಅಭಿಪ್ರಾಯವನ್ನೂ ತಿಳಿದುನೋಡಿ" ಎಂದರು.

ಈ ಮಧ್ಯೆ ಸ್ವಾಮಿಜಿ ಶ್ರೀಮಾತೆ ಶಾರದಾಮಣಿದೇವಿಯವರ ಆಶೀರ್ವಾದ ಬಲವಿಲ್ಲದೆ ಯಾವ ಕೆಲಸಕ್ಕೂ ಕೈಹಾಕಬಾರದೆಂದು ತಿಳಿದು ತಮ್ಮ ಸಂಕಲ್ಪವನ್ನು ಸೂಚಿಸಿ, ಪಾಶ್ಚಾತ್ಯ ದೇಶಗಳಿಗೆ ಹೋಗಲು ಅವರ ಆಶೀರ್ವಾದವನ್ನು ಬೇಡಿ ಒಂದು ಕಾಗದ ಬರೆದು ಉತ್ತರವನ್ನೇ ಎದುರು ನೋಡುತ್ತಿದ್ದರು. ಒಂದು ರಾತ್ರಿ ಅವರಿಗೆ

ಕನಸು ಬಿತ್ತು: ಕನಸಿನಲ್ಲಿ ಬಿತ್ತರದ ನೀಲಿ ನೀರಿನ ಸೀಮೆ, ಮಹಾ ಸಮುದ್ರ, ನಲಿಯುವ ಪೆರ್ದೆರೆಗಳು, ನೊರೆಗಳು, ಪರಮಹಂಸರು ತರಂಗ ಶಿಖರಗಳ ಮೇಲೆ ಪಶ್ಚಿಮಾಭಿಮುಖವಾಗಿ ನಡೆದುಹೋಗುತ್ತಿದ್ದಾರೆ. ಹಿಂತಿರುಗಿ ತಿರುಗಿ ತಮ್ಮನ್ನು ಕೈಬೀಸಿ ಕರೆಯುತ್ತಿದ್ದಾರೆ! ಸ್ವಪ್ನಭಂಗವಾಯಿತು. ಸಂದೇಹವೂ ನಿವೃತ್ತಿಯಾಯಿತು. ಮರುದಿನವೆ ಶ್ರೀಮಾತೆಯ ಆಶೀರ್ವಾದ ಪೂರ್ವಕವಾದ ಪತ್ರವೂ ಬಂತು. ಶ್ರೀಮಾತೆಗೂ ಅದೇ ಕನಸು ಕಂಡಿತಂತೆ! ಇನ್ನೇನು ಸಂನ್ಯಾಸಿ ಕಡಲನ್ನು ದಾಟಲು ಸಿದ್ಧನಾದನು. ಭರತಖಂಡದ ಚರಿತ್ರೆಯಲ್ಲಿ ಹಿಂದೂ ಸಂನ್ಯಾಸಿ ಶಾಸ್ತ್ರ ನಿಷಿದ್ಧವಾದ ಕಾಳಜಲವನ್ನು ದಾಟಿದುದು ಅದೇ ಮೊತ್ತಮೊದಲಲ್ಲವೆ?

ದೈವಗತಿ ವಿಚಿತ್ರವಾದುದು: ಒಂದು ದಿನ ಇದ್ದಕ್ಕಿದ್ದ ಹಾಗೆ ಖೇತ್ರಿ ಮಹಾರಾಜರ ಕರ್ಮಸಚಿವನಾಗಿದ್ದ ಜಗಮೋಹನಲಾಲಜಿ ಮದರಾಸಿಗೆ ಬಂದನು. ಸ್ವಾಮಿಜಿಯನ್ನು ಕಂಡನು. ಖೇತ್ರಿ ಮಹಾರಾಜರಿಗೆ ಪುತ್ರ ಜನನವಾಗಲೆಂದು ಸ್ವಾಮಿಜಿ ಹರಕೆಗೈದುದು ಪಾಠಕರ ಸ್ಮೃತಿಪಥದಲ್ಲಿರಬಹುದು. ರಾಜರಿಗೆ ಗಂಡು ಮಗು ಹುಟ್ಟಿತ್ತು. ಆ ಪುತ್ರರತ್ನದ ಅನ್ನ ಪ್ರಾಶನೋತ್ಸವಕ್ಕೆ ಸ್ವಾಮಿಜಿಯನ್ನು ತಪ್ಪದೆ ಕರೆದುಕೊಂಡು ಬರಬೇಕೆಂದು ಕಟ್ಟಾಣತಿಯಿತ್ತು ರಾಜರು ತಮ್ಮ ಕರ್ಮ ಸಚಿವನನ್ನು ಕಳುಹಿಸಿದ್ದರು. ವಿಷಯವನ್ನು ಅರಿತ ಕೂಡಲೆ ಸ್ವಾಮಿಜಿ "ಜಗಮೋಹನಜಿ, ನಾನು ಮೇ ತಿಂಗಳು ಮೂವತ್ತಂದಕ್ಕೆ ಅಮೆರಿಕಾಕ್ಕೆ ಹೊರಡಲು ಸಿದ್ಧನಾಗಿದ್ದೇನೆ. ನಾನು ಹೇಗೆ ಬರಲಿ?" ಎಂದರು. ಜಗಮೋಹನಲಾಲನು "ಸ್ವಾಮಿಜಿ, ನೀವು ಒಂದು ದಿನದ ಮಟ್ಟಿಗಾದರೂ ಬರಬೇಕು. ನೀವು ಬರದಿದ್ದರೆ ಮಹಾರಾಜರ ಎದೆ ಬಿರಿಯುತ್ತದೆ. ನಿಮ್ಮ ಪಯಣಕ್ಕೆ ಬೇಕಾದುದೆಲ್ಲವನ್ನೂ ಮಹಾರಾಜರೆ ಮಾಡುತ್ತಾರೆ. ನಿಮಗೆ ಸ್ವಲ್ಪವೂ ಯೋಚನೆ ಬೇಡ. ಸುಮ್ಮನೆ ನನ್ನ ಹಿಂದೆ ಬನ್ನಿ" ಎಂದು ಹಟ ಹಿಡಿದನು.

ಸ್ವಾಮಿಜಿ ಖೇತ್ರಿಗೆ ಹೋಗಿ ಬೊಂಬಾಯಿನಿಂದ ಜಹಜು ಹತ್ತುವುದೆಂದು ನಿರ್ಧಾರವಾಯಿತು. ಕಂಬನಿ ತುಂಬಿದ ಮದರಾಸಿನ ಶಿಷ್ಯರನ್ನು ಸ್ವಾಮಿಜಿ ಕಂಬನಿ ತುಂಬಿ ಬೀಳ್ಕೊಂಡು ಜಗಮೋಹನನೊಡನೆ ಖೇತ್ರಿಗೆ ಪಯಣ ಬೆಳಸಿದರು. ಅಲ್ಲಿ ಅನ್ನಪ್ರಾಶನೋತ್ಸವ ನಿರ್ವಿಘ್ನವಾಗಿ ನೆರವೇರಿದ ಮೇಲೆ ಯತಿವರ್ಯರು ರಾಜ ಶಿಷ್ಯನನ್ನು ಬೀಳುಕೊಂಡು ಜಗಮೋಹನನೊಡನೆ ಬೊಂಬಾಯಿಗೆ ಬಂದರು. ಅಲ್ಲಿಗಾಗಲೆ ಗುರುದರ್ಶನಾರ್ಥವಾಗಿ ಅಳಸಿಂಗ ಪೆರುಮಾಳರೂ ಬಂದಿದ್ದರು.

ಜಗಮೋಹನಲಾಲನು ಸ್ವಾಮಿಗಳ ಪ್ರಯಾಣಾರ್ಥವಾಗಿ ಬಹು ಮೂಲ್ಯವಾದ ವಸನಗಳನ್ನು ಕೊಂಡುಕೊಳ್ಳುತ್ತಿದ್ದುದನ್ನು ಕಂಡು ಸ್ವಾಮಿಜಿ ಪ್ರತಿಭಟಿಸಿದರು. ಆದರೆ ಲಾಲನು ಕೇಳಲಿಲ್ಲ. "ರಾಜಗುರುಗಳು ನೀವು; ರಾಜರ ಮರ್ಯಾದೆಗೆ ತಕ್ಕಂತೆ ಸಜ್ಜಿತವಾಗಿರುವುದೇ ಕರ್ತವ್ಯ" ಎಂದನು. ಉಪಾಯಾಂತರವನ್ನು ಕಾಣದೆ ಸ್ವಾಮಿಗಳು ಸುಮ್ಮನಾದರು. ಆದರೆ ದಂಡ ಕಮಂಡಲುಧಾರಿಯಾಗಿ ಭಿಕ್ಷಾಪಾತ್ರೆಯನ್ನು ಹಿಡಿದು ಸಂಚರಿಸುತ್ತಿದ್ದ ಸಂನ್ಯಾಸಿ ಬಹುಮೂಲ್ಯವಾದ ವಸ್ತ್ರದ್ರವ್ಯಗಳನ್ನು ಪಯಣದಲ್ಲಿ ಹೇಗೆ ನೋಡಿಕೊಳ್ಳುವುದೆಂದು ಎಳೆಯ ಮಗುವಿನಂತೆ ಅಧೀರರಾದರು.

ಸಮುದ್ರಯಾತ್ರೆಯ ದಿನ ಬಳಿ ಸಾರಿತು. ೧೮೯೩ನೆಯ ವರ್ಷದ ಮೇ ತಿಂಗಳು ಮೂವತ್ತೊಂದನೆಯ ದಿನ ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ ಒಂದು ಚಿರಸ್ಮರಣೀಯವಾದ ದಿನ. ಪ್ರಾಚ್ಯವು ಪಾಶ್ಚಾತ್ಯವನ್ನು ನಿರ್ದೇಶಿಸಿ ಹೊರಟ ಸುದಿನ.

ಸುಮುಹೂರ್ತ ಬಂದಿತು. ಮೊದಲೇ ಜಗಮೋಹನಲಾಲನಿಂದ ರಿಸರ್ವ್ ಮಾಡಿಸಲ್ಪಟ್ಟಿದ್ದ ಪ್ರಥಮ ಶ್ರೇಣಿಯ ಕ್ಯಾಬಿನ್ ಒಂದರಲ್ಲಿ ಸ್ವಾಮಿಜಿ ಕುಳಿತರು. ಅಶ್ರುಪೂರ್ಣಲೋಚನರಾಗಿ ನಮಿಸಿದ ಶಿಷ್ಯರನ್ನು ಆಶೀರ್ವದಿಸಿ, ಭಗವಾನ್ ಶ್ರೀರಾಮಕೃಷ್ಣರನ್ನು ಚಿತ್ತದಲ್ಲಿಯೆ ಸ್ಮರಿಸಿ ನಮಸ್ಕರಿಸಿದರು: "ಹೇ ಗುರುದೇವ, ಸನಾತನ ತ್ಯಾಗ ಭೂಮಿಯಿಂದ ನೂತನ ಭೋಗಭೂಮಿಗೆ ಹೊರಟಿದ್ದೇನೆ. ನನ್ನನ್ನು ಕಾಪಾಡು!" ಎಂದು. ಸ್ವಲ್ಪ ಹೊತ್ತಿನಲ್ಲಿಯೆ, ದೂರವಾಗುತ್ತಿದ್ದ ಭಾರತ ಭೂಮಿಯನ್ನು ಅಭೀಪ್ಸಕ ನಯನಗಳಿಂದ ನೋಡಿದರು. ಚಿತ್ತಭಿತ್ತಿಯಲ್ಲಿ ವರಾಹ ನಗರದ ಮಠವೂ ಸೋದರ ಸಂನ್ಯಾಸಿಗಳೂ ನಲಿದರೇನು?

ಸಿಳ್ಳು ಕೂಗಿತು. ಲೋಹನಿರ್ಮಿತ ಮಹಾಕಾಯದ ಕೂರ್ಮದಂತೆ ಜಹಜು ಮಂದರಗತಿಯಿಂದ ಹೊರಟಿತು. ನೋಡುತ್ತಿದ್ದಾಗಲೆ ಸಸ್ಯಶ್ಯಾಮಲೆಯಾದ ಭಾರತಾಂಬೆ ದೂರದೂರವಾಗಿ, ಮಬ್ಬಾಗಿ, ದಿಗಂತ ವಿಲೀನೆಯಾದಳು. ಎಲ್ಲಿ ನೋಡಿದರಲ್ಲಿ ಫೇನಶುಭ್ರಶಿರ ತರಂಗಮಾಲೆಗಳ ಭೈರವ ಕಲ್ಲೋಲ ನೃತ್ಯ ಮೆರೆಯಿತು. ಶ್ರೀರಾಮಕೃಷ್ಣ ಪರಮಹಂಸರ ಶ್ರೇಷ್ಠತಮ ಶಿಷ್ಯರೂ ಸಂಕ್ಷಿಪ್ತ ಸನಾತನ ಧರ್ಮಸ್ವರೂಪರೂ ಆದ ಅಗ್ನಿಸದೃಶ ದೇಶಭಕ್ತ ಸಂನ್ಯಾಸಿ ಖೇತ್ರಿಯ ಮಹಾರಾಜರು ಕಾಣಿಕೆಯಾಗಿ ನಿವೇದಿಸಿದ್ದ ಬೆಲೆಯುಳ್ಳ ರೇಷ್ಮೆಯ ನಿಲುವಂಗಿಯನ್ನೂ ಕಾವಿಯ ರುಮಾಲನ್ನೂ ವಿವೇಕಾನಂದ ಎಂಬ ಜಗದ್ವಿಖ್ಯಾತವಾಗಲಿದ್ದ ಹೊಸ ಹೆಸರನ್ನೂ ಧರಿಸಿ ಜಹಜಿನ ವೇದಿಕೆಯ ಮೇಲೆ ದಿವ್ಯಪ್ರಸ್ತರ ಮೂರ್ತಿಯಂತೆ ನಿಂತರು!

## ೧೦. ಕಡಲಿನಾಚೆ

ಆ ಸಾಗರ ಮಹಾಯಾತ್ರೆ, ನಿಜವಾಗಿಯೂ ವಿಸ್ಮಯಗೊಳಿಸುವ ಒಂದು ಪ್ರಚಂಡ ಸಾಹಸವಾಗಿತ್ತು. ಅದರಲ್ಲಿ ವಿವೇಕಕ್ಕಿಂತಲೂ ಹೆಚ್ಚಾಗಿ ಧೂರ್ತತೆಯಿತ್ತೆಂದರೂ ತಪ್ಪಾಗುವುದಿಲ್ಲ. ತರುಣ ಸಂನ್ಯಾಸಿ ಕಣ್ಣು ಮುಚ್ಚಿಕೊಂಡು ಮುಂದೆ ನುಗ್ಗಿದ್ದನು. ಅಮೆರಿಕಾದಲ್ಲಿ ಮತಸಮ್ಮೇಳನವೊಂದು ನಡೆಯುತ್ತದೆ ಎಂದು ಕೇಳಿದ್ದನು. ಯಾವಾಗ? ಎಲ್ಲಿ? ಅದಕ್ಕೆ ಪ್ರತಿನಿಧಿಯಾಗಿ ಹೋಗಬೇಕಾದರೆ ನಿಯತ ವಿಧಾನವಿದೆಯೆ? ಎಂಬ ವಿಚಾರಗಳನ್ನು ನಿಷ್ಕೃಷ್ಟವಾಗಿ ತಿಳಿದುಕೊಳ್ಳಲು ಆತನ ಸಾಮಾನ್ಯ ಮಿತ್ರರಾಗಲಿ, ಪಂಡಿತರಾಗಲಿ, ರಾಜಮಿತ್ರರುಗಳಾಗಲಿ ಯಾರೊಬ್ಬರೂ ಪ್ರಯತ್ನಿಸಿರಲಿಲ್ಲ. ರಾಮಾಯಣದಲ್ಲಿ ರಾಮನು ಹನುಮಂತನನ್ನು ಕಳುಹಿಸಿದಂತೆ ಸರ್ವರೂ - ಹೋಗುವವನೂ ಕಳುಹಿಸುವವರೂ - ಸಂಪೂರ್ಣವಾಗಿ ಪೌರಾಣಿಕವಾಗಿಯೆ ನಡೆದುಕೊಂಡಿದ್ದರು! ಕಡೆಗೆ ಒಂದು ಪರಿಚಯ ಪತ್ರವನ್ನು ಕೂಡ ತೆಗೆದುಕೊಂಡು ಹೋಗಿರಲಿಲ್ಲ. ತಾನಲ್ಲಿಗೆ ಹೋಗಿ ಕಾಣಿಸಿಕೊಂಡರೆ ಸಾಕು ಎಲ್ಲ ಸರಿಹೋಗುತ್ತದೆ ಎಂಬ ಸಂಪೂರ್ಣ ನಿರ್ಭರತೆಯಿಂದ ಮುಂದುವರಿದಂತಿತ್ತು ಆ ದುರ್ದಮ್ಯ ಸಂನ್ಯಾಸಿ! ಅದಂತಿರಲಿ: ಉಡುಗೆ ತೊಡುಗೆ? ಖೇತ್ರಿಯ ಮಹಾರಾಜರು ನಿವೇದಿಸಿದ್ದ ವಸನಗಳೆಲ್ಲವೂ ಪ್ರಾಚ್ಯ ವೈಭವ ಪ್ರದರ್ಶಕಗಳಾಗಿದ್ದುವೆ ಹೊರತು ಅಮೆರಿಕಾದ ಚಳಿಯಿಂದ ಸ್ವಾಮಿಜಿಯನ್ನು ಕಾಪಾಡಲು ಸಂಪೂರ್ಣವಾಗಿ ಅನರ್ಹವಾಗಿದ್ದುವು! ಪುರಾಣ ಕಥೆಯನ್ನು ಬರೆಯುವ ಕವಿ ತನ್ನ

ಕಥಾನಾಯಕನನ್ನು ಇದ್ದಕ್ಕಿಂತಲೂ ಹೆಚ್ಚು ಸಾಹಸ ಗರ್ಭಿತನನ್ನಾಗಿ ಮಾಡಿ ಹೊರಗಟ್ಟಲು ಆಶಿಸುವುದಿಲ್ಲವೆಂದು ತೋರುತ್ತದೆ!

೧೮೯೩ನೆಯ ಮೇ ೩೧ರಲ್ಲಿ ಬೊಂಬಾಯನ್ನು ಬಿಟ್ಟು ಕೊಲಂಬೊ, ಪಿನಾಂಗ್, ಸಿಂಗಪೂರ್, ಹಾಂಕಾಂಗ್, ಕಾಂಟನ್, ನಾಗಸಾಕಿ, ಯಾಕೋಹಾಮ, ಒಸಾಕ, ಟೋಕಿಯೊ ಮೊದಲಾದ ವಿವಿಧ ದೇಶದ, ವಿವಿಧ ಜನಾಂಗದ, ವಿವಿಧ ಸಂಸ್ಕೃತಿಯ ನಾಡುಗಳನ್ನೂ ನಗರಗಳನ್ನೂ ನೋಡಿ ದಾಟಿ, ಬ್ರಿಟಿಷ್ ಕೊಲಂಬಿಯಾದಲ್ಲಿರುವ ವಾಂಕೋವಾರನ್ನು ಸೇರಿದ ವಿವೇಕಾನಂದರು ರೈಲು ಹತ್ತಿ ಮೂರು ದಿನಗಳು ಪ್ರಯಾಣ ಮಾಡಿ ಚಿಕಾಗೊ ನಗರಕ್ಕೆ ಬಂದು ಮುಟ್ಟಿದರು.

ಪಾಶ್ಚಾತ್ಯ ವೈಜ್ಞಾನಿಕ ಯಂತ್ರನಾಗರಿಕತೆಯ ವೈಭವಕ್ಕೆ ಡಂಗು ಬಡಿದು ಅದರ ಮೆರುಗಿಗೆ ಕಣ್ಣು ಕೋರೈಸಿ ಹೋದ ಸ್ವಾಮಿಗಳ ಮನಸ್ಸನ್ನು ಪಾಠಕರೆ ಊಹಿಸಿಕೊಳ್ಳಿ. ಪರಿಚಯವಿಲ್ಲದ ಪರದೇಶಃ ಹೋಗುವುದೆಲ್ಲಿಗೆ? ವ್ಯವಹಾರ ವಿಷಯದಲ್ಲಿ ಸಂಪೂರ್ಣವಾಗಿ ಅನಭಿಜ್ಞರಾದ ಅವರನ್ನು ಕೂಲಿಯಾಳುಗಳೆ ಮೊದಲಾದವರು ನಾನಾ ಪ್ರಕಾರವಾದ ಮೋಸಗಳಿಂದ ಸುಲಿಯತೊಡಗಿದರು. ಭಿನ್ನ ಸಂಸ್ಕೃತಿಯ, ಭಿನ್ನ ಭಾಷೆಯ, ಭಿನ್ನ ಮತಧರ್ಮದ, ಭಿನ್ನಾಹಾರದ, ಭಿನ್ನವಸನದ ಜನಗಳ ಮಧ್ಯೆ ಗೈರಿಕವಸನದ ಸಂನ್ಯಾಸಿ ದಂಡಕಮಂಡಲುಧಾರಿಯಾಗಿ ವಿಚಿತ್ರ ವ್ಯಕ್ತಿಯಾದನು. ಕುತೂಹಲಿಗಳಾದ ಜನರು ಸ್ವಾಮಿಜಿಯನ್ನೇ ನೋಡತೊಡಗಿದರು. ಹಾಸ್ಯ ಪರಿಹಾಸ್ಯ ಮಾಡಲು ಹಿಂಜರಿಯಲಿಲ್ಲ. ಕಡೆಗೆ ಅಪರಿಚಿತ ಪ್ರದೇಶದಲ್ಲಿ ಉತ್ತಮರ ಸಂಗವೆ ಲೇಸೆಂದು ಬಗೆದು ಒಂದು ಉತ್ತಮತರ ಶ್ರೇಣಿಯ ಹೋಟಲಿನಲ್ಲಿ ಇಳಿದುಕೊಂಡರು.

ಸರ್ವಧರ್ಮ ಸಮ್ಮೇಳನ ಕೂಡುವುದಕ್ಕೆ ಇನ್ನೂ ಮೂರು ತಿಂಗಳ ಕಾಲ ಅವಧಿ ಇದೆಯೆಂದು ಒಂದೆರಡು ದಿನಗಳಲ್ಲಿಯೇ ಗೊತ್ತಾಯಿತು. ಅಲ್ಲದೆ ಪ್ರತಿನಿಧಿಯಾಗಿ ಬರುವವರು ಪರಿಚಯ ಪತ್ರಗಳೊಡನೆ ಬಂದು ನಿಯಮಾನುಸಾರವಾಗಿ ಸೇರಬೇಕೆಂದೂ ತಿಳಿದುಬಂತು. ಅದರಲ್ಲಿಯೂ ಹಾಗೆ ಪ್ರತಿನಿಧಿಯಾಗಿ ಸೇರಲು ಗೊತ್ತಾದ ಸಮಯವೂ ಕಳೆದುಹೋಗಿದೆಯೆಂದು ಅರಿತ ಮೇಲಂತೂ ಸ್ವಾಮಿಜಿ ಹತಾಶರಾದರು! ಇಷ್ಟರಲ್ಲಿ ಹತ್ತಿರವಿದ್ದ ಹಣವೂ ಸವೆಯುತ್ತ ಬಂತು. ಹೋಟಲಿನವರೂ ಯದ್ವಾತದ್ವಾ ಹಣವನ್ನು ಕೇಳುತ್ತಿದ್ದರು. ಅಲ್ಲಿಯೇ ಇರುವುದಾದರೆ ಇನ್ನು ಹದಿನೈದು ದಿನಗಳಿಗೂ ಹಣ ಸಾಕಾಗುವಂತಿರಲಿಲ್ಲ. ಅಷ್ಟಾದರೂ ಭಗವಾನರ ಮಂಗಳಮಯ ಹಸ್ತ ಸರ್ವದಾ ತಮ್ಮನ್ನು ಪೊರೆಯುವುದೆಂಬುದರಲ್ಲಿ ನಂಬುಗೆ ನಷ್ಟವಾಗಲಿಲ್ಲ. ಆದರೂ ಸ್ವಲ್ಪ ಮಾತ್ರ ಸಂದೇಹದಿಂದ ವ್ಯಾಕುಲಚಿತ್ತರಾದರು. ವಿಚಲಿತ ಹೃದಯದಿಂದ ಕಿಂಕರ್ತವ್ಯಮೂಢರಾಗಿ, ಅನುಭವವಿಲ್ಲದ ಕೆಲವು ಬಿಸಿದಲೆಯ ಹುಡುಗರ ಮಾತು ಕೇಳಿ ತಾನು ಬಂದುದು ತಪ್ಪಾಯಿತೆಂದು ಆಲೋಚಿಸತೊಡಗಿದರು. ಕಡೆಗೆ ಬಹು ದೊಡ್ಡ ನಗರವಾದ ಚಿಕಾಗೊದಲ್ಲಿ ತಮಗೆ ಉಳಿಗತಿಯಿಲ್ಲೆಂದು ತಿಳಿದು, ಸಣ್ಣ ಊರಾಗಿ ಸುಸಂಸ್ಕೃತರಿಂದ ಕೂಡಿದ ಬೋಸ್ಟನ್ನಿಗೆ ರೈಲು ಹತ್ತಿ ಹೊರಟರು.

ಸ್ವಾಮಿಗಳಿಗೆ ಅನೇಕ ಸಮಯಗಳಲ್ಲಿ ಅನಿರೀಕ್ಷಿತವಾದ ದಿಕ್ಕುಗಳಿಂದ ಸಹಾಯ ಬಂದಿತ್ತು. ಇಲ್ಲಿಯೂ ಹಾಗೆಯೇ ಆಯಿತು. ವಿವೇಕಾನಂದರಂತಹವರು ಅಜ್ಞಾತರಾಗಿದ್ದಾಗಲೂ ಕೂಡ ಯಃಕಶ್ಚಿತರಾಗಿರಲಾರರು; ಕಣ್ಣಿಗೆ ಬೀಳದೆ ಹೋಗಲಾರರು. ರೈಲಿನಲ್ಲಿ ಪದ್ಮಾಸನ ಹಾಕಿ ಕುಳಿತ ಅವರು ಚಿಂತಾಮಗ್ನರಾಗಿದ್ದರು. ಹೇಗಾದರೂ ಮಾಡಿ ಅಮೆರಿಕಾ

ದೇಶದಲ್ಲಿ ಜಯ ಹೊಂದಬೇಕು. ಅದಾಗದಿದ್ದರೆ ಇಂಗ್ಲೆಂಡಿಗೆ ಹೋಗಿ ಅಲ್ಲಿಯಾದರೂ ಪ್ರಯತ್ನಪಡಬೇಕು. ಅದೂ ಕೂಡ ಆಗದಿದ್ದರೆ ಸ್ವದೇಶಕ್ಕೆ ಹಿಂತಿರುಗಿ ಇನ್ನೊಂದು ಸಾರಿ ಗುರ್ವಾಜ್ಞೆ ದೊರಕುವವರೆಗೂ ಕಾಯಬೇಕು. ಇವೇ ಮೊದಲಾದ ಚಿಂತೆಗಳಲ್ಲಿ ಮುಳುಗಿ ಅಂತರ್ಮುಖಿಯಾಗಿ ಕುಳಿತಿದ್ದರು. ಎದುರಿನಲ್ಲಿ ಕುಳಿತಿದ್ದ ಒಬ್ಬ ಭದ್ರಮಹಿಳೆ ಸ್ವಾಮಿಜಿಯ ಅದ್ಭುತ ಪೋಷಾಕು, ಅಲೌಕಿಕ ತೇಜಸ್ಸು, ಅಪೂರ್ವ ಗಾಂಭೀರ್ಯ, ಅದೃಷ್ಟಪೂರ್ವ ಪ್ರಶಾಂತ ಮುಖಮುದ್ರೆ ಇವುಗಳನ್ನು ನೋಡಿ ಕುತೂಹಲದಿಂದ ಮಾತಾಡಿಸಿದಳು. ವ್ಯಕ್ತಿ ಪ್ರಾಚ್ಯದೇಶದ ಸಂನ್ಯಾಸಿಯೆಂದೂ ಧರ್ಮಪ್ರಚಾರಕ್ಕಾಗಿ ಅಮೆರಿಕಾಕ್ಕೆ ಬಂದಿರುವನೆಂದೂ ಎಲ್ಲ ವಿಷಯಗಳನ್ನೂ ತಿಳಿದ ಮೇಲೆ ಆಕೆ ತನ್ನ ಮನೆಗೆ ಬರುವಂತ ಸ್ವಾಮಿಜಿಗೆ ಆಹ್ವಾನವಿತ್ತಳು. ಅವರು ಆ ಘಟನೆಯಲ್ಲಿ ಗುರುದೇವನ ಕೃಪಾಹಸ್ತವನ್ನು ಕಂಡು ಒಪ್ಪಿದರು.

ಆ ಭದ್ರಮಹಿಳೆ ಸ್ವಾಮಿಜಿಯನ್ನು ಬೋಸ್ಟನ್ನಿನಲ್ಲಿದ್ದ ತನ್ನ ಸುಂದರ ಭವನಕ್ಕೆ ಕರೆದೊಯ್ದಳು. ಅಲ್ಲಿಂದ ತಮ್ಮ ಶಿಷ್ಯರೊಬ್ಬರಿಗೆ ಬರೆದ ಕಾಗದದಲ್ಲಿ ಅವರು ಹೀಗೆಂದು ಬರೆದಿದ್ದಾರೆ:

“ಇಲ್ಲಿಗೆ ಬರುವ ಮೊದಲು ನನಗಿದ್ದ ಹೊಂಗನಸುಗಳೆಲ್ಲ ಸಿಡಿದೊಡೆದು ಹೋಗಿರುತ್ತದೆ. ಎಡರುಗಳೊಡನೆ ಹೊಡೆದಾಡುತ್ತಿದ್ದೇನೆ. ಎಷ್ಟೋ ಸಾರಿ ಈ ದೇಶದಿಂದ ಹೊರಟುಹೋಗಲೇ ಎಂದೂ ಯೋಚಿಸುತ್ತಿದ್ದೇನೆ. ಆದರೆ ಮಾರ್ಗ ನನ್ನ ಕಣ್ಣಿಗೆ ಕಾಣಿಸದಿರಬಹುದು; ಶ್ರೀಗುರುದೇವನಿಗೆ ಅದು ಮರೆಯಾಗಿದೆಯೆ? ‘ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ’. ಸೊಂಟಕಟ್ಟಿ ನಿಲ್ಲಬೇಕು. ವತ್ಸ, ಈಶ್ವರನು ನನ್ನನ್ನಿಲ್ಲಿಗೆ ಕರೆತಂದಿದ್ದಾನೆ. ಎಷ್ಟೋ ಕಷ್ಟ ಪರಂಪರೆಗಳಿಂದ ಪಾರಾಗಿ ಬಂದಿದ್ದೇನೆ. ನಿಕಟಬಂಧುಗಳು ನಿರಾಶರಾಗಿ ಮಡಿದುದನ್ನು ಸಹಿಸಿದ್ದೇನೆ. ಹಾಸ್ಯ ಪರಿಹಾಸ್ಯಗಳನ್ನು ಸಹಿಸಿದ್ದೇನೆ. ವತ್ಸ, ಪ್ರಪಂಚ ಒಂದು ಶಿಕ್ಷಾರಂಗ; ಇಲ್ಲಿ ತಾಳ್ಮೆ, ಸಹಾನುಭೂತಿ, ದೃಢತೆಗಳನ್ನು ಅಭ್ಯಾಸ ಮಾಡಬಹುದು. ಸತ್ತರೂ ಸಾಧನೆಯಲ್ಲಿಯೆ ಸಾಯುತ್ತೇನೆ.”

ಇದುವರೆಗೂ ವಿಘ್ನಗಳೊಡನೆ ಸಂಗ್ರಾಮ ಮಾಡದೆ ಯಾರೂ ಯಾವ ಮಹಾಕಾರ್ಯವನ್ನೂ ಸಾಧಿಸಿಲ್ಲ.

ದೇಶದ ವಾಯುಗುಣಕ್ಕೆ ಅನುಸಾರವಾಗಿ ಸ್ವಾಮಿಜಿ ಆ ಮಹಿಳೆಯ ಸೂಚನೆಯಂತೆ ತಮ್ಮ ಉಡುಪನ್ನು ಬದಲಾಯಿಸಿಕೊಂಡರು. ದಿನದಿನವೂ ತಮ್ಮಲ್ಲಿಗೆ ಬರುತ್ತಿರುವವರೊಡನೆ ಮಾತಾಡಿ ಆ ದೇಶದ ವಿಷಯಗಳನ್ನು ಸಂಗ್ರಹಿಸುತ್ತಿದ್ದರು.

ಆ ಭದ್ರಮಹಿಳೆ ಹಾರ್‌ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಗ್ರೀಕ್ ಭಾಷೆಯ ಪ್ರಸಿದ್ಧ ಅಧ್ಯಾಪಕರಾಗಿದ್ದ ಜೆ. ಎಚ್. ರೈಟ್ ಎಂಬುವರನ್ನು ಸ್ವಾಮಿಜಿಗೆ ಪರಿಚಯ ಮಾಡಿಕೊಟ್ಟಳು. ಅವರಿಬ್ಬರೂ ನಾಲ್ಕು ಗಂಟೆಗಳ ಕಾಲ ಒಂದು ಕೊಠಡಿಯಲ್ಲಿ ಮಾತಾಡುತ್ತಿದ್ದರು. ರೈಟ್ ಸಾಹೇಬರು ಸ್ವಾಮಿಜಿಯ ವಿದ್ವತ್ತು, ಪ್ರತಿಭೆಗಳನ್ನು ನೋಡಿ ಬೆರಗಾದರು. ಅಲ್ಲದೆ ಸ್ವಾಮಿಜಿ ಸರ್ವಧರ್ಮ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಹೋಗಲೇಬೇಕೆಂದೂ ಹೇಳಿದರು. ಸ್ವಾಮಿಜಿ ಅವರೊಡನೆ ನಡೆದ ಕಥೆಯೆಲ್ಲವನ್ನೂ ವಿಶದವಾಗಿ ಹೇಳಿದರು. ರೈಟ್ ಸಾಹೇಬರು ಆಶ್ಚರ್ಯದಿಂದ “ನಿಮ್ಮಿಂದ ಯೋಗ್ಯತಾ ಪತ್ರವನ್ನು ಕೇಳುವುದು, ಹೊಳೆಯುವುದಕ್ಕೆ ನಿನಗೆ ಅಧಿಕಾರವೇನೆಂದು ಸೂರ್ಯನನ್ನು ಕೇಳಿದಂತೆ!” ಎಂದು ಹೇಳಿ

ಸ್ವಾಮಿಜಿಯನ್ನು ಧರ್ಮಸಭೆಯಲ್ಲಿ ಹಿಂದೂಧರ್ಮದ ಪ್ರತಿನಿಧಿಯನ್ನಾಗಿ ಮಾಡುವ ಕಾರ್ಯಭಾರವನ್ನು ತಾವೇ ವಹಿಸಿಕೊಂಡರು. ತರುವಾಯ ಧರ್ಮಸಭೆಗೆ ಪ್ರತಿನಿಧಿಗಳನ್ನು ಚುನಾಯಿಸುವ ಸಮಿತಿಗೆ ಅಧ್ಯಕ್ಷರಾಗಿದ್ದ ತಮ್ಮ ಸ್ನೇಹಿತರಿಗೆ ಒಂದು ಪರಿಚಯ ಪತ್ರವನ್ನು ಬರೆದು ಸ್ವಾಮಿಗಳ ಕೈಗೆ ಕೊಟ್ಟರು. ಆ ಪತ್ರದ ಕೊನೆಯ ಪಂಕ್ತಿ "ನಮ್ಮ ವಿದ್ವಾಂಸರೆಲ್ಲರನ್ನೂ ಮೂಟೆಕಟ್ಟಿದರೂ ಮೀರಿ ತೂಗುವ ಪುರುಷನೀತನು!" ಎಂದಿತ್ತು. ಪರಿಚಯ ಪತ್ರವನ್ನು ಕೊಟ್ಟುದಲ್ಲದೆ ಬೋಸ್ಟನ್ನಿನಿಂದ ಚಿಕಾಗೋಕ್ಕೆ ಒಂದು ಟಿಕೆಟ್ಟನ್ನೂ ಕೊಂಡುಕೊಟ್ಟು, ಅವರಿಗೆ ಬೇಕಾದ ಮನೆಗಳ ವಿಳಾಸಗಳನ್ನೂ ಬರೆದಿತ್ತರು. ಸ್ವಾಮಿಗಳು ಹರ್ಷದಿಂದ ಪುನಃ ಚಿಕಾಗೊ ನಗರಕ್ಕೆ ಹೊರಟರು.

ಆದರೆ ಈಶ್ವರನೊಡ್ಡಿದ ಸತ್ತ್ವಪರೀಕ್ಷೆ ಅಲ್ಲಿಗೇ ಮುಗಿಯಲಿಲ್ಲ. ಬೆಳಗಾಗುವುದಕ್ಕೆ ಸ್ವಲ್ಪ ಮುಂಚೆ ಕತ್ತಲು ಹೆಚ್ಚಿದಂತಾಗುವುದಿಲ್ಲವೆ? ಸ್ವಾಮಿಗಳಿಗೆ ಡಾಕ್ಟರ್ ಬರೋಸ್‌ರವರ ವಸತಿಯನ್ನು ತೋರಿಸಲು ರೈಲಿನಲ್ಲಿ ಅವರೊಡನೆ ಕುಳಿತಿದ್ದ ವ್ಯಾಪಾರಿಯೊಬ್ಬನು ಸಮ್ಮತಿಸಿದನು. ಆದರೆ ಚಿಕಾಗೊ ಸ್ಟೇಷನ್ನಿನಲ್ಲಿ ಇಳಿದಾಗ ಆತನಿಗೆ ಏನೋ ಕೆಲಸವಿದ್ದುದರಿಂದ ಆತನು ಹೊರಟುಹೋದನು. ಹೋಗುವ ಅವಸರದಲ್ಲಿ ಸ್ವಾಮಿಜಿಗೆ ಹಾದಿಯ ಪರಿಚಯ ಮಾಡಿಕೊಡಲು ಮರೆತುಬಿಟ್ಟನು. ಸಾಲದಿದ್ದಕ್ಕೆ ಬೇರೆ ರೈಟ್ ಸಾಹೇಬರು ಕೊಟ್ಟಿದ್ದ ವಿಳಾಸವೂ ಗಡಿಬಿಡಿಯಲ್ಲಿ ಕಳೆದುಹೋಗಿತ್ತು. ಯಾರನ್ನು ಮಾತಾಡಿಸಿದರೂ ಎಲ್ಲರೂ ಇವರನ್ನು ನೀಗ್ರೋ ಎಂದು ತಿಳಿದು ತಿರಸ್ಕರಿಸುತ್ತಿದ್ದರು. ಅಲ್ಲದೆ ಚಿಕಾಗೊ ನಗರದ ಆ ಭಾಗದಲ್ಲಿ ಜರ್ಮನರೆ ಹೆಚ್ಚಾಗಿರುವುದರಿಂದ ಒಬ್ಬರಿಗೂ ಸ್ವಾಮಿಜಿಯ ಮಾತು ಗೊತ್ತಾಗಲಿಲ್ಲ. ಅಷ್ಟರಲ್ಲಿ ಕತ್ತಲೂ ಆಯಿತು. ಮುಂದಿನ ಹಾದಿ ಕಾಣಲಿಲ್ಲ. ದೇವರೇ ಗತಿಯೆಂದು ರೈಲ್ವೆ ಸ್ಟೇಷನ್ನಿನ ಬಳಿ ಬಿದ್ದಿದ್ದ ಒಂದು ಖಾಲಿಯಾಗಿದ್ದ ದೊಡ್ಡ ಪೆಟ್ಟಿಗೆಯೊಳಗೆ ನುಗ್ಗಿ ಗುರುದೇವನನ್ನು ನೆನೆದು ಮಲಗಿದರು.

ಹೊರಗಡೆ ಕತ್ತಲೆ, ಕೊರೆಯುವ ಚಳಿ. ದಿನವೆಲ್ಲ ಊಟವಿಲ್ಲ. ನಾಳೆಯೆಂದರೆ ಅವರ ಹರಿಕಂಠ ಗರ್ಜನೆಯಿಂದ ಸಮಸ್ತ ಅಮೆರಿಕಾ ದೇಶವೇ ಎಚ್ಚರಗೊಳ್ಳಬೇಕು. ಇಂದಾದರೂ ಗತಿಯಿಲ್ಲದೆ ಪೆಟ್ಟಿಗೆಯಲ್ಲಿ ಮಲಗಿದ್ದಾರೆ. ಈಶ್ವರೇಚ್ಛೆ! ಬಹುಕಷ್ಟದಿಂದ ರಾತ್ರಿಯನ್ನು ಕಳೆದು ಬೆಳಗಾಗಲು ರಾಜಪಥದಲ್ಲಿ ಹೊರಟರು. ಬಹಳ ಹಸಿದಿದ್ದರಿಂದ ಬಾಗಿಲು ಬಾಗಿಲಿಗೆ ಹೋಗಿ ಏನಾದರೂ ಆಹಾರ ಪದಾರ್ಥ ದೊರಕೀತೆಂದು ಭಿಕ್ಷೆ ಬೇಡಿದರು. ಅವರ ಮೇಲಿನ ಜೀರ್ಣ ವಸನವನ್ನೂ ಯಾತನಾಕ್ಲಿಷ್ಟ ಮುಖಮಂಡಲವನ್ನೂ ನೋಡಿ ಯಾರೊಬ್ಬರ ಕರುಣೆಯೂ ಎಚ್ಚರಲಿಲ್ಲ. ಕೆಲವರು ಬೈದು ನೂಕಿದರು; ಕೆಲವರು ಬಾಗಿಲಿನಿಂದ ಬಲಪ್ರಯೋಗ ಮಾಡಿ ಓಡಿಸಿಬಿಟ್ಟರು; ಕೆಲವರು ಜುಗುಪ್ಸೆಯಿಂದ ಬಾಗಿಲು ಹಾಕಿಕೊಂಡರು. "ಸಹಸ್ರಾರು ವಿಧಾನಗಳಿಂದ ಧನಸಂಪಾದನೆ ಮಾಡುವ ಆ ಊರು", ರೋಮೇಯ್ನ್ ರೊಲೆಂಡರು ಎದೆನೊಂದು ಹೇಳುತ್ತಾರೆ, "ಮಹಾಸಂತನಾದ ಫ್ರಾನ್ಸಿಸ್ ಸಾಧುವಿನ ರೀತಿಯೊಂದನ್ನು ಮಾತ್ರ ಒಪ್ಪುವುದಿಲ್ಲ! ಬುದ್ಧನ ಬಹಿರಂಗ ಭಿಕ್ಷಾಟನೆ ಅಲ್ಲಿಯ ಕಾನೂನಿಗೆ ವಿರುದ್ಧ!"

ಮನಸ್ಸಿಗೆ ಬಹಳ ನೋವಾಯಿತು. ಅಭಿಮಾನದಿಂದ ಶ್ರೀಗುರುದೇವನ ಮೇಲೆಯೂ ಸಿಟ್ಟಾದರು. ಕಡೆಗೆ ಹಸಿದು ಬಳಲಿ ಮುಂದುವರಿಯಲಾರದೆ ಬೀದಿಯ ಪಕ್ಕದಲ್ಲಿ ನಿರ್ಭಯಚಿತ್ತರಾಗಿ ಪೂರ್ಣ ಭರವಸೆಯಿಂದ ಶ್ರೀಗುರು ಮಾಡಿಸಿದಂತಾಗಲಿ ಎಂದು ಕುಳಿತುಬಿಟ್ಟರು.

ಅವರು ಕುಳಿತಿದ್ದ ಸ್ಥಳಕ್ಕೆ ಎದುರಿಗೆ ಒಂದು ದಿವ್ಯ ಪ್ರಾಸಾದ ಮೇಲೆದ್ದು ವಿರಾಜಿಸುತ್ತಿತ್ತು. ನೋಡುತ್ತಿದ್ದ ಹಾಗೆಯೆ ಅದರ ಹೆಬ್ಬಾಗಿಲು ತೆರೆಯಿತು. ರಮಣಿಯೊಬ್ಬಳು ಮೆಲ್ಲಮೆಲ್ಲನೆ ಬಂದು "ಮಹಾಶಯ, ನೀವು ಧರ್ಮಮಹಾಸಭೆಗೆ ಬಂದ ಪ್ರತಿನಿಧಿಯೇನು?" ಎಂದು ಪ್ರಶ್ನೆ ಮಾಡಿದಳು. ಸ್ವಾಮಿಜಿ ಆಕೆಯೊಡನೆ ಎಲ್ಲವನ್ನೂ ಹೇಳಿದ ತರುವಾಯ ದಯಾರ್ದ್ರಹೃದಯಿಯಾದ ಆ ಮಹಿಳೆ ಅವರನ್ನು ತನ್ನ ಮಂದಿರಕ್ಕೆ ಕರೆದೊಯ್ದು, ಸೇವಕರಿಗೆ ಅವರ ಶುಶ್ರೂಷೆ ಮಾಡುವಂತೆ ಅಪ್ಪಣೆಯಿತ್ತು, ಪ್ರಾತರ್ಭೋಜನವಾದ ಅನಂತರ ತಾನೇ ಸ್ವಾಮಿಜಿಯನ್ನು ಧರ್ಮಸಭೆಗೆ ಕರೆದೊಯ್ಯುವೆನೆಂದು ಹೇಳಿದಳು.

೧೮೯೩ನೆಯ ವರ್ಷದ ಸೆಪ್ಟೆಂಬರ್ ತಿಂಗಳು ೧೧ನೆಯ ಸೋಮವಾರ ಜಗತ್ತಿನ ಇತಿಹಾಸದಲ್ಲಿ ಸ್ಮರಣೀಯವಾಗಿರುತ್ತದೆ. ಪ್ರಾಚ್ಯ ಪಾಶ್ಚಾತ್ಯ ವಿಭಿನ್ನ ಮತ ಸಂಪ್ರದಾಯಗಳ ಸರ್ವಶ್ರೇಷ್ಠರಾದ ಪ್ರತಿನಿಧಿಗಳು ಒಂದೆಡೆ ಮಿಳಿತವಾಗಿದ್ದರು. ಆ ವಿರಾಟ್ ಸಭೆಯಲ್ಲಿ ಸಹಸ್ರ ಸಹಸ್ರ ಉನ್ಮುಖರಾದ ನರನಾರಿಯರ ಸಮ್ಮುಖದಲ್ಲಿ ತಮ್ಮ ಮಂಗಳಮಯ ಉದಾರ ಆಶೀರ್ವಾಣಿಯನ್ನು ಉಚ್ಚರಿಸಲೆಂದು ಶ್ರೀಸ್ವಾಮಿ ವಿವೇಕಾನಂದರು ವೇದಿಕೆಯ ಮೇಲೆ ವಾಸ್ತವಿಕವಾಗಲಿರುವ ಪವಿತ್ರತಮವಾದ ಮಹಾ ಸುವರ್ಣಸ್ವಪ್ನದಂತೆ ನಿಂತಿದ್ದಾರೆ!

ಕಣ್ಣಾರೆ ಕಂಡ ಶ್ರೀಮತಿ ಆನಿಬೆಸೆಂಟರು ಹೀಗೆಂದು ಬರೆದಿದ್ದಾರೆ:

"ಗೈರಿಕವಸನ ಭೂಷಿತ ಮಹಿಮಾಮಯ ಮೂರ್ತಿ. ಚಿಕಾಗೊ ನಗರದ ಧೂಮ ಮಲಿನ ಧೂಸರ ವಕ್ಷಸ್ಥಳದಲ್ಲಿ ಭಾರತೀಯ ಸೂರ್ಯನೂ ಮೂಡಿದಂತಿತ್ತು. ಉನ್ನತಶಿರ, ಮರ್ಮಭೇದಿಯಾದ ದೃಷ್ಟಿಪೂರ್ಣ ವಿಶಾಲನೇತ್ರದ್ವಯ, ಚಟುಲ ಚಂಚಲವಾದ ಓಷ್ಠಾಧರ. ಮನೋಹರವಾದ ಕಾಯಭಂಗಿ ಇವುಗಳಿಂದ ಕೂಡಿದ ಸ್ವಾಮಿ ವಿವೇಕಾನಂದರು ಸರ್ವಮತ ಸಮ್ಮೇಳನದ ಪ್ರತಿನಿಧಿಗಳಿಗಾಗಿ ಏರ್ಪಟ್ಟಿದ್ದ ವೇದಿಕೆಯ ಮೇಲೆ ಮೊತ್ತಮೊದಲು ನನ್ನ ದೃಷ್ಟಿಗೆ ಬಿದ್ದರು. ಅವರು ಸಂನ್ಯಾಸಿಗಳೆಂಬ ಖ್ಯಾತಿಯನ್ನು ಹಿಂದೆಯೆ ಕೇಳಿದ್ದೆ. ಆದರೆ ನೋಡಿದ ಕೂಡಲೆ, ಅವರನ್ನು ಸಂನ್ಯಾಸಿ ಎನ್ನುವುದಕ್ಕಿಂತ ಯೋದ್ಧ ಎನ್ನುವುದೆ ಯೋಗ್ಯ ಎಂದು ಕೊಂಡೆ. ಅಂತೂ ಕಡೆಗೂ ಯೋದ್ಧ ಸಂನ್ಯಾಸಿಯೆ ಆದರು! ಅವರ ವ್ಯಕ್ತಿತ್ವದಲ್ಲಿ ಸ್ವಜನ ಸ್ವದೇಶಾಭಿಮಾನಗಳು ತುಂಬಿ ತುಳುಕಾಡುತ್ತಿದ್ದುವು. ಮತಗಳಲ್ಲಿ ಪ್ರಾಚೀನತಮವಾದ ಮತದ ಪ್ರತಿನಿಧಿ ವಯಸ್ಸಿನಲ್ಲಿ ಎಲ್ಲ ಪ್ರತಿನಿಧಿಗಳಿಗಿಂತಲೂ ಕನಿಷ್ಠತಮನಾಗಿದ್ದರೂ ಪ್ರತಿಭೆಯಲ್ಲಿ ಯಾರಿಗೇನೂ ಕಡಿಮೆಯಾಗಿರಲಿಲ್ಲ. ಗರ್ವಿಷ್ಠ ಪಾಶ್ಚಾತ್ಯ ದೇಶಗಳಿಗೆ ಭಾರತಮಾತೆ ತನ್ನ ಯೋಗ್ಯತಮ ಪುತ್ರನನ್ನೇ ದೂತನನ್ನಾಗಿ ಕಳುಹಿಸಿ ಗೌರವಾನ್ವಿತೆಯಾದಳು. ದೂತನು ತನ್ನ ಪುಣ್ಯ ಜನ್ಮಭೂಮಿಯ ಸನಾತನ ಕೀರ್ತಿ ಗೌರವಗಳನ್ನು ಮರೆಯದೆ ಆಕೆಯ ಸಂದೇಶವನ್ನು ಸಾರಿದನು. ಆಶಿಷ್ಠನೂ ದೃಢಿಷ್ಠನೂ ಬಲಿಷ್ಠನೂ ಮೇಧಾವಿಯೂ ಆದ ಆತನು ಎಲ್ಲರನ್ನೂ ಮೀರಿ ಗಂಡರಗಂಡನಾಗಿ ಮುಂದೆ ನಿಂತು ತನ್ನ ಕೆಲಸವನ್ನು ಸಾಧಿಸಿದನು.

"ವೇದಿಕೆಯ ಮೇಲೆ ಮತ್ತೊಂದು ದೃಶ್ಯ: ಸ್ವಾಮಿಜಿ ಮಾತನಾಡಲು ಎದ್ದು ನಿಂತರು. ಅದೇ ಗಾಂಭೀರ್ಯ, ಅದೇ ಪ್ರತಿಭೆ, ಅದೇ ಶಕ್ತಿ ಎಲ್ಲವೂ ಇದ್ದುವು. ಆದರೆ ಆತನು ತಂದ ಆ ಧರ್ಮಸಂದೇಶದ ಸೌಂದರ್ಯದ ಸಮ್ಮುಖದಲ್ಲಿ, ಆ ಅಪ್ರತಿದ್ವಂದ್ವಿಯಾದ ಅತುಲನೀಯವಾದ ಪ್ರಾಚ್ಯ ಋಷಿಗಳ ಆಧ್ಯಾತ್ಮಿಕ ಸಂದೇಶದ ಮಹಿಮೆಯ ಸಮ್ಮುಖದಲ್ಲಿ,

ಅವುಗಳೆಲ್ಲ ವಿನಮ್ರವಾಗಿದ್ದವು. ಅಲ್ಲಿ ನೆರೆದಿದ್ದ ಜನವಾರಿಧಿ ಮಂತ್ರಮುಗ್ಧವಾದಂತೆ ಆತನ ಕೊರಳ ದನಿಯನ್ನು ಕೇಳಲು ನೀರವವಾಗಿತ್ತು. ಒಂದು ಮಾತನ್ನೂ ಹಾಳಾಗಗೊಡಲಿಲ್ಲ; ಒಂದು ಸ್ವರವೂ ಮೋಘವಾಗಲಿಲ್ಲ."

ಭಾಷಣಗಳು ಪ್ರಾರಂಭವಾದುವು. ಪ್ರತಿನಿಧಿಗಳು ಒಬ್ಬೊಬ್ಬರಾಗಿ ಎದ್ದುನಿಂತು ತಮ್ಮ ತಮ್ಮ ಮತಗಳನ್ನು ಪ್ರತಿಪಾದಿಸಿದರು. ಅಧ್ಯಕ್ಷರು ಸ್ವಾಮಿಜಿಯನ್ನು ಎರಡು ಮೂರು ಸಾರಿ ಮಾತಾಡುವಂತೆ ಕೇಳಿಕೊಂಡರು. ಆದರೆ ಸ್ವಾಮಿಜಿ 'ಸ್ವಲ್ಪ ತಡೆಯಿರಿ; ಉಳಿದವರದಾಗಲಿ' ಎಂದುಬಿಟ್ಟರು. ಅವರು ಇತರರಂತೆ ಉಪನ್ಯಾಸವನ್ನು ಸಿದ್ಧಪಡಿಸಿಕೊಂಡು ಹೋಗಿರಲಿಲ್ಲ. ಕಡೆಗೆ ಅವರ ಸರದಿಯೂ ಬಂತು. ಎದ್ದುನಿಂತರು. ಒಂದು ಸಾರಿ ದೃಷ್ಟಿ ಪ್ರಸಾರ ಮಾಡಿ ಆ ಮಹಾಸಭೆಯೆಲ್ಲವನ್ನೂ ನೋಡಿದರು. ಸರಸ್ವತಿದೇವಿಯನ್ನು ನೆನೆದರು; ಶ್ರೀಗುರುದೇವನನ್ನು ಸ್ಮರಿಸಿದರು. ಇದ್ದಕ್ಕಿದ್ದ ಹಾಗೆ ಅವರ ಹೃದಯದ ಅಂತರಾಳದ ಜ್ಞಾನಸೂರ್ಯನ ಜ್ಯೋತಿ ಮುಖಮಂಡಲದಲ್ಲಿ ಪ್ರಕಾಶಿಸಿತು. ಕಣ್ಣುಗಳು ಮಿಂಚಿದುವು. ದಕ್ಷಿಣೇಶ್ವರ ದೇವ ನಿಲಯದ ಪರಮ ಯೋಗೀಶ್ವರನ ದಿವ್ಯಶಕ್ತಿ ಅವರಲ್ಲಿ ಸಂಚರಿಸತೊಡಗಿತು.

ಆ ಮಹಾ ಸದಸ್ಯಮಂಡಳಿಯನ್ನು ಕುರಿತು "ಅಮೆರಿಕಾ ದೇಶದ ಭ್ರಾತೃ ಭಗಿನಿಯರೇ" ಎಂದು ಸಂಬೋಧಿಸಿದರು.

ಕೂಡಲೆ ಸಾವಿರಾರು ಸಿಡಿಲುಗಳು ಕೋಲಾಟವಾಡುವಂತೆ ದೊಡ್ಡ ಸದ್ದಾಯಿತು. ಸಹಸ್ರ ಸಹಸ್ರ ಜನರ ಕರತಾಡನದ ಮಹಾಧ್ವನಿಯಿಂದ ಮಂದಿರವೆಲ್ಲವೂ ಪ್ರತಿಧ್ವನಿತವಾಗಿ ಕಿವಿ ಕಿವುಡುಗಟ್ಟುವಂತಾಯಿತು. ನೆರೆದಿದ್ದವರೆಲ್ಲರಿಗೂ ಹುಚ್ಚು, ಸಂತಸದ ಹುಚ್ಚು! ಸ್ವಾಮೀಜಿ ವಿಸ್ಮಯಸ್ತಂಭಿತರಾದರು. ಈ ಬ್ರಹ್ಮನಿನಾದದ ಅರ್ಥವೇನು? ಆಗ ಗೊತ್ತಾಯಿತು, ವಾಣಿ ತಮಗೆ ಬೆಂಬಲವಾಗಿದ್ದಾಳೆಂದು. ಸಂಪೂರ್ಣವಾಗಿ ಎರಡು ನಿಮಿಷಗಳವರೆಗೆ ಉತ್ಸಾಹ ಘೋಷ ನಿಲ್ಲಲಿಲ್ಲ. ಉಳಿದವರೆಲ್ಲರೂ "ಮಹನೀಯರೇ, ಮಹಿಳೆಯರೇ" ಎಂದು ಮೊದಲಾಗಿ ಸಂಬೋಧಿಸಿದ್ದರು. ಆದ್ದರಿಂದ "ಭ್ರಾತೃ ಭಗಿನಿಯರೆ" ಎಂದು ಸಂಬೋಧನೆ ಅವರ ಹೃದಯಗಳನ್ನು ಹುಚ್ಚೆಬ್ಬಿಸಿತ್ತು.

ಸದ್ದೆಲ್ಲ ಅಡಗಿದ ಮೇಲೆ ಸ್ವಾಮೀಜಿ ಒಂದು ಸಣ್ಣ ಭಾಷಣ ಮಾಡಿದರು. ಮೊದಲು ಅಮೆರಿಕಾ ದೇಶದವರನ್ನು ಪುರಾತನವಾದ ಭಾರತವರ್ಷದ ಪರವಾಗಿಯೂ ಭಾರತೀಯರ ಪರವಾಗಿಯೂ ಪ್ರಾಚೀನತಮ ವೈದಿಕ ಸಂಪ್ರದಾಯದ ಸಂನ್ಯಾಸಿಗಳ ಪರವಾಗಿಯೂ ಪುಣ್ಯ ಸನಾತನ ಧರ್ಮದ ಪರವಾಗಿಯೂ ಮನೋಹರವಾದ ಶೈಲಿಯಲ್ಲಿ ಅಭಿನಂದಿಸಿದರು. ತರುವಾಯ ಸರ್ವಧರ್ಮ ಸಮನ್ವಯವನ್ನು ಸೂಚಿಸಿ ಭಾಷಣ ಮಾಡಿದರು. ಅದರಲ್ಲಿ -

ತ್ರಯೀ ಸಾಂಖ್ಯಂ ಯೋಗಃ ಪಶುಪತಿಮತಂ ವೈಷ್ಣವಮಿತಿ<br>
ಪ್ರಭಿನ್ನೇ ಪ್ರಸ್ಥಾನೇ ಪರಮಿದಮದಃ ಪಥ್ಯಮಿತಿ ಚ ।<br>
ರುಚೀನಾಂ ವೈಚಿತ್ರ್ಯಾದೃಜುಕುಟಿಲ ನಾನಾ ಪಥಜುಷಾಂ ।<br>
ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ ॥

“ಭಿನ್ನ ಭಿನ್ನವಾದ ಪ್ರದೇಶಗಳಲ್ಲಿ ಜನಿಸಿದ ಭಿನ್ನಭಿನ್ನವಾದ ನದಿಗಳೆಲ್ಲವೂ ಹೇಗೆ ಕಟ್ಟಕಡೆಗೆ ಕಡಲನ್ನು ಸೇರುತ್ತವೆಯೊ ಹಾಗೆ ಮಾನವರ ವಿವಿಧ ಭಾವಜನ್ಯವಾದ ವಿವಿಧ ಮಾರ್ಗಗಳು ಬೇರೆಬೇರೆಯಾಗಿ ತೋರಿದರೂ ಋಜುಕುಟಿಲಧಾರಿಗಳಾಗಿ ಕಂಡುಬಂದರೂ ಕಟ್ಟಕಡೆಗೆ ನಿನ್ನನ್ನೇ ಸೇರುತ್ತವೆ.”

ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ ।
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥

“ಯಾರು ಯಾವ ರೂಪದಲ್ಲಿ ನನ್ನನ್ನು ಭಜಿಸುತ್ತಾರೊ ನಾನವರಿಗೆ ಆ ರೂಪದಲ್ಲಿ ದೊರಕುತ್ತೇನೆ. ಮನುಜರೆಲ್ಲರೂ ಕಟ್ಟಕಡೆಗೆ ನನ್ನಲ್ಲಿಯೆ ವಿಲೀನವಾಗುವ ಭಿನ್ನಭಿನ್ನ ಮಾರ್ಗಗಳಲ್ಲಿ ತೊಳಲುತ್ತಿದ್ದಾರೆ.”

ಎಂಬ ಎರಡು ಶ್ಲೋಕಗಳನ್ನು ಉದ್ಧರಿಸಿ ಹೇಳಿ ಅವುಗಳ ಭಾವಾರ್ಥವನ್ನು ಸುಲಲಿತವಾಗಿ ತಿಳಿಯಪಡಿಸಿದರು. ಉಳಿದವರಾರೂ ಸರ್ವಧರ್ಮ ಸಮನ್ವಯದ ಪ್ರಸ್ತಾಪವನ್ನೇ ಎತ್ತಿರಲಿಲ್ಲ. ಪ್ರತಿಯೊಬ್ಬರೂ ತಮ್ಮ ತಮ್ಮ ಮತಧರ್ಮವೇ ಶ್ರೇಷ್ಠವೆಂಬರ್ಥದ ಉಪನ್ಯಾಸಗಳನ್ನು ಕೊಟ್ಟಿದ್ದರು. ಆದ್ದರಿಂದ ಸ್ವಾಮಿಗಳ ಉದಾರತಮ ವೇದವಾಣಿ ನೆರೆದಿದ್ದವರ ಬಗೆಗಳನ್ನು ತುಂಬಿ ಎದೆಗಳನ್ನು ಸೆರೆಗೈದಿತು.

ಸೆಪ್ಟೆಂಬರ್ ೧೯ನೆಯ ದಿನ ಸ್ವಾಮಿಗಳು “ಹಿಂದೂಧರ್ಮ” ಎಂಬ ಹೆಸರಿನ ತಮ್ಮ ಪ್ರಸಿದ್ಧ ಭಾಷಣವನ್ನು ಮಾಡಿದರು. ಅದರಲ್ಲಿ ಸರ್ವಮತಧರ್ಮ ಭಾವ ಸಂಸ್ಕಾರ ಗ್ರಾಸಿಯಾದ ವೇದಾಂತ ದರ್ಶನವನ್ನು ಎದೆಮುಟ್ಟುವಂತೆ ವಿವರಿಸಿದರು:

“ತತ್ತ್ವತಃ ಆತ್ಮವು ನಿತ್ಯಶುದ್ಧವಾದುದು, ನಿತ್ಯ ಮುಕ್ತವಾದುದು, ನಿತ್ಯ ಪವಿತ್ರವಾದುದು, ಸರ್ವ ಜೀವಿಗಳಲ್ಲಿಯೂ ಸಮಸ್ತ ವಿಶ್ವದಲ್ಲಿಯೂ ನೆಲೆಸಿರುವ ಅದು ಏಕವಾದರೂ ಜಡಬಂಧನದ ಉಪಾಧಿಯಿಂದ ಅನೇಕವಾದಂತೆ ತೋರುತ್ತಿದೆ. ಆ ಐಕ್ಯಾನುಭವವೆ ಮಾನವನ ಚರಮಲಕ್ಷ್ಯ!

“ಆತ್ಮವು ಹೊಸದಾಗಿ ಕರ್ತನೊಬ್ಬನಿಂದ ಸೃಷ್ಟಿಯಾದುದಲ್ಲ. ಅನಾದಿಯಾದುದು, ಅನಂತವಾದುದು. ಅದರ ಸುಖದುಃಖಗಳೆಲ್ಲ ಅದರ ಕರ್ಮದಿಂದಲೆ ಸಿದ್ಧಿಸುತ್ತದೆ. ನಾನು ನನ್ನದು ಎಂಬ ಅಹಂಕಾರ ತೊಲಗಬೇಕು. ಅಂದರೆ ವ್ಯಷ್ಟಿ ವಿನಾಶವೆಂದರ್ಥವಲ್ಲ; ವ್ಯಷ್ಟಿ ವಿಕಾಸಹೊಂದಿ ಸಮಷ್ಟಿಯಾಗುವುದೆಂದರ್ಥ. ಯಾವಾಗ ಕ್ಷುದ್ರ ಅಹಂಕಾರವು ತೊಲಗಿ, ಸ್ವಾರ್ಥತೆ ಮಾಯವಾಗುವುದೊ ಆಗ ಅನಂತತೆಯ ಅನುಭವವಾಗುತ್ತದೆ. ಆಗಲೆ ವ್ಯಷ್ಟಿ ತನ್ನ ಸ್ವಸ್ವರೂಪವನ್ನು ಹೊಂದಿ ಸಮಷ್ಟಿಯಾಗುತ್ತದೆ. ಆಗಲೆ ಮರಣ ತೊಲಗಿ ಅಮರತೆಯುಂಟಾಗುತ್ತದೆ. ಆಗಲೆ ದುಃಖವಳಿದು ಆನಂದವುಂಟಾಗುತ್ತದೆ. ಆಗಲೆ ಅಜ್ಞಾನ ತೊಲಗಿ ಮಾನವನು ಜ್ಞಾನದಲ್ಲಿ ಲೀನವಾಗುತ್ತಾನೆ. ನೂತನ ವಿಜ್ಞಾನಶಾಸ್ತ್ರವು ಜಡಾದ್ವೈತವನ್ನು ಸಾಧಿಸಿದೆ. ಜಡಶರೀರವು ಜಡಪ್ರಕೃತಿ ಸಮುದ್ರದಲ್ಲಿ ಮಿಂಚಿ ಮಾಯವಾಗುವ ಒಂದು ನಶ್ವರವಾದ ತರಂಗವೆಂಬುದನ್ನು ತೋರಿಸಿದೆ. ಅಂತೆಯೆ ಸನಾತನ ವೇದಾಂತವು ಚೇತನಾದ್ವೈತವನ್ನು ಸಾಧಿಸಿದೆ. ಜೀವನವು ವಿಶ್ವಾತ್ಮದಲ್ಲಿ ಹೊಳೆದಳಿಯುವ ಒಂದು ನಶ್ವರವಾದ ತೋರಿಕೆ ಮಾತ್ರವೆಂಬುದನ್ನು ಅನುಭವದಿಂದ ತೋರಿಸಿದೆ. ಹಿಂದೂ ದಾರ್ಶನಿಕರು ಕೆಚ್ಚೆದೆಯವರು. ಅವರು ಏಕೆ ಎಂಬ ಪ್ರಶ್ನೆಗೆ ನಾನರಿಯೆ ಎಂಬ

ಉತ್ತರವನ್ನು ಧೈರ್ಯವಾಗಿ ಹೇಳಿಬಿಡುತ್ತಾರೆ. ಅವ್ಯಕ್ತವೇಕೆ ವ್ಯಕ್ತವಾಯಿತು? ತೋರಿಕೆಗಾದರೂ ಮುಕ್ತಾತ್ಮವೇಕೆ ಬಂಧಿತವಾಯಿತು? ಭರತ ಖಂಡದ ದಾರ್ಶನಿಕರು ಅದನ್ನು ಅನಿರ್ವಚನೀಯವೆಂದು ಹೇಳಿರುತ್ತಾರೆ. ಅನಿರ್ವಚನೀಯವಾದವು ಅಜ್ಞೇಯವಾದುದಲ್ಲ, ಏಕೆಂದರೆ ಅಜ್ಞಾನದ ಘೋರಾಂಧಕಾರವು ತೊಲಗಿ ಜ್ಞಾನಜ್ಯೋತಿ ಮೂಡಿದರೆ ಬ್ರಹ್ಮಸಾಕ್ಷಾತ್ಕಾರವಾಗುವುದು. ಅಜ್ಞಾನ ಹೇಗೆ ಬಂತು? ಅದನ್ನು ನಾವರಿಯೆವು. ಜ್ಞಾನದಿಂದ ಧ್ಯೇಯ ಸಾಧನೆ ಮಾಡುವುದನ್ನಂತೂ ನಾವು ಚೆನ್ನಾಗಿ ಬಲ್ಲೆವು. ಸಾಧನೆಯಿಂದ ಸಿದ್ಧಿ ಲಭಿಸಿಯೇ ಲಭಿಸುತ್ತದೆ.

"ಎಲೈ ಅಮೃತಪುತ್ರರಿರಾ, ಹಿಂದೂಗಳು ನಿಮ್ಮನ್ನು ಪಾಪಿಗಳೆಂದು ಎಂದಿಗೂ ಪರಿಗಣಿಸರು. ಪಾಪಿಗಳೇನು? ದೇವರ ಮಕ್ಕಳು ನೀವು; ಅಮೃತಪುತ್ರರು ನೀವು; ನಿತ್ಯ ವಿಮುಕ್ತರು ನೀವು; ಪರಮಪವಿತ್ರರು ನೀವು. ಮಾನವನನ್ನು ಪಾಪಿಯೆಂದು ಕರೆಯುವುದು ಮಹಾಪಾಪ! ಸಿಂಹಗಳೇ, ಹೊರಗೆ ಬನ್ನಿ, ಮೇಲೇಳಿ. ಕುರಿಗಳು ನಾವೆಂಬ ಮಾಯೆಯನ್ನು ಕೊಡಹಿಬಿಡಿ. ಅಮೃತಾತ್ಮರು ನೀವು; ಮುಕ್ತಾತ್ಮರು ನೀವು; ಧನ್ಯಾತ್ಮರು ನೀವು; ನಿತ್ಯಾತ್ಮರು ನೀವು. ನೀವು ಜಡರಲ್ಲ. ಶರೀರಗಳು ನೀವಲ್ಲ. ಜಡಪ್ರಕೃತಿ ನಿಮಗೆ ದಾಸಿ. ನೀವದಕ್ಕೆ ದಾಸರಲ್ಲ.

"ವೇದಗಳು ಬೋಧಿಸುವುದು ಪರಸ್ಪರ ವಿರುದ್ಧವಾದ ಪ್ರಕೃತಿ ನಿಯಮಗಳ ಸಮುಚ್ಚಯ ಮಾತ್ರವನ್ನಲ್ಲ; ಕಾರ್ಯಕಾರಣಗಳ ಕೊನೆಗಾಣದ ಸೆರೆಮನೆಯನ್ನಲ್ಲ; ಆದರೆ ಸಮಸ್ತ ಜಡಚೇತನಗಳಲ್ಲಿ ಅಂತರ್ಯಾಮಿಯಾಗಿರುವ ಏಕಮಾತ್ರ ಪರತತ್ವವನ್ನು.

ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ ।
ಭಯಾದಿಂದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಂಚಮಃ ॥

"ಯಾರ ಭಯದಿಂದ ಗಾಳಿ ಬೀಸುವುದೊ, ಬೆಂಕಿಯುರಿಯುವುದೋ, ಮುಗಿಲು ಮಳೆಗರೆವುದೊ, ಸಾವು ಕರ್ತವ್ಯವೆಸಗುವುದೊ ಅಂತಹ ಸರ್ವವ್ಯಾಪ್ತವೂ ಸರ್ವಶಕ್ತವೂ ಸರ್ವಶುದ್ಧವೂ ಕರುಣಾಮಯವೂ ನಿರಾಕಾರವೂ ಆದ ಸಚ್ಚಿದಾನಂದನನ್ನು ಸಾಕ್ಷಾತ್ಕಾರ ಮಾಡಲು ಸಿದ್ಧರಾಗಿ, ಅಮೃತಪುತ್ರರೆಂಬ ಹೆಸರಿಗೆ ಯೋಗ್ಯರಾಗಿ!"

ಈ ವೇದ ಗಂಭೀರವಾಣಿ ಅಮೆರಿಕದಲ್ಲೆಲ್ಲ ಮೊಳಗಿ ಬೆರಗುಗೊಳಿಸಿತು. ಅದರ ಪ್ರಭಾವ ಭವ್ಯಾದ್ಭುತವಾಗಿತ್ತು. ಹಿಮಾಲಯ ಪರ್ವತಧ್ವನಿ ಅಮೆರಿಕಾದಲ್ಲಿ ಮೊಳಗಿದಂತಿತ್ತು. ನಿನ್ನೆ ತಾನೆ ಅಜ್ಞಾತರೂ ಅನಾಥರೂ ಆಗಿದ್ದ ಸ್ವಾಮಿಜಿ ನಿಮಿಷಮಾತ್ರದಲ್ಲಿಯೆ ವಿಖ್ಯಾತರಾದರು. ಅವರ ಪರಿಚಯ ಲಾಭಕ್ಕಾಗಿ ಸ್ಪರ್ಧೆಯಾಗತೊಡಗಿತು. ವೃತ್ತಪತ್ರಿಕೆಗಳು ಅವರ ಕೀರ್ತಿಯನ್ನು ತುತ್ತೂರಿಯೂದಿ ಸಾರಿದುವು. ಮುಖ್ಯಪತ್ರಿಕೆಯೊಂದು ವಿವೇಕಾನಂದರನ್ನು ಕುರಿತು ಹೀಗೆಂದು ಬರೆಯಿತು: "ಸರ್ವಧರ್ಮ ಸಮ್ಮೇಳನದಲ್ಲಿ ವಿವೇಕಾನಂದರೇ ಶ್ರೇಷ್ಠತಮ ವ್ಯಕ್ತಿ. ಅವರ ಭಾಷಣವನ್ನು ಕೇಳಿದ ಮೇಲೆ ಇಂತಹ ಸುಸಂಸ್ಕೃತ ಜನಾಂಗಕ್ಕೆ ನಾವು ಧರ್ಮಪ್ರಚಾರಕರನ್ನು ಕಳುಹಿಸುವುದು ಶುದ್ಧ ಮೂರ್ಖತನವೆಂದೇ ಭಾವಿಸುತ್ತೇವೆ."

ಮತ್ತೊಂದು ಪತ್ರಿಕೆ ಹೀಗೆಂದು ಬರೆಯಿತು:

“ವಿವೇಕಾನಂದರು ಧರ್ಮಮಹಾಸಭೆಯ ನಚ್ಚಿನ ಕಣ್ಣು. ಅವರ ಭದ್ರಾಕಾರವೂ ಅವರಾಡುವ ತತ್ತ್ವಗಳ ವೈಭವವೂ ಸರ್ವರನ್ನೂ ಸೆರೆಗೊಂಡಿವೆ. ಅವರು ವೇದಿಕೆಯ ಮೇಲೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋದರೆ ಸಾಕು, ಕೈಚಪ್ಪಾಳೆಗಳಿಂದ ಮಂದಿರವು ಕಂಪಿಸುತ್ತದೆ. ಆದರೆ ಅವರು ಮಾತ್ರ ಅಷ್ಟೊಂದು ಜನರ ಹೊಗಳಿಕೆಯನ್ನೂ ಬಾಲಕರಂತೆ ಸ್ವೀಕರಿಸುತ್ತಾರೆ. ಅಹಂಕಾರದ ಸುಳಿವು ಕೂಡ ಅವರಲ್ಲಿಲ್ಲ... ಧರ್ಮಸಭೆಯಲ್ಲಿ ವಿವೇಕಾನಂದರನ್ನು ಕಟ್ಟಕಡೆಯ ಉಪನ್ಯಾಸಕರನ್ನಾಗಿ ಮಾಡುತ್ತಾರೆ. ಸಭೆ ಮುಕ್ತಾಯವಾಗುವವರೆಗೆ ಜನರನ್ನು ಹಿಡಿದು ನಿಲ್ಲಿಸುವುದಕ್ಕೆ! ಬಿಸಿಲ ಬೇಗೆ ಹೆಚ್ಚಾದ ದಿನಗಳಲ್ಲಿ ಯಾರಾದರೂ ನೀರಸವಾಗಿ ಬಹಳ ಹೊತ್ತು ಮಾತಾಡಿದರೆ ಜನರು ತಂಡತಂಡವಾಗಿ ಮನೆಗೆ ಹೋಗಲು ಉಪಕ್ರಮಿಸುತ್ತಾರೆ. ಅದನ್ನು ತಿಳಿದಕೂಡಲೆ ಅಧ್ಯಕ್ಷರು ಎದ್ದುನಿಂತು ವಿವೇಕಾನಂದರು ಕಡೆಯಲ್ಲಿ ಒಂದು ಸಣ್ಣ ಭಾಷಣ ಮಾಡುವರೆಂದು ಹೇಳುತ್ತಾರೆ. ಕೂಡಲೆ ಜನರು ಶಾಂತರಾಗಿ ಕುಳಿತುಬಿಡುತ್ತಾರೆ. ಸಾವಿರಾರು ಜನರು ಬೀಸಣಿಗೆಗಳಿಂದ ಬೀಸಿಕೊಳ್ಳುತ್ತ, ವಿವೇಕಾನಂದರ ಹದಿನೈದೇ ನಿಮಿಷಗಳ ಭಾಷಣವನ್ನು ಕೇಳಲೆಂದು ಎರಡು ಮೂರು ಗಂಟೆಗಳ ಪರ್ಯಂತ ಇತರರ ನೀರಸ ಭಾಷಣಗಳನ್ನು ಕೇಳುತ್ತಾ ತಾಳ್ಮೆಯಿಂದ ನಿರೀಕ್ಷಿಸುತ್ತಾರೆ. ಎಲ್ಲ ಮುಗಿದ ಮೇಲೆ ಬೆಲ್ಲವಿರಬೇಕೆಂಬ ನೀತಿ ಅಧ್ಯಕ್ಷರಿಗೆ ಚೆನ್ನಾಗಿ ಗೊತ್ತು.”

ಈ ಮಧ್ಯೆ ಸ್ವಾಮಿಗಳ ಯಶೋಲಾಭವನ್ನು ನೋಡಿ ಕರುಬಿ, ಕೆಲವರು ಹೊಟ್ಟೆಯುರಿಯಿಂದ ಅವರ ಮೇಲೆ ಇಲ್ಲದ ಸಲ್ಲದ ನಿಂದೆಗಳನ್ನು ಹರಡಿದರು. ಸಂನ್ಯಾಸಿ ಸ್ತ್ರೀಸಂಗಲೋಲನೆಂದೂ ನೀತಿಗೆಟ್ಟವನೆಂದೂ ಜಾತಿಭ್ರಷ್ಟನೆಂದೂ ಸಮಾಜ ಬಿಟ್ಟವನೆಂದೂ ಇಂಡಿಯಾ ದೇಶದಲ್ಲಿರುವ ಭಿಕಾರಿಗಳ ಗುಂಪಿಗೆ ಸೇರಿದವನೆಂದೂ ಆತನು ನಿಜವಾದ ಹಿಂದೂಧರ್ಮದ ಪ್ರತಿನಿಧಿಯಲ್ಲವೆಂದೂ ಆತನು ಪ್ರತಿಪಾದಿಸುವ ತತ್ತ್ವವನ್ನು ಹಿಂದೂಗಳು ಸ್ವಪ್ನದಲ್ಲಿಯೂ ಕೂಡ ಅರಿಯರೆಂದೂ ಆತನು ಕೃತ್ರಿಮ ಜೀವಿಯೆಂದೂ ಮೋಸಗಾರನೆಂದೂ, ಕೆಲವು ಜನ ಪ್ರಾಚೀನ ಸಂಪ್ರದಾಯಕ್ಕೆ ಸೇರಿದ್ದ ಕ್ಷುದ್ರದೃಷ್ಟಿಯ ಪಾದ್ರಿಗಳೂ, ಇಂಡಿಯಾದಿಂದ ಪ್ರತಿನಿಧಿಗಳಾಗಿ ಅಲ್ಲಿಗೆ ಹೋಗಿದ್ದ ಕೆಲಮಂದಿ ಥಿಯಾಸಫಿ ಬ್ರಾಹ್ಮ ಸಮಾಜಗಳ ದೊಡ್ಡ ಮನುಷ್ಯರೂ ಮುಕ್ತಕಂಠದಿಂದ ಸಾರತೊಡಗಿದರು. ಥಿಯಾಸಫಿ ಸಂಘದ ನಾಯಕರೊಬ್ಬರು ವಿವೇಕಾನಂದರು ಅಮೆರಿಕಾಕ್ಕೆ ಹೋದ ಮೊದಲಿನಲ್ಲಿ ಅವರು ಕಷ್ಟಕ್ಕೆ ಸಿಕ್ಕಿಬಿದ್ದರೆಂಬುದನ್ನು ಕೇಳಿ, ಅಲ್ಲಿದ್ದ ತಮ್ಮ ಸ್ನೇಹಿತರೊಬ್ಬರಿಗೆ “ಅಂತೂ ಪಿಶಾಚಿ ಅಲ್ಲಿಗೆ ಬಂದಿದೆ; ಹೊಟ್ಟೆಗಿಲ್ಲದೆ ಸಾಯಲಿ!” ಎಂದು ಕಾಗದ ಬರೆದಿದ್ದರಂತೆ.

ಆ ಕೀರ್ತಿ ಸನ್ಮಾನಗಳ ಮಧ್ಯೆ ಸ್ವಾಮಿಜಿ ಮಾತೃಭೂಮಿಯನ್ನು ಒಂದು ನಿಮಿಷವಾದರೂ ಮರೆಯಲಿಲ್ಲ. ಕನ್ಯಾಕುಮಾರಿಯ ಬಂಡೆಯ ಮೇಲೆ ಕುಳಿತು ದೇಶಸೇವೆಗಾಗಿ ಧನಸಂಪಾದಿಸಲು ಪಶ್ಚಿಮದೇಶಗಳಿಗೆ ಹೋಗುತ್ತೇನೆ ಎಂದು ಮಾಡಿದ ಪ್ರೂಣ್ಕೆಯನ್ನು ಸರ್ವದಾ ನೆನಪಿನಲ್ಲಿಟ್ಟಿದ್ದರು. ಆದ್ದರಿಂದಲೇ ಧರ್ಮ ಮಹಾಸಭೆಯಲ್ಲಿ ಅವರು ಮಾಡಿದ ಒಂದು ಭಾಷಣದಲ್ಲಿ ನೆರೆದಿದ್ದ ಸಾವಿರಾರು ಕ್ರೈಸ್ತರನ್ನು ಸಂಬೋಧಿಸಿ ನಿರ್ಭೀತರಾಗಿ ಹೀಗೆಂದರು:

“ಕ್ರೈಸ್ತರು ಸದ್ವಿಮರ್ಶೆಗೆ ಸಿದ್ಧರಾಗಿರಬೇಕು. ನಿಮ್ಮಲ್ಲಿರುವ ಒಂದೆರಡು ಕುಂದುಕೊರತೆಗಳನ್ನು ಬಯಲಿಗೆಳೆದರೆ ನನ್ನನ್ನು ಮನ್ನಿಸುವಿರೆಂದು ನಂಬುತ್ತೇನೆ. ನೀವು ಕ್ರೈಸ್ತರು. ಭಾರತೀಯರ ಆತ್ಮ ಸಂರಕ್ಷಣೆಯ ಸಲುವಾಗಿ ಪಾದ್ರಿಗಳನ್ನು ಕಳುಹಿಸುತ್ತೀರಿ. ಹೊಟ್ಟೆಗಿಲ್ಲದೆ ಸಾಯುವವರ ದೇಹಸಂರಕ್ಷಣೆಯನ್ನೇಕೆ ಮಾಡಲು ಪ್ರಯತ್ನಿಸುವುದಿಲ್ಲ? ಇಂಡಿಯಾ ದೇಶದಲ್ಲಿ ಭಯಂಕರ ಕ್ಷಾಮಕಾಲದಲ್ಲಿ ಲಕ್ಷಾಂತರ ಜನರು ಹಸಿವೆಯಿಂದ ಮಡಿದರು. ಕ್ರೈಸ್ತರಾದ ನೀವು ಅವರಿಗಾವ

ಸಹಾಯವನ್ನೂ ಮಾಡಲಿಲ್ಲ. ಆದರೆ ಇಂಡಿಯಾ ದೇಶದಲ್ಲಿ ಎಲ್ಲೆಲ್ಲಿಯೂ ಚರ್ಚುಗಳನ್ನು ಮಾತ್ರ ಕಟ್ಟುತ್ತಿದ್ದೀರಿ. ಇಂಡಿಯಾ ದೇಶಕ್ಕೆ ಬೇಕಾಗಿರುವುದು ನಿಮ್ಮ ಧರ್ಮೋಪದೇಶವಲ್ಲ. ಅವರಿಗೆ ಧರ್ಮೋಪದೇಶ ಅಜೀರ್ಣವಾಗುವಷ್ಟು ಬೇಕಾದರೂ ಇದೆ. ಹಸಿವೆಯಿಂದ ದಿನವೂ ಸಾಯುತ್ತಿರುವ ಭರತಖಂಡದ ಲಕ್ಷಾಂತರ ಜನಗಳು ಧರ್ಮ ಧರ್ಮ ಎಂದು ಒರಲುತ್ತಿಲ್ಲ. ಅನ್ನ ಅನ್ನ ಎಂದು ಒಣಗಿದ ಗಂಟಲಿಂದ ಕಿರುಚುತ್ತಿದ್ದಾರೆ. ಅವರು ಕೇಳುವುದು ಅನ್ನ. ನೀವು ಕೊಡುವುದು ಮಣ್ಣು. ಹಸಿವೆಯಿಂದ ಬಳಲಿ ಸಾಯುತ್ತಿರುವ ಜನಾಂಗಕ್ಕೆ ಧರ್ಮೋಪದೇಶ ಮಾಡುವುದು ಒಂದು ಮಹಾ ನೀಚಕಾರ್ಯ. ಹಸಿದವನಿಗೆ ವೇದಾಂತ ಬೋಧಿಸುವುದು ಒಂದು ಅಧಮಾಧಮ ಪಾಪ. ಇಂಡಿಯಾ ದೇಶದಲ್ಲಿ ಯಾವನಾದರೂ ಧನಾರ್ಜನೆಗಾಗಿ ಧರ್ಮಬೋಧೆ ಮಾಡಿದನೆಂದರೆ ಅವನನ್ನು ಮುಖದ ಮೇಲೆ ಉಗುಳಿ ಸಮಾಜದಿಂದ ಹೊರಗೆ ಕತ್ತು ಹಿಡಿದು ನೂಕುತ್ತಾರೆ. ಹಸಿದು ಸಾಯುವ ನನ್ನ ಸೋದರರ ಸಲುವಾಗಿ ನಿಮ್ಮಿಂದ ಸಹಾಯ ಬೇಡಲು ನಾನಿಲ್ಲಿಗೆ ಬಂದೆ. ಕ್ರೈಸ್ತಭೂಮಿಯಲ್ಲಿ ಕ್ರೈಸ್ತರಿಂದ ಕ್ರೈಸ್ತರಲ್ಲದವರಿಗೆ ಸಹಾಯ ದೊರಕುವುದು ದುರ್ಲಭವೆಂದು ನನ್ನ ಅನುಭವಕ್ಕೆ ಬಂದಿದೆ."

ಅವರಿಗೆ ಯಶೋಲಾಭವಾದ ದಿನವೆ, ಚಿಕಾಗೊ ನಗರದ ಶ್ರೀಮಂತನೊಬ್ಬನು ಅವರನ್ನು ತನ್ನ ಮನೆಗೆ ಕರೆದೊಯ್ದನು. ಅಲ್ಲಿ ಅವರಿಗೆ ರಾಜಯೋಗ್ಯವಾದ ಅತಿಥಿಸತ್ಕಾರ ಸನ್ಮಾನಗಳು ದೊರೆತುವು. ಮಲಗಲು ಅವರಿಗೊಂದು ರಾಜಭವನ ಸದೃಶವಾದ ಕೊಠಡಿ ನೇರ್ಪಟ್ಟಿತ್ತು. ರಾತ್ರಿ ಹಂಸತೂಲಿಕಾತಲ್ಪದ ಮೇಲೆ ಪವಡಿಸಿದ್ದಾಗ ಇದ್ದಕ್ಕಿದ್ದ ಹಾಗೆ ಅವರಿಗೆ ಭಾರತವರ್ಷದ ದಾರಿದ್ರ್ಯದ ನೆನಪಾಯಿತು. ಅಮೆರಿಕಾ ಸಂಯುಕ್ತ ರಾಜ್ಯದ ಐಶ್ವರ್ಯಕ್ಕೂ ಭಾರತಾಂಬೆಯ ಬಡತನಕ್ಕೂ ಇರುವ ತಾರತಮ್ಯದ ಪಿಶಾಚ ವಿಕಟಾಕಾರವಾಗಿ ಅವರೆದುರು ನಿಂತಿತು. ಅರಳೆಯ ಹಾಸಿಗೆ ಮುಳ್ಳಿನ ಶಯ್ಯೆಯಂತೆ ತೋರಿತು. ಸುರಿಯುತ್ತಿದ್ದ ಕಂಬನಿಗಳಿಂದ ತಲೆದಿಂಬು ತೋಯ್ದುಹೋಯಿತು. ಮಲಗಲಾರದೆ ಮೇಲೆದ್ದು ಕಿಟಕಿಯ ಬಳಿಗೆ ಹೋಗಿ ಗಭೀರ ಘೋರಾಂಧಕಾರದ ನಿಶೆಯನ್ನು ನಿಟ್ಟಿಸುತ್ತ ನಿಂತರು. ಕಡೆಗೆ ದುಃಖವಶರಾಗಿ ರೋದಿಸುತ್ತಾ ನೆಲದ ಮೇಲೆ ಕುಳಿತು, "ಹೇ ಜಗಜ್ಜನನಿ, ನನ್ನ ಮಾತೃ ಭೂಮಿ ಬಡತನದಲ್ಲಿ ನರಳುತ್ತಿದೆ, ಕೀರ್ತಿಯಿಂದ ನನಗೆ ಆಗಬೇಕಾದುದೇನು? ಅಯ್ಯೋ ನಮಗೆಂತಹ ದುರವಸ್ಥೆ ಬಂದೊದಗಿದೆ? ಒಂದು ತುತ್ತು ಕೂಳಿಗೆ ಗತಿಯಿಲ್ಲವಲ್ಲ! ಇಲ್ಲಿಯಾದರೊ ಜನಗಳು ಐಶ್ವರ್ಯದಲ್ಲಿ ಓಲಾಡುತ್ತಿದ್ದಾರೆ. ಭಾರತೀಯರನ್ನು ಮೇಲೆತ್ತುವವರಾರು? ಹಸಿದವರಿಗೆ ಅನ್ನವಿಕ್ಕುವವರಾರು? ಹೇ ಜನಜ್ಜನನಿ, ನಮಗಾವುದಾದರೂ ದಾರಿ ತೋರು!" ಎಂದು ಪ್ರಾರ್ಥಿಸುತ್ತ ರಾತ್ರಿಯನ್ನು ಕಳೆದರಂತೆ.

ಇಷ್ಟರಲ್ಲಿ ಒಂದು ಸಂಘದವರು ಸಂಯುಕ್ತ ಸಂಸ್ಥಾನದಲ್ಲೆಲ್ಲ ತಿರುಗಿ ಉಪನ್ಯಾಸಗಳನ್ನು ಕೊಡುವಂತೆ ಸ್ವಾಮಿಜಿಯವರನ್ನು ಕೇಳಿಕೊಂಡರು. ಸ್ವಾಮಿಜಿ ಸಂತೋಷದಿಂದ ಒಪ್ಪಿಕೊಂಡು ನಗರನಗರಗಳಲ್ಲಿಯೂ ತಿರುಗಿ, ಅಮೆರಿಕಾ ದೇಶದ ಜನರಲ್ಲಿ ಭರತಖಂಡದ ಪರವಾಗಿದ್ದ ಅಜ್ಞಾನ ಕುಜ್ಞಾನಗಳನ್ನು ಪರಿಹರಿಸಿ, ಭಾರತವರ್ಷದ ಪುರಾತನ ಸಂಸ್ಕೃತಿಯ ಮಹಿಮೆ ಲಾವಣ್ಯಗಳನ್ನು ಬೆಳಗಿದರು. ಭಾರತಭೂಮಿಗೆ ಬಂದ ಮಹಾಶಯರಾದ ಪಾದ್ರಿಗಳು ಪಶ್ಚಿಮದೇಶಗಳಲ್ಲಿ ಹಿಂದೂಗಳಿಗೆ ವಿರೋಧವಾಗಿ ಇಲ್ಲದಸಲ್ಲದ ದೋಷಗಳನ್ನು ಹರಡಿದ್ದರು. ಹಿಂದೂಗಳು ಅನಾಗರಿಕರೆಂದೂ ನಗ್ನರೆಂದೂ ನರಮಾಂಸ ಭಕ್ಷಕರೆಂದೂ ನೀತಿಬಾಹಿರರೆಂದೂ ಪಾಶ್ಚಾತ್ಯರು ತಿಳಿಯುವಂತೆ ಮಾಡಿದ್ದರು. ಸ್ವಾಮಿಜಿ ಅವರ ಹುಳುಕನ್ನು ಹೊರಗೆಡಹಿ ಸತ್ಯವನ್ನು ಪ್ರಕಾಶಕ್ಕೆ ತಂದರು. ಅನೇಕರು ಅನೇಕ ವಿಧವಾದ

ಒರಟೊರಟಾದ ಪ್ರಶ್ನೆಯನ್ನು ಕೇಳುತ್ತಿದ್ದರು. ಒಂದು ದಿನ ಮಹಿಳೆಯೊಬ್ಬಳು "ಸ್ವಾಮಿಜಿ, ಹಿಂದೂಗಳು ಮಕ್ಕಳನ್ನು ಮೊಸಳೆಗಳಿಗೆ ಎಸೆಯುತ್ತಾರಂತೆ, ಅದು ನಿಜವೆ?" ಎಂದು ಕೇಳಿದ್ದಕ್ಕೆ ಸ್ವಾಮಿಗಳು "ಹೌದು ತಾಯಿ, ನನ್ನನ್ನೂ ನನ್ನ ತಾಯಿ ಮೊಸಳೆ ಬಾಯಿಗೆ ಬಿಸಾಡಿದ್ದಳು. ಆದರೆ ನಾನು ಹೇಗೋ ತಪ್ಪಿಸಿಕೊಂಡು ಬದುಕಿದೆ" ಎಂದು ವ್ಯಂಗ್ಯಪರಿಹಾಸ್ಯದಿಂದ ಉತ್ತರವಿತ್ತರಂತೆ. ಹೀಗೆ ಒಂದೊಂದು ಸಾರಿ ಹಾಸ್ಯದಿಂದಲೂ ಒಂದೊಂದು ಸಾರಿ ಗಾಂಭೀರ್ಯದಿಂದಲೂ ಜನರು ಕೇಳಿದ ಅಜ್ಞಾನಜನ್ಯವಾದ ಪ್ರಶ್ನೆಗಳಿಗೆ ಉತ್ತರಕೊಟ್ಟು ಮೂಢತನವನ್ನು ಪರಿಹರಿಸುತ್ತಿದ್ದರು. ಸ್ವಾಮಿಗಳು ಪಶ್ಚಿಮದೇಶಗಳಿಗೆ ಕಾಲಿಟ್ಟುದು ಬರಿಯ ಸನಾತನ ಧರ್ಮಪ್ರಚಾರ ಮಾತ್ರಕ್ಕಲ್ಲ; ಜಗತ್ತನ್ನು ಎಚ್ಚರಗೊಳಿಸುವುದಕ್ಕೆ. ಆದ್ದರಿಂದ ಅವರು ಇತರ ಮತಸ್ಥರ ಸಂಕುಚಿತ ದೃಷ್ಟಿಯನ್ನು ಹರಿಹರಿದು ವಿಶಾಲಗೊಳಿಸಲು ಸ್ವಲ್ಪವೂ ಹಿಂಜರಿಯುತ್ತಿರಲಿಲ್ಲ. ಸತ್ಯವಾದಿಯಾದ ವಿವೇಕಾನಂದರು, ಇತರ ಉಪನ್ಯಾಸಕರಂತೆ ಅಮೆರಿಕಾದ ವೈಭವದೇವತೆಗೆ ಚಾಮರ ಬೀಸುವ ಕೆಲಸಕ್ಕಾಗಿ ಮಾತ್ರ ಹೋಗಿರಲಿಲ್ಲ; ಅವರ ಕೈಯಲ್ಲಿ ಪೊರಕೆಯೂ ಇತ್ತು, ಕಸ ಗುಡಿಸುವುದಕ್ಕೆ.

ಆದ್ದರಿಂದಲೆ ಪಾದ್ರಿಗಳಲ್ಲಿ ಬಹುಜನರು ಕುಪಿತರಾಗಿ ಸ್ವಾಮಿಜಿಯನ್ನು ಪತ್ರಿಕೆಗಳಲ್ಲಿ ಖಂಡಿಸತೊಡಗಿದರು. ಸ್ವಾಮಿಗಳಿಗೆ ಸ್ನೇಹಿತರಾಗಿದ್ದ ಇನ್ನೆಷ್ಟೋ ಜನ ಪಾದ್ರಿಗಳೂ ದೊಡ್ಡ ಮನುಷ್ಯರೂ ಆ ನಿಂದೆಗಳನ್ನು ಪ್ರತಿಭಟಿಸುವಂತೆ ಅವರಿಗೆ ಹೇಳಿದರು. ಆದರೆ ಸ್ವಾಮಿಜಿ ಕೆಸರಿಗೆ ಕಲ್ಲೆಸೆಯುವ ಕ್ಷುದ್ರತೆಗೆ ಮನಗೊಡಲಿಲ್ಲ. ತಾವು ಒಂದು ದಿನವೂ ಒಬ್ಬರನ್ನಾದರೂ ನಿಂದಿಸದ ಶ್ರೀರಾಮಕೃಷ್ಣ ಪರಮಹಂಸರ ಶಿಷ್ಯರೆಂಬುದನ್ನು ಮರೆಯಲಿಲ್ಲ.

ಆ ಸಂಘದವರು ಸ್ವಾಮಿಗಳ ಉಪನ್ಯಾಸಗಳಿಂದ ಬೇಕಾದಷ್ಟು ಹಣವನ್ನು ಸಂಪಾದಿಸಿದರೂ ಮೋಸ ಮಾಡತೊಡಗಿದರು. ೨೫೦೦ ಡಾಲರುಗಳು ಸಿಕ್ಕರೆ ೨೦೦ ಡಾಲರುಗಳನ್ನು ಕೊಡಹತ್ತಿದರು. ಇದನ್ನು ನೋಡಿ ಅವರು ಜುಗುಪ್ಸೆಯಿಂದ ಆ ಸಂಘದ ಸಹವಾಸವನ್ನೇ ಬಿಟ್ಟರು. ಅದೂ ಅಲ್ಲದೆ ಗಹನ ವಿಷಯಗಳನ್ನು ಕುರಿತು, ಬೀದಿಯ ದೊಂಬಿಗೆ ಉಪನ್ಯಾಸ ಮಾಡುವುದೂ ಅವರಿಗೆ ಸರಿಯೆಂದು ತೋರಲಿಲ್ಲ.

* * *

ಪ್ರಮೋದದಾಸನು "ಸ್ವಾಮಿಜಿ, ನೀವು ಸಂನ್ಯಾಸಿಗಳು; ನೀವು ಶೋಕಾರ್ತರಾಗುವುದು ಅಷ್ಟೇನೂ ತರವಲ್ಲ" ಎಂದನು.

ಸ್ವಾಮಿಗಳು ಗಂಭೀರಭಾವದಿಂದ ಉತ್ತರಕೊಟ್ಟರು: "ಏನು ನೀವು ಹೇಳುವುದು? ಸಂನ್ಯಾಸಿಯಾದ ಮಾತ್ರಕ್ಕೆ ಹೃದಯವಿಲ್ಲವೆ? ನಿಜವಾದ ಸಂನ್ಯಾಸಿ ಇತರರಿಗಾಗಿ ಹೆಚ್ಚಾಗಿ ಮರುಗುವನು. ಅಲ್ಲದೆ ನಾವೆಲ್ಲ ಮನುಷ್ಯರಲ್ಲವೆ? ಅದರಲ್ಲಿಯೂ ಅವರಿಬ್ಬರೂ ನನ್ನ ಗುರುಭಾಯಿಗಳು. ನಾವೆಲ್ಲರೂ ಗುರುದೇವನ ಪದತಲದಲ್ಲಿ ಒಟ್ಟಿಗೆ ಕುಳಿತವರಲ್ಲವೆ? ಕಲ್ಲೆದೆಯ ಸಂನ್ಯಾಸಕ್ಕೆ ನನ್ನ ಧಿಕ್ಕಾರವಿರಲಿ!"

ಸಂಘಕ್ಕೆ ಮೇರುದಂಡಪ್ರಾಯರಾಗಿದ್ದ ಗೃಹೀಭಕ್ತವರ್ಯರ ನಿಧನದಿಂದ ಸಂಘ ಸ್ವಲ್ಪ ಕಷ್ಟಗಳಿಗೆ ಗುರಿಯಾಯಿತು. ಸ್ವಾಮಿಜಿ ಶೋಕಭಾರಾಕ್ರಾಂತರಾದ ಗುರುಭಾಯಿಗಳ ಬಂಧುಗಳನ್ನು ಸಂತವಿಡುವುದಕ್ಕೂ ಸಂಘದ ವ್ಯವಸ್ಥೆಗಳನ್ನು ಸರಿಪಡಿಸುವುದಕ್ಕೂ ಕಾಶಿಯಿಂದ ಕಲ್ಕತ್ತಾಕ್ಕೆ ತೆರಳಿದರು.

## ೧೧. ಹಸುಳೆಯ ಗೆಲುವಿಗೆ ಹೆತ್ತಮ್ಮನ ಹೆಮ್ಮೆ

ಅಮೆರಿಕಾದ ನಾಗರಿಕತೆಗೆ ಯೂರೋಪು ಖಂಡದ ಮತ್ತು ಪ್ರಾಚ್ಯ ದೇಶಗಳ ನಾಗರಿಕತೆಯಲ್ಲಿ ಕಾಣಬರುವ ಆರ್ಷೇಯ ಸಹಜವಾದ ಗಾಂಭೀರ್ಯವಾಗಲಿ ತೂಕವಾಗಲಿ ಗುರೂದ್ದೇಶವಾಗಲಿ ಇನ್ನೂ ಬಂದಿರಲಿಲ್ಲ. ಆದರೆ ಹುಡುಗತನಕ್ಕೆ ಸ್ವಾಭಾವಿಕವಾದ ಉತ್ಸಾಹ, ಕುತೂಹಲ, ಚಂಚಲತೆ, ಲಘುಭಾವ, ಸಾಹಸ ಪ್ರಿಯತೆ ಇವುಗಳೆಲ್ಲ ಬೇಕಾದಷ್ಟಿದ್ದುವು. ಅಲ್ಲದೆ ಅನೇಕ ಜನಾಂಗಗಳ ವಿವಿಧ ರೀತಿಯ ರಕ್ತಸಂಮಿಶ್ರಣದಿಂದ ಅಲ್ಲಿಯ ಸಂಸ್ಕೃತಿಗೆ ಇನ್ನೂ ಒಂದು ಸುಸ್ಪಷ್ಟತೆಯಾಗಲಿ ಸ್ಥಿರತೆಯಾಗಲಿ ದೊರೆಕೊಂಡಿರಲಿಲ್ಲ. ಅಲ್ಲಿಯ ಸಂಸ್ಕೃತಿ ಇನ್ನೂ ಅರೆಬೆಂದ ಕೂಳಿನಂತಿತ್ತು.

ಹುಡುಗರಿಗೆ ಅವರ ಲಘುಬುದ್ಧಿ ಅವರಿಗೇ ತಿಳಿಯುವುದಿಲ್ಲ. ಜೊತೆಗೆ ವಿಜ್ಞಾನ ಜ್ಞಾನವು ದಾನ ಮಾಡುವ ಯಂತ್ರಗಳಿಂದ ಲಭಿಸುವ ಭೌತಶಕ್ತಿಯ ಮದಿರೆ ಮೆದುಳಿಗೇರಿತೆಂದರೆ ಉನ್ಮಾದಗ್ರಸ್ತರಾಗುತ್ತಾರೆ. ಇಂದ್ರಿಯ ಸುಖ ಸಂಪ್ರಾಪ್ತಿಯೊಂದಿಗೆ ಆತ್ಮ ಸಂಯಮವೂ ಛಂದೋಬದ್ಧವಾಗಿ ಹೆಜ್ಜೆಯಿಡದಿದ್ದರೆ ಬಾಳಿನ ತಲೆ ತಿರುಗಿ, ನಡಿಗೆ ತತ್ತರಿಸಿ, ಬದುಕು ಕುಸಿದುಬೀಳುತ್ತದೆ. ಅಮೆರಿಕಾದವರಿಗೆ ವಿಪುಲಸಂಪತ್ತೂ ಅಮಿತ ಯಂತ್ರಶಕ್ತಿಯೂ ಕೈವಶವಾಗಿದ್ದ ಹಾಗೆ ಬಹುಕಾಲದ ಸಂಸ್ಕೃತಿಯ ಸಂಯಮ, ಸ್ಥೈರ್ಯ, ಗಾಂಭೀರ್ಯ, ತಾಳ್ಮೆ, ವಿವೇಕಗಳು ಕೈವಶವಾಗಿರಲಿಲ್ಲ.

ಮೊದಮೊದಲು ಆ ದೇಶದ ಯಂತ್ರನಾಗರಿಕತೆಯ ಬೆಳಕನ್ನು ಕಂಡೊಡನೆ ಅದರ ತಳುಕಿಗೆ ಮರುಳಾಗಿ ಬೆರಗುಹೊಡೆದಂತಾಗಿದ್ದ ವಿವೇಕಾನಂದರಿಗೆ ಕೆಲದಿನಗಳಲ್ಲಿಯೆ ಗುಟ್ಟು ಗೊತ್ತಾಯಿತು. ಮೇಲುಗಡೆ ಗಟ್ಟಿಯಾಗಿ ತೋರುತ್ತಿದ್ದರೂ ಒಳಗಡೆ ಟೊಳ್ಳಿದೆ ಎಂದು.

ಸಿಂಹವು ಬೇಟೆಯಾಡುವುದನ್ನು ಕಂಡೊಡನೆ ನರಿಗಳೆಲ್ಲ ಸ್ತುತಿಪಾಠಕರಾಗಿ ಅದರ ಹಿಂದೆ ಪರಿವಾರ ಹೊರಡುತ್ತವೆ. ಸಿಂಹದ ಯಶೋಪ್ರಚಾರಕ್ಕಾಗಿಯಲ್ಲ; ಅದು ತಿಂದ ಮೇಲೆ ಉಳಿಯುವ ಚೂರುಪಾರುಗಳಿಗಾಗಿ! ಸಮುದ್ರತೀರದಲ್ಲಿ ಬೆಸ್ತನು ಮಾರಿಬಲೆಯನ್ನು ಬೀಸಿ ದಡಕ್ಕೆಳೆಯುವಾಗ ಹದ್ದು, ಗಿಡುಗ, ಕೊಕ್ಕರೆ, ಬೆಳ್ಳಕ್ಕಿ, ಕಾಗೆ ಮುಂತಾದವುಗಳೆಲ್ಲ ನೆರೆಯುವಂತೆ ವಿವೇಕಾನಂದರ ಸುತ್ತಲೂ ಕೆಲವರು ನೆರೆದರು. ತಮ್ಮ ಅಥವಾ ತಮ್ಮ ಪಂಗಡದ ಸ್ವಾರ್ಥಕ್ಕಾಗಿ ಅವರನ್ನು ಉಪಯೋಗಿಸಿಕೊಳ್ಳಲೂ ಪ್ರಯತ್ನಿಸಿದರು. ಗುಟ್ಟು ಗೊತ್ತಾದೊಡನೆ ಸ್ವಾಮಿಜಿ ನಿರ್ದಾಕ್ಷಿಣ್ಯವಾಗಿ ಮೈ ಕೊಡಹಿ, ಉಪಕಾರ ಮಾಡುವ ನೆವದಿಂದ ನೆತ್ತರು ಹೀರಲಿಕ್ಕೆ ಮೇಲೇರಿದ್ದ ಆ ಬಂದಿಳಿಕೆಗಳಿಂದ ಪಾರಾದರು. ಜಳ್ಳು ತೂರಿಹೋದ ಮೇಲೆ ಕೆಲವು ಗಟ್ಟಿ ಕಾಳು ಮಾತ್ರ ಉಳಿದುಕೊಂಡುವು.

ಈ ಮಧ್ಯೆ ಅವರು ಜ್ಞಾನಾಭಿವೃದ್ಧಿಗೆ ದೊರೆತ ಸಮಯಗಳನ್ನು ದುರುಪಯೋಗಪಡಿಸಲಿಲ್ಲ. ಪ್ರಾಚ್ಯಪಾಶ್ಚಾತ್ಯ ಸಂಸ್ಕೃತಿಗಳ ತಾರತಮ್ಯವನ್ನು ಪರಿಶೀಲಿಸಿದರು. ಅಲ್ಲಿಯ ಶಿಲ್ಪಕಲೆ, ವಿಜ್ಞಾನ, ಯಂತ್ರಕಲೆ ಮೊದಲಾದುವುಗಳನ್ನು ತಿಳಿಯಲು ಪ್ರಯತ್ನಿಸಿದರು. ಯಾವುದನ್ನು ನೋಡಿದರೂ ಚೆನ್ನಾಗಿ ಪರೀಕ್ಷಿಸದೆ ಬಿಡುತ್ತಿರಲಿಲ್ಲ. ಅವರ ಸಂಗವೇ ಜ್ಞಾನದಾಯಕವಾಗಿತ್ತೆಂದು ಆಗ ಅವರೊಡನೆ ಇದ್ದವರು ಹೇಳಿದ್ದಾರೆ. ಅಮೆರಿಕಾ ದೇಶದ ಸಾಮಾಜಿಕ ಮತ್ತು ರಾಜಕೀಯ ಜೀವನಗಳನ್ನು ಒಳಹೊಕ್ಕು ನೋಡತೊಡಗಿದರು. ಆ ದೇಶದ ವಿದ್ಯಾಭ್ಯಾಸದ ಕ್ರಮವನ್ನು ತಿಳಿದರು. ಪಾಶ್ಚಾತ್ಯರ ಇಂದ್ರಿಯಗಳು ಬಹಿರ್ಗತವಾಗಿರುವುದನ್ನೂ ಪ್ರಾಚ್ಯವು ಅಂತರ್ಮುಖಿಯಾಗಿರುವುದನ್ನೂ ಪ್ರತ್ಯಕ್ಷಾನುಭವದಿಂದ ಕಂಡು ಕೊಂಡರು. ತಮ್ಮ ಅನುಭವಗಳನ್ನೆಲ್ಲ ಕಾಗದದ ಮೂಲಕ ಪ್ರಾಚ್ಯ ಶಿಷ್ಯರಿಗೆ ತಿಳಿಸುತ್ತಲೆ ಇದ್ದರು. ಅವರನ್ನು ಹುರಿದುಂಬಿಸುತ್ತಲೆ ಇದ್ದರು. ಶಿಷ್ಯರೂ ಕಾಗದಗಳನ್ನು ಬರೆಯುತ್ತಲೆ ಇದ್ದರು.

ಸ್ವಾಮಿಗಳಿಗೆ ಅಮೆರಿಕಾ ದೇಶದ ಸ್ತ್ರೀಯರ ಧೀಶಕ್ತಿಯನ್ನು ಕಂಡು ಆಶ್ಚರ್ಯವಾಯಿತು. ಒಂದು ಕಾಗದದಲ್ಲಿ ಅವರು ಆ ದೇಶದ ಸ್ತ್ರೀಯರ ವಿಚಾರಗಳನ್ನೆಲ್ಲ ಹೊಗಳಿ ಬರೆದು, ತರುವಾಯ "ಭರತಖಂಡದ ಸ್ತ್ರೀಯರನ್ನು ಎಚ್ಚರಗೊಳಿಸಲು ಪ್ರಯತ್ನಿಸಲಾರಿರಾ! ಅವರು ಉನ್ನತಿಯನ್ನೈದಿದರೆ ದೇಶಕ್ಕೆ ಸುಖವುಂಟು. ಇಲ್ಲವಾದರೆ ನಮಗೆ ಈಗಿರುವ ಅಧೋಗತಿಯೆ ಪರಮಗತಿಯಾಗುವುದು... ನಿಶ್ಚಯ; ಧರ್ಮದ ವಿಷಯದಲ್ಲಿ ಈ ದೇಶವು ನಮಗಿಂತಲೂ ಬಹಳ ಕೆಳಗಿದೆ. ಆದರೆ ನಮ್ಮಲ್ಲಿರುವುದನ್ನು ಅವರಿಗೆ ಕೊಟ್ಟು, ಅವರಲ್ಲಿರುವ ಉತ್ತಮ ವಿದ್ಯೆಗಳನ್ನು ನಾವು ಸ್ವೀಕರಿಸುವುದು ನಮ್ಮ ಕರ್ತವ್ಯ" ಎಂದು ಬರೆದಿದ್ದಾರೆ.

ಆ ಸದ್ದುಗದ್ದಲಗಳ ನಡುವೆ, ಕೀರ್ತಿ ಪ್ರಶಂಸೆಗಳ ಕೋಲಾಹಲದಲ್ಲಿ ಸಂಭಾಷಣೆ ಉಪನ್ಯಾಸಗಳ ದಾಂದಲೆಯಲ್ಲಿ ಸ್ವಾಮಿಗಳು ಧ್ಯಾನ ಮೊದಲಾದ ಆಧ್ಯಾತ್ಮಿಕ ಸಾಧನೆಗಳನ್ನು ತಿಲಮಾತ್ರವೂ ಮರೆತಿರಲಿಲ್ಲ. ಅದನ್ನು ಕುರಿತು ಸೋದರಿ ನಿವೇದಿತೆಯವರು ಈ ರೀತಿ ಬರೆದಿದ್ದಾರೆ.

"ಮೇಲೆ ಮೇಲೆ ನೋಡಿದರೆ ಸ್ವಾಮಿಗಳು ತಪಸ್ಸು ಮಾಡುತ್ತಿದ್ದಂತೆ ಕಾಣುತ್ತಿರಲಿಲ್ಲ; ಆದರೆ ಅವರ ಜೀವಮಾನವೆಲ್ಲವೂ ಒಂದು ತಪಸ್ಯೆಯೆ ಆಗಿತ್ತು. ಉಳಿದವರಿಗೆ ಅಂತಹ ತಪಸ್ಯೆ ಕಠೋರವಾಗಿ ಪರಿಣಮಿಸುತ್ತಿತ್ತು. ಅವರು ಅಮೆರಿಕಾಕ್ಕೆ ಹೋದಾಗ ಮೊದಲು ಮೊದಲು ಚಿತ್ತವು ಧ್ಯಾನಸ್ಥವಾಗದಂತೆ ನೋಡಿಕೊಳ್ಳುವುದೆ ಕಠಿಣವಾಗುತ್ತಿತ್ತು. 'ಅವರು ಧ್ಯಾನಕ್ಕೆ ಕುಳಿತರೆಂದರೆ ಎರಡು ನಿಮಿಷಗಳಲ್ಲಿಯೆ ಬಾಹ್ಯಪ್ರಜ್ಞಾಹೀನರಾಗಿಬಿಡುತ್ತಾರೆ. ಸೊಳ್ಳೆಗಳ ಹಿಂಡೇ ಮುತ್ತಿದರೂ ಕೂಡ ಅವರಿಗೆ ಗೊತ್ತಾಗುವುದಿಲ್ಲ' ಎಂದು ಅದನ್ನು ಕಂಡ ಒಬ್ಬರು ಹೇಳಿದರು. ಅವರು ಅಮೆರಿಕಾಕ್ಕೆ ಹೋಗುವಾಗ ಈ ರೀತಿ ಧ್ಯಾನಸ್ಥರಾಗುವ ಅಭ್ಯಾಸವು ಅವರಲ್ಲಿ ಬೇರೂರಿತ್ತು. ಆ ರೈಲು ರಸ್ತೆಗಳು, ಟ್ರಾಂ ರಸ್ತೆಗಳು, ಶ್ರಮಜೀವನದ ಗಡಿಬಿಡಿ ಇವುಗಳ ಮಧ್ಯೆ ಅವರು ಎಷ್ಟೋ ಸಲ ಟ್ರಾಮಿನಿಂದ ಎಲ್ಲಿ ಇಳಿಯಬೇಕೋ ಅಲ್ಲಿ ಇಳಿಯದೆ, ಗಾಡಿಯಲ್ಲಿಯೇ ಕುಳಿತು, ಒಂದೆರಡು ಸುತ್ತು ಹಿಂದಕ್ಕೂ ಮುಂದಕ್ಕೂ ತಿರುಗುತ್ತಿದ್ದರು. ಗಾಡಿ ನಡೆಯಿಸುವವನು ದುಡ್ಡು ಕೇಳಿದಾಗಲೆ ಅವರಿಗೆ ಸ್ಮೃತಿಯುಂಟಾಗುತ್ತಿದ್ದುದು. ಅಂತಹ ಘಟನೆಗಳು ಒದಗಿದಾಗ ಅವರು ಬಹಳ ನಾಚುತ್ತಿದ್ದರು; ಮುಂದೆ ಹಾಗಾಗದಂತೆ ನೋಡಿಕೊಳ್ಳಬೇಕೆಂದು ಸಂಕಲ್ಪವನ್ನೂ ಮಾಡಿಕೊಳ್ಳುತ್ತಿದ್ದರು."

ಅಮೆರಿಕಾದಲ್ಲಿ ಸ್ವಾಮಿಗಳು ಉಪನ್ಯಾಸಯಾತ್ರೆ ಮಾಡುತ್ತಿದ್ದಾಗ ಅವರಿಗೆ ಕೆಲವು ಘಟನೆಗಳು ಒದಗಿದುವು; ವಿಚಿತ್ರವಾದ ಅನುಭವಗಳು ದೊರೆತುವು.

ಮೇಧಾವಿಯಾದ ಇಂಗರ್ಸಾಲ್ ಎಂಬ ತೀವ್ರ ನಾಸ್ತಿಕವಾದಿಯ ಪರಿಚಯವಾಯಿತು. ಇಬ್ಬರಿಗೂ ಗೆಳೆತನ ಬೆಳೆಯಿತು. ಇಂಗರ್ಸಾಲನು ಸ್ವಾಮಿಗಳನ್ನು ಕುರಿತು "ಸ್ವಾಮಿಜಿ, ನಾಲ್ವತ್ತು ವರ್ಷಗಳ ಹಿಂದೆ ನೀವು ಇಲ್ಲಿಗೆ ಬಂದು ಹೀಗೆ ಧೈರ್ಯವಾಗಿ ಬೋಧಿಸಿದ್ದರೆ ನಿಮ್ಮನ್ನು ಗಲ್ಲಿಗೆ ಹಾಕುತ್ತಿದ್ದರು; ಕಡೆಗೆ ಕಲ್ಲಿನಿಂದಾದರೂ ಹೊಡೆದೋಡಿಸುತ್ತಿದ್ದರು" ಎಂದು ಹೇಳಿದನು.

ಸ್ವಾಮಿಜಿಗೆ ಆಶ್ಚರ್ಯವಾಯಿತು, ಅಮೆರಿಕಾದವರು ಅಷ್ಟೊಂದು ಸಣ್ಣ ಮನಸ್ಸಿನವರೇ ಎಂದು. ಆದರೆ ಇಂಗರ್ಸಾಲನ ಪ್ರತಿಭಟನೆಗೂ ಸ್ವಾಮಿಗಳ ಮತಬೋಧೆಗೂ ವ್ಯತ್ಯಾಸವಿತ್ತು. ಇಂಗರ್ಸಾಲನು ದೇವರು, ಮತ, ಭಕ್ತಿ ಮೊದಲಾದ ಅಭಿಪ್ರಾಯಗಳನ್ನು ಖಂಡಿಸುತ್ತಿದ್ದನು. ಆದರೆ ಹಿಂದೂ ಸಂನ್ಯಾಸಿ ಹೊಸ ಅಭಿಪ್ರಾಯಗಳನ್ನು ಹೇಳಿದರೂ ನವದೃಷ್ಟಿಯನ್ನು ತೋರಿದರೂ ಧರ್ಮಕ್ಕೆ ವಿರೋಧವಾಗಿ ಮಾತಾಡುತ್ತಿರಲಿಲ್ಲ. ಅಲ್ಲದೆ ಕ್ರಿಸ್ತ ಮತ್ತು ಕ್ರೈಸ್ತ ಧರ್ಮಗಳಲ್ಲಿ ಆತನಿಗಿದ್ದ ಗೌರವವನ್ನು ಕಂಡು ಎಲ್ಲರೂ ಸನ್ಮಾನಿಸುತ್ತಿದ್ದರು.

ಅವರಿಬ್ಬರಿಗೂ ಇದ್ದ ವ್ಯತ್ಯಾಸ ನಡೆದ ಒಂದು ಸಂಗತಿಯಿಂದ ತಿಳಿದುಬರುತ್ತದೆ. ಇಂಗರ್ಸಾಲನು ಸ್ವಾಮಿಜಿಯನ್ನು ಕುರಿತು ಒಂದು ಸಾರಿ ಹೀಗೆಂದನು: "ಈ ಪ್ರಪಂಚವೆ ಕಡೆಯದೆಂದೂ, ಶ್ರೇಷ್ಠತಮವಾದುದೆಂದೂ ನನ್ನ ನಂಬಿಕೆ. ಆದ್ದರಿಂದ ಕಿತ್ತಲೆಹಣ್ಣಿನ ರಸವನ್ನು ಹಿಂಡಿ ಕುಡಿಯುವಂತೆ ಅದರಿಂದ ದೊರಕಬಹುದಾದ ಸುಖಗಳನ್ನೆಲ್ಲ ಹೇಗಾದರೂ ಪಡೆಯುವುದೇ ಲೇಸು."

ಸ್ವಾಮಿಜಿ "ಹಣ್ಣಿನ ರಸವನ್ನು ಚೆನ್ನಾಗಿ ಹಿಂಡಲು ಅದಕ್ಕಿಂತಲೂ ಒಳ್ಳೆಯ ಉಪಾಯ ನನಗೆ ಗೊತ್ತಿದೆ; ರಸವೂ ಹೆಚ್ಚಾಗಿ ದೊರಕುತ್ತದೆ. ನಾನು ಅಚ್ಯುತನೆಂದು ನಾನು ಬಲ್ಲೆ. ಆದ್ದರಿಂದ ನಾನು ಅವಸರ ಅವಸರವಾಗಿ ರಸವನ್ನು ಹಿಂಡಲು ಹೋಗಿ ಹಣ್ಣಿನಲ್ಲಿಯೆ ರಸವುಳಿಯುವಂತೆ ಮಾಡುವುದಿಲ್ಲ. ಮುಂದಿನ ನಾಶದ ಭಯ ನನಗಿಲ್ಲ; ಆದ್ದರಿಂದ ರಸವನ್ನು ಹಿಂಡುವುದರಲ್ಲಿಯೆ ನನಗೊಂದು ಸಂತೋಷ. ನನಗೆ ಯಾವ ಭಾರವೂ ಇಲ್ಲ. ಹೆಂಡಿರಿಲ್ಲ ಮಕ್ಕಳಿಲ್ಲ. ನಾನು ಜಗತ್ತನ್ನೆ ಪ್ರೀತಿಸಬಲ್ಲೆ; ನನಗೆ ಎಲ್ಲರೂ ಈಶ್ವರ ಸ್ವರೂಪರು. ಮನುಜರಲ್ಲಿ ನಾರಾಯಣನನ್ನು ನೋಡುವುದು ಎಂತಹ ಆನಂದಕರವಾದ ಅನುಭವ! ಈ ರೀತಿ ಹಣ್ಣನ್ನು ಹಿಂಡಿದರೆ ಒಂದು ತೊಟ್ಟು ರಸವೂ ಉಳಿಯದಂತೆ ಹಿಂಡಬಹುದಷ್ಟೆ!" ಎಂದರು.

ಅನೇಕ ಸಾರಿ ಹೋಟಲುಗಳಲ್ಲಿ ಅವರನ್ನು ನೀಗ್ರೋ ಎಂದು ತಿಳಿದು ಉಳಿದುಕೊಳ್ಳಲು ಸ್ಥಳ ಕೊಡುತ್ತಿರಲಿಲ್ಲ. ಆದರೆ ಮರುದಿನ ಅವರ ವಿಚಾರ ಗೊತ್ತಾದ ಮೇಲೆ ಹೋಟಲಿನ ಯಜಮಾನರು ಅವರಲ್ಲಿಗೆ ಓಡಿಹೋಗಿ ಕ್ಷಮೆ ಬೇಡುತ್ತಿದ್ದನು. ಒಂದು ದಿನ ನೀಗ್ರೋ ಜಾತಿಗೆ ಸೇರಿದ ಒಬ್ಬ ರೈಲಿನ ಕೂಲಿ ಸ್ವಾಮಿಗಳ ಬಳಿಗೆ ಬಂದು "ನೀವು ನಮ್ಮವರಂತೆ. ಬಹಳ

ಹೆಸರುವಾಸಿಯಾಗಿರುವಿರಂತೆ. ನಿಮಗೆ ನಾನು ಹಸ್ತಲಾಘವ ಕೊಡಬೇಕೆಂದು ಬಹಳ ಆಸೆ" ಎಂದನು. ಸ್ವಾಮಿಜಿ "ಆಗಲಿ ಅಣ್ಣಾ" ಎಂದು ಹಸ್ತಲಾಘವ ಕೊಟ್ಟರು.

ಒಂದು ದಿನ ಸ್ವಾಮಿಗಳು ಉಪನ್ಯಾಸದಲ್ಲಿ ಯೋಗಶಕ್ತಿಗಳ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಿ, ಸಿದ್ಧನಾದವನಿಗೆ ಅವುಗಳೆಲ್ಲ ಲಭಿಸುವುವು ಎಂದರು. ಉಪನ್ಯಾಸಾನಂತರ ಅದನ್ನು ಕೇಳಿದ್ದ ಶ್ರೀಮಂತನೊಬ್ಬನು ಅವರ ಬಳಿಗೆ ಬಂದು "ಹಾಗಾದರೆ, ಸ್ವಾಮಿ, ನೀವು ಹೇಳುವುದೆಲ್ಲ ಸತ್ಯವಾದರೆ, ನನ್ನ ಮನಸ್ಸಿನಲ್ಲಿರುವುದನ್ನೂ ನನ್ನ ಹಿಂದಿನ ವಿಚಾರಗಳನ್ನೂ ಹೇಳಿ ನೋಡೋಣ" ಎಂದನು. ಸ್ವಾಮಿಜಿ ಒಂದೆರಡು ನಿಮಿಷಗಳು ಸುಮ್ಮನಿದ್ದರು. ಏನೋ ಕಾರ್ಯವನ್ನು ಮಾಡಲು ಹಿಂಜರಿಯುವವರಂತೆ ತೋರಿದರು. ತರುವಾಯ ಆ ಶ್ರೀಮಂತನನ್ನು ಎವೆಯಿಕ್ಕದೆ ನೋಡತೊಡಗಿದರು. ಅವರ ತೀಕ್ಷ್ಣದೃಷ್ಟಿ ಆತನ ಆತ್ಮವನ್ನು ಚುಚ್ಚುವಂತಿತ್ತು. ಇದ್ದಕ್ಕಿದ್ದ ಹಾಗೆ ಹಾಸ್ಯಕ್ಕಾಗಿ ಬಂದಿದ್ದ ಶ್ರೀಮಂತನು ಗಂಭೀರವಾಗಿ, ಹೆದರಿ, "ಅಯ್ಯೋ, ಸ್ವಾಮಿಜಿ, ಇದೇನು ನೀವು ಮಾಡುತ್ತಿರುವುದು? ನನ್ನಾತ್ಮವನ್ನು ಯಾರೊ ಕಡೆದಂತಾಗುತ್ತಿದೆ. ನನ್ನ ಗುಟ್ಟುಗಳೆಲ್ಲ ಬಯಲಾಗುವಂತಿದೆ" ಎಂದು ಕೂಗಿಕೊಂಡನು. ಆ ಶ್ರೀಮಂತನಿಗೆ ಯೋಗಶಕ್ತಿಗಳ ವಿಚಾರವಾಗಿ ಸ್ವಾಮಿಗಳು ಹೇಳಿದ್ದು ನಿಶ್ಚಯವೆಂದು ಗೊತ್ತಾಯಿತು. ಸ್ವಾಮಿಜಿ ಯೋಗ ಶಕ್ತಿಗಳನ್ನು ಉಪಯೋಗಿಸುತ್ತಲೂ ಇರಲಿಲ್ಲ; ಪ್ರದರ್ಶಿಸುತ್ತಲೂ ಇರಲಿಲ್ಲ. ಏಕೆಂದರೆ ಅ ಅದ್ಭುತ ಶಕ್ತಿಗಳೂ ಇತರ ಐಶ್ವರ್ಯಗಳಂತೆ ಮನಮೋಹಿಸಿ ಸಾಧಕನನ್ನು ಅಧೋಗತಿಗೆ ತರಬಹುದು ಎಂಬ ಶ್ರೀಗುರುದೇವನ ಬುದ್ಧಿವಾದವನ್ನು ಅವರು ಮರೆತಿರಲಿಲ್ಲ.

* * *

ಯಾವ ದಿನ ಚಿಕಾಗೊ ನಗರದ ಧರ್ಮಮಹಾಸಭೆಯ ವೇದಿಕೆಯ ಮೇಲೆ ನಿಂತು ಆಚಾರ್ಯದೇವನು ತನ್ನ ಸಿಂಹವಾಣಿಯಿಂದ ವೇದಸಂದೇಶವನ್ನು ಸಾರಿದನೋ ಅದೇ ದಿನವೇ ಭಾರತಾಂಬೆಯ ಹೃದಯ ಯಾವುದೋ ಒಂದು ಅನಿರ್ದಿಷ್ಟ ಆನಂದದಿಂದ ವಿಕಂಪಿಸಿತು. ಧರ್ಮಸಭೆಯಲ್ಲಿ ನೆರೆದಿದ್ದ ಸಹಸ್ರಾರು ಸದಸ್ಯರ ಕರತಾಡನಗಳ ಬ್ರಹ್ಮಾಂಡಭೇದಕ ಮಹಾನಿನಾದವು ಸಂಯುಕ್ತ ಸಾಮ್ರಾಜ್ಯದ ಪರ್ವತ ಕಂದರಗಳಲ್ಲಿ ಪ್ರತಿಧ್ವನಿತವಾಗಿ, ವಿಸ್ತಾರವಾದ ಮಹಾಸಾಗರವನ್ನು ದಾಟಿ, ವಿಂಧ್ಯ ಹಿಮಾಚಲ ಸಹ್ಯಪರ್ವತಗಳನ್ನು ತಾಗಿ, ಇಮ್ಮಡಿ ಮುಮ್ಮಡಿ ನಾಲ್ಮಡಿಯಾಗಿ ಮೊಳಗಿತು. ಭರತಖಂಡದ ಕೋಟ್ಯನುಕೋಟಿ ನಿವಾಸಿಗಳು ಅದನ್ನು ಆಲಿಸಿ ಅದರರ್ಥವನ್ನು ಅರಿಯದೆ ಬೆಪ್ಪುಬೆರಗಾದರು. ಇದ್ದಕ್ಕಿದ್ದ ಹಾಗೆ ವಿವೇಕಾನಂದರ ಯಶೋಜ್ಯೋತಿಯಿಂದ ಪೂರ್ವ ಪಶ್ಚಿಮ ದಿಗಂತಗಳೆರಡೂ ಒಂದೇ ತಡವೆ ದೇದೀಪ್ಯಮಾನವಾದುದನ್ನು ಕಂಡು ಭಾರತೀಯರು ವಿಸ್ಮಿತರಾದರು. ಅತ್ತ ಪುತ್ರನು ಮಾತೆಯ ಕೀರ್ತಿಯನ್ನು ಹರಡಿ ಕೀರ್ತಿವಂತನಾದರೆ ಇತ್ತ ಹೆತ್ತ ಮಾತೆ ಹಿಗ್ಗದಿರುವಳೆ? ಸ್ವಾಮಿ ವಿವೇಕಾನಂದರು ಪಶ್ಚಿಮದೇಶಗಳಲ್ಲಿ ಸನಾತನ ಧರ್ಮವನ್ನು ಸಾರಿ, ಜಯ ಡಿಂಡಿಮವನ್ನು ಬಡಿದು, ವಿಜಯ ವೈಜಯಂತಿಯನ್ನು ಗಗನಕ್ಕೆತ್ತಿ ಹಿಡಿದ ಮಂಗಳವಾರ್ತೆ ಭರತವರ್ಷದ ನಗರ ನಗರಗಳಲ್ಲಿಯೂ ಹಳ್ಳಿಹಳ್ಳಿಗಳಲ್ಲಿಯೂ ಹಬ್ಬಿತು. ಜನರು ಆನಂದದ ಅಟ್ಟಹಾಸದಿಂದ ಹುಚ್ಚುಹುಚ್ಚಾದರು.

ಅದುವರೆಗೆ ಭರತಖಂಡವೆಂದರೆ ಅರ್ಧ ಬರ್ಬರ ದೇಶವೆಂದೂ ಭಾರತೀಯರೆಂದರೆ ಅನಾಗರಿಕರೆಂದೂ ಪಾಶ್ಚಾತ್ಯರಲ್ಲಿ ಪ್ರತೀತಿಯಿತ್ತು. ವ್ಯಾವಹಾರಿಕ ವಿಚಾರಗಳಲ್ಲಿ, ವ್ಯಾಪಾರ ವಿಜ್ಞಾನ ಮೊದಲಾದುವುಗಳಲ್ಲಿ ಪ್ರಚ್ಯರಿಗಿಂತಲೂ ತಾವು ಮೇಲಾದವರೆಂದು ತಿಳಿದ ಪಾಶ್ಚಾತ್ಯರು ಧರ್ಮದೃಷ್ಟಿಯಿಂದಲೂ ತಾವೇ ಹೆಚ್ಚಿನವರೆಂಬುದನ್ನು ಸ್ಥಾಪಿಸಲು ಬಯಸಿ ಸರ್ವಧರ್ಮ ಸಮ್ಮೇಳನವನ್ನು ಹೂಡಿದ್ದರು. ಅತ್ತ ಮಾನವರು ತಾವೊಂದು ವ್ಯೂಹವನ್ನು ರಚಿಸಿದರೆ, ಇತ್ತ ಈಶ್ವರನು ತಾನೊಂದು ಪ್ರತಿವ್ಯೂಹವನ್ನು ರಚಿಸಿದನು. ಕರ್ಮಪ್ರಪಂಚದಲ್ಲಿ ಜಯ ಹೊಂದಿ ಹೆಮ್ಮೆಯಿಂದ ಮೆರೆಯುತ್ತಿದ್ದ ಅವರು ಧರ್ಮ ಪ್ರಪಂಚದಲ್ಲಿ ಸೋತು ಹಿಮ್ಮೆಟ್ಟಿ ತಲೆತಗ್ಗಿಸಬೇಕಾಯಿತು. ಬೆಳಕು ಬರುವುದು ಮೂಡುದೆಸೆಯಿಂದಲ್ಲವೆ? ಸ್ವಾಮಿ ವಿವೇಕಾನಂದರು ಪಶ್ಚಿಮದೇಶಗಳಿಗೆ ಅಂತಹ ವಿಷಮತಮ ಸಂದರ್ಭದಲ್ಲಿ ಹೋದುದು ಒಂದು ಮಹತ್ತರವಾದ ಐತಿಹಾಸಿಕ ಘಟನೆ. ಸಮೀಪ ಕಾಲೀನರಾದ ನಮಗೆ ಅದರ ಅಗಾಧತೆ ತೋರದಿರಬಹುದು; ಆದರೆ ನಿಜಾಂಶ ಮುಂದೆ ಗೊತ್ತಾಗುವುದು. ಚಿಕಾಗೊ ನಗರದ ಸರ್ವಧರ್ಮ ಸಮ್ಮೇಳನದ ಕೀರ್ತಿ ಚಿರವಾದುದು ವಿವೇಕಾನಂದರಿಂದಲೇ. ಹಾಗಲ್ಲದಿದ್ದಿದ್ದರೆ ಅದು ಈಗಾಗಲೆ ಜನರ ಸ್ಮೃತಿಪಥದಿಂದ ಬಿದ್ದು ಮಣ್ಣುಗೂಡಿ ಹೋಗುತ್ತಿತ್ತು. ದಕ್ಷಿಣೇಶ್ವರ ದೇವಾಲಯವು ಹೇಗೆ ಶ್ರೀರಾಮಕೃಷ್ಣರ ಆಗಮನಮಾತ್ರಕ್ಕಾಗಿ ಸ್ಥಾಪಿತವಾಯಿತೋ, ಹಾಗೆಯೆ ಸರ್ವಧರ್ಮ ಸಮ್ಮೇಳನವು ವಿವೇಕಾನಂದರ ಪ್ರಕಾಶ ಮಾತ್ರಕ್ಕಾಗಿ ಮೂಡಿತು ಎಂದರೆ ಅತಿಶಯೋಕ್ತಿಯಾಗಲಾರದು. ಭಾರತ ವರ್ಷದ ಖ್ಯಾತಿಯಂತಿರಲಿ ಎಲ್ಲ ಪ್ರಾಚ್ಯದೇಶಗಳ ಖ್ಯಾತಿಯೇ ಮುಳುಗುವಂತಿತ್ತು. ಆದ್ದರಿಂದ ವಿವೇಕಾನಂದರ ಜಯವು ಪಾಶ್ಚಾತ್ಯರ ಮೇಲೆ ಪ್ರಾಚ್ಯರಿಗಾದ ಧರ್ಮ ಜಯವೆಂತಲೇ ಭಾವಿಸಬೇಕು. ಆದ್ದರಿಂದಲೆ ತನ್ನ ಪ್ರಾಚೀನತಮ ಗೌರವವನ್ನು ಅಪಾಯದಿಂದ ಸಂರಕ್ಷಿಸಿದ ಪ್ರಿಯಪುತ್ರನ ವಿಜಯವಾರ್ತೆಯನ್ನು ಕೇಳಿ ಭಾರತಾಂಬೆ ವಿಜಯೋತ್ಸವಪರೆಯಾದಳು.

ನಗರ ನಗರಗಳಲ್ಲಿಯೂ ಗೌರವಸೂಚಕ ಸಭೆಗಳು ಏರ್ಪಟ್ಟುವು. ಮಹಾರಾಜರುಗಳು ವಿಶೇಷ ದರ್ಬಾರುಗಳನ್ನು ನೆರಪಿದರು. ಅಲ್ಲಲ್ಲಿ ಉತ್ಸವಗಳು ಜರುಗಿದುವು. ರಾಮನಾಡಿನ ದೊರೆಗಳಾದ ಭಾಸ್ಕರವರ್ಮ ಸೇತುಪತಿಗಳೂ ಖೇತ್ರಿಯ ರಾಜರಾದ ಅಜಿತಸಿಂಹರೂ ತಮ್ಮ ಗುರುಗಳ ಗೌರವಾರ್ಥವಾಗಿಯೂ ಪುನರುಜ್ಜೀವಿತವಾದ ಸನಾತನ ಧರ್ಮಾರ್ಥವಾಗಿಯೂ ರಾಜಸಭೆಗಳನ್ನು ಸೇರಿಸಿ, ನೆರೆದ ಜನಗಳಿಗೆ ಸ್ವಾಮಿಗಳ ದಿಗ್ವಿಜಯದ ಕಥೆಯನ್ನು ತಿಳಿಸಿದರು. ಬೆಂಗಳೂರು, ಮದರಾಸು, ಕಲ್ಕತ್ತಾ ಮೊದಲಾದ ದೊಡ್ಡ ದೊಡ್ಡ ನಗರಗಳಲ್ಲಿ ಪುರಜನರು ಕಲೆತು ಸ್ವಾಮಿಗಳಿಗೆ ಅಭಿನಂದನ ಪತ್ರಗಳನ್ನು ಕಳುಹಿಸಿದರು. ವೃತ್ತಪತ್ರಿಕೆಗಳು ಶುಭವಾರ್ತೆಯನ್ನು ದೇಶದ ಮೇಲೆಲ್ಲ ಮಳೆಗರೆದುವು. ಯುಗಾಚಾರ್ಯ ಶ್ರೀಮತ್ ಸ್ವಾಮಿ ವಿವೇಕಾನಂದರ ಹೆಸರು ಮನೆಮಾತಾಯಿತು.

ಆ ಸಾರ್ವಜನಿಕ ಪ್ರದರ್ಶನ ಮತ್ತು ಕೋಲಾಹಲಗಳಿಂದ ನಮ್ಮ ದೃಷ್ಟಿಯನ್ನು ಸ್ವಲ್ಪ ತಿರುಗಿಸಿ ಸದ್ದುಗದ್ದಲವಿಲ್ಲದ ವರಾಹನಗರದ ಮುರುಕು ಮನೆಯ ಮುದ್ದು ಮಠವನ್ನು ಪ್ರವೇಶಿಸಿ ಅಲ್ಲೇನಾಗುತ್ತಿದೆ ಎಂದು ನೋಡೋಣ. ಶ್ರೀಗುರುದೇವನ ಶಿಷ್ಯರು, ವಿವೇಕಾನಂದರ ಸೋದರ ಸಂನ್ಯಾಸಿಗಳು, ಮಠದ ಮಂದಿರದಲ್ಲಿ ಕಲೆತು ವಿಸ್ಮಯ ಸಂತೋಷಗಳಲ್ಲಿ ಓಲಾಡುತ್ತಿದ್ದಾರೆ; ಸಂನ್ಯಾಸಿಯೊಬ್ಬನು ಪಾಶ್ಚಾತ್ಯ ಜಡವಾದಿಗಳನ್ನು ಗೆದ್ದನಂತೆ! ಆತನಾರು? ನಮ್ಮ ನರೇಂದ್ರನೇ ಇರಬಹುದೆ? ಯಾರಾದರೂ ಆಗಲಿ ಸನಾತನ ಧರ್ಮಕ್ಕೆ ಗೌರವ ದೊರಕಿತಲ್ಲಾ, ಅಷ್ಟೇ ಸಾಕು!

ವಿವೇಕಾನಂದ ಎಂಬ ಹೆಸರು ಶಿಷ್ಯರಿಗೆ ಹೊಸದು. ಏಕೆಂದರೆ ನರೇಂದ್ರನು ಭಾರವರ್ಷದಲ್ಲಿ ಪರ್ಯಟನೆ ಮಾಡುತ್ತಿದ್ದಾಗ ಮನಸ್ಸು ಬಂದಂತೆ ಹೆಸರಿಟ್ಟುಕೊಳ್ಳುತ್ತಿದ್ದನು. ಒಂದು ದಿನ ವಿವಿದಿಷಾನಂದರಾಗುತ್ತಿದ್ದನು. ಇನ್ನೊಂದು ದಿನ ಸಚ್ಚಿದಾನಂದರಾಗುತ್ತಿದ್ದನು. ವಿವೇಕಾನಂದ ಎಂಬ ಹೆಸರನ್ನು ಸೋದರ ಸಂನ್ಯಾಸಿಗಳು ಕೇಳಿರಲೇ ಇರಲಿಲ್ಲ. ಅಲ್ಲದೆ ತಮ್ಮ ನಾಯಕನು ಎಲ್ಲಿದ್ದಾನೆ? ಏನು ಮಾಡುತ್ತಿದ್ದಾನೆ? ಎಂಬ ವಿಚಾರಗಳೆ ಅವರಿಗೆ ತಿಳಿದಿರಲಿಲ್ಲ.

ಕಡೆಗೆ ಅವರಿಗೂ ನಿಜಾಂಶ ಗೊತ್ತಾಯಿತು, ವಿವೇಕಾನಂದರು ನರೇಂದ್ರನೇ ಅಲ್ಲದೆ ಮತ್ತೆ ಯಾರೂ ಅಲ್ಲವೆಂದು. ಹರ್ಷೋನ್ಮತ್ತರಾದರು. ಹರ್ಷಕ್ಕೆ ಅವರ ಹೃದಯ ಸಾಕಾಗಲಿಲ್ಲ; ಉಕ್ಕಿಯುಕ್ಕಿ ಕಂಬನಿಗಳಾಗಿ ಹರಿಯಿತು. ಗುರುದೇವನ ಭವಿಷ್ಯವಾಣಿ ಸಿದ್ಧಿಸಿತೆಂದು ಕುಣಿದಾಡಿದರು. ಪಾಳ್ಮನೆ "ಜಯ ಗುರುದೇವ! ಜಯ ಭಗವಾನ್! ಜಯ ರಾಮಕೃಷ್ಣ! ಜಯ ಶ್ರೀಮಾತೆ!" ಎಂಬ ಜಯರವದಿಂದ ಕಂಪಿಸಿತು.

ಇರಲಿ! ಇತ್ತ ಮಾತೃಭೂಮಿ ಪುತ್ರನ ವಿಜಯವಾರ್ತೆಯ ಸಂಭ್ರಮದಲ್ಲಿ ಮುಳುಗಿ ತೇಲುತ್ತಿರಲಿ! ಅತ್ತ ವೀರಪುತ್ರನ ಜೈತ್ರಯಾತ್ರೆಯ ವೈಭವ ವೈವಿಧ್ಯಗಳನ್ನು ಸಂದರ್ಶಿಸಲು ಬನ್ನಿ!

* * *

# ೧೨. ಸಹಸ್ರದ್ವೀಪೋದ್ಯಾನದಲ್ಲಿ

ಅಮೆರಿಕಾ ದೇಶಕ್ಕೆ ಸ್ವಾಮಿ ವಿವೇಕಾನಂದರು ಹೋಗುವುದಕ್ಕೆ ಮೊದಲೇ ಭಾರತೀಯ ಸಂಸ್ಕೃತಿಯ ಮತ್ತು ತತ್ತ್ವಜ್ಞಾನದ ಪ್ರತ್ಯುಷೆಯ ಮಂದಶೀತಲಕಾಂತಿ ಅಲ್ಲಿಗೆ ಪ್ರವಹಿಸಿತ್ತು. ಭಗವದ್ಗೀತೆಯನ್ನೂ ಉಪನಿಷತ್ತುಗಳನ್ನೂ ಭಾಷಾಂತರಗಳಲ್ಲಿ ಓದಿ, ಅವುಗಳ ತತ್ತ್ವಾಮೃತ ಪಾನದಿಂದ ಪೂತರಾಗಿ ಬೆಳೆದಿದ್ದ ವಿಟ್‌ಮನ್, ಎಮರ್ಸನ್ ಮೊದಲಾದ ಮಹಾಕವಿಗಳೂ ತತ್ತ್ವಜ್ಞಾನಿಗಳೂ ತಮ್ಮ ದೇಶದವರಿಗೆ ಸಹ್ಯಾದ್ರಿ ವಿಂಧ್ಯ ಹಿಮಾಚಲಗಳ ಅರಣ್ಯವಾಣಿಯನ್ನು ಸ್ವಲ್ಪ ಮಟ್ಟಿಗೆ ಪರಿಚಯ ಮಾಡಿಕೊಟ್ಟಿದ್ದರು. ಆದ್ದರಿಂದಲೇ ವಿವೇಕಾನಂದರಿಗೆ ಸುಸ್ವಾಗತವೀಯುವ ಮಿತ್ರರೂ ಪ್ರಶಂಸಕರೂ ಅಲ್ಲಿ ಬಹುಬೇಗನೆ ದೊರಕಿದುದು. ಜಳ್ಳುಗಳೆಲ್ಲ ತೂರಿಹೋದ ಮೇಲೆ ತಳದಲ್ಲಿ ಕೆಲವು ನಿಜವಾಗಿಯೂ ಗಟ್ಟಿಯಾದ ಕಾಳುಗಳು ಉಳಿದುಕೊಂಡುವು.

ವಿವೇಕಾನಂದರು ಅಮೆರಿಕಾದ ಲಘುತ್ವಕ್ಕೆ ಕಣ್ಣು ತೆರೆದಂತೆಯೆ ಅದರ ಮಹತ್ವಕ್ಕೂ ಕುರುಡಾಗಿರಲಿಲ್ಲ. ಅಲ್ಲಿಯ ಕಾರ್ಪಣ್ಯ ಮತ್ತು ಸ್ವರ್ಣಮೋಹಗಳನ್ನು ಅಲ್ಲಗಳೆದಂತೆಯೆ ಔದಾರ್ಯ ಮತ್ತು ಸಮತಾ ಭಾವಗಳನ್ನು ಕೊಂಡಾಡಿದರು. ಅಲ್ಲಿಯವರ ಯತ್ನಶೀಲತೆ, ಸಾಹಸ, ಪರದುಃಖ ಕಾತರತೆಗಳನ್ನು ಭರತಖಂಡದ ನಿರ್ವಿಣ್ಣತೆ, ನಿರಾಶೆ, ದಯಾವಿಹೀನತೆಗಳೊಡನೆ ಹೋಲಿಸಿ ಕೆಂಡದ ಕಣ್ಣೀರು ಸುರಿಸಿದ್ದಾರೆ.

ಆ ದೇಶದಲ್ಲಿ ಹೆಂಗಸರಿಗಾಗಿದ್ದ ಮಾದರಿಯ ಸೆರೆಮನೆಯೊಂದನ್ನು ನೋಡಿಕೊಂಡು ಹೊರಗೆ ಬಂದಾಗ ತಮ್ಮ ದೇಶವನ್ನು ನಿರ್ದೇಶಿಸಿ, "ಅಯ್ಯೋ ಕಟುಕರಿರಾ, ಮನುಷ್ಯತ್ವದ ಮಹಿಮೆಯನ್ನು ಕುರಿತು ಹಿಂದೂ ಧರ್ಮದಂತೆ ಮತ್ತಾವ ಧರ್ಮವೂ ಬೋಧಿಸುವುದಿಲ್ಲ; ಆದರೆ ಹಿಂದೂ ಧರ್ಮದಂತೆ ಮತ್ತಾವ ಧರ್ಮವೂ ಹೀನದೀನ ದರಿದ್ರಾನಾಥರ ಕುತ್ತಿಗೆಯ ಮೇಲೆ ಕಾಲಿಟ್ಟು ತೊತ್ತಳದುಳಿಯುವುದಿಲ್ಲ! - ತಪ್ಪು ಹಿಂದೂ ಧರ್ಮದ್ದಲ್ಲ, ಧರ್ಮ ನಟರದು" ಎಂದು ನೊಂದು ನುಡಿದರಂತೆ.

ಆ ನೋವಿನಿಂದಲೇ ಲೇಖನಿಯ ಕಠಾರಿಯನ್ನು ತಮ್ಮ ಹೃದಯರಕ್ತದಲ್ಲಿ ಅದ್ದಿ, ಭಾರತೀಯ ಯುವಕರಿಗೆ ಹೀಗೆಂದು ಬರೆದಿದ್ದಾರೆ:

"ಓ ನನ್ನ ತರುಣ ಮಿತ್ರರಿರಾ, ಕಂಕಣಬದ್ಧರಾಗಿ ಸೊಂಟಕಟ್ಟಿ ನಿಲ್ಲಿ. ಮಹತ್ಕಾರ್ಯಕ್ಕಾಗಿಯೆ ದೇವರ ಕರೆ ಬಂದಿದೆ ನನಗೆ... ಮುಂದಿನ ಅಭ್ಯುದಯ ನಿಮ್ಮಲ್ಲಿದೆ - ದೀನರಲ್ಲಿ, ಸರ್ವಸಾಮಾನ್ಯರಲ್ಲಿ, ಶ್ರದ್ಧಾನ್ವಿತರಲ್ಲಿ. ಬಡವರಿಗಾಗಿ ಮರುಗಿ; ಕೈಯೆತ್ತಿ ಮೊರೆಯಿಡಿ; ನೆರವು ಬಂದೇ ಬರುತ್ತದೆ. ಈ ಒಂದು ಭಾವ ಭಾರವನ್ನು ಹೊತ್ತು ಹನ್ನೆರಡು ವರ್ಷಗಳ ಕಾಲ ಸುತ್ತಿದ್ದೇನೆ. ಧನಿಕರೆಂಬುವರ ಮತ್ತು ದೊಡ್ಡವರೆಂಬುವರ ಮನೆ ಮನೆಗೆ, ಬಾಗಿಲು ಬಾಗಿಲಿಗೆ ತೊಳಲಿದ್ದೇನೆ. ಎದೆಯ ನೆತ್ತರನ್ನು ದಾರಿಯುದ್ದಕ್ಕೂ ಸೋರಿಸುತ್ತಾ ಪ್ರಪಂಚಾರ್ಧವನ್ನೂ ದಾಟಿ ಈ ಪರಕೀಯ ಪ್ರದೇಶಕ್ಕೆ ಸಹಾಯ ಕೋರಲೆಂದು ಬಂದಿದ್ದೇನೆ... ದೇವರೇ... ನನಗೆ ನೆರವಾಗುತ್ತಾನೆ... ಈ ದೇಶದಲ್ಲಿಯೇ ಹಸಿವೆಯಿಂದಲೊ ಚಳಿಯಿಂದಲೊ ನಾನು ಸಾಯಬಹುದು; ಆದರೆ, ತರುಣರಿರಾ, ಈ ನನ್ನ ಹೃದಯ ಸಹಾನುಭೂತಿಯನ್ನೂ ಬಡವರಿಗಾಗಿರುವ ಹೋರಾಟವನ್ನೂ ಅಜ್ಞಾನಿಗಳಿಗಾಗಿ ಕೆಳಗೆ ಬಿದ್ದು ತುಳಿಸಿಕೊಳ್ಳುವವರಿಗಾಗಿರುವ ಮರುಕವನ್ನೂ ನಿಮಗೆ ದಾನ ಮಾಡಿ ಸಾಯುತ್ತೇನೆ... ಜಗದೀಶ್ವರನ ಚರಣತಲದಲ್ಲಿ ಮುಖವಿಟ್ಟು ಮಹಾಯಜ್ಞಕ್ಕೆ ಸಿದ್ಧರಾಗಿ; ಸಮಸ್ತ ಜೀವಮಾನವನ್ನೆ ಬಲಿದಾನಗೈಯಲು ಸಿದ್ಧರಾಗಿ... ಅಯ್ಯೋ ಮೂವತ್ತು ಕೋಟಿ ಮಾನವರು ದಿನದಿನವೂ ಅಧೋಗತಿಗಿಳಿಯುತ್ತಿದ್ದಾರೆ!... ಜಗದೀಶ್ವರನಿಗೆ ಜಯವಾಗಲಿ, ನಾವು ಗೆದ್ದೇ ಗೆಲ್ಲುತ್ತೇವೆ. ಸಾವಿರಾರು ಯೋಧರು ರಣರಂಗದಲ್ಲಿ ಮಡಿಯಬೇಕಾಗುತ್ತದೆ; ಸಾವಿರಾರು ಯೋಧರು ಮತ್ತೆ ಮುಂದೆ ನುಗ್ಗಿ ಬಿದ್ದವರ ಸ್ಥಾನದಲ್ಲಿ ನಿಂತು ಅನುವಾಗುತ್ತಾರೆ. ಶ್ರದ್ಧೆಯಿರಲಿ, ಸಹಾನುಭೂತಿಯಿರಲಿ, ಹೃದಯವಿರಲಿ. ಬಾಳು ತುಚ್ಛವಾಗಲಿ, ಸಾವೂ ತುಚ್ಛವಾಗಲಿ. ಮಹತ್ಕಾರ್ಯದಲ್ಲಿ ಸತ್ತರೇನಂತೆ, ಬದುಕಿದರೇನಂತೆ!... ಜಯ ಜಗದೀಶ್ವರನಿಗೆ ಎಂದು ಮುಂದೆ ನುಗ್ಗಿ. ಜಗದೀಶ್ವರನೆ ನಮ್ಮ ಸೇನಾಪತಿ, ಅವನೇ ಮಾರ್ಗದರ್ಶಿ. ಹಿಂದಿರುಗಿ ನೋಡಬೇಡಿ - ಮುಂದೆ - ಮುಂದೆ! - ಇನ್ನೂ ಮುಂದೆ!..."

ಅವರ ಸಿಡಿಲಾಳ್ತನ ಅವರ ಪತ್ರಗಳಲ್ಲಿತೋರುವಂತೆ ಮತ್ತೆಲ್ಲಿಯೂ ಅಷ್ಟು ಚೆನ್ನಾಗಿ ತೋರುವುದಿಲ್ಲ. ಇನ್ನೊಂದು ಕಾಗದದಲ್ಲಿ ಹೀಗೆಂದು ಬರೆದಿದ್ದಾರೆ:

"ಬೆಂಕಿಯಲ್ಲಿ ಮುಳುಗಿ, ಹೆದರಬೇಡಿ! ಬೆಂಕಿಯಲ್ಲಿ ಮುಳುಗಿ ಜನರನ್ನು ಈಶ್ವರನೆಡೆಗೆ ಮೇಲೆತ್ತಿ! ಶ್ರದ್ಧೆಯೊಂದಿದ್ದರೆ ಎಲ್ಲವೂ ಸರಿಹೋಗುತ್ತದೆ.

“ನಾನು ದಿನವೂ ನನ್ನ ಪ್ರಾರ್ಥನೆಯಲ್ಲಿ ನಿಮ್ಮ ಶ್ರೇಯಸ್ಸನ್ನು ಕೋರುತ್ತಿದ್ದೇನೆ. ನನಗಾಗಿ ನೀವು ಪ್ರಾರ್ಥಿಸಬೇಕು. ನಾವೆಲ್ಲರೂ ಸೇರಿ ಪ್ರಾರ್ಥಿಸೋಣ. ಭಯಂಕರ ದಾರಿದ್ರ್ಯದಿಂದ ಪುರೋಹಿತರ ದೌರಾತ್ಮ್ಯದಿಂದ ಅಧೋಗತಿಗಿಳಿದಿರುವ ಭರತಖಂಡದ ಲಕ್ಷೋಪಲಕ್ಷ ಜೀವಿಗಳ ಮೇಲ್ಮೆಗಾಗಿ ನಾವೆಲ್ಲರೂ ಪ್ರಾರ್ಥಿಸೋಣ. ನಾನು ತತ್ತ್ವವೇತ್ತನಲ್ಲ; ಧರ್ಮಗುರುವಲ್ಲ; ಮಹರ್ಷಿಯಲ್ಲ; ದರಿದ್ರರಿಗಾಗಿ ಮರುಗುವ ನಾನೊಬ್ಬ ದರಿದ್ರ. ದಾರಿದ್ರ್ಯ ಮೌಢ್ಯಗಳಲ್ಲಿ ಮುಳುಗಿ ನರಳುತ್ತಿರುವ ಭಾರತೀಯ ಸ್ತ್ರೀಪುರುಷರಿಗಾಗಿ ಗೋಳಿಡುವವರು ಯಾರಿದ್ದಾರೆ? ಮಾರ್ಗವೆಲ್ಲಿ? ಹೊರಗೆ ಹೋಗುವ ಹಾದಿ ಯಾವುದು? ಬೆಳಕಿಲ್ಲ; ವಿದ್ಯೆಯಿಲ್ಲ; ಬಾಗಿಲಿಂದ ಬಾಗಿಲಿಗಲೆದು ಅವರಿಗೆ ಬೆಳಕನ್ನು ನೀಡುವವರಾರು? ದರಿದ್ರಗಣವು ನಿಮ್ಮ ದೇವರಾಗಲಿ. ಅವರಿಗಾಗಿ ಮರುಗಿ; ಅವರಿಗಾಗಿ ಕೆಲಸ ಮಾಡಿ; ಅವರಿಗಾಗಿ ಪ್ರಾರ್ಥಿಸಿ, ಈಶ್ವರನು ದಾರಿ ತೋರುತ್ತಾನೆ. ಬಡವರಿಗಾಗಿ ಎದೆ ಕರಗಿ ಮನಮರುಗುವವನೆ ಮಹಾತ್ಮ; ಮರುಗದವನು ದುರಾತ್ಮ... ಹೊಗಳುವವರಿಲ್ಲದೆ, ಕರುಣಿಸುವವರಿಲ್ಲದೆ, ಅಳುವವರಿಲ್ಲದೆ, ಅಜ್ಞಾತರಾಗಿ ನಾವು ಸಾಯಬಹುದು. ಆದರೇನು? ಸಚ್ಚಿಂತೆಯೊಂದೂ ಹಾಳಾಗುವುದಿಲ್ಲ. ಇಂದಾಗಲಿ ನಾಳೆಯಾಗಲಿ ಅದು ಮೊಳೆತೇ ಮೊಳೆಯುವುದು... ಎಲ್ಲಿಯವರೆಗೆ ಲಕ್ಷಾಂತರ ಜನರು ದಾರಿದ್ರ್ಯದಲ್ಲಿ ಹೊರಳಾಡುವರೋ ಅಲ್ಲಿಯವರೆಗೆ, ಬಡವರ ರಕ್ತಪಾನದಿಂದ ವಿದ್ಯೆಯನ್ನು ಸಂಪಾದಿಸಿದ ಪ್ರತಿಯೊಬ್ಬ ವಿದ್ಯಾವಂತನನ್ನೂ ಆತನು ಋಣ ವಿಮೋಚನೆಗಾಗಿ ಪ್ರಯತ್ನ ಮಾಡದಿದ್ದರೆ, ನೀಚ ದ್ರೋಹಿಯೆಂದು ನಾನು ಕರೆಯುತ್ತೇನೆ... ಅಣ್ಣಗಳಿರಾ, ನಾವೇನೋ ಬಡವರು, ನಾವೇನೋ ಅಜ್ಞಾತರು! ಆದರೆ ಅಂತಹವರನ್ನೇ ಈಶ್ವರನು ತನ್ನ ಆಯುಧಗಳನ್ನಾಗಿ ಉಪಯೋಗಿಸುವುದು.

“ಸಾವು ಬಂದರೂ ಬೆದರದೆ ನನ್ನನ್ನು ಅನುಸರಿಸುವ ಯುವಕರು ಬೇಕು. ಜಯಾಪಜಯಗಳನ್ನು ನಾನು ಲೆಕ್ಕಿಸುವುದಿಲ್ಲ... ನನ್ನ 'ಸಂಘವು' ಪರಿಶುದ್ಧವಾಗಿರಲೇಬೇಕು; ಇಲ್ಲದಿದ್ದರೆ ನಗರದರ ಗೊಡವೆಯೆ ಬೇಡ.

“ಯಾವ ದಿನ 'ಮ್ಲೇಚ್ಛ' ಎಂಬ ಶಬ್ದವನ್ನು ಭಾರತೀಯರು ಕಲಿತರೋ ಆ ದಿನವೇ ಅವರ ಅಧೋಗತಿಗೆ ಪೀಠಿಕೆಯೂ ಆಯಿತು.

“ಪರಸ್ಪರ ಸೇವೆ ಸಹಾಯಗಳನ್ನು ಹಿಂದೂಗಳಿಗೆ ತಿಳಿಸುವ 'ಸಂಘ'ವೊಂದು ಬೇಕೇಬೇಕಾಗಿದೆ.”

ಮೊದಮೊದಲು ಅಮೆರಿಕಾ ದೇಶದವರು ಸ್ವಾಮಿ ವಿವೇಕಾನಂದರ ಬಳಿಗೆ ಬಂದುದು ಅವರ ಆಧ್ಯಾತ್ಮಿಕ ವೈಭವವನ್ನು ಕಂಡಲ್ಲ: ಅವರ ಆಕಾರ, ವಾಕ್ಶಕ್ತಿ, ವಿನಯ ಮೊದಲಾದುವುಗಳನ್ನು ಕಂಡು. ಬಂದವರು ಶಿಷ್ಯರಂತೆ ಬರಲಿಲ್ಲ; ಕೆಲವರು ಪರೀಕ್ಷೆಗಾಗಿ ಬಂದರು, ಕೆಲವರು ತಮಾಷೆಗಾಗಿ ಬಂದರು, ಮತ್ತೆ ಕೆಲವರು ಏನೋ ಹೊಸತು, ನೋಡೋಣ ಒಂದು ಕೈ ಎಂದು ಬಂದರು. ಇನ್ನೂ ಕೆಲವರು ಅವರಿಂದ ಏನಾದರೂ ಉಪಯೋಗವಾಗಬಹುದೆಂದು ಯೋಚಿಸಿ ಬಂದರು. ಸ್ವಾಮಿಗಳಿಗೆ ಇದು ತಿಳಿಯದೆ ಇರಲಿಲ್ಲ. ಆದ್ದರಿಂದಲೆ ಅವರು ಕೆಲವು ದಿನಗಳಲ್ಲಿಯೆ ದೊಡ್ಡ ದೊಡ್ಡ ಸಭೆಗಳನ್ನು ನೆರಪಿ ಉಪನ್ಯಾಸ ಕೊಡುವುದನ್ನು ಬಿಟ್ಟು, ಸಣ್ಣ ಸಣ್ಣ ಗುಂಪುಗಳಿಗೆ ಸಂಭಾಷಣೆಯ ಮೂಲಕ ವಿಷಯಗಳನ್ನು ತಿಳಿಸತೊಡಗಿದರು. ಏಕೆಂದರೆ, ಗಹನವಾದ ವಿಷಯಗಳನ್ನು ಚೆನ್ನಾಗಿ ತಿಳಿಸಲು ಉಪನ್ಯಾಸದ ಮಾರ್ಗಕ್ಕಿಂತಲೂ ಪ್ರವಚನದ ಮಾರ್ಗವೆ ಉತ್ತಮವಾದುದು. ಅದರಲ್ಲಿಯೂ ಧರ್ಮದ ವಿಚಾರದಲ್ಲಿ ಬೀದಿಯ ಡಂಗುರದಿಂದ ಒಂದಿನಿತೂ

ಪ್ರಯೋಜನವಿಲ್ಲ. ಎಲ್ಲಿ ಸಾಧನೆ ಇರುವುದೋ ಅಲ್ಲಿ ಗುರುವಿನ ನೇತೃತ್ವ ಇದ್ದೇ ತೀರಬೇಕು. ಅಂತೂ ಕಡೆಕಡೆಗೆ ನಿಜವಾಗಿಯೂ ಧರ್ಮದಲ್ಲಿ ಅಭಿರುಚಿಯುಳ್ಳ ಕೆಲಮಂದಿ ಯುವಕರು ಅವರ ಬಳಿಗೆ ಶಿಷ್ಯರಂತೆ ಬಂದರು. ಅವರಿಗಾಗಿ ದರ್ಶನ ಶಾಸ್ತ್ರಗಳನ್ನು ನಿಯಮಾನುಸಾರವಾಗಿ ಬೋಧಿಸತೊಡಗಿದರು.

ನ್ಯೂಯಾರ್ಕ್ ನಗರದಲ್ಲಿ ರಾಜಯೋಗದ ಅಧ್ಯಯನ ಮತ್ತು ಅಭ್ಯಾಸಗಳಿಗಾಗಿ ತರಗತಿಗಳು ನೇರ್ಪಟ್ಟುವು. ಅದೇ ಕಾಲದಲ್ಲಿ ಜ್ಞಾನಯೋಗದ ಉಪನ್ಯಾಸಗಳೂ ನಡೆದುವು. ಗಹನವಾದ ವೇದಾಂತ ತತ್ತ್ವ ವಿಚಾರಗಳನ್ನು ವೈಜ್ಞಾನಿಕ ಪಾರಿಭಾಷಿಕ ಶಬ್ದಗಳಲ್ಲಿ ಹುದುಗಿಸಿ ಪಾಶ್ಚಾತ್ಯರಿಂದ ಸುಲಭ ಗ್ರಾಹ್ಯವಾಗಿರುವ ರೀತಿಯಲ್ಲಿ ಸ್ವಾಮಿಗಳು ಬೋಧಿಸಿದರು. ಅದರಿಂದ ಅನೇಕ ವಿಜ್ಞಾನಶಾಸ್ತ್ರಜ್ಞರೂ ಮತ್ತು ವಿದ್ವಾಂಸರೂ ದಿನವೂ ಸ್ವಾಮಿಗಳ ತರಗತಿಗಳಿಗೆ ಬರುತ್ತಿದ್ದರು. ಆಧ್ಯಾತ್ಮಿಕ ವಿಚಾರಗಳನ್ನು ವೈಜ್ಞಾನಿಕವಾಗಿ ವಿವರಿಸುವುದು ಅವರಿಗೆ ತೀರಾ ಹೊಸದಾಗಿತ್ತು. ಸ್ವಾಮಿಗಳ ಧೀಸೂಕ್ಷ್ಮತೆಯನ್ನು ನೋಡಿ ಅವರಿಗೆಲ್ಲಾ ಆಶ್ಚರ್ಯವಾಯಿತು. ಈ ಉಪನ್ಯಾಸಗಳು ಕೆಲವು ದಿನಗಳಲ್ಲಿಯೆ ರಾಜಯೋಗ ಎಂಬ ಗ್ರಂಥರೂಪದಲ್ಲಿ ಹೊರಬಿದ್ದುವು. ಅದನ್ನು ಓದಿದ ಪ್ರಸಿದ್ಧ ಮನಃಶಾಸ್ತ್ರಜ್ಞರಾದ ವಿಲಿಯಂ ಜೇಮ್ಸ್ ಎಂಬುವರೂ ಸ್ವಾಮಿಗಳ ಬಳಿಗೆ ಬಂದು ಅವರ ಪರಿಚಯ ಮಾಡಿಕೊಂಡರು. ತರುವಾಯ ಅವರಿಬ್ಬರೂ ಆಜನ್ಮಮಿತ್ರರಾಗಿದ್ದರು.

ವೇದಾಂತವು ಮೆಲ್ಲಮೆಲ್ಲನೆ ಬೇರೂರುತ್ತ ಬಂದಿತ್ತು. ಸ್ವಾಮಿಗಳು ತಮ್ಮ ತರುವಾಯ ಆ ದೇಶದಲ್ಲಿ ತಾವು ಪ್ರಾರಂಭಿಸಿದ ಕೆಲಸವನ್ನು ಮುಂದುವರಿಸುವುದಕ್ಕಾಗಿ ಯೋಗ್ಯತಮ ಶಿಷ್ಯರನ್ನು ಸ್ವೀಕರಿಸಲಾರಂಭಿಸಿದರು. ಕೆಲವರಿಗೆ ಸಂನ್ಯಾಸವನ್ನೂ ಕೊಟ್ಟರು. ಮತ್ತೆ ಕೆಲವರು ಬ್ರಹ್ಮಚರ್ಯ ದೀಕ್ಷೆಯನ್ನೂ ಕೈಕೊಂಡರು. ಅವರಲ್ಲಿ ಕೆಲವರು ಶ್ರೀಮಂತ ಪಂಗಡಕ್ಕೆ ಸೇರಿ ಕೃತವಿದ್ದರೂ ಸುಸಂಸ್ಕೃತರೂ ಆಗಿದ್ದರು, ಇನ್ನು ಕೆಲವರು ಧೀಶಕ್ತಿ ಸಾಮರ್ಥ್ಯವನ್ನು ಪಡೆದ ಬುದ್ಧಿಮತಿಗಳಾಗಿದ್ದರು.

೧೮೯೫ನೆಯ ವರ್ಷದ ಜೂನ್ ತಿಂಗಳ ಹೊತ್ತಿಗೆ ಅವರು ಬಿತ್ತಿದ ವೇದಾಂತದ ಬೀಜವು ಮೊಳೆತು ಗಿಡವಾಯಿತು. ಸ್ವಾಮಿಗಳಿಗೆ ನಾಲ್ಕಾರು ಕಡೆಗಳಿಂದ ಧನಸಹಾಯವೂ ಬರಲಾರಂಭಿಸಿತು. ಆ ವರ್ಷದಲ್ಲಿ ಕೆಲಸವೂ ಅತಿಯಾಯಿತು; ವಿರಾಮವಿಲ್ಲದೆ ದಣಿದರು. ಅವರ ವೈದ್ಯುತಿಕ ಚಿರನೂತನ ಯೌವನವು ಕೂಡ ಬಳಲಿತು. ಒಂದೊಂದು ಸಾರಿ ಅವರಿಗೆ ಆ ಜೀವನವೇ ಸಾಕಾಗಿ ತೋರುತ್ತಿತ್ತು. ಸ್ನೇಹಿತರೊಬ್ಬರಿಗೆ ಬರೆದ ಕಾಗದದಲ್ಲಿ "ಸಾಕಪ್ಪಾ ಸಾಕು, ಈ ಜೀವನ. ಆ ನನ್ನ ಹರಕಲು ಬಟ್ಟೆ, ನನ್ನ ಬೋಳು ಮಂಡೆ, ಮರಗಳಡಿ ಮಲಗಿ ನಿದ್ರಿಸುವ ಆ ನನ್ನ ಸುಖ ಶಾಂತ ಜೀವನ, ಮಧುಕರ ವೃತ್ತಿಯಿಂದ ದೊರೆತ ನನ್ನ ಆ ಭಿಕ್ಷಾನ್ನ, ಅವುಗಳಿಗಾಗಿ ನಾನು ಹಾತೊರೆಯುತ್ತಿದ್ದೇನೆ" ಎಂದು ಬರೆದರು.

ಕೆಲಸದ ಸುಂಟರಗಾಳಿಯಲ್ಲಿ ಸಿಕ್ಕಿ ಬಳಲಿದ ಅವರು ಸ್ವಲ್ಪ ವಿಶ್ರಾಂತಿಗೆ ಎಳಸಿದರು. ದೇಹ ಬಳಲಿತ್ತು; ಮೆದುಳೂ ಕೂಡ ಆಯಾಸಗೊಂಡಿತ್ತು. ತಮ್ಮ ಉದ್ದಿಷ್ಟ ಕಾರ್ಯವೂ ಕ್ರಮಕ್ರಮೇಣ ಬೇರೂರಿತು. ತಮ್ಮ ಸಂದೇಶವನ್ನು ಸಾವಿರಾರು ಜನರು ಕೇಳಿದ್ದರು. ಅನೇಕರು ಸ್ವೀಕರಿಸಿದ್ದರು. ಬಹುಜನರು ಶಿಷ್ಯರಾಗಿಯೂ ಇದ್ದರು. ಮತ್ತೆ ಕೆಲವರು ವೇದಾಂತಕ್ಕಾಗಿ

ಅರ್ಪಿತ ಪ್ರಾಣರಾಗಿ ತಮ್ಮಿಂದ ಸಂನ್ಯಾಸ ಮತ್ತು ಬ್ರಹ್ಮಚರ್ಯೆ ದೀಕ್ಷೆಗಳನ್ನೂ ತೆಗೆದುಕೊಂಡಿದ್ದರು. ತಮ್ಮ ಸಂದೇಶ ಆಗಲೇ ಇತರರ ಬಾಯಿಂದ ಮರುದನಿಯಾಗಲು ಪ್ರಾರಂಭವಾಗಿತ್ತು.

ಶಿಷ್ಯರಲ್ಲೊಬ್ಬನಿಗೆ ಸೆಂಟ್ ಲಾರೆನ್ಸ್ ನದಿಯ ನಡುವೆಯಿದ್ದ ಒಂದು ರಮಣೀಯವಾದ ದ್ವೀಪದಲ್ಲಿ ಸುಂದರ ಭವನವೊಂದಿತ್ತು. ಆ ಸ್ಥಳದ ಹೆಸರು “ಸಹಸ್ರದೀಪೋದ್ಯಾನ”. ಅಲ್ಲಿ ಯಾವ ವಿಧವಾದ ಗಲಭೆಗೂ ಅವಕಾಶವಿರಲಿಲ್ಲ. ಅದನ್ನು ಕಂಡು ಆ ಶಿಷ್ಯನು ಸ್ವಾಮಿಗಳಿಗೆ ವಾಸಿಸಲು ತನ್ನ ಆ ಶಾಂತಿನಿಕೇತನವನ್ನು ಕೊಟ್ಟನು. ತರುವಾಯ ಅವರು ಕೆಲವು ಜನ ಶಿಷ್ಯರೊಂದಿಗೆ ಅಲ್ಲಿಗೆ ಹೋದರು. ಅಲ್ಲಿಯ ಗುರುಶಿಷ್ಯರ ಜೀವನವನ್ನು, ತರುವಾಯ ಹರಿದಾಸಿ ಎಂದು ಹೆಸರು ಪಡೆದ ಮಿಸ್ ವಾಲ್ಡೋ ಎಂಬ ಮಹಿಳೆ ಚೆನ್ನಾಗಿ ವರ್ಣಿಸಿದ್ದಾಳೆ:

“ಯಾರು ಉಳಿದ ಹವ್ಯಾಸಗಳನ್ನೆಲ್ಲ ಒತ್ತಟ್ಟಿಗಿಟ್ಟು ವೇದಾಂತ ದರ್ಶನಾಧ್ಯಯನ ಮಾಡಲು ಕಾತರರಾಗಿರುವರೊ, ಯಾರು ನ್ಯೂಯಾರ್ಕ್ ನಗರಕ್ಕೆ ಮುನ್ನೂರು ಮೈಲಿಗಳ ದೂರದಲ್ಲಿರುವ ‘ಸಹಸ್ರದ್ವೀಪೋದ್ಯಾನ’ಕ್ಕೆ ಬರಲು ಹಿಂಜರಿಯುವುದಿಲ್ಲವೊ ಅಂತಹವರನ್ನು ಶಿಷ್ಯರನ್ನಾಗಿ ಸ್ವೀಕರಿಸುವೆನೆಂದು ಸ್ವಾಮಿಗಳು ಹೇಳಿದರು. ಹೆಚ್ಚು ಜನರು ತಮ್ಮನ್ನು ಹಿಂಬಾಲಿಸುವರೆಂಬ ನಂಬುಗೆ ಅವರಿಗಿರಲಿಲ್ಲ.

“ಆ ಭವನ ಮಿಸ್ ಡಿ - ಗೆ ಸೇರಿತ್ತು. ಅವರು ತಮ್ಮ ಗುರುಗಳ ಸೌಕರ್ಯಕ್ಕಾಗಿಯೂ ಇತರ ಶಿಷ್ಯರ ಉಪಯೋಗಕ್ಕಾಗಿಯೂ ಮನೆಯನ್ನು ವಿಸ್ತರಿಸಿ ಒಂದು ಗುಡಿಯನ್ನೂ ನಿರ್ಮಿಸಿದರು. ಭವನವು ಒಂದು ಎತ್ತರವಾದ ಸ್ಥಳದ ಮೇಲಿತ್ತು. ಅಲ್ಲಿಂದ ನೋಡಿದರೆ ಮರಗಿಡಗಳಿಂದ ತುಂಬಿದ ಹಸುರಾದ ಕಣಿವೆಯೂ, ನಡುನಡುವೆ ಸುತ್ತಿ ಸುತ್ತಿ ಬಳುಕಿ ಬಳುಕಿ ಮೊರೆದು ಮೊರೆದು ಹರಿಯುತ್ತಿದ್ದ ವಾಹಿನಿಯೂ, ವಾಹಿನಿಯ ನುಣ್ಣನೆಯ ಬೆಳ್ಪೆದೆಯ ಮೇಲೆ ರಂಜಿಸುವ ಹಸುರು ಮಣಿಗಳಂತೆ ಅಲ್ಲಲ್ಲಿ ರಮಣೀಯವಾಗಿ ಮೇಲೆದ್ದಿರುವ ಸುಂದರ ಶ್ಯಾಮಲ ದ್ವೀಪಸಂಕುಲಗಳೂ ಕಂಗಳಿಗೆ ಮನೋಹರವಾಗಿದ್ದುವು. ಬಹುದೂರ ದಿಗಂತದಲ್ಲಿ ಕ್ಲಾಯ್‌ಟನ್ ನಗರದ ಸೌಧಶಿಖರಗಳೂ ಕೆನಡಾ ರಾಜ್ಯದ ರೇವುಗಳೂ ಮಬ್ಬುಮಬ್ಬಾಗಿ ಅರೆನೆನಪಿರುವ ದೂರದ ಕನಸುಗಳಂತೆ ತೋರುತ್ತಿದ್ದುವು. ಕುಟೀರ ಒಂದು ಗುಡ್ಡದ ತಪ್ಪಲಿನಲ್ಲಿತ್ತು. ಗುಡ್ಡದ ಪಶ್ಚಿಮೋತ್ತರ ಭಾಗಗಳು ಇಳಿಜಾರಾಗಿ ಆಶ್ರಮದ ಅಂಗಳದವರೆಗೂ ಕಾಲು ಚಾಚಿದ್ದುವು. ಹೊಳೆ ಆ ಗುಡ್ಡದ ಪಕ್ಕದಲ್ಲಿಯೆ ಹರಿಯುತ್ತಿದ್ದುದರಿಂದ ಬಳಿಯಲ್ಲಿದ್ದ ಒಂದು ಗಿರಿ ಕಂದರದ ತುಂಬ ನೀರು ತುಂಬಿಕೊಂಡು ಒಂದು ಚಿಕ್ಕ ಕೊಲ್ಲಿಯಾಗಿತ್ತು. ಅದನ್ನೊಂದು ಸರೋವರವೆಂದರೂ ಎನ್ನಬಹುದು. ಕುಟೀರ ಅಕ್ಷರಶಃ ಬಂಡೆಯ ಮೇಲೆ ನಿಂತಿತ್ತು. ಅದರ ಸುತ್ತಲೂ ಗಜಾಕಾರವಾಗಿದ್ದ ದೊಡ್ಡ ಕರಿಬಂಡೆಗಳು ಮಲಗಿದ್ದುವು. ಹೊಸದಾಗಿ ನಿರ್ಮಿತವಾಗಿದ್ದ ಕುಟೀರದ ಭಾಗವಂತೂ ಬಂಡೆಗಳ ಮೇಲೆಯೆ ಒರಗಿಕೊಂಡಂತೆ ಇತ್ತು. ಅದರ ಉಪ್ಪರಿಗೆಯೆ ಉಪದೇಶಮಂದಿರವಾಯಿತು. ಅಲ್ಲಿ ಸ್ವಾಮಿಗಳು ದಿನವೂ ನಾಲ್ಕೈದು ಗಂಡೆಗಳವರೆಗೆ ತತ್ತ್ವಬೋಧನೆ ಮಾಡುತ್ತಿದ್ದರು. ಆ ಉಪ್ಪರಿಗೆಯಲ್ಲಿ ಉಪದೇಶ ಮಂದಿರದ ಪಕ್ಕದಲ್ಲಿ ಸ್ವಾಮಿಗಳ ನಿವಾಸಕ್ಕೆ ನೇರ್ಪಟ್ಟಿತ್ತು. ಅದು ಏಕಾಂತವಾಗಿರಲೆಂದು ಮಿಸ್ ಡಿ - ಯವರು ಅದಕ್ಕೊಂದು ಪ್ರತ್ಯೇಕವಾದ ಸೋಪಾನ ಶ್ರೇಣಿಯನ್ನು ಹೊರಗಡೆಯಿಂದ ಜೋಡಿಸಿದರು.

“ಗುರುವರ್ಯರು ತಮ್ಮ ಕೋಣೆಯ ಬಾಗಿಲು ಬಳಿಯಲ್ಲಿ ಕುಳಿತುಕೊಂಡು ನಮಗೆಲ್ಲ ಉಪದೇಶ ಮಾಡುತ್ತಿದ್ದರು. ಸಂಜೆಯಾಗಿ ಕತ್ತಲಾದರೂ ಒಬ್ಬರೂ ಅಲ್ಲಾಡುತ್ತಿರಲಿಲ್ಲ. ಶಕ್ತಿಪೂರ್ಣವಾದ ಗಭೀರ ಗುರುವಾಣಿಯನ್ನು ಕಿವಿಗೊಟ್ಟು ಕೇಳುತ್ತ ನಾವೆಲ್ಲ ಮೈಮರೆತು ಬಿಡುತ್ತಿದ್ದೆವು. ನಿಜವಾಗಿಯೂ ಅದೊಂದು ಈಶ್ವರ ನಿಲಯವೆ ಆಗಿತ್ತು. ಸುತ್ತಲೂ ಮರಗಳ ದಟ್ಟವಾದ ಹಸುರು ತಳಿರಿನ ಶ್ಯಾಮಲ ಮಂದಹಾಸ; ಆ ಶ್ಯಾಮಲ ಪರ್ಣಾರ್ಣವದಲ್ಲಿ ಮುಳುಗಿಹೋದ ಹಳ್ಳಿಯ ಮನೆಗಳು ನಮ್ಮ ಸ್ಮೃತಿಪಥದಿಂದಲೂ ಜಾರಿಹೋಗುತ್ತಿದ್ದುವು. ನಗರ ನಾಗರಿಕತೆಗಳಿಂದ ಅತಿದೂರವಾದ ಯಾವುದೊ ಒಂದು ಮಹಾನೀರವ ನಿಬಿಡಾರಣ್ಯದ ಮಧ್ಯೆ ಮಹರ್ಷಿಯೊಬ್ಬನ ಮುಂದೆ ಕುಳಿತಂತೆ ನಮಗೆ ಭಾಸವಾಗುತ್ತಿತ್ತು. ಲಕ್ಷ ಲಕ್ಷ ವೃಕ್ಷ ಶ್ರೇಣಿಗಳ ಆಚೆ ದಿಗಂತ ವಿಶ್ರಾಂತವಾಗಿದ್ದ ಪಸಲೆಯೊಂದು ಹಬ್ಬಿತ್ತು. ಅಲ್ಲಿದ್ದ ಕೆಲವು ಮನೆಮನೆಯ ಸೊಡರುಗಳು ಕವಿದು ಬರುತ್ತಿದ್ದ ಕಗ್ಗತ್ತಲೆಯಲ್ಲಿ ಮಿಣುಕುತ್ತಿದ್ದುವು. ಆದರೆ ಅವುಗಳು ಬಹುದೂರವಾಗಿದ್ದುದರಿಂದ ಚಿತ್ರಾರ್ಪಿತ ಸ್ವಪ್ನದಂತೆ ತೋರುತ್ತಿದ್ದುವೆ ಹೊರತು ವಾಸ್ತವದಂತೆ ಕಾಣುತ್ತಿರಲಿಲ್ಲ. ಮಾನುಷವಾಣಿಯೊಂದೂ ನಮ್ಮ ಕಿವಿಗೆ ಬೀಳುತ್ತಿರಲಿಲ್ಲ. ಕ್ರಿಮಿಕೀಟಗಳ ಕೀಚುದನಿ, ವನವಿಹಂಗಮಗಳ ನುಣ್ಚರ, ತಳಿರ ನಡುವೆ ತುಳಿದಾಡುವ ತಂಗಾಳಿಯ ಸುಯ್ದನಿ! ಕೆಲವು ಸಾರಿ ಮೂಡಿದ ತಿಂಗಳ ಮುದ್ದಾದ ಬೆಳ್ದಿಂಗಳ ಮನೋಹರವಾದ ಕಾಂತಿಯ ಇಂಪಿನಿಂದ ದೃಶ್ಯ ಸ್ವರ್ಗೀಯವಾಗುತ್ತಿತ್ತು. ನುಣ್ಣನೆ ನೀರಿನ ಸಣ್ಣ ಸಣ್ಣಲೆಗಳು ಕೌಮುದಿಯನ್ನು ಕನ್ನಡಿಸಿ ಕೋಟ್ಯನುಕೋಟಿ ಮಿಣುಕುಹುಳಗಳ ಮುಂದೆಯಂತೆ ಕಳಕಳಿಸಿ ಮಿಂಚುತ್ತಿದ್ದುವು. ಇಂತಹ ಅಲೌಕಿಕ ಸುಂದರ ಸಮ್ಮೋಹಕ ಸನ್ನಿವೇಶದಲ್ಲಿ, ‘ಮರೆತ ಲೋಕದ ಬಗೆಗೆ ಸುಳಿಸುವ ಮರೆವ ಲೋಕದಲಿ’ ನಮ್ಮ ಪ್ರಿಯ ಆಚಾರ್ಯ ದಿವ್ಯಸನ್ನಿಧಿಯಲ್ಲಿ, ಆತನ ಮಂಗಳಮಯವಾದ ಉಪದೇಶಗಳನ್ನು ಕೇಳುತ್ತ ನಾಲ್ಕು ವಾರಗಳನ್ನು ಕಳೆದೆವು. ಅದರ ಧನ್ಯತೆ, ಗಾಂಭೀರ್ಯ, ಆನಂದ, ಆವೇಶ ಇವುಗಳು ಅವರ್ಣನೀಯವಾಗಿವೆ.

“ಅವರ ಸಂಭಾಷಣೆಗಳನ್ನೆಲ್ಲ ಬರೆದಿಡಲಾಗಲಿಲ್ಲ. ಕೇಳಿದವರ ಎದೆಗಳಲ್ಲಿ ಮಾತ್ರ ಅವುಗಳು ಅಚ್ಚೊತ್ತಿದಂತೆ ನಿಂತಿವೆ. ನಾವೆಂದಿಗೂ ಅವುಗಳನ್ನು ಮರೆಯಲಾರೆವು. ನಮ್ಮ ಅಜ್ಞಾನವನ್ನು ಪರಿಹರಿಸುವಾಗ, ನಮ್ಮ ಸಂದೇಹಗಳನ್ನು ನಿವಾರಿಸುವಾಗ, ನಮ್ಮ ಪ್ರಶ್ನೆಗಳಿಗೆ ಉತ್ತರ ಹೇಳುವಾಗ, ನಮ್ಮನ್ನು ಸಂತೈಸುವಾಗ, ಹುರಿದುಂಬಿಸುವಾಗ, ಮೇಲೆತ್ತುವಾಗ ಗುರುವರ್ಯನ ಆತ್ಮವೆ ಆತನ ವಾಕ್ಕಿನಲ್ಲಿ ಹೊರಸೂಸುತ್ತಿತ್ತು. ಕೆಲವು ಸಾರಿ ನಾವೆಲ್ಲ ಎದುರಿಗೆ ಕುಳಿತಿರುವುದೆ ಅವರಿಗೆ ಮರೆತುಹೋಗುತ್ತಿತ್ತು. ಅವರ ಮನಸ್ಸಿನಲ್ಲಿ ಹರಿಯುತ್ತಿದ್ದ ಗಂಭೀರ ಚಿಂತಾಪ್ರವಾಹಕ್ಕೆ ಎಲ್ಲಿ ಭಂಗಬರುವುದೋ ಎಂದು ನಾವೆಲ್ಲ ಉಸಿರಾಡಲು ಕೂಡ ಬೆದರುತ್ತಿದ್ದೆವು. ಕೆಲವು ಸಾರಿ ಅವರು ಇದ್ದಕ್ಕಿದ್ದ ಹಾಗೆ ಮೇಲೆದ್ದು ಹಿಂದಕ್ಕೂ ಮುಂದಕ್ಕೂ ತಿರುಗುತ್ತ ಸಿಡಿಲಿನ ಹೊನಲನ್ನೆ ಹೊರಸೂಸುತ್ತಿದ್ದರು. ಅವರು ತಮಗೆ ತಾವೆ ಮಾತಾಡಿಕೊಳ್ಳುವಂತೆ ತೋರುತ್ತಿತ್ತು.

“ಸ್ವಾಮಿ ವಿವೇಕಾನಂದರ ಸಾನ್ನಿಧ್ಯವೆ ಒಂದು ಶಾಶ್ವತವಾದ ಧ್ಯಾನದಂತಿತ್ತು. ಅವರೊಡನೆ ಎಷ್ಟು ದಿನಗಳಿದ್ದರೂ ಬೇಸರವಾಗುತ್ತಿರಲಿಲ್ಲ. ಕೆಲವು ಸಾರಿ ಇದ್ದಕ್ಕಿದ್ದ ಹಾಗೆ ಧ್ಯಾನಪರ್ವತದ ಉನ್ನತೋನ್ನತ ಶಿಖರದಿಂದ ಕೆಳಗಿಳಿದು ಬಂದು ಆಟ, ತಮಾಷೆ, ಹಾಸ್ಯ, ನಕಲಿ ಇವುಗಳಿಂದ ನಮ್ಮನ್ನು ನಗೆಗಡಲಿನಲ್ಲಿ ಮುಳುಗಿಸಿಬಿಡುತ್ತಿದ್ದರು. ಕಂಡದ್ದೆಲ್ಲ ಉಪಮೆ; ಮಾಡಿದ್ದೆಲ್ಲ ಉದಾಹರಣೆಯಾಗಿ ಬಿಡುತ್ತಿತ್ತು. ಕೆಲವು ಹಿಂದೂ ಪುರಾಣಗಳಲ್ಲಿ ಬರುವ ಕಥೆಗಳನ್ನು ಸೊಗಸಾಗಿ

ಹೇಳುತ್ತ ಹೇಳುತ್ತ ತತ್ತ್ವದುರ್ಗ ಪ್ರವೇಶ ಮಾಡಿ ಅದರ ಕೇಂದ್ರಸ್ಥಾನದವರೆಗೂ ನಮ್ಮನ್ನು ಎಳೆದೊಯ್ಯುತ್ತಿದ್ದರು. ಕಟ್ಟುಕತೆಗಳಿಂದ ಗಹನ ವಿಚಾರಗಳನ್ನು ಸುಲಭವಾದ ರೀತಿಯಿಂದ ತಿಳಿಸುವುದರಲ್ಲಿ ಅವರನ್ನು ಬಿಟ್ಟರೆ ಬೇರೊಬ್ಬರಿಲ್ಲ.

"ನಾವೆಲ್ಲರೂ ಒಟ್ಟು ಹನ್ನೆರಡು ಜನ ಶಿಷ್ಯರಿದ್ದೆವು. ಅದರಲ್ಲಿ ಒಬ್ಬರು ಸಂನ್ಯಾಸಿಗಳಾದರು. ಐದು ಮಂದಿ ಬ್ರಹ್ಮಚಾರಿಗಳಾದರು. ನಮ್ಮ ನಮ್ಮ ಕೆಲಸಗಳನ್ನು ನಾವು ನಾವೇ ಮಾಡಿಕೊಳ್ಳುತ್ತಿದ್ದೆವು. ಗುರುವರ್ಯರೂ ಕೂಡ ಎಷ್ಟೋ ಸಾರಿ ಅಡುಗೆ ಮಾಡಿ ಇಂಡಿಯಾ ದೇಶದ ರುಚಿರುಚಿಯಾದ ಪದಾರ್ಥಗಳನ್ನು ನಮಗೆ ಬಡಿಸುತ್ತಿದ್ದರು.

"ಪ್ರಾತಃಕಾಲ ನಾವೆಲ್ಲರೂ ಉಪದೇಶಮಂದಿರದಲ್ಲಿ ಸೇರುತ್ತಿದ್ದೆವು. ಒಂದೊಂದು ದಿನ ಒಂದೊಂದು ವಿಷಯವಾಗಿ ಪ್ರವಚನವಾಗುತ್ತಿತ್ತು. ಭಗವದ್ಗೀತೆ, ಉಪನಿಷತ್ತುಗಳು, ವ್ಯಾಸರ ವೇದಾಂತ ಸೂತ್ರಗಳು ಮೊದಲಾದ ಅಪರಿಚಿತವಾಗಿದ್ದ ಗಹನ ಗ್ರಂಥಗಳೂ ಗುರುಶ್ರೇಷ್ಠನ ವ್ಯಾಖ್ಯಾನ ಮಹಿಮೆಯಿಂದ ನಮಗೆ ತಿಳಿಯುತ್ತಿದ್ದುವು. ಒಂದು ದಿನ ಮಧ್ವಾಚಾರ್ಯರ ದ್ವೈತ ಸಿದ್ಧಾಂತವನ್ನು, ಇನ್ನೊಂದು ದಿನ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತವನ್ನು, ಮತ್ತೊಂದು ದಿನ ಶಂಕರಾಚಾರ್ಯರ ಗಹನತಮ ಅದ್ವೈತವನ್ನು ವಿವರಿಸುತ್ತಿದ್ದರು. ಶಂಕರಾಚಾರ್ಯರ ತತ್ತ್ವಗಳನ್ನು ಗ್ರಹಿಸುವುದು ನಮ್ಮಿಂದಾಗಲಿಲ್ಲ. ಕಡೆಗೆ ನಾವೆಲ್ಲರೂ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತದ ಭಕ್ತರಾದೆವು.

"ಕೆಲವು ಸಾರಿ ನಾರದ ಭಕ್ತಿಸೂತ್ರಗಳನ್ನು ಪಾಠ ಹೇಳುತ್ತಿದ್ದರು. ಆಗಲೆ ನಮಗವರು ಭಗವಾನ್ ಶ್ರೀರಾಮಕೃಷ್ಣಪರಮಹಂಸರ ಕಥೆಯನ್ನು ವಿಶದವಾಗಿ ಹೇಳಿದುದು. ಬರಬರುತ್ತಾ ನಮಗೆಲ್ಲರಿಗೂ ಜ್ಞಾನೋದಯವಾಯಿತು. ಇಂತು ದಿನಗಳ ಮೇಲೆ ದಿನಗಳುರುಳಿ ಹೋದುವು."

ಸಹಸ್ರದ್ವೀಪೋದ್ಯಾನದಲ್ಲಿ ಸ್ವಾಮಿಗಳು ಮಾಡಿದ ಪ್ರವಚನಗಳಲ್ಲಿ ಕೆಲವನ್ನು ಮಾತ್ರ ಶಿಷ್ಯರು ಬರೆದಿಟ್ಟರು. ಪಾಠಕರ ಅವಗಾಹನೆಗಾಗಿ ಅವುಗಳಲ್ಲಿ ಕೆಲವು ಸೂತ್ರವಾಕ್ಯಗಳನ್ನು ಇಲ್ಲಿ ಉದಾಹರಿಸುತ್ತೇವೆ:

"ಧೈರ್ಯವಿರಲಿ, ಶ್ರದ್ಧೆಯಿರಲಿ, ಯಾವ ಹಾದಿಯಾದರೆ ಏನು? ಭಕ್ತಿಯೊಂದಿದ್ದರೆ ಧ್ಯೇಯಸಿದ್ಧಿಯಾಗಲೇಬೇಕು."

"ಸಣ್ಣ ಮನಸ್ಸಿರಬಾರದು. ಏಕಮುಖತೆ ಸಾಲದು. ಸರ್ವತೋಮುಖವಾದ ಸತ್ಯವನ್ನು ಸರ್ವತೋಮುಖವಾಗಿ ಗ್ರಹಿಸಬೇಕು."

"ಕಡಲನ್ನು ನೋಡಿ; ಅಲೆಗಳಂತಿರಲಿ. ಸಣ್ಣದು ದೊಡ್ಡದೆಂದು ಭೇದ ಮಾಡಬೇಡಿ. ಪ್ರತಿಯೊಂದು ಕೀಟವೂ ಕ್ರಿಸ್ತನ ಒಡಹುಟ್ಟು. ಇದು ದೊಡ್ಡದು ಇದು ಚಿಕ್ಕದು ಎಂದು ಹೇಳುವುದು ಹೇಗೆ? ಸೃಷ್ಟಿಯ ವ್ಯೂಹದಲ್ಲಿ ಎಲ್ಲವೂ ಮುಖ್ಯ, ಅಮುಖ್ಯವೆಂಬುದಿಲ್ಲ. ಅದರದರ ಸ್ಥಾನದಲ್ಲಿ ಅದು ಮುಖ್ಯವಾದುದು!"

"ಆತ್ಮವು ಕಾಲದೇಶಾತೀತವಾದುದು; ಸರ್ವತ್ರವಾದುದು. ಈಶ್ವರ ಕೀರ್ತನೆ ಮಾಡುವ ಪ್ರತಿಯೊಂದು ಮುಖವೂ ನನ್ನ ಮುಖ; ನೋಡುವ ಪ್ರತಿಯೊಂದು ಕಣ್ಣೂ ನನ್ನ ಕಣ್ಣು, ನಾನು ಒಂದು ಸ್ಥಳದಲ್ಲಿಲ್ಲ; ನಾವು ಒಂದು ದೇಹವಲ್ಲ; ವಿಶ್ವವೇ

ನಮ್ಮ ದೇಹ. ನಾವೆಲ್ಲ ಐಂದ್ರಜಾಲಿಕರು; ನಮ್ಮಿಚ್ಛೆಯಂತೆ ದೃಶ್ಯಗಳನ್ನು ಸೃಷ್ಟಿಸುತ್ತೇವೆ. ಈಗ ನಮ್ಮ ಮನಸ್ಸು ದೇಹಸ್ಥವಾಗಿದೆ; ಆದ್ದರಿಂದ ನಮಗೆ ಒಂದೇ ಶಿರಸ್ಸು. ಸಮಾಧಿಯಲ್ಲಿ ನಮಗೆ ಸಹಸ್ರಾರು ಶಿರಗಳಾಗುತ್ತವೆ."

"ಆತ್ಮವಚ್ಯುತವೆಂದು ತಿಳಿದರೆ ಮರಣ ತೊಲಗಲೇಬೇಕು. ನಾನೂ ನನ್ನ ತಂದೆಯೂ ಒಂದೇ ಎಂದು ಯಾವಾಗಲೂ ಧ್ಯಾನಿಸಿ."

"'ನಾನು ಪಾಪಿ' ಎಂದು ಕುಗ್ಗುವುದಕ್ಕಿಂತಲೂ ಮಹಾಪಾಪವು ಬೇರೊಂದು ಇಲ್ಲ."

"ನಿರ್ಭಯತೆಯೇ ಜೀವನದ ರಹಸ್ಯ. ಮುಕ್ತಿಯೆಂದರೆ ಭಯದ ವಿನಾಶ."

"ದುರಾಲೋಚನೆ ದುರಾಚಾರದಷ್ಟೇ ಕೆಟ್ಟದ್ದು. ಕಾಮಶಕ್ತಿಯನ್ನು ಧರ್ಮಶಕ್ತಿಯನ್ನಾಗಿ ಪರಿವರ್ತಿಸಿದರೆ ಸಿದ್ಧಿಯಾಗದೆ ತಪ್ಪದು."

"ಸುಮ್ಮನಿರಿ, ಬಂದುದೆಲ್ಲಾ ಬರಲಿ, ಹೋದುದೆಲ್ಲಾ ಹೋಗಲಿ. ಬರಿಯ ಸಹಿಷ್ಣುತೆಯೊಂದೆ ಇದ್ದರೆ ಸಾಲದು; ನಿಸ್ಪೃಹತೆಯೂ ಇರಬೇಕು. ಸೊಳ್ಳೆಯೊಂದು ಗೂಳಿಯ ಕೊಂಬಿನ ಮೇಲೆ ಬಹಳ ಹೊತ್ತು ಕುಳಿತು ಕೆಲಸ ಮಾಡಿತು. ಗೂಳಿ ಅಲ್ಲಾಡಲೆ ಇಲ್ಲ. ಕಡೆಗೆ ಸೊಳ್ಳೆಗೆ ಧರ್ಮಬುದ್ಧಿ ಹುಟ್ಟಿತ್ತು. ಅದು ಗೂಳಿಯನ್ನು ಕುರಿತು 'ಸ್ವಾಮಿ, ಬಸವಣ್ಣನವರೇ, ದಯವಿಟ್ಟು ಕ್ಷಮಿಸಿ, ನನ್ನಿಂದ ನಿಮಗೆ ಬಹಳ ತೊಂದರೆಯಾಯಿತು' ಎಂದಿತು. ಅದಕ್ಕೆ ಗೂಳಿ 'ಇಲ್ಲ, ಪರವಾಗಿಲ್ಲ, ಬೇಕಾದರೆ ನಿನ್ನ ಬಂಧುಬಳಗವನ್ನೆಲ್ಲ ಕರೆದುಕೊಂಡು ಬಂದು ನನ್ನ ಕೊಂಬಿನ ಮೇಲೆಯೆ ಜೀವಿಸು. ನಾನೇನು ಬೇಡವೆನ್ನುವುದಿಲ್ಲ' ಎಂದಿತು."

"ಮನುಷ್ಯತ್ವದ ಮಹಿಮೆಯನ್ನು ಎಂದೆಂದಿಗೂ ಮರೆಯಬೇಡಿ. ನಮಗಿಂತಲೂ ಬೇರೆಯಾದ ದೇವರು ಹಿಂದಿರಲಿಲ್ಲ, ಮುಂದೆ ಬರುವುದಿಲ್ಲ. ಕ್ರಿಸ್ತ ಬುದ್ಧ ಕೃಷ್ಣ ರಾಮರೆಲ್ಲ 'ಅಹಮಸ್ಮಿ' ಎಂಬ ಮಹಾವಾರಿಧಿಯ ತರಂಗ ಮಾತ್ರಗಳು."

"ಪಾಪಿಗಳೆಂದರೆ ಮಹಾತ್ಮರಿಗಾಗಿ ಪ್ರಕೃತಿ ನೀಡುವ ಮೂಲ್ಯ. ಪಾಪಿಗಳನ್ನು ನೋಡಿದಾಗ ಇದನ್ನು ಮರೆಯಬೇಡಿ. ಕರ್ಮಪ್ರಪಂಚದಲ್ಲಿ ಬಡವನ ಗೆಯ್ಮೆ ಶ್ರೀಮಂತನ ಭೋಗಕ್ಕೆ ಕಾರಣವಾಗುವಂತೆ, ಧರ್ಮಪ್ರಪಂಚದಲ್ಲಿ ಪಾಪಿಗಳು ಹೆಚ್ಚಿದರೆ ಅವತಾರಗಳು ಹುಟ್ಟುತ್ತವೆ. ಇಂಡಿಯಾ ದೇಶದ ಜನಗಳೆಲ್ಲ ಅಧೋಗತಿಗೆ ಇಳಿದಿದ್ದಾಗಲ್ಲವೆ ಬುದ್ಧದೇವನು ಮೂಡಿದುದು?

"'ಒಂದರಲ್ಲಿಯೆ ಚೆನ್ನಾಗಿ ಮುಂದುವರಿ' ಎಂಬುದು ಹಿಂದಿನವರ ಮತ; 'ಎಲ್ಲದರಲ್ಲಿಯೂ ಸಮತೆಯಿರಲಿ' ಎಂಬುದು ಇಂದಿನವರ ಮತ."

"ಇತರರ ಭಾವಗಳನ್ನು ನಷ್ಟಗೊಳಿಸಬೇಡಿ. ಅದರಿಂದ ಗುರುಶಿಷ್ಯರಿಬ್ಬರಿಗೂ ಕೇಡು."

"ಬುದ್ಧಿ ಗ್ರಹಿಸಿದುದನ್ನು ಯುಕ್ತಿವಾದವು ಸಂಹರಿಸಬಹುದು, ಆದರೆ ಸಿದ್ಧಿಯಾದುದನ್ನು ಮಾತ್ರ ಯಾರೂ ಸಂಹರಿಸಲಾರರು. ಅದು ಶಾಶ್ವತವಾದುದು. ಮಾತು, ಮಾತು, ಮಾತು! ಬರಿಯ ಮಾತಿನಿಂದ ಉಪಯೋಗವಿಲ್ಲ. ಎಲ್ಲೆಲ್ಲಿಯೂ ಈಶ್ವರನನ್ನು ನೋಡುವ ಶಕ್ತಿಯನ್ನು ಅಭ್ಯಾಸ ಮಾಡಿ; ಮನುಷ್ಯ, ಮೃಗ, ಊಟ, ಕೆಲಸ, ಎಲ್ಲದರಲ್ಲಿಯೂ ಎಲ್ಲೆಲ್ಲಿಯೂ ಅವನೇ ಕಾಣಲಿ!"

* * *

## ೧೩. ಯೂರೋಪಿನಲ್ಲಿ

ಸಹಸ್ರದ್ವೀಪೋದ್ಯಾನದಲ್ಲಿ ಶಿಕ್ಷಾಕಾರ್ಯ ಮುಗಿದ ಮೇಲೆ ಸ್ವಾಮಿಗಳು ನ್ಯೂಯಾರ್ಕ್ ನಗರಕ್ಕೆ ಹಿಂತಿರುಗಿ ಬಂದು ಇಂಗ್ಲೆಂಡಿಗೆ ಹೋಗಲು ಸಿದ್ಧವಾಗಲಾರಂಭಿಸಿದರು. ಆ ದೇಶದಿಂದ ಮೇಲಿಂದ ಮೇಲೆ ಆಹ್ವಾನ ಪತ್ರಗಳು ಈ ಹಿಂದೆಯೆ ಬಂದಿದ್ದುವು. ಆದರೆ ಸ್ವಾಮಿಜಿ ಹಿಡಿದ ಕೆಲಸವನ್ನು ಮುಗಿಸದೆ ಹೋಗಲು ಇಷ್ಟಪಟ್ಟಿರಲಿಲ್ಲ. ಸ್ವಾಮಿಗಳು ಯೂರೋಪಿಗೆ ಹೊರಡುವ ವಾರ್ತೆಯನ್ನು ಕೇಳಿ ನ್ಯೂಯಾರ್ಕ್ ನಗರದಲ್ಲಿ ಅವರ ಸ್ನೇಹಿತರಾಗಿದ್ದ ಕೆಲವು ಜನ ಶ್ರೀಮಂತರೂ ಯಾತ್ರೆಗೆ ಸಿದ್ಧವಾದರು. ಅವರೆಲ್ಲರೂ ಹೊರಟು ಮೊಟ್ಟಮೊದಲು ಯೂರೋಪ್ ಖಂಡದ ಪ್ರಸಿದ್ಧ ಭೋಗವಿಲಾಸ ಕ್ಷೇತ್ರವಾದ ಪ್ಯಾರಿಸ್ಸಿಗೆ ಬಂದರು. ಪ್ಯಾರಿಸ್ ನಗರದಲ್ಲಿ ನೆಪೋಲಿಯನ್ ಚಕ್ರವರ್ತಿಯ ಸ್ಮೃತಿಸ್ತೂಪವನ್ನು ನೋಡಿ ಸ್ವಾಮಿಗಳು ಬಹಳ ಹರ್ಷಗೊಂಡರು. ಅಲ್ಲಿ ದರ್ಶನೀಯವಾದ ಸ್ಥಳಗಳನ್ನೆಲ್ಲ ಹೋಗಿ ನೋಡಿದರು. ಅಲ್ಲಿಯ ಕೆಲವು ಕೃತವಿದ್ಯರೂ ಸುಸಂಸ್ಕೃತರೂ ಸ್ವಾಮಿಜಿಯ ಮಿತ್ರರಾದರು.

ಇಷ್ಟರಲ್ಲಿ ತಮ್ಮ ಭಾರತೀಯ ಶಿಷ್ಯರಿಂದ ಅವರಿಗೊಂದು ಕಾಗದ ಬಂತು. ಅದರಲ್ಲಿ ಕ್ರೈಸ್ತಪಾದ್ರಿಗಳು ಸ್ವಾಮಿಜಿಗೆ ವಿರೋಧವಾಗಿ ಇಲ್ಲದ ಸಲ್ಲದ ದೋಷಾರೋಪಣೆಗಳನ್ನು ಮಾಡಿ, ಜನರ ಮನಸ್ಸನ್ನು ತಿರುಗಿಸುತ್ತ ಇದ್ದಾರೆಂದು ಬರೆದಿತ್ತು. ಅದನ್ನು ಓದಿದ ಸ್ವಾಮಿಗಳು ತಮ್ಮ ಪ್ರತ್ಯುತ್ತರ ಪತ್ರದಲ್ಲಿ ಹೀಗೆಂದು ಬರೆದರು:

"ಪೊಳ್ಳು ಮಿಷನರಿಗಳ ಐಲು ಮಾತುಗಳನ್ನು ನೀನು ಅಷ್ಟೊಂದು ಅಗಾಧವಾಗಿ ಮನಸ್ಸಿಗೆ ತೆಗೆದುಕೊಂಡುದನ್ನು ನೋಡಿ ನನಗೆ ಆಶ್ಚರ್ಯವಾಯಿತು... ಭಾರತೀಯರು ನಾನು ಇಲ್ಲಿಯೂ ಅವರ ಆಹಾರವನ್ನೇ ತಿನ್ನಬೇಕೆಂದು ನಿಜವಾಗಿಯೂ ಬಯಸುವ ಪಕ್ಷದಲ್ಲಿ, ಒಬ್ಬ ಅಡಿಗೆಯವನನ್ನೂ ಸಾಕಾಗುವಷ್ಟು ಹಣವನ್ನೂ ಕಳಿಸುವಂತೆ ಹೇಳು. ಜಿಪುಣರ ಉದಾರೋಪದೇಶಗಳನ್ನು ಕೇಳಿ ನನಗೆ ನಗು ಬರುತ್ತದೆ. ನನ್ನ ಬ್ರಹ್ಮಚರ್ಯ ಮತ್ತು ತ್ಯಾಗಗಳಿಗೆ ಭಂಗವಾಗಿದೆಯೆಂದು ಮಿಷನರಿಗಳು ಹೇಳಿದರೆ ಅವರೆಲ್ಲ ಸುಳ್ಳುಗಾರರೆಂದು ಧೈರ್ಯವಾಗಿ ಹೇಳಿಬಿಡು... ಇನ್ನು ನನ್ನ ವಿಷಯ; ನಾನು ಯಾರ ಗುಲಾಮನೂ ಅಲ್ಲ. ನನಗೆ ಯಾವ ಅಪ್ಪಣೆಯೂ ಬೇಡ. ನನ್ನ ಜನ್ಮೋದ್ದೇಶವನ್ನು ನಾನರಿತಿದ್ದೇನೆ. ನಾನು ಎಷ್ಟರಮಟ್ಟಿಗೆ ಭಾರತವರ್ಷಕ್ಕೆ ಸೇರಿದವನೋ ಅಷ್ಟರಮಟ್ಟಿಗೆ ಪ್ರಪಂಚಕ್ಕೆ ಸೇರಿದವನೂ

ಆಗಿದ್ದೇನೆ... ಯಾವ ದೇಶಕ್ಕೂ ನನ್ನ ಮೇಲೆ ಹಕ್ಕಿಲ್ಲ. ನಾನು ಯಾವುದಾದರೂ ಒಂದು ಜನಾಂಗದ ಗುಲಾಮನೇನು?... ಮಾನವ ದೈವಿಕ ಪೈಶಾಚಿಕ ಶಕ್ತಿಗಳನ್ನು ಮೀರಿದ ಶಕ್ತಿ ನನಗೆ ಬೆಂಬಲವಾಗಿದೆ. ನನಗೆ ಯಾರ ಸಹಾಯವೂ ಬೇಡ. ನಾನೇ ಇತರರಿಗೆ ನೆರವಾಗುವುದರಲ್ಲಿ ಜೀವಮಾನವನ್ನು ಕಳೆಯುತ್ತಿದ್ದೇನೆ. ನಾಲ್ಕು ಅಕ್ಷರಗಳನ್ನು ಕಲಿತು ಗರ್ವದಿಂದ ಉಬ್ಬಿ, ಹಿಂದೂಗಳಲ್ಲಿ ಮಾತ್ರವೇ ಲಭಿಸುವ, ಜಾತಿಭ್ರಾಂತರೂ ಮೂರ್ಖರೂ ದಯಾಹೀನರೂ ಕೃತ್ರಿಮ ಜೀವಿಗಳೂ ನಾಸ್ತಿಕ ಕ್ರಿಮಿಗಳೂ ಆದ ಹೇಡಿಗಳಂತೆ ನಾನೂ ಬಾಳಿ ಬದುಕಿ ಸಾಯಬೇಕೆಂಬೆ ಯೇನು? ಆ ಹೇಡಿತನ ನನಗೆ ಸೇರದು. ಆ ಹೇಡಿಗಳಿಗೂ ನನಗೂ ಯಾವ ಸಂಬಂಧವೂ ಇಲ್ಲ. ನಿಮ್ಮ ಮೆಳ್ಳೆಗಣ್ಣಿನ ರಾಜಕೀಯದಲ್ಲಂತೂ ನನಗಿನಿತೂ ನಂಬುಗೆಯಿಲ್ಲ. ಪರಮಾತ್ಮ ಮತ್ತು ಸತ್ಯ ಎರಡೇ ಜಗತ್ತಿನ ರಾಜನೀತಿಗಳು; ಉಳಿದುದೆಲ್ಲ ಬರಿಯ ಐಲು."

ಪ್ಯಾರಿಸ್‌ನಿಂದ ಇಂಗ್ಲೆಂಡಿಗೆ ಹೊರಟರು. ಆಳರಸರ ನೆಲ ತಮಗೆ ಯಾವ ವಿಧವಾದ ಸ್ವಾಗತವನ್ನು ಕೊಡುವುದೊ ಎಂದು ಸ್ವಾಮಿಜಿ ಕುತೂಹಲಿಯಾದರು. ಮಿಸ್ಟರ್ ಸ್ಟರ್ಡಿ, ಮಿಸ್ ಮುಲ್ಲರ್ ಮೊದಲಾದ ಮಿತ್ರರು ಅವರನ್ನು ಎದುರುಗೊಂಡು ಸನ್ಮಾನ ತೋರಿದರು. ಮಿತ್ರರ ಮನೆಯೊಂದರಲ್ಲಿ ಅವರಿಗೆ ನಿವಾಸಸ್ಥಾನ ಏರ್ಪಟ್ಟಿತು. ಕೆಲವು ದಿನಗಳಲ್ಲಿಯೆ ಸ್ವಾಮಿಗಳು ಸದ್ದುಗದ್ದಲವಿಲ್ಲದೆ ತಮ್ಮ ಕಾರ್ಯಕ್ಕೆ ಕೈಹಾಕಿದರು. ಅವರ ವಿಷಯ ಮೆಲ್ಲಮೆಲ್ಲನೆ ಹಬ್ಬತೊಡಗಿತು. ಅವರ ಹೆಸರು ಆಗಲೆ ಸರ್ವಧರ್ಮಸಮ್ಮೇಳನದ ಮಹಾಪುರುಷನೆಂದು ಪ್ರಖ್ಯಾತವಾಗಿತ್ತು. ಆದ್ದರಿಂದ ಅವರ ಪರಿಚಯಾರ್ಥವಾಗಿ ಅನೇಕ ಜನರು ಗುಂಪು ಗುಂಪಾಗಿ ಬರತೊಡಗಿದರು. ವೃತ್ತಪತ್ರಿಕೆಯ ಪ್ರತಿನಿಧಿಗಳು ಬಂದು ನಾನಾ ಪ್ರಶ್ನೆಗಳನ್ನು ಕೇಳತೊಡಗಿದರು. ಪತ್ರಿಕೆಗಳು ಸ್ವಾಮಿಗಳ ವಾಕ್ಶಕ್ತಿ ಧೀಶಕ್ತಿಗಳನ್ನು ನುತಿಸಿ ಬರೆದುವು. ಅವರ ಸಂಭಾಷಣೆಗಳ ವಾರ್ತೆ ಹರಡಿತು. 'ಹಿಂದೂ ಯೋಗಿ'ಯನ್ನು ನೋಡಲು ತಂಡೋಪತಂಡವಾಗಿ ಜನರು ಬಂದರು. ಸ್ಟರ್ಡಿ ಎಂಬಾತನಿಂದ ಸ್ವಾಮಿಗಳಿಗೆ ಬಹಳ ಉಪಕಾರವಾಯಿತು. ಆತನಿಗೆ ಹಿಂದೂಶಾಸ್ತ್ರಗಳಲ್ಲಿ ಮಮತೆಯಿತ್ತು. ಅಲ್ಲದೆ ಇಂಡಿಯಾ ದೇಶಕ್ಕೆ ಬಂದು ಹಿಮಾಲಯದ ಬಳಿ ಕೆಲವು ಯೋಗ ಸಾಧನೆಗಳನ್ನೂ ಆತನು ಮಾಡಿದ್ದನು. ಶ್ರೀಮಂತನೂ ಮೇಧಾವಿಯೂ ಮಾನನೀಯನೂ ಆದ ಆತನ ಪ್ರಭಾವದಿಂದ ಅನೇಕರು ಸ್ವಾಮಿಗಳಿಗೆ ಶಿಷ್ಯರಾದರು. ಸ್ವಾಮಿಗಳು ನ್ಯೂಯಾರ್ಕ್‌ನಲ್ಲಿ ಕೆಲಸ ಮಾಡಿದಂತೆಯೆ ಇಲ್ಲಿಯೂ ಅವಿರಾಮದಿಂದ ಕೆಲಸಕ್ಕೆ ತೊಡಗಿದರು.

ಪಿಕಡಿಲ್ಲಿಯಲ್ಲಿರುವ 'ರಾಜಕುಮಾರ ಮಂದಿರ' ಎಂಬಲ್ಲಿ ಅಕ್ಟೋಬರ್ ೨೨ನೆಯ ತಾರೀಖಿನಲ್ಲಿ ಉಪನ್ಯಾಸ ಏರ್ಪಟ್ಟಿತು. ಮಂದಿರವು ಜನರಿಂದ ಕಿಕ್ಕಿರಿದಿತ್ತು. ಸ್ವಾಮಿಜಿ "ಆತ್ಮಜ್ಞಾನ" ಎಂಬ ಉಪನ್ಯಾಸವನ್ನು ಮಾಡಿದರು. ಜನರು ಅದನ್ನು ಕೇಳಿ ಮುಗ್ಧರಾದರು.

'ದಿ ಸ್ಟ್ಯಾಂಡರ್ಡ್' ಎಂಬ ವೃತ್ತಪತ್ರಿಕೆ ಹೀಗೆಂದು ಬರೆಯಿತು: "...ರಾಮ ಮೋಹನರಾಯರಾದ ಮೇಲೆ ಕೇಶವಚಂದ್ರರ ಹೊರತು ಮತ್ತಾವ ಹಿಂದುವೂ ಆಂಗ್ಲೇಯ ವೇದಿಕೆಯ ಮೇಲೆ ನಿಂತು ಈ ರೀತಿ ಮಾತಾಡಿರಲಿಲ್ಲ. 'ರಾಜಕುಮಾರ ಮಂದಿರ'ದಲ್ಲಿ ಉಪನ್ಯಾಸ ಮಾಡಿದ ಹಿಂದುವು ಜನರನ್ನು ತನ್ನ ವಾಗ್ವಿಲಾಸದಿಂದ ಆಕರ್ಷಿಸಿದ್ದಾನೆ. ಉಪನ್ಯಾಸದಲ್ಲಿ ಆತನು ನಮ್ಮ ಯಂತ್ರ, ಕಾರ್ಖಾನೆ ಮೊದಲಾದ ನೂತನ ನಿರ್ಮಾಣಗಳನ್ನು ಖಂಡಿಸಿದನು. ಪುಸ್ತಕಗಳಿಂದ ಆಗುತ್ತಿರುವ ಹಾವಳಿಯನ್ನು ತಿಳಿಸಿ, ಈಗಿನ ಗ್ರಂಥಗಳನ್ನೆಲ್ಲಾ ರಾಶಿ ಹಾಕಿದರೂ ಯೇಸುಕ್ರಿಸ್ತ ಅಥವಾ ಬುದ್ಧ

ಮೊದಲಾದ ಮಹಾತ್ಮರ ನಾಲ್ಕು ವಚನಗಳ ಮುಂದೆ ನಿಲ್ಲಲಾರವು ಎಂದು ಹೇಳಿದನು. ಉಪನ್ಯಾಸ ಸ್ವರೂಪದಿಂದ ಅದು ಮೊದಲೆ ಸಿದ್ಧವಾದುದಲ್ಲವೆಂದು ತೋರುತ್ತದೆ; ಆದರೂ ಆಲಿಸಿದವರನ್ನು ಬಗೆ ಸೋಲಿಸಿತು."

ಸ್ವಾಮಿಗಳ ಬಳಿಗೆ ಅನೇಕರು ಬಂದರು. ಅದೇ ಸಮಯದಲ್ಲಿಯೆ ಸೋದರಿ ನಿವೇದಿತಾ ಎಂಬ ನಾಮದಿಂದ ಸುಪ್ರಸಿದ್ಧವಾಗಿರುವ ಮಿಸ್ ಮಾರ್ಗರೆಟ್ ನೋಬಲ್ ಎಂಬಾಕೆಯೂ ಅಲ್ಲಿಗೆ ಬಂದುದು. ಆಕೆ ವಿವೇಕಾನಂದರ ವಿಶಾಲ ದೃಷ್ಟಿ, ಸರ್ವಧರ್ಮ ಸಮನ್ವಯ ತತ್ತ್ವ, ಶುಭ್ರಶೀಲ ಮೊದಲಾದವುಗಳನ್ನು ನೋಡಿ ಬೆರಗಾದಳು. ಮೊದಮೊದಲು ಆಕೆಗೆ ಸ್ವಾಮಿಗಳ ಮಾತು ರುಚಿಸುತ್ತಿರಲಿಲ್ಲ. ಗಹನ ತತ್ತ್ವ ವಿಚಾರಗಳು ಮೆದುಳಿಗೆ ಹಿಡಿಯುತ್ತಿರಲಿಲ್ಲ. ಸ್ವಾಮಿಗಳ ಮಾತಿನ ಅಭಿಪ್ರಾಯಗಳನ್ನು ಗ್ರಹಿಸಬೇಕಾದರೆ ಕೆಲವು ಮಾಸಗಳ ಕಾಲ ಹಿಡಿಯಿತೆಂದು ಆಕೆಯೆ ಹೇಳಿರುವಳು. "ಜೀವವೆಂದರೆ ಬ್ರಹ್ಮದ ಒಂದು ತೋರಿಕೆ" "ಜಡ ಮತ್ತು ಚೇತನಗಳೆರಡೂ ಒಂದೇ ಸತ್ಯದ ಇಕ್ಕೆಲಗಳು" "ಆತ್ಮವು ಜಡ ಚೇತನಾತೀತವಾದುದೆಂದು ಅನುಭವದಿಂದ ತಿಳಿಯುವುದೇ ಸಿದ್ಧಿ", "ಮಾಯಾವಾದವು ಯಾವ ಸಮಸ್ಯೆ ಉಪಪತ್ತಿಯೂ ಅಲ್ಲ. ಅದು ಸಮಸ್ಯೆಯ ಸ್ಥಿತಿಸೂಚಕ ಮಾತ್ರವಾದ ಒಂದು ಮಾತು. ಸಮಸ್ಯೆಗಳಿಗೆ ಅನುಭವದಿಂದ ಅರ್ಥಗಳನ್ನು ಕಲ್ಪಿಸುವುದೆ ಮಾಯೆಯನ್ನು ಗೆಲ್ಲುವುದು." "ಸ್ವಾರ್ಥತೆಯಿಂದ ಸತ್ಯವು ಮುಚ್ಚಿ ಹೋಗಿರುವುದು". "ವಿಶ್ವವು ಒಂದು ದೊಡ್ಡ ಜೇಡರ ಬಲೆಯಂತೆ; ಮನಸ್ಸುಗಳು ಅಲ್ಲಲ್ಲಿರುವ ಜೇಡರ ಹುಳುಗಳು. ಏಕೆಂದರೆ ಮನಸ್ಸು ಭಿನ್ನಾಭಿನ್ನವಾಗಿರುವುದು." ಇಂತಹ ಸೂತ್ರಗಳ ಅರ್ಥವನ್ನು ಅವರು ಗ್ರಹಿಸುವುದಾದರೂ ಹೇಗೆ?

ಬರಬರುತ್ತ ಮಂದಿರದಲ್ಲಿ ಜಾಗವೇ ಸಾಲದಾಯಿತು. ಕಡೆಗೆ ಅಲ್ಲಿದ್ದ ಕುರ್ಚಿಗಳು ಹೊರಗೆ ಸಾಗಿದುವು. ಎಲ್ಲರೂ ಸ್ವಾಮಿಗಳಂತೆಯೆ ಪದ್ಮಾಸನ ಹಾಕಿಕೊಂಡು ಕುಳಿತುಕೊಳ್ಳಲಾರಂಭಿಸಿದರು. ಅದನ್ನು ಕುರಿತು ಒಂದು ಪತ್ರಿಕೆಯ ಸುದ್ದಿಗಾರನು ಇಂತೆಂದು ಬರೆದನು:

"ಲಂಡನ್ ಮಹಾನಗರದ ಭದ್ರಮಹಿಳೆಯರು ಪದ್ಮಾಸನ ಹಾಕಿಕೊಂಡು ಗುರುವಿನ ಮುಂದೆ ಭಕ್ತಿಯಿಂದ ಕುಳಿತುಕೊಳ್ಳುವ ಶಿಷ್ಯರಂತೆ ಕುಳಿತು ಮೌನದಿಂದ ಕಿವಿಗೊಟ್ಟು ಉಪದೇಶವನ್ನು ಕೇಳುತ್ತಿರುವ ದೃಶ್ಯವು ನಿಜವಾಗಿಯೂ ಅಪೂರ್ವವಾದುದು. ಭರತಖಂಡದ ಪರವಾಗಿ ಇಂಗ್ಲಿಷರ ಹೃದಯದಲ್ಲಿ ಸ್ವಾಮಿಜಿ ಉದ್ರೇಕಗೊಳಿಸುತ್ತಿರುವ ಗೌರವ ಸಹಾನುಭೂತಿಗಳು ಇಂಡಿಯಾ ದೇಶದ ಪ್ರಗತಿಗೆ ನಿಜವಾಗಿಯೂ ಮಹಾಶಕ್ತಿದಾಯಕವಾಗಿವೆ."

ಸ್ವಾಮಿಗಳ ವೇದಾಂತವಾರ್ತೆಯನ್ನು ಬಿಂಕದ 'ಕಡಲರಾಣಿ'ಯೂ ಬೆರಗಾಗಿ ಕೇಳಿದಳು. ಸಾಧಾರಣವಾಗಿ ಗರ್ವಿಷ್ಠರೂ ಉದ್ಧತಶೀಲರೂ ದುರಭಿಮಾನಿಗಳೂ ಚಕ್ರಾಧಿಪತಿಗಳೆಂಬ ದುರಹಂಕಾರದಿಂದ ಮೆರೆದವರೂ ಆಗಿರುವ ಆಂಗ್ಲೇಯರು ಉದಾರ ಹೃದಯದ ಅಮೆರಿಕಾ ದೇಶದವರಂತೆ ಬಹುಬೇಗನೆ ಹೆರರ ಬಗೆಸಿರಿಗೆ ಮಣಿಯುವವರಲ್ಲ. ಅದರಲ್ಲಿಯೂ ಅವರ ಹಸ್ತಗತವಾಗಿರುವ ಭರತಖಂಡವೆಂದರೆ ಅವರಿಗೆ ತಿರಸ್ಕಾರ. ಅಜ್ಞಾನಕ್ಕಿಂತಲೂ ಜ್ಞಾನಗರ್ವವು ಘೋರತರ ತಿಮಿರ: ಜ್ಞಾನಗರ್ವಕ್ಕಿಂತಲೂ ಜ್ಞಾನದ ತಿರಸ್ಕಾರವು ಘೋರತಮ ತಿಮಿರ! ಅಂತಹ ಘೋರತಮ ತಿಮಿರವು ಸಾಮಾನ್ಯ ಆಂಗ್ಲೇಯ ಜನಗಳ ಹೃದಯಗಳಲ್ಲಿ ನೆಲೆಮನೆ ಮಾಡಿಕೊಂಡಿದೆ. ಆದ್ದರಿಂದಲೆ ಅವರು ಭಾರತವರ್ಷದ

ಜ್ಞಾನವನ್ನು ಮೌಢ್ಯವೆಂದು ಪರಿಗಣಿಸಿಬಿಡುವರು. ಅಂಥವರನ್ನು ಸೆರೆಗೈದ ಸ್ವಾಮಿಗಳ ತೇಜಸ್ಸನ್ನು ಎಷ್ಟೆಂದು ಬಣ್ಣಿಸೋಣ. ಕಲಿಸಿದವರಿಗೆ ಗೌರವವಿರಲಿ! ಕಲಿತವರಿಗೆ ಇಮ್ಮಡಿಯಾದ ಗೌರವವಿರಲಿ!

ಸ್ವಾಮಿಗಳು ಇಂಗ್ಲೆಂಡಿನಲ್ಲಿ ಧರ್ಮಪ್ರಚಾರ ಕಾರ್ಯಪರರಾಗಿದ್ದಾಗಲೆ ಅಮೆರಿಕಾದ ಶಿಷ್ಯರಿಂದ ಕಾಗದಗಳು ಬರತೊಡಗಿದುವು. ಅವರು ಸ್ವಾಮಿಗಳನ್ನು ಹಿಂದಕ್ಕೆ ಬರುವಂತೆ ಪೀಡಿಸತೊಡಗಿದರು. ಅಲ್ಲಿ ಸ್ವಾಮಿಗಳು ನೆಟ್ಟುಬಂದ ಗಿಡವೂ ಮರವಾಗುತ್ತಿತ್ತು. ಸ್ವಾಮಿಗಳ ಪ್ರಚಾರಕಾರ್ಯಕ್ಕೆ ಸಹಾಯವಾಗಲು ಹಲವುಮಂದಿ ಉತ್ಸಾಹಶಾಲಿಗಳು ಮುಂದೆ ಬಂದಿದ್ದರು. ಬೋಸ್ಟನ್ ನಗರದ ಶ್ರೀಮಂತ ಮಹಿಳೆಯೊಬ್ಬಳು ಸಾಕಾಗುವಷ್ಟು ಧನಸಹಾಯ ಮಾಡಿದ್ದಳು. ಇತ್ತ ಆಂಗ್ಲೇಯ ಮಿತ್ರರು ಸ್ವಾಮಿಗಳನ್ನು ಇನ್ನೂ ಕೆಲವು ದಿನಗಳ ತನಕ ಇರುವಂತೆ ಬಲಾತ್ಕರಿಸಿದರು. ಕಡೆಗೆ ಸ್ವಾಮಿಗಳು ಬೇಸಗೆಯಲ್ಲಿ ಹಿಂತಿರುಗಿ ಬರುವೆನೆಂದು ತಮ್ಮ ಆಂಗ್ಲೇಯ ಮಿತ್ರರಿಗೆ ಭಾಷೆಕೊಟ್ಟು ಅಮೆರಿಕಾಕಕ್ಕೆ ಹಡಗು ಹತ್ತಿದರು.

ಸ್ವಾಮಿಗಳು ಇಂಗ್ಲೆಂಡಿನಲ್ಲಿದ್ದಾಗ ಸ್ವಾಮಿ ಕೃಪಾನಂದ, ಸ್ವಾಮಿ ಅಭಯಾನಂದ ಮತ್ತು ಮಿಸ್. ಇ. ವಾಲ್ಡೊ ಮೊದಲಾದ ಅಮೆರಕಾದ ಶಿಷ್ಯರು ಸುಮ್ಮನೆ ಕುಳಿತಿರಲಿಲ್ಲ. ವಾರವಾರಕ್ಕೂ ಸಭೆ ಸೇರಿ ವೇದಾಂತ ವಿಷಯಗಳನ್ನು ಚರ್ಚಿಸುತ್ತಲೂ, ಸಂಯುಕ್ತ ರಾಜ್ಯದಲ್ಲಿರುವ ಇತರ ನಗರಗಳಿಗೆ ಹೋಗಿ ಸ್ವಾಮಿಗಳ ಸಂದೇಶವನ್ನು ಸಾರುತ್ತಲೂ ಪ್ರಚಾರಕಾರ್ಯವನ್ನು ಮುಂದುವರಿಸಿದ್ದರು. ಎಲ್ಲೆಲ್ಲಿಯೂ ಜನರು ಅವರನ್ನು ವಿಶ್ವಾಸದಿಂದ ಬರಮಾಡಿಕೊಂಡು, ಅವರ ವೇದಾಂತ ಬೋಧೆಯನ್ನು ತಾಳ್ಮೆಯಿಂದ ಕೇಳಿ ತಮ್ಮ ಉತ್ಸಾಹವನ್ನು ಪ್ರದರ್ಶಿಸಿದ್ದರು. ೧೮೯೫ ನೆಯ ಡಿಸೆಂಬರ್ ೬ನೆಯ ತಾರೀಖಿನ ದಿನ ಸ್ವಾಮಿಗಳು ಲಂಡನ್ನಿನಿಂದ ನ್ಯೂಯಾರ್ಕ್ ನಗರಕ್ಕೆ ಮರಳಿದರು. ಬಂದವರು ಸ್ವಲ್ಪವೂ ಕಾಲಹರಣ ಮಾಡದೆ ತಮ್ಮ ಸುಪ್ರಸಿದ್ಧವಾದ ಕರ್ಮಯೋಗ ಉಪನ್ಯಾಸಗಳನ್ನು ಪ್ರಾರಂಭಿಸಿದರು.

ಸ್ವಾಮಿಗಳು ತಮ್ಮ ಭಾಷಣಗಳನ್ನು ಸಾಧಾರಣವಾಗಿ ಬರೆಯುತ್ತಿರಲಿಲ್ಲ; ನಿರರ್ಗಳವಾಗಿ ಹೊರಸೂಸಿಬಿಡುತ್ತಿದ್ದರು. ಆ ಅಮೂಲ್ಯವಾದ ಉಪದೇಶಗಳನ್ನು ಮುದ್ರಿಸಿ ಲೋಕಕ್ಕೆಲ್ಲ ಬೆಳಕು ದೊರಕುವಂತೆ ಮಾಡಬೇಕೆಂದು ಶಿಷ್ಯರು ಯೋಚಿಸಿದರು. ಆದ್ದರಿಂದ ಸ್ವಾಮಿಗಳ ಆಶುಭಾಷಣಗಳನ್ನು ಬರೆದುಕೊಳ್ಳಲು ಒಬ್ಬ ಕ್ಷಿಪ್ರಲಿಪಿಕಾರನನ್ನು ಗೊತ್ತುಮಾಡಿದರು. ಆ ಲಿಪಿಕಾರನು ಜಯಶೀಲನಾಗಲಿಲ್ಲ. ಸ್ವಾಮಿಜಿಯ ವಾಕ್ಪ್ರವಾಹದ ವೇಗವನ್ನು ಆತನು ಹಿಂಬಾಲಿಸಲಾರದಾದನು. ಅದರಲ್ಲಿಯೂ ಅಭಿಪ್ರಾಯಗಳು ಬಹು ಗಹನವಾದುದರಿಂದ ಆತನು ಕೈಸೋತನು; ಬಗೆಸೋತನು. ಇನ್ನೊಬ್ಬ ಕ್ಷಿಪ್ರಲಿಪಿಕಾರನನ್ನು ಗೊತ್ತುಮಾಡಿದರು. ಅವನ ಕೈಯಿಂದಲೂ ಸಾಗಲಿಲ್ಲ. ಕಡೆಗೆ ಆಗತಾನೆ ಇಂಗ್ಲೆಂಡಿನಿಂದ ನ್ಯೂಯಾರ್ಕಿಗೆ ಬಂದಿದ್ದ ಜೆ. ಜೆ. ಗುಡ್ವಿನ್ ಎಂಬ ಕ್ಷಿಪ್ರಲಿಪಿಕಾರನನ್ನು ಗೊತ್ತುಮಾಡಿದರು. ಆತನು ಸ್ವಾಮಿಗಳ ಮಾತುಗಳಲ್ಲಿ ಒಂದು ಸ್ವರವನ್ನಾದರೂ ಬಿಡದೆ ಬರೆಯಲು ಸಮರ್ಥನಾದನು. ಅಷ್ಟೇ ಅಲ್ಲ, ಸ್ವಾಮಿಗಳ ಶಿಷ್ಯನೂ ಆದನು. ಅವರ ಕೃತಿಗಳಲ್ಲಿ ಮುಕ್ಕಾಲುಮೂರುವೀಸಪಾಲು ಗುಡ್ವಿನ್ನನ ಕ್ಷಿಪ್ರಲಿಪಿಯಿಂದ ಸಂಗ್ರಹಿಸಲ್ಪಟ್ಟುದು. ಆತನು ಸದಾ ಅವರೊಡನೆಯೆ ಇದ್ದುಕೊಂಡು ಅವರ ಉಪನ್ಯಾಸಗಳಲ್ಲಿ ಒಂದನ್ನೂ ಬಿಡದೆ ಬರೆದಿಟ್ಟನು. ಸ್ವಾಮಿಜಿಗೆ ಅಚ್ಚುಮೆಚ್ಚಾಗಿದ್ದ ಆತನು ಅವರೊಂದಿಗೆ ಇಂಗ್ಲೆಂಡಿಗೆ ಹೋಗಿ ಅಲ್ಲಿಂದ ಭಾರತವರ್ಷಕ್ಕೆ ಬಂದು ಅಲ್ಲಿ ಮೃತನಾದನು.

ಆತನು ತೀರಕೊಂಡಾಗ ಸ್ವಾಮಿಗಳು “ಇಂದು ನನ್ನ ಬಲಗೈ ಮುರಿದುಹೋಯಿತು. ನನಗಾದ ನಷ್ಟ ಅಷ್ಟಿಷ್ಟೆಂದು ಹೇಳಲಾಗದು” ಎಂದರಂತೆ.

ಕ್ರಿಸ್‌ಮಸ್ ರಜಾ ದಿನಗಳನ್ನು ಬೋಸ್ಟನ್ನಿನಲ್ಲಿ ಕಳೆದು ಸ್ವಾಮಿಗಳು ನ್ಯೂಯಾರ್ಕಿಗೆ ಬಂದರು. ಬಂದವರು ಹಾರ್ಡ್‌ಮನ್ ಹಾಲ್‌ನಲ್ಲಿಯೂ ಬ್ರೂಕ್‌ಲಿನ್ ನಗರದ ಆಧ್ಯಾತ್ಮಿಕ ಸಂಘದಲ್ಲಿಯೂ ಪೀಪಲ್ಸ್ ಚರ್ಚ್ ಎಂಬ ಕ್ರೈಸ್ತ ದೇವಮಂದಿರದಲ್ಲಿಯೂ ಉಪನ್ಯಾಸಗಳ ಮೇಲೆ ಉಪನ್ಯಾಸಗಳನ್ನು ಕೊಟ್ಟು ಜನರನ್ನು ಉತ್ತೇಜನಗೊಳಿಸಿದರು. ಜೊತೆಗೆ ಎಂದಿನಂತೆ ಉಪದೇಶಗಳೂ ನಡೆಯುತ್ತಿದ್ದುವು. ಜನರು ಅವರನ್ನು “ವಿದ್ಯುದ್ವಾಗ್ಮಿ” ಎಂದೂ, “ಬಿರುಗಾಳಿ ಸಂನ್ಯಾಸಿ” ಎಂದೂ ಕರೆದರು. “ಭಕ್ತಿಯೋಗ”, “ನನ್ನ ಆಚಾರ್ಯ”, “ಜೀವಾತ್ಮ ಮತ್ತು ಪರಮಾತ್ಮ” ಮೊದಲಾದ ವಿಷಯಗಳು ಜನರನ್ನು ಬೆರಗುಗೊಳಿಸಿ ಮರಳುಮಾಡಿಬಿಟ್ಟುವು. ವೃತ್ತಪತ್ರಿಕೆಗಳು ಮತ್ತೊಮ್ಮೆ ದೇಶದಲ್ಲೆಲ್ಲ ಭಾರತೀಯ ಸಂನ್ಯಾಸಿಯ ಕೀರ್ತಿಯನ್ನು ಉದ್ಘೋಷಿಸಿದುವು. ಹೃದಯಕ್ಕೆ ಆನಂದಕರವೂ ಬುದ್ಧಿಗೆ ತೃಪ್ತಿದಾಯಕವೂ ಆದ ಸ್ವಾಮಿಗಳ ವೇದಾಂತ ತತ್ತ್ವವು ಭಕ್ತರಿಗೆ ಜ್ಞಾನಿಗಳಿಗೂ ವಿಜ್ಞಾನಿಗಳಿಗೂ ಎಲ್ಲರಿಗೂ ಸಮರ್ಪಕವಾಗಿ ತೋರಿತು. ಅದರಲ್ಲಿಯೂ ಬೋಧಕನ ಅಸಾಧಾರಣ ಒಜೋಮಯ ವ್ಯಕ್ತಿತ್ವವೂ ಸಾಗರೋಪಮ ವಿಶಾಲಹೃದಯವೂ ಪರ್ವತೋಪಮ ಗಾಂಭೀರ್ಯವೂ ಗಗನೋಪಮ ನಿರ್ಮಲಾತ್ಮವೂ ಬೋಧನೆಗೆ ಬೆಂಬಲವಾಗಿ ಎಲ್ಲರನ್ನೂ ತಲೆದೂಗಿಸಿದುವು.

೧೮೯೬ನೆಯ ಫೆಬ್ರವರಿ ತಿಂಗಳಿನಲ್ಲಿ “ಸಾಂಖ್ಯ ಮತ್ತು ವೇದಾಂತ” “ಜ್ಞಾನಯೋಗ” ಮೊದಲಾದ ಉಪನ್ಯಾಸಗಳು ನಡೆದುವು. ಇದೇ ಸಮಯದಲ್ಲಿ ಸ್ವಾಮಿಗಳು ಮತ್ತೊಬ್ಬ ಶಿಷ್ಯನಿಗೆ ಸಂನ್ಯಾಸ ದೀಕ್ಷೆಯನ್ನು ಕೊಟ್ಟು ಆತನನ್ನು “ಯೋಗಾನಂದ” ಎಂದು ಕರೆದರು. ಮೊದಮೊದಲು ಸ್ವಾಮಿಜಿಯ ಪ್ರಶಂಸಕರಾಗಿದ್ದವರು ಈಗ ಆರಾಧಕರಾದರು. ಸ್ವಾಮಿ ಕೃಪಾನಂದರು ತಮ್ಮದೊಂದು ಪತ್ರದಲ್ಲಿ ಹೀಗೆಂದು ವಿನೋದವಾಗಿ ಬರೆದಿದ್ದಾರೆ:

“ಅದಿರಲಿ; ಮೊದಲು ಭಾರತಮಾತೆ ಸ್ವಾಮಿಜಿಯ ಮೇಲೆ ತನಗಿರುವ ಹಕ್ಕನ್ನು ಸ್ಥಾಪಿಸುವುದು ಶ್ರೇಯಸ್ಕರ. ಆಗಲೆ ಅವರ ಜೀವನಚರಿತ್ರೆಯನ್ನು ಸಂಯುಕ್ತ ಸಂಸ್ಥಾನಗಳ ರಾಷ್ಟ್ರೀಯ ವಿಶ್ವಕೋಶದಲ್ಲಿ ಸೇರಿಸಲು ಇಲ್ಲಿಯವರು ಹವಣಿಸುತ್ತಿದ್ದಾರೆ. ಅಂದಮೇಲೆ ಅವರು ಅಮೆರಿಕಾ ದೇಶದವರಾಗಿಬಿಡುವರು. ಹೋಮರ್ ಕವಿಯನ್ನು ನಾನು ಹೆತ್ತೆ ನಾನು ಹೆತ್ತೆ ಎಂದು ಏಳು ನಗರಗಳು ಹೋರಾಡಿದುವಂತೆ. ನಮ್ಮ ಆಚಾರ್ಯನಿಗೆ ಏಳು ದೇಶಗಳು ಹೊಡೆದಾಡಿಕೊಳ್ಳುವ ಕಾಲ ಬಂದೀತು. ಅಲ್ಲದೆ ಭಾರತಾಂಬೆ ತಾನು ಪಡೆದ ಯೋಗ್ಯತಮ ಮಹಾಪುರುಷರಲ್ಲಿ ಒಬ್ಬನನ್ನು ಕಳೆದುಕೊಳ್ಳುವ ಕಾಲವೂ ಬಂದೀತು!”

ನ್ಯೂಯಾರ್ಕಿನ ಕಾರ್ಯವನ್ನು ಪೂರೈಸಿ ಸ್ವಾಮಿಗಳು ಡೈಟ್ರಾಯ್ಟಿಗೆ ಹೋದರು. ಅಲ್ಲಿಂದ ಹಾರ್‌ವರ್ಡ್ ಯೂನಿವರ್ಸಿಟಿಯವರ ಆಮಂತ್ರಣವನ್ನು ಸ್ವೀಕರಿಸಿ ಅಲ್ಲಿಗೆ ತೆರಳಿ, ಮಾರ್ಚ್ ೨೫ನೆಯ ತಾರೀಖಿನ ದಿನ ತಮ್ಮ ಅಮೋಘವಾದ “ವೇದಾಂತದರ್ಶನ” ಎಂಬ ಉಪನ್ಯಾಸವನ್ನು ಕೊಟ್ಟರು. ಅದನ್ನು ಆಲಿಸಿದ ಅಧ್ಯಾಪಕರುಗಳು ಸಂನ್ಯಾಸಿಯ ವಿದ್ವತ್ತು ಪ್ರತಿಭೆಗಳಿಗೆ ಬೆರಗಾಗಿ ಯೂನಿವರ್ಸಿಟಿಯಲ್ಲಿ ಪ್ರಾಚ್ಯ ತತ್ತ್ವಶಾಸ್ತ್ರದ ಪೀಠವೊಂದನ್ನು

ಸ್ಥಾಪಿಸುವುದಾಗಿಯೂ ವಿವೇಕಾನಂದರು ಅದಕ್ಕೆ ಮುಖ್ಯಾಧ್ಯಾಪಕರಾಗಬೇಕೆಂದೂ ಕೇಳಿಕೊಂಡರು. ಸ್ವಾಮಿಗಳು ಸಂನ್ಯಾಸಿಯಾದ್ದರಿಂದ ಅದನ್ನು ಸ್ವೀಕರಿಸಲಿಲ್ಲ. ಯೂನಿವರ್ಸಿಟಿಯವರು ಸ್ವಾಮಿಗಳ ಭಾಷಣವನ್ನು ಮುದ್ರಿಸಿದರು. ಅದಕ್ಕೆ ರೆವರೆಂಡ್ ಸಿ. ಸಿ. ಎವರೆಟ್, ಡಿ.ಡಿ., ಎಲ್.ಎಲ್.ಡಿ. ಎಂಬ ಅಧ್ಯಾಪಕರು ಒಂದು ಪ್ರಶಂಸನೀಯವಾದ ಮುನ್ನುಡಿಯನ್ನು ಬರೆದರು. ಅದರಲ್ಲಿ ಸ್ವಾಮಿ ವಿವೇಕಾನಂದರನ್ನು ಬಾಯಿಬಿಟ್ಟು ಹೊಗಳಿ "ಏಕಮೇವಾದ್ವಿತೀಯವಾದ ಸತ್ಯವನ್ನು ನಮಗೆ ಬೋಧಿಸಲು ಪ್ರಾಚ್ಯಕ್ಕೆ ತಕ್ಕ ಯೋಗ್ಯತೆಯಿದೆ. ಅದನ್ನು ಇಷ್ಟು ಪರಿಣಾಮಕಾರಿಯಾಗಿ ಬೋಧಿಸಿದುದಕ್ಕಾಗಿ ವಿವಾನಂದರಿಗೆ ನಾವು ಚಿರಋಣಿಗಳಾಗಿದ್ದೇವೆ" ಎಂದು ಬರೆದಿರುವರು.

ಸ್ವಾಮಿಗಳ ಉಪನ್ಯಾಸಗಳು 'ರಾಜಯೋಗ', 'ಭಕ್ತಿಯೋಗ', 'ಕರ್ಮಯೋಗ' ಎಂಬ ಮೂರು ಗ್ರಂಥಗಳಾಗಿ ಅಚ್ಚಾದುವು. ಅವುಗಳಲ್ಲಿ ಗಹನ ವಿಚಾರಗಳೆ ತುಂಬಿದ್ದರೂ ಕೂಡ ಬಹುಬೇಗನೆ ಮಾರಾಟವಾಗಿ ಪುನರ್ಮುದ್ರಿತವಾದುವು.

ವಿರಾಮವಿಲ್ಲದೆ ಕೆಲಸಮಾಡಿ ಸ್ವಾಮಿಗಳು ಬಹಳ ದಣಿದಿದ್ದರು. ನ್ಯೂಯಾರ್ಕ್ ನಗರದಲ್ಲಿ ತಮ್ಮ ಭಾಷಣಗಳನ್ನು ಮುಗಿಸಿ ಅಲ್ಲೊಂದು "ನ್ಯೂಯಾರ್ಕ್ ವೇದಾಂತ ಸಂಘ" ಎಂಬ ಹೆಸರಿನ ಒಂದು ಸಂಘವನ್ನು ಸ್ಥಾಪಿಸಿ ಶಿಷ್ಯರಿಗೆ ಕಾರ್ಯಮಾರ್ಗವನ್ನು ಬೋಧಿಸಿ ಸಹಸ್ರದ್ವೀಪೋದ್ಯಾನಕ್ಕೆ ತೆರಳಿದರು. ಒಂದು ಕಾಗದದಲ್ಲಿ ಅವರು ಹೀಗೆಂದು ಬರೆದಿದ್ದಾರೆ:

"ಹಿಂದೂ ಅಭಿಪ್ರಾಯವನ್ನು ಇಂಗ್ಲಿಷಿಗೆ ಹಾಕಿ, ಅದರ ಶುಷ್ಕ ತತ್ತ್ವಶಾಸ್ತ್ರದಿಂದಲೂ ಜಟಿಲ ಪುರಾಣದಿಂದಲೂ ವಿಲಕ್ಷಣ ಮನಶ್ಶಾಸ್ತ್ರದಿಂದಲೂ ಸರಳವಾದ ಸುಲಭವಾದ ಜನಪ್ರಿಯವಾದ ಮತ್ತು ಮೇಧಾವಿಗಳಿಗೂ ಒಪ್ಪಿಗೆಯಾಗಬಹುದಾದ ಧರ್ಮವೊಂದನ್ನು ಕಡೆದು ರೂಪುಗೊಳಿಸುವುದು ಎಂತಹ ಪ್ರಯಾಸವೆಂಬುದನ್ನು ಪ್ರಯತ್ನಿಸಿದವರೇ ಬಲ್ಲರು. ಅತೀಂದ್ರಿಯ ಗಹನವಾದ ಅದ್ವೈತವು ಜನರ ನಿತ್ಯಜೀವನದಲ್ಲಿ ಸುಂದರ ಕಾವ್ಯದಂತೆ ಪ್ರವೇಶಿಸಬೇಕು. ಸಿಕ್ಕಾದ ಪುರಾಣ ಕಥೆಗಳಿಂದ ಧರ್ಮಮೂರ್ತಿಗಳು ಹೊರಹಮ್ಮಿ ನಿಲ್ಲಬೇಕು. ಮಿದುಳು ಕದಡುವಂತಿರಲುವ ಯೋಗಸಂಕುಲಗಳಿಂದ ಕಾರ್ಯಕಾರಿಯಾದ ಮತ್ತು ವೈಜ್ಞಾನಿಕವಾದ ಮನಶ್ಶಾಸ್ತ್ರ ಮೂಡಬೇಕು. ಇದನ್ನೆಲ್ಲ ಮಕ್ಕಳಿಗೂ ಭಾವವಾಗುವಂತೆ ಬರೆಯಬೇಕು ಎಂಬುದೆ ನನ್ನ ಬಾಳಿನ ಹೆಗ್ಗುರಿ."

ಗಹನವಾದ ವೇದಾಂತ ಜ್ಞಾನವನ್ನು ಸುಲಭ ರೀತಿಯಿಂದ ವಿವರಿಸಿ ಮಕ್ಕಳಿಗೂ ತಿಳಿಯುವ ಹಾಗೆ ಮಾಡಿ, ದೇಶದ ಮೇಲೆಲ್ಲ ಚೆಲ್ಲಿಬಿಡಬೇಕೆಂದು ಸ್ವಾಮಿಗಳು ನಿರ್ಧರಿಸಿದರು. ಇದುವರೆಗೆ ತತ್ತ್ವಶಾಸ್ತ್ರಗಳು, ವೇದಗಳು, ಉಪನಿಷತ್ತುಗಳು ಕೆಲವರು ಪಂಡಿತರ ಆಸ್ತಿಗಳಾಗಿದ್ದುವು; ಗುಪ್ತವಾಗಿದ್ದುವು; ಕ್ಲಿಷ್ಟವಾಗಿದ್ದುವು. ತತ್ತ್ವಜ್ಞಾನವು ಬರಿಯ ವಾದವಿವಾದಗಳಲ್ಲಿಯೆ ಪರಿಸಮಾಪ್ತಿ ಹೊಂದದೆ ಅದರ ಸಹಾಯ ಪ್ರಭಾವಗಳು ಪ್ರತಿಯೊಬ್ಬನ ದಿನಚರ್ಯೆಯಲ್ಲಿಯೂ ಕಾರ್ಯದಲ್ಲಿಯೂ ಮೈದೋರಬೇಕೆಂದು ಸ್ವಾಮಿಗಳು ಶಿಷ್ಯರಿಗೆ ಹೇಳುತ್ತಿದ್ದರು. ವೇದಾಂತ ಜ್ಞಾನವು ಉಳುವ ರೈತನನ್ನು ಮತ್ತೂ ಚೆನ್ನಾಗಿ ಉಳುವಂತೆ ಮಾಡುವುದು. ಉತ್ತಮವಾದ ಬಡಗಿಯನ್ನು ಉತ್ತಮತರನಾಗಿ ಮಾಡುವುದು. ವೇದಾಂತಿಯಾದ ಕುಂಬಾರನು ವೇದಾಂತಿಯಲ್ಲದ ಕುಂಬಾರನಿಗಿಂತಲೂ ಚೆನ್ನಾಗಿ ಮಡಕೆ ತಟ್ಟುವನು.

ಹಾಗೆಯೆ ವೇದಾಂತ ಜ್ಞಾನದಿಂದ ಗುಡಿಸುವವನು ಚೆನ್ನಾಗಿ ಗುಡಿಸುವನು; ಬರೆಯುವವನು ಚೆನ್ನಾಗಿ ಬರೆಯುವನು; ಆಳುವವನು ಮತ್ತೂ ಚೆನ್ನಾಗಿ ಆಳುವನು.

೧೮೯೬ನೆಯ ಚೈತ್ರಮಾಸದಲ್ಲಿ ಸ್ವಾಮಿಗಳಿಗೆ ಭಾರತದಿಂದ ಆಹ್ವಾನಪತ್ರಗಳು ಬರತೊಡಗಿದುವು. ಅವರಿಗೂ ಮಾತೃಭೂಮಿಯ ಪುಣ್ಯ ಸಂದರ್ಶನವನ್ನು ಮಾಡಬೇಕೆಂಬ ಮನಸ್ಸಾಯಿತು. ಮೊದಲು ಇಂಗ್ಲೆಂಡಿಗೆ ಹೋಗಿ ಅಲ್ಲಿಯ ಕಾರ್ಯವನ್ನು ಸಾಂಗಗೊಳಿಸಿ, ತರುವಾಯ ಅಲ್ಲಿಂದ ಭಾರತವರ್ಷಕ್ಕೆ ಹೊರಡುವುದಾಗಿ ನಿರ್ಣಯಿಸಿದರು. ಸೋದರಿ ಹರಿದಾಸಿ, ಸ್ವಾಮಿ ಕೃಪಾನಂದ, ಅಭಿಯಾನಂದ, ಯೋಗಾನಂದ ಮೊದಲಾದ ಸಂನ್ಯಾಸಿಗಳನ್ನೂ ಇನ್ನೂ ಕೆಲವು ಬ್ರಹ್ಮಚಾರಿಗಳನ್ನೂ ಬಳಿಗೆ ಕರೆದು ಅವರು ಮಾಡಬೇಕಾದ ಕಾರ್ಯಕ್ರಮಗಳನ್ನೆಲ್ಲ ವಿಶದವಾಗಿ ತಿಳುಹಿದರು. ಅಲ್ಲದೆ ಅವರ ಸಹಾಯಕ್ಕಾಗಿ ಇಂಡಿಯಾದಿಂದ ಸ್ವಾಮಿ ಶಾರದಾನಂದರನ್ನು ಕರೆಯಿಸುವುದಾಗಿಯೂ ಹೇಳಿ, ತಮ್ಮನ್ನು ಲಂಡನ್ನಿನಲ್ಲಿ ಬಂದು ಕಾಣುವಂತೆ ತಮ್ಮ ಗುರುಭ್ರಾತೃವಿಗೆ ಕೂಡಲೆ ಒಂದು ಪತ್ರವನ್ನು ಬರೆದರು.

ಏಪ್ರಿಲ್ ೧೫ನೆಯ ತಾರೀಖಿನ ದಿನ ಸ್ವಾಮಿಗಳು ನ್ಯೂಯಾರ್ಕಿನಿಂದ ಇಂಗ್ಲೆಂಡಿಗೆ ಹಡಗು ಹತ್ತಿ ಹೊರಟರು. ಅಮೆರಿಕಾ ದೇಶದವರಿಗಿದ್ದ ಸ್ವಾಮಿ ವಿವೇಕಾನಂದರ ಪೂತಮಧುರ ಸಂಗವು ಪಾವನ ಮಧುರತರ ಸ್ಮೃತಿಯಾಗಿ ಅವರ ಹೃದಯಗಳಲ್ಲಿ ನಲಿದಾಡಿತು.

ಇಂಗ್ಲೆಂಡಿಗೆ ಬಂದ ಸ್ವಾಮಿಗಳು ಲಂಡನ್ನಿನಲ್ಲಿ ಸ್ವಾಮಿ ಶಾರದಾನಂದರನ್ನು ಕಂಡು ಬೆರಗುಗೊಂಡರು. ಶಾರದಾನಂದರು ಏಪ್ರಿಲ್ ತಿಂಗಳ ಆದಿಭಾಗದಲ್ಲಿಯೆ ಅಲ್ಲಿಗೆ ಬಂದು ಸ್ಟರ್ಡಿಯವರ ಅತಿಥಿಗಳಾಗಿದ್ದರು. ಸೋದರ ಸಂನ್ಯಾಸಿಗಳಿಬ್ಬರೂ ಪರಸ್ಪರ ದರ್ಶನದಿಂದ ಮೂಡಿದ ಸೊಗದ ಕಡಲೊಳಾಳ್ದರು. ಶಾರದಾನಂದರು ಸ್ವಾಮಿಜಿಗೆ ಸ್ವದೇಶದ ಸಮಾಚಾರಗಳನ್ನೆಲ್ಲ ಹೇಳಿದರು. ತಮ್ಮ ಗುರುಭ್ರಾತೃಗಳ ಯೋಗಕ್ಷೇಮವನ್ನೆಲ್ಲ ತಿಳಿಸಿದರು. ಆಲಂಬಜಾರಿನಲ್ಲಿ ನವಮಠ ಸ್ಥಾಪನೆಯಾದ ಶುಭವಾರ್ತೆಯನ್ನು ಹೆಮ್ಮೆಯಿಂದುಸುರಿದರು. ವೀರವೈರಾಗಿಗಳಿಬ್ಬರೂ ಆನಂದದಿಂದ ಕಂಬನಿಗರೆದರು.

ಮೇ ತಿಂಗಳ ಆದಿಭಾಗದಲ್ಲಿ ಸ್ವಾಮಿಜಿ ಜ್ಞಾನಯೋಗದ ಮೇಲೆ ಉಪನ್ಯಾಸಗಳನ್ನು ಕೊಡಲಾರಂಭಿಸಿದರು. ಅವರ ಭಾಷಣಗಳಿಗೆ ಎಂದಿನಂತೆ ಜನಗಳು ಬಂದು ಕಿಕ್ಕಿರಿಯುತ್ತಿದ್ದರು. ಮೇ ತಿಂಗಳ ಅಂತ್ಯಭಾಗದಲ್ಲಿ "Royal Institute of Painters" ಎಂಬ ಸಂಘದ ಪರವಾಗಿ "ಭಕ್ತಿಯೋಗ", "ವೈರಾಗ್ಯ", "ಆತ್ಮ ಸಾಕ್ಷಾತ್ಕಾರ", "ಸಾರ್ವಭೌಮಿಕ ಧರ್ಮ" ಮೊದಲಾದ ಉಪನ್ಯಾಸಗಳನ್ನು ಮಾಡಿದರು. ದಿನದಿನಕ್ಕೂ ಜನರು ಹೆಚ್ಚು ಹೆಚ್ಚಾಗಿ ಬರಲಾರಂಭಿಸಿದರು. ಈ ಮಧ್ಯೆ ಅವರು ಅನೇಕ ಶ್ರೀಮಂತರ ಮನೆಗಳಲ್ಲಿ ಅನೇಕಾನೇಕ ಉಪಭಾಷಣಗಳನ್ನೂ ಕೊಟ್ಟರು. ಥಿಯಾಸೊಫಿ ಮಂದಿರದಲ್ಲಿ ಮಾತಾಡಬೇಕೆಂದು ಶ್ರೀಮತಿ ಹ್ಯಾನಿಬೆಸೆಂಟರು ಕೇಳಿಕೊಂಡಿದ್ದರಿಂದ ಅಲ್ಲಿಗೆ ಹೋಗಿ "ಭಾರತೀಯ ದೃಷ್ಟಿಯಿಂದ ಆತ್ಮವೆಂದರೇನು?" ಎಂಬುದರ ವಿಚಾರವಾಗಿ ಒಂದು ಪ್ರತಿಭಾಪೂರ್ಣವಾದ ಉಪನ್ಯಾಸವನ್ನು ಮಾಡಿದರು. "ಸೆಸೇಮ್ ಕ್ಲಬ್" ಎಂಬಲ್ಲಿ 'ವಿದ್ಯಾಭ್ಯಾಸ' ಎಂಬ ಉಪನ್ಯಾಸ ನೆರವೇರಿತು. ಅದರಲ್ಲಿ ಮನುಷ್ಯನ ಚಿತ್ತವು ಒಂದು ಮಹಾಜ್ಞಾನ ಸಾಗರವೆಂದೂ, ಭೂತಭವಿಷ್ಯದ್ವರ್ತಮಾನಗಳೂ ವ್ಯಕ್ತಾವ್ಯಕ್ತಗಳೂ ಅಲ್ಲಿ ಹುದುಗಿವೆಯೆಂದೂ, ವಿದ್ಯಾಭ್ಯಾಸದ ಕರ್ತವ್ಯ

ಅಂತಹ ಅಡಗಿರುವ ಜ್ಞಾನವನ್ನು ಹೊರಗೆಡಹಲು ತಕ್ಕ ಸನ್ನಿವೇಶವನ್ನು ಕಲ್ಪಿಸುವುದರಲ್ಲಿ ಮಾತ್ರ ಇದೆಯೆಂದೂ ತಿಳಿಸಿದರು. ಉದಾಹರಣೆಗೆ ಆಕರ್ಷಣಶಕ್ತಿ ಭೂಮಿ ಹುಟ್ಟಿದಾಗಲಿಂದಲೂ ಇದ್ದೇ ಇದೆ. ಆದರೆ ಸೇಬಿನ ಹಣ್ಣು ಬಿದ್ದುದನ್ನು ನೋಡಿದ ನ್ಯೂಟನ್ನಿನ ಮನದಲ್ಲಿ ಅದು ಪ್ರಬುದ್ಧವಾಗಿ ನಿಯಮರೂಪದಲ್ಲಿ ಹೊರಬಿತ್ತು. ಅಂದರೆ ತಕ್ಕ ಸನ್ನಿವೇಶ ದೊರೆತುದರಿಂದ ಆ ಒಳಗಿದ್ದ ಜ್ಞಾನ ಹೊರಮೂಡಿತು.

ಸ್ವಾಮಿಗಳಿಗೆ ಲಂಡನ್ನಿನಲ್ಲಿ ಸಂಭವಿಸಿದ ಘಟನೆಗಳಲ್ಲಿ ವಿಶೇಷತಮವೂ ಚಿರಸ್ಮರಣೀಯವೂ ಆದ ಘಟನೆಯೆಂದರೆ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಮ್ಯಾಕ್ಸ್‌ಮುಲ್ಲರ್ ಅವರ ಪರಿಚಯ. ಮೇ ತಿಂಗಳು ೨೮ನೆಯ ತಾರೀಖಿನ ದಿನ ಮ್ಯಾಕ್ಸ್‌ಮುಲ್ಲರ್‌ರವರು ಸ್ವಾಮಿಗಳಿಗೆ ಒಂದು ಆಮಂತ್ರಣ ಪತ್ರವನ್ನು ಕಳುಹಿಸಿದರು. ಆ ಪರಿಚಯ ಮಧುರಾನುಭವದ ವಿಚಾರವಾಗಿ ಸ್ವಾಮಿಗಳ ಹೀಗೆಂದು ಬರೆದಿದ್ದಾರೆ:

“... ಪ್ರೊಫೆಸರ್ ಮ್ಯಾಕ್ಸ್‌ಮುಲ್ಲರ್‌ರವರು ಎಂತಹ ಅನನ್ಯ ಸಾಧಾರಣ ವ್ಯಕ್ತಿ! ಕೆಲವು ದಿನಗಳ ಹಿಂದೆ ನಾನವರನ್ನು ಹೋಗಿ ಕಂಡೆ. ಅವರನ್ನು ವಂದಿಸಲು ಹೋದೆನೆಂದು ಹೇಳುವುದೇ ಉಚಿತ; ಏಕೆಂದರೆ ಯಾರು ಶ್ರೀರಾಮಕೃಷ್ಣರನ್ನು ಭಕ್ತಿಯಿಂದ ಸಂಭಾವಿಸುತ್ತಾರೋ ಅವರು ಯಾವ ಜಾತಿಯವರೇ ಆಗಲಿ, ಯಾವ ಮತದವರೇ ಆಗಲಿ, ಯಾವ ಜನಾಂಗದವರೇ ಆಗಲಿ, ನನಗೆ ಪೂಜ್ಯರು. ಅವರೆಡೆಗೆ ಹೋಗುವುದೆಂದರೆ ನನಗೆ ಅದೊಂದು ತೀರ್ಥಯಾತ್ರೆ...

“‘ಕೇಶವಚಂದ್ರಸೇನನ ಧರ್ಮಜೀವನದಲ್ಲಿ ಪರಿವರ್ತನೆಯುಂಟಾದುದು ಯಾವ ಶಕ್ತಿಯ ಮಹಿಮೆಯಿಂದ’ ಎಂದು ಕೇಳಿದರು. ಏಕೆಂದರೆ ಅದನ್ನು ಕೇಳಿದಂದಿನಿಂದ ಅವರಿಗೆ ಶ್ರೀರಾಮಕೃಷ್ಣರ ಜೀವನ ಮತ್ತು ಉಪದೇಶಗಳಲ್ಲಿ ಕುತೂಹಲ ಹೆಚ್ಚಿತಂತೆ. ‘ಮಹಾಶಯ, ಶ್ರೀರಾಮಕೃಷ್ಣರನ್ನು ಈಗಾಗಲೆ ಅನೇಕರು ಆರಾಧಿಸುತ್ತಿದ್ದಾರೆ’ ಎಂದೆನು ನಾನು. ‘ಅಂತಹರಿಗಲ್ಲದೆ ಮತ್ತಾರಿಗೆ ಆರಾಧನೆ ಸಲ್ಲಬೇಕು?’ ಎಂದರವರು. ಪ್ರೊಫೆಸರವರು ದಯಾಮೂರ್ತಿ... ನಮ್ಮೊಡನೆ ಬಂದು ಆಕ್ಸ್‌ಫರ್ಡ್ ವಿದ್ಯಾಪೀಠದ ಕಾಲೇಜುಗಳನ್ನೂ, ಬೋಡ್ಲಿಯನ್ ಲೈಬ್ರರಿಯನ್ನೂ ತೋರಿಸಿದರು. ಕಡೆಗೆ ನಮ್ಮನ್ನು ರೈಲ್ವೇ ಸ್ಟೇಷನ್ನಿಗೂ ಬಂದು ಬೀಳ್ಕೊಂಡರು. ನಮಗಾಗಿ ಇಷ್ಟೊಂದು ತೊಂದರೆ ತೆಗೆದುಕೊಂಡುದೇಕೆ ಎಂದು ಕೇಳಿದ್ದಕ್ಕೆ ಅವರು ‘ಶ್ರೀರಾಮಕೃಷ್ಣ ಪರಮಹಂಸರ ಶಿಷ್ಯರ ಸಂಗ ಪ್ರತಿದಿನವೂ ದೊರಕುವುದು ದುರ್ಲಭ!’ ಎಂದರು.

“... ಮುದ್ದಾದ ಸಣ್ಣ ಕುಟೀರ. ಸುತ್ತಲೂ ಹೂದೋಟ. ಆ ನರೆತ ನವಿರಿನ ಮಹರ್ಷಿ! ಮುಖದಲ್ಲಿ ಏನು ಗಾಂಭೀರ್ಯ! ಏನು ಶಾಂತಿ! ಎಷ್ಟು ಕರುಣಾಯ ಮುಖಮಂಡಲ! ಎಪ್ಪತ್ತು ಮಾಗಿಗಳ ಪೆಟ್ಟನ್ನು ತಿಂದಿರುವ ಅವರ ನುಣ್ಣನೆಯ ಹಣೆ ಎಳೆಮಕ್ಕಳ ಲಲಾಟದಂತಿದೆ. ಮುಖದಲ್ಲಿರುವ ಒಂದೊಂದು ರೇಖೆಯೂ ಆತ್ಮವೈಭವದ ವೈಜಯಂತಿಗಳಂತಿವೆ. ಅವರ ಸಹಧರ್ಮಿಣಿ! ಆಕೆಯಾದರೊ ಎಂತಹ ಮಹಾನುಭಾವೆ!... ಆ ಮರಗಳು, ಆ ಹೂವುಗಳು, ಆ ನಿಶ್ಶಬ್ದ, ಆ ನೀಲ ನಿರ್ಮಲ ಗಗನ, ಅವುಗಳನ್ನೆಲ್ಲ ನೋಡಿದ ನನಗೆ ಭಾರತ ವರ್ಷದ ಸನಾತನ ಋಷ್ಯಾಶ್ರಮಗಳ ನೆನಪಾಯಿತು. ವಷಿಷ್ಠ ಅರುಂಧತಿಯರ ನೆನಪಾಯಿತು.

"... 'ನೀವು ಬರುವುದಿಲ್ಲವೇ ನಮ್ಮ ದೇಶಕ್ಕೆ? ನಮ್ಮ ಪೂರ್ವಿಕರ ವೇದ ವೇದಾಂತಗಳನ್ನು ಬೆಳಕಿಗೆ ತಂದವರು ನೀವು. ನಿಮ್ಮನ್ನು ನಮ್ಮವರು ಸನ್ಮಾನಿಸಿ ಪೂಜಿಸುವರು' ಎಂದೆನು. ಆ ವಯೋವೃದ್ಧ ಮಹರ್ಷಿಗಳ ಮುಖ ಮಿಂಚಿತು. ಅವರ ಕಣ್ಣುಗಳಲ್ಲಿ ಹನಿತುಂಬಿದುವು. ಒಯ್ಯೊಯ್ಯನೆ ತಲೆಯಾಡಿಸುತ್ತ 'ಬಂದರೆ ನಾನು ಹಿಂದಕ್ಕೆ ಬೇರೆ ಬರುವುದಿಲ್ಲ. ನನ್ನ ಉತ್ತರಕ್ರಿಯೆಗಳನ್ನೆಲ್ಲ ನೀವೆ ಮಾಡಬೇಕಾಗುವುದು' ಎಂದು ಮೆಲ್ಲಗೆ ಹೇಳಿದರು. ಮುಂದೆ ನಾನು ಮಾತಾಡಲಾರದವನಾದೆ. ಅವರ ಹೃದಯದ ಅನಿರ್ವಚನೀಯವಾದ ಅಂತರಾಳದಲ್ಲಿ ಏನಿದೆಯೊ ನನಗೇಕೆ? ಎಂದು ಸುಮ್ಮನಾದೆ. ಬಹುಶಃ ಅವರ ಪೂರ್ವಜನ್ಮದ ಮಹರ್ಷಿ ಜೀವನದ ಸ್ಮೃತಿ ಉಂಟಾಗಿರಬಹುದೆ? ಯಾರು ಬಲ್ಲರು?

"ಅವರ ಜೀವನವೇ ಜಗತ್ತಿಗೆ ಮಂಗಳದಾಯಕವಾಗಿದೆ. ಇನ್ನೂ ಅನೇಕ ವರ್ಷಗಳ ಕಾಲ ಹಾಗೆಯೆ ಆಗಿರಲಿ!"

ಪಂಡಿತವರ್ಯ ಮ್ಯಾಕ್ಸ್‌ಮುಲ್ಲರ್‌ರವರೂ ಸ್ವಾಮಿಗಳೂ ಆಜೀವ ಮಿತ್ರರಾದರು. ಸ್ವಾಮಿಗಳ ಪ್ರೇರಣೆ ಸಹಾಯಗಳಿಂದ ಪ್ರೊಫೆಸರ್ ಅವರು 'ಶ್ರೀರಾಮಕೃಷ್ಣರ ಜೀವನ ಮತ್ತು ಉಪದೇಶ' ಎಂಬ ಇಂಗ್ಲಿಷ್ ಗ್ರಂಥವನ್ನು ಪ್ರಚುರಪಡಿಸಿದರು.

ಇದೇ ಸಮಯದಲ್ಲಿ ಸೇವಿಯರ್ ದಂಪತಿಗಳೂ ಸ್ವಾಮಿಜಿಯ ಶಿಷ್ಯವರ್ಗಕ್ಕೆ ಸೇರಿದರು. ಆ ವೃದ್ಧ ದಂಪತಿಗಳಿಬ್ಬರೂ ಒಂದು ದಿನ ತಮ್ಮ ಸ್ನೇಹಿತರಿಂದ ವಿವೇಕಾನಂದರ ವಿಷಯವನ್ನು ಕೇಳಿ ತಿಳಿದುಕೊಂಡು ಸ್ವಾಮಿಗಳಲ್ಲಿಗೆ ಬಂದರು. ಸ್ವಾಮಿಗಳ ತತ್ತ್ವೋಪದೇಶವನ್ನು ಕೇಳಿದ ಮೇಲೆ ಅವರು "This is the man and this is the philosophy that we have been seeking in vain all through our life" ಎಂದುಕೊಂಡು ಅವರ ಗುರುತ್ವವನ್ನು ಸ್ವೀಕರಿಸಿದರು. ಅಷ್ಟೇ ಅಲ್ಲ; ಅವರಿಬ್ಬರೂ ಸ್ವಾಮಿಗಳೊಡನೆ ಇಂಡಿಯಾ ದೇಶಕ್ಕೂ ಬಂದು ನೆಲೆಸಿದರು. ಸ್ವಾಮಿಗಳು ಮಿಸೆಸ್ ಸೇವಿಯರ್ ಅವರನ್ನು ತಾಯಿ ಎಂದು ಸಂಬೋಧಿಸುತ್ತಿದ್ದರು. ಅವರಿಬ್ಬರೂ ಸ್ವಾಮಿಜಿಯನ್ನು ಗುರುವೆಂದೂ ಪುತ್ರನೆಂದೂ ಭಾವಿಸಿ ಪ್ರೀತಿಸುತ್ತಿದ್ದರು. ಸ್ವಾಮಿಗಳು ತಮ್ಮ ಆಂಗ್ಲೇಯ ಶಿಷ್ಯರಲ್ಲಿ ಸೋದರಿ ನಿವೇದಿತಾ, ಜೆ. ಜೆ. ಗುಡ್ವಿನ್, ಸೇವಿಯರ್ ದಂಪತಿಗಳು ಇವರುಗಳನ್ನು ಅಗ್ರಗಣ್ಯರನ್ನಾಗಿ ಭಾವಿಸಿದರು.

ಸ್ವಾಮಿಗಳ ಅವಿಶ್ರಾಂತತೆಯನ್ನು ಕಂಡ ಸೇವಿಯರ್ ದಂಪತಿಗಳೂ ಮಿಸ್ ಮುಲ್ಲರ್‌ರವರೂ ಸೇರಿ ಒಂದು ಒಳಸಂಚು ಮಾಡಿ ಗುರುಗಳನ್ನು ದೇಶಯಾತ್ರೆಗೆ ಕರೆದೊಯ್ದರು. ಯಾತ್ರಿಕರು ಪ್ಯಾರಿಸ್ಸಿನಲ್ಲಿ ಒಂದು ದಿನವಿದ್ದು ಅಲ್ಲಿಂದ ಪರ್ವತ ಕಂದರ ರಮ್ಯಸರೋವರ ನವವನಶ್ಯಾಮಲೆಯಾದ ಸ್ವಿಟ್ಜರ್ಲೆಂಡ್ ರಾಷ್ಟ್ರವನ್ನು ಪ್ರವೇಶಿಸಿ ಜಿನೀವಾಕ್ಕೆ ಹೋದರು. ಅಲ್ಲಿಯ ಮಂದ ಶೀತಲ ಸಮೀರಣ, ಸಲಿಲರಾಶಿಯ ಸುನೀಲವರ್ಣ, ನಿರ್ಮಲ ಸುನೀಲವ್ಯೋಮ, ಶ್ಯಾಮಲಕೋಮಲ ಸುಂದರ ವನರಾಜಿ ಇವುಗಳನ್ನೆಲ್ಲ ಸಂದರ್ಶಿಸಿದ ಸ್ವಾಮಿಗಳು ಭಾವಾವಿಷ್ಟರಾದರು.

ಸ್ವಾಮಿಗಳು ಪಯಣದ ಬಳಲಿಕೆಯನ್ನು ಕೂಡ ಲಕ್ಷ್ಯಮಾಡದೆ ಜಿನೀವ ನಗರದ ಪ್ರದರ್ಶನ ಶಾಲೆಗೆ ಹೋದರು. ಅಲ್ಲಿ ಎಲ್ಲರೂ ವಿನೋದಾರ್ಥವಾಗಿ ಒಂದು ಆಕಾಶಬುಟ್ಟಿ ವಿಮಾನದಲ್ಲಿ ಕುಳಿತು ಮೇಲೇರಿದರು. ಆಗ ತಾನೆ ಸಂಧ್ಯಾ ಸೂರ್ಯನು ಪಶ್ಚಿಮ ದಿಗಂತದಲ್ಲಿ ಹೊತ್ತಿಕೊಂಡು ಉರಿಯುವ ದೊಡ್ಡದೊಂದು ಮ್ಯಾಗ್ನೀಸಿಯಂ ಲೋಹದ ಉಂಡೆಯಂತೆ ದೇದೀಪ್ಯಮಾನವಾಗಿ ವಿರಾಜಿಸುತ್ತಿದ್ದನು. ದೃಶ್ಯ ಮನೋಜ್ಞವಾಗಿತ್ತು.

ತಟಾಕ ಪುಷ್ಕರಿಣಿ ಸರೋವರಗಳಿಂದ ಮೆರೆಯುವ ಜಿನೀವ ನಗರದ ರಮಣೀಯತೆ ದೇವಲೋಕದ ಅಪ್ಸರ ಸ್ತ್ರೀಯರ ಉದ್ಯಾನವನಗಳನ್ನೂ ನೋಡಿ ನಗುವಂತಿದೆ. ಅಲ್ಲಿ ಸರೋವರ ಸ್ನಾನವೆಂದರೆ ನವಚೇತನದಾಯಕವಾದ ಮಹತ್ಕಾರ್ಯ. ಸ್ವಾಮಿಗಳು ತಪ್ಪದೆ ದಿನಕ್ಕೆ ಎರಡಾವರ್ತಿಯಾದರೂ ಸ್ನಾನ ಮಾಡದೆ ಬಿಡುತ್ತಿರಲಿಲ್ಲ.

ಮಾರನೆಯ ದಿನ ಎಲ್ಲರೂ ಸೇರಿ ಚಿಲಾನ್ ದುರ್ಗವನ್ನು ನೋಡಲು ಹೋದರು. ಅಲ್ಲಿ ನಿಂತು ನೋಡಿದರೆ ನಾಲ್ವತ್ತು ಮೈಲಿಗಳ ದೂರದಲ್ಲಿ ಮೌಂಟ್ ಬ್ಲಾಂಕ್ ಪರ್ವತಶ್ರೇಣಿ ತೋರುತ್ತದೆ. ಸ್ವಾಮಿಗಳು ದೂರದರ್ಶಕ ಸುಲೋಚನಗಳ ಸಹಾಯದಿಂದ ಆ ಉನ್ನತೋನ್ನತ ತುಷಾರಾವೃತ ಶೃಂಗಶ್ರೇಣಿಗಳನ್ನು ನೋಡಿ ಹಿಮಾಲಯ ಭೂಧರ ಪಂಕ್ತಿಗಳನ್ನು ಸ್ಮರಿಸಿಕೊಂಡು ಹಿಗ್ಗಿದರು. ಕೆಲವು ದಿನಗಳಾದ ಮೇಲೆ ಹೇಸರುಗತ್ತೆಗಳ ಮೇಲೆ ಕುಳಿತು ಯಾತ್ರಿಕರು ಹೊರಟರು. ದಾರಿಯಲ್ಲಿ ಹಿಮಾಲಯ ಪರ್ವತಗಳಲ್ಲಿ ತಮಗಾದ ಅನುಭವಗಳ ಕಥೆಯನ್ನು ಸ್ವಾಮಿಜಿ ಮನೋಹರವಾಗಿ ಬಣ್ಣಿಸಿದರು. ಕೆಲವು ದಿನಗಳಾದ ಮೇಲೆ ಆಲ್ಫ್ಸ್ ಪರ್ವತಗಳ ಮಧ್ಯೆ ಇರುವ ಒಂದು ಹಳ್ಳಿಯಲ್ಲಿ ಎಲ್ಲರೂ ಬೀಡುಬಿಟ್ಟರು. ಸುತ್ತಲೂ ಶುಭ್ರಹಿಮವಿಭೂಷಿತ ಗಿರಿಶಿಖರ ಪಂಕ್ತಿಗಳು ಗಗನಚುಂಬಿತವಾಗಿದ್ದುವು. ಎಲ್ಲೆಲ್ಲಿಯೂ ನೀರವ; ಗ್ರಾಮಜೀವನದ ನಿರುಪಮ ಗಭೀರ ಶಾಂತಿ, ಪ್ರಪಂಚದ ಕಲ್ಮಶದ ಸುಳಿವು ಕೂಡ ಅಲ್ಲಿಲ್ಲ. ಸ್ವಾಮಿಗಳು ಧ್ಯಾನಾಸಕ್ತರಾದರು. ಯಾವುದೊ ಒಂದು ಅನಿರ್ವಚನೀಯ ಶಾಂತಿ ಅವರೆದೆಯನ್ನು ತುಂಬಿತ್ತು. ಜಗತ್ತೂ ಅದರ ಕಾರ್ಯಗಳೂ ಕರ್ಮಕೋಲಾಹಲವೂ ಸ್ವೀಯ ಪ್ರಚಾರಕಾರ್ಯವೂ ದಾರ್ಶನಿಕ ವಿಚಾರಗಳೂ ಎಲ್ಲವೂ ವಿಸ್ಮೃತವಾದುವು. ಹಿಮಾಲಯದ ಪ್ರಾಂತದಲ್ಲಿ ಅವರಿಗಾಗಿದ್ದ ಅನುಭವಗಳು ಮರಳಿದುವು. ಅವರ ವದನ ಮಂಡಲ ಆಧ್ಯಾತ್ಮಿಕ ಜ್ಯೋತಿಯಿಂದ ವಿರಾಜಿಸಿತು.

ಇಷ್ಟರಲ್ಲಿ ಮಹಾತತ್ತ್ವವೇತ್ತ ಪ್ರಾಚ್ಯಮನೀಷಿ ಪಾಲ್ ಡಾಯ್ಸನ್ ಎಂಬ ಕೀಲ್ ಯೂನಿವರ್ಸಿಟಿಯ ದಾರ್ಶನಿಕನಿಂದ ಸ್ವಾಮಿಗಳಿಗೆ ಒಂದು ಆಮಂತ್ರಣ ಪತ್ರ ಬಂತು. ಯಾತ್ರಿಕರು ಪರ್ವತಗಳಿಂದ ಕೆಳಗೆ ಧುಮುಕಿ ಪ್ರಸಿದ್ಧ ನಗರಗಳನ್ನು ನೋಡುತ್ತ ನೋಡುತ್ತ ಪಾಲ್ ಡಾಯ್ಸನ್ ಮಹಾಶಯನ ನಿವಾಸಸ್ಥಾನವಾದ ಕೀಲ್ ನಗರಕ್ಕೆ ಬಂದರು.

ಪ್ರೊಫೆಸರ್ ಡಾಯ್ಸನ್ನರು ಸ್ವಾಮಿಗಳನ್ನು ನೋಡಲು ಬಂದಾಗ ಅವರು ಯಾವುದೊ ಒಂದು ಕಾವ್ಯವನ್ನು ಮನಸ್ಸಿಟ್ಟು ಓದುತ್ತಿದ್ದರು. ಬಹಳ ಹೊತ್ತಾದರೂ ಡಾಯ್ಸನ್ನರೊಡನೆ ಮಾತಾಡಲಿಲ್ಲ. ತರುವಾಯ ತೆಕ್ಕನೆ ಎಚ್ಚತ್ತವರಂತೆ ಪ್ರಾಚ್ಯಮನೀಷಿಯನ್ನು ನೋಡಿ ಕ್ಷಮೆ ಬೇಡಿದರು. ಆದರೂ ಡಾಯ್ಸನ್ನರಿಗೆ ಅರ್ಥವಾಗಲಿಲ್ಲ. ಸ್ವಲ್ಪ ಬೇಸರವೂ ಆಗಿರಬಹುದು. ಸ್ವಲ್ಪ ಹೊತ್ತಿನಲ್ಲಿಯೆ ಸ್ವಾಮಿಗಳು ಸಂಭಾಷಣೆಯಲ್ಲಿ ತಾವು ಓದುತ್ತಿದ್ದ ಪದ್ಯಕಾವ್ಯದಿಂದ ಶ್ಲೋಕಗಳ ಮೇಲೆ ಶ್ಲೋಕಗಳನ್ನು ಉದಾಹರಿಸುತ್ತಿದ್ದುದನ್ನು ನೋಡಿ ಡಾಯ್ಸನ್ನರು ವಿಸ್ಮಿತರಾಗಿ, ಹಿಂದೆ ಒಂದು ಸಾರಿ ಖೇತ್ರಿ ಮಹಾರಾಜರು ಹೇಳಿದ್ದಂತೆ, “ಸ್ವಾಮಿಜಿ, ಇಂತಹ ಸ್ಮೃತಿಶಕ್ತಿ ನಿಮಗೆ ಹೇಗೆ ದೊರಕಿತು?” ಎಂದು ಕೇಳಿದರು. ತರುವಾಯ ಸ್ವಾಮಿಗಳು ಯೋಗಾಭ್ಯಾಸ ಧ್ಯಾನಧಾರಣೆಗಳನ್ನು ಕುರಿತು ಬಹಳ ಹೊತ್ತು ವಿವರಿಸಿದರು. ಅದಾದ ಮೇಲೆ ದರ್ಶನಶಾಸ್ತ್ರಗಳ ವಿಚಾರವಾದ ಸಂಭಾಷಣೆ ನಡೆಯಿತು. ಪ್ರೊಫೆಸರ್ ಡಾಯ್ಸನ್ನರು ಸ್ವಾಮಿಜಿಯ ಪ್ರತಿಭೆಯನ್ನು ಕೊಂಡಾಡಿದರು. ಅಲ್ಲದೆ ತಾವು ಮಾಡುತ್ತಿದ್ದ ಒಂದು ಸಂಸ್ಕೃತ ಗ್ರಂಥದ ಭಾಷಾಂತರವನ್ನು ಅವರಿಗೆ ತೋರಿಸಿ ಅವರಿಂದ ಯುಕ್ತವಾದ ಅನೇಕ ಸಲಹೆಗಳನ್ನೂ ಸ್ವೀಕರಿಸಿದರು.

ಡಾಯ್ಸನ್ ದಂಪತಿಗಳು ಸ್ವಾಮಿಗಳನ್ನು ಒಡಗೊಂಡು ಹೋಗಿ ಊರಿನಲ್ಲಿ ನೋಡತಕ್ಕ ಸ್ಥಳಗಳನ್ನೆಲ್ಲ ತೋರಿಸಿದರು. ಅಲ್ಲದೆ ಸ್ವಾಮಿಗಳು ಔತಣಕ್ಕೆ ಕರೆದು ಬಹಳವಾಗಿ ಉಪಚರಿಸಿದರು. ಕೆಲವು ದಿನಗಳಾದ ಮೇಲೆ ಸ್ವಾಮಿಜಿ ತಮ್ಮ ಕಾರ್ಯಸ್ಥಾಪನೆಗಾಗಿ ಲಂಡನ್ನಿಗೆ ಹಿಂತಿರುಗುವುದಾಗಿ ಹೇಳಿದರು. ಡಾಯ್ಸನ್ನರು ಅವರೊಡನೆ ಇನ್ನೂ ಅನೇಕ ಚರ್ಚೆಗಳನ್ನು ಮಾಡಿ ವಿಷಯಸಂಗ್ರಹ ಮಾಡಬೇಕೆಂದಿದ್ದರು. ಆದ್ದರಿಂದ ಸ್ವಾಮಿಜಿಯನ್ನು ಇನ್ನೂ ಕೆಲವು ದಿನಗಳ ತನಕ ಕೀಲ್ ನಗರದಲ್ಲಿಯೆ ಇರುವಂತೆ ಕೇಳಿಕೊಂಡರು. ಆದರೆ ಸ್ವಾಮಿಗಳು ತಮ್ಮ ಕಾರ್ಯಭಾರವನ್ನು ತಿಳಿಸಲು, "ಆಗಲಿ, ಸ್ವಾಮಿಜಿ, ನಾನು ನಿಮ್ಮನ್ನು ಹ್ಯಾಂಬರ್ಗ್‌ನಲ್ಲಿ ಬಂದು ಸೇರುತ್ತೇನೆ. ಅಲ್ಲಿಂದ ಇಬ್ಬರೂ ಸೇರಿ ಹಾಲೆಂಡ್ ಮಾರ್ಗವಾಗಿ ಲಂಡನ್ನಿಗೆ ಹೋಗೋಣ. ಅಲ್ಲಿಯಾದರೂ ನಿಮ್ಮೊಡನೆ ಕೆಲವು ದಿನಗಳನ್ನು ಸಂತೋಷದಿಂದ ಕಳೆಯಬೇಕೆಂದಿದ್ದೇನೆ" ಎಂದು ಹೇಳಿ ಬೀಳ್ಕೊಂಡರು.

ಕೀಲ್ ನಗರದಿಂದ ಹೊರಟು ಸೇವಿಯರ್ ದಂಪತಿಗಳು ಸ್ವಾಮಿಜಿಯೊಡನೆ ಹ್ಯಾಂಬರ್ಗಿಗೆ ಬಂದರು. ಆ ಕಿನ್ನರವನಮಯ ಪ್ರದೇಶದಲ್ಲಿ ಮೂರು ದಿನಗಳಿದ್ದು ಡಾಯ್ಸನ್ನರು ಬಂದೊಡನೆ ಅವರನ್ನು ಕೂಡಿ ಹಾಲೆಂಡ್ ದೇಶದ ಮುಖ್ಯ ಪಟ್ಟಣವಾದ ಆರ್ಮ್‌ಸ್ಟರ್ಡಾಮಿಗೆ ಹೋದರು. ಕಾಲುವೆಗಳೇ ಬೀದಿಗಳಾಗಿರುವ ವಿಚಿತ್ರ ನಗರದ ಪೆಂಪನ್ನು ಅವಲೋಕಿಸಿ ಅಲ್ಲಿ ಮೂರು ದಿನಗಳನ್ನು ಕಳೆದು ಎಲ್ಲರೂ ಲಂಡನ್ನಿಗೆ ಬಂದರು.

ಅಕ್ಟೋಬರ್ ನವೆಂಬರ್ ತಿಂಗಳುಗಳಲ್ಲಿ ಸ್ವಾಮಿಜಿ ವೇದಾಂತ ಸಂದೇಶವನ್ನು ದೃಢವಾಣಿಯಿಂದ ಸಾರತೊಡಗಿದರು. ಜನರು ಅವರ ವಾಕ್‌ಪ್ರವಾಹದಲ್ಲಿ ತೇಲಿಹೋದರು. ಅವರ ಮಾತುಗಳಲ್ಲಿ ಸ್ವಿಟ್ಜರ್ಲೆಂಡಿನ ಸೌಂದರ್ಯವೂ ಆಲ್ಫ್ಸ್ ಪರ್ವತಗಳ ಗಾಂಭೀರ್ಯವೂ ಜರ್ಮನ್ ಯಂತ್ರಶಾಲೆಗಳ ವಿಜ್ಞಾನವೂ ಮೈದೋರಿದುವು. ಅತಿ ಗಹನವೂ ಶ್ರೇಷ್ಠತಮವೂ ಆಗಿರುವ ಮಾಯಾವಾದವನ್ನು ಸುಲಭ ರೀತಿಯಿಂದ ವಿವರಿಸಿ ಹೇಳಿದರು. "Maya and Illusion", "Maya and the Evolution of the Conception of God", "Maya and Freedom", "The Absolute and Manifestation", "God in Everything", "Realisation", "Unity in Diversity", "The Freedom of the Soul", "The Practical Vedanta" ಎಂಬ ಪ್ರಚಂಡ ಭಾಷಣಗಳು ವೇದಾಂತ ದರ್ಶನದ ಜಯ ಡಿಂಡಿಮ ರವದಂತೆ ಇಂಗ್ಲೆಂಡಿನಲ್ಲಿ ಪ್ರತಿಧ್ವನಿತವಾದುವು.

ನವಂಬರ್ ತಿಂಗಳು ಮಧ್ಯಭಾಗದಲ್ಲಿ ಸ್ವಾಮಿಗಳು ಮಾತೃಭೂಮಿಗೆ ಹೊರಡಲು ಸನ್ನಾಹ ಮಾಡಲಾರಂಭಿಸಿದರು. ಸುದ್ದಿ ಹಬ್ಬಿತು. ಜನರು ಎಂದಿಗಿಂತಲೂ ಹೆಚ್ಚಾಗಿ ಬರತೊಡಗಿದರು. ಆಂಗ್ಲೇಯ ಶಿಷ್ಯರೆಲ್ಲರೂ ಸೇರಿ ಸ್ವಾಮಿಗಳಿಗೆ ವಿಜೃಂಭಣೆಯಿಂದ ಒಂದು ಬಿನ್ನವತ್ತಳೆಯನ್ನು ಅರ್ಪಿಸಿದರು.

ಡಿಸೆಂಬರು ೧೬ನೆಯ ತಾರೀಖಿನ ದಿನ ಸ್ವಾಮಿಗಳು ಸೇವಿಯರ್ ದಂಪತಿಗಳೊಡನೆ ಲಂಡನ್ ನಗರವನ್ನು ಬಿಟ್ಟರು. ಅವರ ಮನಸ್ಸೆಲ್ಲ ಮಾತೃಭೂಮಿಯ ಚಿಂತನೆಯಿಂದ ತುಂಬಿಹೋಗಿತ್ತು. ಹೊರಡುವ ದಿನ ಸ್ನೇಹಿತನೊಬ್ಬನು "ಸ್ವಾಮಿಜಿ, ನಾಲ್ಕು ವರ್ಷಗಳ ಕಾಲ ಪಶ್ಚಿಮ ದೇಶದ ಭೋಗಭೂಮಿಯಲ್ಲಿ ವಾಸಿಸಿದ ನಿಮಗೆ ಭಾರತವರ್ಷ ಈಗ ಹೇಗೆ ಕಾಣುತ್ತದೆ?" ಎಂದು ಕೇಳಿದುದಕ್ಕೆ ಸ್ವಾಮಿಜಿಗಳು "ನಾನಿಲ್ಲಿಗೆ ಬರುವುದಕ್ಕೆ ಮೊದಲು ಭಾರತ ಭೂಮಿಯನ್ನು

ಪ್ರೀತಿಸುತ್ತಿದ್ದೆ. ಈಗಲಾದರೊ ಆ ಪುಣ್ಯಮಾತೃಭೂಮಿಯ ಮಣ್ಣಿನ ಹುಡಿ ಕೂಡ ನನಗೆ ಪವಿತ್ರವಾಗಿದೆ; ಬೀಸುವ ಗಾಳಿ ಪಾವನಕರವಾಗಿದೆ. ಈಗ ನನಗದು ನಿಜವಾದ ಪುಣ್ಯಭೂಮಿಯಾಗಿದೆ. ಯಾತ್ರಾಸ್ಥಾನವಾಗಿದೆ; ತೀರ್ಥಕ್ಷೇತ್ರವಾಗಿದೆ" ಎಂದು ಆವೇಶದಿಂದ ನುಡಿದರಂತೆ.

ಭಾರತವರ್ಷಾಭಿಮುಖವಾಗಿ ಹೊರಟ ಸ್ವಾಮಿಗಳು ಹರ್ಷಚಿತ್ತರಾದರು. ಬಹುದೂರದಿಂದ ಹೊರೆಯೊಂದನ್ನು ಹೊತ್ತುಕೊಂಡು ಗಿರಿಕಂದರ ಘೋರಾರಣ್ಯಗಳನ್ನು ಸುರಕ್ಷಿತವಾಗಿ ದಾಟಿಬಂದ ಪಯಣಿಗನೊಬ್ಬನು ಹೊಳೆಯ ದಡದ ಮರದ ತಣ್ಣೆಳಲಲ್ಲಿ ಮೂಟೆಯನ್ನು ಕೆಳಗಿಳುಹಿ, ಬೊಗಸೆಗೈಯಲ್ಲಿ ತಣ್ಣೀರನ್ನು ಕುಡಿದು, ತಂಬೆಲರಲ್ಲಿ ನಿಟ್ಟುಸಿರೆಳೆದು ನಲಿಯುವಂತೆ ಸ್ವಾಮಿಗಳು ನಲಿದರು. ಘೋರ ಯುದ್ಧಕ್ಕಾಗಿ ವಿದೇಶಕ್ಕೆ ಹೋದ ಪುತ್ರನು ವಿಜಯಿಯಾಗಿ ಮನೆಗೆ ಹಿಂದಿರುಗಿ ಬರುವಾಗ ತನ್ನ ತಾಯಿಯನ್ನು ನೋಡುವೆನೆಂದು ಆನಂದದಿಂದ ಮೈಮರೆಯುವಂತೆ ಹಿಗ್ಗಿದರು.

ಲಂಡನ್ ಹಿಂದುಳಿಯಿತು. ಡೋವರ್ ಮಿಂಚಿಹೋಯಿತು. ರೈಲು ಕೆಲೆಯಿಂದ ಹೊರಟು ಫ್ರಾನ್ಸ್ ದೇಶದ ಮಾರ್ಗವಾಗಿ ಶುಭ್ರ ಸುಂದರ ಆಲ್ಪ್ಸ್ ಪರ್ವತವನ್ನು ಹಾದು ಮಿಲಾನ್ ನಗರಕ್ಕೆ ಬಂದಿತು. ಅಲ್ಲಿ ನೋಡಬೇಕಾದುವುಗಳನ್ನೆಲ್ಲಾ ನೋಡಿಕೊಂಡು ಗುಂಪು ಮುಂದೆ ಹೊರಟಿತು. ತರುವಾಯ ಪೀಸಾ, ಫ್ಲೋರೆನ್ಸ್ ಮೊದಲಾದ ಸುಂದರ ಇಟಲಿಯ ಸುಂದರ ಪುರಗಳನ್ನು ನೋಡುತ್ತಾ ಗುಂಪು ರೋಮ್ ಪಟ್ಟಣಕ್ಕೆ ಬಂದಿಳಿಯಿತು. ಆ ಪ್ರಸಿದ್ಧ ಪುರಾತನ ನಗರದ ಐತಿಹಾಸಿಕ ದೃಶ್ಯಗಳನ್ನೂ ಶಿಲ್ಪ ಚಿತ್ರ ಕಲಾಮಂಡಿತ ದಿವ್ಯ ಪ್ರಾಸಾದಗಳನ್ನೂ ನೋಡಿ ಮುಗಿಸುವುದರಲ್ಲಿ ಒಂದು ವಾರ ಕಳೆಯಿತು. ಅಲ್ಲಿಂದ ಸ್ವಾಮಿಗಳು ತಮ್ಮ ದಳದೊಡನೆ ಸೌಂದರ್ಯದೇವಿಯ ಲೀಲಾಭವನವೆಂದು ಲೋಕವಿಖ್ಯಾತವಾಗಿರುವ ನೇಪಲ್ಸ್ ನಗರಕ್ಕೆ ಹೋದರು. 'ನೇಪಲ್ಸ್‌ನ್ನು ನೋಡಿ ಸಾಯಿ!' ಆದ್ದರಿಂದ ಸ್ವಾಮಿಗಳು ಅಲ್ಲಿಯ ಚೆಲ್ವಿನ ನೆಲೆಬೀಡುಗಳನ್ನೆಲ್ಲ ತಿರುತಿರುಗಿ ನೋಡಿದರು! ವೆಸೂವಿಯಸ್ ಅಗ್ನಿಪರ್ವತವನ್ನು ನೋಡುವುದರಲ್ಲಿ ಒಂದು ದಿನವೆ ಕಳೆದು ಹೋಯಿತು. ಪಾಂಪೆಯನ್ನು ನೋಡುತ್ತ ಮತ್ತೊಂದು ದಿನ ಕಳೆಯಿತು. ಕಡೆಗೆ ಅಲ್ಲಿಂದ ಪುಣ್ಯಭೂಮಿಗೆ ಹೊರಡುವ ಶುಭ ಮುಹೂರ್ತವೂ ಬಂದಿತು.

೧೮೯೬ನೆಯ ಡಿಸೆಂಬರ್ ೩೦ನೆಯ ತಾರೀಖಿನ ದಿನ ಜಹಜು ಯುಗಾಚಾರ್ಯನನ್ನು ಹೊತ್ತುಕೊಂಡು ಹೆಮ್ಮೆಯಿಂದ ಪವಿತ್ರ ಭಾರತ ವರ್ಷದ ಕಡೆಗೆ ಸಾಗಿತು. ಕೆಳಗೆ ನೀರಿನ ನೀಲಿ, ಮೇಲೆ ಬಾನಿನ ನೀಲಿ; ಸುತ್ತ ದಿಗಂತದ ಬೇಲಿ; ನಡುವೆ ಬೈತ್ರವು ತೇಲಿ ಸ್ವೈರಿದುದು.

೧೮೯೭ನೆಯ ಜನವರಿ ೧೫ನೆಯ ತಾರೀಖು. ಬಿತ್ತರದ ಪಡುಗಡಲಿನ ನೀರೆದೆಯ ಮೇಲೆ ದಟ್ಟೈಸಿದ ಕಗ್ಗತ್ತಲೆ ಮೆಲ್ಲಮೆಲ್ಲನೆ ಹರಿಯತೊಡಗಿತು. ಬಾಂದಳದಲ್ಲಿ ಗಣನೆಯಿಲ್ಲದೆ ಚುಕ್ಕಿಗಳು ಮಿಣುಮಿಣುಕಿ ಕಳೆಗೆಟ್ಟುವು. ತಣ್ಣನೆ ಕಡಲೆಲರು ತೀಡಿತು. ಮೂಡುದೆಸೆಯ ಹೆಣ್ಣು ನಸುಗಣ್ದೆರೆದಂತೆ ಮುಂಬೆಳಕು ಮೈದೋರಿತು. ಹಡಗು ಲಂಕೆಯ ಕಡಲ ತಡಿಗಾಗಿ ಮುಂಬರಿಯಿತು.

ಸೂರ್ಯೋದಯವಾಯಿತು. ಒಡನೊಡನೆ ಸಿಂಹಳದ್ವೀಪದ ಶ್ಯಾಮಲ ತಟಭೂಮಿ ಸ್ವಾಮಿಗಳ ದೃಷ್ಟಿಗೆ ಗೋಚರಿಸಿತು. ವೇಲಾಭೂಮಿ ಗುಲಾಬಿ ಬಣ್ಣದ ಕಾಂತಿಯಿಂದ ಪೂರ್ಣೋಜ್ವಲವಾಗಿತ್ತು. ಹಳದಿಯ ಮಳಲಿನ ಸಮುದ್ರತೀರವು ಗಾಳಿಗೊಲೆದು ಮುಗಿಲು ಮುಟ್ಟುವ ತೆಂಗಿನ ಮರದ ಸಾಲುಗಳ ಕಡುಹಸರು ಬಣ್ಣದ ಸಂಪದದಿಂದ ಮನೋಹರವಾಗಿ ಕಂಗೊಳಿಸಿತು. ಸ್ವಾಮಿಗಳು ಪುಲಕ ಬಹುಳೋತ್ಥಾನದಿಂದ ಸ್ವಲ್ಪ ಅಧೀರರಾದರು. ಉತ್ಕಂಠತೆಯ ಆವೇಗದಿಂದ ಅವರೆದೆ ತಲ್ಲಣಿಸಿತು. ಜಹಜು ಒಯ್ಯೊಯ್ಯನೆ ತೇಲಿಬಂದು ಕೊಲಂಬೊ ಬಂದರಿನಲ್ಲಿ ಲಂಗರು ಹಾಕಿತು. ತರಂಗಮಾಲೆಗಳ ಪರಸ್ಪರ ಸಂಘಾತಜನಿತವಾದ ಭೈರವ ಕಲ್ಲೋಲ ನಿನಾದದೊಡನೆ ಜಹಜಿನ ಪ್ರಚಂಡ ಗಂಭೀರ ವಂಶಿಧ್ವನಿ ಮಿಳಿತವಾಗಿ ವಿವೇಕಾನಂದರ ಪುಣ್ಯಾಗಮನ ವಾರ್ತೆಯನ್ನು ಘೋಷಿಸಿತು.

* * *

## ೧೪. ಯುಗಪ್ರವರ್ತಕ

ಉರಿವ ಕಡುಬೇಸಗೆಯ ಕಾಳ್ಗಿಚ್ಚಿನಂತೆ, ನಲಿವ ಬಸಂತನ ಮೈಸಿರಿಯಿಂಪಿನಂತೆ, ಪೂಗಳ ಕಂಪಿನಿಂದ ಕುಸಿಕುಸಿದು ತೀಡುವ ಬನದೆಲರಂತೆ, ಪಸರಿಸುವ ಇರುಳ ಬೆಳ್ದಿಂಗಳಂತೆ, ಮೂಡಿಬರುವ ನೇಸರಿನ ಹೊಂಗದಿರಂತೆ ಯುಗಾಚಾರ್ಯ ಯೋಗಿವರ್ಯ ಶ್ರೀ ವಿವೇಕಾನಂದ ಸ್ವಾಮಿಗಳ ಪುಣ್ಯಾಗಮನ ವಾರ್ತೆ ಭಾರತವರ್ಷದಲ್ಲೆಲ್ಲಾ ಹಬ್ಬಿತು. ವಿದೇಶಗಳಲ್ಲಿ ವಿಜಯಿಯಾಗಿ ಹಿಂತಿರುಗಿ ಬರುವ ತನ್ನ ಮುದ್ದು ಮಗನನ್ನು ಎದುರುಗೊಳ್ಳಲು ಭಾರತ ಜನನಿ ಸಡಗರದಿಂದ ಸಿದ್ಧವಾದಳು. ನಗರ ನಗರಗಳಲ್ಲಿಯೂ ಸ್ವಾಗತ ಸಮಿತಿಗಳು ನೇರ್ಪಟ್ಟುವು. ಅಭಿನಂದನ ಪತ್ರಗಳು ರಚಿತವಾದುವು. ಬೀದಿಗಳೂ ಮಂದಿರಗಳೂ ಸಿಂಗಾರದಿಂದ ಮೆರೆದುವು. ಎಲ್ಲೆಲ್ಲಿಯೂ ಆನಂದದ ಕೋಲಾಹಲ ಮೇಲೆದ್ದಿತು.

ಆಚಾರ್ಯದೇವನು ಮೊದಲು ತನ್ನಲ್ಲಿಗೆ ಬರುವನೆಂಬ ಹೆಮ್ಮೆಯಿಂದ ಸಿಂಹಳ ದ್ವೀಪವು ಎದೆಯುಬ್ಬಿ ನಲಿಯಿತು. ಸ್ವಾಮಿಗಳು ಮೊದಲು ಕೊಲಂಬೊ ನಗರದಲ್ಲಿ ಇಳಿಯುವರೆಂಬ ಸುದ್ದಿಯನ್ನು ಕೇಳಿ ಮದರಾಸು ಮೊದಲಾದ ನಗರಗಳಿಂದ ಅನೇಕ ಮಂದಿ ಶಿಷ್ಯರು ಅವರನ್ನು ಎದುರುಗೊಳ್ಳಲು ಸಿಂಹಳಕ್ಕೆ ಬಂದಿದ್ದರು. ಅಲ್ಲದೆ ಇಬ್ಬರು ಸೋದರ ಸಂನ್ಯಾಸಿಗಳೂ ತಮ್ಮ ಗುರುಭ್ರಾತೃವನ್ನು ಎದುರುಗೊಳ್ಳಲು ಕೊಲಂಬೊದಲ್ಲಿ ಸಿದ್ಧವಾಗಿದ್ದರು. ಭರತಖಂಡದ ಬೇರೆ ಬೇರೆ ನೂರಾರು ನಗರಗಳಿಂದ ಸಾವಿರಾರು ಅಭಿನಂದನ ಸೂಚಕವಾದ ತಂತಿಗಳು ಕೊಲಂಬೋ ನಗರದಲ್ಲಿ ಆಚಾರ್ಯ ದೇವನ ಆಗಮನವನ್ನೆ ನಿರೀಕ್ಷಿಸುತ್ತಿದ್ದುವು.

ನಿರೀಕ್ಷಿತ ಶುಭದಿನ ಆವಿರ್ಭವಿಸಿತು. ಜನರು ತಂಡೋಪತಂಡವಾಗಿ ಸಮುದ್ರ ತೀರದಲ್ಲಿ ನೆರೆದು ಪಶ್ಚಿಮ ದಿಗಂತವನ್ನೆ ನೋಡುತ್ತಾ ನಿಂತರು. ಸಹಸ್ರ ಸಹಸ್ರ ಜನರ ದೃಷ್ಟಿ ತನ್ನ ಮೇಲೆ ಬಿದ್ದುದನ್ನು ಕಂಡು ಪಶ್ಚಿಮ ದಿಗ್ವನಿತೆ ನಸುನಾಚಿ

ವಿಸ್ಮಿತಳಾದಳು. ಅದೋ ಅಲ್ಲಿ! ದೂರದ ಸಲಿಲಮಯ ದಿಗಂತದಲ್ಲಿ! ಜನರು ಕಣ್ಣರಳಿ ಕತ್ತೆತ್ತಿ ಎದೆಯುಬ್ಬಿ ನಿಮಿರಿ ನಿಂತು ನೋಡಿದರು! ಜಹಜು ಕಣ್ಣಿಗೆ ಬಿತ್ತು! ಜನರು ಉತ್ಸಾಹದಿಂದ ತುಳುಕಾಡತೊಡಗಿದರು. ಸಮುದ್ರ ತರಂಗಗಳೂ ಅವರೊಡನೆ ಸ್ಪರ್ಧೆ ಹೂಡಿದುವು. ಜಹಜು ನಿಮಿಷನಿಮಿಷಕ್ಕೂ ಹಿರಿದಾಗುತ್ತಾ ಬಂದು ಬಳಿಸಾರಿತು. ಶ್ರೀಸ್ವಾಮಿಗಳ ಗೈರಿಕೋಷ್ಣೀಷಮಂಡಿತ ಶಿರವು ಕಣ್ಣಿಗೆ ಬಿದ್ದ ಕೂಡಲೆ ಸಮುದ್ರತೀರದಲ್ಲಿ ನೆರೆದಿದ್ದ ವಿಪುಲ ಜನಸಂಗಮವು ಹರ್ಷೋಜ್ವಲ ಕಂಠದಿಂದ ಜಯಧ್ವನಿಗೈಯಲಾರಂಭಿಸಿತು. ಉದಯಸೂರ್ಯನ ಪೀತಾಭಲೋಹಿತ ರಶ್ಮಿಮಾಲಾಸ್ನಾತ ಸಂನ್ಯಾಸಿ ವಿಸ್ಮಯ ವಿಮೂಢನಂತೆ ನಾವೆಯ ವೇದಿಕೆಯ ಮೇಲೆ ನಿಂತು ನೋಡಿದನು!

ಜಹಜು ಗಂತವ್ಯ ಸ್ಥಾನಸ್ಥವಾದ ತರುವಾಯ ಕೊಲಂಬೋ ನಗರದ ಹಿಂದೂ ಸಮಾಜದ ಮುಖಪಾತ್ರ ಸ್ವರೂಪರಾದ ಮಾನನೀಯ ಕುಮಾರಸ್ವಾಮಿಗಳು, ಸ್ವಾಮಿ ಶಿವಾನಂದ ನಿರಂಜನಾನಂದರೊಡನೆ ವಿವೇಕಾನಂದರನ್ನು ಎದುರುಗೊಂಡು ಅವರ ಕೊರಳಿಗೆ ಭಾರತಾಂಬೆಯ ಕೋಮಲ ಹಸ್ತಸದೃಶವಾದ ಮಲ್ಲಿಗೆ ಹೂಮಾಲೆಯೊಂದನ್ನು ಹಾಕಿದರು. ಆಮೇಲೆ ಸ್ವಾಮಿಜಿ ಯುಗಳಾಶ್ವಯೋಜಿತ ಹೇಮರೌಪ್ಯ ಮಣಿಖಚಿತ ದಿವ್ಯಶಕಟಾರೋಹಣ ಮಾಡಿ ನಗರ ಮಧ್ಯೆ ಪ್ರವೇಶ ಮಾಡಿದರು. ಬೀದಿಬೀದಿಗಳಲ್ಲಿ ಪತ್ರಪುಷ್ಪಪಲ್ಲವ ರಚಿತ ತೋರಣಗಳು ಮೆರೆದುವು. ಬಾವುಟಗಳು ಗಾಳಿಯಲ್ಲಿ ನಲಿದಾಡಿದುವು. ಮನೆ ಮನೆಗಳಲ್ಲಿ ಸಂಭ್ರಮ ಸೂಚಕ ದೃಶ್ಯಗಳು ಸಮನೋಹರವಾದುವು. ಶುಭಸೂಚಕ ಕೋಲಾಹಲವು ನಗರ ನಿವಾಸಿಗಳ ಆನಂದಕ್ಕೆ ಸಾಕ್ಷಿಯಾಯಿತು. ಕಟ್ಟಕಡೆಗೆ ಕುದುರೆಯ ಸಾರೋಟು "ದಾಲಚಿನ್ನಿ ತೋಟ"ದಲ್ಲಿ ಸ್ವಾಮಿಗಳ ಸ್ವಾಗತಕ್ಕಾಗಿ ನೇರ್ಪಟ್ಟ ಮಹಾಮಂಟಪದೆಡೆಗೆ ಹೋಗಿ ಮುಟ್ಟಿತು. ಸ್ವಾಮಿಗಳು ಕೆಳಗಿಳಿದರೊ ಇಲ್ಲವೊ ನೂರಾರು ಜನರು ಅವರ ಪದಧೂಳಿ ಗ್ರಹಣ ಮಾಡಲು ಮುಂದೆ ನುಗ್ಗಿದರು. ವಿವೇಕಾನಂದರು ಮಂಟಪವನ್ನು ಪ್ರವೇಶಿಸಿ ವೇದಿಕೆಯನ್ನೇರಿ ಹೂವಿನ ಸುರಿಮಳೆ ಸರಿಯ ನಡುವೆ ಕುಳಿತರು. ಜಯಘೋಷದಿಂದ ದೆಸೆಗಳು ಬಿರಿದುವು.

ಮಂಟಪವು ತೆಂಗಿನಗರಿಗಳಿಂದಲೂ ಕೆಂದಾವರೆ ಬೆಳ್ದಾವರೆಗಳಿಂದಲೂ ಹೂ ಮಾಲೆಗಳಿಂದಲೂ ಚೆಂದಳಿರ ಜೊಂಪೆಗಳಿಂದಲೂ ವಿವಿಧ ಲತಾವಿನ್ಯಾಸಗಳಿಂದಲೂ ಶೋಭಿತವಾಗಿ ವನದೇವಿಯ ಲೀಲಾಮಂದಿರದಂತೆ ರಮಣೀಯವಾಗಿತ್ತು. ಮಾನನೀಯ ಕುಮಾರಸ್ವಾಮಿಗಳು ಪ್ರಾಚ್ಯಪದ್ಧತಿಯಂತೆ ಸ್ವಾಮಿಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಅಭಿನಂದನ ಪತ್ರವನ್ನು ಓದಿದರು. ತರುವಾಯ ಸ್ವಾಮಿಗಳು ಕಿವುಡುಗೈವ ಕೋಲಾಹಲದ ಮಧ್ಯೆ ಎದ್ದುನಿಂತು ತಮ್ಮ ಅನನು ಕರಣೀಯ ಶಕ್ತಿಪೂರ್ಣ ಮನೋಹರಶೈಲಿಯಲ್ಲಿ ಒಂದು ಸಣ್ಣ ಭಾಷಣ ಮಾಡಿದರು. ಆ ಭಾಷಣದಲ್ಲಿ ನಡುವೆ ಪ್ರಾಸಂಗಿಕವಾಗಿ ಹೀಗೆಂದರು :

"ನಾನು ಮಹಾರಾಜನಲ್ಲ, ಧನ ಕುಬೇರನಲ್ಲ; ಅಥವಾ ಪ್ರಸಿದ್ಧ ರಾಜನೀತಿಜ್ಞನೂ ಅಲ್ಲ. ಕಪರ್ದಕಹೀನ ಭಿಕ್ಷುಕ ಸಂನ್ಯಾಸಿ ಮಾತ್ರ. ನೀವು ನನ್ನಂಥವನಿಗೆ ಈ ಪರಿ ಸ್ವಾಗತವಿತ್ತುದನ್ನು ನೋಡಿದರೆ ಭಾರತವರ್ಷದಲ್ಲಿ ಈಗಲೂ ಕೂಡ ಆಧ್ಯಾತ್ಮಿಕ ಸಂಪತ್ತಿಗೆ ಅಭಾವವಿಲ್ಲವೆಂದು ನನಗೆ ತೋರುತ್ತದೆ. ಯಃಕಶ್ಚಿತ್ ಸಂನ್ಯಾಸಿಯೊಬ್ಬನಿಗಾಗಿ ಇಷ್ಟೊಂದು ಪ್ರೀತಿಪೂರ್ವಕವಾದ ಭಕ್ತಿ ಶ್ರದ್ಧೆಗಳೇಕೆ? ಆದ್ದರಿಂದ, ಓ ಭಾರತಮಾತೆಯ ಪುತ್ರರಿರಾ, ನಿಮ್ಮ ಜನಾಂಗ ಜೀವನದ

ವಿಶೇಷ ಗುಣ ಇನ್ನೂ ನಶಿಸಿಲ್ಲ. ನಾನಾ ಪ್ರಕಾರದ ಪ್ರತಿಕೂಲಗಳ ತುಮುಲದ ಮಧ್ಯೆ ನಿಮ್ಮ ಧರ್ಮಜೀವನ ಇನ್ನೂ ದೃಢವಾಗಿ ನಿಂತಿದೆ."

ಸಂಭ್ರಮೋತ್ಸವ ಮುಗಿದ ಮೇಲೆ ಸ್ವಾಗತ ಸಮಿತಿಯವರು ಸ್ವಾಮಿಗಳನ್ನು ವಿಶ್ರಾಮ ಮಂದಿರಕ್ಕೆ ಕರೆದುಕೊಂಡು ಹೋದರು. ಮಂಟಪದಲ್ಲಿ ಅವರನ್ನು ನೋಡಲಾರದ ಜನರು ಅವರಿಳಿದಿದ್ದ ಬಂಗಲೆಯ ಸುತ್ತಲೂ ಬಂದು ಕವಿದರು. ಅದನ್ನು ತಿಳಿದು ಸ್ವಾಮಿಗಳು ಹೊರಗೆ ಬಂದು ನಿಂತು ಮೃದುಹಾಸರಂಜಿತ ವದನರಾಗಿ ನೆರೆದ ಮಂದಿಗಳನ್ನು ನೋಡಿ ಕೈಮುಗಿದರು. ಒಬ್ಬರ ಮೇಲೊಬ್ಬರು ನುಗ್ಗಿ ನೆರೆದವರೆಲ್ಲರೂ ಅವರ ಕಾಲುಗಳನ್ನು ಮುಟ್ಟಿ ನಮಸ್ಕಾರ ಮಾಡಿದರು. ಸ್ವಾಮಿಗಳು "ನಾರಾಯಣ! ನಾರಾಯಣ!" ಎಂದು ಹೇಳುತ್ತಾ ಪ್ರತಿಯೊಬ್ಬರನ್ನೂ ಆಶೀರ್ವದಿಸಿದರು.

ಜನವರಿ ೧೬ನೆಯ ತಾರೀಖಿನ ದಿನ ಅಪರಾಹ್ನದಲ್ಲಿ "ಫ್ಲೋರಲ್ ಹಾಲ್" ಎಂಬ ಮಂದಿರದಲ್ಲಿ ಸ್ವಾಮಿಗಳು "ಪುಣ್ಯಭೂಮಿ ಭಾರತವರ್ಷ" ಎಂಬ ಹೆಸರಿನ ದೀರ್ಘೋತ್ತೇಜಕ ಭಾಷಣ ಮಾಡಿದರು.

ಮಾರನೆಯ ದಿನ ಅವರು ತಮ್ಮನ್ನು ನೋಡಲು ಬಂದ ದರ್ಶಕ ವೃಂದದೊಡನೆ ಬಹಳ ಕಾಲ ಧರ್ಮಾಲೋಚನೆ ಮಾಡಿದರು. ಅಪರಾಹ್ನದಲ್ಲಿ ಊರಿನ ಶಿವಮಂದಿರ ಸಂದರ್ಶನಕ್ಕಾಗಿ ಹೋದರು. ದಾರಿಯಲ್ಲಿ ಜನರ ಗುಂಪು ಗುಂಪಾಗಿ ಕಲೆತು ಗುರುವರ್ಯರಿಗೆ ಪುಷ್ಪ ಫಲ ಮಾಲ್ಯ ಇತ್ಯಾದಿ ಕಾಣಿಕೆಗಳನ್ನು ಅರ್ಪಿಸಲಾರಂಭಿಸಿದರು. ಮನೆಮನೆಗಳಲ್ಲಿಯೂ ಮಂಗಳಾರತಿಗಳಾದುವು, ಹೂಮಳೆ ಸುರಿಯಿತು. ಸ್ವಾಮಿಗಳು ಶಿವಮಂದಿರದ ಬಳಿಗೆ ಬರಲು ನೆರೆದ ಜನರು "ಜಯ ಮಹಾದೇವಾ!" ಎಂಬ ಜಯಘೋಷವನ್ನು ಮಾಡಿ ಅವರಿಗೆ ಸ್ವಾಗತ ವಿತ್ತರು. ಶಿವಮಂದಿರವನ್ನು ನೋಡಿ ಪ್ರದಕ್ಷಿಣೆ ಮಾಡಿ, ಪುರೋಹಿತ ಜನರೊಡನೆ ಕೆಲವು ಮಾತುಗಳನ್ನು ಆಡಿ ಸ್ವಾಮಿಗಳು ಬಂಗಲೆಗೆ ಹಿಂತಿರುಗಿದರು. ಅಲ್ಲಿ ಅವರೆಡೆಗೆ ಬಂದ ಕೆಲವು ಜನ ಶಾಸ್ತ್ರಜ್ಞ ಬ್ರಾಹ್ಮಣ ಪಂಡಿತರೊಡನೆ ರಾತ್ರಿ ಬಹಳ ಹೊತ್ತಾಗುವವರೆಗೂ ಸ್ವಾಮಿಗಳು ಶಾಸ್ತ್ರ ಚರ್ಚೆ ಮಾಡಿದರು. ಮರುದಿನ ಕೊಲಂಬೊ ನಗರದ "ಪಬ್ಲಿಕ್ ಹಾಲ್"ನಲ್ಲಿ "ವೇದಾಂತ ದರ್ಶನ"ದ ಸಂಬಂಧವಾಗಿ ಒಂದು ಅಮೋಘವಾದ ಉಪನ್ಯಾಸ ಮಾಡಿದರು. ಮಧ್ಯೆ ಸ್ವಾಮಿಗಳ ಕಣ್ಣು ಪಾಶ್ಚಾತ್ಯರಂತೆ ಉಡುಗೆತೊಡಿಗೆಗಳನ್ನು ಧರಿಸಿದ್ದ ಕೆಲವು ಸದಸ್ಯರ ಮೇಲೆ ಬಿತ್ತು. ದುಃಖಿತ ಭಾವದಿಂದ ಅವರು ಜನರನ್ನು ಕುರಿತು ಮೂಢರಂತೆ ಪರಾನುಕರಣಪ್ರವೃತ್ತರಾಗುವುದು ಸರಿಯಲ್ಲವೆಂದು ಒತ್ತಿ ಹೇಳಿದರು.

ಜನವರಿ ೧೯ನೆಯ ತಾರೀಖಿನ ದಿನ ಸ್ವಾಮಿಗಳು ಸ್ಪೆಷಲ್ ರೈಲು ಹತ್ತಿ ಕ್ಯಾಂಡಿಗೆ ಹೊರಟರು. ಕ್ಯಾಂಡಿಯಲ್ಲಿ ಜನರು ತಮಗರ್ಪಿಸಿದ ಅಭಿನಂದನ ಪತ್ರಕ್ಕೆ ಸಂಕ್ಷಿಪ್ತ ಪ್ರತ್ಯುತ್ತರವನ್ನು ಕೊಟ್ಟು ಅಲ್ಲಿಂದ ಜಾಫ್ನಾಭಿಮುಖವಾಗಿ ಮುಂದುವರಿದರು. ಅಲ್ಲಿ ಪೆಂಪಿನ ಮೆರವಣಿಗೆ ಮುಗಿದ ನಂತರ ಜಾಫ್ನಾ ಕಾಲೇಜಿನ ಪ್ರಾಂಗಣದಲ್ಲಿ ಸಿದ್ಧವಾಗಿದ್ದ ಮನೋಹರವಾದ ಮಂಟಪದಲ್ಲಿ ಸ್ವಾಮಿಗಳು ನಗರದ ಅಭಿನಂದನ ಪತ್ರಕ್ಕೆ ಸಂಕ್ಷೇಪವಾಗಿ ಉತ್ತರ ಕೊಟ್ಟು ತರುವಾಯ ವೇದಾಂತ ವಿಚಾರವಾಗಿ ಒಂದು ಹೃದಯಗ್ರಾಹಿಯಾದ ಭಾಷಣ ಮಾಡಿದರು. ಇಲ್ಲಿಗೆ ಸ್ವಾಮಿಗಳ ಸಿಂಹಳ ಯಾತ್ರೆ ಪರಿಸಮಾಪ್ತಿ ಹೊಂದಿತು.

ಜಾಫ್ನಾದಿಂದ ಸ್ವಾಮಿಗಳು ತಮ್ಮ ಪಾಶ್ಚಾತ್ಯ ಶಿಷ್ಯವರ್ಗದೊಡನೆಯೂ ಗುರುಭ್ರಾತೃ ಸ್ವಾಮಿ ನಿರಂಜನಾನಂದರೊಡನೆಯೂ ಕೂಡಿ ಭಾರತವರ್ಷಾಭಿಮುಖವಾಗಿ ಯಾತ್ರೆ ಮಾಡಿದರು. ಸುದ್ದಿಯನ್ನು ಮೊದಲೆ ತಿಳಿದಿದ್ದ ರಾಮ ನಾಡಾಧಿಪ ರಾಜಾ ಭಾಸ್ಕರವರ್ಮ ಸೇತುಪತಿಗಳು ಸದಳಬಲರಾಗಿ ಗುರುಗಳನ್ನು ಎದುರುಗೊಳ್ಳಲು ಪಾಂಬಾನು ತೀರ ಪಟ್ಟಣಕ್ಕೆ ಬಂದರು. ವಿಪುಲ ಜನಸಂಘವು ಸಮುದ್ರತೀರದಲ್ಲಿ ಉದ್ಗ್ರೀವವಾಗಿ ಸ್ವಾಮಿಗಳನ್ನು ಪ್ರತೀಕ್ಷಿಸತೊಡಗಿತು. ಸ್ವಾಮಿಗಳು ಜಹಜಿನಿಂದ ಇಳಿದ ಕೂಡಲೆ ರಾಜಯೋಗ್ಯವಾದ ಸುಸಜ್ಜಿತವಾದ ತೇರೊಂದನ್ನು ಅಡರಿದರು. ಪ್ರಚಾರಶೀಲ ಹಿಂದೂ ಧರ್ಮದ ಪ್ರಥಮತಮ ಪ್ರತಿನಿಧಿ ಸ್ವಾಮಿ ವಿವೇಕಾನಂದರು ಭಾರತಭೂಮಿಯ ಮಣ್ಣನ್ನು ಮೆಟ್ಟಿದೊಡನೆಯೆ ನೆರದ ಜನರು ಜಯಧ್ವನಿ ಮಾಡಿದರು. ರಾಮನಾಡಿನ ದೊರೆಗಳು ಗುರುವರ್ಯರ ಚರಣಗಳಲ್ಲಿ ಬಿದ್ದು ನಮಿಸಿದರು. ಒಡನೊಡನೆಯೆ ಸಹಸ್ರ ಸಹಸ್ರ ಶಿರಗಳು ಭೂಮಿಸ್ಪರ್ಶ ಮಾಡಿದುವು. ಸಂಧ್ಯೆಯ ರಕ್ತಾಕ್ತಧೂಸರ ಗಗನ ತಳದ ಹಿನ್ನೆಲೆಯಲ್ಲಿ ಸಹಸ್ರ ಸಹಸ್ರ ಹೃದಯಗಳ ಸ್ವತಃಸ್ಫೂರ್ತ ಭಕ್ತಿವಿಗಳಿತವಾಗಿದ್ದ ಆ ಮಹಿಮಾಮಯ ದೃಶ್ಯವು ಭರತಖಂಡದ ಇತಿಹಾಸದಲ್ಲಿ ಒಂದು ಅಪೂರ್ವ ಘಟನೆ. ಸ್ವಾಮಿಗಳು ಮಹಾರಾಜರನ್ನು ಮತ್ತು ಪಕ್ಕದಲ್ಲಿದ್ದ ಇತರರನ್ನೂ ಮಣಿದೆತ್ತಿ ಆಶೀರ್ವಾದ ಮಾಡಿದರು. ತರುವಾಯ ಚಂದ್ರಾತಪಶೋಭಿತ ಸಮುದ್ರ ತೀರದಲ್ಲಿ ದೊರೆಗಳೂ ಜನಗಳೂ ಸೇರಿ ಅಭಿನಂದನ ಪತ್ರವನ್ನು ಅರ್ಪಿಸಿದರು. ಸ್ವಾಮಿಗಳು ಉತ್ತರಾನಂತರ ವಿಶ್ರಾಂತಿನಿಲಯಕ್ಕೆ ಕರೆದೊಯ್ಯಲ್ಪಟ್ಟರು. ಆಗ ದೊರೆಗಳ ಅಪ್ಪಣೆಯಂತೆ ತೇರಿನ ನೊಗದಿಂದ ಕುದುರೆಗಳನ್ನು ಬಿಚ್ಚಿದರು. ಆಮೇಲೆ ಸ್ವಯಂ ಮಹಾರಾಜರೂ ನೆರೆದ ಜನಗಳೂ ಸೇರಿ ತೇರನ್ನು ಎಳೆದರು. ಮರುದಿವಸ ಸ್ವಾಮಿಗಳು ಸುಪ್ರಸಿದ್ಧ ಶ್ರೀರಾಮೇಶ್ವರ ದೇವಮಂದಿರವನ್ನು ಹೋಗಿ ನೋಡಿದರು. ಅಲ್ಲಿಂದ ರಾಮನಾಡಿಗೆ ತೆರಳಿದರು. ಅಲ್ಲಿ ರಾಜರು ಬಹು ವಿಜೃಂಭಣೆಯಿಂದ ಸ್ವಾಗತವಿತ್ತರು. ಬಡಬಗ್ಗರಿಗೆ ಅನ್ನದಾನ ವಸ್ತ್ರದಾನಗಳನ್ನು ಮಾಡಿದರು. ಅಲ್ಲದೆ ಸ್ವಾಮಿಗಳು ಪಶ್ಚಿಮ ದೇಶಗಳಿಂದ ಭಾರತವರ್ಷಕ್ಕೆ ವಿಜಯಿಯಾಗಿ ಬಂದಾಗ ಯಾವ ಸ್ಥಳದಲ್ಲಿ ಮೊತ್ತಮೊದಲು ಕಾಲಿಟ್ಟರೋ ಅಲ್ಲಿ ಒಂದು ಸ್ಮೃತಿಸ್ತಂಭವನ್ನೂ ನೆಟ್ಟರು. ಅಲ್ಲಿಯ ಶಾಸನ ಹೀಗೆಂದಿದೆ:

"ಸತ್ಯಮೇವ ಜಯತೇ - ಈ ಸ್ಥಳದಲ್ಲಿ ಮಹಾತ್ಮಾ ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ಜಗತ್ತಿನಲ್ಲಿ ವೇದಾಂತ ಧರ್ಮದ ವಿಜಯ ವೈಜಯಂತಿಯನ್ನು ಸ್ಥಾಪಿಸಿ, ಅದ್ವಿತೀಯ ದಿಗ್ವಿಜಯಾನಂತರ ತಮ್ಮ ಆಂಗ್ಲೇಯ ಶಿಷ್ಯಗಣದೊಂದಿಗೆ ಬಂದು ಭರತಖಂಡದ ಮೃತ್ತಿಕೆಯಲ್ಲಿ ಮೊತ್ತಮೊದಲು ಪದಪಂಕಜ ಸ್ಥಾಪನೆ ಮಾಡಿದ ಪುಣ್ಯಸ್ಥಾನವನ್ನು ಚಿರಸ್ಮರಣೀಯವನ್ನಾಗಿ ಮಾಡುವ ಉದ್ದೇಶದಿಂದ ಈ ಸ್ಮೃತಿಸ್ತಂಭವನ್ನು ರಾಮನಾಡಾಧಿಪ ರಾಜಾ ಭಾಸ್ಕರವರ್ಮ ಸೇತುಪತಿಗಳು ಕ್ರಿ. ಶ. ೧೮೯೭ನೆಯ ವರ್ಷದ ಜನವರಿ ೨೬ನೆಯ ದಿನ ನಿರ್ಮಾಣ ಮಾಡಿಸಿದರು."

ರಾಮನಾಡಿನಿಂದ ಹೊರಟ ಸ್ವಾಮಿಗಳು ಪರಮಕುಡಿ, ಮನಮಧುರೆ, ಮಧುರೆ, ತಿರುಚನಾಪಲ್ಲಿ ಮೊದಲಾದ ಊರುಗಳಲ್ಲಿ ಅಭಿನಂದಿತರಾಗಿ ಕುಂಭಕೋಣಕ್ಕೆ ಬಂದರು. ಊರಿನ ಜನಗಳು ಆನಂದಸಾಗರದಲ್ಲಿ ಮುಳುಗಿ ತೇಲುತ್ತಾ ಯುಗಾಚಾರ್ಯರಿಗೆ ಅಭಿನಂದನ ಪತ್ರವನ್ನು ಅರ್ಪಿಸಿದರು. ಮುಂದೆ ಮದರಾಸಿನಲ್ಲಿ ವಿರಾಮ ದೊರಕುವುದು ದುರ್ಲಭವೆಂದು ತಿಳಿದು ಸ್ವಾಮಿಗಳು ಕುಂಭಕೋಣದಲ್ಲಿ ಮೂರು ದಿನಗಳಿದ್ದು ಬಳಲಿಕೆಯನ್ನು ಪರಿಹರಿಸಿಕೊಂಡು ತರುವಾಯ ಮದರಾಸಾಭಿಮುಖವಾಗಿ ಸಾಗಿದರು.

ದಾರಿಯಲ್ಲಿ ರೈಲು ನಿಲ್ದಾಣಗಳಲ್ಲಿ ಜನರು ತಂಡೋಪತಂಡವಾಗಿ ನೆರೆದು ಸ್ವಾಮಿಗಳ ದರ್ಶನ ಮಾಡಿ "ಸ್ವಾಮಿ ವಿವೇಕಾನಂದ ಮಹಾರಾಜರಿಗೆ ಜೈ!" ಎಂದು ಘೋಷಿಸಿದರು. ಹಾದಿಯಲ್ಲಿ ಇನ್ನೊಂದು ಸಂಗತಿ ನಡೆಯಿತು. ಒಂದು ಸ್ಟೇಷನ್ನಿನಲ್ಲಿ ಜನರು ಕಿಕ್ಕಿರಿದು ಸ್ಟೇಷನ್ ಮಾಸ್ಟರಿಗೆ ರೈಲನ್ನು ಒಂದು ನಿಮಿಷದ ಮಟ್ಟಿಗಾಗಿ ನಿಲ್ಲಿಸಲು ಹೇಳಿದರು. ಆದರೆ ಅವರು ಸಮ್ಮತಿಸಲಿಲ್ಲ. ಕಡೆಗೆ ಹತಾಶರಾದ ಜನರು ರೈಲು ಕಂಬಿಗಳ ಮೇಲೆ ಮಲಗಿದರು. ರೈಲು ದೂರದಲ್ಲಿ ಬಂತು. ಸ್ಟೇಷನ್‌ಮಾಸ್ಟರು ದಿಗಿಲುಬಿದ್ದರು. ಹುಚ್ಚರಂತೆ ಹಿಂದೆ ಮುಂದೆ ಹರಿದಾಡಿದರು. ಗಾರ್ಡ್ ಇದನ್ನೆಲ್ಲಾ ದೂರದಿಂದಲೆ ನೋಡಿ, ಸಂಗತಿಯನ್ನು ತಿಳಿದುಕೊಂಡು, ರೈಲನ್ನು ನಿಲ್ಲಿಸಿದರು. ಆಗ ಸ್ವಾಮಿಗಳು ಹೊರಗೆ ಬಂದು ಜನರಿಗೆ ಸಂದರ್ಶನ ಕೊಟ್ಟು ಆಶೀರ್ವದಿಸಿದರು. ತರುವಾಯ ರೈಲು ಮದರಾಸಿಗೆ ಹೊರಟಿತು.

ಸ್ವಾಮಿಗಳು ಮದರಾಸಿಗೆ ಬರುವುದಕ್ಕೆ ಕೆಲವು ದಿನಗಳ ಹಿಂದೆಯೆ ಆ ನಗರದಲ್ಲಿ ಕೋಲಾಹಲ ಪ್ರಾರಂಭವಾಗಿತ್ತು. ಜನರೆಲ್ಲರೂ ಜಗದ್ವಿಖ್ಯಾತ ಸ್ವಾಮಿ ವಿವೇಕಾನಂದರ ಪುಣ್ಯಾಗಮನವನ್ನು ಕಾತರತೆಯಿಂದ ನಿರೀಕ್ಷಿಸುತ್ತಿದ್ದರು. ಯಾರ ಬಾಯಲ್ಲಿ ಕೇಳಿದರೂ ಅವರ ಹೆಸರೇ! ಎಲ್ಲೆಲ್ಲಿಯೂ ಅವರ ವಿಚಾರವೇ! ಶಾಲೆಗಳಲ್ಲಿ, ಕಾಲೇಜುಗಳಲ್ಲಿ, ಕೋರ್ಟುಗಳಲ್ಲಿ, ಬೀದಿಗಳಲ್ಲಿ, ಸಮುದ್ರತೀರದಲ್ಲಿ, ಎಲ್ಲಿ ಯಾರನ್ನು ಯಾರು ಸಂಧಿಸಿದರೂ ಮೊದಲು "ಸ್ವಾಮಿ ವಿವೇಕಾನಂದರು ಬರುವುದೆಂದು?" ಎಂದು ಕೇಳುತ್ತಿದ್ದರು. ಪ್ರೌಢಪರೀಕ್ಷೆಗಳಿಗಾಗಿ ದೂರದೇಶದಿಂದ ಮದರಾಸಿಗೆ ಬಂದ ವಿದ್ಯಾರ್ಥಿಗಳು ಪರೀಕ್ಷೆ ಮುಗಿದು ಬಹಳ ದಿನಗಳಾದರೂ ಸ್ವಾಮಿಗಳ ಆಗಮನವನ್ನು ಪ್ರತೀಕ್ಷಿಸುತ್ತ ಅಲ್ಲಿಯೆ ಇದ್ದರು. ಎಲ್ಲಿ ನೋಡಿದರೂ ತೋರಣಗಳು, ಬಾವುಟಗಳು, ಮಂಟಪಗಳು! ಎತ್ತ ತಿರುಗಿದರೂ "Long Live the Venerable Vivekananda!", "Hail Servant of God", "Hail Servant of the Great Sages of the Past", "The Awakened India's Hearty Greetings to the Swami Vivekananda", "Hail, Harbinger of Peace", "Hail, Sree Ramakrishna's Worthy Son!" "Welcome, Prince of Man", "ಏಕಂ ಸತ್ ವಿಪ್ರಾ ಬಹುಧಾ ವದಂತಿ". "ಉತ್ತಿಷ್ಠತ ಜಾಗ್ರತ ಪ್ರಾಪ್ಯ ವರಾನ್ನಿಬೋಧತ" ಮೊದಲಾದ ಲಿಖಿತಗಳು ಕಣ್ಣಿಗೆ ಮೆರೆಯುತ್ತಿದ್ದುವು. ಸಮಸ್ತ ಮದರಾಸು ನಗರವೂ ಒಂದು ನೂತನ ಶೋಭೆಯಿಂದ ಬೆಳಗುತ್ತಿದ್ದಿತು.

ಫೆಬ್ರವರಿ ೬ನೆಯ ತಾರೀಖಿನ ದಿನ ಪ್ರಭಾತಕಾಲವಾಗುತ್ತಿರಲು ಜನರು ಗುಂಪು ಗುಂಪಾಗಿ ರೈಲ್ವೆ ಸ್ಟೇಷನ್ನಿನ ಕಡೆಗೆ ಹೊರಟರು. ರೈಲುಬಂಡಿ ಪ್ಲಾಟ್‌ಫಾರಂನಲ್ಲಿ ನಿಂತೊಡನೆಯೆ ಸಹಸ್ರ ಸಹಸ್ರ ಕಂಠೋತ್ಥಿತ ಜಯಧ್ವನಿ ಗಗನಮಂಡಲವನಂಡಲೆಯಿತು. ನಯನಾಭಿರಾಮ ಶ್ರೀ ವಿವೇಕಾನಂದರು ಗಾಡಿಯಿಂದ ಕೆಳಗಿಳಿದ ಕೂಡಲೆ ಸ್ವಾಗತ ಸಮಿತಿಯ ಸದಸ್ಯರು ಮುಂದೆ ಹೋಗಿ ಅವರ ಕೊರಳಿಗೆ ಹೂಮಾಲೆ ಹಾಕಿದರು. ಸ್ವಾಮಿಗಳು ಬಳಿಯಿದ್ದವರೊಡನೆ ಒಂದೆರಡು ನಿಮಿಷಗಳವರೆಗೆ ಮಾತಾಡಿ ತರುವಾಯ ಅಣಿಯಾಗಿದ್ದ ಕುದುರೆಗಾಡಿಯನ್ನು ಹತ್ತಿದರು. ನ್ಯಾಯಾಧೀಶ ಸುಬ್ರಹ್ಮಣ್ಯ ಅಯ್ಯರ್, ಸ್ವಾಮಿ ನಿರಂಜನಾನಂದ, ಸ್ವಾಮಿ ಶಿವಾನಂದ ಈ ಮೂವರೂ ಸ್ವಾಮಿಗಳ ಪಾರ್ಶ್ವದಲ್ಲಿ ಕುಳಿತಮೇಲೆ ಗಾಡಿ ಮೆಲ್ಲ ಮೆಲ್ಲನೆ ಹೊರಟಿತು. ತುಸುದೂರ ಹೋಗುವುದರಲ್ಲಿಯೆ ಯುವಕ ನಾಗರಿಕರು ಕುದುರೆಗಳನ್ನು ನೊಗಗಳಚಿ ತಾವೇ ಗಾಡಿಯನ್ನು ಎಳೆದರು. ಪಥಮಧ್ಯೆ ಮನೆಮನೆಗಳಲ್ಲಿಯೂ ಜನರು ನಿಂತು ಯುಗಾಚಾರ್ಯನ ತಲೆಯ ಮೇಲೆ ಹೂಮಳೆಗರೆದರು. ಅಲ್ಲಲ್ಲಿ ಕೆಲವು ಜನ ಪುರನಾರಿಯರು ಆರತಿ ಬೆಳಗಿದರು; ಕೆಲವು ಪೂಜಿಸಿದರು; ಕೆಲವರು ದರ್ಶನ ಮಾತ್ರದಿಂದ ಪುನೀತರಾಗಿ ಆನಂದಾಶ್ರುಗಳನ್ನು ಕರೆದರು. ಮಕ್ಕಳು,

ತರುಣರು, ಯುವಕರು, ಮುದುಕರು, ಹೆಂಗಸರು, ಗಂಡಸರು ಮೊದಲಾಗಿ ನೂರಾರು ಸಾವಿರ ಜನ ಬೀದಿಬೀದಿಗಳಲ್ಲಿಯೂ ತಿರುಗಿದರು. ಕಿವುಡುಗೈವ ಗೆಲುವಿನುಲಿ ಮನೆಮನೆಗಳಿಂದ ಮರುದನಿಯಾಗಿ ಗಾಳಿಯಲ್ಲಿ ಹಬ್ಬಿ ಬಾನಿಗೇರಿತು. ಅಂತೂ ಕಟ್ಟಕಡೆಗೆ ಯುವಕರಿಂದ ಎಳೆಯಲ್ಪಟ್ಟ ಗಾಡಿ ಮೆಲ್ಲಮೆಲ್ಲಗೆ, ಬಹು ಮೆಲ್ಲಗೆ ವಿರಾಮಮಂದಿರಕ್ಕೆ ಹೋಯಿತು. ಮದರಾಸಿನಲ್ಲಿ ಹಿಂದೆಂದೂ ಮತ್ತಾರಿಗೂ ಅಂತಹ ಮೆರವಣಿಗೆ ನಡೆದಿರಲಿಲ್ಲ.

ಮರುದಿನ ಭಾನುವಾರ ಸ್ವಾಮಿಗಳ ಮೇಲೆ ಅಭಿನಂದನ ಪತ್ರಗಳ ಮಳೆಗರೆಯಿತು. ವೈದಿಕ ಸಭೆಯ ಪರವಾಗಿ, ಸಮಾಜ ಸಂಸ್ಕಾರ ಸಭೆಯ ಪರವಾಗಿ, ಮದರಾಸು ನಗರ ಸಭೆಯ ಪರವಾಗಿ, ಖೇತ್ರಿ ಮಹಾರಾಜರ ಪರವಾಗಿ, ಇನ್ನೂ ಮೊದಲಾದ ಸಂಘ ಸಮುದಾಯಗಳ ಪರವಾಗಿ ಸಂಸ್ಕೃತ ಇಂಗ್ಲೀಷ್ ಕನ್ನಡ ತಮಿಳು ತೆಲುಗು ಭಾಷೆಗಳಲ್ಲಿ ಇಪ್ಪತ್ತು ಅಭಿನಂದನ ಪತ್ರಗಳು ಅರ್ಪಿತವಾದುವು. ಸಭಾಸ್ಥಳದಲ್ಲಿ ದಶ ಸಹಸ್ರಾಧಿಕ ಜನರು ಕಲೆತಿದ್ದರು. ಅವರೆಲ್ಲರಿಗೂ ಮಂದಿರದಲ್ಲಿ ಸ್ಥಳವಿರಲಿಲ್ಲ. ಗುಲ್ಲುಹೆಚ್ಚಿತು. ಸ್ವಾಮಿಗಳು ಮಂದಿರದಿಂದ ಹೊರಬಿದ್ದು, ಒಂದು ಕುದುರೆ ಗಾಡಿಯನ್ನು ಹತ್ತಿ ಅದರ ಸಾರಥಿ ಸ್ಥಾನದಲ್ಲಿ ನಿಂತು ಕೃಷ್ಣಪರಮಾತ್ಮನು ಗೀತೆಯನ್ನು ರಣಮಧ್ಯೆ ಅರ್ಜುನನ ಸಾರಥಿಯಾಗಿ ಬೋಧಿಸಿದಂತೆ ಭಾಷಣ ಮಾಡತೊಡಗಿದರು. ಆದರೆ ಜನರ ಉತ್ಸಾಹ ಹೆಚ್ಚಿ ಕೋಟ್ಯನುಕೋಟಿ ಮಾನವ ಶಿರಗಳು ನಿಲ್ಲಲು ಜಾಗವಿಲ್ಲದೆ ಕುಣಿದಾಡತೊಡಗಿದುವು. ಆದ್ದರಿಂದ ಸ್ವಾಮಿಗಳು ಆ ದಿನ ಉತ್ತರ ಸ್ವರೂಪವಾದ ಒಂದು ಸಣ್ಣ ಭಾಷಣ ಮಾಡಿ ಬೇಗನೆ ಮುಗಿಸಿಬಿಟ್ಟರು.

ಮರುದಿನ "ವಿಕ್ಟೋರಿಯಾ ಹಾಲ್"ನಲ್ಲಿ ವೀರಾವೇಶದಿಂದ ಮಾಡಿದ "ನನ್ನ ಸಮರ ನೀತಿ" ಎಂಬ ಉಪನ್ಯಾಸದಲ್ಲಿ ಅವರು ತಮ್ಮ ಹೃದಯದ ಮುತ್ತಿನ ಚಿಪ್ಪನ್ನು ಜನರ ಮುಂದೆ ಒಡೆದು ಚೆಲ್ಲಿದ್ದಾರೆ. ಆ ಬಿಸಿಬಿಸಿಯಾಗಿದ್ದ ಭಾಷಣದಲ್ಲಿ ಗರ್ವಧ್ವನಿ ಸ್ವಲ್ಪಮಟ್ಟಿಗೆ ತೋರಿ ಬರಬಹುದು. ಆದರೆ ಅದು ಪಾಶ್ಚಾತ್ಯ ಪ್ರಪಂಚದಲ್ಲಿ ತಿರುಗಿ, ಅಧಿಕಾರಿಯಾಗಿ ಬಂದಿದ್ದ ಅವರ ಆತ್ಮಶ್ರದ್ಧೆ ಎಷ್ಟರ ಮಟ್ಟಿಗಿತ್ತು ಎಂಬುದನ್ನು ಸೂಚಿಸುತ್ತದೆ.

ಐದು ಸಾವಿರ ಜನರು ನೆರೆದು ಆ ಪಾಂಚಜನ್ಯವನ್ನು ಕಿವಿಗೊಟ್ಟು ಕೇಳಿದರಂತೆ.

"... ಪೂಜ್ಯತೆ ಗೌರವ ವಿಶ್ವಾಸಗಳ ವಿಚಾರ ಬೇರೆ; ಹೇಳಿದ್ದನ್ನೆಲ್ಲ ವಿಚಾರವಿಲ್ಲದೆ ವಿಮರ್ಶೆಯಿಲ್ಲದೆ ಕೇಳಿದೊಡನೆ ನುಂಗಿಬಿಡುವುದು ಬೇರೆ... ಸುಧಾರಕರು ತಿಳಿಯಲಿ, ನಾನು ಅವರಿಗಿಂತಲೂ ಒಂದು ಕೈ ಮಿಗಿಲಾದ ಸುಧಾರಕನೆಂದು. ಅವರು ಕೊಂಬೆಯ ತುದಿಗಳನ್ನು ಮಾತ್ರ ಕಸಿಮಾಡಲು ಯತ್ನಿಸುತ್ತಿದ್ದಾರೆ. ನಾನು ಬೇರನ್ನು ಸಹ ಕಸಿಮಾಡಲು ಹವಣಿಸುತ್ತಿದ್ದೇನೆ. ನಮ್ಮಿಬ್ಬರಿಗೆ ತಾರತಮ್ಯವಿರುವುದು ಸುಧಾರಣೆಯ ವಿಧಾನದಲ್ಲಿ. ಅವರದು ವಿನಾಶಮಾರ್ಗ, ನನ್ನದು ವಿರಚನಾ ಮಾರ್ಗ... ಅಶಿವ ಎಲ್ಲೆಲ್ಲಿಯೂ ಇರುತ್ತದೆ. ಅದು ವಾತರೋಗದಂತೆ ಒಂದು ಕಡೆಯಿಂದ ಓಡಿಸಿದರೆ ಮತ್ತೊಂದು ಕಡೆಗೆ ಹೋಗುತ್ತದೆ. ಕಾಲಿನಿಂದ ತಲೆಗೆ, ತಲೆಯಿಂದ ಕಾಲಿಗೆ... ಯಾರೋ ಒಬ್ಬಿಬ್ಬರು ಯಾವುದನ್ನೋ ಕೆಟ್ಟದ್ದು ಎಂದು ಭಾವಿಸಿದ ಮಾತ್ರಕ್ಕೆ ಜನಾಂಗವೆಲ್ಲವೂ ಅವರ ಹಿಂದೆ ಚಲಿಸಲೊಪ್ಪುವುದಿಲ್ಲ. ಆದ್ದರಿಂದ ಜನಾಂಗದ ಮನಸ್ಸನ್ನು ವಿದ್ಯಾಭ್ಯಾಸದಿಂದ ತಿದ್ದಬೇಕು...

“ಹಾಗಾದರೆ ನನ್ನ ಸಮರನೀತಿಯೇನು? ನಮ್ಮ ಪೂರ್ವದ ಮಹರ್ಷಿಗಳ ದಾರಿಯಲ್ಲಿ ನಡೆಯುವುದೆ ನನ್ನ ನೀತಿ… ಅವರು ಸಮಾಜಸೃಷ್ಟಿಕರ್ತರಾಗಿದ್ದರು; ಸರ್ವರಿಗೂ ಶಕ್ತಿ ಮತ್ತು ಶುದ್ಧ ಜೀವನಗಳನ್ನು ದಯಪಾಲಿಸುವವರಾಗಿದ್ದರು. ಅವರು ಅದ್ಭುತಕಾರ್ಯಗಳನ್ನು ಮಾಡಿದ್ದಾರೆ. ನಾವೂ ಮಾಡಬೇಕು. ಇಂದಿನ ಸನ್ನಿವೇಶ ಸ್ವಲ್ಪ ಬದಲಾಯಿಸಿದೆ. ಆದ್ದರಿಂದ ನಮ್ಮ ಕಾರ್ಯವಿಧಾನವನ್ನೂ ಸ್ವಲ್ಪ ಬದಲಾಯಿಸಿಕೊಂಡರಾಯಿತು. ಅಷ್ಟೇ ಹೊರತು ಬೇರೆಯಿಲ್ಲ. ಪ್ರತಿಯೊಂದು ಜನಾಂಗಕ್ಕೂ ಪ್ರತಿಯೊಬ್ಬ ವ್ಯಕ್ತಿಗಿರುವಂತೆ ಒಂದೊಂದು ಜೀವ ಗುಣವಿರುತ್ತದೆ. ಆ ಕೇಂದ್ರ ಜೀವಗುಣದ ಆಧಾರದ ಮೇಲೆ ಇತರ ಗುಣಗಳನ್ನು ಕಟ್ಟಬೇಕು… ಭರತಖಂಡದ ಜೀವಗುಣವೆಂದರೆ ಧರ್ಮ… ಜೀವಗುಣಗಳನ್ನು ಬಿಟ್ಟು ವರ್ತಿಸಲು ತೊಡಗಿದರೆ ಜನಾಂಗ ಸಾಯಬೇಕಾಗುತ್ತದೆ…

“ಆದ್ದರಿಂದ ಭರತಖಂಡದ ಬಾಳಿನಲ್ಲಿ ಧರ್ಮಕ್ರಾಂತಿಯಾಗದೆ ಉಳಿದ ಸುಧಾರಣೆಗಳಾಗುವುದಿಲ್ಲ. ಇಂಡಿಯಾದೇಶದಲ್ಲಿ ರಾಜಕೀಯ ಸಮತೆಯ ಅಥವಾ ಸಾಮ್ಯವಾದದ ಬೀಜಗಳನ್ನು ಬಿತ್ತಬೇಕಾದರೆ ಮೊದಲು ಧರ್ಮನದಿಯ ನೀರನ್ನು ಅದರ ಮೇಲೆ ಹೊನಲಾಗಿ ಹಾಯಿಸಬೇಕು. ಆದ್ದರಿಂದ ಉಪನಿಷತ್ತಾದಿಗಳಲ್ಲಿರುವ ಮಹಾದ್ಭುತ ಸತ್ಯಗಳನ್ನು ಗ್ರಂಥಗಳಿಂದಲೂ ಮಠಗಳಿಂದಲೂ ವನಕುಟೀರಗಳಿಂದಲೂ ಪಂಗಡಗಳಿಂದಲೂ ಹಿಸುಗಿ ಹಿಂಡಿ ಹೊರಗೆಳೆದು, ಎಲ್ಲೆಲ್ಲಿಯೂ ಬಿತ್ತಿ, ದೇಶದ ಮೇಲೆ ಬೆಂಕಿಯ ಹೊಳೆ ಹರಿಯುವಂತೆ ಮಾಡಬೇಕು…

“ರಾಜಕೀಯ ವಿದ್ಯೆಯನ್ನು ತುತೂರಿಯೂದಿ ಸಾರಬಹುದು. ಆರ್ಥಿಕ ಮತ್ತು ಸಾಮಾಜಿಕ ವಿಷಯಗಳನ್ನು ಕತ್ತಿಹಿಡಿದು ಬೆಂಕಿ ಹಚ್ಚಿ ಬೋಧಿಸಬಹುದು. ಆದರೆ ಧರ್ಮಬೋಧೆ ನೀರವವಾಗಿ ನಡೆಯಬೇಕು, ಹೊತ್ತಾರೆ ಮಲರುವ ಗುಲಾಬಿ ಮೊಗ್ಗುಗಳ ಮೇಲೆ ಬೀಳುವ ಇಬ್ಬನಿಯಂತೆ ಧರ್ಮವೇ ಜಗತ್ತಿಗೆ ಭರತಖಂಡವು ನೀಡುವ ಕಾಣಿಕೆ…

“ಆದ್ದರಿಂದ, ಮಿತ್ರರಿರಾ, ಭಾರತೀಯ ತರುಣರನ್ನು, ಧರ್ಮ ಪ್ರಚಾರಕ್ಕೆ ತಯಾರುಮಾಡುವ ಸಂಸ್ಥೆಗಳನ್ನು ಸ್ಥಾಪಿಸಿ, ತರಬಿಯತ್ತು ಮಾಡಿ, ದೇಶ ವಿದೇಶಗಳಿಗೆ ಕಳುಹಿಸಬೇಕೆಂಬುದೇ ನನ್ನ ಮಹೋದ್ದೇಶಗಳಲ್ಲಿ ಒಂದಾಗಿದೆ. ನನಗೀಗ ಪುರುಷವೀರರು ಬೇಕು; ಉಳಿದುದೆಲ್ಲ ತಾನಾಗಿಯೆ ಸಿದ್ಧವಾಗುತ್ತದೆ. ಅಂದರೆ ಬಲಿಷ್ಠ, ದೃಢಿಷ್ಠ, ಆಶಿಷ್ಠ, ಮೇಧಾವಿಗಳಾದ ತರುಣಸಿಂಹರು ಬೇಕು. ಅಂತಹರು ಒಂದು ನೂರು ಜನರು ಮುಂದೆ ಬಂದರೆ ಅವರಿಂದ ಪ್ರಪಂಚವನ್ನೇ ಬದಲಾಯಿಸಬಹುದು…. ಶಕ್ತಿದಾಯಕವಾದ ನಿಮ್ಮ ಧರ್ಮದ ಪ್ರಚಂಡ ಸತ್ಯಗಳನ್ನು ಸರ್ವರಿಗೂ ಬೋಧಿಸಿ. ಆ ಅಮೃತಪಾನಕ್ಕಾಗಿ ಜಗತ್ತು ಗಂಟಲೊಣಗಿ ಕಾಯುತ್ತಿದೆ. ಜನರಿಗೆ ಶತಮಾನಗಳಿಂದಲೂ ನೈಚ್ಯ ಭಾವಗಳನ್ನು ಬೋಧಿಸಿದ್ದಾರೆ. ಅವರು ಕೈಲಾಗದ ಕ್ರಿಮಿಗಳೆಂದು ತಿಳಿಸಿದ್ದಾರೆ. ಸಾಮಾನ್ಯ ಜನರಿಗೆ ಅವರು ಮಾನವರೇ ಅಲ್ಲವೆಂದೂ ಉಪದೇಶಿಸಿದ್ದಾರೆ. ಅಂತಹ ಬೋಧನೆಯನ್ನು ಕೇಳಿ ಕೇಳಿ ಅವರೂ ಹೀನ ಮೃಗಗಳಾಗಿದ್ದಾರೆ. ಇದುವರೆಗೂ ಅವರ ಕಿವಿಗೆ ಅವರಾತ್ಮದ ಮಹಾ ಮಹಿಮೆಯ ಗಾನ ಕೇಳಿಸಿಯೇ ಇಲ್ಲ. ಅವರಿಗೂ ಕೊಂಚ ಗೊತ್ತಾಗಲಿ, ತಾವೂ ನಿತ್ಯ ಶುದ್ಧ ಬುದ್ಧ ಮುಕ್ತಾತ್ಮರೆಂದು… ನಮ್ಮ ನರಗಳಿಗೆ ವಜ್ರಸಾಣೆಯಾಗಲಿ. ನಮಗೀಗ ಬೇಕಾದುದು ಕಬ್ಬಿಣದ ಖಂಡಗಳು, ಉಕ್ಕಿನ ನರಗಳು. ಬಹುಕಾಲದಿಂದಲೂ ನಾವು ಕಣ್ಣೀರು ಕರೆದಿದ್ದೇವೆ. ಇನ್ನು ಸಾಕು, ಅಳು ಬೇಡ. ಮೇಲೆದ್ದು ನಿಂತು ಗಂಡಸರಾಗಿ. ನಮಗೆ ಬೇಕು ವೀರ ಧರ್ಮ; ವೀರ ನಿರ್ಮಾಣಕ ಧರ್ಮ. ಸತ್ಯಕ್ಕೆ ಅದೇ ಒರೆಗಲ್ಲು - ದೇಹವನ್ನಾಗಲಿ ಮನಸ್ಸನ್ನಾಗಲಿ ಆತ್ಮವನ್ನಾಗಲಿ ದುರ್ಬಲಗೊಳಿಸುವ ಪ್ರತಿಯೊಂದನ್ನೂ

ವಿಷವೆಂದು ತಿಳಿದು ತಿರಸ್ಕರಿಸಿ. ಸತ್ಯವು ಬಲಕಾರಿ... ಉಪನಿಷತ್ತಿನ ಸತ್ಯಗಳು ನಿಮ್ಮ ಮುಂದಿವೆ. ಅವುಗಳನ್ನು ಅನುಷ್ಠಾನ ಮಾಡಿ. ಭರತಖಂಡದ ವಿಮೋಚನೆ ಸಮೀಪವಾಗುತ್ತದೆ...

"...ಮಹತ್ಕಾರ್ಯ ಮಾಡುವುದಕ್ಕೆ ಮೂರು ಗುಣಗಳು ಅತ್ಯಂತಾವಶ್ಯಕ. ಮೊದಲನೆಯದು ಹೃದಯವೇಧೆ, ಎಂದರೆ ಎದೆಮರುಕ... ಮೃಗಗಳಂತೆ ಬಾಳುತ್ತಿರುವ ಕೋಟ್ಯಂತರ ಸೋದರರಿಗಾಗಿ ನಿಮ್ಮೆದೆ ಮರುಗುತ್ತಿದೆಯೇ? ನಿಮಗೆ ಊಟ ಬೇಡವಾಗಿದೆಯೇ? ನಿದ್ದೆ ಬರುವುದಿಲ್ಲವೇ? ಅದಕ್ಕಾಗಿ ಹಗಲಿರುಳೂ ನೋಯುತ್ತಿದ್ದೀರಾ?... ಹಾಗಿದ್ದರೆ ನೀವು ಸುಧಾರಕ ಪಟ್ಟಕ್ಕೆ ಅರ್ಹರಾಗುವ ಮೊದಲನೆಯ ಮೆಟ್ಟಿಲನ್ನು ಹತ್ತಿದ್ದೀರಿ... ಎರಡನೆಯದಾಗಿ, ಬರಿದೆ ಮರುಗಿದರೆ ಸಾಲದು. ಮರುಕ ಕಾರ್ಯಕಾರಿಯಾಗಬೇಕು... ಮೂರನೆಯದು ಎಡರುಗಳನ್ನು ಜಯಿಸಿ ಮುಂಬರಿವ ಇಚ್ಛಾಶಕ್ತಿಯಿರಬೇಕು. ಜಗತ್ತೆಲ್ಲವೂ ನಿಮ್ಮ ಮೇಲೆ ಕತ್ತಿ ಕಟ್ಟಿದರೂ ಹೆದರದೆ ಸತ್ಯಕ್ಕಾಗಿ ಹೋರಾಡುತ್ತೀರಾ? ಹೆಂಡಿರು ಮಕ್ಕಳೇ ನಿಮಗೆ ಎದುರು ಬಿದ್ದರೆ? ನಿಮ್ಮ ಹಣವೆಲ್ಲ ಕೈಬಿಟ್ಟುಹೋಗಿ ಭಿಕಾರಿಗಳಾದರೆ? ಅಪಕೀರ್ತಿ ಬಂದರೆ? ಆಗಲೂ ಬಿಡದೆ ಮುಂಬರಿಯುತ್ತೀರೇನು?... ಹಾಗಿದ್ದರ ನೀವು ಸುಧಾರಕರಾಗಲು ಸರ್ವೋತ್ಕೃಷ್ಟರಾದ ಅಧಿಕಾರಿಗಳಾಗುತ್ತೀರಿ..."

ತರುವಾಯವೂ ಕ್ರಮವಾಗಿ 'ಭಾರತೀಯ ಜೀವನದಲ್ಲಿ ವೇದಾಂತ ಪ್ರಯೋಗ', 'ಭರತಖಂಡದ ಮಹಾಪುರುಷರು', 'ನಮ್ಮ ಕಣ್ಣೆದುರಿನ ಕರ್ತವ್ಯ' 'ಭಾರತ ವರ್ಷದ ಮುಂದಿನ ಗತಿ' ಮೊದಲಾದ ಉಪನ್ಯಾಸಗಳನ್ನು ಮಾಡಿ ಮದರಾಸಿನ ಜನಗಳ ಎದೆಯಲ್ಲಿ ಬೆಂಕಿಯನ್ನು ಚಿಮುಕಿಸಿದರು.

ಅನೇಕ ಜನರು ಅವರ ಬಳಿಗೆ ಬಂದು, ನಾನಾ ಪ್ರಶ್ನೆಗಳನ್ನು ಕೇಳತೊಡಗಿದರು. ಒಂದು ದಿನ ಒಬ್ಬರು "ಸ್ವಾಮೀಜಿ, ದ್ವೈತವಾದ, ವಿಶಿಷ್ಟಾದ್ವೈತವಾದ, ಅದ್ವೈತವಾದ ಈ ಮೂರೂ ಸತ್ಯ ಮತ್ತು ಒಂದು ಚರಮೋಪಲಬ್ಧಿಗೆ ನಮ್ಮನ್ನು ಕೊಂಡೊಯ್ಯುವ ಮಾರ್ಗದ ಸೋಪಾನಮಾತ್ರಗಳೆಂದು ಪೂರ್ವಾಚಾರ್ಯರು ಏಕೆ ಬೋಧಿಸಲಲ್ಲ?" ಎಂದು ಕೇಳಿದರು.

ಅದಕ್ಕೆ ಸ್ವಾಮಿಗಳು "ನಮಗೋಸ್ಕರವೆ ಅವರು ಹೇಳದೆ ಬಿಟ್ಟುದು; ಅದಕ್ಕಾಗಿಯೆ ನಾವು ಜನ್ಮವೆತ್ತಿದೆವು!" ಎಂದರು.

ಇಂತು ಯುಗಮಹರ್ಷಿ ಮದರಾಸಿನಲ್ಲಿ ಇರುತ್ತಿರಲಾಗಿ ಅತ್ತ ಜನ್ಮದಾತೆಯಾದ ವಂಗಮಾತೆ ಪುತ್ರನ ವಿರಹವನ್ನು ಸಹಿಸಲಾರದೆ ಆಮಂತ್ರಣ ಪತ್ರಗಳ ಮೇಲೆ ಆಮಂತ್ರಣ ಪತ್ರಗಳನ್ನು ಬರೆಯತೊಡಗಿದಳು. ಆಕೆಯ ಎದೆ ಹೆಮ್ಮೆಯಿಂದ ಸಿಡಿಯುವಂತಿತ್ತು. ಅಲ್ಲದೆ ಭಗವಾನ್ ಶ್ರೀರಾಮಕೃಷ್ಣರ ಜನ್ಮೋತ್ಸವವು ಬಳಿ ಸಾರಿ ಬಂದುದರಿಂದ ಸ್ವಾಮಿಗಳು ಮದರಾಸಿನಿಂದ ಹೊರಡಲುದ್ಯುಕ್ತರಾದರು. ರೈಲುಮಾರ್ಗವಾಗಿ ಹೊರಟರೆ ಹಾದಿಯಲ್ಲಿರುವ ಊರುಗಳಲ್ಲಿ ಸ್ವಾಮಿಗಳು ನಿಲ್ಲಬೇಕಾಗುವುದೆಂದೂ ಆಗಲೆ ಬಳಲಿದ್ದ ಅವರಿಗೆ ಬಳಲಿಕೆ ಇನ್ನೂ ಅತಿಯಾಗುವುದೆಂದೂ ತಿಳಿದ ಶಿಷ್ಯರೂ ಗುರುಗಳನ್ನು ಸಮುದ್ರ ಮಾರ್ಗವಾಗಿ ಕಲ್ಕತ್ತಾ ನಗರಕ್ಕೆ ಕರೆದೊಯ್ಯುವಂತೆ ನಿರ್ಣಯಿಸಿದರು. ಅದರಂತೆಯೆ ಜಹಜು ಹತ್ತಿ ಮದರಾಸನ್ನು ಬೀಳ್ಕೊಂಡರು.

ಹಡಗು ಕಿದಿರಪುರದ ರೇವಿನಲ್ಲಿ ನಿಂತಿತು. ಕಲ್ಕತ್ತಾ ನಗರ ಸ್ವಾಗತ ಸಮಿತಿಯಿಂದ ಕಳುಹಿಸಲ್ಪಟ್ಟ ಇಬ್ಬರು ಪ್ರತಿನಿಧಿಗಳು ಆಗಲೆ ಅಲ್ಲಿಗೆ ಬಂದಿದ್ದರು. ಅವರು ಸ್ವಾಮಿಗಳಿಗಾಗಿ ಒಂದು ಸ್ಪೆಷಲ್ ರೈಲು ಹೊರಡುವುದಾಗಿ ತಿಳಿಸಿದರು.

ಅಂದು ಸ್ಟೇಶನ್ನಿನಲ್ಲಿ ಕಲ್ಕತ್ತಾ ನಗರವೆ ಮೇಳಯಿಸಿತ್ತು. ರೈಲಿನ ವಂಶಿ ಧ್ವನಿ ಕೇಳಬಂದೊಡನೆಯೆ ಸಹಸ್ರ ಜನರು ಮಿಳಿತಕಂಠರಾಗಿ "ಜೈ ರಾಮಕೃಷ್ಣ ದೇವ ಕೀ ಜೈ! ಜೈ ವಿವೇಕಾನಂದ ಸ್ವಾಮಿಜಿ ಕೀ ಜೈ" ಎಂದು ಜಯಘೋಷ ಮಾಡಿದರು. ಈ ಶಬ್ದಾಘಾತದಿಂದ ನಿಲ್ದಾಣವೂ ಕಂಪಿಸಿತು. ಸ್ವಾಮಿಗಳು ರೈಲಿನಿಂದ ಕೆಳಗಿಳಿದು ನೆರೆದ ಮಹಾಜನ ವೃಂದಕ್ಕೆ ಕೈಮುಗಿದರು. ತರುವಾಯ ಬಾಬು ನರೇಂದ್ರನಾಥ ಸೇನರನ್ನು ಮುಂದಿಟ್ಟುಕೊಂಡು ಸ್ವಾಗತ ಸಮಿತಿಯ ಮುಖ್ಯಸ್ಥರು ಮುಂದೆ ಸಾಗಿ ಆಚಾರ್ಯವರ್ಯನನ್ನು ಎದುರುಗೊಂಡು ಆತನ ಕೊರಳಿಗೆ ವಿವಿಧ ಪುಷ್ಪಮಾಲಿಕೆಗಳನ್ನು ಹಾಕಿದರು. ತರುವಾಯ ಸ್ವಾಮಿಗಳು ಚಪಲ ಚಟುಲ ಚತುರಾಶ್ವಯೋಜಿತ ಶಕಟವನ್ನೇರಿ ಸೇವಿಯರ್ ದಂಪತಿಗಳನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಹೊರಟರು. ಆದರೆ ವಂಗ ಯುವಕರು ಗಾಡಿಯನ್ನು ಮುಂಬರಿಯಬಿಡಲಿಲ್ಲ. ಕುದುರೆಗಳನ್ನು ನೊಗಗಳಚಿ ತಾವೆ ಎಳೆದರು. ಮಧುರ ವಾದ್ಯಘೋಷ ಸಮೇತವಾಗಿ ಮೆರವಣಿಗೆ ರಿಪ್ಪನ್ ಕಾಲೇಜಿಗೆ ಹೊರಟಿತು. ದಾರಿಯುದ್ದಕ್ಕೂ ಧ್ವಜ ಪತಾಕೆಗಳೂ ಪುಷ್ಪಪರ್ಣಭೂಷಿತ ತೋರಣಗಳೂ ರಂಜಿಸಿದ್ದುವು.

ರಿಪ್ಪನ್ ಕಾಲೇಜಿನಲ್ಲಿ ಸ್ವಾಗತ ಸಮಿತಿಯವರು ಅಭಿನಂದನ ಪತ್ರವನ್ನು ವಿಜೃಂಭಣೆಯಿಂದ ಅರ್ಪಿಸಿದ ತರುವಾಯ ಸ್ವಾಮೀಜಿ ಒಂದು ಸಣ್ಣ ಭಾಷಣ ಮಾಡಿದರು. ತರುವಾಯ ಅವರೂ ಅವರ ಶಿಷ್ಯರೂ ಕಾಶಿಪುರದಲ್ಲಿದ್ದ ಗೋಪಾಲ ಲಾಲ ಶೀಲರ ತೋಟದಮನೆಗೆ ವಿಶ್ರಾಂತಿಗಾಗಿ ಹೋದರು. ಒಂದು ವಾರದವರೆಗೆ ಅವರು ಯಾವ ಉಪನ್ಯಾಸದ ಗೋಜಿಗೂ ಹೋಗದೆ ವಿರಾಮ ತೆಗೆದುಕೊಂಡರು. ಆದರೂ ಅವರಿಗೆ ವಿರಾಮವೆಲ್ಲಿ? ಜನರು ಮಂದೆ ಮಂದೆಯಾಗಿ ಅವರೆಡೆಗೆ ಬರತೊಡಗಿದರು. ನಿತ್ಯವೂ ನಾನಾ ವಿಷಯಕವಾದ ಧರ್ಮಚರ್ಚೆಗಳು ನಡೆಯುತ್ತಿದ್ದುವು.

೧೮೯೭ನೆಯ ವರ್ಷದ ಫೆಬ್ರವರಿ ೨೮ನೆಯ ತಾರೀಖಿನ ದಿನ ಸಾರ್ವಜನಿಕ ಸ್ವಾಗತೋತ್ಸವ ದಿನವಾಗಿ ಗೊತ್ತುಮಾಡಲ್ಪಟ್ಟಿತು. ಆ ದಿನ ನಗರ ಮಂದಿರದಲ್ಲಿ ಜನರು ತುಂಬಿದ್ದರು. ರಾಜರು, ಮಹಾರಾಜರು, ಸಂನ್ಯಾಸಿಗಳು, ಆಂಗ್ಲೇಯರು, ಪಂಡಿತರು, ಪುರಜನರು ಮೊದಲಾದ ಎಲ್ಲಾ ತರಗತಿಯ ಜನರೂ ಅಲ್ಲಿ ನೆರೆದಿದ್ದರು. ಅಭಿನಂದನಪತ್ರ ಪಠನ ಮುಗಿದ ನಂತರ ಮಾನವ ಮಿತ್ರ ಯುಗಾಚಾರ್ಯ ಯೋಗಿವರ್ಯನು ಕತ್ತಲನ್ನು ಓಡಿಸುತ್ತ ಮೂಡುವ ನೇಸರಿನಂತೆ ಮೇಲೆದ್ದು ನಿಂತನು. ನೆರೆದವರೆಲ್ಲರ ಎದೆದಾವರೆಗಳು ಮುದದಿಂದ ಅರಳಿದುವು. ಆ ದಿನದ ಅವರ ಉಪನ್ಯಾಸವು ಅನನ್ಯ ಸಾಧಾರಣವಾಗಿತ್ತು. ಶಕ್ತಿಪೂರ್ಣವಾಗಿತ್ತು. ಮಿಂಚು ಸಿಡಿಲುಗಳನ್ನು ಪುಡಿಮಾಡಿ ಸಿಡಿಮದ್ದಿನ ಮೇಲೆ ಎರಚಿದಂತಿತ್ತು. ಅವರಲ್ಲಿ ವೀರಾವೇಶಪೂರ್ಣವಾದ ದೇಶಭಕ್ತಿ ತುಂಬಿ ತುಳುಕುತ್ತಿತ್ತು. ಶ್ರೀರಾಮಕೃಷ್ಣರನ್ನು ಯುಗಾವತಾರರೆಂದು ಮೊತ್ತಮೊದಲು ಅವರು ಬಹಿರಂಗವಾಗಿ ಸಾರಿದುದು ಆ ಉಪನ್ಯಾಸದಲ್ಲಿಯೆ. ಭಾರತೀಯ ಜನಾಂಗವನ್ನೂ, ಧರ್ಮವನ್ನೂ ಉದ್ಧಾರ ಮಾಡಲು ಜನ್ಮವೆತ್ತಿದ ಆ ಮಹಾಪುರುಷರೇ ನಮ್ಮ ದೇಶದ ಚರಮಲಕ್ಷ್ಯವೆಂದು ಉದ್ಘೋಷಿಸಿದುದೂ ಆ ಭಾಷಣದಲ್ಲಿಯೇ. ಆ ಬೆಂಕಿಯುಗುಳುವ ಸಿಡಿಲೆರಚುವ ಮಾತುಗಳನ್ನು

ಕೇಳಿದವರ ಎದೆಯಲ್ಲಿ ಮಲಗಿದ್ದ ಆತ್ಮಶಕ್ತಿ ಗೌರವಗಳು ಎಚ್ಚತ್ತುವು. ಆ ಸಿಡಿಲಾಳನ್ನು ನೋಡಿದವರ ಚೇತನದಲ್ಲಿ ಕೆಮ್ಮಿಂಚಿನ ಸಂಚಾರವಾಯಿತು.

"ಮಾನವನು ತನ್ನ ಮುಕ್ತಿಯ ಸಲುವಾಗಿ ಈ ಪ್ರಪಂಚದ ಬಂಧನ ಸಂಬಂಧಗಳೆಲ್ಲವನ್ನೂ ಒಂದೇ ಪೆಟ್ಟಿಗೆ ಕತ್ತರಿಸಿ ಬಿಡಬೇಕೆಂದು ಪ್ರಯತ್ನಿಸುತ್ತಾನೆ. ಹೆಂಡಿರು, ಮಕ್ಕಳು, ನೆಂಟರಿಷ್ಟರು, ಬಂಧುಮಿತ್ರರು ಮೊದಲಾದ ಮಾಯೆಗಳನ್ನು ಖಂಡಿಸಿ ಸಂಸಾರದಿಂದ ದೂರ, ಬಹುದೂರ, ಪಲಾಯನ ಮಾಡಬೇಕೆಂದು ಹವಣಿಸುತ್ತಾನೆ. ಆ ಪ್ರಯತ್ನದಲ್ಲಿ ದೇಹಗತ ಸಕಲ ಸಂಬಂಧಗಳನ್ನೂ, ಪುರಾತನ ಸಕಲ ಸಂಸ್ಕಾರಗಳನ್ನೂ, ಅಷ್ಟೇ ಏಕೆ ಮಾನವ ಸಹಜಲಕ್ಷಣಗಳನ್ನೂ ಕೂಡ ಬಿಟ್ಟು ಬಿಡಲು ಜೀವ ಬಿಟ್ಟು ಹೆಣಗುತ್ತಾನೆ. ಆದರೂ ಆತನ ಹೃದಯದ ಅಂತರಾಳದಲ್ಲಿ ಸದಾಸರ್ವದಾ ಮೃದುವಾದ ಅಸ್ಫುಟವಾದ ಧ್ವನಿಯೊಂದು ಮೊರೆಯುತ್ತಲೆ ಇರುತ್ತದೆ. ಆತನ ಕಿವಿಗಳಿಗೆ ಸದಾ ಸರ್ವದಾ ಯಾವುದೊ ಸ್ವರವು ಕೇಳಿಸುತ್ತಲೆ ಇರುತ್ತದೆ. ಎಲ್ಲೆಲ್ಲಿಯೂ ಯಾವಾಗಲೂ ಹಗಲಿರುಳೂ ಕೇಳಿಬರುವ ಆ ಮೆಲ್ಲುಲಿ ಇಂತು ನುಡಿಯುತ್ತದೆ: 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ!'"

ಮಾನವಮಿತ್ರ ವಿವೇಕಾನಂದರೂ ಒಂದಾನೊಂದು ಕಾಲದಲ್ಲಿ ಆತ್ಮ ಮುಕ್ತಿಯ ಸಲುವಾಗಿ ಪ್ರಯತ್ನಪಡುತ್ತಿದ್ದರು. ಸಮಾಧಿಕಾಮಿಯಾದ ಸಾಧಕನು ಕನ್ಯಾಕುಮಾರಿಯ ಕಡಲ ನಡುಬಂಡೆಯ ಮೇಲೆ ಯೋಗಾರೂಢನಾಗಿ ಕುಳಿತಿದ್ದನು. ವರ್ತಮಾನ ಯುಗದ ವಿಶ್ವಾಮಿತ್ರನ ಧ್ಯಾನಭಂಗದ ಸಲುವಾಗಿ ಯೋಗ ಮಾಯೆ ಅಪ್ಸರಸ್ತ್ರೀಯರನ್ನು ಅಟ್ಟಲಿಲ್ಲ! ಆದರೆ ಮಾತೃಸ್ವರೂಪಳಾದ ನಿಖಿಲ ಭಾರತವರ್ಷವು ಆತನ ಯೋಗದೃಷ್ಟಿಗೆ ಗೋಚರಿಸಿದಳು. ಜನನಿ ಸಜಲನಯನೆಯಾಗಿದ್ದಾಳೆ. ಮಾತಿಲ್ಲ. ಮೈಯಲ್ಲಿ ಪರಕೀಯರ ಪದಾಘಾತದ ಚಿಹ್ನೆಗಳು! ಕೂಳಿಲ್ಲ, ಹರಿದ ಚಿಂದಿಯುಟ್ಟಿದ್ದಾಳೆ! ರೋಗ, ಶೋಕ, ದುಃಖ, ದೈನ್ಯ, ಅಜ್ಞಾನಗಳಿಂದ ಪ್ರಬಲ ಪೀಡಿತಳಾಗಿ ಜನನಿ ಪುತ್ರನನ್ನು ಸಹಾಯಕ್ಕೆ ಕರೆಯುತ್ತಿದ್ದಾಳೆ! ವಿವೇಕಾನಂದರಿಗೆ ನಿಜವಾಗಿಯೂ ಧ್ಯಾನಭಂಗವಾಯಿತು. ಗಳದಶ್ರುಲೋಚನರಾಗಿ ಮೇಲೆದ್ದು ನಿಂತು ತಾಯಿಯನ್ನು ಸಂಬೋಧಿಸಿ ನುಡಿದರು ಇಂತೆಂದು: "ಜನನೀ, ನನಗೆ ಮುಕ್ತಿ ಬೇಡ! ತಾಯೇ, ನಿನ್ನ ಸೇವೆಯೊಂದೆ ನನ್ನ ಜೀವನದ ಏಕಮಾತ್ರ ಅವಶಿಷ್ಟ ಕರ್ಮ!"

ಸ್ವಾಮಿಗಳು ಕಲ್ಕತ್ತಾಕ್ಕೆ ಬಂದ ಕೆಲವು ದಿನಗಳಲ್ಲಿಯೆ ಶ್ರೀರಾಮಕೃಷ್ಣ ಪರಮಹಂಸರ ಜನ್ಮತಿಥಿ ಬಳಿಸಾರಿತು. ದಕ್ಷಿಣೇಶ್ವರದ ಕಾಳಿಕಾ ದೇವಾಲಯವು ಮಹೋತ್ಸವದ ಮಂಗಳರಂಗವಾಗಿ ಪರಿಣಮಿಸಿತು. ಸ್ವಾಮಿಗಳು ತಮ್ಮ ಪ್ರಾಚ್ಯ ಪಾಶ್ಚಾತ್ಯ ಶಿಷ್ಯಗಣದೊಡನೆ ಪ್ರಾತಃಕಾಲದಲ್ಲಿ ಅಲ್ಲಿಗೆ ಹೋದರು. ವಿವೇಕಾನಂದರೂ ಉತ್ಸವದಲ್ಲಿ ಭಾಗಿಗಳಾಗುವರೆಂದು ತಿಳಿದು ಅವರನ್ನು ದರ್ಶಿಸಲು ಅನೇಕ ಜನರು ಅಲ್ಲಿ ನೆರೆದಿದ್ದರು. ಸಹಸ್ರ ಸಹಸ್ರ ಕಂಠೋತ್ಥಿತ "ಜಯ ರಾಮಕೃಷ್ಣ! ಜಯ ವಿವೇಕಾನಂದ!" ಎಂಬ ಧ್ವನಿ ಬಳಿಯ ಭಾಗೀರಥಿಯನ್ನೂ ಬೆಕ್ಕಸಗೊಳಿಸಿತು. ಎಲ್ಲೆಲ್ಲಿಯೂ ಆನಂದ; ಎಲ್ಲೆಲ್ಲಿಯೂ ಸಂಭ್ರಮ! ವಾದ್ಯಗಳ ಮಧುರಘೋಷ ಹಬ್ಬಿತು. ಸುಗಂಧ ದ್ರವ್ಯಗಳ ಧೂಮ ಸುವಾಸನೆಗಳು ನವಯುಗದ ಪ್ರಾಣೋದಯವನ್ನು ಸೂಚಿಸಿ ವಾಯುಮಂಡಲದಲ್ಲಿ ಪಸರಿಸಿದವು. ತರತರದ ಬಣ್ಣದ ರೆಕ್ಕೆಯ ಸಾವಿರಾರು ಬಣ್ಣದ ಚಿಟ್ಟೆಗಳ ಬಳಗದಂತೆ ನೋಟಕ್ಕೆ ತೋಟದ ಹೂವು ತಳಿರುಗಳು ನಲಿದವು. ಕೆಲವರು ಶ್ರೀಗುರುದೇವರ ಜೀವನ ಲೀಲೆಯ ವಿಚಾರವಾಗಿ ಒಂದು ಭಾಷಣ ಮಾಡುವಂತೆ ಸ್ವಾಮಿಗಳನ್ನು ಕೇಳಿಕೊಂಡರು.

ಆದರೆ ಜನರ ಅಟ್ಟಹಾಸದ ಕೋಲಾಹಲದಲ್ಲಿ ಅದು ಅಸಾಧ್ಯವೆಂದು ತೋರಿದುದರಿಂದ ಅವರು ಸುಮ್ಮನಾದರು. ಹಬ್ಬ ಮುಗಿದ ಮೇಲೆ ಗುರುವರ್ಯರು ತಮ್ಮವರನ್ನು ಕೂಡಿ ಆಲಂಬಜಾರಿನ ಮಠಕ್ಕೆ ತೆರಳಿದರು.

ಪರಮಹಂಸರ ಜನ್ಮೋತ್ಸವವಾದ ಕೆಲದಿನಗಳ ಮೇಲೆ ಸ್ವಾಮಿಗಳು ವೇದಾಂತ ಧರ್ಮದ ವಿಚಾರವಾಗಿ ಮತ್ತೊಂದು ಉಪನ್ಯಾಸ ಮಾಡಿದರು. ಅದರಲ್ಲಿ ಸನಾತನಧರ್ಮದ ಶ್ರೇಷ್ಠತೆಯನ್ನು ಮನಸ್ಸಿಗೆ ಹಿಡಿಯುವಂತೆ ವಿವರಿಸಿ, ಆಧುನಿಕ ಸಮಾಜ ಪದ್ಧತಿಗಳಲ್ಲಿ ಕೆಲವನ್ನು ಅನಾರ್ಯಗಳೆಂದು ವಿಮರ್ಶಿಸಿದರು. ಇದಾದ ತರುವಾಯ ಅವರು ಉಪನ್ಯಾಸ ಮಾಡಲು ಕೈಹಾಕಲಿಲ್ಲ. ಗಣನೆಯಿಲ್ಲದಷ್ಟು ಅಭಿನಂದನ ಪತ್ರಗಳನ್ನು ಸ್ವೀಕರಿಸಿ, ಲೆಕ್ಕವಿಲ್ಲದಷ್ಟು ಭಾಷಣಗಳನ್ನು ಕೊಟ್ಟು ಅವರಿಗೂ ಬೇಸರವಾಯಿತು. ಅಲ್ಲದೆ ಉಪನ್ಯಾಸಗಳಿಂದ ಜನರಲ್ಲಿ ಉತ್ತೇಜನವೇನೊ ಉದ್ಭವಿಸಬಹುದು; ಆದರೆ ಅದು ಸ್ಥಾಯಿಯಾಗಿರಲಾರದು. ಇದನ್ನು ತಿಳಿದು ಸ್ವಾಮಿಗಳು ಉಪನ್ಯಾಸ ಮಾಡುವುದನ್ನು ಬಿಟ್ಟು ಉಪದೇಶ, ಪ್ರವಚನ ಮತ್ತು ಉಪಭಾಷಣಗಳಿಗೆ ಕೈಯಿಕ್ಕಿದರು. ಆ ಸಮಯದಲ್ಲಿ ಅವರೆಡೆಗೆ ನಾನಾ ಪರಿಯ ಜನಗಳು ಬಂದು ಹೋಗುತ್ತಿದ್ದರು. ಆದರೆ ಎಲ್ಲರೂ ಧರ್ಮೋಪದೇಶ ಪಡೆಯಲೆಂದು ಬರುತ್ತಿದ್ದಿಲ್ಲ. ಕೆಲವರು ಅವರನ್ನು ನೋಡುವುದಕ್ಕಾಗಿಯೆ ಬರುತ್ತಿದ್ದರು. ಮತ್ತೆ ಕೆಲವರು ಕೌತೂಹಲದಿಂದ ಬರುತ್ತಿದ್ದರು. ಇನ್ನೂ ಕೆಲವರು ಪರೀಕ್ಷೆಗಾಗಿ ಬರುತ್ತಿದ್ದರು. ಎಷ್ಟೋ ಜನ ಪಂಡಿತರೂ ವೇದದರ್ಶನ ಶಾಸ್ತ್ರವಿದರೂ ಚರ್ಚೆಗೋಸುಗವಾಗಿಯೆ ಅಲ್ಲಿಗೆ ಬರುತ್ತಿದ್ದರು.

ಒಂದು ದಿನ ಥಿಯಾಸಫಿ ಸಂಘದ ಯುವಕನೊಬ್ಬನು ಸ್ವಾಮಿಗಳಲ್ಲಿಗೆ ಬಂದು “ಸ್ವಾಮಿಜಿ, ನಾನು ಯಾವ ಯಾವ ಪಂಥಗಳನ್ನೋ ಅನುಸರಿಸಿ ನೋಡಿದೆನು; ಆದರೆ ನನಗಿನ್ನೂ ಸತ್ಯ ಹೊಳೆದಿಲ್ಲ. ಅದೇಕೆ?” ಎಂದನು.

ಸ್ವಾಮಿಗಳು ಅತ್ಯಂತ ಸಹಾನುಭೂತಿಯಿಂದ “ವತ್ಸ, ಭಯ ಬೇಡ, ನಾನೂ ಒಂದು ಸಮಯದಲ್ಲಿ ನಿನ್ನಂತೆಯೇ ಇದ್ದೆ. ನೀನು ಯಾವ ಯಾವ ಪಂಥಗಳನ್ನು ಅನುಸರಿಸಿದೆ? ಏನೇನು ಸಾಧನೆ ಮಾಡಿದೆ? ಹೇಳು, ನೋಡೋಣ” ಎಂದರು.

ಯುವಕನು ತಾನು ಥಿಯಾಸೊಫಿ ಸಂಘದವರಿಂದ ಮೂರ್ತಿ ಪೂಜೆಯ ಮೇಲ್ಮೆಯನ್ನು ಅರಿತು ಧ್ಯಾನಜಪದಲ್ಲಿ ಎಷ್ಟು ತಪಸ್ಸು ಮಾಡಿದರೂ ಏನೂ ಪ್ರಯೋಜನವಾಗಲಿಲ್ಲವೆಂದು ಹೇಳಿದನು.

ಸ್ವಾಮಿಗಳು “ವತ್ಸ, ನೀನು ನಾನು ಹೇಳುವುದನ್ನು ಕೇಳುವುದಾದರೆ, ಮೊದಲು ಕೊಠಡಿಯ ಬಾಗಿಲುಗಳನ್ನು ತೆರೆದು ಕಣ್ಣುಬಿಟ್ಟು ಹೊರಗೆ ನೋಡು. ಕಣ್ಣು ಮುಚ್ಚಿಕೊಳ್ಳುವುದರಿಂದ ಏನೂ ಉಪಯೋಗವಿಲ್ಲ. ನಿನ್ನ ನೆರೆಹೊರೆಯಲ್ಲಿ ಬೇಕಾದಷ್ಟು ದರಿದ್ರರೂ ಅನಾಥರೂ ದುಃಖಿಗಳೂ ಇದ್ದಾರೆ. ಅವರಿಗೆ ನೆರವಾಗು. ಹೊಟ್ಟೆಗಿಲ್ಲದವರಿಗೆ ಅನ್ನದಾನ ಮಾಡು; ಬಟ್ಟೆಗಿಲ್ಲದವರಿಗೆ ವಸ್ತ್ರದಾನ ಮಾಡು. ರೋಗಿಗಳಿಗೆ ಶುಶ್ರೂಷೆ ಮಾಡು. ಮೂರ್ಖರಿಗೆ ಬುದ್ಧಿ ಕಲಿಸು. ನೀನು ಓದು ಕಲಿತವನು. ಅಜ್ಞಾನಿಗಳಿಗೆ ಜ್ಞಾನದಾನ ಮಾಡು. ಆಗ ನಿನಗೆ ಶಾಂತಿ ಲಭಿಸುವುದು. ಪತಿತ ನಾರಾಯಣರ ಸೇವೆಯೇ ಪಾವನ ನಾರಾಯಣನ ಸೇವೆ!” ಎಂದರು.

ಯುವಕನು “ಆದರೆ, ಸ್ವಾಮಿಜಿ ರೋಗಿಗಳನ್ನು ಶುಶ್ರೂಷೆ ಮಾಡಲು ಹೋಗಿ, ಹೊತ್ತಿಗೆ ಸರಿಯಾಗಿ ಊಟ ನಿದ್ದೆಗಳಿಲ್ಲದೆ ನಾನೆ ಕಾಯಿಲೆ ಬಿದ್ದು ಕಷ್ಟಕ್ಕೊಳಗಾದರೆ” - ಎನ್ನುವಷ್ಟರಲ್ಲಿಯೆ ಸ್ವಾಮಿಗಳು ನೊಂದ ಕೇಸರಿಯಂತೆ ಮೇಲೆದ್ದು

ಮೂದಲಿಕೆಯ ದನಿಯಿಂದ “ಸರಿ ಸರಿ! ನಿನ್ನ ಮಾತು ನಡತೆಗಳಿಂದಲೆ ಇಲ್ಲಿ ನೆರೆದವರಿಗೆಲ್ಲಾ ಅದು ಗೊತ್ತಾಗುತ್ತದೆ. ನಿನ್ನಂಥ ಸುಖಿಗಳು ಬಡಬಗ್ಗರಿಗಾಗಿ ತಮ್ಮ ಅಮೂಲ್ಯವಾದ ಆರೋಗ್ಯವನ್ನು ಕೆಡಿಸಿಕೊಳ್ಳುವುದಿಲ್ಲ! ನಾನು ಬಲ್ಲೆ!” ಎಂದರು.

ಇನ್ನೊಂದು ದಿನ ದೊಡ್ಡ ಪಂಡಿತರೊಬ್ಬರು ಸ್ವಾಮಿಗಳನ್ನು ಕುರಿತು “ಸ್ವಾಮಿಜಿ, ನೀವು ಸೇವೆ ಮಾಡಬೇಕು, ಸಹಾಯ ಮಾಡಬೇಕು, ಜಗತ್ತಿಗೆ ಉಪಕಾರ ಮಾಡಬೇಕು ಎಂದು ಬೋಧಿಸುತ್ತೀರಿ. ಇವೆಲ್ಲವೂ ಮಾಯೆಗೆ ಒಳಪಟ್ಟುವಲ್ಲವೆ? ವೇದಾಂತವು ಮಾಯಾತೀತವಾದ ಮುಕ್ತಿಯೆ ಚರಮ ಧ್ಯೇಯವೆಂದು ಸಾರುತ್ತಿರುವಾಗ ಮನಸ್ಸನ್ನು ಪೃಥ್ವಿಗೆಳೆಯುವ ಸೇವೆ ಸಹಾಯಗಳಿಂದ ಪ್ರಯೋಜನವೇನು?” ಎಂದರು.

ಸ್ವಾಮಿಜಿಯ ಕಣ್ಣು ಮಿಂಚಿದುವು. “ಮುಕ್ತಿಯನ್ನು ಪಡೆಯಬೇಕು ಎಂಬ ಅಭಿಪ್ರಾಯವೂ ಕೂಡ ಮಾಯೆಗೆ ಒಳಪಟ್ಟುದಲ್ಲವೆ? ಆತ್ಮ ನಿತ್ಯ ಮುಕ್ತವಾದುದೆಂದು ವೇದಾಂತ ಸಾರುವುದಿಲ್ಲವೆ? ಹಾಗೆಂದ ಮೇಲೆ ಮುಕ್ತಿಗಾಗಿ ಪ್ರಯತ್ನ ಪಡುವುದಾದರೂ ಏಕೆ?” ಎಂಬ ದೃಢವಾಣಿ ಮೊಳಗಿತು.

ಬಳಿಗೆ ಬಂದ ತರುಣರಿಗೆ ಸ್ವಾಮಿಗಳು ಬರಿಯ ತತ್ತ್ವಬೋಧನೆ ಮಾಡಿ ಕಳುಹಿಸುತ್ತಿರಲಿಲ್ಲ. ಕೆಲವು ಸಾರಿ ಚೆನ್ನಾಗಿ ಬೈದೂ ಕಳುಹಿಸುತ್ತಿದ್ದರು. ತರುಣರ ದೈಹಿಕ ದೌರ್ಬಲ್ಯವನ್ನೂ ಮಾನಸಿಕ ಕ್ಲೈಬ್ಯವನ್ನೂ ಬಾಲ್ಯವಿವಾಹ ಪದ್ಧತಿಯನ್ನೂ ತಿಕ್ತ ವಾಕ್ಯ ಪ್ರಯೋಗಗಳಿಂದ ವಿಮರ್ಶಿಸಿ ಬಿಡುತ್ತಿದ್ದರು. ಕೆಚ್ಚಿಲ್ಲದ ಪೆಚ್ಚೆದೆಗಳಲ್ಲಿ ಕಿಚ್ಚಿಡುತ್ತಿದ್ದರು. ನೆಚ್ಚುಗೆಟ್ಟವರನ್ನು ಹುರಿದುಂಬಿಸಿ ಕಾರ್ಯರಂಗಕ್ಕೆ ಎಳೆ ತರುತ್ತಿದ್ದರು. ತರುಣರ ಮುಂದೆ ಉನ್ನತೋನ್ನತ ಧ್ಯೇಯಗಳನ್ನು ಹಿಡಿದು ಅವರನ್ನು ಮೇಲೆತ್ತುತ್ತಿದ್ದರು. ಆದ್ದರಿಂದ ವಂಗ ಯುವಕರು ಸ್ವಾಮೀಜಿಯ ಬಳಿಗೆ ಗುಂಪು ಗುಂಪಾಗಿ ಬಂದರು.

ಒಂದು ದಿನ ಗೋರಕ್ಷಣೆಯ ಸಭೆಯ ಪ್ರಚಾರಕನೊಬ್ಬನು ಸ್ವಾಮಿಗಳ ಬಳಿಗೆ ಬಂದನು. ಸ್ವಾಮಿಗಳು “ನಿಮ್ಮ ಸಂಘದ ಉದ್ದೇಶವೇನು?” ಎಂದು ಕೇಳಿದರು.

ಪ್ರಚಾರಕನು “ಮುದಿಯಾಗಿ ರೋಗ ಹಿಡಿದ ಗೋಮಾತೆಗಳನ್ನು ಕಟುಕರ ಕೈಯಿಂದ ತಪ್ಪಿಸಿ ಪಿಂಜರಾಪೋಲುಗಳಿಗೆ ಕೊಂಡೊಯ್ದು ಸಲಹುವೆನು” ಎಂದನು.

“ಒಳ್ಳೆಯದು ನಿಮಗೆ ಧನಸಹಾಯ ಹೇಗೆ?”

“ಯಾರಾದರೂ ತಮ್ಮಂತಹ ಉದಾರಹೃದಯರು ಸಹಾಯ ಮಾಡುವರು.”

“ನಿಮ್ಮಲ್ಲೀಗ ಎಷ್ಟು ನಿಧಿ ಇದೆ?”

“ಮಾರ್ವಾಡಿಗಳಿಂದ ನಮಗೆ ಬಹಳ ಧನಸಹಾಯ ದೊರಕಿದೆ.”

“ಮಧ್ಯಪ್ರಾಂತ್ಯಗಳಲ್ಲಿ ಭಯಂಕರ ಕ್ಷಾಮಕಾಲವಾಗಿದೆಯಷ್ಟೆ? ಸರ್ಕಾರದವರ ಹೇಳಿಕೆಯಂತೆ, ೮,೦೦,೦೦೦ ಜನರು ಬರದಿಂದ ಸತ್ತಿರುವರು. ಅಲ್ಲಿ ಜನರಿಗಾಗಿ ನೀವೇನು ಮಾಡಿದ್ದೀರಿ?”

“ನಾವು ಕ್ಷಾಮಗೀಮದ ತಂಟೆಗೆ ಹೋಗುವುದೇ ಇಲ್ಲ. ಗೋರಕ್ಷಣೆಯೊಂದೇ ನಮ್ಮ ಕಾರ್ಯ”

“ಲಕ್ಷಲಕ್ಷ ಜನರು, ಸ್ವದೇಶಸ್ಥರು, ಸ್ವಮತಸ್ಥರು, ಹೊಟ್ಟೆಗಿಲ್ಲದೆ ನರಳಿ ಸಾಯುತ್ತಿರುವಾಗ ಅವರಿಗೆ ಒಂದು ತುತ್ತು ಕೂಳನ್ನಾದರೂ ನೀಡಬೇಕೆಂದು ನಿಮಗೆ ಮನಸ್ಸಾಗಲಿಲ್ಲವೆ?”

“ಅದಕ್ಕೆ ನಾವೇನು ಮಾಡುವುದು? ಅವರ ಕರ್ಮ, ಅವರ ಪಾಪ, ಬರಗಾಲ ಬಂತು.”

ಈ ಮಾತುಗಳನ್ನು ಕೇಳಿ ಸ್ವಾಮಿಗಳು ಬೆಂಕಿಯಾದರು. ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಇಂತೆಂದರು ಸಿಡಿಲಿನಂತೆ: “ಅಯ್ಯಾ, ಹಾಗಾದರೆ ನಿಮ್ಮ ಸಂಘದ ಗೋಜಿಗೆ ನಾನು ಬರುವುದೇ ಇಲ್ಲ. ಯಾರು ನರಳುವ ಸೋದರರಿಗಾಗಿ ಮರುಗಲಾರರೋ, ಯಾರು ತಮ್ಮ ಕಣ್ಣೆದುರಿನಲ್ಲಿಯೇ ಕೂಳಿಲ್ಲದೆ ಸಾಯುವವರನ್ನು ಕಂಡರೂ ಒಂದು ತುತ್ತನ್ನಾದರೂ ದಾನ ಮಾಡದೆ ವೃದ್ಧ ಮೃಗಪಕ್ಷಿಗಳಿಗಾಗಿ ಲಕ್ಷಲಕ್ಷ ಧನವ್ಯಯ ಮಾಡುವರೋ ಅಂಥವರನ್ನು ನಾನು ಮನ್ನಿಸಲಾರೆ. ಅವರ ಕರ್ಮವಂತೆ! ಅವರ ಪಾಪವಂತೆ! ಏನಯ್ಯ, ಹಾಗೆ ಹೇಳಲು ನಿಮಗೆ ನಾಚಿಕೆಯಾಗುವುದಿಲ್ಲವೆ? ಅದು ಅವರ ಕರ್ಮಫಲವಾದರೆ ನಿಮ್ಮದೂ ಹಾಗೆಯೆ! ನೀವೇಕೆ ಗೋವುಗಳನ್ನು ಸಲಹಬೇಕು? ಕಟುಕರ ಕೈಯಿಂದ ಕಡಿಸಿಕೊಳ್ಳುವುದೂ ಅವುಗಳ ಕರ್ಮಫಲ ಎಂದು ಸುಮ್ಮನಿದ್ದು ಬಿಡಬಾರದೆ?”

ಪ್ರಚಾರಕರು ಕಂಗೆಟ್ಟು “ಹೌದು ನೀವು ಹೇಳುವುದೇನೂ ಸರಿಯೆ. ಆದರೆ ನಮ್ಮ ಶಾಸ್ತ್ರಗಳು ಗೋವನ್ನು ಮಾತೆಯೆಂದು ಹೇಳಿವೆಯಲ್ಲಾ!” ಎಂದನು.

ಸ್ವಾಮಿಗಳು ಗಹಗಹಿಸಿ ನಕ್ಕು “ಹೌದು, ಹೌದು, ಅದೇನೊ ನಿಶ್ಚಯ! ಪಶುವೆ ನಿಮ್ಮ ತಾಯಿ! ಹಾಗಲ್ಲದೆ ಹೋದರೆ ನಿಮ್ಮಂಥ ಪ್ರತಿಭಾಶಾಲಿಗಳಾದ ಮಕ್ಕಳನ್ನು ಮತ್ತಾರು ಹೆತ್ತಾರು?” ಎಂದರು.

ಪ್ರಚಾರಕರು ಹೊರಟುಹೋದ ಮೇಲೆ ಸ್ವಾಮಿಗಳು ಅಲ್ಲಿದ್ದವರೊಡನೆ “ನೋಡಿ ಕರ್ಮತತ್ತ್ವದ ಎಂತಹ ಸದ್ವಿನಿಯೋಗವಾಗುತ್ತಿದೆ ನಮ್ಮ ದೇಶದಲ್ಲಿ? ಆದ್ದರಿಂದಲೆ ನಮ್ಮ ದೇಶ ಇಷ್ಟು ಮುಂದಕ್ಕೆ ಬಂದಿದೆ! ಅಯ್ಯೋ, ಅವರು ಮನುಷ್ಯರೆ, ಮನುಷ್ಯರಿಗಾಗಿ ಮರುಗದವರು?” ಎಂದರು. ದುಃಖ ಜುಗುಪ್ಸೆಗಳಿಂದ ಅವರ ದೇಹ ನಡುಗಿತು.

ಒಂದು ದಿನ ಕೆಲವು ಪಂಡಿತರು ಸ್ವಾಮಿಗಳೊಡನೆ ವಾಗ್ವಾದಕ್ಕಾಗಿ ಬಂದರು. ವಾದದ ನಡುವೆ ಸ್ವಾಮಿಗಳು ಬಾಯಿತಪ್ಪಿ ‘ಸ್ವಸ್ತಿ’ ಎನ್ನುವುದಕ್ಕೆ ಬದಲಾಗಿ ‘ಅಸ್ತಿ’ ಎಂದರು. ಒಡನೆಯೆ ಪಂಡಿತರುಗಳು ಕೈಚಪ್ಪಾಳೆ ಹೊಡೆದು ನಕ್ಕುಬಿಟ್ಟರು. ವ್ಯಾಕರಣದೋಷವೆಂದರೇನು ಸಾಮಾನ್ಯವೆ? ರೌರವನರಕ ಪ್ರಾಪ್ತಿ ಅದರಿಂದ! ಕೂಡಲೆ ಸ್ವಾಮಿಗಳು “ನಾನು ಪಂಡಿತರ ದಾಸ. ಮನ್ನಿಸಬೇಕು” ಎಂದರು. ಅವರ ದೈನ್ಯಭಾವವನ್ನು ನೋಡಿ ಪಂಡಿತರು ಅಪ್ರತಿಭರಾದರು.

ಅವರು ಹೊರಟುಹೋದ ಮೇಲೆ ಸ್ವಾಮಿಗಳು "ಪಶ್ಚಿಮದೇಶದ ನಾಗರಿಕ ವಿದ್ವಾಂಸರು ಮಾತಿನ ಅರ್ಥದ ಕಡೆಗೆ ದೃಷ್ಟಿಯಿಡುತ್ತಾರೆಯೆ ಹೊರತು, ವ್ಯಾಕರಣ ದೋಷಗಳ ಕಡೆ ಕಣ್ಣಿಡುವುದಿಲ್ಲ. ಆದರೆ ನಮ್ಮ ಪಂಡಿತರಿಗೆ ರಂಧ್ರಾನ್ವೇಷಣೆಯೊಂದೆ ಪರಮಕಾರ್ಯ. ತಿರುಳನ್ನು ಬಿಟ್ಟು ಸಿಪ್ಪೆಯನ್ನೆ ತಿನ್ನುತ್ತಾರೆ. ತನ್ನ ಬಾಲವನ್ನೆ ಕಚ್ಚಿಕೊಳ್ಳಲು ಹೋಗುವ ಶುನಕದಂತೆ ಅವರಿಗೆ ಯಾವ ಸಿದ್ಧಾಂತವೂ ಕರಗತವಾಗುವುದಿಲ್ಲ!" ಎಂದರು.

* * *

## ೧೫. ಸಂಘ ಸಂಸ್ಥಾಪನೆ

ಸ್ವಾಮಿ ವಿವೇಕಾನಂದರ ಜೀವಮಾನ ಒಂದು ದಿಗ್ವಿಜಯಗಳ ಪರಂಪರೆ, ಅದರಲ್ಲಿ ಸೋದರ ಸಂನ್ಯಾಸಿಗಳ ವ್ಯಷ್ಟಿದೃಷ್ಟಿಗಳನ್ನು ವಿಶಾಲಗೊಳಿಸಿ ಅವರಿಗೆ ಸಮಷ್ಟಿದೃಷ್ಟಿಯನ್ನು ದಯಪಾಲಿಸಿದ್ದೂ ಒಂದು.

ಪರಮಹಂಸರ ಸಂನ್ಯಾಸೀ ಶಿಷ್ಯರು ನರೇಂದ್ರನನ್ನೇನೋ ನಾಯಕನನ್ನಾಗಿ ಸ್ವೀಕರಿಸಿದರು. ಆದರೆ ನಾಯಕನ ಪ್ರಚಾರಕಾರ್ಯ ಮತ್ತು ಕರ್ಮಯೋಗಾದರ್ಶ ಮೊದಲಾದ ದೇಶೋದ್ಧಾರಕ ತತ್ತ್ವಗಳನ್ನು ಅವರು ಗ್ರಹಿಸಲಾರದೆ ಹೋಗಿದ್ದರು. ಧ್ಯಾನ ತಪಸ್ಸು ಮೊದಲಾದ ಸಾಧನೆಗಳಿಂದ ಮುಕ್ತಿಲಾಭ ಮಾಡಿಕೊಳ್ಳುವುದೇ ಜೀವನದ ಆದರ್ಶವೆಂದು ತಿಳಿದಿದ್ದ ಅವರು ಜಗತ್ತಿನ ಸುಖದುಃಖ, ಉನ್ನತಿ ಅವನತಿ ಇವುಗಳ ಕಡೆಗೆ ಕಣ್ಣೆತ್ತಿ ಕೂಡ ನೋಡದೆ ದೇಶಕಾಲಾತೀತವಾದ ಸಚ್ಚಿದಾನಂದ ಸಿದ್ಧಿಗಾಗಿ ಮಾತ್ರ ಹೆಣಗುತ್ತಿದ್ದರು. ಅಂತಹವರನ್ನು ಸ್ವಾಮಿಜಿ ಧರ್ಮಪ್ರಚಾರ, ವಿದ್ಯಾಪ್ರಚಾರ ಇತ್ಯಾದಿ ಕಾರ್ಯಗಳಲ್ಲಿ ನಿಯುಕ್ತರಾಗುವಂತೆ ಕೇಳಿಕೊಂಡರು. ನಾಯಕನ ಉಪದೇಶದ ಮರ್ಮವನ್ನು ತಿಳಿಯದೆ ಕೆಲವರು ಅತ್ತಿತ್ತ ಅಲೆಯತೊಡಗಿದರು. ಸಂನ್ಯಾಸಿಗಳಲ್ಲಿಯೆ ಭಿನ್ನಾಭಿಪ್ರಾಯದ ತುಮುಲವೆದ್ದಿತು. ಸ್ವಾಮಿಗಳು ಒಂದಿನಿತೂ ವಿಚಲಿತಚಿತ್ತರಾಗದೆ ತಮ್ಮ ಸದುದ್ದೇಶದ ತತ್ತ್ವವನ್ನು ಸೋದರ ಸಂನ್ಯಾಸಿಗಳಿಗೆ ಸಿದ್ಧಾಂತಪಡಿಸಲಾರಂಭಿಸಿದರು. ಯುಗಮಹರ್ಷಿಯ ಜಾಣ್ಮೆಯ ಹೊಂಬೆಳಕಿನಲ್ಲಿ ಶ್ರೀರಾಮಕೃಷ್ಣರ ಜೀವನ ಮತ್ತು ಉಪದೇಶಗಳು ಬೇರೊಂದು ರೀತಿಯಿಂದ ಹೊಳೆಯತೊಡಗಿದುವು. ತಾವೆಲ್ಲರೂ ಯುಗಧರ್ಮ ಪ್ರಚಾರಕಾರ್ಯದಲ್ಲಿ ಬದ್ಧಕಂಕಣರಾಗದಿದ್ದರೆ ಶ್ರೀ ಪರಮಹಂಸರ ಅವತಾರದ ಮಹೋದ್ದೇಶ ವಿಫಲವಾಗುವುದೆಂದು ತಿಳಿಸಿದರು.

"ಮಂದಿರ ಮತ್ತು ಪ್ರತಿಮೆಗಳಲ್ಲಿರುವ ಭಗವಂತನನ್ನು ಹೊರಗೆಳೆದು 'ಯಾತ್ರ ಜೀವ ತತ್ರ ಶಿವ' ಮಂತ್ರದಿಂದ 'ವಿರಾಟ'ದ ಪೂಜೆಗೆ ಅನುವಾಗಬೇಕು. ಪ್ರಾಚೀನ ಕಾಲದ ಸಂನ್ಯಾಸಿಗಳಂತೆ ಗಿರಿಗುಹೆ ಕುಟೀರಗಳಲ್ಲಿ ವಾಸ ಮಾಡುತ್ತ ಕೇವಲ ಆತ್ಮ ಸಾಕ್ಷಾತ್ಕಾರಲಂಪಟರಾಗಿ ಮಾತ್ರ ಇರಬಾರದು. ಸಂಸಾರದ ಕರ್ಮಕ್ಷೇತ್ರದಲ್ಲಿ ಎದೆಗೊಟ್ಟು ನಿಂತು ಮಾನವರನ್ನು ಉತ್ತಮ ಕಾರ್ಯಗಳಿಗೆ ಪ್ರೇರಿಸಬೇಕು. ಕೋಟಿ ಕೋಟಿ ವ್ಯಕ್ತಿಗಳ ಹೃದಯದ ಅಜ್ಞಾನಾಂಧಕಾರವನ್ನು ದೂರ ಮಾಡಬೇಕು."

ಸ್ವಾಮಿಜಿ ಸೋದರರಿಗೆ ಇಂತೆಲ್ಲ ಬೋಧಿಸಿ, ತಮ್ಮ ಜೀವನೋದ್ದೇಶವನ್ನು ತಿಳಿಯಪಡಿಸಿ, ಭರತಭೂಮಿಯ ಕಲ್ಯಾಣಕ್ಕಾಗಿ ಒಂದು ಅಭಿನವ ಸಂನ್ಯಾಸೀ ಸಂಪ್ರದಾಯವನ್ನು ಪ್ರತಿಷ್ಠೆ ಮಾಡಬೇಕೆಂದೂ, ಆ ಸಂಪ್ರದಾಯದ ಸಾಧುಗಳು ದೇಶದ ಮೇಲ್ಮೆಗಾಗಿ ತಮ್ಮ ತಮ್ಮ ಮುಕ್ತಿಲಾಭವನ್ನು ಪರಿತ್ಯಜಿಸಬೇಕೆಂದೂ, ಸಮಯ ಬಂದರೆ ಅವರು ಸಾನಂದದಿಂದ ನರಕದವರೆಗೂ ಹೋಗಲು ಸಿದ್ಧರಾಗಿರಬೇಕೆಂದೂ ತಿಳಿಸಿದರು. "ಬಹುಜನ ಸುಖಕ್ಕಾಗಿ, ಬಹುಜನ ಹಿತಕ್ಕಾಗಿ ಶ್ರೀರಾಮಕೃಷ್ಣರು ಅವತಾರವೆತ್ತಿದರು. ಅವರ ಶಿಷ್ಯರಾದ ನಾವು ಅಸ್ವಾರ್ಥತೆಯಿಂದ ಆತ್ಮೋದ್ಧಾರ ಮಾಡಿಕೊಳ್ಳದೆ ಹೋದರೆ, ಅವರು ಬೋಧಿಸಿದ ಮಹಾ ಯುಗಧರ್ಮವನ್ನು ಹರಡಲು ಅಸಮರ್ಥರಾದರೆ, ನಮಗೂ ಸಾಧಾರಣ ಮಾನವರಿಗೂ ಇರುವ ವ್ಯತ್ಯಾಸವೇನು?"

ಸ್ವಾಮಿಗಳ ಪ್ರಯತ್ನ ಫಲಕಾರಿಯಾಯಿತು. ಹನ್ನೆರಡು ವರ್ಷಗಳಿಂದಲೂ ಇದ್ದ ಜಾಗದಿಂದ ಅಲುಗಾಡದೆ ಪ್ರತಿದಿನವೂ ಪೂಜೆ, ಆರತಿ, ಅರ್ಚನೆ, ಧ್ಯಾನ, ಜಪತಪಗಳಲ್ಲಿ ಮಗ್ನರಾಗಿದ್ದ ಸ್ವಾಮಿ ರಾಮಕೃಷ್ಣಾನಂದರು ವೇದಾಂತಪ್ರಚಾರಕ್ಕಾಗಿ ದಕ್ಷಿಣದೇಶಕ್ಕೆ ಬಂದರು. ಸ್ವಾಮಿ ಅಖಂಡಾನಂದರು ಕ್ಷಾಮನಿವಾರಣೆಯ ಕಾರ್ಯಕ್ಕಾಗಿ ಮುರ್ಷಿದಾಬಾದಿಗೆ ಹೋದರು. ಅಭೇದಾನಂದ, ಶಾರದಾನಂದರು ಮೊದಲೆ ಪಶ್ಚಿಮದೇಶಗಳಿಗೆ ಹೋಗಿದ್ದರು. ಉಳಿದವರು ನಾಯಕನ ಇಷ್ಟದಂತೆ ನಡೆಯಲು ಸಿದ್ಧರಾದರು. ಇಂತು ದೀನಬಂಧು ಜಗದ್ವಿಖ್ಯಾತ ಶ್ರೀರಾಮಕೃಷ್ಣ ಸಂಘಕ್ಕೆ ಮಾನವ ಮಿತ್ರ ವಿವೇಕಾನಂದರು ಪವಿತ್ರತಮ ಪೀಠಿಕೆಯನ್ನು ಬರೆದರು.

ಬಹುದಿನಗಳ ಕಠೋರ ಪರಿಶ್ರಮದಿಂದ ಸ್ವಾಮಿಗಳ ವಜ್ರದೃಢ ದೇಹವೂ ಅಸ್ವಸ್ಥವಾಯಿತು. ಆದರೂ ಅದನ್ನು ಗಣನೆಗೆ ತಾರದೆ ಮಠದ ಬ್ರಹ್ಮಚಾರಿಗಳಿಗೂ ನವದೀಕ್ಷಿತ ಸಂನ್ಯಾಸಿಗಳಿಗೂ ಗೀತೆ ಉಪನಿಷತ್ತು ಮೊದಲಾದುವುಗಳನ್ನು ಪಾಠ ಹೇಳುತ್ತಿದ್ದರು. ಕೆಲವು ದಿನಗಳ ತನಕ ಯಾವ ಕಾರ್ಯವನ್ನೂ ಮಾಡದೆ ಮನಸ್ಸಿಗೂ ದೇಹಕ್ಕೂ ವಿರಾಮ ಕೊಡಬೇಕೆಂದು ವೈದ್ಯರು ಹೇಳಿದ್ದರು. ಕಲ್ಕತ್ತಾದಲ್ಲಿ ಇದ್ದರೆ ಅವರಿಗೆ ವಿರಾಮ ದೊರಕದೆಂದು ತಿಳಿದ ಶಿಷ್ಯರು ಅವರನ್ನು ಡಾರ್ಜಿಲಿಂಗಿಗೆ ಸಾಗಿಸಿದರು.

ಆದರೆ ಎರಡು ತಿಂಗಳಾದರೂ ಹೆಚ್ಚೇನೂ ಉಪಯೋಗವಾಗದೆ ಇದ್ದುದನ್ನು ಕಂಡು ಸ್ವಾಮಿಗಳು ಪುನಃ ಕಲ್ಕತ್ತಾಕ್ಕೆ ಬಂದರು.

ಬಂದ ಕೆಲವು ದಿನಗಳ ಮೇಲೆ ಸ್ವಾಮಿಗಳು ಕೆಲವು ಜನ ತರುಣರಿಗೆ ಬ್ರಹ್ಮಚರ್ಯ ಸಂನ್ಯಾಸದೀಕ್ಷೆಗಳನ್ನು ಕೊಡಬೇಕೆಂದು ನಿರ್ಣಯಿಸಿದರು. ಕೆಲವು ಜನ ಸೋದರ ಸಂನ್ಯಾಸಿಗಳು ನಾನಾ ಕಾರಣಗಳಿಂದ ಅದಕ್ಕೆ ಸಮ್ಮತಿಕೊಡಲಿಲ್ಲ. ಸ್ವಾಮಿಗಳು ಅವರನ್ನೆಲ್ಲ ಬಳಿಗೆ ಕರೆದು ಇಂತೆಂದರು: "ಪಾಪಿಗಳನ್ನು ಉದ್ಧರಿಸಲು ನಾವೇ ಅಳುಕಿದರೆ ಮತ್ತಾರು ಅವರನ್ನು ಮೇಲೆತ್ತಬೇಕು? ಅಲ್ಲದೆ ಯಾವನು ತನ್ನ ಹೀನ ಜೀವನವನ್ನು ಬಿಟ್ಟು ಉನ್ನತ ಜೀವನವನ್ನು ಹಿಡಿಯಲು ಯತ್ನಿಸುತ್ತಾನೊ ಅಂಥವನಿಗೆ ನಾವು ನೆರವಾಗಬೇಕು. ಒಬ್ಬನು ಪಾಪಿಯಾಗಿದ್ದರೂ ನೀವು ಆತನನ್ನು ತಿದ್ದಲಾರದೆಹೋದರೆ, ನಿಮಗೇಕೆ ಕಾಷಾಯವಸ್ತ್ರ? ನಿಮಗೇಕೆ ಆಚಾರ್ಯರ ವೇಷ?" ಅಂತೂ ಪತಿತಪಾವನ ಸ್ವಾಮಿಜಿಯ ಇಚ್ಛೆಯೆ ನೆರವೇರಿತು. ಶಾಸ್ತ್ರರೀತಿಯಿಂದ ನವಶಿಷ್ಯರಿಗೆ ದೀಕ್ಷೆಯನ್ನು ಕೊಟ್ಟು "ನೀವು ಮಾನವಜೀವನದ

ಸರ್ವಶ್ರೇಷ್ಠ ವ್ರತವನ್ನು ಕೈಕೊಂಡಿರುವಿರಿ. ಧನ್ಯ ನಿಮ್ಮ ಜನ್ಮ! ಧನ್ಯ ನಿಮ್ಮ ವಂಶ! ಧನ್ಯ ನಿಮ್ಮನ್ನು ಹೆತ್ತವರು! ಕುಲಪವಿತ್ರವಾಯಿತು! ಜನನಿ ಕೃತಾರ್ಥೆಯಾದಳು!" ಎಂದು ಆಶೀರ್ವದಿಸಿದರು.

ತರುವಾಯ ಸ್ವಾಮಿಗಳು ನವದೀಕ್ಷಿತ ಸಂನ್ಯಾಸಿಗಳಿಗೆ ಸಂನ್ಯಾಸಧರ್ಮದ ಮಾಹಾತ್ಮ್ಯೆಯನ್ನು ವರ್ಣಿಸಿದರು. ಹೇಳುತ್ತ ಹೇಳುತ್ತ ಅವರ ವದನಮಂಡಲ ಅಗ್ನಿತುಲ್ಯತೇಜಃಪುಂಜವಾಯಿತು.

"ಬಹುಜನರ ಹಿತಕ್ಕೆ, ಬಹುಜನರ ಸುಖಕ್ಕೆ ಸಂನ್ಯಾಸಿಯ ಜನ್ಮ, ಹೆರವರಿಗಾಗಿ ಬಾಳನ್ನು ಬಾಳಬೇಕು. ನರಳುವ ಲಕ್ಷಾಂತರ ದುಃಖಿಗಳನ್ನು ಸಂತೈಸಬೇಕು. ಗೋಳಿಡುವ ಮಾತೆಯರ ಕಂಬನಿಗಳನ್ನು ತೊಡೆಯಬೇಕು. ಪತಿತರಾದವರನ್ನು ಮೇಲೆತ್ತಬೇಕು. ಅಜ್ಞಾನಿಗಳಿಗೆ ಜ್ಞಾನದಾನ ಮಾಡಬೇಕು. ಜೀವರ ವ್ಯಾವಹಾರಿಕ ಮತ್ತು ಪಾರಮಾರ್ಥಿಕ ಯೋಗಕ್ಷೇಮಗಳಿಗಾಗಿ ಜ್ಞಾನಜ್ಯೋತಿಯನ್ನು ಪಸರಿಸುವುದಕ್ಕಾಗಿಯೆ ಜನ್ಮವೆತ್ತುವನು ಸಂನ್ಯಾಸಿ! ನೀವು ಎಚ್ಚರಗೊಳ್ಳಿ! ಇತರರನ್ನೂ ಎಚ್ಚರಗೊಳಿಸಿ! ಏಳಿ! ಮೇಲೆಳಿ! ಗುರಿ ದೊರಕುವವರೆಗೂ ನಿಲ್ಲಬೇಡಿ! ಮುಂದೆ ನುಗ್ಗಿ! ಉತ್ತಿಷ್ಠತ, ಜಾಗ್ರತ, ಪ್ರಾಪ್ಯ ವರಾನ್ ನಿಬೋಧತ!"

ಯುಗಧರ್ಮಪ್ರಚಾರಕ್ಕಾಗಿ ಒಂದು ಸಂಘವನ್ನು ಸ್ಥಾಪಿಸಬೇಕೆಂದು ನಿಶ್ಚಯಿಸಿ, ಸ್ವಾಮಿಗಳು ೧೮೯೭ನೆಯ ಮೇ ತಿಂಗಳು ೧ನೆಯ ತಾರೀಖಿನ ದಿನ ಬಲರಾಮವಸು ಮಹಾಶಯನ ಮನೆಯಲ್ಲಿ ಗೃಹೀ ಮತ್ತು ಸಂನ್ಯಾಸೀ ಭಕ್ತರೆಲ್ಲರನ್ನೂ ಸೇರಿಸಿ ಇಂತೆಂದರು: "ನಾನಾ ದೇಶಗಳನ್ನು ಸಂಚರಿಸಿ ನೋಡಿದ್ದೇನೆ. ಸಂಘಬದ್ಧರಾಗದೆ ನಾವು ಯಾವ ಶಾಶ್ವತ ಕಾರ್ಯವನ್ನೂ ಮಾಡಲಾರೆವೆಂದು ನನಗೆ ತಿಳಿದುಬಂದಿದೆ. ಪ್ರಕೃತ, ನಮ್ಮ ದೇಶದಲ್ಲಿ ಬಹುಮತದ ತತ್ತ್ವವನ್ನು ಅಂಗೀಕರಿಸಿ ಅಂತಹ ಸಾಂಘಿಕ ಕಾರ್ಯಗಳನ್ನು ಮಾಡುವುದೂ ನನಗೆ ಸರಿಯೆಂದು ತೋರುವುದಿಲ್ಲ. ಯಾವೊತ್ತು ದೇಶದಲ್ಲಿ ವಿದ್ಯಾಭ್ಯಾಸ ಹರಡಿ, ಜನರು ಅಸ್ವಾರ್ಥರಾಗುವರೊ ಅಂದು ನಾವು ಸಂಘದಲ್ಲಿ ಬಹುಮತತತ್ತ್ವದಂತೆ ಕೆಲಸ ಮಾಡಬಹುದು. ಆದ್ದರಿಂದ ಸದ್ಯಕ್ಕೆ ಸಂಘವು ಒಬ್ಬ ನಿರಂಕುಶ ನಾಯಕನ ಅಧಿಕಾರಕ್ಕೆ ಒಳಪಟ್ಟಿರಬೇಕು. ಸರ್ವರೂ ಆತನು ಹೇಳಿದಂತೆ ಕೇಳಬೇಕು.

"ನಾವು ಯಾರ ಹೆಸರಿನಲ್ಲಿ ಸಂನ್ಯಾಸ ಸ್ವೀಕಾರ ಮಾಡಿರುವೆವೊ ಆತನ ಹೆಸರಿನಲ್ಲಿಯೆ ಸಂಘ ಸ್ಥಾಪನೆಯಾಗಬೇಕು. ಯಾರ ಜೀವನಾದರ್ಶವು ಸಂಸಾರದ ಕಾರ್ಯಕ್ಷೇತ್ರದಲ್ಲಿ ಪ್ರವೇಶಿಸಿದೆಯೊ, ದೇಹಾವಸಾನನಂತರ ಇಪ್ಪತ್ತೇ ವರ್ಷಗಳಲ್ಲಿ ಯಾರ ಪಾವನ ನಾಮವು ಪೂರ್ವ ಪಶ್ಚಿಮಗಳಲ್ಲಿ ಹಬ್ಬಿದೆಯೊ, ಆ ಮಹಾಪುರುಷನ ಹೆಸರೇ ಈ ಸಂಘಕ್ಕೆ ಇರಲಿ. ನಾವೆಲ್ಲ ಪ್ರಭುವಿನ ದಾಸರು. ಈ ಕಾರ್ಯದಲ್ಲಿ ನೀವೆಲ್ಲ ನಮಗೆ ನೆರವಾಗುವಿರೆಂದು ನಂಬಿದ್ದೇನೆ."

ಶ್ರೀಯುತ ಗಿರೀಶಚಂದ್ರ ಘೋಷ ಮೊದಲಾದ ಗೃಹೀಭಕ್ತರೆಲ್ಲರೂ ಸ್ವಾಮಿಗಳ ಹೇಳಿಕೆಯನ್ನು ಆನಂದದಿಂದ ಅನುಮೋದಿಸಿದರು. ಸಂಘಕ್ಕೆ ಶ್ರೀರಾಮಕೃಷ್ಣ ಪ್ರಚಾರ ಅಥವಾ ಶ್ರೀರಾಮಕೃಷ್ಣ ಮಿಷನ್ ಎಂದು ಹೆಸರಿಟ್ಟರು. ತರುವಾಯ ಸಂಘದ ಉದ್ದೇಶ ಇತ್ಯಾದಿಗಳನ್ನು ನಿರ್ಣಯಿಸಿದರು.

ಮಾನವರ ಹಿತಕ್ಕಾಗಿ ಶ್ರೀರಾಮಕೃಷ್ಣರು ಬೋಧಿಸಿರುವ ತತ್ತ್ವಗಳನ್ನು ಜೀವನದಲ್ಲಿ ಪ್ರತಿಪಾದಿಸಿ, ಬೋಧಿಸಿ, ಸಾಧಿಸಿ, ಜನರ ದೈಹಿಕ ಮಾನಸಿಕ ಮತ್ತು ಪಾರಮಾರ್ಥಿಕ ಉನ್ನತಿಗೆ ಸಹಾಯ ಮಾಡುವುದು ಸಂಘದ ಉದ್ದೇಶ.

ಜಗತ್ತಿನ ಸರ್ವಧರ್ಮಗಳೂ ಒಂದೇ ಅಖಂಡ ಸನಾತನ ಧರ್ಮದ ರೂಪಾಂತರ ಮಾತ್ರಗಳೆಂದು ತಿಳಿದು ಎಲ್ಲ ಧರ್ಮಾವಲಂಬಿಗಳ ಮಧ್ಯೆ ಆತ್ಮೀಯತೆಯನ್ನು ಸ್ಥಾಪಿಸಲು ಶ್ರೀರಾಮಕೃಷ್ಣರಿಂದ ಪ್ರಣೀತವಾದ ಸರ್ವಧರ್ಮ ಸಮನ್ವಯ ತತ್ತ್ವವನ್ನು ಪ್ರಚುರಪಡಿಸುವುದು ಸಂಘದ ವ್ರತ.

ಮಾನವರ ಇಹಪರ ಕಲ್ಯಾಣಗಳಿಗೆ ವಿದ್ಯಾದಾನ ಮಾಡುವುದು, ಕಲೆ ಮತ್ತು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವುದು, ಜನಸಾಮಾನ್ಯರಲ್ಲಿ ಶ್ರೀರಾಮಕೃಷ್ಣರ ಜೀವನದೃಷ್ಟಿಯಿಂದ ವೇದಾಂತ ತತ್ತ್ವಪ್ರಚಾರ ಮಾಡುವುದು - ಈ ಮೂರು ಸಂಘದ ಕಾರ್ಯಮಾರ್ಗಗಳು.

ಭರತಖಂಡದ ನಗರ ನಗರಗಳಲ್ಲಿ ಸಂಚರಿಸಿ, ಜನರಿಗೆ ವಿದ್ಯಾದಾನ ಮಾಡಲು ಅಲ್ಲಲ್ಲಿ ಮಠ ಮತ್ತು ಆಶ್ರಮಗಳನ್ನು ಸ್ಥಾಪಿಸುವುದು ಸಂಘದ ಭಾರತವರ್ಷೀಯ ಕಾರ್ಯ.

ಭಾರತ ಬಹಿರ್ಭೂತ ದೇಶಗಳಿಗೆ ಸುಶಿಕ್ಷಿತ ಸಂನ್ಯಾಸಿಗಳನ್ನು ಧರ್ಮ ಪ್ರಚಾರಕ್ಕಾಗಿ ಕಳುಹಿಸಿ, ಅಲ್ಲಿಯೂ ಆಶ್ರಮಗಳನ್ನು ಸ್ಥಾಪಿಸಿ, ಜನಾಂಗಗಳಲ್ಲಿ ಪರಸ್ಪರ ಸಹಾನುಭೂತಿ ಮತ್ತು ಮೈತ್ರಿಗಳು ಬೆಳೆಯುವಂತೆ ಮಾಡುವುದು ಸಂಘದ ವಿದೇಶೀಯ ಕಾರ್ಯ.

ಸ್ವಾಮಿ ವಿವೇಕಾನಂದರೆ ಸಂಘಕ್ಕೆ ಸಾಧಾರಣ ಸಭಾಪತಿಗಳಾದರು. ಸ್ವಾಮಿ ಬ್ರಹ್ಮಾನಂದರು ಅಧ್ಯಕ್ಷರಾದರು. ಸ್ವಾಮಿ ಯೋಗಾನಂದರು ಉಪಾಧ್ಯಕ್ಷರಾದರು. ಬಾಬು ನರೇಂದ್ರನಾಥಮಿತ್ರ ಮಹಾಶಯನು ಕಾರ್ಯದರ್ಶಿಯಾದನು. ಪ್ರತಿ ಭಾನುವಾರವೂ ಎಲ್ಲರೂ ಬಲರಾಮವಸು ಮಹನೀಯನ ಮನೆಯಲ್ಲಿ ಸೇರಿ ಗೀತೆ ಉಪನಿಷತ್ತು ಮೊದಲಾದ ಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಿದ್ದರು. ವ್ಯಾಖ್ಯಾನಗಳೂ ನಡೆಯುತ್ತಿದ್ದುವು. ನಡುನಡುವೆ ಕೀರ್ತನೆಗಳಾಗುತ್ತಿದ್ದುವು. ಸ್ವಯಂ ಸ್ವಾಮಿಜಿಯವರು ಹಾಡಿ ನೆರೆದವರನ್ನು ತಮ್ಮ ಕಿನ್ನರ ಕಂಠದಿಂದ ಸಂತೋಷಗೊಳಿಸುತ್ತಿದ್ದರು.

ಇನ್ನಾದರೂ ಸ್ವಾಮಿಗಳಿಗೆ ಆರೋಗ್ಯ ಸಂಪೂರ್ಣವಾಗಿ ಬಂದಿರಲಿಲ್ಲ. ಚಿಕಿತ್ಸಕರು ಪದೇ ಪದೇ ಹೇಳುತ್ತಿದ್ದರು, ಸ್ಥಳ ಬದಲಾವಣೆ ಮಾಡಬೇಕೆಂದು. ಆದ್ದರಿಂದ ಅವರು ಮೇ ತಿಂಗಳು ೬ನೆಯ ತಾರೀಖಿನ ದಿನ ತಮ್ಮ ಶಿಷ್ಯರೊಡಗೂಡಿ ಹಿಮಾಲಯ ಪ್ರಾಂತಗಳಲ್ಲಿರುವ ಆಲ್ಮೋರಕ್ಕೆ ಹೊರಟರು. ದಾರಿಯಲ್ಲಿ ಲಕ್ನೋ ನಗರದಲ್ಲಿ ಜನಗಳು ಸ್ವಾಮಿಗಳಿಗೆ ಪೆಂಪಿನಿಂದ ಸ್ವಾಗತವಿತ್ತರು. ಅಲ್ಲಿ ಒಂದು ರಾತ್ರಿ ಇದ್ದು ಮುಂದುವರಿದರು. ಆಲ್ಮೋರದಲ್ಲಿ ಸ್ವಾಮಿಗಳಿಗೆ ದೊರೆತ ಸ್ವಾಗತ ಮದರಾಸು ಕಲ್ಕತ್ತ ನಗರಗಳಲ್ಲಿ ದೊರೆತ ಸನ್ಮಾನದಂತೆಯೆ ಇತ್ತು.

ಆಲ್ಮೋರಕ್ಕೆ ಹೋದಮೇಲೆ ಸ್ವಾಮಿಗಳ ಆರೋಗ್ಯ ಹೆಚ್ಚಿತು. ಹಿಮಾಲಯ ಪರ್ವತಗಳ ಸುಂದರಶೀತಳ ನಿಮ್ನೋನ್ನತ ಪ್ರದೇಶಗಳಲ್ಲಿ ತಿರುಗಾಡುವುದು, ಕುದುರೆ ಸವಾರಿ ಮಾಡುವುದು, ಕುಸ್ತಿ ಮಾಡುವುದು ಮೊದಲಾದ

ವ್ಯಾಯಾಮಗಳಿಂದ ಅಸ್ವಸ್ಥತೆ ಪರಾರಿಯಾಯಿತು. ಅಲ್ಲಿಂದ ಅವರು ತಮ್ಮ ಡಾಕ್ಟರಿಗೆ ಬರೆದ ಕಾಗದದಲ್ಲಿ "...ಏನಾದರಾಗಲಿ, ನನಗೀಗ ಭೀಮಬಲ ಬಂದಂತಿದೆ. ಡಾಕ್ಟರೇ, ನೀವು ಬಂದು ನೋಡಬೇಕು, ನಾನು ಶುಭ್ರತುಷಾರಾವೃತ ಶ್ವೇತ ಹಿಮಗಿರಿ ಶೃಂಗಗಳ ಮುಂದೆ ಪದ್ಮಾಸನ ಹಾಕಿಕೊಂಡು ಕುಳಿತು ಉಪನಿಷತ್ತುಗಳಿಂದ 'ನ ತಸ್ಯ ಮೃತ್ಯುಃ ನ ಜರಾ ನ ವ್ಯಾಧಿಃ ಪ್ರಾಪ್ತಂ ಹಿ ಯೋಗಾಗ್ನಿಮಯಂ ಶರೀರಮ್' ಎಂಬ ವಚನವನ್ನು ಘೋಷಿಸುತ್ತ ಧ್ಯಾನ ಮಾಡುವ ಮಹಿಮಾಮಯ ದೃಶ್ಯವನ್ನು!" ಎಂದು ಹೇಳಿದ್ದಾರೆ.

ಸ್ವಾಮಿಜಿ ಆಲ್ಮೋರದಲ್ಲಿದ್ದಾಗ ಪಂಜಾಬು ಮತ್ತು ಕಾಶ್ಮೀರ ಪ್ರಾಂತಗಳಿಂದ ಆಹ್ವಾನ ಪತ್ರಗಳು ಬರತೊಡಗಿದುವು. ಆದ್ದರಿಂದ ಅವರು ಪರ್ವತ ಪ್ರದೇಶಗಳಿಂದ ಕೆಳಗಿಳಿಯಬೇಕಾಯಿತು. ದಾರಿಯಲ್ಲಿ ನಗರ ನಗರಗಳಲ್ಲಿಯೂ ಅಭಿನಂದನೆಗಳನ್ನು ಸ್ವೀಕರಿಸುತ್ತಾ ಅಂಬಾಲಕ್ಕೆ ಬಂದು ಅಲ್ಲಿ ಒಂದು ವಾರವಿದ್ದರು. ಸಿಮ್ಲಾದಿಂದ ಸೇವಿಯರ್ ದಂಪತಿಗಳೂ ಬಂದು ಅವರನ್ನು ಸೇರಿದರು. ಅಲ್ಲಿ ದಿನದಿನವೂ ಧರ್ಮಚರ್ಚೆಗಳಾಗುತ್ತಿದ್ದುವು. ಮಹಮ್ಮದೀಯರು, ಬ್ರಾಹ್ಮ ಸಮಾಜದವರು, ಆರ್ಯ ಸಮಾಜಿಗಳು, ಹಿಂದುಗಳು ಎಲ್ಲರೂ ನೆರೆಯುತ್ತಿದ್ದರು.

ಅಂಬಾಲದಿಂದ ಸ್ವಾಮಿಗಳು ಅಮೃತಸರಕ್ಕೆ ಹೋದರು. ಅಲ್ಲಿಯೂ ಸುತ್ತಣ ನಗರಗಳಲ್ಲಿಯೂ ಭಾಷಣಗಳನ್ನು ಕೊಟ್ಟು ಪೂರೈಸಿ, ಕಾಶ್ಮೀರಾಭಿಮುಖವಾದರು. ಯಾತ್ರಿಕವೃಂದ ದೋಣಿಯನ್ನು ಹತ್ತಿ ಮನೋಹರ ಶ್ರೀನಗರಕ್ಕೆ ಹೊರಟಿತು. ನಾವೆ ಆ ಸುಂದರ ಪುರವನ್ನು ತಲುಪಿದಾಗ ಅನೇಕ ಶ್ರೀನಗರ ನಿವಾಸಿಗಳು ಆಚಾರ್ಯದೇವರನ್ನು ಬಹುಸಡಗರದಿಂದ ಎದುರುಗೊಂಡರು. ಮೂರು ದಿನಗಳಾದ ಮೇಲೆ ಕಾಶ್ಮೀರದ ಮಹಾರಾಜರು ಸ್ವಾಮಿಗಳನ್ನು ಬರಮಾಡಿಕೊಂಡು ಅತ್ಯಾದರದಿಂದ ಅತಿಥಿ ಸತ್ಕಾರ ಮಾಡಿದರು. ಸ್ವಾಮಿಗಳು ಕಾಶ್ಮೀರ ದೇಶದ ಸಾಧುಗಳು, ಅಧಿಕಾರಿಗಳು, ನಾಗರಿಕರು ಮೊದಲಾದವರೊಡನೆ ದರ್ಮಚರ್ಚೆ ಮಾಡಿ ತಮ್ಮ ಸಂದೇಶವನ್ನು ಹರಡಿದರು.

ಕೆಲವು ದಿನಗಳಾದ ಮೇಲೆ ಸ್ವಾಮಿಜಿಯವರನ್ನು ರಾವಲ್‌ಪಿಂಡಿಯಲ್ಲಿ ಸಂದರ್ಶಿಸುವೆವು. ಅಲ್ಲಿಯ ಪುರಜನರು ಅವರಿಗಿತ್ತ ಸ್ವಾಗತ ಮಹೋತ್ಸವವು ದರ್ಶನೀಯವಾಗಿತ್ತು. ಅವರ ನೂತನ ಮಂಗಳ ಸಂದೇಶವಾಣಿಯನ್ನು ಕೇಳಿ ಜನರು ಜಾಗ್ರತರಾದರು. ಅಲ್ಲಿಂದ ಯುಗಪ್ರವರ್ತಕನು ಜಮ್ಮೂ ನಗರದ ಮುಖಾಂತರ ಲಾಹೋರಿಗೆ ಬಂದನು. ಅಲ್ಲಿ ನಗರ ನಿವಾಸಿಗಳ ಸನ್ಮಾನವನ್ನು ಕೈಗೊಂಡು, "ನಮಗಿರುವ ಕರ್ತವ್ಯ" ಎಂಬ ಭಾಷಣ ಮಾಡಿದರು. ಮರುದಿವಸ ಲಾಹೋರಿನ ಕಾಲೇಜಿನಲ್ಲಿ ವೇದಾಂತ ವಿಚಾರವಾಗಿ ಉಪನ್ಯಾಸ ಮಾಡಿದರು. ಆ ಉಪನ್ಯಾಸದ ಮಹಿಮೆಯಿಂದಲೆ ಲಾಹೋರ್ ಕಾಲೇಜಿನಲ್ಲಿ ಗಣಿತಶಾಸ್ತ್ರದ ಅಧ್ಯಾಪಕರಾಗಿದ್ದ ಶ್ರೀಯುತ ತೀರ್ಥರಾಮ ಗೋಸ್ವಾಮಿಯವರು ಕೆಲವು ದಿನಗಳಲ್ಲಿಯೆ ರಾಮತೀರ್ಥರಾದರು. ವಿವೇಕಾನಂದರಂತೆಯೇ ಅವರೂ ಅಮೆರಿಕಾ ಮೊದಲಾದ ಪರದೇಶಗಳಿಗೆ ಹೋಗಿ ವೇದಾಂತ ಮತಬೋಧನೆ ಮಾಡಿ ಸ್ವದೇಶಕ್ಕೆ ಹಿಂತಿರುಗಿದರು. ಆದರೆ ದೇಶದ ದೌರ್ಭಾಗ್ಯದಿಂದ ಸ್ವಲ್ಪಕಾಲದಲ್ಲಿಯೇ ಜಗತ್ತಿನ ಕರ್ಮರಂಗದಿಂದ ಕಣ್ಮರೆಯಾದರು. ಸ್ವಾಮಿ ರಾಮತೀರ್ಥರಿಗೆ ವಿವೇಕಾನಂದರಲ್ಲಿ ಬಹಳ ಗೌರವ ಭಕ್ತಿಗಳಿದ್ದುವು. ಅಂತೆಯೆ ಆರ್ಯಸಮಾಜದ ಸ್ವಾಮಿಗಳಾದ ಅಚ್ಯುತಾನಂದ, ಪ್ರಕಾಶಾನಂದರಿಗೂ ಸ್ವಾಮಿಜಿ ಪ್ರಿಯತಮ ಸ್ನೇಹಿತರಾಗಿದ್ದರು.

ಡೆಹರಾಡೂನಿನಲ್ಲಿ ಆರೋಗ್ಯಲಾಭಕ್ಕಾಗಿ ಕೆಲವು ಕಾಲ ನಿಂತು, ಕೇಂದ್ರ ಮಹಾರಾಜರ ಆಹ್ವಾನವನ್ನು ಸ್ವೀಕರಿಸಿ ಸ್ವಾಮಿಗಳು ವೀರಭೂಮಿ ರಾಜಪುತ್ರ ಸ್ಥಾನಾಭಿಮುಖವಾಗಿ ಪ್ರಯಾಣ ಮಾಡಿದರು. ದೆಹಲಿ, ಆಗ್ರಾಗಳನ್ನು ಹಿಂದಿಕ್ಕಿ ಆಳ್ವಾರ್ ಸಂಸ್ಥಾನಕ್ಕೆ ಹೋದರು. ಪೂರ್ವ ಪರಿಚಿತವಾದ ಆ ನಗರ ಸ್ವಾಮಿಗಳನ್ನು ಆನಂದದಿಂದ ಅಪ್ಪಿತು. ಅಲ್ಲಿ ನಡೆದ ಒಂದು ಹೃದಯವಿದ್ರಾವಕವಾದ ಸಂಗತಿಯನ್ನು ಹೇಳದಿರುವುದು ಉಚಿತವಲ್ಲ. ಸ್ವಾಮಿಗಳು ರಾಜರ ಅತಿಥಿಯಾಗಿದ್ದರು. ಒಂದು ದಿನ ಬಡ ಮುದುಕಿಯೊಬ್ಬಳು ಅವರ ಬಳಿಗೆ ಬಂದು ತನ್ನ ಮನೆಗೆ ಊಟಕ್ಕೆ ಬಂದು ತನ್ನನ್ನು ಕೃತಾರ್ಥೆಯನ್ನಾಗಿ ಮಾಡಬೇಕೆಂದು ಕೇಳಿಕೊಂಡಳು. ಸ್ವಾಮಿಗಳು ಹಿಂದೆ ಅಜ್ಞಾತರಾಗಿ ಆಳ್ವಾರಿಗೆ ಬಂದಿದ್ದಾಗ ಆ ಮುದುಕಿ ಅತಿಥಿ ಸತ್ಕಾರ ಮಾಡಿದ್ದಳು. ಆದ್ದರಿಂದ ಆಕೆಯಲ್ಲಿ ಅವರಿಗೆ ಮಾತೃಭಾವವಿತ್ತು; ಬಹಳ ಸಲಿಗೆಯಿತ್ತು.

ಸ್ವಾಮಿಗಳು ಅಜ್ಜಿಯನ್ನು ಕುರಿತು "ಅಮ್ಮಾ, ನನಗೆ ದಪ್ಪ ದಪ್ಪ ಚಪಾತಿಗಳು ಬೇಕು. ಅಂದು ನಿನ್ನ ಮನೆಯಲ್ಲಿ ಕೊಟ್ಟಿದ್ದೆಯಲ್ಲಾ ಅಂತಹ ಚಪಾತಿಗಳು!" ಎಂದರು.

ಮುದುಕಿಯ ಎದೆ ಮುದದಿಂದ ನಲಿಯಿತು. ಹರುಷದ ಕಂಬನಿಗಳನ್ನು ಸುರಿಸುತ್ತ ಮನೆಗೆ ಹೋಗಿ ಜಗದ್ವಿಖ್ಯಾತ ಯುಗಪ್ರವರ್ತಕ ಯೋಗಿ ಸ್ವಾಮಿ ವಿವೇಕಾನಂದರಿಗಾಗಿ ತನ್ನ ಕೈಯಿಂದಲೆ ಚಪಾತಿಗಳನ್ನು ಮಾಡಿದಳು. ಸ್ವಾಮಿಗಳು ತಮ್ಮ ಕೆಲವು ಶಿಷ್ಯರೊಡನೆ ಆಕೆಯ ಬಡ ಜೋಪಡಿಗೆ ಹೋದರು.

ಮುದುಕಿ ಊಟವನ್ನು ಬಡಿಸುತ್ತಾ "ನಾನು ಬಡವೆ, ಶ್ರೀಮಂತರ ಭಕ್ಷ್ಯ, ಭೋಜ್ಯವನ್ನು ನಾನೆಲ್ಲಿಂದ ತರಲಿ? ನೀನೇ ಹೇಳು ಮಗೂ!" ಎಂದಳು.

ಸ್ವಾಮಿಗಳು ಅಜ್ಜಿ ಕೊಟ್ಟ ಆಹಾರವನ್ನು ಅಮರಲೋಕದ ಅಮೃತವೆಂದೇ ಎಣಿಸಿ ಭುಂಜಿಸುತ್ತ ತಮ್ಮ ಶಿಷ್ಯರನ್ನು ಕುರಿತು "ನೋಡಿ, ಈ ನನ್ನ ಅಜ್ಜಿಗೆ ನನ್ನ ಮೇಲೆ ಎಷ್ಟು ವಾತ್ಸಲ್ಯ! ಆಕೆಯ ಕೈಮುಟ್ಟಿದ ಚಪಾತಿಗಳು ಎಷ್ಟು ಸಾತ್ವಿಕವಾಗಿವೆ!" ಎಂದರು.

ಅಲ್ಲಿಂದ ಹೊರಟು ಬರುವಾಗ ಸ್ವಾಮಿಗಳು ಮುದುಕಿಗೆ ಗೊತ್ತಾಗದಂತೆ ಆಕೆಯ ಮಗನ ಕೈಯಲ್ಲಿ ಒಂದು ನೂರು ರೂಪಾಯಿಗಳ ನೋಟನ್ನು ಕೊಟ್ಟು ಬಂದರಂತೆ.

ಖೇತ್ರಿಯಲ್ಲಿ ಸ್ವಾಮಿಗಳಿಗೆ ಆದ ಸನ್ಮಾನ ಅನನ್ಯ ಸಾಧಾರಣವಾಗಿತ್ತು. ದಾರಿಯುದ್ದಕ್ಕೂ ಬಾವುಟಗಳು ತೋರಣಗಳು ಕಲಶಗಳು ಹಗಲು ದೀವಿಗೆಗಳು ಬೆಳ್ಗೊಡೆಗಳು ರಂಜಿಸಿದುವು. ಜನರು ಆನಂದ ಕೋಲಾಹಲದಿಂದ ಪ್ರಮತ್ತರಾಗಿದ್ದರು. ಮಹಾರಾಜರೇ ಸ್ವಾಮಿಗಳನ್ನು ವೈಭವದಿಂದ ತಮ್ಮ ದಿವ್ಯ ಭವನಕ್ಕೆ ಕರೆದೊಯ್ದು ಸತ್ಕರಿಸಿದರು. ಮರುದಿನ ಸ್ವಾಮಿಗಳು ವೇದಾಂತ ವಿಚಾರವಾಗಿ ಮಾತನಾಡಿದರು. ಮಹಾರಾಜರೇ ಸ್ವಯಂ ಅಧ್ಯಕ್ಷರಾಗಿ ನೆರೆದ ಜನರಿಗೆ ಸ್ವಾಮಿಗಳ ಪರಿಚಯ ಮಾಡಿಕೊಟ್ಟರು. ತರುವಾಯ ಸ್ವಾಮಿಜಿ "ಏಕಂ ಸತ್ ವಿಪ್ರಾ ಬಹುಧಾ ವದಂತಿ" ಎಂಬುದರ ಮೇಲೆ ಒಂದೂವರೆ ಗಂಟೆಯ ಹೊತ್ತು ಸುಲಲಿತವಾಗಿ ಭಾಷಣ ಮಾಡಿದರು. ಅಲ್ಲಿ ಕೆಲವು ದಿನಗಳು ಕಳೆದುವು.

ಸ್ವಾಮಿಗಳು ಹೊರಡುವಾಗ ಮಹಾರಾಜರೆ ಅವರೊಡನೆ ಜಯಪುರದವರೆಗೆ ಬಂದು ಬೀಳ್ಕೊಟ್ಟರು. ಸ್ವಾಮಿಜಿ ಕೃಷ್ಣಘಡ ಅಜ್ಮೀರ್ ಜೋಧಪುರಗಳ ಮಾರ್ಗವಾಗಿ ಎಲ್ಲೆಲ್ಲಿಯೂ ವೇದಾಂತ ಸಂದೇಶವನ್ನು ಸಾರುತ್ತ ಪುನಃ ಕಲ್ಕತ್ತಾಕ್ಕೆ ಬಂದರು.

ಬಹುದಿನಗಳಿಂದಲೂ ಅವರ ಮನಸ್ಸಿನಲ್ಲಿ ಭಾಗೀರಥಿಯ ತೀರದಲ್ಲಿ ಒಂದು ಚಿರಸ್ಥಾಯಿಯಾದ ಮಠ ನಿರ್ಮಾಣ ಮಾಡಬೇಕೆಂಬ ಸಂಕಲ್ಪವಿತ್ತು. ಅದಕ್ಕಾಗಿ ಗಂಗೆಯ ಪಶ್ಚಿಮ ತೀರದಲ್ಲಿರುವ ಬೇಲೂರು ಗ್ರಾಮದಲ್ಲಿ ಒಂದು ಉಪಯುಕ್ತ ಸ್ಥಾನವನ್ನು ಗೊತ್ತುಮಾಡಿ, ಮಿಸ್ ಮುಲ್ಲರ್ ಎಂಬಾಕೆ ಕೊಟ್ಟ ಹಣದಿಂದ ಅದನ್ನು ಕೊಂಡುಕೊಂಡರು. ಒಂದು ವರ್ಷದೊಳಗಾಗಿ ಮಠ ಮೇಲೆದ್ದಿತು.

ಈ ಮಧ್ಯೆ ಸ್ವಾಮಿ ಶಾರದಾನಂದರು ಅಮೆರಿಕಾದಿಂದ ಬಂದರು. ಸ್ವಾಮಿ ಶಿವಾನಂದರು ಸಿಂಹಳದಲ್ಲಿ ವೇದಾಂತ ಪ್ರಚಾರ ಮಾಡಿ ಹಿಂತಿರುಗಿದರು. ದಿನಜಪುರದ ಕ್ಷಾಮಕಾರ್ಯವನ್ನು ಮುಗಿಸಿ ಸ್ವಾಮಿ ತ್ರಿಗುಣಾತೀತರೂ ಬಂದು ಸೋದರರನ್ನು ಸೇರಿದರು.

ಕೆಲವು ದಿನಗಳಲ್ಲಿ ಶ್ರೀರಾಮಕೃಷ್ಣರ ಜಯಂತ್ಯುತ್ಸವ ಸಮಾಗತವಾಯಿತು. ಆ ಮಹೋತ್ಸವದಲ್ಲಿ ಸ್ವಾಮಿಗಳು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವರಲ್ಲದ ತಮ್ಮ ಶಿಷ್ಯರಿಗೆ ಮತ್ತು ಭಕ್ತರಿಗೆ ಯಜ್ಞೋಪವೀತವನ್ನು ಸ್ವತಃ ತಾವೇ ಸ್ವಯಂ ಶಾಸ್ತ್ರೀಯವಾಗಿ ದಾನಮಾಡಿದರು; ಗಾಯತ್ರಿ ಮಂತ್ರವನ್ನು ಉಪದೇಶಿಸಿದರು. ಪ್ರಾಚೀನ ಸಂಪ್ರದಾಯದವರ ಪ್ರತಿಭಟನೆಗೆ ಸ್ವಾಮಿಗಳು ಅಳುಕಲಿಲ್ಲ. ಮಾನವರೆಲ್ಲರೂ ದೇವರ ಮಕ್ಕಳು. ಎಲ್ಲರಲ್ಲಿಯೂ ನಾರಾಯಣನಿದ್ದಾನೆ. ಅಲ್ಲದೆ ದ್ವಿಜರಲ್ಲದವರನ್ನು ದ್ವಿಜರನ್ನಾಗಿ ಮಾಡಿ ಮೇಲೆತ್ತುವುದು ಆಚಾರ್ಯ ವರ್ಗದವರ ಕರ್ತವ್ಯ. ಎಲ್ಲರನ್ನೂ ಬ್ರಾಹ್ಮಣ ಸ್ಥಾನಕ್ಕೆ ತರಬೇಕು. ಹಾಗೆ ಮಾಡದಿದ್ದರೆ ಸ್ವಲ್ಪ ಕಾಲದಲ್ಲಿಯೆ ಶೂದ್ರಶಕ್ತಿ ಯುಗವನ್ನಾಳುವುದು. ತತ್ತ್ವತಃ ಶೂದ್ರ ಶಕ್ತಿಗಿಂತಲೂ ಬ್ರಾಹ್ಮಣಶಕ್ತಿ ಮೇಲಾದುದು. ಆದ್ದರಿಂದ ಉತ್ತಮತರ ಶಕ್ತಿ ದೇಶದಲ್ಲಿ ನೆಲೆಗೊಳ್ಳದಿದ್ದರೆ ಕೆಡುಕಾಗುವುದು. ಇದನ್ನರಿತೆ ಹಿಂದೆ ಬಂದ ಆಚಾರ್ಯರೂ ಮಹಾಪುರುಷರೂ ಬ್ರಾಹ್ಮಣರಲ್ಲದವರನ್ನೂ ಶಿಷ್ಯರನ್ನಾಗಿ ಸ್ವೀಕರಿಸಿ ದ್ವಿಜತ್ವವನ್ನು ದಯಪಾಲಿಸಿದರು.

ಜನವರಿ ತಿಂಗಳಲ್ಲಿ ಉತ್ತರಭಾಗದಲ್ಲಿ ಮಿಸ್ ಮಾರ್ಗರೆಟ್ ನೊಬಲ್ ಎಂಬಾಕೆ ಪಶ್ಚಾತ್ಯ ಸಮಾಜದ ಸಕಲ ಸಂಬಂಧಗಳನ್ನೂ ಛೇದಿಸಿ ಸ್ವಾಮಿಗಳ ಆಹ್ವಾನ ಪ್ರಕಾರ ಭರತಖಂಡಕ್ಕೆ ಬಂದರು. ಕೆಲವು ದಿನಗಳಾದ ಮೇಲೆ ಆ ಮಹಿಳೆಗೆ ಸ್ವಾಮಿಜಿ ಬ್ರಹ್ಮಚರ್ಯ ದೀಕ್ಷೆಯನ್ನು ಕೊಟ್ಟು ಬ್ರಹ್ಮಚಾರಿಣಿಯನ್ನಾಗಿ ಮಾಡಿದರು. ಅಂದಿನಿಂದ ಆಕೆಯ ಹೆಸರು "ಸೋದರಿ ನಿವೇದಿತಾ" ಎಂದಾಯಿತು. ಸೋದರಿ ನಿವೇದಿತಾ ಅಲ್ಲಲ್ಲಿ ಆದರ್ಶ ಬಾಲಿಕಾ ವಿದ್ಯಾಲಯಗಳನ್ನು ಸ್ಥಾಪಿಸಿ ಭರತಖಂಡದ ಸ್ತ್ರೀಯರ ಏಳಿಗೆಗೆ ಮುನ್ನುಡಿಯನ್ನು ಬರೆದರು. ಭಾರತೀಯ ಸಂಸ್ಕೃತಿಯ ವಿಚಾರವಾಗಿ ಅನೇಕಾನೇಕ ಉದ್ಗ್ರಂಥಗಳನ್ನು ಬರೆದು ನಮ್ಮ ದೇಶದ ಕೀರ್ತಿಯನ್ನು ಹೊರಗಡೆ ಬೆಳಗಿದರು.

ಇದಾದ ಎರಡು ತಿಂಗಳವರೆಗೆ ಮಠದ ತರುಣ ಸಂನ್ಯಾಸಿಗಳಿಗೂ ಬ್ರಹ್ಮಚಾರಿಗಳಿಗೂ ಐರೋಪ್ಯ ಶಿಷ್ಯರಿಗೂ ಸ್ವಯಂ ಸ್ವಾಮಿಜಿಯೇ ಶಿಕ್ಷಾಪ್ರದಾನ ಮಾಡಲು ತೊಡಗಿದರು. ಆದರೆ ಪ್ರಬಲ ಶಾರೀರಿಕ ಅಸ್ವಸ್ಥತೆಯ ದೆಸೆಯಿಂದ ವಾಯು

ಪರಿವರ್ತನೆಗಾಗಿ ಅವರು ಡಾರ್ಜಿಲಿಂಗಿಗೆ ಹೋಗಬೇಕಾಯಿತು. ಅಲ್ಲಿ ಮೆಲ್ಲಮೆಲ್ಲನೆ ರೋಗ ಗುಣಮುಖವಾಗುತ್ತಿತ್ತು. ಅಷ್ಟರಲ್ಲಿ ಕಲ್ಕತ್ತಾ ನಗರದಲ್ಲಿ ಪ್ಲೇಗು ರೋಗ ಭೀಷಣಾಕಾರವನ್ನು ತಾಳಿದೆ ಎಂಬ ಸುದ್ದಿ ಅವರ ಕಿವಿಗೆ ಬಿತ್ತು. ದೀನ ಬಂಧು ಮಾನವಮಿತ್ರನು ಹೇಗೆ ತಾನೆ ವಿಶ್ರಾಂತಿ ಸುಖವನ್ನು ಅನುಭವಿಸುವನು? ಸ್ವಾಮಿಗಳು ಬೇಲೂರು ಮಠಕ್ಕೆ ಹಿಂತಿರುಗಿ ಬಂದು ತರುಣ ಸಂನ್ಯಾಸಿ ಮತ್ತು ಬ್ರಹ್ಮಚಾರಿಗಳಿಗೆ ರೋಗಿಗಳ ಸೇವಾಕಾರ್ಯವನ್ನು ಆರಂಭಿಸಲು ಹೇಳಿದರು.

ಅದನ್ನು ಕೇಳಿ ಸೋದರ ಸಂನ್ಯಾಸಿಗಳೊಬ್ಬರು "ಸ್ವಾಮಿಜಿ, ಸೇವಾಕಾರ್ಯಕ್ಕೆ ಬೇಕಾಗುವ ಹಣ ಬರುವುದೆಲ್ಲಿಂದ?" ಎಂದು ಕೇಳಿದರು.

ಸ್ವಾಮಿಗಳೂ ಸ್ವಲ್ಪವೂ ತಡವದೆ "ಎಲ್ಲಿಂದ? ಅದೇಕೆ? ಅವಶ್ಯಬಿದ್ದರೆ ಹೊಸದಾಗಿ ಕೊಂಡಕೊಂಡ ಮಠದ ಭೂಮಿಯನ್ನೇ ಮಾರುವುದು. ಸಾವಿರಾರು ಜನರು ನಮ್ಮ ಕಣ್ಣಿನ ಮುಂದೆಯೆ ನರಳುವಾಗ ನಮಗೆ ಮಠದಲ್ಲಿ ಸುಖ ವಾಸವೇನು? ನಾವು ಸಂನ್ಯಾಸಿಗಳು; ಮರದಡಿಯಲ್ಲಿ ಮಲಗಿ, ತಿರುಪೆಯಿಂದ ಹೊಟ್ಟೆ ಹೊರೆದುಕೊಳ್ಳಲು ಸಿದ್ಧರಾಗಬೇಕು" ಎಂದು ದೃಢತರ ವಾಣಿಯಿಂದ ನುಡಿದರು.

ಆದರೆ ಅದೃಷ್ಟವಶದಿಂದ ಮಠವನ್ನು ಮಾರುವ ಕಾಲ ಬರಲಿಲ್ಲ. ನಾಲ್ಕು ದಿಕ್ಕುಗಳಿಂದಲೂ ಧನಸಹಾಯ ಬಂದೊದಗಿತು. ನಗರದ ಬಳಿ ಒಂದು ವಿಶಾಲವಾದ ಸ್ಥಳವನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿ ಗುಡಿಸಿಲುಗಳನ್ನು ಹಾಕಿದರು. ಜಾತಿವರ್ಣ ಭೇದವಿಲ್ಲದೆ ಪ್ಲೇಗು ರೋಗಗ್ರಸ್ತರಾದ ಜನಗಳನ್ನು ಅಲ್ಲಿಗೆ ಒಯ್ದು ಕರ್ಮಯೋಗಿಗಳಾದ ತರುಣ ಸಂನ್ಯಾಸಿಗಳು ಹಿರಿಯ ಸಾಧುಗಳ ಮೇಲ್ವಿಚಾರಣೆಯಲ್ಲಿ ಅವರಿಗೆ ಶುಶ್ರೂಷೆ ಮಾಡತೊಡಗಿದರು. ಮತ್ತೆ ಕೆಲವರು ಗಲ್ಲಿಗಳಲ್ಲಿಯೂ ಮನೆಮನೆಗಳಲ್ಲಿಯೂ ತಿರುಗಿ ಜನಗಳಿಗೆ ಕ್ರಿಮಿನಾಷಕ ಔಷಧಿಗಳನ್ನು ಕೊಟ್ಟು ನೈರ್ಮಲ್ಯಬೋಧನೆ ಮಾಡಿದರು.

ನಗರದಲ್ಲಿ ರೋಗ ಸಂಪೂರ್ಣವಾಗಿ ಮಾಯವಾಗುವವರೆಗೂ ಸ್ವಾಮಿಗಳು ಅಲ್ಲಿಯೇ ಇದ್ದು, ತರುವಾಯ ಕೆಲವು ಜನ ಪ್ರಾಚ್ಯ ಪಾಶ್ಚಾತ್ಯ ಶಿಷ್ಯಗಣಗಳೊಡನೆ ಹಿಮಾಲಯ ಪ್ರಾಂತ್ಯದಲ್ಲಿರುವ ನೈನಿಟಾಲಿಗೆ ಹೋದರು. ಅಲ್ಲಿ ತಮ್ಮ ಪಾಶ್ಚಾತ್ಯ ಶಿಷ್ಯರಿಗೆ ಭಾರತೀಯ ಸಂಸ್ಕೃತಿಯ ವಿಚಾರವಾಗಿ ನಿತ್ಯವೂ ಬೋಧಿಸಿ ಅವರನ್ನು ಸೇವಾಕಾರ್ಯಕ್ಕೆ ತರಬಿಯತ್ತು ಮಾಡಿದರು. ಸ್ವಾಮಿಗಳು ಶಿಕ್ಷಕರಲ್ಲಿ ಅತುಲನೀಯವಾಗಿದ್ದರು. ಭಿನ್ನದೃಷ್ಟಿಯ ಯೂರೋಪೀಯ ಶಿಷ್ಯರಲ್ಲಿ ಭಾರತೀಯತೆ ಮೂಡುವಂತೆ ಮಾಡಿದುದು ಅಸಾಧಾರಣ ಕಾರ್ಯವೆಂದು ಹೇಳಬೇಕು. ನೈನಿಟಾಲಿನಲ್ಲಿದ್ದಾಗ ಸ್ವಾಮಿಗಳು ಅನುದಿನವೂ ಭರತಖಂಡದ ಕಲ್ಯಾಣವನ್ನು ಕುರಿತು ಧ್ಯಾನಿಸುತ್ತಿದ್ದರು. ಶಿಷ್ಯರ ಹೃದಯದಲ್ಲಿ ಸೇವಾಧರ್ಮವನ್ನು ತುಂಬುತ್ತಿದ್ದರು. ಅದನ್ನು ಕುರಿತು ಸೋದರಿ ನಿವೇದಿತಾ ಹೀಗೆಂದು ಬರೆದಿದ್ದಾರೆ: "ಸ್ವಾಮಿಜಿ ಸಂನ್ಯಾಸಿಯಾಗಿ ಪ್ರಪಂಚವನ್ನು ತ್ಯಜಿಸಿದ್ದರೂ ಭರತಭೂಮಿ ಅವರ ಹೃತ್ಕಮಲ ಕೋರಕವಾಗಿತ್ತು. ಭರತಮಾತೆ ಅವರ ಪ್ರೀತಿಮೂರ್ತಿಯಾಗಿದ್ದಳು. ಆಕೆಗಾಗಿ ಎದೆ ನೋಯುತ್ತಿದ್ದರು, ಅಳುತ್ತಿದ್ದರು. ಆಕೆಗಾಗಿಯೇ ಮಡಿದರು. ಅವರ

ಒಂದೊಂದು ರಕ್ತನಾಳಗಳಲ್ಲಿಯೂ ಭರತಮಾತೆಯ ಭಕ್ತಿ ಸ್ಪಂದಿಸುತ್ತಿತ್ತು. ಆ ಭಕ್ತಿಯೇ ನಾಳ ನಾಳಗಳಲ್ಲಿಯೂ ನೆತ್ತರಾಗಿ ಹರಿಯುತ್ತಿತ್ತು. ಹೆಚ್ಚೇನು? ದೇಶಭಕ್ತಿ ಎಂಬುದು ಅವರ ಬಾಳಿನ ಬಾಳಾಗಿತ್ತು, ಉಸಿರಿನ ಉಸಿರಾಗಿತ್ತು."

ನೈನಿಟಾಲಿನಿಂದ ಸ್ವಾಮಿಗಳು ಅಲ್ಮೋರಾಕ್ಕೆ ಬಂದರು. ಅಲ್ಲಿಯೂ ದಿನ ದಿನ ಶಿಷ್ಯರಿಗೆ ವಿಶ್ವತೋಮುಖವಾದ ಜ್ಞಾನವನ್ನು ಹೃದಯಂಗಮವಾಗಿ ನೀಡಿದರು. ಕೆಲವು ಸಾರಿ ತಾವೊಬ್ಬರೇ ಹಿಮಗಿರಿಗಳ ಸುಂದರ ನೀರವ ನಿಬಿಡಾರಣ್ಯಗಳಲ್ಲಿ ಧ್ಯಾನ ಮಾಡಲು ಹೋಗುತ್ತಿದ್ದರು. ಒಂದು ದಿನ ಅಡವಿಯಿಂದ ಸಂಜೆಯ ಸಮಯದಲ್ಲಿ ಹಿಂದಿರುಗಿ ಬಂದು ಪವಾಹಾರಿ ಬಾಬ ಮತ್ತು ಗುಡ್ವಿನ್‌ರವರ ನಿಧನವಾರ್ತೆಯನ್ನು ಕೇಳಿ ಬಹಳ ದುಃಖಿಸಿದರು. ಬಹಳ ಹೊತ್ತು ಒಂದು ಕಡೆ ಕುಳಿತು ಚಿಂತಾಮಗ್ನರಾದರು. ಎಷ್ಟು ಪ್ರಯತ್ನಪಟ್ಟರೂ ತಮ್ಮ ಪ್ರಿಯತಮ ಶಿಷ್ಯ ಗುಡ್ವಿನ್‌ರವರ ಚಿತ್ರ ಅವರೆದುರು ಸುಳಿಸುಳಿದು ಬರುತ್ತಿತ್ತು.

ಕೆಲವು ದಿನ ಕಳೆದ ಮೇಲೆ ಸ್ವಾಮಿಗಳು ಪುನಃ ಕಾಶ್ಮೀರಾಭಿಮುಖವಾಗಿ ಹೊರಟರು. ಹಾದಿಯಲ್ಲಿ ಗಗನಚುಂಬಿತ ಪೀತದಾರು ದೇವದಾರು ವೃಕ್ಷರಾಜಿಗಳ ಮನೋಹರ ದೃಶ್ಯ ಸಮೂಹಗಳನ್ನು ನೋಡುತ್ತಾ ನಡುನಡುವೆ "ಅಸತೋ ಮಾ ಸದ್ಗಮಯ, ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂ ಗಮಯ" ಮೊದಲಾದ ವೇದಮಂತ್ರಗಳನ್ನು ಹಾಡುತ್ತ ಹಾಡುತ್ತ ರಾವಲ್‌ಪಿಂಡಿಗೆ ಬಂದು, ಅಲ್ಲಿಂದ ಶ್ರೀನಗರಕ್ಕೆ ಹೋದರು. ಅಲ್ಲಿ ಕೆಲವು ದಿನಗಳು ಏಕಾಂತವಾಸವಾಗಿದ್ದುಕೊಂಡು ಧ್ಯಾನಮಗ್ನರಾಗಬೇಕೆಂದು ಅವರಿಗೆ ಮನಸ್ಸಾಯಿತು. ಕೂಡಲೆ ಹಿಂದುಮುಂದೆ ನೋಡದೆ ತಮ್ಮ ಶಿಷ್ಯರನ್ನು ಬಿಟ್ಟು ವನಗಳಲ್ಲಿ ಕಣ್ಮರೆಯಾದರು. ಅವರು ಹಿಂದಿರುಗಿದುದು ಒಂದು ವಾರದ ಮೇಲೆ!

ಸ್ವಾಮಿಗಳು ಕೆಲವು ಸಾರಿ ಸಂಪೂರ್ಣವಾಗಿ ಸಂಕಲ್ಪ ವಿವರ್ಜಿತ ಸಂನ್ಯಾಸಿಯಾಗಿಬಿಡುತ್ತಿದ್ದರು. ಅವರು ಮುಂದೇನು ಮಾಡುವರು? ಎಲ್ಲಿಗೆ ಹೋಗುವರು? ಎಂಬುದೇ ಶಿಷ್ಯರಿಗೆ ತಿಳಿಯುತ್ತಿರಲಿಲ್ಲ. ಸೋದರಿ ನಿವೇದಿತೆ ಹೀಗೆಂದು ಬರೆದಿದ್ದಾರೆ: "ಅವರಲ್ಲಿ ಈ ಗೊತ್ತುಗುರಿಯಿಲ್ಲದಿರುವಿಕೆ ಆಕಸ್ಮಿಕವಾದ ಗುಣವಾಗಿರಲಿಲ್ಲ. ಒಂದು ಸಾರಿ ಅವರು ತಾವಾಗಿಯೆ ನನಗೆ ತಂದು ತೋರಿಸಿದ ಒಂದು ಕಾಗದದ ವಿಚಾರದಲ್ಲಿ ನಾನಿತ್ತ ಪ್ರಾಪಂಚಿಕ ಬುದ್ಧಿವಾದವನ್ನು ಕೇಳಿ ಕನಲಿ ಜುಗುಪ್ಸೆಯಿಂದ ನನ್ನ ಮೇಲೆ ತಿರುಗಿಬಿದ್ದು 'ಕ್ರಮ! ಯಾವಾಗಲೂ ಕ್ರಮ! ಅದಕ್ಕಾಗಿಯೆ ನೀವು ಪಾಶ್ಚಾತ್ಯರು ಒಂದು ಮತವನ್ನಾದರೂ ಸೃಷ್ಟಿಸಲಾರಿರಿ! ನಿಮ್ಮಲ್ಲಿ ಯಾರಾದರೂ ಮತಗಳನ್ನು ಸೃಷ್ಟಿಸಿದ್ದರೆ ಅವರು ಕ್ಯಾಥೋಲಿಕ್ ಸಾಧುಗಳಾಗಿರಬೇಕು. ಅವರು ಕಾರ್ಯಕ್ರಮಕ್ಕೆ ಗುಲಾಮರಾಗಿರಲಿಲ್ಲ. ಕ್ರಮದಾಸರಿಂದ ಎಂದಿಗೂ ಎಂದೆಂದಿಗೂ ಧರ್ಮ ಪ್ರಚಾರವಾಗಿಲ್ಲ' ಎಂದು ನುಡಿದುದನ್ನು ನಾನೆಂದಿಗೂ ಮರೆಯಲಾರೆ."

ಯಾತ್ರಿಕರು ನಾನಾ ತೀರ್ಥಗಳನ್ನು ಸಂದರ್ಶಿಸಿ ಅನೇಕಾನೇಕ ದೇವಾಲಯ ಸ್ತೂಪಗಳನ್ನು ನೋಡಿಕೊಂಡು, ದುರ್ಗಪರ್ವತಮಾರ್ಗವಾಗಿ ಆಗಸ್ಟು ೨ನೆಯ ತಾರೀಖಿನ ದಿನ ಅಮರನಾಥಕ್ಕೆ ಹೋದರು. ಅಮರನಾಥದ ಪವಿತ್ರ ಗುಹೆ ಕಣ್ಣಿಗೆ ಬೀಳುತ್ತಲೆ ಸ್ವಾಮಿಗಳ ದೇಹ ಭಕ್ತಿಯಿಂದ ಪುಳಕ ಕಂಟಕಿತವಾಯಿತು. ವಿಭೂತಿ ಲೇಪಿತ ಕಳೇಬರದ ಕೌಪೀನಧಾರಿಯಾದ ವಿವೇಕಾನಂದರು ಕಂಪಿತಪದದಿಂದ ವಿಶಾಲಗುಹೆಯ ನಡುವೆ ಪ್ರವೇಶ ಮಾಡಿದರು.

ಸಮ್ಮುಖದಲ್ಲಿ ಚಿರತುಷಾರ ಮಂಡಿತ ಭಗವಾನ್ ಮಹಾದೇವನ ವಿಗ್ರಹ ರಾರಾಜಿಸಿತು. ಸ್ವಾಮಿಜಿ ಭಕ್ತಿಭಾವದಿಂದ ನೆಲದ ಮೇಲೆ ಬಿದ್ದು ಬಿದ್ದು ನಮಸ್ಕಾರ ಮಾಡಿ ಗಭೀರ ಧ್ಯಾನಸ್ಥರಾದರು. ಸೋದರಿ ನಿವೇದಿತೆ ಬಳಿಯಲ್ಲಿ ನಿಂತು ಆ ಮಹಿಮಾಮಯ ದೃಶ್ಯವನ್ನು ಎವೆಯಿಕ್ಕದೆ ನೋಡಿದರು. ಸ್ವಾಮಿಗಳು ಗುಹೆಯಿಂದ ಹೊರಗೆ ಬರುತ್ತಿದ್ದಾಗ ತುಷಾರೋಪಮ ಶ್ವೇತ ಪಾರಾವತ ಪಕ್ಷಿಗಳ ಸಮೂಹವೊಂದು ಅವರಿಗೆದುರಾಗಿ ಹಾರಿಬಂದಿತು. ಅದನ್ನು ನೋಡಿ ನಿವೇದಿತೆಯೊಡನೆ "ತಂಗಿ, ದೇವಾಧಿದೇವ ಮಹಾದೇವನು ಇಂದೆಮಗೆ ವರಪ್ರದಾನ ಮಾಡಿದ್ದಾನೆ" ಎಂದು ಗಂಭೀರವಿಶ್ವಾಸದಿಂದ ಹೇಳಿದರು.

ಆಗಸ್ಟು ೮ನೆಯ ತಾರೀಖಿನ ದಿನ ಯಾತ್ರಿಕವೃಂದ ಶ್ರೀನಗರವನ್ನು ತಲುಪಿತು. ಅಮರನಾಥಕ್ಕೆ ಹೋದಾಗಿನಿಂದ ಸ್ವಾಮಿಗಳು ತಮ್ಮ ಶಿಷ್ಯರೊಡನೆ ಜಗನ್ಮಾತೆಯಾದ ಕಾಳಿಯ ವಿಚಾರವನ್ನೆ ಪ್ರಸ್ತಾಪಿಸುತ್ತಿದ್ದರು. ರುದ್ರಪೂಜೆಯ ವಿಚಾರವಾಗಿ ಒಂದು ದಿನ ಮಾತಾಡುತ್ತ 'ರುಂಡಮಾಲಾಮಂಡಿತಳಾದ ದುರ್ಗೆಯನ್ನು ನೋಡಲಾರದ ಅಂಜುಕುಳಿಗಳು ಆಕೆಯ ಕೊರಳಿಗೆ ಹೂಮಾಲೆಯನ್ನು ಹಾಕಿ ಆಕೆಯನ್ನು ಕರುಣಾಮಯಿ ಎಂದು ಕರೆಯುವರು; ಮೃತ್ಯುಪೂಜೆಯಿಲ್ಲದೆ ಅಮೃತತ್ವವು ಲಭಿಸದು' ಎಂದು ಹೇಳಿದರು. ಇನ್ನೊಂದು ದಿನ ಶ್ರೀನಗರದ ಸಮೀಪದಲ್ಲಿ ಒಂದು ಪಾಳುಬಿದ್ದ ಕಾಳಿಕಾದೇವಾಲಯವನ್ನು ಪ್ರವೇಶ ಮಾಡಿ, ಗುಡಿಯ ದುರವಸ್ಥೆಯನ್ನು ನೋಡಿ ಬಹಳ ಮರುಗುತ್ತಿರಲು "ನೀನು ನನ್ನನ್ನು ಕಾಪಾಡುವಿಯೊ? ನಾನು ನಿನ್ನನ್ನು ಕಾಪಾಡುವೆನೊ?" ಎಂದು ತಾಯಿ ಹೇಳಿದಂತಾಯಿತು. ಅದನ್ನು ಕೇಳಿ ಅವರು ಗರ್ವಭಂಗವಾದ ಬಾಲಕನಂತಾಗಿ "ಹಾಗಾದರೆ ಇನ್ನು ದೇಶಾಭಿಮಾನವೆನಗಿಲ್ಲ. ನಾನೊಂದು ಶಿಶು ಮಾತ್ರ; ಎಲ್ಲ ಮಾತೆಯ ಕೆಲಸ" ಎಂದುಕೊಂಡರು.

ಕಾಶ್ಮೀರದ ಯಾತ್ರೆ ಪೂರೈಸಿತು. ಸ್ವಾಮಿಜಿ ಪ್ರಕೃತಿಯ ರಮ್ಯ ಲೀಲಾನಿಕೇತನವನ್ನು ಹಿಂದಿಕ್ಕಿ ಲಾಹೋರಿಗೆ ಬಂದು, ಅಲ್ಲಿಂದ ಅಕ್ಟೋಬರ್ ತಿಂಗಳ ಉತ್ತರಭಾಗದಲ್ಲಿ ಬೇಲೂರು ಮಠಕ್ಕೆ ತೆರಳಿದರು. ಪುನಃ ಕೆಲಸಕ್ಕೆ ತೊಡಗಿದರು. ಸೋದರಿ ನಿವೇದಿತೆಯಿಂದ ಸ್ಥಾಪಿತವಾದ ಸ್ತ್ರೀವಿದ್ಯಾಶಾಲೆಯನ್ನು ತೆರೆಯುವ ಸಮಾರಂಭವನ್ನು ಮಾಡಿದರು. "ಉದ್ಬೋಧನ" ಎಂಬ ವಂಗ ಮಾಸಪತ್ರಿಕೆಯನ್ನು ಹೊರಡಿಸಿದರು. ಪೂರ್ವ ವಂಗದೇಶದಲ್ಲಿ ವೇದಾಂತ ಪ್ರಚಾರ ಮಾಡಲು ಇಬ್ಬರು ಶಿಷ್ಯರನ್ನು ಕಳುಹಿಸಿದರು. ಇನ್ನಿಬ್ಬರು ಗುರುಭ್ರಾತೃಗಳನ್ನು ಗುಜರಾತಿನ ಕೆಲಸಕ್ಕೆ ಕಳುಹಿಸಿದರು. ಒಬ್ಬರನ್ನು ಸಿಂಹಳಕ್ಕೆ ಸಾಗಿಸಿದರು.

* * *

# ೧೬. ಜೀವನ ಸಂಧ್ಯೆ

ಸ್ವಾಮಿಗಳ ಜೀವನೋದ್ದೇಶ ಒಂದು ಆಕಾರಕ್ಕೆ ಬಂದಿತು. ಶ್ರೀರಾಮಕೃಷ್ಣ ಮಹಾಸಂಘವನ್ನು ಸುವ್ಯವಸ್ಥೆಗೆ ತಂದರು. ಶಿಷ್ಯರಿಗೆ ತಮ್ಮ ಅಭಿಪ್ರಾಯಗಳನ್ನೆಲ್ಲ ಬೋಧಿಸಿ ಅವರನ್ನು ಕಾರ್ಯೋನ್ಮುಖರನ್ನಾಗಿ ಮಾಡಿದರು. ದೇಶದ ನಾನಾ ಭಾಗಗಳಲ್ಲಿ ಮಠ, ಆಶ್ರಮ, ಸೇವಾಶ್ರಮಗಳು ಸ್ಥಾಪಿತವಾದುವು. ಆದರೆ ಅವಿಶ್ರಾಂತ ಶ್ರಮದಿಂದ ಅವರ ವಜ್ರಕಾಯವೂ ಕೂಡ ಶಿಥಿಲವಾಗತೊಡಗಿತು. ವೈದ್ಯರು ಎಚ್ಚರಿಕೆಯಿಂದಿರುವಂತೆ ಹೇಳಿದರು.

ಆದರೂ ಅಮೆರಿಕಾದಿಂದ ಕಾಗದಗಳು ಬರತೊಡಗಿದುದರಿಂದ ಸ್ವಾಮಿಗಳು ಅಲ್ಲಿಯ ಕಾರ್ಯಸಂಸ್ಥಾಪನೆ ಮತ್ತು ಸುವ್ಯವಸ್ಥೆಗಳಿಗಾಗಿ ಪುನಃ ಪಶ್ಚಿಮ ದೇಶಗಳಿಗೆ ಹೋಗಬೇಕಾಯಿತು.

೧೮೯೯ನೆಯ ವರ್ಷದ ಜೂನ್ ೨೦ನೆಯ ದಿನ ಸ್ವಾಮಿ ತುರಿಯಾನಂದ, ಸೋದರಿ ನಿವೇದಿತೆಯರೊಡಗೂಡಿ ಇಂಗ್ಲೆಂಡಿಗೆ ಹೊರಟರು. ಜುಲೈ ೩೧ನೇ ತಾರೀಖಿನ ದಿನ ಲಂಡನ್ ನಗರವನ್ನು ಸೇರಿದರು. ಅಲ್ಲಿ ಕೆಲವು ದಿನಗಳಿದ್ದು ವಿಶ್ರಮಿಸಿಕೊಂಡು, ತರುವಾಯ ಅಟ್ಲಾಂಟಿಕ್ ಮಹಾಸಾಗರವನ್ನು ದಾಟಿದರು.

ದಾರಿಯಲ್ಲಿ ಸಮುದ್ರದ ಮೇಲೆ ನಡೆದ ಒಂದೆರಡು ಸಂಗತಿಗಳು ಸ್ವಾಮಿಗಳ ಸೌಂದರ್ಯೋಪಾಸನೆಯನ್ನು ಸೂಚಿಸುತ್ತವೆ. ಒಂದು ದಿನ ಸಮುದ್ರ ನಿಸ್ತರಂಗವಾಗಿತ್ತು. ಮನೋಹರ ಚಂದ್ರಕರೋಜ್ವಲ ರಜನಿಯಲ್ಲಿ ಗುರುದೇವನು ಹಡಗಿನ ವೇದಿಕೆಯ ಮೇಲೆ ಅತ್ತಿತ್ತ ಅಡ್ಡಾಡುತ್ತ ಶಿಷ್ಯರನ್ನು ಬಳಿಗೆ ಕರೆದು ಅವರಿಗೆ ಸೌಂದರ್ಯತತ್ತ್ವದ ವಿಷಯವನ್ನು ತಿಳಿಸಿದನು. ಹಾಗೆಯೆ ಶುಭ್ರ ಜ್ಯೋತ್ಸ್ನಾ ಸುಧೌತ ಸುನೀಲ ನೀರವ ಗಗನ ಸಾಗರಗಳನ್ನು ಬಹಳಹೊತ್ತು ನಿಟ್ಟಿಸಿ "ಮಾಯೆಯ ರಾಜ್ಯದಲ್ಲಿರುವ ಆ ದೃಶ್ಯಾವಳಿಗಳೆ ಇನಿತು ಸುಂದರವಾಗಿರುವಾಗ, ಮಾಯೆಯ ಹಿಂದಿರುವ ಆ ಸತ್ಯಸ್ವರೂಪ ಇನ್ನೆಷ್ಟು ಸುಂದರತರವಾಗಿರಬೇಕು!" ಎಂದರು.

ಇನ್ನೊಂದು ದಿನ, ಆಗ ತಾನೆ ಸಂಜೆಯಾಗಿದೆ. ಪಡುವಣ ಬಾನಿನ ಬೈಗುಗೆಂಪು ಮಾಸಿಹೋಗಿದೆ. ಚೆಲ್ವಿನ ತಿಂಗಳ ಬೆಳಕು ಸುತ್ತಲೂ ಹೆಚ್ಚುತ್ತಿದೆ. ಸ್ವಾಮಿಗಳು ನೀರವವಾಗಿ ನಿಂತಿದ್ದಾರೆ. ಎತ್ತ ನೋಡಿದರೂ ಅಪೂರ್ವ ಸೌಂದರ್ಯಮಯಿಯಾದ ರಜನಿಯ ರೂಪರಾಶಿ ಬೆಳಗುತ್ತಿದೆ. ಮೇಲೆ ನಿರ್ಮಲ ನೀಲಗಗನದಲ್ಲಿ ಸ್ವರ್ಣ ವರ್ಣ ಪೂರ್ಣಚಂದ್ರನು ತನ್ನ ಮನೋಹರ ಮಂದಹಾಸವನ್ನು ಚೆಲ್ಲುತ್ತಿದ್ದಾನೆ. ಸ್ವಾಮಿಗಳು ಒಳಗೆ ಕವನಗಳನ್ನು ಪಠಿಸುತ್ತಿದ್ದ ಶಿಷ್ಯರನ್ನು ಕೂಗಿ ಕರೆದು "ಕವಿತೆಯ ಸಾರವೇ ಸಮ್ಮುಖದಲ್ಲಿ ಚೆಲ್ಲಿ ಸೂಸುತ್ತಿರಲು ಒಳಗೆ ಕುಳಿತು ಕವಿತೆ ಯೋದುವುದರಿಂದ ಪ್ರಯೋಜನವೇನು?" ಎಂದು ಗಗನ ಜಲಧಿಗಳ ಅನಂತ ವಿಸ್ತಾರವನ್ನು ನಿರ್ದೇಶಿಸಿ ಕೈ ಬೀಸಿದರು.

ನ್ಯೂಯಾರ್ಕಿಗೆ ಹೋದ ದಿನವೇ ಮಧ್ಯಾಹ್ನ ಸ್ವಾಮಿಗಳು ಲೆಗೆಟ್ ದಂಪತಿಗಳೊಡನೆ ಅಲ್ಲಿಗೆ ನೂರೈವತ್ತು ಮೈಲಿ ದೂರದಲ್ಲಿರುವ ಅವರ ಹಳ್ಳಿಯ ಮನೆಗೆ ಹೋದರು. ಏಕೆಂದರೆ ಗುರುವರ್ಯರ ದೈಹಿಕ ಸ್ಥಿತಿಯನ್ನು ನೋಡಿ ಲೆಗೆಟ್ ದಂಪತಿಗಳು ಅವರನ್ನು ಪ್ರಚಾರಕಾರ್ಯಕ್ಕೆ ಕೈಹಾಕಗೊಡಲಿಲ್ಲ. ಅಷ್ಟೇ ಅಲ್ಲದೆ ಒಳ್ಳೆಯ ವೈದ್ಯರನ್ನು ಕರೆತಂದು

ಸ್ವಾಮಿಗಳಿಗೆ ಚಿಕಿತ್ಸೆ ಮಾಡಿಸತೊಡಗಿದರು. ಇತ್ತಲಾಗಿ ಪ್ರಚಾರಕಾರ್ಯಕ್ಕಾಗಿ ನ್ಯೂಯಾರ್ಕಿನಿಂದ ಹೊರಟುಹೋಗಿದ್ದ ಸ್ವಾಮಿ ಅಭೇದಾನಂದರು ನಾಯಕನ ಆಗಮನವಾರ್ತೆಯನ್ನು ಕೇಳಿ ಹಿಂತಿರುಗಿ ಬಂದು ಸ್ವಾಮಿಜಿಯನ್ನು ಕಂಡರು. ಅವರಿಂದ ವೇದಾಂತ ಪ್ರಚಾರಕಾರ್ಯ ಸುಸೂತ್ರವಾಗಿ ನಡೆದಿರುವುದನ್ನು ಕೇಳಿ ಸ್ವಾಮಿಜಿ ಬಹಳ ಹರ್ಷಿತರಾದರು. ಕೆಲವು ದಿನಗಳಲ್ಲಿಯೆ ನ್ಯೂಯಾರ್ಕ್ ಪಟ್ಟಣದಲ್ಲಿ ವೇದಾಂತ ಸಂಘಕ್ಕೆ ಬೇಕಾದ ಮಹಾಸೌಧವೊಂದು ನಿರ್ಮಿತವಾಯಿತು. ಸ್ವಾಮಿ ಅಭೇದಾನಂದರೆ ಅದರ ಸಮಾರಂಭ ಮಹೋತ್ಸವವನ್ನು ಜರುಗಿಸಿದರು. ಸ್ವಾಮಿ ತುರೀಯಾನಂದರೂ ಅಭೇದಾನಂದರೊಡನೆ ಸೇರಿ ಪ್ರಚಾರ ಕಾರ್ಯಕ್ಕೆ ಕೈಹಾಕಿದರು. ನಗರಕ್ಕೆ ಅನತಿದೂರದಲ್ಲಿರುವ ಮೌಂಟ್ ಕ್ಲೇರ್ ಎಂಬ ಸ್ಥಳದಲ್ಲಿ ದಿನವೂ ಅವರು ಧರ್ಮೋಪದೇಶ ಮಾಡತೊಡಗಿದರು. ಅಲ್ಲದೆ ಅಲ್ಲಿಯ ಯೂನಿವರ್ಸಿಟಿಯಲ್ಲಿ ಶಂಕರಾಚಾರ್ಯರ ಮೇಲೆ ಒಂದು ಲೇಖನವನ್ನೂ ಬರೆದು ಓದಿದರು.

ನವೆಂಬರ್ ತಿಂಗಳು ೧೮ನೆಯ ಮಂಗಳವಾರ ಸ್ವಾಮಿಜಿ ಮರಳಿ ಕಾರ್ಯಕ್ಕಾರಂಭಿಸಿದರು. ಆ ದಿನ ನ್ಯೂಯಾರ್ಕ್ ನಗರದ ಮಹಾಜನರು ಅವರಿಗೆ ಬಹು ವಿಜೃಂಭಣೆಯಿಂದ ಸ್ವಾಗತವಿತ್ತರು. ಅಲ್ಲಿ ಅನೇಕ ಜನರು ನೆರೆದಿದ್ದರು. ಸ್ವಾಮಿಗಳು ರಸಪೂರ್ಣವಾದ ಭಾಷಣವೊಂದನ್ನು ಮಾಡಿ ಎಲ್ಲರನ್ನೂ ವೇದಾಂತ ಪ್ರಚಾರಕ್ಕೆ ನೆರವಾಗುವಂತೆ ಕೇಳಿಕೊಂಡರು. ನ್ಯೂಯಾರ್ಕಿನಲ್ಲಿ ಎರಡು ವಾರಗಳನ್ನು ಕಳೆದು ಅಲ್ಲಿಂದ ಕ್ಯಾಲಿಫೋರ್ನಿಯಾಕ್ಕೆ ಹೋದರು.

ವಿವೇಕಾನಂದರು ಎರಡನೆಯ ಸಾರಿ ಪಾಶ್ಚಾತ್ಯ ದೇಶಗಳಿಗೆ ಹೋದಾಗ ಮೊದಲನೆಯ ಸಾರಿ ಮರುಳಾಗಿದ್ದಂತೆ ಅವರ ನಾಗರಿಕತೆಯ ಬಾಹ್ಯ ಥಾಳಥಳ್ಯಕ್ಕೆ ಮಾರುಹೋಗಲಿಲ್ಲ. ಅವರ ದೃಷ್ಟಿ ಅದರ ಅಂತರಾಳವನ್ನು ಪ್ರವೇಶಿಸಿ ಅಲ್ಲಿದ್ದ ಅಶಾಂತಿ, ಕ್ರೌರ್ಯ, ಕಾರ್ಪಣ್ಯ, ಗರ್ವ, ರಕ್ತತೃಷ್ಣೆ ಇತ್ಯಾದಿಗಳನ್ನು ಕಂಡುಹಿಡಿಯಿತು. ಅನವಕುಂಠಿತಳಾದ ಪಾಶ್ಚಾತ್ಯ ಸಾಮ್ರಾಜ್ಯತಾ ಶಾಕಿನಿಯ ನೆತ್ತರು ಬಸಿಯುವ ಮುಖನಖಗಳನ್ನು ಕಂಡು ನಿಡುಸುಯ್ದರು.

ಭರತಖಂಡಕ್ಕೆ ಹಿಂತಿರುಗಿ ಬಂದ ಮೇಲೆ ಮಿತ್ರರೊಡನೆ "ತೋಳಗಳ ಮುಂದೆಯಾದರೂ ಅವರ ಮಧ್ಯೆ ಎಂತಹ ಸೌಂದರ್ಯವಿತ್ತು" ಎಂದೂ "ಪಾಶ್ಚಾತ್ಯ ಜೀವನ ನರಕಸದೃಶವಾಗಿ ಕಂಡುಬಂದಿತು" ಎಂದೂ ವಿವೇಕಾನಂದರು ಹೇಳಬೇಕಾಯಿತು.

ಜಡಸಂಪತ್ತಿನ ತಳುಕು ಅವರನ್ನು ಮೋಸಗೊಳಿಸಲಿಲ್ಲ. ಪಾಶ್ಚಾತ್ಯ ನಾಗರಿಕತೆಯ ಐಶ್ವರ್ಯಶಕ್ತಿ ಪ್ರದರ್ಶನದ ಹಿಂದುಗಡೆ ಅವಿತುಕೊಂಡಿರುವ ಭಯಂಕರಾಯಾಸ ಆತ್ಮನಾಶಕವಾಗಿ ತೋರಿತು. ನಗೆಯ ಪರದೆಯ ಹಿಂಗಡೆ ಅಳುಗೋಳು ಮನೆ ಮಾಡಿತ್ತು.

"ಪಾಶ್ಚಾತ್ಯರ ಜೀವನ ಮೇಲುಗಡೆ ಅಟ್ಟಹಾಸದಂತಿದ್ದರೂ ಒಳಗಡೆ ಗೋಳಿದೆ; ಅದು ಗೋಳಿನಲ್ಲಿಯೆ ಕೊನೆಗಾಣುತ್ತದೆ. ನಗೆ ನಲಿದಾಟಗಳೆಲ್ಲವೂ ಮೇಲೆಮೇಲೆ. ನಿಜವಾಗಿಯೂ ಅದರೊಳಗೆ ರುದ್ರದುಃಖದ ಬಾವು ಕೀವಾಗಿ ಸಿಡಿಯುತ್ತದೆ... ಇಲ್ಲಿ (ಇಂಡಿಯಾದಲ್ಲಿ) ಬಾಳು ಮೇಲೆಮೇಲೆ ನೋಡುವುದಕ್ಕೆ ವಿಷಣ್ಣವಾಗಿದ್ದರೂ ಅಂತರಂಗದಲ್ಲಿ ಪ್ರಸನ್ನವಾಗಿದೆ" ಎಂದು ಸೋದರಿ ನಿವೇದಿತಾಗೆ ಹೇಳಿದರಂತೆ.

ಅಲ್ಲದೆ ಯೂರೋಪಿನಲ್ಲಿ ೧೯೧೪ನೆಯ ಮಹಾಯುದ್ಧವಾಗುವುದಕ್ಕೆ ಹದಿನೆಂಟು ಸಂವತ್ಸರಗಳಿಗೆ ಮೊದಲು ಮಿತ್ರರಿಗೆ ಬರೆದಿದ್ದ ಕಾಗದಗಳಲ್ಲಿ "ಅಖಿಲ ಯೂರೋಪು ಖಂಡವೂ ಒಂದು ಜ್ವಾಲಾಮುಖಿಯ ಮೇಲೆ ಕುಳಿತಂತಿದೆ. ಧರ್ಮಧಾರಾಪ್ರವಾಹದಿಂದ ಆ ಬೆಂಕಿಯನ್ನು ಆರಿಸದಿದ್ದರೆ ಅದು ಆಸ್ಫೋಟಿಸದಿರುವುದಿಲ್ಲ... ಮತ್ತೊಂದು ನವಯುಗವನ್ನು ತರುವ, ಮುಂದೆ ಬರಲಿರುವ ಮಹಾವಿಪ್ಲವ ರಷ್ಯಾ ಅಥವಾ ಚೀನಾ ದೇಶಗಳಿಂದ ಉಕ್ಕುತ್ತದೆ. ಯಾವ ದೇಶದಿಂದ ಎಂದು ಸರಿಯಾಗಿ ಹೇಳಲಾರೆ. ಅಂತೂ ಅವೆರಡೂ ದೇಶಗಳಲ್ಲಿ ಯಾವುದಾದರೊಂದರಿಂದ ಮೊದಲಾಗುತ್ತದೆ... ಜಗತ್ತು ಈಗ ಮೂರನೆಯ ಘಟ್ಟದಲ್ಲಿದೆ. ಬ್ರಾಹ್ಮಶಕ್ತಿ ಕ್ಷಾತ್ರಶಕ್ತಿಗಳ ಆಳ್ವಿಕೆ ಪೂರೈಸಿ ಈಗ ವೈಶ್ಯ ಶಕ್ತಿ (ವ್ಯಾಪಾರಿಗಳು) ಆಳುತ್ತಿದೆ. ನಾಲ್ಕನೆಯ ಘಟ್ಟ ಶೂದ್ರಶಕ್ತಿಯದಾಗುತ್ತದೆ (ಎಂದರೆ ಕೆಲಸಗಾರರು, ಬೇಸಾಯಗಾರರು, ಸಾಮಾನ್ಯರು ಆಳುತ್ತಾರೆ. ಸಾಮ್ಯವಾದ ಪ್ರಚಾರವಾಗುತ್ತದೆ)" ಎಂದು ಮೊದಲಾಗಿ ಭವಿಷ್ಯ ಹೇಳಿದ್ದಾರೆ.

ವಿವೇಕಾನಂದರು ಕ್ಯಾಲಿಫೋರ್ನಿಯಾದಿಂದ ಬರೆದ ಕಾಗದಗಳಲ್ಲಿ ವೀರ ಯೋಧನ ಶರೀರಕ್ಲಾಂತಿಯೂ, ಆತ್ಮಶಾಂತಿ ಮತ್ತು ವಿಶ್ರಾಂತಿಗಳಿಗಾಗಿ ಅಸೀಮಾಕಾಂಕ್ಷೆಯೂ ಎದ್ದು ಕಾಣುತ್ತದೆ.

"ನನಗಾಗಿ ಪ್ರಾರ್ಥಿಸು, ನನ್ನ ಕರ್ಮವೆಲ್ಲ ಸವೆದುಹೋಗಲಿ ಎಂದು, ನನ್ನಾತ್ಮ ಸಂಪೂರ್ಣವಾಗಿ ಜಗಜ್ಜನನಿಯಲ್ಲಿ ಲೀನವಾಗಲಿ ಎಂದು... ಕ್ಷೇಮವಾಗಿದ್ದೇನೆ. ಚೆನ್ನಾಗಿ ಕ್ಷೇಮವಾಗಿದ್ದೇನೆ ಮನಸ್ಸಿನಲ್ಲಿ. ದೇಹದ ವಿಶ್ರಾಂತಿಗಿಂತಲೂ ಆತ್ಮದ ಶಾಂತಿಯನ್ನು ಹೆಚ್ಚಾಗಿ ಅನುಭವಿಸುತ್ತಿದ್ದೇನೆ. ರಣಗಳಲ್ಲೇನು? ಗೆಲ್ಲುತ್ತೇವೆ ಸೋಲುತ್ತೇವೆ! ನಾನು ಗಂಟುಮೂಟೆ ಕಟ್ಟಿಕೊಂಡು ಹೊರಡಲು ಸಿದ್ಧನಾಗಿ ಕಾಯುತ್ತಿದ್ದೇನೆ, ಮುಕ್ತಿದಾಯಕನಿಗಾಗಿ. ಶಿವಾ, ಓ ಶಿವಾ, ದೋಣಿಯನ್ನು ಆಚೆಯ ದಡಕ್ಕೆ ಸಾಗಿಸು... ನಾನೇನು ಬರಿ ಹಸುಳೆ! ಗಂಗಾತೀರದಲ್ಲಿ ದಕ್ಷಿಣೇಶ್ವರದಲ್ಲಿ ವಟತರು ತಲಚ್ಛಾಯೆಯಲ್ಲಿ ಶ್ರೀರಾಮಕೃಷ್ಣರ ಅಮೃತವಾಣಿಯನ್ನು ಮುಗ್ಧನಾಗಿ ಆಲಿಸುತ್ತಿದ್ದ ಅದೇ ಹುಡುಗನಾಗಿದ್ದೇನೆ ನಾನಿನ್ನೂ. ಅದೇ ನನ್ನ ನಿಜವಾದ ಸ್ವಭಾವ. ಅದೇ ನನ್ನ ನಿಜವಾದ ಸ್ಥಾನ. ಉಪನ್ಯಾಸಗಳೂ ಉಪದೇಶಗಳೂ ಕೆಲಸಗಳೂ ಪರೋಪಕಾರಗಳೂ ಸತ್ಕಾರ್ಯಗಳೂ ಎಲ್ಲವೂ ಬರಿಯ ಮೌಢ್ಯಗಳು... ಮತ್ತೆ ಕೇಳುತ್ತಿದ್ದೇನೆ ಆತನ ದಿವ್ಯವಾಣಿಯನ್ನು. ಬಂಧನಗಳೆಲ್ಲ ಕಳಚಿಬೀಳುತ್ತಿವೆ. ಒಲುಮೆ ಸಾಯುತ್ತಿದೆ. ಕೆಲಸ ರುಚಿಗೆಡುತ್ತಿದೆ. ಬಾಳಿನ ಮನಮೋಹಕ ಕಾಂತಿ ತೊಲಗುತ್ತಿದೆ. ಗುರುದೇವನ ವಾಣಿ ಕರೆಯುವುದು ಮಾತ್ರ ಕೇಳಿಸುತ್ತಿದೆ... ಸತ್ತವರು ಸತ್ತವರನ್ನು ಹೂಳಲಿ. ನೀನೆನ್ನ ಹಿಂಬಾಲಿಸು... ಬಂದೆ. ಓ ನನ್ನ ಪ್ರಿಯ ಮಧುರ ಪ್ರಾಣೇಶ, ಇದೋ ಬಂದೆ. ನನ್ನ ಮುಂದೆ ನಿರ್ವಾಣವಿದೆ... ಅದೇ ಶಾಂತಿ ಸಮುದ್ರ, ನಿಸ್ತರಂಗ, ನಿಸ್ಪಂದ... ಹುಟ್ಟಿ ಬಂದೆ, ಸಂತೋಷ. ಕಷ್ಟಪಟ್ಟೆ, ಸಂತೋಷ. ಎಡವಿ ಬಿದ್ದು ತಪ್ಪುಗೈದೆ, ಸಂತೋಷ ಶಾಂತಿ ಪ್ರವೇಶ ಮಾಡುತ್ತೇನೆ, ಸಂತೋಷ. ಮಹಾಸಂತೋಷ. ನಾನು ಯಾರನ್ನೂ ಬಂಧನದಲ್ಲಿಟ್ಟು ಹೋಗುವುದಿಲ್ಲ. ಯಾವ ಬಂಧನಗಳನ್ನೂ ಹೊತ್ತುಕೊಂಡು ಹೋಗುವುದಿಲ್ಲ... ಕೈಕಾಲು ಆಡಿಸಲೂ ಹೆದರಿಕೆಯಾಗುತ್ತದೆ. ಎಲ್ಲಿ ಆ ನಿಶ್ಚಲವಾದ ಅದ್ಭುತಶಾಂತಿಗೆ ಭಂಗ ಬರುತ್ತದೆಯೋ ಎಂದು. ಎಷ್ಟು ನಿಶ್ಚಲ ನೀರವವಾಗಿದೆ ಎಂದರೆ ಈ ಸರಶ್ಶಾಂತಿ, ಅದು ಮಾಯೆಯೆಂಬುದು ಚೆನ್ನಾಗಿ ಮನಸ್ಸಿಗೆ ಬರುತ್ತದೆ!... ನನ್ನ ಕೆಲಸದ ಹಿಂದೆ ಕೀರ್ತಿಯಾಸೆಯಿತ್ತು. ನನ್ನ ಪ್ರೀತಿಯ ಹಿಂದೆ ಅಹಂಭಾವವಿತ್ತು. ನನ್ನ ನೀತಿಯ ಹಿಂದೆ ಭೀತಿಯಿತ್ತು. ನನ್ನ ಚಲನೆಯ ಹಿಂದೆ ದರ್ಪಮೋಹವಿತ್ತು. ಈಗ ಅವೆಲ್ಲವೂ ಮಾಯವಾಗುತ್ತಿವೆ; ನಾನು ಸುಮ್ಮನೆ ತೇಲುತ್ತಿದ್ದೇನೆ... ಬಂದೆ

ತಾಯೀ, ಬಂದೆ, ನಿನ್ನ ಬೆಚ್ಚನೆಯೆದೆಗೆ, ತೇಲುತ್ತೇನೆ ನೀನು ತೇಲಿಸಿದ್ದಲ್ಲಿಗೆ - ನೇರವಾದ ಅಪೂರ್ವವಾದ ಅನಿರ್ವಚನೀಯವಾದ ಸೀಮೆಗೆ ಬರುತ್ತೇನೆ, ನೋಟಗಾರನಾಗಿ, ಆಟಗಾರನಾಗಿ ಅಲ್ಲ. ಓ ಬರುತ್ತೇನೆ, ಕರೆದುಕೊ! ಎಂತಹ ಶಾಂತಿ! ನನ್ನ ಆಲೋಚನೆಗಳೆಲ್ಲ ನನ್ನ ಹೃದಯದ ಬಹುದೂರದ ಅಂತರಾಳದಿಂದ ಬರುವಂತೆ ತೋರುತ್ತಿವೆ. ಬಹುದೂರದ ನಸು ದನಿಯ ಪಿಸುಮಾತುಗಳಂತಿವೆ. ಶಾಂತಿ, ಸುಂದರ ಶಾಂತಿ, ಸರ್ವವ್ಯಾಪಿಯಾಗಿದೆ... ಬಂದೆ, ಗುರುದೇವ! ಜಗತ್ತು ಇದೆ; ಸುರೂಪವಾಗಿಯೂ ಅಲ್ಲ, ಕುರೂಪವಾಗಿಯೂ ಅಲ್ಲ. ಯಾವ ಭಾವವನ್ನೂ ಉದ್ರೇಕಿಸದೆ ನಿರ್ಭಾವವಾಗಿ ತಟಸ್ಥವಾಗಿದೆ. ಎಂತಹ ಧನ್ಯ ಶಾಂತಿಯಿದು! ಪ್ರತಿಯೊಂದೂ ಮಂಗಲವಾಗಿದೆ, ಸುಂದರವಾಗಿದೆ; ಏಕೆಂದರೆ ಮಾಯಾವಿಹೀನವಾಗಿದೆ, ನನ್ನ ಶರೀರವೂ ಸೇರಿ. ಓಂ ತತ್ ಸತ್!"

ಬತ್ತಳಿಕೆಯಿಂದ ಹೊರಬಿದ್ದು, ಕಿವಿಯವರೆಗೆ ಸೆಳೆದಿದ್ದ ಬಿಲ್ಲಿನ ಹೆದೆಯಿಂದ ಚಿಮ್ಮಿದ ಬಾಣವಿನ್ನೂ ಚಲಿಸುತ್ತಿತ್ತು. ಆದರೆ ಬಲಗುಂದಿದ ಅದರ ಚಲನೆ ಪಯಣದ ತುದಿಯನ್ನು ಸೂಚಿಸುತ್ತಿತ್ತು. ಗಾಳಿಯಲ್ಲಿ ತೂರಾಡಿ ತೇಲುತ್ತಿತ್ತು. ಹೆದೆಯಿಂದಲೂ ಪಾರಾಗಿ ಗುರಿಯನ್ನೂ ಲಕ್ಷಿಸದೆ.

ಕ್ಯಾಲಿಫೋರ್ನಿಯಾದಿಂದ ಸ್ವಾಮಿಗಳು ಲಾಸ್ ಎಂಜಲಿಸ್ ಎಂಬಲ್ಲಿಗೆ ಹೋಗಿ ಅಲ್ಲಿ ರೆವರೆಂಡ್ ಡಾಕ್ಟರ್ ಬೆಂಜಮಿನ್ ಫೇ ಮಿಲ್ಸ್ ಎಂಬ ಮಹಾ ವಿದ್ವಾಂಸನ ಅತಿಥಿಗಳಾಗಿ ನಿಂತರು. ಅಲ್ಲಿಯ ಚರ್ಚಿನಲ್ಲಿ ಸ್ವಾಮಿಗಳು 'ಹಿಂದೂ ಧರ್ಮದಲ್ಲಿ ಮುಕ್ತಿಮಾರ್ಗ' ಎಂಬ ಉಪನ್ಯಾಸವನ್ನು ಕೊಟ್ಟಾಗ ರೆವರೆಂಡ್ ಡಾಕ್ಟರ್ ಫೇ ಮಿಲ್ಸ್‌ರವರು ಅವರನ್ನು ನಿರ್ದೇಶಿಸಿ "A man of gigantic intellect, indeed, one to whom our greatest University Professors were as mere children" ಎಂದು ಮಾತಾಡಿದರು.

ಅಂತೂ ಸ್ವಾಮಿಗಳು ಅಮೆರಿಕಾ ಖಂಡದಲ್ಲೆಲ್ಲಾ ಸಂಚರಿಸಿ ಪುನಃ ನ್ಯೂಯಾರ್ಕ್ ನಗರಕ್ಕೆ ಬಂದರು. ಇಷ್ಟರಲ್ಲಿ ಪ್ಯಾರಿಸ್‌ನಲ್ಲಿ ಸರ್ವಧರ್ಮ ಸಮ್ಮೇಳನವೊಂದು ಸೇರುವುದೆಂದು ಸುದ್ದಿ ಹಬ್ಬಿತು. ಆದ್ದರಿಂದ ಪುನಃ ಅಟ್ಲಾಂಟಿಕ್ ಸಾಗರವನ್ನು ಹಾದು ಫ್ರಾನ್ಸ್ ದೇಶಕ್ಕೆ ಬಂದರು. ಆದರೆ ಸರ್ವಧರ್ಮ ಸಮ್ಮೇಳನವು ಧರ್ಮ ಚರಿತ ಸಭೆಯಾಗಿ ಮಾರ್ಪಾಡಾಯಿತು. ಕಾರಣವೇನೆಂದರೆ, ಕೆಲವು ಜನ ರೋಮನ್ ಕ್ಯಾಥೊಲಿಕ್ ಪಾದ್ರಿಗಳು ಚಿಕಾಗೋ ಧರ್ಮಸಭೆಯಲ್ಲಿ ತಮಗಾದ ಅಪಜಯವನ್ನು ಕಂಡು ಹೆದರಿ, ಪುನಃ ಪ್ಯಾರಿಸ್ಸಿನಲ್ಲಿ ಅಂತಹ ಇನ್ನೊಂದು ಅಪಜಯವನ್ನು ಪಡೆಯಲು ಇಷ್ಟಪಡಲಿಲ್ಲವಂತೆ! ಸ್ವಾಮಿಗಳು ಧರ್ಮಚರಿತ ಸಭೆಗೂ ಹೋಗಿ ಎರಡು ಉಪನ್ಯಾಸವನ್ನು ಕೊಟ್ಟು, ಯೂರೋಪು ಖಂಡದಲ್ಲೆಲ್ಲಾ ಸಂಚರಿಸಿ, ಭರತಖಂಡಕ್ಕೆ ಪತ್ತೆಯಿಲ್ಲದೆ ಹಿಂತಿರುಗಿದರು.

ಕ್ರಿಸ್ತಾಬ್ದ ೧೯೦೦ನೆಯ ವರ್ಷದ ಡಿಸೆಂಬರ್ ೯ನೆಯ ತಾರೀಖಿನ ದಿನ ಬೇಲೂರು ಮಠದ ಸಂನ್ಯಾಸಿಗಳು ರಾತ್ರಿಯ ಭೋಜನಕ್ಕೆ ಕುಳಿತಿದ್ದರು. ತೋಟದಲ್ಲಿ ಕೆಲಸ ಮಾಡುತ್ತಿದ್ದ ಕೂಲಿಯೊಬ್ಬನು ಓಡಿಬಂದು "ಯಾರೋ ಒಬ್ಬರು ಸಾಹೇಬರು ಬಂದಿದ್ದಾರೆ" ಎಂದನು. ಅಷ್ಟೊಂದು ರಾತ್ರಿಯಲ್ಲಿ ಮಠಕ್ಕೆ ಬಂದ ಸಾಹೇಬರು ಯಾರಿರಬಹುದೆಂದು ಕುತೂಹಲಪಟ್ಟು ಸಂನ್ಯಾಸಿಗಳು ಬೇಗ ಬೇಗ ಊಟ ಮಾಡಿಕೊಂಡು ಹೊರಗೆ ಬಂದರು. ನೋಡಲಾಗಿ "ಸ್ವಾಮಿಜಿ! ಸ್ವಾಮಿಜಿ! ಸ್ವಾಮಿಜಿ ಬಂದಿದ್ದಾರೆ!" ಎಂಬ ಸದ್ದು ಮಠವನ್ನು ತುಂಬಿತು. ಎಲ್ಲರಿಗೂ ಆನಂದವೇ ಆನಂದ!

ಸ್ವಾಮಿಗಳು ನಗುತ್ತ "ನನಗೆ ದೂರದಿಂದಲೆ ಊಟದ ಗಂಟೆ ಕೇಳಿಸಿತು. ಹೊತ್ತಾದರೆ ಎಲ್ಲಿ ಕೂಳು ಸೊನ್ನೆಯಾಗಿಬಿಡುವುದೊ ಎಂದು ಹೆದರಿ ಗೇಟನ್ನು ಹತ್ತಿ ಹಾರಿ ಓಡಿ ಓಡಿ ಬಂದೆ!" ಎಂದರು.

ಒಡನೆಯೆ ಶಿಷ್ಯರು ಎಲೆ ಹಾಕಿ ಕಿಚಡಿಯನ್ನು ಬಡಿಸಿದರು. ಸ್ವಾಮಿಗಳು ಸಾವಧಾನವಾಗಿ ನಾನಾ ಕಥೋಪಕಥನಗಳನ್ನು ಮಾಡುತ್ತ ಉಣತೊಡಗಿದರು. ಸುತ್ತಲೂ ಶಿಷ್ಯರು ಕಟ್ಟೆಕಟ್ಟಿ ನಿಂತಿದ್ದರು. ಸ್ವಾಮಿಗಳು ತಮ್ಮ ಯಾತ್ರೆಯ ಅನುಭವಗಳನ್ನು ಒಂದಾದ ಮೇಲೊಂದಾಗಿ ಹೇಳಿದರು. ಆ ರಾತ್ರಿಯೆಲ್ಲ ಮಠದಲ್ಲಿ ಒಬ್ಬರಿಗೂ ನಿದ್ದೆಯಿಲ್ಲ. ಎಲ್ಲರ ಹೃದಯಗಳೂ ಗುರುವರ್ಯನ ಅನಿರೀಕ್ಷಿತ ಆಗಮನದಿಂದ ಅತ್ಯುತ್ಸಾಹಗೊಂಡು ನಿದ್ದೆಗೈಯಲೊಲ್ಲದೆ ಹೋದುವು.

ಭಾರತವರ್ಷಕ್ಕೆ ಬಂದ ಕೆಲವು ದಿನಗಳಲ್ಲಿಯೆ ಅವಿಶ್ರಾಂತ ಕರ್ಮಯೋಗಿ ವಿವೇಕಾನಂದರು ಪುನಃ ಕರ್ಮರಂಗ ಚಕ್ರವ್ಯೂಹ ಪ್ರವೇಶ ಮಾಡಿದರು. ಜೆ.ಎಚ್. ಸೇವಿಯರ್‌ರವರು ತೀರಿಹೋದುದರಿಂದ, ಮಾಯಾವತಿಗೆ ಹೋಗಿ ಅಲ್ಲಿನ ಆಶ್ರಮದ ಕೆಲಸ ಕಾರ್ಯವನ್ನು ವಿಚಾರಿಸಿಕೊಂಡು ಮಿಸೆಸ್ ಸೇವಿಯರ್ ಅವರನ್ನು ಕಂಡು ಸಮಾಧಾನ ಮಾಡಲೆಂದು ಸ್ವಾಮಿಗಳು ಅಲ್ಲಿಗೆ ಹೋದರು. ಚಳಿಗಾಲವಾದುದರಿಂದ ದಾರಿಯಲ್ಲಿ ಶೀತತುಷಾರವೃಷ್ಟಿಗಳಿಂದ ಪೀಡಿತರಾಗಿ ಅವರೂ ಶಿಷ್ಯರೂ ಬಹು ಕಷ್ಟಸಾಹಸಗಳಿಂದ ಮಾಯಾವತಿಯನ್ನು ಸೇರಿದರು. ಸ್ವಾಮಿಜಿ ದೂರದಿಂದಲೆ ಬೆಟ್ಟದ ಮೇಲಿರುವ ಮಾಯಾವತಿಯ ಆಶ್ರಮವನ್ನು ಕಂಡು ಹರ್ಷಚಿತ್ತರಾದರು.

ಮಾಯಾವತಿಯಲ್ಲಿದ್ದಾಗ ಸ್ವಾಮಿಗಳು ತುಷಾರವೃಷ್ಟಿಯ ಭಯದಿಂದ ಹೊರಗೆ ತಿರುಗಾಡಲು ಹೋಗುತ್ತಿರಲಿಲ್ಲ. ಅಲ್ಲಿಯ ಅದ್ವೈತಾಶ್ರಮದಲ್ಲಿಯೆ ಇದ್ದುಕೊಂಡು ಶಿಷ್ಯರಿಗೆ ಉಪದೇಶ ಮಾಡುತ್ತಿದ್ದರು. ಕ್ರಮಕ್ರಮೇಣ ಅವರು ಹೆಚ್ಚುಹೆಚ್ಚಾಗಿ ಅಂತರ್ಮುಖಿಗಳಾಗುತ್ತಿದ್ದುದೂ ವಿರಾಮಕ್ಕೆ ಹಾತೊರೆಯುತ್ತಿದ್ದುದೂ ಶಿಷ್ಯರಿಗೆ ಗೊತ್ತಾಗದೆ ಇರಲಿಲ್ಲ. ಒಂದು ದಿನ ಆಶ್ರಮದಿಂದ ಅನತಿ ದೂರ ಮಾತ್ರ ಸಂಚರಿಸಿ ಆಯಾಸಗೊಂಡು ಬಳಿಯಿದ್ದ ಪ್ರಿಯಶಿಷ್ಯ ಸ್ವಾಮಿ ವಿರಜಾನಂದರ ಮೇಲೆ ಒರಗಿಕೊಂಡು ಅವರಿಗೆ ತಮ್ಮ ಜೀರ್ಣದೇಹವನ್ನು ತೋರಿಸುತ್ತ "ವತ್ಸ! ನೋಡು! ನಾನೆಷ್ಟು ಶಕ್ತಿಗುಂದಿ ಮುದುಕನಂತಿದ್ದೇನೆ! ಇಂತಹ ಪರ್ವತ ಕಂದರ ಪ್ರದೇಶಗಳಲ್ಲಿ ಇಪ್ಪತ್ತು ಇಪ್ಪತ್ತೈದು ಮೈಲಿಗಳನ್ನು ಮೊದಲು ಆಟವೆಂದು ತಿಳಿದು ಸಂಚರಿಸುತ್ತಿದ್ದೆ. ಈಗ ನೋಡು, ಇಷ್ಟು ದೂರ ಬಂದುದೆ ನನಗೆ ಸಾಕಾಗಿದೆ. ಇನ್ನೇನು, ವತ್ಸ, ನನ್ನ ಕಾಲ ಸಮೀಪಿಸುತ್ತಿದೆ!" ಎಂದರಂತೆ.

ಒಂದು ದಿನ ಸ್ವಾಮಿಗಳು, ಸ್ವಾಮಿ ಸ್ವರೂಪಾನಂದರನ್ನು ಬಳಿಗೆ ಕರೆದು 'ಪ್ರಬುದ್ಧ ಭಾರತ' ಮಾಸಪತ್ರಿಕೆಯನ್ನು ನಡೆಸುವ ವಿಚಾರದಲ್ಲಿಯೂ ಆಶ್ರಮದ ಮತ್ತು ಸಂಘದ ಕಾರ್ಯಗಳನ್ನು ಮಾಡುವ ವಿಚಾರದಲ್ಲಿಯೂ ಅನೇಕ ಬುದ್ಧಿವಾದಗಳನ್ನು ಹೇಳಿದರು: "ಕಠೋರ ಸಾಧನೆಗಳಿಂದ ದೇಹದ ಆರೋಗ್ಯವನ್ನು ಕೆಡಿಸಿಕೊಳ್ಳಬಾರದು. ನಮ್ಮನ್ನು ನೋಡಿ ನೀವೆಲ್ಲ ಕಲಿಯಬೇಕು. ಅನೇಕ ಗಂಟೆಗಳ ಕಾಲ ಧ್ಯಾನ ಮಾಡುವುದು ನಿಮ್ಮಿಂದ ಸಾಧ್ಯವಿಲ್ಲ. ಬೆಳಗ್ಗೆ ಒಂದು ಐದು ನಿಮಿಷ, ಸಾಯಂಕಾಲ ಒಂದು ಐದು ನಿಮಿಷಗಳವರೆಗೆ ಮನಸ್ಸನ್ನು ಸ್ಥಿರಗೊಳಿಸಿ ಕೇಂದ್ರೀಕರಿಸಿದರೆ ಸಾಕು.

ಉಳಿದ ಕಾಲವನ್ನು ಕೆಲಸಕ್ಕಾಗಿಯೂ ದೇಶ ಸೇವೆಗಾಗಿಯೂ ಧಾರೆಯೆರೆಯಬೇಕು. ನನ್ನ ಶಿಷ್ಯರಿಗೆ ಸೇವೆಯೇ ತಪಸ್ಸು! ನಿಷ್ಕಾಮ ಕರ್ಮವೇ ಪವಿತ್ರತಮ ಸಾಧನೆ!"

ಸ್ವಾಮಿಗಳ ಇಷ್ಟದಂತೆ ಮಾಯಾವತಿಯ ಅದ್ವೈತಾಶ್ರಮದಲ್ಲಿ ಬಾಹ್ಯಪೂಜೆ ನಡೆಯಕೂಡದೆಂದಿತ್ತು. ಇತರ ಎಲ್ಲ ಆಶ್ರಮಗಳಲ್ಲಿಯೂ ಶ್ರೀಗುರುದೇವ ರಾಮಕೃಷ್ಣ ಆರಾಧಿಸಲ್ಪಡುತ್ತಿದ್ದರು. ಆದರೆ ಕೆಲವು ಶಿಷ್ಯರು ಗುಟ್ಟಾಗಿ ಒಂದು ದೇವರ ಕೋಣೆಯನ್ನು ಮಾಡಿ ಅಲ್ಲಿ ಗುರುಮಹಾರಾಜರನ್ನು ಪ್ರತಿಷ್ಠೆ ಮಾಡಿ ಪೂಜಿಸುತ್ತಿದ್ದರು. ದೈವವಶದಿಂದ ಒಂದು ದಿನ ಅದು ಸ್ವಾಮಿಗಳ ಕಣ್ಣಿಗೆ ಬಿತ್ತು. ಶಿಷ್ಯರನ್ನೆಲ್ಲ ಬಳಿಗೆ ಕರೆದು ಅವರೆದುರು ಬಾಹ್ಯಪೂಜೆಯನ್ನು ಕಠಿನವಾಗಿ ಖಂಡಿಸಿದರು. ಅದ್ವೈತಾಶ್ರಮದಲ್ಲಿ ಅಂತರಂಗದ ಸಾಧನೆಯೊಂದು ಹೊರತು ಬೇರೆ ಯಾವುದೂ ಇರಕೂಡದೆಂದು ಕಟ್ಟಪ್ಪಣೆ ಮಾಡಿದರು.

ಬೇಲೂರು ಮಠಕ್ಕೆ ಹಿಂತಿರುಗಿ ಬಂದ ಮೇಲೆ ಈ ವಿಚಾರವನ್ನು ಕುರಿತು ಹೇಳುತ್ತ "ಒಂದು ಆಶ್ರಮದಲ್ಲಿಯಾದರೂ ಬಾಹ್ಯಪೂಜೆಯಿರದಿರಲಿ ಎಂದುಕೊಂಡಿದ್ದೆ. ಆದರೆ ಅಲ್ಲಿ ಹೋಗಿ ನೋಡುತ್ತೇನೆ! ಏನು ನೋಡುವುದು? ಈ ಮುದುಕ (ಶ್ರೀರಾಮಕೃಷ್ಣ) ನನಗಿಂತಲೂ ಮೊದಲೇ ಅಲ್ಲಿಗೂ ಹೋಗಿ ನೆಲೆಸಿ ಬಿಟ್ಟಿದ್ದಾನೆ! ಹುಂ ಆಗಲಿ, ಆಗಲಿ! ಏನೇನು ಮಾಡುತ್ತಾನೋ ಮಾಡಲಿ!" ಎಂದರಂತೆ.

ದೊಡ್ಡವರ ಮಹಿಮೆ ದೊಡ್ಡ ದೊಡ್ಡ ಕಾರ್ಯಗಳಲ್ಲಿ ಹೇಗೆ ಪ್ರಕಾಶಕ್ಕೆ ಬರುವುದೊ ಹಾಗೆಯೆ ಅವರು ಮಾಡುವ ಸಣ್ಣ ಸಣ್ಣ ಕಾರ್ಯಗಳಿಂದಲೂ ಅದು ಬಯಲಿಗೆ ಬೀಳುವುದು. ಒಂದು ದಿನ ಸಣ್ಣ ಸಂಗತಿ ನಡೆಯಿತು. ಅದರಲ್ಲಿ ಸ್ವಾಮಿಗಳ ಹೃದಯದ ಸರಳತೆ, ಗಂಭೀರ ಮಾನವಪ್ರೀತಿ, ಅಸೀಮ ಶಿಷ್ಯ ಸ್ನೇಹ ಇವುಗಳು ನಮಗೆ ತಿಳಿಯಬರುತ್ತವೆ. ಆ ದಿನ ಬಹಳ ಹೊತ್ತಾದರೂ ಊಟ ತಯಾರಾಗಲೆ ಇಲ್ಲ. ಸ್ವಾಮಿಗಳು ರೇಗಿದರು. ಕಂಡಕಂಡವರನ್ನೆಲ್ಲ ಬೈದರು. ಬಾಣಸಿಗತನದಲ್ಲಿದ್ದ ಸ್ವಾಮಿ ವಿರಜಾನಂದರನ್ನು ತರಾಟೆಗೆ ತೆಗೆದುಕೊಳ್ಳುವುದಕ್ಕಾಗಿ ಅಡಿಗೆಮನೆಗೆ ನುಗ್ಗಿದರು. ಹೋಗಿ ನೋಡಲಾಗಿ ಹೊಗೆ ಕವಿದುಕೊಂಡು ಅಡಿಗೆಮನೆಯೆಲ್ಲ. ಕತ್ತಲಾಗಿತ್ತು. ಸ್ವಾಮಿಗಳು ಬಹುಕಷ್ಟದಿಂದ ಒಲೆಯ ಬಳಿ ಹೋದರು. ವಿರಜಾನಂದರು ಕಾಣಿಸಲಿಲ್ಲ. ಕರೆದರು, ಪ್ರತ್ಯುತ್ತರ ಬಂತು, ಸುತ್ತ ಮುತ್ತಿದ್ದ ಹೊಗೆಯ ನಡುವಿನಿಂದ. ವಿರಜಾನಂದರು ಉರಿಯಲೊಲ್ಲದ ಬೆಂಕಿಯನ್ನು ಊದಿ ಊದಿ ಉರಿಸಲು ಯತ್ನಿಸುತ್ತಿದ್ದರು. ಅದನ್ನು ನೋಡಿ ಸ್ವಾಮಿಗಳು ಸುಮ್ಮನೆ ಹೊರಗೆ ಬಂದರು. ಬಹಳ ಹೊತ್ತಾದ ಮೇಲೆ ವಿರಜಾನಂದರು ಊಟವನ್ನು ತಂದಾಗ ಸ್ವಾಮಿಜಿ ಸಿಟ್ಟಿಗೆದ್ದ ಬಾಲಕನಂತೆ "ನನಗೊಂದೂ ಬೇಡ; ಎಲ್ಲ ತೆಗೆದುಕೊಂಡು ಹೋಗು!" ಎಂದರು. ಶಿಷ್ಯನಿಗೆ ಗುರುಗಳ ಬಗೆ ಗೊತ್ತಿತ್ತು. ತಟ್ಟೆಯನ್ನು ಮುಂದಿಟ್ಟರು. ಸ್ವಾಮಿಗಳು ತಡಮಾಡದೆ ಕುಳಿತುಕೊಂಡು ಕೈ ಬಾಯ್ ಕಾಳಗ ಹೂಡಿದರು. ಒಂದೆರಡು ತುತ್ತು ಹೊಟ್ಟೆಗೆ ಬಿದ್ದಮೇಲೆ ಉಗ್ರ ಸ್ವರೂಪ ಮಹಾದೇವನು ಶಾಂತವಾದನು! ಮುಗುಳ್ನಗೆ ನಗುತ್ತ ಶಿಷ್ಯನನ್ನು ನೋಡಿ "ಓಹೋ ಈಗ ಗೊತ್ತಾಯಿತು, ನನಗೇಕೆ ಅಷ್ಟೊಂದು ಕೋಪ ಬಂದಿತ್ತೆಂದು, ಬಹಳ ಹಸಿದುಬಿಟ್ಟಿದ್ದೆ!" ಎಂದರು. ಗುರು ಶಿಷ್ಯರಿಬ್ಬರೂ ಚೆನ್ನಾಗಿ ನಕ್ಕು ಬಿಟ್ಟರು.

ಹಿಮಾಲಯದ ಪ್ರಬಲ ತುಷಾರವೃಷ್ಟಿಯಿಂದ ಸ್ವಾಮಿಗಳು ಮಾಯಾವತಿಯಲ್ಲಿ ಬಹುದಿನ ಬಂಧಿತರಾಗಿದ್ದರು. ಅಲ್ಲಿಯ ಅತಿಶೀತಲ ವಾಯುಗುಣ ಅವರಿಗೆ ಸರಿಬೀಳಲಿಲ್ಲ. ಆದ್ದರಿಂದ ಜನವರಿ ೨೪ನೆಯ ದಿನ ಬೇಲೂರು ಮಠಕ್ಕೆ ಹಿಂತಿರುಗಿ ಬಂದರು. ಕೆಲವು ದಿನಗಳಲ್ಲಿ ಪೂರ್ವ ವಂಗಪ್ರಾಂತ್ಯದ ಢಾಕಾ ಮೊದಲಾದ ನಗರಗಳಿಂದ ಕರೆಯ ಕಾಗದಗಳು ಬಂದುವು. ಜೊತೆಗೆ ಸ್ವಾಮಿಜಿಯ ತಾಯಿ ಭುವನೇಶ್ವರಿದೇವಿಯೂ ಪೂರ್ವ ವಂಗದೇಶದಲ್ಲಿರುವ ಪವಿತ್ರತೀರ್ಥಗಳಿಗೆ ಪುತ್ರನೊಡಗೂಡಿ ಯಾತ್ರೆ ಹೋಗಲು ಬಯಸಿದರು. ಇವೆಲ್ಲ ಕಾರಣಗಳಿಂದ ಸ್ವಾಮಿಜಿ ತಾಯಿಯೊಡಗೂಡಿ ಯಾತ್ರೆ ಹೋಗಲು ಬಯಸಿದರು. ಇವೆಲ್ಲ ಕಾರಣಗಳಿಂದ ಸ್ವಾಮಿಜಿ ತಾಯಿಯೊಡಗೂಡಿ ಕೆಲವು ಶಿಷ್ಯರನ್ನು ಕರೆದುಕೊಂಡು ಹದಿನೆಂಟನೆಯ ದಿನ ಢಾಕಾ ನಗರಕ್ಕೆ ಹೊರಟರು.

ಢಾಕಾ ನಗರದಲ್ಲಿ ಕೆಲವು ಉಪನ್ಯಾಸಗಳನ್ನು ಕೊಟ್ಟು, ತಾಯಿಯೊಡನೆ ತೀರ್ಥಗಳನ್ನು ಸಂಚರಿಸಿ ಪುನಃ ಅಸ್ವಸ್ಥರಾದ ಸ್ವಾಮಿಗಳು ಬೇಲೂರು ಮಠಕ್ಕೆ ಹಿಂತಿರುಗಿದರು. ಅವರ ಆರೋಗ್ಯ ದಿನೇ ದಿನೇ ಕ್ಷೀಣಿಸುತ್ತ ಬಂದಿತು. ಆದರೂ ದರ್ಶನಾರ್ಥಿಗಳ ಸಂಖ್ಯೆ ಮಾತ್ರ ಕುಗ್ಗುವುದಕ್ಕೆ ಬದಲಾಗಿ ಇಮ್ಮಡಿ ಇಮ್ಮಡಿ ನಾಲ್ಮಡಿಯಾಗಿ ಹಿಗ್ಗುತ್ತ ಬಂದಿತು. ಸ್ವಾಮಿಗಳು ಸ್ವಲ್ಪವೂ ಹಿಂದುಮುಂದು ನೋಡದೆ ಬಂದವರೆಲ್ಲರನ್ನೂ ಸಾದರದಿಂದ ಕಂಡು ಅವರ ಸಂದೇಹಗಳನ್ನು ಪರಿಹಾರ ಮಾಡುತ್ತಿದ್ದರು. ದೇಹ ಶಿಥಿಲವಾಗಿದ್ದರೂ ಅವರ ಆತ್ಮ ಮನಸ್ಸುಗಳು ಎಂದಿನಂತೆ ಚಿರಯೌವನಾನ್ವಿತವಾಗಿದ್ದುವು. ಅವರೊಂದು ಚಲಿಸುವ ಗುಡಿಯಾಗಿ ಹೋದಲ್ಲೆಲ್ಲ ಮಂಗಳವನ್ನು ಬೀರುತ್ತಿದ್ದರು. ಕೆಲವು ಸಾರಿ ಸಾವಧಾನವಾಗಿ ಪ್ರವಹಿಸುವ ದಿವಿಜ ನದಿಯ ಶ್ಯಾಮಲ ತೀರದಲ್ಲಿ ಕುಳಿತು ಧ್ಯಾನಮಗ್ನರಾಗುತ್ತಿದ್ದರು. ಕೆಲವು ಸಾರಿ ಮಠದ ಅಂಗಳದಲ್ಲಿ ಅತ್ತಿತ್ತ ಅಡ್ಡಾಡುತ್ತ ತಮ್ಮ ಕಾರ್ಯಗಳ ವ್ಯೂಹರಚನೆಯಲ್ಲಿ ತೊಡಗುತ್ತಿದ್ದರು. ಕೆಲವು ಸಾರಿ ತಮ್ಮೆಡೆಗೆ ಬಂದ ಅಜ್ಞಾತ ವ್ಯಕ್ತಿಗಳೊಡನೆ ಸಾದರದಿಂದ ಮಾತಾಡಿ ಅವರ ದುಃಖಗಳನ್ನು ಪರಿಹರಿಸುತ್ತಿದ್ದರು. ಮತ್ತೆ ಕೆಲವು ಸಾರಿ ಶಿಷ್ಯರಿಗೆ ಸಂನ್ಯಾಸ, ಜ್ಞಾನ, ಭಕ್ತಿ, ವೈರಾಗ್ಯ, ನಿಷ್ಕಾಮಕರ್ಮ ಇವುಗಳನ್ನು ಕುರಿತು ಬೋಧಿಸುತ್ತಿದ್ದರು. ಮಕ್ಕಳೊಡನೆ ಮಕ್ಕಳಾಗಿ, ಮುದುಕರೊಡನೆ ಮುದುಕರಾಗಿ, ಯುವಕರೊಡನೆ ಯುವಕರಾಗಿ, ಭಕ್ತರೊಡನೆ ಭಕ್ತರಾಗಿ, ಜ್ಞಾನಿಗಳೊಡನೆ ಜ್ಞಾನಿಗಳಾಗಿ, ಕರ್ಮಿಗಳೊಡನೆ ಕರ್ಮಿಯಾಗಿ ವರ್ತಿಸುತ್ತ ಸ್ವಾಮಿಗಳು ಕೆಲವು ಪರಿಣತ ಮಾಸಗಳನ್ನು ಕಳೆದರು.

ಜುಲೈ, ಆಗಸ್ಟ್ ತಿಂಗಳು ಜಾರಿದುವು. ಸ್ವಾಮಿಗಳು ಕೈಲಾದಷ್ಟು ವಿಶ್ರಾಂತಿ ತೆಗೆದುಕೊಂಡರು. ಆದರೂ ದೇಹ ಸಡಿಲವಾದ ಯಂತ್ರದಂತೆ ದಿನದಿನಕ್ಕೂ ಶಿಥಿಲವಾಗತೊಡಗಿತು. ಒಂದು ದಿನ ಅವರ ಶಿಷ್ಯರಾದ ಶರಚ್ಚಂದ್ರ ಚಕ್ರವರ್ತಿಗಳು ಯೋಗಕ್ಷೇಮವನ್ನು ವಿಚಾರಿಸಲು, ಸ್ವಾಮಿಗಳು "ವತ್ಸ! ಇನ್ನೇಕೆ ನನ್ನ ಆರೋಗ್ಯ ವಿಚಾರ? ದಿನದಿನಕ್ಕೂ ದೇಹ ಹೆಚ್ಚು ಹೆಚ್ಚಾಗಿ ಕುಸಿದುಬೀಳುತ್ತಿದೆ. ವಂಗದೇಶದಲ್ಲಿ ಹುಟ್ಟಿದ ಈ ದೇಹಕ್ಕೆ ರೋಗ ತಪ್ಪಲಿಲ್ಲ. ಈ ಪ್ರಾಂತದ ಆರೋಗ್ಯವೆ ಕೆಟ್ಟುಹೋಗಿದೆ. ಸ್ವಲ್ಪ ಕೆಲಸ ಮಾಡಿದರೆ ಸರಿ, ಆಗಲೇ ಖಾಯಿಲೆ! ಈ ದೇಹವಿರುವಲ್ಲಿಯವರೆಗೂ ನಿಮಗೆಲ್ಲರಿಗಾಗಿ ದುಡಿಯುತ್ತೇನೆ, ಕಡೆಗೂ ದುಡಿಯುತ್ತಲೇ ಮಡಿಯುತ್ತೇನೆ! ವತ್ಸ, ನನಗೆ ವಿಶ್ರಾಂತಿ ಎಂಬುದಿಲ್ಲ. ಭಗವಾನರು ಯಾವುದನ್ನು 'ಕಾಳಿ' ಎಂದು ಕರೆಯುತ್ತಿದ್ದರೊ ಅದು ಅವರ ಮಹಾಸಮಾಧಿಗೆ ಮೂರು ದಿನಗಳ ಮುನ್ನವೆ ನನ್ನ ಮೈಮೇಲೆ ಬಂದುಬಿಟ್ಟಿತು. ಅದು ನನ್ನನ್ನು ಸುಮ್ಮನಿರಲು ಬಿಡುವುದಿಲ್ಲ. ಕೆಲಸ! ಕೆಲಸ! ಕೆಲಸ! ದೇಹದ ಕಡೆಗೆ ಕಣ್ಣಿಡಲು ಕೂಡ ಸಮಯವಿಲ್ಲ!" ಎಂದು ಹೇಳಿ ಕಣ್ಣು ಮುಚ್ಚಿ ಚಿಂತಾಮಗ್ನರಾದರು.

ದುರ್ಗಾಪೂಜೆಯ ದಿನಗಳು ಬಂದುವು. ಸ್ವಾಮಿಗಳು ಎಲ್ಲ ಕರ್ಮಗಳನ್ನೂ ಪ್ರಾಚೀನ ಸಂಪ್ರದಾಯದ ರೀತಿಯಲ್ಲಿಯೇ ಮಾಡಿಸಿದರು. ತಾವೇ ಪೂಜೆಗಳಲ್ಲಿ ಭಾಗಿಯಾಗಿದ್ದರು. ಅದ್ವೈತವಾದಿಯಾದರೂ ಅವರು ಮೂರ್ತಿಪೂಜೆ ಮತ್ತು ದೇವ ದೇವಿಯರ ಆರಾಧನೆ ಇವುಗಳಲ್ಲಿ ಗಭೀರ ಸತ್ಯವಿದೆ ಎಂದು ಹೇಳುತ್ತಿದ್ದರು. ತಾವು ಹಿಂದೂ ಧರ್ಮವನ್ನು ನಷ್ಟಗೊಳಿಸಲು ಬಂದವರಲ್ಲ, ಅದಕ್ಕೆ ನೂತನ ಜ್ಯೋತಿಯನ್ನು ದಾನ ಮಾಡಲು ಬಂದವರು ಎಂದು ಹೇಳಿಕೊಳ್ಳುತ್ತಿದ್ದರು. "ಜೀರ್ಣಗೈಯಲು ನಾನು ಬರಲಿಲ್ಲ. ಪೂರ್ಣಗೈಯಲು ಬಂದಿಹೆನು" ಎಂಬುದವರ ಮಾರ್ಗವಾಗಿತ್ತು.

ಅಕ್ಟೋಬರ್ ತಿಂಗಳಲ್ಲಿ ಪುನಃ ಸ್ವಾಮಿಗಳ ಅಸ್ವಸ್ಥತೆ ಪ್ರಬಲವಾಯಿತು. ವೈದ್ಯರು ಯಾವ ವಿಧವಾದ ಮಾನಸಿಕ ಅಥವಾ ದೈಹಿಕ ಕಾರ್ಯಗಳನ್ನೂ ಮಾಡಕೂಡದೆಂದು ಬೆಸಸಿದರು. ಸ್ವಾಮಿಗಳು ಹಾಸಿಗೆ ಹಿಡಿದರು. ಸೋದರ ಮತ್ತು ಶಿಷ್ಯ ಸಂನ್ಯಾಸಿಗಳು ಬಹಳ ಎಚ್ಚರಿಕೆಯಿಂದ ಶುಶ್ರೂಷೆ ಮಾಡತೊಡಗಿದರು. ಯಾರೂ ಅವರೊಡನೆ ಗಹನ ವಿಷಯಗಳನ್ನು ಪ್ರಸ್ತಾಪಿಸಬಾರದೆಂದು ದರ್ಶನಾರ್ಥಿಗಳಿಗೆ ಕಟ್ಟಪ್ಪಣೆಯಿತ್ತರು. ಇಷ್ಟಾದರೂ ಕೂಡ ನಡುನಡುವೆ ಸ್ವಾಮಿಗಳು ಏನಾದರೂ ಕೆಲಸ ಮಾಡದೆ ಇರುತ್ತಿರಲಿಲ್ಲ. ಇಲ್ಲ, ತೋಟಕ್ಕೆ ಹೋಗಿ ಚಿಕ್ಕ ಮಕ್ಕಳಂತೆ ಹೂವಿನ ಗಿಡಗಳನ್ನು ನೆಡುವರು. ಇಲ್ಲ ಪದ್ಮಾಸನ ಹಾಕಿಕೊಂಡು ಧ್ಯಾನ ಮಾಡುವರು. ಇಲ್ಲ, ಕಲ್ಕತ್ತಾದಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ವ್ಯೂಹರಚನೆಗೆ ಕೈಹಾಕುವರು. ಅದೂ ಆಗದೆ ಹೋದರೆ ವೇದೋಪನಿಷತ್ತುಗಳಿಂದ ಶ್ಲೋಕಗಳನ್ನು ಘೋಷಿಸಿ ಗಾನ ಮಾಡುವರು.

ಇದೇ ಸಮಯದಲ್ಲಿ ಕಲ್ಕತ್ತಾ ನಗರದಲ್ಲಿ ಭಾರತೀಯ ಕಾಂಗ್ರೆಸ್ಸು ನಡೆಯಿತು.. ಅಸ್ವಸ್ಥರಾದ ಸ್ವಾಮಿಗಳು ಅಲ್ಲಿಗೆ ಹೋಗದಿದ್ದರೂ ಕಾಂಗ್ರೆಸ್ಸಿಗೆ ಬಂದ ದೊಡ್ಡ ದೊಡ್ಡ ದೇಶಭಕ್ತರು ಬೇಲೂರು ಮಠಕ್ಕೆ ಬಂದು ಜಗದ್ವಿಖ್ಯಾತ ದೇಶಭಕ್ತ ಸಂನ್ಯಾಸಿಯನ್ನು ಕಂಡು ನಮಸ್ಕರಿಸಿ ಅನೇಕ ವಿಚಾರಗಳನ್ನು ಚರ್ಚೆ ಮಾಡಿ ತಿಳಿದುಕೊಂಡು ಧನ್ಯರಾಗಿ ಹೋದರು.

ಡಿಸೆಂಬರ್ ತಿಂಗಳ ಅಂತ್ಯಭಾಗದಲ್ಲಿ ಸ್ವಾಮಿಗಳ ರೋಗ ಸ್ವಲ್ಪ ಗುಣಮುಖವಾಯಿತು. ಅದಕ್ಕೆ ತಕ್ಕಂತೆ ಮತ್ತೊಂದು ಯಾತ್ರೆಯೂ ಸಿದ್ಧವಾಯಿತು. ಜಪಾನಿನಿಂದ ಒಕಾಕುರ ಎಂಬ ದೊಡ್ಡ ವಿದ್ವಾಂಸನು ಬೇಲೂರು ಮಠಕ್ಕೆ ಬಂದು ಸ್ವಾಮಿಗಳನ್ನು ಕಂಡು ಅವರೊಡನೆ ಕೆಲವು ದಿನಗಳನ್ನು ಕಳೆದನು. ಒಕಾಕುರನು ಸ್ವಾಮಿಗಳನ್ನು ತಮ್ಮೊಡನೆ ಬುದ್ಧಗಯೆಗೆ ಬರುವಂತೆ ಪ್ರಾರ್ಥಿಸಿದನು. ಸ್ವಾಮಿಗಳು ಒಪ್ಪಿದರು. ಒಕಾಕುರನೊಡನೆ ಸ್ವಾಮಿಗಳು ಬುದ್ಧಗಯೆಗೆ ಹೋಗಿ, ಅಲ್ಲಿಂದ ಕಾಶಿಗೆ ಪ್ರಯಾಣ ಮಾಡಿ, ಅಲ್ಲಿ ಕೆಲವು ದಿನಗಳಿದ್ದು, ಪುನಃ ಶ್ರೀರಾಮಕೃಷ್ಣರ ಜಯಂತ್ಯುತ್ಸವದ ಕಾಲಕ್ಕೆ ಸರಿಯಾಗಿ ಬೇಲೂರಿಗೆ ಬಂದರು. ಉತ್ಸವವೇನೊ ವಿಜೃಂಭಣೆಯಿಂದ ಜರುಗಿತು. ಆದರೆ ಎಲ್ಲರ ಹೃದಯದಲ್ಲಿಯೂ ಕಳವಳ ತುಂಬಿತ್ತು. ಸ್ವಾಮಿಗಳು ಹಾಸಿಗೆ ಹಿಡಿದು ಕೋಣೆಯಿಂದ ಹೊರಗೆ ಬರಲಾರದವರಾದರು.

೧೯೦೨ನೆಯ ಸಂವತ್ಸರದ ಮೇ, ಜೂನ್ ತಿಂಗಳ ಹೊತ್ತಿಗೆ ಕಾಯಿಲೆ ಸ್ವಲ್ಪ ವಾಸಿಯಾದರೂ ಸ್ವಾಮಿಗಳ ವೃತ್ತಿ ವರ್ತನೆಗಳು ಸಂಪೂರ್ಣವಾಗಿ ಬದಲಾಯಿಸಿದುವು. ಎಂದಿಗಿಂತಲೂ ಅತಿಶಯವಾಗಿ ಅಂತರ್ಮುಖಿಯಾಗಿರುತ್ತಿದ್ದರು. ಸರ್ವಕಾರ್ಯಗಳಲ್ಲಿಯೂ ಒಂದು ವಿಧವಾದ ಔದಾಸೀನ್ಯವನ್ನು ಪ್ರಕಾಶಗೊಳಿಸಲು ತೊಡಗಿದರು. ಆಚಾರ್ಯ, ಗುರು,

ಶಿಕ್ಷಕ, ನಾಯಕ ಮೊದಲಾದ ಉಪಾಧಿಗಳು ಸಡಿಲವಾಗಿ ಕಳಚಿಬೀಳತೊಡಗಿದುವು. ಸಿಡಿಲಾಳು ಮೆಲ್ಲಮೆಲ್ಲನೆ ಬ್ರಹ್ಮದ ಚಿರ ಯೌವನದಲ್ಲಿ ಮುಳುಗತೊಡಗಿದನು. ಶ್ರೀರಾಮಕೃಷ್ಣರು "ಎಂದು ನರೇಂದ್ರನಿಗೆ ತನ್ನ ಸ್ವರೂಪ ತಿಳಿಯುವುದೋ ಅಂದು ದೇಹ ಬಿಡುವನು" ಎಂದು ಹೇಳಿದ್ದರು.

ಶಿಷ್ಯನೊಬ್ಬನು "ಪರಮಹಂಸರು ಹೀಗೆಂದು ಹೇಳಿದ್ದರಂತೆ, ಸ್ವಾಮಿಜಿ ನಿಮ್ಮ ಸ್ವರೂಪ ನಿಮಗೆ ಗೊತ್ತಾಗಿದೆಯೆ?" ಎಂದು ಕೇಳಿದನು.

ಸ್ವಾಮಿಜಿ "ಹೌದು ಗೊತ್ತಾಗಿದೆ" ಎಂದರು.

ಸ್ವಾಮಿಗಳ ಗಂಭೀರ ಭಾವವನ್ನು ನೋಡಿ ಮುಂದೆ ಯಾರಿಗೂ ಪ್ರಶ್ನೆ ಮಾಡಲು ಧೈರ್ಯ ಬರಲಿಲ್ಲ. ಸ್ವಾಮಿಗಳ ರೋಗ ಸ್ವಲ್ಪ ಹಿಮ್ಮೆಟ್ಟಿದುದರಿಂದ ಎಲ್ಲರೂ ಧೈರ್ಯಗೊಂಡರು. ಅವರೂ ಸೋದರ ಸಂನ್ಯಾಸಿಗಳೊಡನೆ ಹಾಸ್ಯ ಪರಿಹಾಸ್ಯ ಆಟಪಾಟಗಳಲ್ಲಿ ತೊಡಗಿದರು.

ಆದರೂ ಭಯಂಕರ ದಿನವು ಇರುಳಿನ ಕರಿಯ ನೆಳಲಂತೆ ಸದ್ದಿಲ್ಲದೆ ಹೆಜ್ಜೆಗಳನ್ನು ಇಡುತ್ತ ಬಳಿಸಾರಿತು. ಭಾರತೀಯ ಸೂರ್ಯದೇವನು ಮೆಲ್ಲಮೆಲ್ಲನೆ ಪಡುವೆಟ್ಟನೆಡೆಗ ಸರಿಯತೊಡಗಿದನು. ಮಹಾಸಮಾಧಿಗೆ ಇನ್ನೊಂದು ವಾರವಿದೆ ಎನ್ನುವಾಗ ಒಂದು ದಿನ ಆಚಾರ್ಯದೇವನು ಸ್ವಾಮಿ ಶುದ್ಧಾನಂದಜಿಯನ್ನು ಬಳಿಗೆ ಕರೆದು ಬಂಗಾಳಿ ಪಂಚಾಂಗವನ್ನು ತರುವಂತೆ ಹೇಳಿದನು. ಶುದ್ಧಾನಂದರು ಪಂಚಾಂಗವನ್ನು ತರಲು, ಪ್ರತಿದಿನದ ವಿಷಯಗಳನ್ನೂ ಓದಲು ಹೇಳಿದರು. ಶಿಷ್ಯರು ಓದಿದರು. ಗುರುವರ್ಯರ ಮುಖಭಾವವನ್ನು ನೋಡಿ, ಯಾವುದೊ ಒಂದು ವಿಶೇಷಕಾರ್ಯಕ್ಕೆ ದಿನವನ್ನು ಗೊತ್ತುಮಾಡುತ್ತಿದ್ದಾರೆಂದು ಅವರು ತಿಳಿದರು. ಶುದ್ಧಾನಂದರು ಜುಲೈ ನಾಲ್ಕನೆಯ ದಿನದ ವಿಷಯಗಳನ್ನು ಓದಿ ಪೂರೈಸಿ ಐದನೆಯ ದಿನಕ್ಕೆ ಕೈಹಾಕಿದರು.

ಸ್ವಾಮಿಗಳು "ಸಾಕು, ಅಲ್ಲಿಗೆ ಸಾಕು" ಎಂದರಂತೆ.

ಜುಲೈ ಒಂದನೆಯ ದಿನ ಸ್ವಾಮಿಗಳು ಸೋದರ ಶಿಷ್ಯರೊಡನೆ ಮಠದ ಅಂಗಳದಲ್ಲಿ ತಿರುಗಾಡುತ್ತಿದ್ದರು. ಆಗ ಅವರು ಗಂಗಾತೀರದ ಒಂದು ಸ್ಥಳವನ್ನು ಕೈಬೆರಳಿಂದ ತೋರಿಸುತ್ತ "ನಾನು ದೇಹ ಬಿಟ್ಟಮೇಲೆ ನನಗೆ ಅಲ್ಲಿಯೆ ಅಗ್ನಿ ಸಂಸ್ಕಾರ ಮಾಡಿ" ಎಂದರು. ಆದರೆ ಯಾರಿಗೂ ಯಾವ ಪ್ರಶ್ನೆಯನ್ನು ಕೇಳುವುದಕ್ಕೂ ಧೈರ್ಯ ಬರಲಿಲ್ಲ.

೧೯೦೨ನೆಯ ಸಂವತ್ಸರದ ಜುಲೈ ತಿಂಗಳು ೪ನೆಯ ತಾರೀಖಿನ ದಿನವೂ ಮೂಡಿತು. ಆಚಾರ್ಯದೇವನು ಆ ದಿನ ಪ್ರಾತಃಕಾಲ ಎಂದಿಗಿಂತಲೂ ಮುಂಚಿತವಾಗಿ ಎದ್ದು, ದೇವರ ಕೋಣೆಗೆ ಹೋಗಿ ಕಿಟಕಿ ಬಾಗಿಲುಗಳನ್ನೆಲ್ಲ ಹಾಕಿಕೊಂಡು ಧ್ಯಾನಮಗ್ನನಾದನು. ದೇವಮಂದಿರದಿಂದ ಹೊರಗೆ ಬಂದವರು ಕಾಳೀಪೂಜೆ ಮಾಡಬೇಕೆಂದು ಹೇಳಿದರು. ಅದೂ ನಡೆಯಿತು. ಸ್ವಾಮಿಜಿ ಪುನಃ ದೇವಮಂದಿರಕ್ಕೆ ಹೋಗಿ ಧ್ಯಾನಲೀನರಾದರು. ಬಹಳ ಹೊತ್ತಾದ ಮೇಲೆ ಹೊರಗೆ ಬಂದು "ಮನವೆ, ನಡೆ ನಿನ್ನ ಮನೆಗೆ" ಎಂಬರ್ಥದ ಗೀತೆಯೊಂದನ್ನು ಹಾಡುತ್ತ ಪ್ರಾಂಗಣದಲ್ಲಿ ತಿರುಗುತ್ತಿದ್ದರು. ಅವರ

ವದನಮಂಡಲ ಅಲೌಕಿಕ ಜ್ಯೋತಿಯಿಂದ ಶೋಭಿಸುತ್ತಿತ್ತು. ಸ್ವಾಮಿ ಪ್ರೇಮಾನಂದರು ದೂರದಲ್ಲಿ ನಿಂತು ಎಲ್ಲವನ್ನೂ ನೋಡುತ್ತಿದ್ದರು.

ಯೋಗಾಚಾರ್ಯನು ಇದ್ದಕ್ಕಿದ್ದ ಹಾಗೆ ಒಂದು ಕಡೆ ನಿಂತು ನೀಲಾಕಾಶವನ್ನು ನೋಡುತ್ತ ತನ್ನೊಳು ತಾನೆ "ಇನ್ನೊಬ್ಬ ವಿವೇಕಾನಂದನು ಇದ್ದಿದ್ದರೆ, ಅವನಿಗೆ ತಿಳಿಯುತ್ತಿತ್ತು, ಈ ವಿವೇಕಾನಂದನು ಏನು ಮಾಡಿದ್ದಾನೆ ಎಂದು! ಆದರೆ - ಕಾಲಾಂತರದಲ್ಲಿ ವಿವೇಕಾನಂದರು ಇನ್ನೆಷ್ಟು ಜನ ಹುಟ್ಟುವರು!!" ಎಂದು ಕೊಂಡರು.

ಅದನ್ನು ಕೇಳಿ ಪ್ರೇಮಾನಂದರು ಚಕಿತರಾದರು. ಏಕೆಂದರೆ ಸ್ವಾಮಿಜಿ ಉಚ್ಚತಮ ಭಾವಭೂಮಿಕೆಯಲ್ಲಿ ಇದ್ದಾಗಲಲ್ಲದೆ ಮತ್ತಾವಾಗಲೂ ಹಾಗೆ ಮಾತಾಡುತ್ತಿರಲಿಲ್ಲ! ಅವರು ಆ ದಿನವೆ ದೇಹತ್ಯಾಗ ಮಾಡಲು ಸಂಕಲ್ಪಿಸಿ ಯೋಗಾರೂಢರಾಗಿದ್ದರೆಂಬುದು ಪ್ರೇಮಾನಂದರಿಗೆ ಹೊಳೆಯಲಿಲ್ಲ.

ನಿಯಮಿತ ಸಮಯದಲ್ಲಿ ಭೋಜನಕ್ಕೆ ಘಂಟಾಧ್ವನಿಯಾಯಿತು. ಸ್ವಾಮಿಗಳು ಎಂದಿನಂತೆ ಶಿಷ್ಯರೊಡನೆ ಸೇರಿ ನಾನಾ ವಿಧವಾದ ಹಾಸ್ಯ ಪರಿಹಾಸ್ಯಗಳನ್ನು ಮಾಡುತ್ತ ಊಟ ಮಾಡಿದರು. ಅದೇ ಅವರ ಕಟ್ಟಕಡೆಯ ಹಾಸ್ಯಪರಿಹಾಸ್ಯಗಳೆಂದು ಅರಿಯದೆ ಶಿಷ್ಯವೃಂದ ಗುರುಗಳಿಗೆ ಆರೋಗ್ಯ ಪ್ರಾಪ್ತವಾಯಿತೆಂದು ತಿಳಿದು ಬಹಳ ಹಿಗ್ಗಿದರು. ಊಟವಾದ ಮೇಲೆ ಕೆಲ ಹೊತ್ತು ವಿಶ್ರಾಂತಿ ತೆಗೆದುಕೊಂಡು, ತರುವಾಯ ಶಿಷ್ಯರಿಗೆ ಮೂರು ಗಂಟೆಗಳ ಕಾಲ ಲಘುಕೌಮುದಿ ಎಂಬ ಸಂಸ್ಕೃತ ವ್ಯಾಕರಣವನ್ನು ಪಾಠ ಹೇಳಿದರು. ನೀರಸವಾದ ಆ ಗ್ರಂಥವನ್ನು ಮೂರು ಗಂಟೆಗಳ ಕಾಲ ಪಾಠ ಹೇಳಿದರೂ ಯಾರೊಬ್ಬರಿಗೂ ಬೇಸರವಾಗಲಿಲ್ಲ. ಮಧ್ಯೆ ಮಧ್ಯೆ ಏನಾದರೂ ವಿನೋದಗಳು ಇದ್ದೇ ಇರುತ್ತಿದ್ದುವು.

ಅಪರಾಹ್ನವಾಯಿತು. ಸ್ವಾಮಿಗಳು ಪ್ರೇಮಾನಂದರನ್ನು ಜೊತೆಯಲ್ಲಿ ಕರೆದುಕೊಂಡು ಹೊರಗಡೆ ಅಡ್ಡಾಡಲು ಹೋದರು. ಪ್ರೇಮಾನಂದರು "ಸ್ವಾಮಿಜಿ, ವೇದಗಳನ್ನು ಓದುವುದರಿಂದ ಏನು ಉಪಕಾರ?" ಎಂದರು. ಸ್ವಾಮಿಜಿ "ಮೌಢ್ಯವಾದರೂ ನಷ್ಟವಾಗುತ್ತದೆ!" ಎಂದರು.

ಸಂಚಾರ ಮುಗಿಸಿಕೊಂಡು ಸ್ವಾಮಿಗಳು ಹಿಂತಿರುಗಿ ಬಂದರು. ನೇಸರು ಪಡುವಣ ದೆಸೆಯಲ್ಲಿ ತೊಳತೊಳಗಿ ಬೈಗುಗೆಂಪನ್ನು ಬೀರಿ ಮುಳುಗಿದನು. ಆಚಾರ್ಯದೇವನು ಶಿಷ್ಯಮಂಡಲಿಯನ್ನು ಬಳಿಗೆ ಕರೆದು ಉಪದೇಶ ಮಾಡಿದನು. ತರುವಾಯ ಒಬ್ಬರೊಬ್ಬರೂ ಆತನಿಗೆ ಅಡ್ಡಬಿದ್ದು ಧ್ಯಾನ ಮಾಡಲು ತೆರಳಿದರು. ಸ್ವಾಮಿಗಳು ಮೆಲ್ಲಮೆಲ್ಲನೆ ಮಹಡಿಯಲ್ಲಿದ್ದ ತಮ್ಮ ಕೊಠಡಿಗೆ ಹೋದರು.

ಬ್ರಹ್ಮಚಾರಿಯೊಬ್ಬನು ಸರ್ವದಾ ಸ್ವಾಮಿಗಳ ಜೊತೆ ಇರುತ್ತಿದ್ದನು. ಸ್ವಾಮಿಗಳು ಎಲ್ಲ ಕಿಟಕಿ ಬಾಗಿಲುಗಳನ್ನೂ ತೆರೆಯುವಂತೆ ಆತನಿಗೆ ಹೇಳಿದರು. ಹೊರಗಡೆ ಜನನಿಬಿಡ ಘೋರಾಂಧಕಾರ ಕವಿದಿತ್ತು. ಎದುರುಗಡೆ ಭಾಗೀರಥಿಯ ವಿಶಾಲ ವಕ್ಷಸ್ಥಳದಲ್ಲಿ ತೀರದಲ್ಲಿದ್ದ ಸೌಧಗಳ ಮಣಿದೀಪ ಮಾಲೆಗಳು ಪ್ರತಿಬಿಂಬಿಸಿ, ಮೃದುತರಂಗ ನೃತ್ಯದಲ್ಲಿ ಕಂಪಿಸುತ್ತಿದ್ದುವು. ಮೇಲುಗಡೆ ಅಗಣಿತ ನಕ್ಷತ್ರಪುಂಜಗಳನ್ನು ವಕ್ಷಸ್ಥಳದಲ್ಲಿ ಧರಿಸಿದ್ದ ಆಕಾಶ ನಿಸ್ತಬ್ಧವಾಗಿತ್ತು.

ಕಳವಳದಿಂದ ಕೂಡಿದ ತಂಗಾಳಿ ಬಿರುಬಿರನೆ ಬೀಸುತ್ತಿತ್ತು. ಆತ್ಮಮಗ್ನ ವಿವೇಕಾನಂದರು ದಕ್ಷಿಣೇಶ್ವರದ ಕಡೆಗೆ ಕಣ್ಣಿಟ್ಟು ನೋಡಿದರು. ಕಗ್ಗತ್ತಲೆಯನ್ನು ಭೇದಿಸಿಕೊಂಡು ಹೋದ ಅವರ ದೃಷ್ಟಿಗೆ ಏನು ತೋರಿತು! ಯಾರು ಹೇಳುವರು? ದಕ್ಷಿಣೇಶ್ವರದ ಯುಗಾವತಾರನು ಕಾಣಿಸಿಕೊಂಡನೆ! ಯುಗಪ್ರವರ್ತಕ ಯೋಗೀಶ್ವರನ ಜ್ಞಾನ ದೃಷ್ಟಿಗೆ ಜಗತ್ತು ಒಂದು ತೆಳ್ಳನೆಯ, ಬಹು ತೆಳ್ಳನೆಯ, ಪರದೆಯಂತೆ ತೋರಿತು. ರಹಸ್ಯತಮ ಯವನಿಕೆಯ ಹಿಂದೆ ಯಾವ ಆನಂದನಿಕೇತನ ಕಾಣಿಸಿಕೊಂಡಿರಬಹುದು? ಪ್ರಸ್ತರ ಮೂರ್ತಿಯಂತೆ ನಿಂತಿದ್ದ ಸ್ವಾಮಿಜಿ ಬಹುಕ್ಷಣಗಳಾದ ಮೇಲೆ ತೆಕ್ಕನೆ ಎಚ್ಚತ್ತವರಂತೆ ಹಿಂತಿರುಗಿದರು. ಬಳಿಯಿದ್ದ ಬ್ರಹ್ಮಚಾರಿಗೆ ಹೊರಗೆ ಹೋಗಿ ಜಪ ಮಾಡುವಂತೆ ಹೇಳಿ ತಾವೂ ಒಂದು ಜಪಮಾಲೆಯನ್ನು ಹಿಡಿದು ಪದ್ಮಾಸನ ಹಾಕಿ ಕುಳಿತರು.

ಒಂದು ಗಂಟೆಯಾದ ಮೇಲೆ ಮೇಲೆದ್ದು ಬ್ರಹ್ಮಚಾರಿಯನ್ನು ಕರೆದು ಬಿಜ್ಜಣ ವಿಕ್ಕುವಂತೆ ಹೇಳಿ ಮಂಚದ ಮೇಲೆ ಮಲಗಿದು. ಜಪಮಾಲಾಹಸ್ತನಾದ ಮಹಾಪುರುಷನ ದೇಹ ನಿಸ್ಪಂದವಾಗಿತ್ತು. ಸ್ಥಿರವಾಗಿತ್ತು. ರಾತ್ರಿ ಒಂಭತ್ತು ಗಂಟೆ ಹೊಡೆಯಿತು. ಸ್ವಾಮಿಗಳ ಕೈ ಗಡಗಡ ನಡುಗಿದುವು. ನಿದ್ದೆಯಲ್ಲಿರುವ ಶಿಶುವಿನಂತೆ ಅಸ್ಫುಟವಾಗಿ ಅಳತೊಡಗಿದರು. ಒಡನೆಯೆ ಶಾಂತರಾಗಿ ಎದ್ದುಕುಳಿತರು. ಎರಡು ಸಾರಿ ದೀರ್ಘವಾಗಿ ನಿಟ್ಟುಸಿರುಬಿಟ್ಟರು. ಕೂಡಲೆ ಹಾಸಿಗೆಯ ಮೇಲೆ ಉರುಳಿದರು. ದಿಗಿಲುಬಿದ್ದ ಬ್ರಹ್ಮಚಾರಿ ಕಿಂಕರ್ತವ್ಯ ವಿಮೂಢನಾಗಿ ಮಹಡಿಯಿಂದ ಕೆಳಕ್ಕೆ ಹಾರಿ ಬಿದ್ದು ಓಡಿಹೋಗಿ ಹಿರಿಯ ಸಂನ್ಯಾಸಿಗಳಿಗೆ ಸುದ್ದಿಯನ್ನು ಒದರಿಬಿಟ್ಟನು. ಎಲ್ಲರೂ ಓಡಿಬಂದು ನೋಡಿದರು.

ಯೋಗಿವರ್ಯನು ಅನಂತ ನಿದ್ರೆಯಲ್ಲಿದ್ದನು! ಕವಿದಿದ್ದ ಕಗ್ಗತ್ತಲೆಯ ಅಂತರಾಳದಿಂದ ಬಂದು ಜಗನ್ಮಾತೆ ತನ್ನ ರಣಶ್ರಾಂತ ವೀರಪುತ್ರನನ್ನು ಎದೆಗಪ್ಪಿಕೊಂಡು ಹೋಗಿಬಿಟ್ಟಿದ್ದಳು! ಯೋಗಿ ಅಂತರ್ಧಾನವಾಗಿದ್ದನು; ಮಂತ್ರದ್ರಷ್ಟನು ಮಾಯವಾಗಿದ್ದನು! ಶ್ರೀರಾಮಕೃಷ್ಣರ ಪ್ರಿಯತಮ ಶಿಷ್ಯನು ಗುರುಚರಣಸ್ಥನಾಗಿದ್ದನು! ವೇದಾಂತ ತತ್ತ್ವಗತನಾಗಿದ್ದನು! ನರನಾಗಿ ಬಂದ ನರಮಹರ್ಷಿ ನಾರಾಯಣನಲ್ಲಿ ಮುಳುಗಿ ಕಣ್ಮರೆಯಾಗಿದ್ದನು!

ಬಾಂದಳದಲ್ಲಿ ಇದ್ದಕ್ಕಿದ್ದ ಹಾಗೆ ಬರಸಿಡಿಲು ಬಡಿದಂತಾಯಿತು. ಹೀಗಾಗುತ್ತದೆಂದು ಯಾರೂ ಕನಸಿನಲ್ಲಿಯೂ ಭಾವಿಸಿರಲಿಲ್ಲ. ಕೆಲವರು ಅವರ ಮರಣ ವಾರ್ತೆಯನ್ನು ನಂಬದೆ ಹೋದರು. ಕೆಲವರು ವಿಸ್ಮಯಸ್ತಂಭಿತರಾದರು. ಸಂನ್ಯಾಸಿಗಳೆಲ್ಲರೂ ಕಂಗೆಟ್ಟು, ಎದೆಗೆಟ್ಟು ಹೋದರು. ನೂರಾರು ದೂತರು ದುಃಖವಾರ್ತೆಯನ್ನು ಹರಡಲು ಹೊರಟರು. ತಂತಿಗಳು ಪೂರ್ವಾರ್ಧ ಪಶ್ಚಿಮಾರ್ಧ ಗೋಳಗಳಲ್ಲಿ ಸಂಚರಿಸತೊಡಗಿದುವು. ಲಕ್ಷ ಲಕ್ಷ ಜನಗಳು ವಾರ್ತೆಯನ್ನು ಕೇಳಿ, ನಂಬಲಾರದೆ "ಎಲ್ಲಿಯಾದರೂ ಉಂಟೆ?" ಎಂದು ಹೇಳಿ ಮೂಕರಾದರು. ಭರತಮಾತೆ ವಿಷಣ್ಣವದನೆಯಾದಳು.

ಬೆಳಗಾಗುತ್ತಲೆ ಬೇಲೂರು ಮಠ ಜನರಿಂದ ತುಂಬಿಹೋಯಿತು. ಎತ್ತಲೂ ಕಳವಳ! ಎಲ್ಲೆಲ್ಲಿ ನೋಡಿದರೂ ಶೋಕ! ಜನರು ಒಬ್ಬೊಬ್ಬರಾಗಿ ಬಂದು ಸ್ವಾಮಿಗಳ ದಿವ್ಯದೇಹ ದರ್ಶನ ಮಾಡಿದರು. ಕೆಲವರು ಆಚಾರ್ಯದೇವನು ಸಮಾಧಿಯಲ್ಲಿರಬಹುದೆಂದು ಆಲೋಚಿಸಿ, ಮೃತ್ಯುವನ್ನು ವಂಚಿಸಿ ಪ್ರಲೋಭನಗೊಳಿಸತೊಡಗಿದರು. ಪರೀಕ್ಷೆಗಾಗಿ ವೈದ್ಯರು ಬಂದರು. ಒಬ್ಬೊಬ್ಬರು ಒಂದೊಂದು ವಿಧವಾಗಿ ಹೇಳಿದರು. ಬರಬರುತ್ತ ದೇಹವು ನಿಷ್ಪಂದಶೀತಲವಾಯಿತು. ಸಹಸ್ರ ಜನರ ಕ್ರಂದನಧ್ವನಿಯೆದ್ದು ಬಹುದೂರದವರೆಗೂ ಹಬ್ಬಿ ಮರುದನಿಯಾಯಿತು.

ಸ್ವಲ್ಪ ಹೊತ್ತಿನ ಮೇಲೆ ದೇಹ ಮಹಡಿಯಿಂದ ಕೆಳಗಿಳಿಸಲ್ಪಟ್ಟಿತು. ಕಾಷಾಯ ವಸ್ತ್ರಗಳಿಂದ ಅದನ್ನು ಸುತ್ತಿದರು. ವಿವಿಧ ಪುಷ್ಪಮಾಲಿಕೆಗಳನ್ನು ತೊಡಿಸಿದರು. ಚಂದನವನ್ನು ಲೇಪಿಸಿದರು. ಮಂಗಳಾರತಿ ಬೆಳಗಿದರು. ಸುಗಂಧ ದ್ರವ್ಯಗಳನ್ನು ಉರಿಸಿದರು. ಶಂಖಧ್ವನಿಯೆದ್ದಿತು. ಗಂಟೆಗಳು ಕೂಗಿದುವು. ಕಡೆಗೆ ಶ್ಮಶಾನಯಾತ್ರೆ ಪ್ರಾರಂಭವಾಯಿತು. "ಜೈ ಗುರುಮಹಾರಾಜಕೀ ಜೈ! ಜೈ ಸ್ವಾಮಿಜಿ ಮಹಾರಾಜಕೀ ಜೈ!" ಎಂಬ ಮಹಾರವ ಅಂಬರಕ್ಕೇರಿತು.

ಭೀಷಣ ಸ್ಮಶಾನದಲ್ಲಿ ತಳತಳಿಸಿ ಮೇಲೆದ್ದು ಲೋಹಿತಾಗ್ನಿ ಜ್ವಾಲೆಗಳು ಮಿಥ್ಯೆಯನ್ನು ಭಸ್ಮೀಭೂತವನ್ನಾಗಿ ಮಾಡಿದುವು. ಅಷ್ಟುಹೊತ್ತಿಗೆ ಸೂರ್ಯದೇವನು ಅಸ್ತಗಿರಿಯ ಮಸ್ತಕದಲ್ಲಿ ಇಳಿದನು. ಮೆಲ್ಲಮೆಲ್ಲನೆ ಕತ್ತಲೆ ಕವಿಯಿತು. ಯುಗಮಹರ್ಷಿಯ ಅಲೌಕಿಕ ತೇಜೋಮಂಡಿತ ಕಾಯ ಮಾಯವಾಯಿತು. ಆತನ ಶಾಶ್ವತ ಧರ್ಮವಾಣಿ ಪೃಥ್ವಿಯ ಹೃದಯದಲ್ಲಿ ಚಿರಮುದ್ರಿತವಾಯಿತು.

* * *

## ೧೮. ಕರೆಯುತಿದೆ ಯುಗವಾಣಿ

ಕರೆಯುತಿದೆ ಯುಗಧರ್ಮವಾಣಿ, ಓ ಅಮೃತಪುತ್ರರಿರಾ, ಕಿವಿಗೊಟ್ಟು ಕೇಳಿ. ಕಂಗೆಟ್ಟವರಿಗೆ ಕಣ್ಬೆಳಕಾಗಿ, ನೆಚ್ಚುಗೆಟ್ಟವರಿಗೆ ಎದೆಗೆಚ್ಚಾಗಿ, ಜಡರಿಗೆ ಉತ್ಸಾಹವಾಗಿ, ಮೃತಪ್ರಾಯರಿಗೆ ಸಂಜೀವಾಮೃತವಾಗಿ, ತಾರಸ್ವರದಿಂದ ಕೂಗಿ ಕರೆಯುತ್ತಿದೆ ನವಯುಗಧರ್ಮವಾಣಿ. ಉಲ್ಲೋಲ ಕಲ್ಲೋಲವಾದ ಮಹಾಸಮುದ್ರ ತರಂಗದ ಪ್ರಚಂಡ ಘೋಷದಂತೆ, ನಿಶ್ಚಲವಾದ ನೀರವವಾದ ಭೂಮವಾದ ಮಹಾಪರ್ವತದ ಧ್ಯಾನ ಗಾಂಭೀರ್ಯದ ಅವ್ಯಕ್ತನಿನಾದದಂತೆ, ವೈಶಾಖಮಾಸದ ಮಧ್ಯಾಹ್ನದ ಲಕ್ಷಲಕ್ಷ ಸ್ವಪ್ನಗರ್ಭಿತಸುಪ್ತಿಯ ನಿಶ್ಶಬ್ಧತೆಯಲ್ಲಿ ಕೇಳಿಬರುವ ಅನಂತಾಕಾಶದ ಸುನೀಲ ಆಹ್ವಾನದಂತೆ, ಚೈತ್ರಾರಣ್ಯದ ಪಕ್ಷಿ ಸಂಕುಲದ ತುಮುಲ ಕಾಕಲಿಯಂತೆ, ಸುಂದರವಾಗಿ ಮನೋಹರವಾಗಿ ವೀರವಾಗಿ ರುದ್ರವಾಗಿ ಕರುಣವಾಗಿ ಕರೆಯುತ್ತಿದೆ ನವೀನ ಯುಗಧರ್ಮವಾಣಿ.

ಆ ಉದಾರವಾಣಿಯಲ್ಲಿ ಕಾಲದೇಶಜನ್ಯವಾದ ಸಂಕುಚಿತ ದೃಷ್ಟಿಯ ಅಪಸ್ವರವಿಲ್ಲ, ವೈರವಿಲ್ಲ, ಜುಗುಪ್ಸೆಯಿಲ್ಲ, ಅಸೂಯೆಯಿಲ್ಲ. ಮೂಢಬುದ್ಧಿಯ ಹ್ರಸ್ವತೆಯಿಲ್ಲ, ಅಂಧಶ್ರದ್ಧೆಯ ಕುಬ್ಜತೆಯಿಲ್ಲ. ಅದು ನಿರಂಕುಶವಾಗಿದೆ, ಸ್ವತಂತ್ರವಾಗಿದೆ, ವಿಚಾರಪೂರ್ವಕವಾಗಿದೆ, ನಿಯಮಸಂಯಮಶೀಲವಾಗಿದೆ. ಆ ಅಸೀಮವಾಣಿ ಇಂದ್ರಿಯಾನುಭವಗಳ ತೈಲದಿಂದ ಪೋಷಿತವಾದ ವಿಜ್ಞಾನಬುದ್ಧಿಯ ಬತ್ತಿಯ ತುದಿಹೊತ್ತಿ ಉರಿದು ತೊಳತೊಳಗುವ ಜ್ಞಾನಸಿದ್ಧಿಯ ಸೊಡರಿನಂತೆ ಸರ್ವರಿಗೂ ಜ್ಯೋತಿಃಪ್ರದವಾಗಿದೆ. ಅದು ವಾಣಿಯೂ ಅಹುದು; ಕಾಂತಿಯೂ ಅಹುದು. ಕಿವಿಗೆ ಕರೆದು ಎಚ್ಚರಿಸುವ ದನಿಯಾದರೆ, ಕಣ್ಣಿಗೆ ಹೊಳೆದು ಹಾದಿ ತೋರುವ ಬೆಳಕಾಗಿದೆ.

ಅದು ಒಂದು ವ್ಯಕ್ತಿಯ ವಾಣಿಯಲ್ಲ; ಒಂದು ಕಣ್ಣಿನ ಕಾಂತಿಯಲ್ಲ. ಅನೇಕ ಮಹಾಪುರುಷರ ಜೀವಜ್ಯೋತಿಗಳ ಸೂತ್ರಸಮಸ್ಟಿಯಾಗಿದೆ; ಬಹು ಜೀವನಗಳ ದರ್ಶನಗಳ ಗೋಷ್ಠಿಯಾಗಿದೆ. ಅದರಲ್ಲಿ ಪ್ರಾಚ್ಯ, ಪಾಶ್ಚಾತ್ಯ, ಹಿಂದೂ, ಕ್ರೈಸ್ತ, ಇಸ್ಲಾಮ್, ಬೌದ್ಧ, ಮತ, ತತ್ತ್ವ, ವಿಜ್ಞಾನ, ಕಲಾ, ಇಹ, ಪರ, ದೇಹ, ಆತ್ಮ, ನೂತನ, ಪುರಾತನ - ಎಲ್ಲವೂ ಸಮನ್ವಯಗೊಂಡಿದೆ. ಅದು ಯಾವುದೊಂದು ಮತಕ್ಕಾಗಲಿ, ಪಥಕ್ಕಾಗಲಿ ಸೇರಿಲ್ಲ. ಅದು ಒಂದು ಜನಾಂಗದ್ದಲ್ಲ; ಸರ್ವಕಾಲ ದೇಶಗತವಾದುದು.

ಆ ದಿವ್ಯದರ್ಶನದ ಕಾಮನಬಿಲ್ಲಿನಲ್ಲಿ ಉಪನಿಷತ್ತುಗಳಂತೆಯೆ ಯವನ ದಾರ್ಶನಿಕರ ತತ್ತ್ವಜ್ಞಾನವೂ ಒಂದು ಬಣ್ಣವಾಗಿ ಸೇರಿ ರಂಜಿಸುತ್ತಿದೆ. ವೇದದಂತೆಯೆ ಬೈಬಲ್ಲೂ, ಪ್ರಾಚೀನ ಶ್ರದ್ಧೆಯಂತೆಯೆ ಅರ್ವಾಚೀನ ವಿಜ್ಞಾನ ಬುದ್ಧಿಯೂ, ಅದರ ಮನೋಹರತೆಗೆ ಅಂಗಗಳಾಗಿವೆ. ರಾಮಮೋಹನರಾಯ ಮತ್ತು ಕೇಶವಚಂದ್ರಸೇನರ ವ್ಯಕ್ತಿತ್ವಗಳಂತೆಯೆ ನಾರಾಯಣಗುರು ಮತ್ತು ದಯಾನಂದ ಸರಸ್ವತಿಯರ ವ್ಯಕ್ತಿತ್ವಗಳೂ ವರ್ಣಜಾಲದಲ್ಲಿ ಹಾಸುಹೊಕ್ಕಾಗಿವೆ. ನ್ಯೂಟನ್, ಡಾರ್ವಿನ್, ಫ್ರಾಯ್ಡ್, ಐನ್‌ಸ್ಟೈನರುಗಳಂತೆಯೆ ಲೆನಿನ್, ಗಾಂಧಿ, ಟಾಲ್‌ಸ್ಟಾಯ್, ಠಾಕೂರರರೂ ಅಲ್ಲಿ ಮನೆಮಾಡಿದ್ದಾರೆ. ಆ ದರ್ಶನ ನಿರಂಕುಶ ಮತಿಗಳನ್ನು ಸರ್ವದಾ ಆಹ್ವಾನಿಸುತ್ತದೆ. ದಾಸ್ಯಬುದ್ಧಿಯಿಂದ ಪಾರಾಗುವ ಮುಕ್ತ ಮತಿಗಳಿಗೆ ಅಲ್ಲಿ ಮಹಾಲಿಂಗನ ಸೌಖ್ಯವಿದೆ. ಅದು ಸ್ವತಂತ್ರಮತಿಗಳ ಧೀರ ಸಾಮ್ರಾಜ್ಯ. ಅಲ್ಲಿ ಸಾಕ್ಷಾತ್ಕಾರವಲ್ಲದೆ ಬಲಾತ್ಕಾರವಿಲ್ಲ. ಅಲ್ಲಿಯ ಹಾದಿ ಬುದ್ಧಿ; ಅಲ್ಲಿಯ ಗುರಿ ಸಿದ್ಧಿ.

ಆ ದರ್ಶನ ಪ್ರವೇಶ ಮಾಡಿದವರಿಗೆ ಜಾತಿಯಿಲ್ಲ, ಮತವಿಲ್ಲ! ಅಂಧಶ್ರದ್ಧೆಯೂ ಮಂದಬುದ್ಧಿಯೂ ಒಪ್ಪಿಕೊಳ್ಳುವ ಆ ಮತದಗ್ರಂಥದ ಅಥವಾ ಈ ಮತಾಚಾರ್ಯನ ಪರಮ ಪ್ರಾಮಾಣ್ಯದ ಗೊಡವೆಯೂ ಇಲ್ಲ. ಅಲ್ಲಿ ವರ್ಡ್ಸ್ ವರ್ತ್ ಕವಿಯಂತೆಯೆ ವೇದದ ಋಷಿವರ್ಯನೂ ಪೂಜ್ಯನು. ಅವನಿಗಿಂತ ಹೆಚ್ಚಲ್ಲ, ಅವನಿಗಿಂತ ಕಡಮೆಯಲ್ಲ. ಅವನ ಕವನವನ್ನು ಪರೀಕ್ಷಿಸಿದಂತೆಯೆ ಇವನ ಮಂತ್ರವನ್ನೂ ಪರೀಕ್ಷಿಸುತ್ತೇವೆ; ವಿಮರ್ಶಿಸುತ್ತೇವೆ; ಮತಿಯೊಪ್ಪಿದರೆ ಶ್ಲಾಘಿಸುತ್ತೇವೆ; ಪ್ರತಿಭೆಯೊಪ್ಪಿದರೆ ಪೂಜಿಸುತ್ತೇವೆ; ಇಲ್ಲದಿದ್ದರೆ ಗೌರವದಿಂದಲಾದರೂ ಕಿರುನಗೆಯಿಂದ ಕೆಲಕ್ಕೊತ್ತುತ್ತೇವೆ.

ಆ ದರ್ಶನಜ್ಯೋತಿಯಿಂದ ದೇದೀಪ್ಯಮಾನವಾದ ವ್ಯಕ್ತಿ ರಸಋಷಿಯಾಗುತ್ತಾನೆ. ಆತನ ನಾಡಿನಾಡಿಗಳಲ್ಲಿ ಆನಂದದ ಪ್ರವಾಹ ಹರಿಯುತ್ತದೆ. ಆತನು ಶಾಂತಮೂರ್ತಿಯಾಗುತ್ತಾನೆ. ಆತನು ಸಮುದ್ರತೀರದಲ್ಲಿ ನಿಂತು ನೋಡುತ್ತಿದ್ದರೆ, ಸಮುದ್ರವೆಲ್ಲ ಅವನ ರಕ್ತನಾಳಗಳಲ್ಲಿ ಪ್ರವಹಿಸಿ, ಅವನೊಳಗೈಕ್ಯವಾಗುತ್ತದೆ: ಅಗಸ್ತ್ಯನಾಗುತ್ತಾನೆ! ಅನಂತಾಕಾಶವನ್ನು ನಿಟ್ಟಿಸಿದರೆ ಮೈನೆತ್ತರೆಲ್ಲ ನೀಲಿಗಟ್ಟಿ ನೀಲವಾಗುತ್ತಾನೆ: ವಿಷ್ಣುವಾಗುತ್ತಾನೆ! ಕರ್ಕಶರೂಪದ ಪ್ರೇತಾಸ್ಥಿಪಂಜರದ ದಾರಿದ್ರ್ಯವನ್ನು ಕಂಡಾಗ ಪ್ರೇತಸ್ವರೂಪಿಯಾಗಿ ಬಡವರಿಗಾಗಿ ಮರುಗಿ, ಸಮತಾ ಸ್ಥಾಪನೆಗಾಗಿ ಅವರಿಗೆ ನೆರವಾಗುತ್ತಾನೆ: ಕಲ್ಕಿಯಾಗುತ್ತಾನೆ! ನೀಚ ಸ್ವಾರ್ಥಕ್ಕಾಗಿ ಧರ್ಮದ ಬಲೆಯನ್ನೊಡ್ಡುವ ಹೀನಕ್ಕೆ ಅವನೆಂದಿಗೂ ಇಳಿಯುವುದಿಲ್ಲ. ಸತ್ಯವೊಂದೇ ಆತನ ಬುದ್ಧಿಗೆ ಲಕ್ಷ್ಯವಾಗುತ್ತದೆ; ಶಿವವೊಂದೇ ಆತನ ಹೃದಯಕ್ಕೆ ಶ್ರದ್ಧೆಯಾಗುತ್ತದೆ; ಸೌಂದರ್ಯವೊಂದೇ ಆತನ ಆತ್ಮಕ್ಕೆ ಪರಮ ಪುರುಷಾರ್ಥವಾಗುತ್ತದೆ.

ಅಂತಹ ದರ್ಶನಲಾಭವೇ ಜೀವಿತದ ಚರಮೋದ್ದೇಶ. ಅದನ್ನು ಪಡೆಯಲು ಸರ್ವರೂ ಪ್ರಯತ್ನಿಸಬೇಕು. ಯಾವುದಾದರೊಂದು ಮತಸಂಸ್ಥೆಗೆ ಸದಸ್ಯನಾದ ಮಾತ್ರಕ್ಕೇ ಅದು ಲಭಿಸುವುದಿಲ್ಲ. ಬಹುಶಃ ಒಂದು ಮತ ಸಂಸ್ಥೆಗೆ ಸೇರುವುದು ಎಡರಾಗಿ ಪರಿಣಮಿಸಿದರೂ ಪರಿಣಮಿಸಬಹುದು. ಸಂಸ್ಥಾಬದ್ಧವಾದ ಸತ್ಯವು ಬಹುಬೇಗನೆ ಸಂಕುಚಿತವಾಗಿ ಕಳೆಗೆಟ್ಟು ಮಿಥ್ಯಾಚಾರಿಯಾಗುತ್ತದೆ. ಆದ್ದರಿಂದ ಪ್ರತಿಭೆ ನವನವೋನ್ಮೇಷಶಾಲಿಯಾಗಿರಲು ನಿರಂತರವೂ ಪ್ರಯತ್ನಿಸುತ್ತಿರಬೇಕು. ನಿರಂತರ ಪ್ರಯತ್ನವೇ ಜೀವನ; ತುದಿಮುಟ್ಟಿದೆವೆಂದು ನಿಲ್ಲುವುದೇ ಮೃತ್ಯು. ಸಲ ಸಲವೂ ತನ್ನನ್ನು ತಾನು ಮೀರಲೆಳಸುವುದೇ ಸಾಧನೆ. ಅನಂತವಾದ ಆತ್ಮವನ್ನು ಅನಂತವಾಗಿಯೇ ಸಾಧಿಸಬೇಕು. ಸಿದ್ಧಿ ಎಂದರೆ ಕಾಲದಲ್ಲಿ ಕೊನೆಮುಟ್ಟುವುದೆಂದಲ್ಲ; ಕಾಲವನ್ನೇ ನುಂಗಿ ಮೀರಿವುದು.

ಅಂತಹ ದರ್ಶನಸಿದ್ಧಿಗೆ ಜಗತ್ತಿನ ಮಹಾಪುರುಷರ ಆಶೀರ್ವಾದವೂ ಅತ್ಯಾವಶ್ಯಕ. ಅವರು ಯಾವ ಮತದವರೇ ಆಗಿರಲಿ; ಹಿಂದಿನವರಾಗಲಿ, ಇಂದಿನವರಾಗಲಿ; ಧರ್ಮಜ್ಞಾನಿಗಳಾಗಲಿ, ವಿಜ್ಞಾನಿಗಳಾಗಲಿ. ಆದರೆ ಯಾವ ಒಬ್ಬ ವ್ಯಕ್ತಿಗೂ ಆತನೆಷ್ಟೇ ಮಹತ್ತಾಗಿರಲಿ, ದಾಸರಾಗಿ ನಮ್ಮ ಬುದ್ಧಿ ಸ್ವಾತಂತ್ರ್ಯವನ್ನು ಬಲಿಗೊಡುವುದು ಅಪಾಯ. ಏಕೆಂದರೆ ಬುದ್ಧಿ ಸ್ವಾತಂತ್ರ್ಯವನ್ನು ಬಿಟ್ಟರೆ ನಾವು ಮೋಸಹೋಗಬಹುದು. ಇಟ್ಟುಕೊಂಡಿದ್ದರೆ ಒಂದೆಡೆ ಮೋಸಹೋದರೂ ಅಲ್ಲಿಂದ ಪಾರಾಗಿ ಮತ್ತೊಂದೆಡೆಗೆ ದಾಟಿ ಸತ್ಯಾನ್ವೇಷಣೆ ಮಾಡಬಹುದು.

ದಿನದಿನವೂ ಹೊಸ ಹೊಸ ಸಿದ್ಧಾಂತಗಳು ಹೊಮ್ಮಿ ದಾಳಿಯಿಡುತ್ತಿರುವ ಈ ನವೀನ ಕಾಲದಲ್ಲಿ, ತಾತ್ಕಾಲಿಕವಾಗಿ ಸತ್ಯವೆಂದಾಗಲಿ ಸಾಕೆಂದಾಗಲಿ ತೋರುವ ಯಾವುದಾದರೊಂದು ನಂಬಿಕೆಯನ್ನು ಹಿಡಿದು, ಬಾಗಿಲು ಮುಚ್ಚಿಕೊಂಡು, ಮನಸ್ಸು ನೆಮ್ಮದಿಯಾಗಿರುವುದು ದುಸ್ಸಾಧ್ಯ. ಸಾಧ್ಯವಾದರೂ ಸತ್ಯದ ದೃಷ್ಟಿಯಿಂದ ಕ್ಷೇಮಕರವಲ್ಲ.

ಮತಪ್ರಪಂಚದಲ್ಲಿ ನೋಡಿದರೆ, ನೂರಾರುಮಂದಿ ಯೋಗಿಗಳೂ ಮಹರ್ಷಿಗಳೂ ಅವತಾರಗಳೂ ಪ್ರವಾದಿಗಳೂ ಮೆಸ್ಸಾಯಗಳೂ ಗುರುಗಳೂ ಜಗದ್ಗುರುಗಳೂ ಮಹಾತ್ಮರುಗಳೂ ಅಣಬೆಗಳಂತೆ ಮೂಡುತ್ತಿದ್ದಾರೆ. ಅವರಲ್ಲಿ ಪ್ರತಿಯೊಬ್ಬರೂ ವಿಶ್ವಮೈತ್ರಿಯನ್ನು ಬೋಧಿಸುತ್ತ ಮತ್ತೊಬ್ಬರನ್ನು ಖಂಡಿಸುತ್ತಾರೆ. ಒಬ್ಬೊಬ್ಬನೂ “ನಾನು ದೇವರನ್ನು ಕಂಡಿದ್ದೇನೆ, ನಾನೇ ದೇವರವತಾರವಾಗಿದ್ದೇನೆ, ಇತರರು ಕಂಡಿದ್ದು ದೇವರನ್ನಲ್ಲ - ಹುಚ್ಚಿನಿಂದ ಅವನಿಗೆ ಭ್ರಾಂತಿ ಹಿಡಿದಿದೆ. ನನ್ನ ಭ್ರಾಂತಿಯೇ ಇತರ ಎಲ್ಲರ ಭ್ರಾಂತಿಗಳಿಗಿಂತ ಸರ್ವೋತ್ಕೃಷ್ಟವಾದುದು. ಅತ್ತ ಕಡೆ ಹೋಗಬೇಡಿ! ಹೋದರೆ ನರಕಪ್ರಾಪ್ತಿ. ನನ್ನ ಬಳಿಗೆ ಬನ್ನಿ, ದಾನದಕ್ಷಿಣೆ ತನ್ನಿ, ನಿಮಗೆ ಮೋಕ್ಷ ಸ್ವತಃಸಿದ್ಧವಾಗುತ್ತದೆ” ಎಂದು ಆಘೋಷಿಸುತ್ತಾನೆ. ಕೆಲವರಂತೂ ಸ್ವರ್ಗದಲ್ಲಿ ಒಂದು ಸ್ಥಾನವನ್ನು ಕಾಯ್ದಿಡುವುದಕ್ಕಾಗಿ ಸಾವಿರಾರು ರೂಪಾಯಿಗಳ ಬೆಲೆಯನ್ನು ಪಾದಕಾಣಿಕೆಯಾಗಿ ಸ್ವೀಕರಿಸಿ ಕರಾರು ಪತ್ರವನ್ನೂ ಬರೆದುಕೊಡುತ್ತಿದ್ದಾರಂತೆ! ಮಂಕುಮಂದಿ ಮಂದೆ ಮಂದೆಯಾಗಿ ಅಂತಹವರೊಡ್ಡಿದ ಬಲೆಗೆ ಬೀಳುತ್ತಿದ್ದಾರೆ. ಮೊದಲನೆಯ ಠಕ್ಕನು ಮೊದಲನೆಯ ಬೆಪ್ಪನನ್ನು ಸಂಧಿಸಿದಾಗ ಮತ ಹುಟ್ಟಿತು ಎಂದು ಹೇಳಿದ ನಿರಂಕುಶಮತಿಯ ಮಾತು ಹೆಜ್ಜೆಹೆಜ್ಜೆಗೂ ಸಿದ್ಧಾಂತವಾಗುತ್ತಿದೆ.

ಠಕ್ಕರ ಬಲೆಗೆ ಹಿಂಡುಹಿಂಡಾಗಿ ನುಗ್ಗುವುದನ್ನು ನೋಡಿದರೆ ಜನರಲ್ಲಿ ಸತ್ಯದ ಮತ್ತು ಶಾಂತಿಯ ತೃಷ್ಣೆ ಪ್ರಬಲವಾಗಿದೆ ಎಂದು ಗೊತ್ತಾಗುತ್ತದೆ. ಆದರೆ ನಿಜವಾದ ಅಮೃತವಾವುದೆಂದು ಅರಿತು ಪಾನಮಾಡುವುದಕ್ಕೆ ಮತಿ ಅತ್ಯಂತಾವಶ್ಯಕ.

ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಪ್ರಪಂಚಗಳಲ್ಲಿಯೂ ಹೊಸ ಹೊಸ ಭಾವಗಳು ಪ್ರಚೋದಿತವಾಗುತ್ತಿವೆ. ರಾಜನು ಪ್ರತ್ಯಕ್ಷ ದೇವತೆ ಎಂಬ ಹಳೆಯ ನಂಬುಗೆ ಕಸದ ಬುಟ್ಟಿಗೆ ಬೀಳುತ್ತಿದೆ. ಬೀದಿಯ ಪಾಮರನೂ ಪ್ರಶ್ನೆ ಮಾಡಲು ತೊಡಗಿದ್ದಾನೆ. ಹಣವಂತನು ಬಡವರು ಎಂಬ ಭೇದಭಾವವೂ, ಧನಿಕರೂ ಅವರಿಂದ ಸುಪುಷ್ಟರಾಗಿದ್ದ ಪುರೋಹಿತವರ್ಗದವರೂ ಬೋಧಿಸುತ್ತಿದ್ದ ದಾರಿದ್ರ್ಯದ ಮಹಿಮೆಯೂ, ಪುರಾತನ ಮೌಢ್ಯಮಾತ್ರಗಳೆಂದು ಪರಿಗಣಿತವಾಗಿ, ಸಾಮ್ಯವಾದ ಸರ್ವತ್ರ ತಲೆಯೆತ್ತುತ್ತಿದೆ. ಸಮಾಜದಲ್ಲಿ ಮೇಲು ಜಾತಿ ಕೀಳು ಜಾತಿಗಳೆಲ್ಲ ತಲೆಕೆಳಕಾಗುತ್ತಿವೆ. ಸಂಪ್ರದಾಯಶರಣರಾದ ಪುರೋಹಿತರು ಸನಾತನ ಧರ್ಮವನ್ನು ಕಾಪಾಡಬೇಕೆಂದು ಎಷ್ಟು ಪ್ರಯತ್ನಿಸಿದರೂ ಅದು ನಿಲ್ಲುವಂತೆ ತೋರುವುದಿಲ್ಲ.

ಇದು ಕಲಿಯುಗವಲ್ಲವೇನು? ಒಂಟಿಕಾಲಿನ ಮೇಲೆ ನಿಂತ ಧರ್ಮ ಎಷ್ಟು ಕಾಲ ತಾನೆ ನೆಲಕ್ಕುರುಳದೆ ನೆಟ್ಟಗೆ ನಿಂತಿರಲಾಗುತ್ತದೆ! ಧರ್ಮಕ್ಕಾದರೂ ಕಾಲು ನೋಯುವುದಿಲ್ಲವೇನು?

ಇದುವರೆಗೆ ಪದದಲಿತರಾಗಿದ್ದ ಮಾನವಕ್ರಿಮಿಕೀಟಗಳಿಂದು ಮೃಗರಾಜನನ್ನು ಮುತ್ತಿ ಕೊಲ್ಲುತ್ತಿವೆ. ತನ್ನ ಬಲ್ಮೆಯಿಂದಲ್ಲ, ಅವುಗಳ ಬುದ್ಧಿಹೀನವಾದ ಶ್ರದ್ಧಾ ಭಕ್ತಿಗಳಿಂದ ತಾನಿದುವರೆಗೂ ಮೃಗರಾಜನಾಗಿದ್ದುದು ಎಂಬ ನನ್ನಿ ಸಿಂಹಕ್ಕೆ ಮಂದಟ್ಟಾಗುತ್ತಿದೆ.

ಈ ಗಡಿಬಿಡಿಯ ಸಂತೆಯಲ್ಲಿ ಬುದ್ಧಿಯ ದೀಪದಂಡವಿಲ್ಲದೆ, ವಿಚಾರದ ಉತ್ತರಮುಖಿಯಿಲ್ಲದೆ, ಋಜುಮಾರ್ಗದಲ್ಲಿ ಮುಂದುವರಿಯುವುದು ಅಸಾಧ್ಯ. ಮುಂದುವರಿಯದೆ ಹಿಂದೆ ಇದ್ದಲ್ಲಿಯೆ ಇರುತ್ತೇವೆ ಎನ್ನುವವರೆಲ್ಲ ಮುಳುಗಿ ಹೋಗುತ್ತಾರೆ; ಕೊಚ್ಚಿಹೋಗುತ್ತಾರೆ; ಶೂನ್ಯವಾಗುತ್ತಾರೆ; ನಿರ್ನಾಮವಾಗುತ್ತಾರೆ! ಬದುಕಿನಲ್ಲಿ ಆಸೆಯಿರುವ ಯಾರು ತಾನೆ ಹಾಗಾಗಲು ಹಾರೈಸುತ್ತಾರೆ? ಯಾವನಾದರೊಬ್ಬನು ಹಾರೈಸಿದರೂ ಸಮಸ್ತ ಜನಾಂಗವೂ ಹಾರೈಸುವುದಿಲ್ಲ. ಆದ್ದರಿಂದ ಜನಾಂಗದ ಶ್ರೇಯಸ್ಸಿಗಾಗಿ ವಕ್ರಬುದ್ಧಿಯನ್ನು ತಿದ್ದಬೇಕು.

ಪೂಜ್ಯರಾದ ಜಗದ್ಗುರುಗಳನ್ನು ಯಾರೋ ಒಬ್ಬರು ಕೇಳಿದರಂತೆ: "ಅಂತ್ಯಜರೇ ಮೊದಲಾದ ಶೂದ್ರವರ್ಗದವರು ಉತ್ತಮ ಜಾತಿಯವರ ಕೋಟಲೆಯನ್ನು ತಡೆಯಲಾರದೆ ಅನ್ಯಮತಗಳಿಗೆ ಸೇರುತ್ತಿದ್ದಾರೆ. ಅನ್ಯಮತಗಳು ಬೆಳೆಯುತ್ತಾ ಬಂದರೆ ಹಿಂದೂಮತ ನಶಿಸುತ್ತದೆ. ಆದ್ದರಿಂದ ಅವರ ಮತವನ್ನು ತ್ಯಜಿಸದಂತೆಯೂ ತ್ಯಜಿಸಿದವರನ್ನು ಮತ್ತೆ ಮತಕ್ಕೆ ಸೇರಿಸಿಕೊಳ್ಳುವಂತೆಯೂ ಧರ್ಮಶಾಸ್ತ್ರವನ್ನು ತುಸು ಬದಲಾಯಿಸಿದರೆ ಮೇಲಲ್ಲವೆ?"

ಜಗದ್ಗುರುಗಳು ಅಪ್ಪಣೆ ಕೊಡಿಸಿದರಂತೆ: "ಸರ್ವರೂ ಹಿಂದೂಧರ್ಮವನ್ನು ತ್ಯಜಿಸಿದರೂ ಚಿಂತೆಯಿಲ್ಲ. ಒಬ್ಬನೇ ಒಬ್ಬ ಬ್ರಾಹ್ಮಣನು ವೈತರಣಿ ನದಿಯಲ್ಲಿ ಸಂಧ್ಯಾವಂದನೆ ಮಾಡುತ್ತಿರುವವರೆಗೂ ಸನಾತನ ಧರ್ಮಕ್ಕೆ ಚ್ಯುತಿಯಿಲ್ಲ!"

ಆ ಒಬ್ಬ ಬ್ರಾಹ್ಮಣನು ಬ್ರಹ್ಮಚಾರಿಯಾಗಿದ್ದರೆ ಅವನು ಮಡಿದೊಡನೆಯೆ ಸನಾತನ ಧರ್ಮವೂ ಪೂರೈಸುತ್ತದೆ. ಸಂಸಾರಿಯಾಗಿದ್ದರೆ ಅಬ್ರಾಹ್ಮಣ ಸ್ತ್ರೀಯ ಸಂಪರ್ಕದಿಂದ ವಿಧರ್ಮಿಯಾಗುತ್ತಾನೆ. ಅಂತೂ ಸನಾತನ ಧರ್ಮಕ್ಕೆ ಉಳಿಗತಿಯಿಲ್ಲ!

ಇತಿಹಾಸಬುದ್ಧಿ ಒಂದು ತಿಲಮಾತ್ರವಿರುವ ಶುದ್ಧ ಶುಂಠನೂ ಆ ಪವಿತ್ರ ಪಾದರು ಅಪ್ಪಣೆ ಕೊಡಿಸಿದಂತೆ ಗಳಪನೆಂದು ತೋರುತ್ತದೆ. ಆದರೂ ಅಂತಹ ಪ್ರತಿಭಾಶಾಲಿಗಳಾದ ಜಗದ್ಗುರುಗಳೆ ನಮ್ಮ ಸಮಾಜಸೂತ್ರವನ್ನು ಹಿಡಿದು ನಡೆಸುತ್ತಿದ್ದಾರೆ ಎಂಬುದನ್ನು ನೆನೆದರೆ ಸಮಾಜರಥದ ಕ್ಷೇಮದ ವಿಚಾರದಲ್ಲಿ ಆಶಂಕೆ ಹುಟ್ಟಿ ಹೆದರಿಕೆಯಾಗುತ್ತದೆ. ಆದ್ದರಿಂದಲೆ ಜನಾಂಗದ ಶ್ರೇಯಸ್ಸಿಗಾಗಿ ವಕ್ರ ಬುದ್ಧಿಯ ವ್ಯಕ್ತಿಯನ್ನು ಚತುರೋಪಾಯಗಳಿಂದಲೂ ತಿದ್ದಬೇಕು.

ಮತ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಪ್ರಪಂಚಗಳಲ್ಲಿ ಆಗುತ್ತಿರುವಂತೆಯೆ ವಿಜ್ಞಾನ ಪ್ರಪಂಚದಲ್ಲಿಯೂ ನವಾನ್ವೇಷಣೆಗಳೂ ನವಾವಿಷ್ಕಾರಗಳೂ ನವಸಿದ್ಧಾಂತಗಳೂ ಮೂಡುತ್ತಿವೆ. ಆದರೆ ಆ ಪ್ರಪಂಚದ ನೆಲ ಉಳಿದ ನೆಲಗಳಿಗಿಂಗಲೂ ಕೊಂಚಮಟ್ಟಿಗೆ ಗಟ್ಟಿಯಾಗಿದೆ. ಏಕೆಂದರೆ ಅಲ್ಲಿ ಭಾವಭ್ರಾಂತಿಗೆಡೆಯಿಲ್ಲ; ಬುದ್ಧಿಗೆ ಮಾತ್ರ ಸ್ಥಾನವಿದೆ. ವಿಜ್ಞಾನದ ಕೆಲವು ಸಿದ್ಧಾಂತಗಳು ಹಳೆ ಮತದ ಹಳೆ ನಂಬುಗೆಗಳಿಗೆ ನೇರವಾಗಿ ವಿರೋಧವಾಗುತ್ತಿವೆ. ಡಾರ್ವಿನ್ನನ ಪರಿಣಾಮವಾದ ಮನುಷ್ಯನು ಭಗವಂತನ ಪ್ರತ್ಯೇಕವಾದ ಸೃಷ್ಟಿಯಾಗಿ ಆತನ ಪಟ್ಟದ ಮಗುವಾಗಿದ್ದಾನೆ ಎಂಬ ನಂಬುಗೆಗೆ ಎದುರುಬೀಳುತ್ತದೆ. ಖಗೋಳ ಶಾಸ್ತ್ರದ ನವಾನ್ವೇಷಣೆಗಳಿಂದ ನಮ್ಮ ಪೃಥ್ವಿ ವಿಶ್ವದಲ್ಲೊಂದು ಕಃಪದಾರ್ಥವಾಗಿ ಪರಿಣಮಿಸಿಬಿಟ್ಟಿದೆ. ಇತ್ತೀಚೆಗೆ ಐನ್‌ಸ್ಟೈನನ ಸಾಪೇಕ್ಷ ವಾದವೂ, ಮತ್ತು ಕ್ವಾಂಟಮ್ ಸಿದ್ಧಾಂತವೂ ವಿಶ್ವರಚನೆಯ ವಿಚಾರದಲ್ಲಿ ಇದುವರೆಗಿದ್ದ ಮಾನವ ಭಾವನೆಗಳನ್ನೆಲ್ಲ ಬದಲಾಯಿಸಿಬಿಟ್ಟಿವೆ. ಅಷ್ಟೇ ಅಲ್ಲ, ಮನುಷ್ಯನ ಮನಸ್ಸು ಇದುವರೆಗೆ ಆರಾಧಿಸುತ್ತಿದ್ದ ಚಿಂತಾವಿಗ್ರಹಗಳನ್ನು ಒಡೆದು ಹಾಕಿ, ಬೇರೆಯ ಹಾದಿ ಹಿಡಿಯಬೇಕಾಗುತ್ತದೆಂದು ತೋರುತ್ತದೆ. ದೇವತೆಗಾಗಿ ಕಟ್ಟಿದ ಗುಡಿಯ ಬಲಿಪೀಠದಲ್ಲಿ ಆ ದೇವತೆಯನ್ನೇ ಯಜ್ಞಪಶುವನ್ನಾಗಿ ಮಾಡಿ ಬಲಿಗೊಡುವ ಕಾಲ ಬಂದಿದೆ. ದೇವತೆಯ ಗುಡಿಯೆ ಅದರ ಗೋರಿಯೂ ಆಗುವಂತೆ ತೋರುತ್ತಿದೆ! ನಮ್ಮ ಜ್ಞಾನದೇವತಾಮೂರ್ತಿ ಸೊನ್ನೆಯೊಳಗೆ ಪ್ರಶ್ನಾರ್ಥಕ ಚಿಹ್ನೆಗಳ ಮಧ್ಯೆಯಿರುವ ಆಶ್ಚರ್ಯಚಿಹ್ನೆಯಾಗಿದೆ. ಆದರೂ ಧೀರಮಾನವನು ಸತ್ಯಾನ್ವೇಷಣೆಯ ಸಾಹಸದಲ್ಲಿ ಭೀತನಾಗದೆ ಮುಂದೆ ನುಗ್ಗುತ್ತಿದ್ದಾನೆ.

ಅಸೀಮ ಸಾಹಸ ಕ್ಷುಬ್ಧವಾದ ಪ್ರಪಂಚ ಜೀವನ ವಾಹಿನಿಯ ಪ್ರವಾಹ ಉಕ್ಕಿ ಉಕ್ಕಿ ಬರುತ್ತಿರುವ ಇಂತಹ ಭೀಷ್ಮ ಸನ್ನಿವೇಶದಲ್ಲಿ "ಸಾಕು ಮಾಡೋ ಜನ್ಮ ಸಾಕು ಮಾಡೋ", "ಹಿಗ್ಗುವೆ ಯಾಕೋ ಈ ದೇಹಕೆ" ಎಂದು ರಾಗಪೂರ್ಣವಾಗಿ ರೋದಿಸುತ್ತ, "ಅಂತ್ಯಜನು ಊರಿನ ಹೊರಗಿರಬೇಕು. ಹಗಲಿನಲ್ಲಿ ಕಾಣಿಸಿಕೊಳ್ಳಬಾರದು. ರಾತ್ರಿಯಲ್ಲಿಯೇ ಸಂಚರಿಸಬೇಕು. ಅವನು ಲೋಹದ ಪಾತ್ರೆಗಳನ್ನು ಉಪಯೋಗಿಸಬಾರದು, ಮೃತ್ಪಾತ್ರೆಗಳನ್ನೇ ಉಪಯೋಗಿಸಬೇಕು. ಉಚ್ಚವರ್ಣದವನು ಹೆಣಗಳಿಗೆ ಹೊದಿಸಿ ಮಸಣದಲ್ಲಿ ಬಿಸುಟ ಬಟ್ಟೆಗಳನ್ನು ಮಾತ್ರ ಅವನು ಉಟ್ಟುಕೊಳ್ಳಬೇಕು" ಎಂದು ಮೊದಲಾಗಿ ಮನುಧರ್ಮಶಾಸ್ತ್ರದಿಂದ ಶ್ಲೋಕಗಳನ್ನು ಉದ್ಧರಿಸಿ ಪಂಡಿತ ಮಂಡಲಿಯಲ್ಲಿ ವಾದಿಸುತ್ತ, ಕ್ಲೀಬ ಧರ್ಮವನ್ನು ಬೋಧಿಸುತ್ತ, ಸ್ವಾರ್ಥ ಸುಖಗಳನ್ನು ಮಾತ್ರ ಜಾಗರೂಕತೆಯಿಂದ ಸಾಧಿಸುತ್ತ, ಮಳೆ ಬರಿಸುವುದಕ್ಕಾಗಿ ಪರ್ಜನ್ಯ ಜಪ ಮಾಡುತ್ತ, ಅಕಾಲದಲ್ಲಿ ದೇವತಾ ತೃಪ್ತಿಗಾಗಿ ಯುಗಾದಿ ಹಬ್ಬಗಳನ್ನು ಮಾಡುತ್ತ, ಪುಣ್ಯಕ್ಷೇತ್ರಗಳಿಗೆ ಯಾತ್ರೆ ಹೋಗಿ ಅಂಟುರೋಗಗಳನ್ನು ಹಬ್ಬಿಸುತ್ತ, ಪೂರ್ವವೈಭವವನ್ನೇ ನೆನೆದು ಹಿಗ್ಗುತ್ತ ವರ್ತಮಾನಯುಗವನ್ನು ಹಳಿಯುತ್ತ ನಮ್ಮ ನಾಡಿನ ಸೆರೆಯಲ್ಲಿಯೇ ನಾವು ತೊತ್ತಿನ ಬಾಳು ಬಾಳೋಣವೇನು? ಆತ್ಮ ಗೌರವವಿರುವವರಾರೂ "ಇಲ್ಲ! ಇಲ್ಲ!" ಎಂದು ಗರ್ಜಿಸದಿರುವುದಿಲ್ಲ.

ಆದ್ದರಿಂದ ಸರ್ವರೂ, ಮುದುಕರಾಗಲಿ, ಹುಡುಗರಾಗಲಿ, ಪ್ರತಿಭಾಶಾಲಿಯಾಗಲಿ ಅಲ್ಲದಿರಲಿ, ಈ ನವಯುಗ ಚಕ್ರಪರಿವರ್ತನೆಗೆ ಹೆಗಲು ಕೊಡಲು ಸಿದ್ಧರಾಗಬೇಕು. ಹನುಮಂತನು ಗಿರಿಗಳನ್ನೇ ಕಿತ್ತುತಂದು ಅಡಕುತ್ತಿದ್ದರೆ ಅಳಿಲುಗಳು ಮಳಲು ಕಣಗಳನ್ನೇ ತಂದು ಚೆಲ್ಲಬಹುದು. ಸೇತುಬಂಧಕ್ಕೆ ಎರಡೂ ಬೇಕು. ಶ್ರೀರಾಮನ ಸಮದೃಷ್ಟಿಗೆ ದೊಡ್ಡದು ಚಿಕ್ಕದೆಂಬ ಪಕ್ಷಪಾತವಿಲ್ಲ. ಅವನು ನೋಡುವುದು ಕೈತೋಳನ್ನಲ್ಲ, ಎದೆಯಾಳವನ್ನು. ಆದ್ದರಿಂದ ಖಾದಿಯೋ ಕಾವಿಯೋ ಯಾವುದಾದರೊಂದು ಹಾದಿಯನ್ನು ಹಿಡಿದು ಬಾಳು ಸಾರ್ಥಕವಾಗುವಂತೆ ಮಾಡಬೇಕು. ಸ್ವಾರ್ಥದ ಕ್ರಿಮಿಜೀವನ ಎಷ್ಟುಕಾಲ ತಾನೇ ಸೊಗಸುತ್ತದೆ? ಇಂದೋ ನಾಳೆಯೋ ಬೇಸರದ ಬೇಗೆಗೆ ಬೆಂದು ಬಾಳು ಮರುಭೂಮಿಯಾಗುತ್ತದೆ. ಆದರೆ ಮಹತ್ಕಾರ್ಯವೊಂದರಲ್ಲಿ ಭಾಗಿಯಾಗುವ ಆನಂದ ಚಿರಂತನವಾದುದು. ಆ ಪ್ರಯತ್ನದಲ್ಲಿ ಸೋತರೂ ಹೆಮ್ಮೆ, ಸತ್ತರೂ ಹೆಮ್ಮೆ, ಮಹತ್ತಾಗಿ ಸೋಲುವುದೂ ಗೆಲುವಿನ ಮಹತ್ಕಾರ್ಯಕ್ಕಾಗಿ ತೇದು ವಿನಿಯೋಗಿಸಿ, ತುದಿಯಲ್ಲಿ ಸಿರಿಯಿಲ್ಲದೆ ಹೆಸರಿಲ್ಲದೆ ಅಜ್ಞಾತವಾಗಿ ಅನಾಮಧೇಯವಾಗಿ ಜೀವನರಂಗದಿಂದ ಜುಣುಗಿ ಹೋಗುವುದರಲ್ಲಿಯೂ ಒಂದು ಮಹಾನಂದವಿದೆ. ಅಂತ್ಯದಲ್ಲಿ ಪುರುಷಾರ್ಥವೊಂದೂ ನಿಷ್ಪ್ರಯೋಜನವಾಗುವುದಿಲ್ಲ, ನಿರ್ಲಕ್ಷಿತವಾಗುವುದಿಲ್ಲ, ವಿನಷ್ಟವಾಗುವುದಿಲ್ಲ. ಪುರುಷಾರ್ಥಗಳ ಪರಮಪಾವನನಿಧಿಯಾದ ಪರಮಾತ್ಮನ ಬ್ರಾಹ್ಮೀಗರ್ಭದಲ್ಲಿ ಸರ್ವವೂ ಚಿರಂತನವಾಗಿರುತ್ತದೆ, ನಿತ್ಯವಾಗಿರುತ್ತದೆ. ಸರ್ವವೂ ಸರ್ವದರಲ್ಲಿಯೂ ಸರ್ವವ್ಯಾಪಿಯಾಗಿ ಸರ್ವಸ್ವವಾಗಿರುತ್ತದೆ.

ಇಂತಹ ಬುದ್ಧಿಯುತವಾದ ಶ್ರದ್ಧೆಯಿಂದ ದೀಪ್ತರಾದ ವೀರ ತರುಣರು ಸಂಘ ಬದ್ಧರಾಗಿ ಸೇವಾಧರ್ಮವನ್ನೂ ಆತ್ಮೋದ್ಧಾರವನ್ನೂ ಕೈಕೊಳ್ಳಲು ಅನುಕೂಲವಾಗುವಂತೆ ಶ್ರೀಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣ ಮಹಾಸಂಘವನ್ನು ನಿರ್ಮಿಸಿದರು. ದೇಶದ ತರುಣರನ್ನೆಲ್ಲ ಸಂಬೋಧಿಸಿ ಕೈಬೀಸಿ ಕರೆದರು. ಆ ಯುಗವಾಣಿಯನ್ನು ಕೇಳಿ ಉತ್ಸಾಹಿತರಾಗಿ ಅನೇಕ ನಿಃಸ್ವಾರ್ಥ ಯುವಕರು ತರುಬಿ ಬಂದು ಸಂಘಬದ್ಧರಾಗಿ ಗೈರಿಕವಸನಧಾರಿಗಳಾಗಿ ದೇಶವಿದೇಶಗಳಲ್ಲಿ ಸರ್ವತೋಮುಖವಾದ ಕಾರ್ಯಕಲಾಪಗಳಲ್ಲಿ ತೊಡಗಿದ್ದಾರೆ. ಲೋಪದೋಷಗಳಿದ್ದರೂ ನ್ಯೂನಾತಿರಿಕ್ತಗಳಿದ್ದರೂ ಅಪ್ರತಿಭರಾಗದೆ ಗುರುದೇವನ ಮತ್ತು ಯುಗಾಚಾರ್ಯನ ಉದಾತ್ತ ಧರ್ಮವಾಣಿಯ ಕಟ್ಟಾಣತಿಯನ್ನು ಸ್ಥಿರಸಂಕಲ್ಪದಿಂದ ಪರಿಪಾಲಿಸುತ್ತಿದ್ದಾರೆ.

ಆದರೂ ಸ್ವಾಮಿ ವಿವೇಕಾನಂದರ ಆಹ್ವಾನವಾಣಿಗೆ ಎಷ್ಟು ಜನರು ಬಂದು ನೆರೆಯಬೇಕಾಗಿದ್ದಿತೋ ಅಷ್ಟು ಜನರು ನೆರೆದಿಲ್ಲ ಎಂದು ತೋರಬಹುದು. ಹಾಗೆ ಭಾವಿಸಿದರೆ ತಪ್ಪಾಗುತ್ತದೆ. ಶ್ರೀರಾಮಕೃಷ್ಣ ಮಹಾಸಂಘದ ಸಂನ್ಯಾಸಿ ಸದಸ್ಯತ್ವವೊಂದರಲ್ಲಿಯೇ ಕೊನೆಗೊಂಡಿಲ್ಲ ಆ ಯುಗವಾಣಿಯ ವ್ಯಾಪ್ತಿ. ಸಂಘ ಒಂದು ಶಾಖೆ; ಒಂದು ಮಹಾಶಾಖೆ. ಇತರ ಶಾಖೆಗಳೂ ಅನೇಕ ಇವೆ. ಮಹಾತ್ಮಾಗಾಂಧಿಯವರ ಅಹಿಂಸಾಪೂರ್ಣವಾದ ರಾಜಕೀಯ ರಣದುಂದುಭಿಯನ್ನು ಆಲಿಸಿ ಕಠಿಣ ಸತ್ಯಾಗ್ರಹಕ್ಕೆ ಸಹಸ್ರ ಸಹಸ್ರವಾಗಿ ನುಗ್ಗಿದ ದೇಶಭಕ್ತರ ಮತ್ತು ತರುಣ ವೀರರ ಹೃದಯಖಡ್ಗಗಳ ಧಾರಾತೀಕ್ಷ್ಣತೆಯಲ್ಲಿ ವಿವೇಕಾನಂದರ ಸಿಂಹವಾಣಿಯ ಸಾಣೆಯ ಪ್ರಭಾವವಿದ್ದುದನ್ನು ಕಣ್ಣಿದ್ದವರೆಲ್ಲ ಕಾಣಬಹುದು.

ಸ್ವಾಮಿ ವಿವೇಕಾನಂದರ 'ಉತ್ತಿಷ್ಠತ ಜಾಗ್ರತ ಪ್ರಾಪ್ಯ ವರಾನ್ನಿಬೋಧತ' ಎಂಬ ಕರೆ ವ್ಯರ್ಥವಾಗಿಯೂ ಇಲ್ಲ, ವ್ಯರ್ಥವಾಗುವುದೂ ಇಲ್ಲ. ಅದು ವ್ಯರ್ಥವಾದರೆ ಭರತಭೂಮಿ ಭಸ್ಮವಾದಂತೆ! ಭಾರತೀಯ ಸಂಸ್ಕೃತಿ ಮೃತವಾದಂತೆ! ಜಗಜ್ಜೀವನದ ಧರ್ಮಸರಸ್ಸು ಬತ್ತಿಹೋದಂತೆ!

ಅಲ್ಲದೆ ವಿವೇಕಾನಂದರಲ್ಲಿಯೇ ಆ ಯುಗವಾಣಿ ಪರಿಸಮಾಪ್ತವಾಗಿಲ್ಲ. ವಿವೇಕಾನಂದರು ಆ ಚಿರಂತನ ನವ್ಯವಾದ ಮಹಾವಾಣಿಯಲ್ಲಿ ಒಂದು ಮುಖ್ಯವಾದ ತಾನ ಮಾತ್ರವಾಗಿದ್ದಾರೆ. ನವಯುಗ ಶಕ್ತಿದೇವತೆಯಾದ ಮಹಾಕಾಳಿಗೆ ಸಹಸ್ರಾರು ಬಾಹುಗಳಿವೆ. ಶ್ರೀರಾಮಕೃಷ್ಣರಂತೆಯೇ ಸ್ವಾಮಿ ವಿವೇಕಾನಂದರೂ ಆ ಭೀಮಬಾಹುಗಳಲ್ಲಿ ಒಂದಾಗಿದ್ದಾರೆ. ಆ ಶಕ್ತಿದೇವತೆಯ ಪ್ರಕಾಶ ವಿಧಾನಗಳಿಗೆ ಇತಿಮಿತಿಯನ್ನು ಕಲ್ಪಿಸುವುದು ಶಠಭ್ರಾಂತಿಯಾಗುತ್ತದೆ. ವಿವೇಕಾನಂದರೇ ಹೇಳಿದ್ದಾರೆ: "ವೇದಗಳ ಕೊನೆಯ ಅಧ್ಯಾಯವಿನ್ನೂ ಬರೆಯಲ್ಪಟ್ಟಿಲ್ಲ; ಮಹರ್ಷಿಗಳ ಆಗಮನಕ್ಕೆ ಕೊನೆಯಂಕದ ಪರದೆಯಿನ್ನೂ ಬಿದ್ದಿಲ್ಲ. ಹೊಸ ಮಂತ್ರಗಳೂ ಮೂಡುತ್ತವೆ; ಹೊಸ ಋಷಿಗಳೂ ಆವಿರ್ಭವಿಸುತ್ತಾರೆ" ಎಂದು. ಅವರು ತಿದ್ದಿದ ತಪ್ಪಿನಿಂದ ಅವರಿಗೇ ಮಂಗಳಾರತಿ ಎತ್ತುವುದು ಸುಬುದ್ಧಿಯಲ್ಲ.

ಶ್ರೀರಾಮಕೃಷ್ಣ - ವಿವೇಕಾನಂದರಿಗೆ ಪೂರ್ವದಲ್ಲಿಯೂ ಅವರ ತರುವಾಯವೂ ಅನೇಕ ಮಹಾವ್ಯಕ್ತಿಗಳು ನವಯುಗವಾಣಿಗೆ ತಮ್ಮ ಕೊರಳ ದನಿಯನ್ನು ಸೇರಿಸಿದ್ದಾರೆ ಮತ್ತು ಸೇರಿಸುತ್ತಿದ್ದಾರೆ. ಸ್ವಲ್ಪ ಸ್ಥೂಲವಾಗಿ ಹೇಳುವುದಾದರೆ, ಅವರು ಧರ್ಮಪ್ರಪಂಚದಲ್ಲಿ ಕೊರಳೆತ್ತಿದಂತೆ ರವೀಂದ್ರನಾಥ ಠಾಕೂರರು ಕಲಾಪ್ರಪಂಚದಲ್ಲಿಯೂ ಮಹಾತ್ಮಾ ಗಾಂಧಿಯವರು ರಾಜಕೀಯ ಸಾಮಾಜಿಕ ಪ್ರಪಂಚದಲ್ಲಿಯೂ ಕೊರಳೆತ್ತಿದ್ದಾರೆ. ಆ ಇಬ್ಬರ ಸಂದೇಶಗಳನ್ನು ಗೌರವಾಶ್ಚರ್ಯೋತ್ಸಾಹಗಳಿಂದ ಲೋಕವಿನ್ನೂ ಕಿವಿಗೊಟ್ಟಾಲಿಸುತ್ತಿದೆ.

[1]ಭರತಖಂಡದಲ್ಲಿ ಮಾತ್ರವೆ ಅಲ್ಲದೆ ಹೊರಗೂ ಆ ಶಕ್ತಿದೇವತೆಯ ತೋಳುಗಳು ಕೆಲಸ ಮಾಡುತ್ತಿವೆ. ಸಾಮ್ರಾಜ್ಯತಾ ಶಾಕಿನಿಗಳು ರಕ್ತಪಿಪಾಸೆಯಿಂದಲೂ ನಗ್ನ ಕ್ರೌರ್ಯದಿಂದಲೂ ಜೀವನ ಸೌಖ್ಯದ ಹೊಟ್ಟೆಯನ್ನು ಸೀಳಿ, ನೆತ್ತರನ್ನು ಹೀರಿ, ಕರುಳಿನ ಜಯಮಾಲೆಗಳಿಂದ ಮೆರೆಯುತ್ತಿದ್ದರೂ, ಅಲ್ಲಲ್ಲಿ ದೀನ ಶಾಂತಿಯ ದೇವದೂತರು ಎದೆಗೆಡದೆ ಸಮಸ್ತ ಪ್ರಪಂಚದ ಸ್ನೇಹ ಶಾಂತಿಗಳಿಗೆ ಸನ್ನಾಹ ನಡೆಸುತ್ತಿದ್ದಾರೆ. ಲೋಕದ ಬಾಳು ಬದುಕಬೇಕಾದರೆ ಸರ್ವರೂ ಅವರ ಉದ್ಯಮದಲ್ಲಿ ಭಾಗಿಗಳಾಗಿ ಅವರಿಗೆ ನೆರವಾಗಬೇಕು. ಧರ್ಮಪ್ರಪಂಚದಲ್ಲಿ ಮಾತ್ರವೇ ಅಲ್ಲದೆ, ಸರ್ವಪ್ರಪಂಚಗಳಲ್ಲಿಯೂ ಸಹನೆ, ಸ್ನೇಹ, ಸೌಹಾರ್ದ, ಸಮತಾಭಾವಗಳನ್ನು ಬಿತ್ತಿ, ಶಾಂತಿಯ ನಂದನ ರಚನೆಯ ತಪಸ್ಸಿನ ಅಗ್ನಿಕುಂಡದಲ್ಲಿ ಬಾಳನ್ನು ಬೆಳೆಸಬೇಕು.

ಗುರುದೇವ ಶ್ರೀರಾಮಕೃಷ್ಣ ಪರಮಹಂಸರು ಜನ್ಮವೆತ್ತಿ ಇಂದಿಗೆ ಒಂದು ಶತಮಾನವಾಯಿತು. ನಾಳೆಯ ಹೊತ್ತಾರೆ ಮತ್ತೊಂದು ಶತಮಾನವು ಆಶಾಪೂರ್ಣವಾಗಿ ಉದಯವಾಗುತ್ತದೆ. ಆ ಶತಮಾನವು ಸಾರ್ಥಕವಾಗುವಂತೆ ಗೈಯುವುದು ಎಲ್ಲರ, ನಮ್ಮೆಲ್ಲರ, ಕರ್ತವ್ಯ.

* * *

[1] ಕಾವ್ಯ, ತತ್ತ್ವ, ಯೋಗ, ರಾಜಕೀಯ, ಇಹ, ಪರ, ಪ್ರಾಚೀನ, ಅರ್ವಾಚೀನ, ಆಗಾಮಿಕ - ಈ ಎಲ್ಲದರಲ್ಲಿಯೂ ಸರ್ವತೋಮುಖವಾಗಿ ಸರ್ವಪರಿಪೂರ್ಣವಾಗಿ ಜಗನ್ನೇತ್ರಗಳಿಗೆ ಕೇಂದ್ರವಾಗತೊಡಗಿದ್ದಾರೆ, ಪಾಂಡುಚೆರಿಯ ಪೂರ್ಣಯೋಗಿ ಶ್ರೀ ಅರವಿಂದರು. ಹಾಗೆಯೆ ಇನ್ನೊಂದು ರೀತಿಯಿಂದ ಅರುಣಾಚಲದ ಶ್ರೀರಮಣ ಮಹರ್ಷಿಗಳೂ ಲೋಕಕ್ಕೆ ಆಶೀರ್ವಾದರೂಪವಾಗಿ ಸಿದ್ಧಿಸಿಂಹಾಸನವನ್ನು ಅಲಂಕರಿಸಿದ್ದಾರೆ.